ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾಪ್ರಜ್ಞೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ)

ಸಂಶೋಧಕರು
ರೇಖಾ ಈ. ಜಿ.

ಮಾರ್ಗದರ್ಶಕರು
ಡಾ. ಎನ್. ಅಮರೇಶ್
ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾಪ್ರಜ್ಞೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ರೇಖಾ ಈ. ಜಿ.

ಮಾರ್ಗದರ್ಶಕರು
ಡಾ. ಎನ್. ಅಮರೇಶ್
ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ದೃಢೀಕರಣ ಪತ್ರ

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾಪ್ರಜ್ಞೆ ಎಂಬ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ರೇಖಾ ಈ.ಜಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್.ಅಮರೇಶ್
ಮಾರ್ಗದರ್ಶಕರು ಮತ್ತು ಪ್ರವಾಚಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 31-10-08

ಪ್ರಮಾಣ ಪತ್ರ

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾಪ್ರಜ್ಞೆ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಡಾ. ಎನ್. ಅಮರೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ರೇಖಾ ಈ.ಜೆ.

ರೇಖಾ ಈ.ಜೆ.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 31-10-08

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಪ್ರವೇಶ

ಆಧುನಿಕ ಕನ್ನಡ ಸಾಹಿತ್ಯಕ್ಕೆ ಈಗ ಒಂದು ಶತಮಾನ ತುಂಬಿತು. ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ತಮ್ಮ ಸಾಹಿತ್ಯ ರಚನೆಯಿಂದ ಸಮೃದ್ಧಗೊಳಿಸಿದ ಅನೇಕ ಸಾಹಿತಿಗಳು 'ಶತಮಾನ ಸ್ಮರಣೆ'ಯನ್ನು ಜನತೆಯಿಂದ ಆಚರಿಸಿಕೊಳ್ಳುತ್ತಿದ್ದಾರೆ. ನವೋದಯ ತಲೆಮಾರಿನ ಬಹುತೇಕ ಸಾಹಿತಿಗಳು ಈಗಿಲ್ಲ. ಅವರ ಸಾಹಿತ್ಯವಿದೆ. ನಿರಂತರವಾಗಿ ಓದುವವರು ಹುಟ್ಟಿಕೊಳ್ಳುತ್ತಲೇ ಇದ್ದಾರೆ. ಅಧ್ಯಯನಗಳು ಹೊಸದಾಗಿ ನಡೆಯುತ್ತಲೇ ಇವೆ. ಒಬ್ಬ ಲೇಖಕನನ್ನು ಕುರಿತು ಸಮಗ್ರವಾಗಿ, ಬಿಡಿ ಬಿಡಿ ಪ್ರಕಾರಾಧಾರಿತವಾಗಿ, ಸಹ ಲೇಖಕರ ಜತೆಯಲ್ಲಿ ಅನ್ಯಶಿಸ್ತುಗಳ ಮುಖೇನ, ತೌಲನಿಕವಾಗಿ ಅಧ್ಯಯನಗಳು ನಡೆಯುತ್ತವೆ. ಹೀಗೆ ಒಬ್ಬ ಲೇಖಕನನ್ನು ಕುರಿತು ಭಿನ್ನ ಭಿನ್ನ ಆಯಾಮಗಳನ್ನು ಅಧ್ಯಯನ ಮಾಡಲಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಹೊಸ ವಸ್ತುವನ್ನು ಸೇರಿಸಿ ಬೆಳೆಸಿದ ನವ್ಯ ಸಾಹಿತ್ಯ ಚಳುವಳಿ ಐವತ್ತರ ದಶಕದಲ್ಲಿ ಆರಂಭವಾಗಿ ಎಂಭತ್ತರವರೆಗೆ ಬಿರುಸಿನಿಂದ ನಡೆದು 'ನವ್ಯ ಸಾಹಿತ್ಯ' ಎಂದು ಗುರುತಿಸಿಕೊಂಡಿತು. ಐವತ್ತರ ದಶಕದಲ್ಲಿ ಆರಂಭವಾಗಿ ಎಂಬತ್ತರ ದಶಕದವರೆಗೆ ನಡೆದ ಈ ಸಾಹಿತ್ಯ ಚಳುವಳಿಯಲ್ಲಿದ್ದವರು ಅಂದಿನಿಂದ ಇಂದಿನವರೆಗೂ ಬರೆಯುತ್ತಲಿದ್ದಾರೆ. ಯು.ಆರ್ .ಅನಂತಮೂರ್ತಿ, ಯಶವಂತ ಚಿತ್ತಾಲ, ಕುಸುಮಾಕರ ದೇವರಗೆಣ್ಣೂರ, ಜಿ.ಎಸ್. ಶಿವರುದ್ರಪ್ಪ, ಚನ್ನವೀರಕಣವಿ ಮುಂತಾದವರು ನವ್ಯಕಾಲದಲ್ಲಿ ಅದರ ಜತೆ ಗುರುತಿಸಿಕೊಂಡು ಕಾಲಾಂತರದಲ್ಲಿ ಭಿನ್ನವಾಗಿ ನಿಂತು ಬರೆದಿದ್ದಾರೆ. ನವ್ಯ ಕಾಲದ ಲೇಖಕರು ಈಗಲೂ ಬರೆಯುತ್ತಿರುವುದು ವಿಶೇಷವಾಗಿದೆ. ಪಿ.ಲಂಕೇಶ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಶಾಂತಿನಾಥ ದೇಸಾಯಿ, ಬಿ.ಸಿ.ರಾಮಚಂದ್ರ ಶರ್ಮ ಪ್ರಮುಖ ನವ್ಯ ಲೇಖಕರೆಂದು ಗುರುತಿಸಿ ಕೊಂಡವರು. ನಂತರ ಅದನ್ನು ಬೇರೊಂದು ರೀತಿಯಲ್ಲಿ ವಿಸ್ತರಿಸಿ ಸಾಹಿತ್ಯ ರಚಿಸಿ ಭಿನ್ನವಾಗಿ ಬೆಳೆದಿದ್ದಾರೆ. ಪ್ರಮುಖ ನವ್ಯ ಲೇಖಕರಲ್ಲಿ ಒಬ್ಬರಾದ ಶಾಂತಿನಾಥ ದೇಸಾಯಿ ಅವರು ಕನ್ನಡ ಸಾಹಿತ್ಯಕ್ಕೆ ತಮ್ಮ ಕಥನ ಸಾಹಿತ್ಯದಿಂದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಅವರ 'ಮುಕ್ತಿ' ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

ಚಾರಿತ್ರಿಕವಾಗಿ ನವ್ಯ ಕಾದಂಬರಿಯಾಗಿ, ಹೊಸ ಪ್ರಜ್ಞೆಯಿಂದಾಗಿ, ಭೂತದ ಭಾರವಿಲ್ಲದೆ ವರ್ತಮಾನದ ವಿಷಯವನ್ನು ವಾಸ್ತವವಾದಿ ನೆಲೆಯಲ್ಲಿ ರಚಿಸಿಗೊಂಡದ್ದರಿಂದಾಗಿ, ನಗರ ಕೇಂದ್ರಿತವಾಗಿ, ಆಧುನಿಕ ಯುವ ಮನಸ್ಸುಗಳ ಹೊಸಬಾಳಿನ ಹಂಬಲಕ್ಕಾಗಿ ನಡೆಸುವ ಹೋರಾಟದ ಚಿತ್ರಣದಿಂದ ಈ ಕಾದಂಬರಿ ಓದುಗರ, ಸಾಹಿತ್ಯ ವಿಮರ್ಶಕರ ಗಮನ ಸೆಳೆದದ್ದೂ ಅಲ್ಲದೆ, ಸಾಹಿತ್ಯದಲ್ಲಿ ಹೊಸ ಪ್ರಜ್ಞೆಯನ್ನು ಬೆಳೆಯಲು ಕಾರಣವಾಯಿತು.

ಶಾಂತಿನಾಥ ದೇಸಾಯಿ ಅವರು ತಮ್ಮ ಕಥೆ-ಕಾದಂಬರಿಗಳಿಂದ ನಿರಂತರವಾಗಿ ನಗರ ಪ್ರಜ್ಞೆ, ಆಧುನಿಕ ಪ್ರಜ್ಞೆ ಮತ್ತು ಹೆಣ್ಣು-ಗಂಡುಗಳ ಅಸ್ತಿತ್ವದ ಪ್ರಶ್ನೆಯನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದರು. ಬಹಳ ಮುಖ್ಯವಾಗಿ ಅವರ ಸಮಕಾಲೀನರಿಂದಲೇ ಶಾಂತಿನಾಥದೇಸಾಯಿ ವಿಭಿನ್ನವಾಗಿ ಬೆಳೆದರು ,ತಮ್ಮ ಸಾಹಿತ್ಯದಲ್ಲಿ ನಗರ-ಹಳ್ಳಿ, ಸಂಪ್ರದಾಯ-ಆಧುನಿಕತೆ, ಹೆಣ್ಣು-ಗಂಡುಗಳ ನಡುವೆ ನಡೆಯುವ ಸಂಘರ್ಷವನ್ನು ಆಧುನಿಕ ಪ್ರಜ್ಞೆಯಿಂದ ಚಿತ್ರಿಸಿದರು. ಅಸ್ತಿತ್ವವಾದ, ಮನೋ ಜ್ಞಾನದ ನೆಲೆಯಿಂದ ಸಾಹಿತ್ಯವನ್ನು ರಚಿಸಿದರು. ಗಂಡು-ಹೆಣ್ಣಿನ ನಡುವಿನ ಸಂಘರ್ಷಕ್ಕೆ ದಾರಿಯಾಗುವ ಸ್ವಾತಂತ್ರ್ಯ, ಆಯ್ಕೆ, ಅಸ್ತಿತ್ವದ ಪ್ರಶ್ನೆಗಳು ಕಾರಣವಾಗಿವೆ. ಪುರುಷನ ಮುಂದೆ ಹೆಣ್ಣು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಆಧುನಿಕ ಪ್ರಜ್ಞೆ ಮುಖ್ಯವಾಗುತ್ತದೆ. ದೇಸಾಯಿ ಅವರು ಚಿತ್ರಿಸಿದ ಮಹಿಳೆಯರ ಆಧುನಿಕ ಪ್ರಜ್ಞೆಯ ಸ್ವರೂಪವನ್ನು ಶೋಧಿಸುವುದು ಈ ಅಧ್ಯಯನದ ಮುಖ್ಯ ಗುರಿಯಾಗಿದೆ.

ಅಧ್ಯಯನದ ಮಹತ್ವ

ನವೋದಯದ ನಂತರದಲ್ಲಿನ ಪ್ರಮುಖ ಸಾಹಿತ್ಯ ಚಳುವಳಿಯನ್ನು ನಾವು 'ನವ್ಯ' ಎಂದು ಕರೆಯುತ್ತೇವೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಈ ಸಾಹಿತ್ಯ ಚಳುವಳಿ ಹೆಣ್ಣನ್ನು ಅರಿಯುವುದರಲ್ಲಿ, ಹೆಣ್ಣಿನ ಮನೋಭಾವವನ್ನು ಬಿಂಬಿಸುವುದರಲ್ಲಿ, ಹೆಣ್ಣು ಕೂಡಾ ಗಂಡಿನಂತೆ ಸ್ವತಂತ್ರ ವ್ಯಕ್ತಿತ್ವದ, ಪ್ರತಿಭೆಯ ವ್ಯಕ್ತಿ ಎಂಬುದನ್ನು ತಿಳಿಯಲು, ಮಂಡಿಸಲು ವಿಫಲವಾಯ್ತು. ಹೆಣ್ಣಿನ ಬಗ್ಗೆ ನವೋದಯದವರಿಗೆ ಇದ್ದ ಉದಾರವಾದಿ ದೃಷ್ಟಿಕೋನ ಸಹ ಇರದಿದ್ದ ಈ ಹೊಸ ಸಾಹಿತ್ಯ ಚಳುವಳಿ, ವಿಚಾರದಲ್ಲಿ ಮಾತ್ರ ಎಂದೂ ನವ್ಯವಾಗಿರಲಿಲ್ಲ. ಆಧುನಿಕವಾಗಿರಲಿಲ್ಲ. ಅದು ಮುಖ್ಯವಾಗಿ ಗಂಡುಗಳ ಲೋಕ. ಅಲ್ಲಿ ವರ್ಣಿತವಾಗಿರುವುದು ಗಂಡಿನ ಜಗತ್ತು. ವ್ಯಕ್ತವಾಗಿರುವುದು ಗಂಡಿನ ಮನೋಧರ್ಮ. ನವ್ಯ ಸಾಹಿತ್ಯದಲ್ಲಿ ಬರುವ ಬಹುಪಾಲು ನಾಯಕರೂ ದುರ್ಬಲರೂ ಅಸ್ವಸ್ಥರೂ ದ್ವಂದ್ವಾತ್ಮಕರಾಗಿದ್ದರೂ ಸಹ ಹೆಣ್ಣಿನ ವಿಚಾರ ಬಂದಾಗ ಮಾತ್ರ ಅವರ ಗಂಡುತನವನ್ನು ಆವರಿಸಿದ್ದ ದುರ್ಬಲತೆಯ ಮುಸುಕು ಸರಿಯುತ್ತದೆ. ಅಥವಾ ಅವರ ದುರ್ಬಲತೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ ಹೆಣ್ಣು ಅವರ ಲೈಂಗಿಕ ಉಪಭೋಗದ ವಸ್ತುವಾಗುತ್ತಾಳೆ. ಅವರ ದುರ್ಬಲ ಗಳಿಗೆಯಲ್ಲಿ ಅವರಿಗೆ ಆಸರೆ ನೀಡುವ ಮಾತೆಯಾಗುತ್ತಾಳೆ.

[illegible]

[illegible]

[illegible]

ಶ್ರೀಪತಿ ಪಂಚೆಯುಟ್ಟು, ಅಂಗಿ ತೊಟ್ಟು, ಕಿಸೆಯಿಂದ ಬಾಚಣಿಗೆ ತೆಗೆದು ಕ್ರಾಪು ಬಾಚಿ, ಬ್ಯಾಟರಿ ಹೊತ್ತಿಸಿ ನೋಡುತ್ತಾ ಅವಸರದಲ್ಲಿ ಓಡಿಬಿಟ್ಟ. ಬೆಳ್ಳಿ ಮಲಗಲಿಕ್ಕೆ ಸರಿಯೆ ಹೊರ್ತು ಮಾತಾಡಲಿಕ್ಕಲ್ಲ. ಬಾಯಿಬಿಟ್ಟರೆ ಅವಳದ್ದು ಗಣ ದೈಯ್ಯ..." ಇದು ನವ್ಯದ ಪ್ರಾತಿನಿಧಿಕ ಕೃತಿಗಳಲ್ಲಿ ಒಂದು ಎನ್ನಬಹುದಾದ ಸಂಸ್ಕಾರ ಕಾದಂಬರಿಯ ಶ್ರೀಪತಿ ಹೇಳುವ ಮಾತು. ದುರ್ಗಾಭಟ್ಟನಿಗೆ ಚಂದ್ರಿಯನ್ನು ನೋಡಿದ ತಕ್ಷಣ ಅವರಿಗೆ ವಾತ್ಸಾಯನ ಕಾಮಸೂತ್ರದ ಚಿತ್ತಿನಿ ವರ್ಣನೆ ನೆನಪಾಗುತ್ತದೆ. ಶ್ರೀಪತಿ, ದುರ್ಗಾಭಟ್ಟನ ತರದ ಜನರು ಒಂದು ತುದಿಯಲ್ಲಿದ್ದರೆ ಸುಸಂಸ್ಕೃತರಾದ ಪ್ರಾಣೇಶಾಚಾರ್ಯರು ಮತ್ತೊಂದು ತುದಿ. 'ತಾನು ತಾತ್ವಿಕನಾಗಿ ಹುಟ್ಟಿದ್ದೇನೆ, ಈ ರೋಗಗ್ರಸ್ಥ ಹೆಂಡತಿ ತನ್ನ ತಾತ್ವಿಕತೆಯ ಯಜ್ಞಭೂಮಿ' ಎಂದು ನಂಬಿದ್ದವರು ಅವರು. ಚಂದ್ರಿಯನ್ನು ಕೂಡಿದಾಗ ಅವರ ಜೀವನದ ಅಪರಿಪೂರ್ಣತೆ ಮಾಯವಾಗುತ್ತದೆ. ಚಂದ್ರಿಯೊಂದಿಗೆ ಕಳೆದ ಗಳಿಗೆಗಳನ್ನು ಆಚಾರ್ಯರು ಮತ್ತೆ ಮತ್ತೆ ನೆನಪಿಸಿಕೊಳ್ಳುವುದರಲ್ಲೆ ಅವರಿಗೆ ಚಂದ್ರಿಯ ಬಗ್ಗೆ ಇರುವ ಧನ್ಯಭಾವ ಸ್ಪಷ್ಟವಾಗುತ್ತದೆ. ಹೆಂಡತಿ ಅವರ ಜೀವನದಲ್ಲಿ ತಾತ್ವಿಕತೆಯ ಯಜ್ಞಭೂಮಿಯಾದರೆ ಚಂದ್ರಿ ಲೌಕಿಕತೆಯ ಯಜ್ಞಭೂಮಿ. ಅಂದರೆ ಚಂದ್ರಿ 'ಮಹಾಮಹಿಮರಾದ ಪ್ರಾಣೇಶಾಚಾರ್ಯರ ಅಪರಿಪೂರ್ಣತೆಯನ್ನು ತುಂಬುವ ಸಾಧನ ಮಾತ್ರ.

ಪುರುಷ ಕೇಂದ್ರಿತ ನೆಲೆಯಿಂದ ಸ್ತ್ರೀಯರನ್ನು ಕಾಣಲು ಮತ್ತು ಕಾಣಿಸಲು ಹೊರಟಾಗ ಅವರು ತಲುಪುವ ನೆಲೆಗಳಿಗೂ, ಸ್ತ್ರೀಯರನ್ನು ಸ್ತ್ರೀಕೇಂದ್ರಿತ ದೃಷ್ಟಿಯಿಂದಲೇ ಕಂಡರಿಸಲು ಹೊರಟಾಗ ತಲುಪುವ ನೆಲೆಗಳಿಗೂ ಮುಖ್ಯ ವ್ಯತ್ಯಾಸವಿದೆ. ಅನಂತಮೂರ್ತಿಯವರು ಪುರುಷ ಕೇಂದ್ರಿತ ನೆಲೆಯಿಂದಲೇ ಸ್ತ್ರೀಯರನ್ನು ಕಾಣಲು ಹಾಗೂ ಕಾಣಿಸಲು ಹೊರಡುವವರಾದರೂ ಮುಖ್ಯವಾಗಿ ಹೆಣ್ಣನ್ನು ತಾತ್ವಿಕ ನೆಲೆಯಲ್ಲಿ ಇಟ್ಟು ನೋಡಲು ಅವರಿಗೆ ಸಾಧ್ಯವಾಗಿರುವುದು ಗಮನಾರ್ಹ ಅಂಶ.

ಚಿತ್ತಾಲರು ಕ್ರೌರ್ಯಕ್ಕೆ ಸಿಲುಕಿ ನಲುಗುವ ಮತ್ತು ಅದರ ಮಧ್ಯೆ ಅರಳಿಕೊಳ್ಳುವಂತಹ ಪಾತ್ರಗಳನ್ನು ಸೃಷ್ಟಿಸುತ್ತಾರೆ. 'ಉತ್ತಮಿ' ಕಥೆಯಿಂದ ಪ್ರಾರಂಭವಾದ ಚಿತ್ತಾಲರ ಹೆಣ್ಣಿನ ಮೂಲ ಮಾದರಿಗಳು 'ಕಥೆಯಾದಳು ಹುಡುಗಿ' ಮತ್ತು 'ಇವಳಾವ ಜನಕರಾಯನ ಮಗಳು'ವರೆಗೆ ಹುಟ್ಟಿಕೊಂಡಿವೆ. ಮೊದಲು ಕಥೆಯಲ್ಲಿ ಕೇವಲ ಮುಗ್ಧತೆ ಹಾಗೂ ಲೈಂಗಿಕ ಕುತೂಹಲದ ಸಾಧನವಾಗಿ ಬರುವ ಹೆಣ್ಣು, ಕ್ರಮೇಣ ನಾಗರಿಕ ಕ್ರೌರ್ಯಕ್ಕೆ ಸಿಕ್ಕಿ ನಲುಗುವವರೆಗೂ ಅನೇಕ ರೂಪಗಳಲ್ಲಿ ಹೆಣ್ಣು ಮೈ ಪಡೆದುಕೊಂಡಿದ್ದಾಳೆ. 'ಉತ್ತಮಿ', 'ಅಬೋಲಿನಾ', 'ಜಾನಕಿ' ಇವರೆಲ್ಲಾ ಚಿತ್ತಾಲರ ದೃಷ್ಟಿಕೋನದಲ್ಲಿ ಪರಿಪಕ್ವತೆಯ ಕಡೆಗೆ ನಡೆದದ್ದರ ದ್ಯೋತಕವಾಗಿ ಬಂದಿದ್ದಾರೆ. ಅವರ ಕಥೆಗಳಲ್ಲೆಲ್ಲಾ ವ್ಯಕ್ತವಾಗುವುದು ಹೆಣ್ಣಿನ ಮುಗ್ಧತೆಯ, ಆಂತರಿಕ ವಿಸ್ಮಯದ ಮುಗ್ಗುಲುಗಳು. ಅವುಗಳಿಗೆ ಎದುರಾಗಿ ಬರುವುದೆಂದರೆ ನಾಗರಿಕ ಪ್ರಪಂಚದ ಭಯಾನಕ ಕ್ರೌರ್ಯ. ಅವುಗಳ ಅಡಿಯಲ್ಲಿ ಸಿಕ್ಕಿ ಇವರು ನಲುಗಿ ಹೋದರೆ,

ಅನೇಕ ಸಲ ಅವನ್ನು ಮೀರಿ ಜೀವ ಧಾತುಗಳಾಗಿ ಪಲ್ಲವಿಸುತ್ತಾರೆ. 'ಕಥೆಯಾದಳು ಹುಡುಗಿ' ಕಥೆಯ ಬಾಲಕಿ ಜಾನಕಿ, ತನ್ನ ಬಗ್ಗೆ ಒಂದು ಕಥೆ ಬರೆಯಬೇಕೆಂದು ಕಥೆಗಾರರನ್ನು ಕೇಳುವಂತೆ ಕಥೆ ಪ್ರಾರಂಭವಾಗುತ್ತದೆ. ಆದರೆ ಆ ಮಧ್ಯೆ ನಡೆದ ನಾಗರಿಕ ಪ್ರಪಂಚದ ಹಲ್ಲೆ ಅವಳನ್ನು ಬಾಲ್ಯದಲ್ಲಿಯೇ ಮುರುಟಿ ಹೋಗುವಂತೆ ಮಾಡುತ್ತದೆ. ಕಥೆಗಾರನ ಗೆಳೆಯರಾದರೋ ಯಾವ ರೀತಿಯಲ್ಲಿ ನಡೆದ ಘಟನೆಯನ್ನು ಕಥೆಯಾಗಿಸಿದರೆ ಹೆಚ್ಚು ರೋಚಕವಾಗಿರುತ್ತದೆ ಎಂದು ವಿಧವಿಧದ ಸಲಹೆ ನೀಡುತ್ತಾರೆ. ಆದರೆ ಅವಳ ಸಾವು ಗಾಢವಾಗಿ ತಟ್ಟುವುದು ಕೇವಲ ಕಥೆಗಾರನನ್ನು ಮಾತ್ರ. ಅವಳನ್ನು ಕಥೆಯಾಗಿಸಲು ಹೊರಟ ಅವನಿಗೆ ತನ್ನ ಬಗ್ಗೆಯೇ ತಿರಸ್ಕಾರವಿದೆ. ಹೀಗಾಗಿ ಇಲ್ಲಿ ಕಥೆಗಾರ ಶೋಧಿಸುವುದು ಜಾನಕಿಯ ವ್ಯಕ್ತಿತ್ವಕ್ಕೆ ಇರುವ ಜೀವ ಚೈತನ್ಯವನ್ನು ಅಂದರೆ ಹೆಣ್ಣನ್ನು ಕೇವಲ ಒಂದು ಕಥಾವಸ್ತುವನ್ನಾಗಿ ಮಾರ್ಪಡಿಸಿಬಿಡುವ, ಶೋಷಣೆಯ ಸಾಧನವನ್ನಾಗಿ ಮಾಡಿಕೊಂಡು ಬಿಡುವ ವ್ಯವಸ್ಥೆಯ ಬಗ್ಗೆಯೇ ಅವರಿಗೆ ಇರುವ ಸೂಕ್ಷ್ಮವಾದ ಪ್ರತಿಭಟನೆ ಇಲ್ಲಿ ವ್ಯಕ್ತಗೊಳ್ಳುತ್ತದೆ. ಆದ್ದರಿಂದ ಕಥೆಯ ಕೊನೆಯಲ್ಲಿ ಅಂತಹುದೇ ಇನ್ನೊಂದು ಹೆಣ್ಣನ್ನು ಅನಾಥಾಶ್ರಮದಿಂದ ತಂದು ಸಾಕುವುದರ ಮೂಲಕ ತಮ್ಮ ಜೀವಪರವಾದ ನಿಲುವನ್ನು ದಾಖಲಿಸುತ್ತಾರೆ.

ಹೀಗೆ ಯಶವಂತ ಚಿತ್ತಾಲರ ಹೆಚ್ಚಿನ ಕಥೆಗಳಲ್ಲಿ ಹೆಣ್ಣು ಶಕ್ತಿಶಾಲಿಯಾಗಿದ್ದಾಳೆ. ಅವಳ ಪ್ರಕಾಶ ಮಾನವಾದ ಬೆಳಕಿನಲ್ಲಿ ಉಳಿದ ಪುರುಷ ಪಾತ್ರಗಳು ಪೇಲವವಾಗಿ ಕಾಣಿಸುತ್ತವೆಂದರೆ ಅತಿಶಯೋಕ್ತಿ ಯೇನಲ್ಲ. ಚಿತ್ತಾಲರ ಹೆಚ್ಚಿನ ಯಶಸ್ವೀ ಕಥೆಗಳು ಹೆಣ್ಣು ಮಕ್ಕಳನ್ನು ಶೀರ್ಷಿಕೆಯನ್ನಾಗಿ ಮಾಡಿಕೊಂಡಿರು ವುದೇ ಅಲ್ಲದೆ ಅವುಗಳನ್ನೇ ಕೇಂದ್ರವಾಗಿಯೂ ಇರಿಸಿಕೊಂಡಿವೆ. ಬಹುಶಃ ಯಾವುದೇ ಸಾಮಾಜಿಕ ಪೂರ್ವಗ್ರಹವಿಲ್ಲದೆ ಪುರುಷಾಧಿಪತ್ಯದ ಅಹಮ್ಮಿಕೆಯಿಂದ ಹೊರತಾಗಿ ಮಹಿಳೆಯನ್ನು ಜೀವಚೈತನ್ಯಗಳಂತೆ ತಮ್ಮ ಸಾಹಿತ್ಯದಲ್ಲಿ ಕಂಡರಿಸಿದ್ದಾರೆ.

ದೇಸಾಯಿಯವರ ಸಮಕಾಲೀನರಾಗಿ ಬರುವ ಮತ್ತೊಬ್ಬ ಲೇಖಕ ಲಂಕೇಶ್. ಇವರ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಕಥೆಯಲ್ಲಿ ಬರುವ ತರಕಾರಿ ಮಾರುವ ಮುದುಕಿಯಿಂದ ಹಿಡಿದು 'ರೊಟ್ಟಿ' ಕಥೆಯಲ್ಲಿನ ಅಸಹಾಯಕತೆಯ ಪ್ರತೀಕವಾದ ವಯಸ್ಸಾದ ಮಹಿಳೆ ಹಾಗೂ 'ದೇವಿ' ಕಥೆಯಲ್ಲಿ ಬರುವ ಉದಾತ್ತತೆಯ ಹೆಣ್ಣಿನ ವಿವಿಧ ರೂಪಗಳು ಇನ್ನಿಲ್ಲದಂತೆ ಪ್ರಕಟಗೊಂಡಿವೆ. ಲಂಕೇಶರ ಕವಿತೆಯ 'ಅವ್ವ' ಗ್ರಾಮೀಣ ಭಾರತೀಯ ಹೆಣ್ಣಿನ ಸಂಕೀರ್ಣ ವ್ಯಕ್ತಿತ್ವಕ್ಕೆ ಹಿಡಿದ ಪ್ರತಿಮೆಯಾಗಿ ಇಡೀ ಲಂಕೇಶರ ಸಾಹಿತ್ಯದ ಉದ್ದಕ್ಕೂ ಬಂದಿದ್ದಾಳೆ. ಇವರು ಯಾರೂ ಸುಶಿಕ್ಷಿತ ಹೆಣ್ಣುಗಳಲ್ಲ, ಅವರಿಗೆ ಯಾವ ಪರಕೀಯತೆಯೂ ಕಾಡುವುದಿಲ್ಲ. ತಮ್ಮಲ್ಲಿನ ಸಣ್ಣತನ, ಕ್ರೌರ್ಯ ಹಾಗೂ ಜಿಗುಟುತನಗಳೊಂದಿಗೆ ಅವುಗಳ ಆಳದಲ್ಲಿ ಹರಿಯುವ ಜೀವನ ಪ್ರೀತಿಯೊಂದಿಗೆ ಇವರು ಪ್ರಕಟವಾಗುತ್ತಾರೆ. ಸಿಟ್ಟು, ರೋಷ, ಬೈಗುಳ, ಕಾಮುಕತೆ, ಹಸಿವು, ಬಡತನ ಇವುಗಳಲ್ಲಿ ಯಾವುದನ್ನೂ ಅವರು ಶೋಧಿಸದೇ ಬಿಟ್ಟಿಲ್ಲ.

‘ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ’ಯಲ್ಲಿ ಬರುವ ತರಕಾರಿ, ಸೊಪ್ಪು, ಬೆಣ್ಣೆಯನ್ನು ಮಾರುವವರ ವರ್ಗಕ್ಕೆ ಸೇರಿದ ಹೆಂಗಸು ತನ್ನ ಜೀವನೋಪಾಯಕ್ಕಾಗಿ ಮಗನನ್ನು ಓದಿಸುವುದಕ್ಕಾಗಿ ಅನ್ಯರ ಸಂಬಂಧಗಳನ್ನು ಬಳಸಿಕೊಳ್ಳಲು ಹಿಂಜರಿಯುವುದಿಲ್ಲ. ಅವಳಿಗೆ ಆ ಕಥೆಯಲ್ಲಿ ಯಾವ ಜಾತಿಯೂ ಇಲ್ಲ. ಆದ್ದರಿಂದಲೇ ಅವಳು ಜೀವನ ಸಮೃದ್ಧತೆಯ ಸಂಕೇತವಾಗಿದ್ದಾಳೆ. ತನ್ನೊಂದಿಗೆ ಬರುವ ಗಂಡನೊಂದಿಗೆ ಸಿಟ್ಟು ಮಾಡಿಕೊಳ್ಳುವುದು, ತೋಟದಲ್ಲಿ ಕಳ್ಳತನ ಮಾಡಿ ಮಾಲಿಯೊಂದಿಗೆ ಜಗಳವಾಡುವುದು, ಶೇಖರಪ್ಪನ ಬಳಿ ಮಗನಿಗೆ ಸ್ಕಾಲರ್‌ಶಿಪ್ ಕೊಡಿಸುವಂತೆ ಯಾಚಿಸುವುದು, ಈ ಎಲ್ಲದಕ್ಕೂ ಅವಳು ಸಿದ್ಧ. ಹೀಗಾಗಿಯೇ ಅವಳು ರಕ್ತಮಾಂಸಗಳಿಂದ ತುಂಬಿದ ಜೀವಂತ ಪಾತ್ರವಾಗುತ್ತಾಳೆ. ಆಕೆ ಯಾವುದನ್ನು ಮುಚ್ಚಿಡುವುದಿಲ್ಲ. ಆಕೆಯಲ್ಲಿ ಕೃತಕತೆಯೇ ಇಲ್ಲ. ಈರವ್ವ ತಮ್ಮ ವ್ಯಕ್ತಿತ್ವವನ್ನು ಮುಚ್ಚಿಟ್ಟುಕೊಂಡು ಬದುಕುತ್ತಿದ್ದವರ ರಹಸ್ಯಗಳನ್ನೆಲ್ಲಾ ಸ್ಫೋಟಗೊಳಿಸಿ ಎಲ್ಲವನ್ನೂ ಧಿಕ್ಕರಿಸಿ ಹೊರಟು ಹೋಗುವ ಚಿತ್ರ ಲಂಕೇಶರ ಅದ್ಭುತ ಸೃಷ್ಟಿಗಳಲ್ಲಿ ಒಂದು.

ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯದಲ್ಲಿ ಬರುವ ಹೆಣ್ಣು ಆಧುನಿಕ ಸ್ವತಂತ್ರ ಮನೋವೃತ್ತಿಯವಳು. ಇವರ ಬಹುಪಾಲು ಕಥೆಗಳಲ್ಲಿ ಬರುವ ಹೆಣ್ಣುಗಳಿಗೆ ವ್ಯಕ್ತಿತ್ವವೇ ಇಲ್ಲ. ಇರುವುದು ಕೇವಲ ಸುಂದರ ವಾದ ಶರೀರ ಮಾತ್ರ. ‘ಗೀಜಗನ ಗೂಡು’ವಿನ ಆದಿವಾಸಿ ಹೆಣ್ಣು, ಪೊವೆಲ್ ಎಂಬ ಮುದುಕನ ಜೊತೆ ಬರುವ ರಷ್ಯನ್ ಹೆಣ್ಣು. ‘ಅಂಟಿದ ನಂಟಿನ’ ಬ್ರಾಹ್ಮಣರ ಹುಡುಗಿ ಶಾಲಿನಿ, ‘ಇನ್ನೊಂದು ಪ್ರಣಯ ಪ್ರಸಂಗ’ದ ಪಲ್ಲವಿ ಇವರೆಲ್ಲ ಕಥಾನಾಯಕನೊಂದಿಗೆ ಮಲಗಲು ಸುಲಿದ ಬಾಳೆ ಹಣ್ಣಿನಂದದಿ ರೆಡಿಯಾಗಿ ಕಾಯುತ್ತಿರುವಂಥವರು. ಕೊನೆಗೆ ಇಲ್ಲಿಯೂ ಸಹ ಹೆಣ್ಣು ಭೋಗವಸ್ತುವಾಗಿಯೇ ಬರುತ್ತಾಳೆ.

ಇದ್ದುದರಲ್ಲಿ ಕೃಷ್ಣರ ಗೆಂಡೆತಿಮ್ಮ ಕಾದಂಬರಿಯ ನಾಯಕಿ ಮರಂಕಿ ಸ್ವಲ್ಪವಾದರೂ ಸಂಘರ್ಷಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಾಳೆ. ಮರಂಕಿಯ ಸ್ವಾತಂತ್ರ್ಯಾಪೇಕ್ಷೆಯ ಹಿಂದೆ ಆಧುನಿಕತೆ, ನವನಾಗರಿಕತೆಯ ಪ್ರಭಾವವಿರುವಂತೆಯೇ ಹೆಣ್ಣು ಅವಳಿಗೆ ಅರಿಯದಂತೆಯೇ ಉಸಿರುಕಟ್ಟಿಸಿದ ವಾತಾವರಣದಲ್ಲಿ ಬಾಳಿದ ಹಿನ್ನೆಲೆ ಇದೆ. ಆದ್ದರಿಂದಲೇ ಮರಂಕಿಯ ಮನಸ್ಸಿನ ಸ್ವಾತಂತ್ರ್ಯದ ವಾಂಛೆ ಫ್ಯೂಡಲ್ ಕೋಟೆಯಲ್ಲಿ ಬಿರುಕುಗಳನ್ನು ಮೂಡಿಸುತ್ತದೆ.

ಒಟ್ಟಾರೆ ನವ್ಯ ಕಾಲಘಟ್ಟದಲ್ಲಿ ಬರುವಂತ ದೇಸಾಯಿಯವರ ಸಮಕಾಲೀನರಾದ ಅನಂತಮೂರ್ತಿ ಯಶವಂತ ಚಿತ್ತಾಲ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ ಮೊದಲಾದವರು ಹೆಣ್ಣನ್ನು ಪುರುಷನಷ್ಟೇ ಸ್ವತಂತ್ರ ಅಸ್ತಿತ್ವ ಹಾಗೂ ವ್ಯಕ್ತಿತ್ವವುಳ್ಳ ಮಾನವ ಜೀವಿ ಎಂಬಂತೆ ರೂಪಿಸಿದ್ದು ಅಪರೂಪ. ಇವರು ಜೀವನ ಸತ್ಯವನ್ನು ಅರಿಯಲು ಮುಖ್ಯ ಮಾನದಂಡವನ್ನಾಗಿ ಬಳಸಿದ್ದು ಲೈಂಗಿಕತೆಯನ್ನು. ಆದ್ದರಿಂದಲೇ ಬಹುಪಾಲು ನವ್ಯ ಸಾಹಿತ್ಯದಲ್ಲಿ ಅದರ ಉತ್ಕೃಷ್ಟ ಭಾಗಗಳಲ್ಲಿ ಕೂಡಾ ಗಂಡಿನ ಅರಿವನ್ನು ವಿಸ್ತರಿಸುವ

ಅಥವಾ ಅವನನ್ನು ಪರಿಪೂರ್ಣನನ್ನಾಗಿಸುವ ಸಾಧನವಾಗಿ ಮಾತ್ರ ಹೆಣ್ಣು ಬಳಕೆಯಾಗುತ್ತಾಳೆ. ಆದ್ದರಿಂದಲೇ ಇಡೀ ನವ್ಯಸಾಹಿತ್ಯದಲ್ಲಿ ಲೈಂಗಿಕ ಉಪಭೋಗಕ್ಕೆ ನೆರವಾಗುವ ಸ್ತ್ರೀ ಎಂಬ ಸಾಮಗ್ರಿಯನ್ನು ಬಿಟ್ಟರೆ, ಗಂಡಿಗಿರುವಷ್ಟೇ ಸಮಾನವಾದ ಅಧಿಕಾರ ಇರುವ ಹೆಣ್ಣನ್ನು ಕಾಣುವುದು ಅಪರೂಪ. ಆದರೆ ಶಾಂತಿನಾಥ ದೇಸಾಯಿಯವರ ಸಾಹಿತ್ಯ ಇದಕ್ಕೆ ಅಪವಾದವಾಗಿದೆ.

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಹೆಣ್ಣು ಗಂಡಿನ ಕಾಮತೃಷೆಯನ್ನು ತಣಿಸುವ ಸಾಧನವಾಗಿ ಬರುವುದಿಲ್ಲ. ಬದಲಾಗಿ ಗಂಡಿನಷ್ಟೇ ಸ್ವತಂತ್ರ ಅಸ್ತಿತ್ವವುಳ್ಳ, ಆಧುನಿಕ ಪ್ರಜ್ಞೆಯುಳ್ಳ ಪಾತ್ರವಾಗಿ ಬರುತ್ತಾಳೆ. ಹೆಣ್ಣು ಸದಾ ಅವರ ಸಾಹಿತ್ಯದ ಕೇಂದ್ರವಾಗಿದ್ದಾಳೆ. ಅವರು ತಮ್ಮ ವ್ಯಕ್ತಿತ್ವವನ್ನು ಮಂಡಿಸಲು ದೇಸಾಯಿಯವರು ತಮ್ಮ ಸಾಹಿತ್ಯದಲ್ಲಿ ಒದಗಿಸಿರುವ ಅವಕಾಶ ಬಹಳ ದೊಡ್ಡದು. ಗಂಡು-ಹೆಣ್ಣಿನ ಸಂಬಂಧಗಳನ್ನು ಚಿತ್ರಿಸುವಾಗ ಅವರು ಎರಡೂ ಪಕ್ಷಗಳಿಂದ ಸಮಸ್ಯೆಯನ್ನು ನೋಡಲು ಪ್ರಯತ್ನಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರ ಸ್ತ್ರೀ ಪಾತ್ರಗಳೇ ಹೆಚ್ಚು ಆಕ್ರಮಣಕಾರಿಯಾಗಿ ವರ್ತಿಸುತ್ತವೆ. 'ರಾಕ್ಷಸ' ಕಥೆಯ ನಾಯಕಿ 'ಬಿಡುಗಡೆ'ಯ ಮೀನಾ, 'ಏಕಾಂಗಿ'ಯ ಆ್ಯನ್, 'ಗಂಡಸತ್ತ ಮೇಲೆ'ಯ ವಿಜಯಾಬಾಯಿ, 'ಯಥಾಕಾಷ್ಠಂಚ ಕಾಷ್ಠಂಚ'ದ ಶಾರದಾಬಾಯಿ ಮೊದಲಾದ ಪಾತ್ರಗಳು ಇಡುವ ದಿಟ್ಟ ಹೆಜ್ಜೆಗಳನ್ನು ದೇಸಾಯಿಯಯವರು ಸಕಾರಾತ್ಮಕವಾಗಿಯೇ ನೋಡುತ್ತಾರೆ.

ದಾಂಪತ್ಯದ ಚೌಕಟ್ಟನ್ನು ಮುರಿದು ಹೊರಗೆ ಬರುವುದು ಗಂಡಿಗಿಂತ ಹೆಣ್ಣಿಗೆ ಹೆಚ್ಚು ಆತಂಕದ ವಿಷಯ. ಆರ್ಥಿಕ ಬಲವಿಲ್ಲದಿದ್ದಾಗ ಹೆಣ್ಣಿಗೆ ಇಂಥ ನಿರ್ಣಯ ಸುಲಭವಲ್ಲ. ಆದರೂ ಅವರು ಧೈರ್ಯದಿಂದ ಹೊರಬರುತ್ತಾರೆ. "ನೀವು ನನಗೆ ಬೇಕಾಗಿಲ್ಲ ನನ್ನ-ನಿಮ್ಮ ಸಂಬಂಧದಲ್ಲಿ ಅರ್ಥವಿಲ್ಲ-ಅರ್ಥವಿಲ್ಲ ಯಾಕೆ-ಯಾಕೆ ಅಂತ ಮತ್ತೆ ಮತ್ತೆ ಕೇಳಬ್ಯಾಡ್ರಿ ಪ್ಲೀಜ್-ನನಗೆ ಬಿಟ್ಟು ಬಿಡಿರಿ ನನಗ ಈ ಬಂಧನದ ನರಕವಾಸ ಸಾಕಾಗೇದ ಇನ್ನು ಎಷ್ಟಂತ ಸಹನ ಮಾಡೋದು-ದೇವರೇ, ನನ್ನ ಬಿಡುಗಡೆ ಮಾಡು"-ಎನ್ನುವ 'ಯಾಕೆ?' ಕಥೆಯ ಪ್ರಮೀಳಾನ ಆರ್ತಮೊರೆ ಪ್ರಾತಿನಿಧಿಕವಾದದ್ದು. 'ರಾಕ್ಷಸ' ಕಥೆಯ ನಾಯಕಿ ನಳಿನಿ ತನ್ನ ಗಂಡನಿಂದ ಸುಖ ಸಿಗದೆ ಹೋದಾಗ, ಕಮಲಾಕರನ ಜೊತೆಗೆ ಸಂಬಂಧವನ್ನು ಇಟ್ಟುಕೊಳ್ಳುತ್ತಾಳೆ. ಆದರೆ ಕಮಲಾಕರನಿಗೆ ಬೇಕಾಗಿರುವುದು ಗುಟ್ಟಾದ ಸಂಬಂಧ. ತನ್ನ ಹಾಗೂ ನಳಿನಿ ಜೊತೆಗಿನ ಸಂಬಂಧ ಲೋಕಕ್ಕೆ ಗೊತ್ತಾದರೆ, ತನ್ನ ವ್ಯಕ್ತಿತ್ವಕ್ಕೆ ಧಕ್ಕೆ ಬರುತ್ತದೆ ಎಂಬ ಆತಂಕ ಅವನನ್ನು ಕಾಡುತ್ತದೆ. ಹೆಣ್ಣಾದ ನಳಿನಿಗೆ ಯಾವುದೇ ರೀತಿಯ ಪಾಪಪ್ರಜ್ಞೆ ಕಾಡುವುದಿಲ್ಲ. ಇಲ್ಲಿ ಕಮಲಾಕರನ ಮನಸ್ಥಿತಿಯೊಂದಿಗೆ ನಳಿನಿ ಮನಸ್ಥಿತಿಯನ್ನು ಹೋಲಿಸಿದಾಗ, ನಳಿನಿ ಹೆಚ್ಚು ಆಧುನಿಕಳಾಗಿ ಕಂಡುಬರುತ್ತಾಳೆ.

'ಮುಕ್ತಿ'ಯ ಕಾಮಿನಿಯಿಂದ 'ಓಂಣಮೋ'ದ ಆ್ಯನ್ ವರೆಗಿನ ಪಾತ್ರಗಳು ಒಂದು ರೀತಿಯ ಮುಕ್ತತೆಯನ್ನು ಪಡೆದುಕೊಂಡಿವೆ. ಹಾಗಂದ ತಕ್ಷಣ ಆ ಪಾತ್ರಗಳು ಸ್ವೇಚ್ಛಾಚಾರವಾಗಿ ನಡೆದುಕೊಂಡಿಲ್ಲ. ಅವುಗಳಿಗೂ ಒಂದು ನೈತಿಕತೆಯಿದೆ. 'ಬೀಜ' ಕಾದಂಬರಿಯಲ್ಲಿ ಬರುವ ರೇವತಿ ವಿಧವೆ. ಆಕೆ

ಇಷ್ಟಪಟ್ಟಿದಿದ್ದರೆ ಶ್ರೇಯಾಂಸನನ್ನು ಮದುವೆಯಾಗಬಹುದಿತ್ತು. ಅಥವಾ ಅವನ ಜೊತೆಗೆ ಇಷ್ಟಬಂದಂತೆ ಇರಬಹುದಾಗಿತ್ತು. ಆದರೆ ಅವಳಿಗೂ ಒಂದು ಜವಾಬ್ದಾರಿ ಇದೆ. ಅದಕ್ಕಾಗಿ ಆಕೆ ಶ್ರೇಯಾಂಸನನ್ನು ಮದುವೆಯಾಗಲಿಕ್ಕೆ ಒಪ್ಪುವುದಿಲ್ಲ. 'ಓಂಣಮೋ' ಕಾದಂಬರಿಯಲ್ಲಿ ಆ್ಯಡಂ ಹಾಗೂ ಆ್ಯನ್‌ರ ನಡುವಿನ ಸಂಬಂಧವನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಊಹಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ. ಹಾಗಂತ ಆ ಪಾತ್ರಗಳು ತಮ್ಮ ಮನಸ್ಸಿಗೆ ಬಂದಂತೆಲ್ಲಾ ನಡೆದುಕೊಳ್ಳುವುದಿಲ್ಲ. ಮೈಸೂರಿಗೆ ಹೋದಾಗ ಇಬ್ಬರೂ ಒಂದೇ ರೂಮಿನಲ್ಲಿದ್ದಾಗ, ಆ್ಯನ್ ತನಗೆ ಇಷ್ಟ ಇಲ್ಲ ಅಂತ ಹೇಳಿದಾಗ ಆ್ಯಡಂ ತನ್ನ ಪಾಡಿಗೆ ತಾನು ಹೋಗಿ ಸುಮ್ಮನೆ ಮಲಗಿಕೊಳ್ಳುತ್ತಾನೆ. ಅಂದರೆ ಅವರ ಇಡೀ ವ್ಯಕ್ತಿತ್ವವೇ ಆಧುನಿಕ ಆಗೋದು, ವೈಚಾರಿಕತೆಯಿಂದ ಕೂಡಿರುವುದು ಕಂಡುಬರುತ್ತದೆ.

ಆದರೆ ಅದೇ 'ಕ್ಷಿತಿಜ'ದ ಮಂದಾಕಿನಿ ಪಾತ್ರವನ್ನು ದೇಸಾಯಿಯವರು ಭಾರತೀಯ ಸಂಸ್ಕೃತಿಯ ಚೌಕಟ್ಟಿನಲ್ಲಿಟ್ಟು ನೋಡುತ್ತಾರೆ. ಅದಕ್ಕಾಗಿ ಆಕೆಗೆ ಹಡಗಿನಲ್ಲಿ ಉಂಟಾಗುವಂಥ ಘಟನೆಗಳನ್ನು, ಸನ್ನಿವೇಶಗಳನ್ನು ದಕ್ಕಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಮುಖರ್ಜಿ 'ಎ' ಡೆಕ್ಕಿಗೆ ಹೋಗುವಂತೆ ಮಂದಾಕಿನಿಯನ್ನು ಕೇಳಿ, ಬಲವಂತ ಮಾಡಿದಾಗ ಆಕೆಗೆ ಅದು ಇಷ್ಟವಾಗುವುದಿಲ್ಲ. ಅದೇ ಸಂದರ್ಭದಲ್ಲಿ ಹ್ಯಾರಿಮೆಕಾರ್ಥಿ ಅವಳಿಗೆ ಸಿಕ್ಕು ಏನಾಯ್ತು ಅಂತ ಕೇಳಿದಾಗ ಅವಳು ಹೇಳುವ ಮಾತುಗಳು : "ನಾನೆಂದರೆ ಯಃಕಶ್ಚಿತ ಹಾದಿಯ ಮೇಲಿನ ಹೆಣ್ಣೆಂದು ತಿಳಿದಿದ್ದಾನೆ ಆತ!... ನಮ್ಮ ದೇಶವಾಗಿದ್ದರೆ ಚಪ್ಪಲಿಯಿಂದ ಹೊಡೆಯುತ್ತಿದ್ದೆ" ಎಂದು ಹೇಳುತ್ತಾಳೆ. ಇಲ್ಲಿ ಸಾಂಪ್ರದಾಯಿಕ ಚೌಕಟ್ಟಿನಿಂದ ಬಂದ ಮಂದಾಕಿನಿಗೆ ಮುಖರ್ಜಿ ಹಾಗೆ ಕೇಳಿದ್ದೆ ತಪ್ಪಾಗಿ ಕಾಣಿಸುತ್ತದೆ. ಆದರೆ ಅದೇ ಮಂದಾಕಿನಿ ಮುಂದೆ ಲೆಗ್ವಿಯ ಸಹವಾಸದಲ್ಲಿ ಮುಕ್ತವಾಗಿ ತನ್ನನ್ನು ತಾನು ಆಧುನಿಕ ಬದುಕಿಗೆ ತೆರೆದುಕೊಳ್ಳುತ್ತಾಳೆ.

ದೇಸಾಯಿಯವರು ತಮ್ಮ ಸಾಹಿತ್ಯದಲ್ಲಿ ಬರುವ ಮಹಿಳೆಯರನ್ನು ಸಾಂಪ್ರದಾಯಿಕವಾಗಿಯೂ ಚಿತ್ರಿಸದೆ, ಭೋಗದ ವಸ್ತುವನ್ನಾಗಿಯೂ ನೋಡದೆ, ಜವಾಬ್ದಾರಿ ಇರುವ ಒಂದು ಮುಕ್ತ ಮನಸ್ಸಿನ ಪ್ರಜ್ಞೆಯುಳ್ಳ, ಆಧುನಿಕ ಮಹಿಳೆಯರನ್ನು ಚಿತ್ರಿಸುತ್ತಾರೆ. ದೇಸಾಯಿ ಅವರನ್ನು ನವ್ಯ ಸಂದರ್ಭದ ಮಹತ್ವದ ಲೇಖಕರೆಂದು ಪರಿಗಣಿಸಲು ಕಾರಣ ಅವರ ಸ್ತ್ರೀ ಸಂವೇದನೆ. ಲಂಕೇಶರು ಈ ಸಂದರ್ಭದಲ್ಲಿ ಹೇಳಿರುವ ಮಾತುಗಳು ಉಲ್ಲೇಖಾರ್ಹವಾಗಿವೆ. ''ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ನೇರವಾಗಿ ಹೋರಾಡುವುದು ಹಿಂದಿನವರ ರೀತಿಯೆಂದರೆ ಸಾಂಕೇತಿಕವಾಗಿ ದ್ವಂದ್ವಗಳನ್ನೊಳಗೊಂಡೇ ಕ್ರಿಯಾತ್ಮಕವಾಗಿ, ವ್ಯಂಗ್ಯವನ್ನು ಕೈಬಿಡದೆ ಕಥೆ ಹೇಳುವುದು ನವ್ಯರ ರೀತಿ. ಭಾರತೀಯ ಸ್ತ್ರೀಯ ಅನೇಕ ಚಿತ್ರಗಳು ತ್ರಿವೇಣಿಯವರಲ್ಲಿ ಸಿಗುತ್ತವೆ; ಆದರೆ ಅವಳ ಒಳಜಗತ್ತನ್ನು ಸಾಂಕೇತಿಕವಾಗಿ ಮಂಡಿಸುವುದರ ಮೂಲಕ ಅವಳಿಗೆ ತಂದಿರುವ ಘನತೆ ಮತ್ತು ಹೊಸ ಆಯಾಮವನ್ನು ಶ್ರೀಶಾಂತಿನಾಥ ದೇಸಾಯಿಯವರ 'ಕ್ಷಿತಿಜ' ಕಥೆಯಲ್ಲಿ ಕಾಣಬಹುದು.'' ಆಧುನೀಕರಣ ಪ್ರಕ್ರಿಯೆಗೆ ಒಳಗಾಗುವ ಸ್ತ್ರೀ ಪುರುಷ ಬದುಕಿನ ಸಂದಿಗ್ಧ ಸಮಸ್ಯೆಗಳನ್ನು ದೇಸಾಯಿಯವರು ತಲಸ್ಪರ್ಶಿಯಾಗಿ ಅಭಿವ್ಯಕ್ತಿಗೊಳಿಸಿದ್ದಾರೆ.

ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಆಧುನಿಕತೆಯ ಶೋಧವನ್ನು ಅತ್ಯಂತ ಜವಾಬ್ದಾರಿಯುತವಾಗಿ ಕೈಗೊಂಡ ಲೇಖಕರಿವರು. ಕಾಮಕೇಂದ್ರದ ನೆಲೆಯಲ್ಲಿ ವೈಯಕ್ತಿಕ ಅನುಭವದ ಶೋಧಕ್ಕೆ ಮುನ್ನುಗ್ಗುವ ಭರದಲ್ಲಿ ಅನೇಕ ನವ್ಯ ಲೇಖಕರು ಹೆಣ್ಣನ್ನು ಭೋಗವಸ್ತುವನ್ನಾಗಿ ಕಂಡದ್ದುಂಟು. ಆದರೆ ದೇಸಾಯಿಯವರ ಕಥನಗಳು ಈ ಮಿತಿಯಿಂದ ದೂರವಾಗಿವೆ. ಈ ದೂರವಾಗುವಿಕೆಯೇ ಅವರನ್ನು ಸಮಕಾಲೀನ ಲೇಖಕರಿಗಿಂತ ಭಿನ್ನವಾಗಿಸುವಂತೆ ಮಾಡಿದೆ. ಅದಕ್ಕೋಸ್ಕರ ಈ ಅಧ್ಯಯನ ಮಾಡುವ ಮಹತ್ವ ಇದೆ.

ಅಧ್ಯಯನದ ವ್ಯಾಪ್ತಿ

ನವ್ಯದ ಪ್ರಮುಖ ಬರಹಗಾರರು ತಮ್ಮ ಸಾಹಿತ್ಯ ರಚನೆಗೆ ಹಲವು ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ. ಕವಿತೆ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅಂಕಣ, ಸಿನೇಮಾ, ಪತ್ರಿಕಾ ಸಂಪಾದನೆ ಮುಂತಾದ ಪ್ರಕಾರ ಮತ್ತು ಮಾಧ್ಯಮಗಳಲ್ಲಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಹಾಗೆ ನೋಡಿದರೆ ಈ ಹೊತ್ತಿಗೂ ಕಥಾ ಪ್ರಕಾರವನ್ನು ನವ್ಯದವರು ಬಲಪಡಿಸಿದಷ್ಟು ನವೋದಯ, ದಲಿತ-ಬಂಡಾಯ ಪಂಥದ ಸಾಹಿತಿಗಳು ಬಲ ಪಡಿಸಿಲ್ಲ. ಕಥಾ ಸಾಹಿತ್ಯದಲ್ಲಿ ವಸ್ತು-ವಿಷಯ, ಪಾತ್ರ ನಿರ್ಮಾಣ, ನಿರೂಪಣಾ ವಿಧಾನ ಮುಂತಾದ ಅಂಶಗಳಲ್ಲಿಯೂ ಪ್ರಯೋಗ ಮಾಡಿದ್ದೂ ಅಲ್ಲದೆ ಯಶಸ್ವಿಯಾಗಿದ್ದಾರೆ. ಕಥೆ, ಕಾದಂಬರಿ ಪ್ರಕಾರಗಳಲ್ಲಿ ಸಮಾನ ಸಾಮರ್ಥ್ಯ ತೋರಿಸಿದ್ದಾರೆ. ಯಶವಂತ ಚಿತ್ತಾಲ, ಪಿ.ಲಂಕೇಶ್, ಯು.ಆರ್. ಅನಂತಮೂರ್ತಿ, ಆಲನಹಳ್ಳಿ, ವೀಣಾಶಾಂತೇಶ್ವರ, ಶಾಂತಿನಾಥ ದೇಸಾಯಿ ಮುಂತಾದ ನವ್ಯ ಲೇಖಕರು ಕಥೆ, ಕಾದಂಬರಿ, ಸಾಹಿತ್ಯ ಪ್ರಕಾರಗಳಲ್ಲಿ ಸಮಾನ ಸಾಮರ್ಥ್ಯವನ್ನು ತೋರಿಸಿದ್ದಾರೆ.

ಈ ದೃಷ್ಟಿಯಿಂದ ಶಾಂತಿನಾಥ ದೇಸಾಯಿ ಅವರ ಕಥಾ ಸಾಹಿತ್ಯ ಮತ್ತು ಕಾದಂಬರಿ ಸಾಹಿತ್ಯವನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಕಥನ ಸಾಹಿತ್ಯವನ್ನೇ ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಮಾಡಲಾಗಿದೆ. ಶಾಂತಿನಾಥರ ಕಥೆಗಳಲ್ಲಾಗಲಿ, ಕಾದಂಬರಿಗಳಲ್ಲಾಗಲಿ ಸಾಂಪ್ರದಾಯಿಕ ತಂತ್ರಗಳಿಲ್ಲ ಆಧುನಿಕ ತಂತ್ರಗಾರಿಕೆಯಿದೆ. ಸಾಹಿತ್ಯದಲ್ಲಿ ತಂತ್ರಗಾರಿಕೆ ಮುಖ್ಯ. ವಸ್ತು-ವಿಷಯ, ಪಾತ್ರಗಳ ಸಾವಯವ ಸಂಬಂಧಗಳಲ್ಲಿ ತಂತ್ರಗಾರಿಕೆ ವಿಶೇಷ ಪರಿಣಾಮ ಬೀರಬಲ್ಲದು. ಪ್ರಥಮ ಪುರುಷ ನಿರೂಪಣೆ, ಪತ್ರಗಳ ಮೂಲಕ ನಿರೂಪಿಸುವ ವಿಧಾನ, ಫ್ಲ್ಯಾಶ್ ಬ್ಯಾಕ್ ತಂತ್ರ, ಪಾತ್ರಗಳ ಚಿತ್ರಣ, ವಿವರಗಳಲ್ಲಿನ ವಿಶೇಷತೆಯನ್ನು ಶಾಂತಿನಾಥ ದೇಸಾಯಿ ಅವರು ತಮ್ಮ ಕಥನ ಸಾಹಿತ್ಯದಲ್ಲಿ ಅನನ್ಯವಾಗಿ ರಚಿಸಿದ್ದಾರೆ. ಅವರ ತಾತ್ವಿಕ ಧೋರಣೆ, ಜೀವನ ದೃಷ್ಟಿಯೂ ಅವರ ಕಥಾ ಸಾಹಿತ್ಯದಲ್ಲಿದೆ. ಅದರಿಂದಾಗಿ ಈ ಅಧ್ಯಯನವನ್ನು ಕಥನ ಸಾಹಿತ್ಯ ಕೇಂದ್ರೀಕರಿಸಿ ಮಾಡಲಾಗಿದೆ. ದೇಸಾಯಿ ಅವರು ವಿಮರ್ಶೆಯನ್ನು ಬರೆದಿದ್ದಾರೆ. ಅವರ ಕಥನ ಸಾಹಿತ್ಯದ ತಾತ್ವಿಕತೆಯನ್ನು ಸ್ಪಷ್ಟಪಡಿಸಿಕೊಳ್ಳಲು ಈ ಅಧ್ಯಯನದಲ್ಲಿ ನೇರವಾಗಿ ಅಲ್ಲದಿದ್ದರೂ ಹಿನ್ನೆಲೆಗಾಗಿ ಅವರ ವಿಮರ್ಶೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೨

ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ತಾತ್ವಿಕ ಸಮೀಕ್ಷೆ

೨

ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಕನ್ನಡದಲ್ಲಿ ಸಾಹಿತ್ಯವನ್ನು ಕುರಿತ ಅಧ್ಯಯನಗಳು ಕಾಣಿಸಿಕೊಂಡದ್ದು ಮುನ್ನುಡಿ ಪ್ರಸ್ತಾವನೆಗಳ ಮೂಲಕ. ಪ್ರಾಚೀನ, ಮಧ್ಯಕಾಲೀನ ಕೃತಿಗಳನ್ನು ಸಂಶೋಧನೆ ಮಾಡಿ, ಸಂಪಾದಿಸಿ ಅವುಗಳಿಗೆ ದೀರ್ಘ ಪ್ರಸ್ತಾವನೆ ಬರೆಯುವುದೊಂದು ಸಂಪ್ರದಾಯ. ಈ ಶತಮಾನದ ಆರಂಭದಿಂದ ಸಂಶೋಧಕರು ತಾವು ಸಂಪಾದಿಸಿದ ಕೃತಿಗಳಿಗೆ ಬರೆದ ಅಧ್ಯಯನಾತ್ಮಕ ಪ್ರಸ್ತಾವನೆಗಳು ಇಂದಿಗೂ ಮಹತ್ವವನ್ನು ಪಡೆದಿವೆ. ಸಂಶೋಧಕರ ಸಂಪಾದಿತ ಕೃತಿಗಳಿಗೆ ಬರೆಯುವ ಪ್ರಸ್ತಾವನೆಗಳು ಮುಂದಿನ ಅಧ್ಯಯನಗಳಿಗೆ ನೆಲೆಯನ್ನು ಒದಗಿಸಿವೆ. ಈ ಪ್ರಸ್ತಾವನೆಗಳಿಗೆ ಒಂದು ಸಾಂಪ್ರದಾಯಿಕ ವಿಧಾನವಿದ್ದು, ಅದು ಮುಂದುವರೆದು ಮಾದರಿಯೊಂದನ್ನು ಹಾಕಿದೆ. ಅದನ್ನು ಅನುಸರಿಸಿ ಈ ಹೊತ್ತಿಗೂ ಪ್ರಸ್ತಾವನೆಗಳು ರಚನೆಯಾಗುತ್ತವೆ.

ಆಧುನಿಕ ವಿಮರ್ಶಕರು, ತಮ್ಮ ಸಮಕಾಲೀನ ಲೇಖಕರ ಕೃತಿಗಳಿಗೆ ಮುನ್ನುಡಿ ಬರೆಯುವ ರೂಢಿಯಿದೆ. ಮುನ್ನುಡಿಯ ಹೊರತಾಗಿಯೂ, ಸೃಜನಶೀಲ ಲೇಖಕರ ಕೃತಿಗಳಿಗೆ ವಿಮರ್ಶಾ ಲೇಖನಗಳನ್ನು ಬರೆಯುತ್ತಾರೆ. ಬಿಡಿ ಬಿಡಿ ಕೃತಿಗಳ ಮೇಲೆ, ಒಬ್ಬ ಲೇಖಕನ ಪ್ರಕಾರಾಧಾರಿತವಾಗಿಯೂ ಬರೆಯುತ್ತಾರೆ. ವಿಚಾರ ಸಂಕಿರಣ, ಪಾಠ ಬೋಧನೆ, ಪತ್ರಿಕೆಗಳ ಆಹ್ವಾನದ ಮೇಲೆ ಆಧುನಿಕ ಕನ್ನಡ ಸಾಹಿತ್ಯವನ್ನು ಕುರಿತು ವಿಮರ್ಶಾತ್ಮಕ ಅಧ್ಯಯನಗಳು ಕನ್ನಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ. ನಡೆಯುತ್ತಲೂ ಇವೆ. ಸೈದ್ಧಾಂತಿಕವಾಗಿ ವಿಮರ್ಶೆಗಳು ಬೆಳೆದಿವೆ. ವಿಶ್ವವಿದ್ಯಾಲಯಗಳಲ್ಲಿ, ಪ್ರಕಾಶನ ಸಂಸ್ಥೆಗಳು ಲೇಖಕರನ್ನು ಕುರಿತು ಅಧ್ಯಯನ ಮಾಡುವ ಯೋಜನೆಗಳು ಜಾರಿಗೆ ಬಂದಿವೆ. ಇದರಿಂದ ಲೇಖಕರನ್ನು ಕುರಿತು ವಿಮರ್ಶಾತ್ಮಕ ಅಧ್ಯಯನಗಳು ಜಾರಿಗೆ ಬಂದಿವೆ. ಇವೆಲ್ಲವುಗಳಿಂದ ಕನ್ನಡದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ.

ಕನ್ನಡದಲ್ಲಿ ಕುವೆಂಪು, ಮಾಸ್ತಿ, ಬೇಂದ್ರೆ, ಪು.ತಿ.ನ. ಮುಂತಾದ ಮೊದಲ ತಲೆಮಾರಿನ ಧೀಮಂತ ಸಾಹಿತಿಗಳನ್ನು ಕುರಿತು ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ನಡೆದಿವೆ. ಅಭಿನಂದನ ಗ್ರಂಥ, ಪಿಎಚ್.ಡಿ.ಅಧ್ಯಯನಗಳು, ಅವರ ಅಭಿಮಾನಿಗಳು ಬರೆಯುವ ಅಧ್ಯಯನ ಕೃತಿಗಳು, ಹೀಗೆ ಸಾಕಷ್ಟು ಪ್ರಮಾಣದಲ್ಲಿ ಬಂದಿದ್ದರೂ ಒಮ್ಮೊಮ್ಮೆ, ಅಭಿಮಾನ, ಗೌರವ ಭಾವನೆಗಳಿಂದ ವೈಭವೀಕರಿಸುವ

[illegible]

[illegible]

ಅಧ್ಯಯನಗಳೇ ಜಾಸ್ತಿಯಾಗಿರುವುದು ಕಂಡುಬರುತ್ತವೆ. ನಿಜವಾದ ವಿಮರ್ಶೆ ಅಂದರೆ, ಮೌಲ್ಯಯುತ ವಿಮರ್ಶೆಗಳು ಬಂದಿದ್ದು ಕಡಿಮೆಯಾಗಿರುತ್ತದೆ. ಸಾಕಷ್ಟು ಒಳ್ಳೆಯ ಲೇಖಕರನ್ನು ಕುರಿತು ಅಲ್ಲಲ್ಲಿ ಬಿಡಿ ಬಿಡಿ ಮಾತುಗಳು, ಲೇಖನಗಳು ಮಾತ್ರ ಬಂದಿರುವುದನ್ನು ಕಾಣುತ್ತೇವೆ.

ಶಾಂತಿನಾಥ ದೇಸಾಯಿ ನವ್ಯ ಸಂದರ್ಭದ ಅತ್ಯುತ್ತಮ ಲೇಖಕರು ಎಂಬುದರಲ್ಲಿ ಯಾರಿಗೂ ಅನುಮಾನಗಳಿಲ್ಲವೆಂದು ತೋರುತ್ತದೆ. ತಮ್ಮ ಸಮಕಾಲೀನ ನವ್ಯ ಲೇಖಕರಿಗಿಂತ ಭಿನ್ನವಾಗಿ ಸಾಹಿತ್ಯ ರಚಿಸಿದ್ದಾರೆಂದು ಎಲ್ಲರೂ ಒಪ್ಪುತ್ತಾರೆ. ಅವರ ಮೊದಲ ಕಾದಂಬರಿ 'ಮುಕ್ತಿ' ಬಿಡುಗಡೆಯಾದಾಗ ಓದುಗರು, ವಿಮರ್ಶಕರು ತುಂಬಾ ಮೆಚ್ಚಿಕೊಂಡದ್ದು ಅದರ ಹೊಸತನಕ್ಕಾಗಿ. ನವ್ಯ ಸಾಹಿತ್ಯವನ್ನು ಬಲಪಡಿಸಿದ ದೇಸಾಯಿ ಅವರ 'ಮುಕ್ತಿ' ನವ್ಯ ಕಾದಂಬರಿ ಪರಂಪರೆಯನ್ನೇ ಹುಟ್ಟು ಹಾಕಿತು. ಕಾಲೇಜು ಪರಿಸರ, ಬೌದ್ಧಿಕವಾಗಿ ಆಲೋಚಿಸುವ ಯುವಕ ಯುವತಿಯರು, ಮುಕ್ತವಾಗಿ ಬೆಳೆಯುವ, ಆಲೋಚಿಸುವ ಆಧುನಿಕ ಯುವ ಮನಸ್ಸಿನ ವಿಚಾರಗಳನ್ನು ಈ ಕಾದಂಬರಿ ಮೊದಲ ಬಾರಿಗೆ ಕಟ್ಟಿಕೊಟ್ಟಿತು. ಕನ್ನಡಕ್ಕೆ ತೀರ ಹೊಸದಾಗಿತ್ತು. ಅಸ್ತಿತ್ವವಾದ, ಮನೋವಿಜ್ಞಾನದ ಹಿನ್ನೆಲೆಯಲ್ಲಿ ರಚನೆಯಾದ ಈ ಕಾದಂಬರಿ ಈ ಹೊತ್ತಿಗೂ ಓದುಗರನ್ನು ಸೆರೆ ಹಿಡಿಯುವ ಶಕ್ತಿಯನ್ನು ಹೊಂದಿದೆ. ಅದರ ನಿರೂಪಣಾ ವಿಧಾನವೂ ಕನ್ನಡದಲ್ಲಿ ಇರಲಿಲ್ಲ. ಅದೂ ಹೊಸದಾಗಿ ಸೇರ್ಪಡೆಯಾಗಿತ್ತು. ಶಾಂತಿನಾಥ ದೇಸಾಯಿ ಅವರ ಮೊದಲ ಕಥೆಗಳು ಕುತೂಹಲ ಹುಟ್ಟಿಸಿದವು. ಅಸ್ತಿತ್ವವಾದ ಬೆನ್ನೆಲುಬಾಗಿ ಕಥೆಗಳಿಗೆ ನಿಂತರೆ, ಫ್ರಾಯಿಡ್‌ನ ಮನೋವಿಜ್ಞಾನದ ಚಿಂತನೆಗಳೂ ನೆಲೆಯಾದವು. ಮಾರ್ಕ್ಸ್‌ವಾದದ ವಿಚಾರಗಳೂ ಸೇರಿಕೊಂಡವು. ಹೀಗಾಗಿ ಮೊದಲ ಕಥೆಗಳು ಹೆಣ್ಣು-ಗಂಡಿನ ಸಂಬಂಧಗಳು ಲೈಂಗಿಕ ಆಕರ್ಷಣೆಯೊಂದಿಗೆ ತಳಕು ಹಾಕಿಕೊಂಡಿದ್ದರೂ ಅವು ಪ್ರೇಮ ಕಥೆಗಳಾಗದೆ, ಭಿನ್ನ ಪ್ರೇಮ ಕಥೆಗಳೂ ಆಗದೆ ಓದನ್ನು ಶೋಧಿಸುವ, ಬದುಕಿನ ಅರ್ಥವನ್ನು ತಿಳಿಯಲೆತ್ನಿಸುವ ಕಥೆಗಳಾಗಿ ಪರಿಣಮಿಸಿದವು. ಅದರಲ್ಲೂ ಹೆಣ್ಣು ಮುಕ್ತವಾಗಿ ವರ್ತಿಸುವ ರೀತಿ, ಕನ್ನಡ ಕಥೆಗಳಲ್ಲಿ ಹೊಸದಾಗಿ ಕಾಣಿಸಿತು. ಅಪ್ಪಟ ಸೈದ್ಧಾಂತಿಕವಾಗಿ, ಆಧುನಿಕವಾಗಿ ಆಧುನಿಕ ಪ್ರಜ್ಞೆಯುಳ್ಳ ಕಥನವನ್ನು ದೇಸಾಯಿ ಕನ್ನಡಕ್ಕೆ ನೀಡಿ ಹೊಸ ಆಯಾಮವನ್ನು ಸೇರಿಸಿದರು.

ಇಷ್ಟಾಗಿಯೂ ಶಾಂತಿನಾಥದೇಸಾಯಿ ಅವರನ್ನು ಕುರಿತ ಅಧ್ಯಯನಗಳು ಕಡಿಮೆ ಎಂದೇ ಹೇಳ ಬೇಕಾಗುತ್ತದೆ. ಆಗಾಗ ಬಿಡುಗಡೆಯಾಗುವ ಕಥೆ, ಕಾದಂಬರಿ ಕೃತಿಗಳನ್ನು ಕುರಿತು ಬಿಡಿ ಬಿಡಿಯಾಗಿ ವಿಮರ್ಶಾತ್ಮಕ ಲೇಖನಗಳೂ ಬಂದಿವೆ. ನಿರಂತರವಾಗಿ ದೇಸಾಯಿ ಕಥೆ, ಕಾದಂಬರಿ, ವಿಮರ್ಶೆ ಬರೆಯುತ್ತಲೇ ಬಂದರು. ಅವರು ಬರೆಯುತ್ತ ಬಂದಂತೆ ಓದುಗರು ಕುತೂಹಲದಿಂದ ಕಾಯ್ದು ಓದಿದ್ದು ಹೌದು. ಆದರೂ ಈಗ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ಅಧ್ಯಯನಗಳನ್ನು ಸಮೀಕ್ಷೆ ಮಾಡುವ ಸಂದರ್ಭ ಬಂದಾಗ ಅವುಗಳನ್ನು ಅವಲೋಕಿಸಿದಾಗ ನಿರಾಶೆಯಾಗುತ್ತದೆ. ಶಾತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳು ಸಮಗ್ರವಾಗಿ ಬಂದಿದ್ದೇ ಕಡಿಮೆ. ಅವರನ್ನು, ಅವರ ಸಾಹಿತ್ಯವನ್ನು

ಕುರಿತು ಅಭಿನಂದನ ಗ್ರಂಥ, ವಿಚಾರ ಸಂಕಿರಣದ ಕೃತಿಯೂ ಬಂದಿಲ್ಲ. ಶಾಂತಿನಾಥ ದೇಸಾಯಿ ನೆನಪಿನ ಸಂಪುಟ 'ಮುಕ್ತಚಂದ' ಪ್ರಕಟವಾಗಿದೆ. ಬದುಕು-ಬರಹ ಮಾದರಿಯಲ್ಲಿ 'ಶಾಂತಿನಾಥ ದೇಸಾಯಿ' ಎಂಬ ಎರಡು ಪುಸ್ತಕಗಳು ಪ್ರಕಟವಾಗಿವೆ. ಒಂದು ಜಿ.ಎಸ್. ಆಮೂರ ಅವರದು. ಇನ್ನೊಂದು ಪ್ರೀತಿ ಶುಭಚಂದ್ರ ಅವರದು.

ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ಕೆ.ವಿ.ನಾರಾಯಣ ಅವರು ಮಹತ್ವದ ಒಂದು ಅಂಶವನ್ನು ಗುರುತಿಸಿದ್ದಾರೆ. ಸಾಮಾನ್ಯವಾಗಿ ಯಾವುದೇ ಸೃಜನಶೀಲ ಲೇಖಕನ ಸಾಹಿತ್ಯ ರಚನೆಯ ಹಿಂದೆ, ಆತನ ಬಾಲ್ಯದ ನೆನಪುಗಳು ಪ್ರೇರಣೆಯಾಗಿರುತ್ತವೆ. ಕನ್ನಡದ ದೊಡ್ಡ ಲೇಖಕರಾದ ಕುವೆಂಪು, ಕಾರಂತ, ಗೊರೂರು, ಮಾಸ್ತಿ ಮುಂತಾದವರ ಸಾಹಿತ್ಯ ರಚನೆಗೆ ಅನುಭವಗಳು ಅವರ ಬಾಲ್ಯ ಕಾಲದವುಗಳೇ ಆಗಿವೆ. ಆದರೆ ಶಾಂತಿನಾಥ ದೇಸಾಯಿ ತಮ್ಮ ಸಾಹಿತ್ಯಕ್ಕೆ ಅನುಭವಗಳನ್ನು ಬಾಲ್ಯದ ನೆನಪುಗಳನ್ನು ಆದರಿಸದೆ, ತಮ್ಮ ಯೌವ್ವನ ಕಾಲದ ಅನುಭವಗಳನ್ನೇ ಆದರಿಸಿದ್ದಾರೆ. ಈ ಪ್ರಶ್ನೆಗೆ ಶಾಂತಿನಾಥ ದೇಸಾಯಿ "ನನ್ನ ಬಾಲ್ಯದ ಅತ್ಯಂತ ಕ್ಲಿಷ್ಟವಾದ ತೊಡಕಿನದಾದ ವಿಚಿತ್ರವಾದ ಅನುಭವ ವಿಶ್ವವನ್ನು ನಾನಿನ್ನೂ ಕೈಗೆತ್ತಿಕೊಂಡಿಲ್ಲ"[೧] ಈ ಪ್ರಶ್ನೆಗೆ ಈ ರೀತಿ ಉತ್ತರ ಹೇಳುವ ಮೊದಲು, "ಕಲ್ಪಿತ ಲೇಖಕ'ನ ಲೋಕ ಹಾಗೂ ಅವನು ನಿರ್ಮಿಸಿದ 'ಕಾಲ್ಪನಿಕ ಲೋಕ' - ಹೀಗೆ ಎರಡು ಬೇರೆ ಬೇರೆ ಪಾತಳಿಯ ಲೋಕಗಳನ್ನು ಒಂದು ಕೃತಿ ನಮಗೆ ಒದಗಿಸುವುದರ ಮೂಲಕ ನಿಜ ಲೇಖಕನಿಗೆ ಕೃತಿ ಮತ್ತು ಸಮಾಜಗಳಲ್ಲಿನ ಪರಸ್ಪರ ಸಂಬಂಧ, ಸಮಕಾಲೀನ ಸಾಹಿತ್ಯಿಕ ಸ್ಥಿತಿ ಹಾಗೂ ಒಂದು ಸಾಹಿತ್ಯ ಪ್ರಕಾರದ ಅನಿವಾರ್ಯ ನಿರ್ಬಂಧಗಳು ಇವುಗಳನ್ನು ಕುರಿತು ತನ್ನ 'ದೂರ'ವನ್ನು ಉಳಿಸಿಕೊಂಡರೂ ಅತ್ಯಂತ ಮಾರ್ಮಿಕವಾಗಿ ವಿಶ್ಲೇಷಿಸಲು ಸಾಧ್ಯವಾಗುತ್ತದೆ."[೨] 'ನನ್ನ ಸಾಹಿತ್ಯದ ಬಗ್ಗೆ ಹೇಳುವುದಾದರೆ, ನನ್ನ ಸಣ್ಣ ಕಥೆಗಳಲ್ಲಿ ನಾನು ಸಾಕಷ್ಟು ಬಾಲ್ಯದ ನೆನಪುಗಳನ್ನು ಉಪಯೋಗಿಸಿದ್ದೇನೆ. 'ಚಂದೂ', 'ಶೋಭನೆಯ ಹಾದಿ', 'ದಿಗ್ಭ್ರಮೆ', 'ನದಿಯ ನೀರು', 'ನಾನಾನ ತೀರ್ಥಯಾತ್ರೆ', 'ಶಿವೂನ ಬಂಡಾಯ' ಇತ್ಯಾದಿ' ಈ ಮಾತನ್ನು ಹೇಳಿದ್ದರೂ ಅದು ಅವರಿಗೆ ಸರಿ ಅನ್ನಿಸಲಿಲ್ಲವೆಂದು ಕಾಣುತ್ತದೆ. ಅವರು ಹೆಸರಿಸಿರುವ ಕಥೆಗಳಲ್ಲಿ ಚಿಕ್ಕವರ (ತಾರುಣ್ಯ) ಮನಸ್ಥಿತಿ ಕಾಣುವ ಕಥೆಗಳೇ ಹೊರತು ದೇಸಾಯಿ ಅವರ ಬಾಲ್ಯ ಕಾಲದ ನೆನಪುಗಳಲ್ಲ. ತಾರುಣ್ಯದ ಮಕ್ಕಳಲ್ಲಿ ಅದೇ ತಾನೇ ಕಾಣಿಸಿಕೊಳ್ಳುವ ಲೈಂಗಿಕ ಭಾವನೆಗಳ ತಲ್ಲಣಗಳನ್ನು ತೋರಿಸಲು ಕಥೆಗಳನ್ನು ಬರೆದಿದ್ದಾರೆ. ಇಂತ ಕಥೆಗಳಲ್ಲಿ ಫ್ರಾಯಿಡ್‌ನ ಸಿದ್ಧಾಂತವನ್ನು ಬಳಸಲಾಗಿದೆ.

ಗಿರಡ್ಡಿ ಗೋವಿಂದರಾಜ ಅವರು ಶಾಂತಿನಾಥ ದೇಸಾಯಿ ಅವರ ಕಥೆಗಳಲ್ಲಿ 'ಸತ್ಯದ ಬಹುತ್ವ' ಗುರುತಿಸಿದ ಲೇಖನದಲ್ಲಿ ಶಾಂತಿನಾಥ ದೇಸಾಯಿ ಅವರ ಕಥೆಗಳಲ್ಲಿ ಅಸ್ತಿತ್ವವಾದದ ಚಿಂತನೆಗಳನ್ನು ಕಾಣಬಹುದು. ಇದು ನವ್ಯ ಸಾಹಿತ್ಯದ ಪ್ರಧಾನ ಚಿಂತನ ಕ್ರಮವೇ ಆಗಿತ್ತೆಂದು ಹೇಳಿ, "ಅಸ್ತಿತ್ವವಾದ

ಅವನನ್ನು(ವ್ಯಕ್ತಿಯನ್ನು) ಸಾಮಾಜಿಕ ಆವರಣದಿಂದ ಬೇರ್ಪಡಿಸಿ ಏಕಾಂಗಿಯನ್ನಾಗಿ ನೋಡುತ್ತದೆ. ಹಾಗಾಗಿ ಏಕಾಂಗಿತನ, ಪರದೇಶಿತನ, ಸಂವಹನ ಸಾಧ್ಯವಾಗದ ರೀತಿ, ಸಂಬಂಧಗಳು ಮುರಿದು ಬೀಳುವ ಸ್ಥಿತಿ ಇಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಆದರೆ ಹಾಗೆ ಹೇಳಿದರೂ ಸಾಮಾಜಿಕ ಪರಿಸರ ಇದ್ದೇ ಇರುತ್ತದೆ. ಅದರಿಂದ ಬೇರ್ಪಡಿಸಿದರೆ ಮನುಷ್ಯನನ್ನು ನಿಲ್ಲಿಸುವುದಾದರೂ ಎಲ್ಲಿ? ದೇಸಾಯಿಯವರು ಅಸ್ತಿತ್ವವಾದಿ ಕಲ್ಪನೆಯನ್ನು ಒಪ್ಪಿಕೊಂಡು ಬರೆದರೂ, ಅವರ ಕಥೆಗಳಲ್ಲಿ ಸಮಸ್ಯೆಗಳು ಉದ್ಭವಿಸುವುದು ವಿಶಿಷ್ಟ ಸಾಮಾಜಿಕ ರಚನೆಗಳಲ್ಲಿ ಎಂಬುದನ್ನು ಗಮನಿಸಬೇಕು. ಸುಶಿಕ್ಷಿತ, ಮಧ್ಯಮ ವರ್ಗದ ವ್ಯಕ್ತಿಗಳು ಹಳ್ಳಿಗಾಡಿನ ಸರಂಜಾಮಿ ವ್ಯವಸ್ಥೆಯಲ್ಲಿ ಬಾಳಿದವರೂ, ಕಾರ್ಪೋರೇಟ್ ಜಗತ್ತಿನಲ್ಲಿ ಕೆಲಸ ಮಾಡುವವರು ಇವರೆಲ್ಲ ತಮ್ಮ ಸಾಮಾಜಿಕ ಬದುಕಿಗೆ ಅಂಟಿಕೊಂಡವರು. ಅಲ್ಲಿಂದಲೇ ಅವರ ಸಮಸ್ಯೆಗಳ ಪರಿಹಾರದಲ್ಲಿ ಭಾಗವಹಿಸುವುದಿಲ್ಲ. ಕೊನೆಯ ನಿರ್ಣಯ ವೈಯಕ್ತಿಕವಾಗಿಯೇ ಉಳಿಯುತ್ತದೆ. ಸಮಸ್ಯೆಗಳು ಹುಟ್ಟಿಕೊಂಡರೂ ದೇಸಾಯಿಯವರ ಕಥೆಗಳಲ್ಲಿ ಆ ಸಾಮಾಜಿಕ ಪರಿಸರದ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಜದ ರಚನೆಯನ್ನೇ ಬದಲಿಸಬೇಕೆಂಬ ಹಟ ಇಲ್ಲಿ ಕಾಣವುದಿಲ್ಲ."[೩] ಶಾಂತಿನಾಥ ದೇಸಾಯಿ ಅವರಿಗೆ ಅಸ್ತಿತ್ವವಾದದ ಚಿಂತನೆಗಳ ಜತೆಗೆ, ಮಾರ್ಕ್ಸ್‌ವಾದದ ಚಿಂತನೆಗಳೂ ಪ್ರಿಯವಾಗಿದ್ದವು. ಅವರ ಕಾದಂಬರಿಗಳಲ್ಲಿ ಮಾರ್ಕ್ಸ್‌ವಾದದ ಅನುಯಾಯಿಗಳು ಬರುತ್ತಾರೆ. ಇವರು ಮಹಿಳೆಯನ್ನು ಮಾನವೀಯ ನೆಲೆಯಲ್ಲಿ ನೋಡುವುದಿಲ್ಲ. ಮಹಿಳೆಯನ್ನು ಅನುಭವಿಸಲು ನೋಡುತ್ತಾರೆ. ಗಿರಡ್ಡಿ ಗೋವಿಂದರಾಜ ಅವರು ಗುರುತಿಸಿದ್ದು ದೇಸಾಯಿ ಅವರಿಗೆ ಮಾರ್ಕ್ಸ್‌ವಾದಕ್ಕಿಂತ ಹೆಚ್ಚಾಗಿ ಇಷ್ಟವಾಗಿದ್ದು ಎಂ.ಎನ್. ರಾಯ್ ಅವರ ರ್‍ಯಾಡಿಕಲ್ ಹ್ಯೂಮನಿಜಂ. ಗಿರಡ್ಡಿ ಗೋವಿಂದರಾಜ ಅವರು ಶಾಂತಿನಾಥರ ಕಥಾ ಸಾಹಿತ್ಯವನ್ನು ಕುರಿತು ಮುಂದುವರಿದು, ಹೆಣ್ಣು ಕ್ರಾಂತಿಕಾರಿಯಾಗಿ ಕಾಣಿಸಿಕೊಳ್ಳುತ್ತಾಳೆ. ತನ್ನ ವೈಯಕ್ತಿಕ ನೆಲೆಯಲ್ಲಿ ಬಂಡೇಳುವ ಗುಣ ಕಾಣುತ್ತದೆ. ಆದರೆ ಸಮಾಜ, ಪರಿಸರ ಈ ಹೆಣ್ಣನ್ನು ಕಾಣುವ ಬಗೆಯನ್ನು ಚಿತ್ರಿಸಲು ಹೋಗುವುದಿಲ್ಲವೆಂದು ಹೇಳುತ್ತಾರೆ.

ರಾಜೇಂದ್ರ ಚೆನ್ನಿ ಅವರು ಶಾಂತಿನಾಥ ದೇಸಾಯಿ ಅವರನ್ನು ನವ್ಯ ಪಂಥದ ಹರಿಕಾರ ಎಂದು ಗುರುತಿಸುವುದು ಸಮಸ್ಯಾತ್ಮಕ ಎಂದು ಹೇಳುತ್ತಾರೆ. ಅವರ ಸಾಹಿತ್ಯ ರಚನೆಯಲ್ಲಿ ಸಾಂಕೇತಿಕತೆಯಾಗಲಿ, ರೂಪಕತೆಯಾಗಲಿ ಎಲ್ಲೂ ಕಾಣುವುದಿಲ್ಲ. ವಾಸ್ತವವಾದಿ ಧೋರಣೆ ಕಂಡುಬರುತ್ತದೆ ಎಂದು ಹೇಳುತ್ತಾರೆ. "ಅವರ ಕಾದಂಬರಿಗಳ ಬಂಧ, ರಚನೆ ಹಾಗೂ ನಿರೂಪಣಾ ತಂತ್ರಗಳ ದೃಷ್ಟಿಯಿಂದ ಅದೆಷ್ಟೋ ಪ್ರಯೋಗಶೀಲವಾಗಿ ಕಂಡರೂ ಕನ್ನಡ ಕಾದಂಬರಿಯ ಪ್ರಧಾನ ಕ್ರಮಗಳನ್ನು ಬಹಳವಾಗಿಯೇ ಬಳಸಿಕೊಳ್ಳುತ್ತವೆ. ಅಷ್ಟು ಮಾತ್ರವಲ್ಲ, ಮೂಲ ನವ್ಯದ ಮುಖ್ಯ ಕೃತಿಗಳಾದ (ಡಿ.ಆರ್ .ನಾಗರಾಜರ ಪದವನ್ನು ಬಳಸುವುದಾದರೆ) "ಸಂಸ್ಕಾರ" ಅಥವಾ "ಹಳದಿ ಮೀನು", "ಬಿರುಕು" ಕಾದಂಬರಿಗಳಲ್ಲಿ ಕಾಣುವ ದಟ್ಟ ಸಾಂಕೇತಿಕತೆಯಾಗಲಿ ಅಥವಾ ಇಡೀ ಕಾದಂಬರಿಯನ್ನೇ ಒಂದು ರೂಪಕವಾಗಿ

ಮಾರ್ಪಡಿಸುವ ನಿಷ್ಠೆಯಾಗಲಿ ದೇಸಾಯರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. "ಮುಕ್ತಿ" ಕಾದಂಬರಿಯ ಒಟ್ಟು ನಿರೂಪಣಾ ಶೈಲಿ ಸಾಂಪ್ರದಾಯಿಕ ಶೈಲಿಯನ್ನು ತೊರೆದು ನಿಂತದ್ದಲ್ಲ, ಮನೋವಿಶ್ಲೇಷಣೆಯ ಕೆಲವು ಪ್ರಧಾನ ರೂಪಕಗಳನ್ನು ಪಾರಿಭಾಷಿಕಗಳನ್ನು (ವಿಶೇಷವಾಗಿ id, ego, supe-ego ಪರಿಕಲ್ಪನೆಗಳನ್ನು) ನಿರೂಪಣೆಯಲ್ಲಿ ತರಲಾಗಿದೆಯೆನ್ನುವುದನ್ನು ಬಿಟ್ಟರೆ ಈ ಕಾದಂಬರಿ ಸಾಂಪ್ರದಾಯಿಕ ಕಥನ ಶೈಲಿಯ ಅಂಶಗಳನ್ನು ಧಾಳಾಗಿ ಬಳಸಿಕೊಳ್ಳುತ್ತದೆ. ಈ ಕಾದಂಬರಿಯಲ್ಲಿ ಪಾತ್ರ-ಚಿತ್ರಣ, ಕಥಾಸಂವಿಧಾನ, ಘಟನೆಗಳನ್ನು ಆಧರಿಸಿ ಕುತೂಹಲ-ಇವೇ ಮುಂತಾದ ಪರಿಕರಗಳನ್ನು ಬಳಸಿಕೊಳ್ಳಲಾಗಿದೆ. ವಿಶೇಷವೆಂದರೆ ತಮ್ಮ ಮುಂದಿನ ಕಾದಂಬರಿಗಳಲ್ಲಿ ದೇಸಾಯರು ಈ ಪರಿಕರಗಳನ್ನು ಇನ್ನೂ ಹೆಚ್ಚಾಗಿ, ಕೆಲವೊಮ್ಮೆ ಜನಪ್ರಿಯ ಕಾದಂಬರಿಗಳ ತಂತ್ರಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಾ ಹೋದರು. ಆದ್ದರಿಂದಲೇ ಅವರ ಕಾದಂಬರಿಗಳು ರೂಪದ ದೃಷ್ಟಿಯಿಂದ ಅನಾಧುನಿಕವೂ, ಧೋರಣೆ, ಮೌಲ್ಯ ಕಲ್ಪನೆಗಳ ದೃಷ್ಟಿಯಿಂದ ಅತ್ಯಾಧುನಿಕವೂ ಆಗಿವೆ. ಆಶ್ಚರ್ಯವೆಂದರೆ, ನವ್ಯ ಕಾದಂಬರಿಯ ನಿರೂಪಣಾ ತಂತ್ರಗಳನ್ನು ಬಳಸಬೇಕೆಂದು ದೇಸಾಯರಿಗೆ ಅನ್ನಿಸದೇ ಇದ್ದದ್ದು. ಅವರ ಕೊನೆಯ ಕಾದಂಬರಿಯಾದ "ಓಂಣಮೋ"ದಲ್ಲಿ ಕೂಡ ದೇಸಾಯರದೆಂದು ಗುರುತಿಸಬಹುದಾದ ಮಧ್ಯಮ ಶೈಲಿಯ ಬಳಕೆಯಾಗಿದೆ. ಪ್ರಧಾನವಾಗಿ ಸಂಭಾಷಣೆಯನ್ನು ಅವಲಂಬಿಸುವುದು, ನಾಟಕೀಯ ಸನ್ನಿವೇಶಗಳ ಮೂಲಕ ಕಥಾನಕವನ್ನು ಬೆಳೆಸುವುದು, ನಗರಕೇಂದ್ರಿತ (ಹೆಚ್ಚಾಗಿ ಮಹಾನಗರ ಕೇಂದ್ರಿತ) ಪಾತ್ರಗಳು ಕೂಡ ಧಾರವಾಡದ ಆಡುಮಾತಿನಲ್ಲೇ ಮಾತಾಡುವುದು, ಪಾತ್ರಗಳ ಮನೋಸ್ಥಿತಿಗಳನ್ನು ಚುಟುಕಾಗಿ ಹ್ರಸ್ವವಾಗಿ ಮುಗಿಸುವುದು, ಸನ್ನಿವೇಶ, ದೃಶ್ಯ ಇತ್ಯಾದಿಗಳಲ್ಲಿ ಸಾಮಾನ್ಯವೆನ್ನಿಸಬಹುದಾದ ವಾಸ್ತವವಾದಿ ವಿವರಣೆಗಳನ್ನು ಬಳಸಿಕೊಳ್ಳುವುದು-ಇವುಗಳು ದೇಸಾಯರ ಮಧ್ಯಮ ಶೈಲಿಯ ಲಕ್ಷಣಗಳಾಗಿವೆ. "ಮುಕ್ತಿ" ಮತ್ತು "ವಿಕ್ಷೇಪ"ಗಳಲ್ಲಿ ಅಲ್ಲಲ್ಲಿ ಬಳಕೆಯಾಗುವ ಸಾಂಕೇತಿಕತೆಯನ್ನು ಬಿಟ್ಟರೆ ದೇಸಾಯರು ನೆಚ್ಚಿಕೊಂಡಿದ್ದು ಮನುಷ್ಯ ಸ್ವಭಾವ ಮತ್ತು ನಡವಳಿಕೆಗಳ ಬಗೆಗಿನ ವಾಸ್ತವವಾದಿ ಧೋರಣೆಯನ್ನು. ಅವುಗಳನ್ನು ಸಂಕೇತ ಹಾಗೂ ರೂಪಕಗಳ ಮಟ್ಟಕ್ಕೆ ತರಬಾರದು ಎನ್ನುವ ನಿಯಂತ್ರಣದಿಂದ ದೇಸಾಯಿಯವರು ಬರೆಯುವ ಹಾಗೆ ಕಾಣುತ್ತದೆ."[೪] ಅಪ್ಪಟ ನವ್ಯತೆ ದೇಸಾಯಿ ಅವರ ಸಾಹಿತ್ಯ ರಚನೆಯಲ್ಲಿ ಕಾಣುವ ಬದಲು, ಮನುಷ್ಯ ಸ್ವಭಾವದ ನಡವಳಿಕೆಗಳು ಭಾವನೆಗಳು, ಮನಸ್ಸಿನ ಸತ್ಯಗಳು ಎಲ್ಲವನ್ನು ನೈಜವಾಗಿ ವಾಸ್ತವವಾದದ ಶೈಲಿಯಲ್ಲಿ ನಿರೂಪಿಸುತ್ತಾರೆ. ದೇಸಾಯಿ ಅವರ ಕಾದಂಬರಿಗಳನ್ನು ಗಮನಿಸಬೇಕು. ದೇಸಾಯಿ ಅವರ ಕಾದಂಬರಿಯ ಪ್ರಪಂಚ ಸಾಮಾನ್ಯವಾಗಿ ಲೌಕಿಕವಾದದ್ದು. ಲೌಕಿಕವಾದದ್ದರಿಂದಲೇ ಅದು ಶುದ್ಧ ವಾಸ್ತವಿಕವಾದದ್ದು. ಕಾದಂಬರಿಯಲ್ಲಿ ಎಷ್ಟೇ ರೋಚಕ ಘಟನೆಗಳು ಬಂದರೂ, ಅವುಗಳನ್ನು ನಿರೂಪಿಸುವಾಗ ವಾಸ್ತವವಾದಿ ಶೈಲಿಯನ್ನು ಮೀರುವುದಿಲ್ಲ. ದೇಸಾಯರ 'ವಿಕ್ಷೇಪ ಕಾದಂಬರಿಯನ್ನು ಕನ್ನಡದ ನಿಜವಾದ Post modernist ಕಾದಂಬರಿ' ಎಂದು ರಾಜೇಂದ್ರ ಚೆನ್ನಿ ಅವರು ಗುರುತಿಸುತ್ತಾರೆ.

ರಾಜೇಂದ್ರ ಚೆನ್ನಿ ಅವರು ನವ್ಯ ಸಾಹಿತ್ಯವನ್ನೇ ಕುರಿತು ಮುಖ್ಯ ಪ್ರಶ್ನೆ ಎತ್ತಿದ್ದಾರೆ. ನವ್ಯ ಬರಹಗಾರರಿಗೆ ಯುರೋಪಿಯನ್ ಆಧುನಿಕತೆಯ ಒಂದು ವಿಶಿಷ್ಟ ಆಯಾಮ ಮಾತ್ರವಾಗಿದ್ದ ಅಸ್ತಿತ್ವವಾದವು ಯಾಕೆ ಇಷ್ಟು ಹತ್ತಿರವಾಗಿ ಕಂಡಿತು? ಸೃಜನಶೀಲತೆಯಲ್ಲಿ ಈ ವಾದವು Mis reading ಆಗಿ ಬಂದು ಕನ್ನಡ ಸಂವೇದನೆಯನ್ನು ಏಕೆ ಪ್ರಭಾವಿಸಿತು? ಮನುಷ್ಯನ ಅನುಭವಗಳನ್ನು ದೇಸಾಯಿ ಅವರ ಕಾದಂಬರಿಗಳು ಅಸ್ತಿತ್ವವಾದದ ಮೂಲಕ, ಮನೋವಿಜ್ಞಾನದ ಚಿಂತನೆಗಳ ಮೂಲಕ ಶೋಧಿಸುವ ದಾರಿಯನ್ನು ಹುಡುಕಿಕೊಂಡವು ಎಂದು ಹೇಳುತ್ತಾರೆ. ಮುಂದುವರೆದು "ತಮ್ಮ ಬರಹದಲ್ಲಿ ಅವರು ಸಂಪ್ರದಾಯ ವಿರೋಧಿಯಾಗಿರುವ ಆಧುನಿಕತೆಯ ಬಗ್ಗೆ ಅತಿಯಾದ ಉತ್ಸಾಹದಿಂದ ಮಾತಾನಾಡುತ್ತಾರೆ. ಆಧುನಿಕತೆಯನ್ನು ಸಂಪ್ರದಾಯವಾದಿ ನೀತಿ ಮತ್ತು ನಡವಳಿಕೆಗಳ ಅಪ್ರಾಮಾಣಿಕವಾದ ಇಕ್ಕಟ್ಟುಗಳಿಂದ "ಮುಕ್ತಿ" ಕೊಡಿಸುವ ತತ್ವವೆಂದು ಅವರು ಭಾವಿಸುತ್ತಾರೆ. ಪಶ್ಚಿಮದ ಆಧುನಿಕತೆಯನ್ನು ಮುಕ್ತಿಯ ಹರಿಕಾರವನ್ನಾಗಿ ಮೂರನೇ ಜಗತ್ತಿನ ಶಿಕ್ಷಿತ ವರ್ಗಗಳು ಬರಮಾಡಿಕೊಂಡಿವೆ. ಆದರೆ ಸಾಮಾನ್ಯವಾಗಿ ಈ ಮುಕ್ತಿ ಬಿಡುಗಡೆ ಇತ್ಯಾದಿಗಳು ಆಳಕ್ಕೆ ಹೋಗದೆ ಸುಲಭ ಬಂಡಾಯಗಳಾಗಿಬಿಟ್ಟಿವೆ. ಯೂರೋಪಿನ ಬೋಹಿಮಿಯನ್ ಯುವ ಸಮುದಾಯವು "Pour epate les bourgeois" ಅಂದರೆ ಬೂರ್ಜ್ವ ವರ್ಗದವರಿಗೆ ಮುಜುಗರ ಮಾಡಲಿಕ್ಕೆಂದು, ಆ ವರ್ಗದ ನೀತಿ-ನಡವಳಿಕೆಗಳನ್ನು ಹೇಗೆ ಧಿಕ್ಕರಿಸಿತೋ ಅದೇ ಬಗೆಯ ಹದಿ ಹರೆಯದ ಹುಸಿ ಬಂಡಾಯದ ಮಾರ್ಗದಲ್ಲಿ ಆಧುನಿಕತೆಯು ಸಂಪ್ರದಾಯದ ವಿರುದ್ಧ ತೆಳುವಾದ ವಿರೋಧವನ್ನು ಹೂಡಿತು. ಅದೇ ಹೊತ್ತಿಗೆ ಆಧುನಿಕತೆಯ ತಾತ್ವಿಕ ಬಂಡುಕೋರತನವನ್ನು ಪ್ರಾಮಾಣಿಕವಾಗಿ ಎದುರು ಹಾಕಿಕೊಂಡ ಇನ್ನೊಂದು ಸಮುದಾಯ ಅದರ ಮೂಲಕ ಸಂಪ್ರದಾಯದ ಜೊತೆ ಹೊಸ ಅನುಸಂಧಾನಗಳನ್ನು ಶೋಧಿಸತೊಡಗಿತು. ಆಧುನಿಕತೆಯ ಪ್ರಯೋಜನವೇನಾದರೂ ಇದ್ದರೆ, ಅದನ್ನು ಈ ಬಗೆಯ ಶೋಧನೆಯಲ್ಲಿ ಕಾಣಬಹುದು. ಈ ಶೋಧನೆಯ ಕೆಲಸ ಆತಂಕ ತಳಮಳ, ತಬ್ಬಿಬ್ಬು ಹಾಗೂ ಸೂಕ್ಷ್ಮತೆಗಳನ್ನು ಒಳಗೊಂಡಿರುವಂಥದು."[೫] ಹೇಳುತ್ತ ಈ ಎಲ್ಲ ಹಿನ್ನೆಲೆಯಲ್ಲಿ ಅಗಾಧ ಶಕ್ತಿ ಸಾಮರ್ಥ್ಯ ಹೊಂದಿದ ಬರಹಗಾರ ಶಾಂತಿನಾಥರು ತಮ್ಮ ಕಾದಂಬರಿಗೆ ಬಳಸುವ ಅನುಭವ ವ್ಯಾಪ್ತಿ ಮತ್ತು ಆಳವನ್ನು ಅನವಶ್ಯಕವಾಗಿ ಮಿತಿಯನ್ನು ಹಾಕಿಕೊಂಡರೆಂದು ಗುರುತಿಸುತ್ತಾರೆ.

ಸಿ.ಎನ್ .ರಾಮಚಂದ್ರನ್ ಅವರು ಮುದ್ದಣ್ಣನ 'ರಾಮಾಶ್ವಮೇಧ' ಮತ್ತು ದೇಸಾಯಿ ಅವರ 'ಸೃಷ್ಟಿ' ಕಾದಂಬರಿ ಎರಡು ಕೃತಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಈ ಎರಡು ಕೃತಿಗಳ ರಚನೆಯ ಅಂತರ ಸುಮಾರು ಎಂಟು ದಶಕಗಳು. ಆರಂಭದಲ್ಲಿ ಕರ್ತೃ ತಾವು ರಚಿಸಲಿರುವ ಕೃತಿಯನ್ನು ಹೇಗೆ ರಚಿಸಬೇಕು? ಯಾರಿಗಾಗಿ ರಚಿಸಬೇಕು? ಎಂಬ ಪ್ರಶ್ನೆಗಳು ಹುಟ್ಟಿ ಒಂದು ಜಿಜ್ಞಾಸೆಯನ್ನೇ ಮಾಡುತ್ತಾರೆ. 'ಸೃಷ್ಟಿ' ಕಾದಂಬರಿಯಲ್ಲಿ ಕಾದಂಬರಿಕಾರ ಈ ಪ್ರಶ್ನೆಯನ್ನು ಎತ್ತಿಕೊಳ್ಳುವ ಬದಲು

ಕಾದಂಬರಿಯ ಒಳಗೇ ಒಬ್ಬ ಕಾಲ್ಪನಿಕ ಕರ್ತೃ ಈ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾನೆ. ಎದುರಿಗೆ ಒಬ್ಬ ಕಾಲ್ಪನಿಕ ಓದುಗ ಕೂಡ ಇರುತ್ತಾನೆ. ಈ ಕಾಲ್ಪನಿಕ ಕರ್ತೃ ತಾನು ಬರೆಯುವ ಕಾದಂಬರಿಯಲ್ಲಿ ತರುವ ಕಾಲ್ಪನಿಕ ಪ್ರಪಂಚ ಇವುಗಳ ನಡುವಿನ ಜಿಜ್ಞಾಸೆಯನ್ನು ಸಿ.ಎನ್. ರಾಮಚಂದ್ರನ್ ದೀರ್ಘವಾಗಿ ವಿಶ್ಲೇಷಿಸಿದ್ದಾರೆ. ಅಂತಿಮವಾಗಿ ತಮ್ಮ ಚಿಂತನೆಯನ್ನು "ದೇಸಾಯರು ತಮ್ಮ 'ಸೃಷ್ಟಿ' ಕೃತಿಯಲ್ಲಿ ಸಾಹಿತ್ಯ ಸೃಷ್ಟಿಯ ಲೋಕ ಮತ್ತು ಜೀವ ಸೃಷ್ಟಿಯ ಲೋಕ ಇವೆರಡನ್ನೂ (ಕೃತಿಯ ಆಂತರಿಕ ಮತ್ತು ಬಾಹ್ಯ ಲೋಕಗಳು) ತುಲನಾತ್ಮಕವಾಗಿ ಚಿತ್ರಿಸಿದ್ದಾರೆ. ಮತ್ತು ತುಲನೆಯ ಮೂಲಕ ಒಂದು ಲೋಕ ಮತ್ತೊಂದರ ಮೇಲೆ ಬೆಳಕು ಚೆಲ್ಲುತ್ತದೆ. ಎರಡೂ ಲೋಕಗಳಲ್ಲಿ 'ಸೃಷ್ಟಿ'ಗೆ ಸಿದ್ಧರಾಗುವವರಲ್ಲಿ ಅದರ ಬಗ್ಗೆ ಉತ್ಸಾಹ, ಶ್ರದ್ಧೆ ಇರಬೇಕು ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ 'ಸೃಷ್ಟಿ'ಯ ಜವಾಬ್ದಾರಿಯನ್ನು ಹೊರುವ ಸಿದ್ಧತೆ ಬರಬೇಕು. ಈ ವಿಧದ ಸಿದ್ಧತೆ 'ಲೇಖಕ'ನಲ್ಲಿರುವುದರಿಂದ ಅವನಿಂದ 'ಸೃಷ್ಟಿ' ಸಾಧ್ಯವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಸುರೇಶ್-ಗೌರಿ, ಪ್ರೊ. ದೇವಧರ್ ಇವರುಗಳಲ್ಲಿ ಆ ಸಿದ್ಧತೆ ಹಾಗೂ ನೈತಿಕ ಬಲವಿಲ್ಲದಿರುವುದರಿಂದ ಅದು ಸಾಧ್ಯವಾಗುವುದಿಲ್ಲ. ಈ ವಿಚಾರದ ಸೃಷ್ಟಿಗಾಗಿಯೇ ಕೃತಿಯ ಒಂದು ಸನ್ನಿವೇಶದಲ್ಲಿ ಒಂದು ಹೆಣ್ಣು ನಾಯಿ ತನ್ನ ಆಗ ತಾನೇ ಹುಟ್ಟಿದ ನಾಲ್ಕು ಮರಿಗಳಿಗೆ ಹಾಲು ಕೊಡುತ್ತಿರುವ ಸುಂದರ ಚಿತ್ರ ಬರುತ್ತದೆ. ತಾಯಿ ನಾಯಿಗೆ ತನ್ನ ಮರಿಗಳ ಮೇಲೆ ಪ್ರೀತಿಯಿದೆ ಮತ್ತು ರಕ್ಷಣಾ ಭಾವವಿದೆ. ಅವುಗಳನ್ನು ಬೇರೆಯವರು ಮುಟ್ಟಿದ ಕೂಡಲೇ ಅದು ಗುರ್ ಎಂದು ಕಚ್ಚಲು ಹೋಗುತ್ತದೆ. ಆದರೆ ಆಧುನಿಕ ಸಮಾಜದ ತೀವ್ರ ಒತ್ತಡಗಳ ಮತ್ತು ಬೆಳೆದು ಬಂದ ನೈತಿಕ ಸಂಹಿತೆಗಳ ಕಾರಣದಿಂದ ಮಾನವ ಲೋಕದಲ್ಲಿ 'ಸೃಷ್ಟಿ'ಗೆ ಇನ್ನಿಲ್ಲದಂಥಾ ಅಡಚಣೆಗಳು, ಮಾನಸಿಕ ಗೊಂದಲಗಳು ತುಂಬಿವೆ. ಹೀಗೆ ಎರಡೂ ಲೋಕಗಳ 'ಸೃಷ್ಟಿ'ಯನ್ನು ತುಲನಾತ್ಮಕವಾಗಿ ಶೋಧಿಸುವುದೂ ಕಾದಂಬರಿಯ ಉದ್ದೇಶವೆಂಬುದನ್ನು ದೇಸಾಯರು ಪ್ರಾರಂಭದಲ್ಲಿಯೇ ಒಂದನ್ನು ಇನ್ನೊಂದರ ಉಪಮೆಯನ್ನಾಗಿ ಉಪಯೋಗಿಸಿ ಸ್ಪಷ್ಟಪಡಿಸುತ್ತಾರೆ."[೬]

ಜಯಂತ್ ಕಾಯ್ಕಿಣಿ ಅವರು ಗುರುತಿಸುವಂತೆ "ಅವರ ಸಾಹಿತ್ಯದಲ್ಲಿ ವ್ಯಕ್ತಗೊಳ್ಳುವ ಪ್ರಪಂಚ ಬೇರುಗಳೇ ಇಲ್ಲದಂಥದ್ದು. ಕನ್ನಡದಲ್ಲಿ ಬೇರು ಬೀಳಲು ಎರಡೂ ಉಪಟಳದಿಂದ ನಮ್ಮನ್ನು ಪಾರುಮಾಡುವ ಏಕಮೇವ ಲೇಖಕ ಶಾಂತಿನಾಥ ದೇಸಾಯಿ. ಅವರ ಕೃತಿಗಳು ನಮ್ಮನ್ನು ಮುಕ್ತಗೊಳಿಸುವುದೇ ಈ ಕಾರಣದಿಂದ. ಸಂವೇದನಾಶೀಲವಾದ ಸಂಬಂಧಗಳ ಸೂಕ್ಷ್ಮ ಜಾಲಗಳನ್ನು ಅವರು ಎಷ್ಟು ಸಹಜ ವಿವೇಕದಿಂದ ಬಿಡಿಸುತ್ತಾರೆಂದರೆ ಅದು ಹೂವಿನ ಅರಳುವಿಕೆಯಂತೆ Step by step ತಿಳಿಯುವಂಥದ್ದಲ್ಲ ('ಬೀಜ', 'ಅಂತರಾಳ', ಕೂರ್ಮಾವತಾರಗಳನ್ನೊಳಗೊಂಡು) ಓದಿಯೇ ಇದನ್ನು ಅನುಭವಿಸಬೇಕು."[೭]

ಇಲ್ಲಿ ಕಾಯ್ಕಿಣಿಯವರು ಹೇಳುವ 'ಪ್ರಪಂಚ ಬೇರುಗಳು' ಅಂದರೆ ಲೋಕದ ಬೇರುಗಳು ದೇಸಾಯಿಯವರ ಸಾಹಿತ್ಯದಲ್ಲಿ ಸ್ಥಳೀಯತೆಯಾಗಲಿ, ಪ್ರಾದೇಶಿಕತೆಯಾಗಲಿ ಬರುವುದಿಲ್ಲ. ಅದೇ ನಾವು

ಕನ್ನಡದಲ್ಲಿ ನವೋದಯ ಸಾಹಿತ್ಯದಲ್ಲಿ ತೆಗೆದುಕೊಂಡರೆ, ಸ್ಥಳೀಯತೆ, ಪ್ರದೇಶಿಕತೆ ಎನ್ನುವುದು ಮುಖ್ಯವಾಗುತ್ತದೆ. ಉದಾಹರಣೆಗೆ ಕಾರಂತರ ಮೂಕಜ್ಜಿಗೆ ಅವಳದೇ ಆದ ಒಂದು ನೆಲೆಯಿದೆ, ಸಂಬಂಧ ಇದೆ, ಆಸ್ತಿ ಇದೆ, ಚರಿತ್ರೆಯ ಭಾರ ಇದೆ. ಆದರೆ ದೇಸಾಯಿಯವರ ಪಾತ್ರಗಳಿಗೆ ಇಂಥ ಯಾವುದೇ ಚರಿತ್ರೆಯ ಭಾರವಿಲ್ಲ. ನವೋದಯ ಸಾಹಿತ್ಯದಲ್ಲಿ ಬರುವ ಪಾತ್ರಗಳಿಗೆ ಶಾಶ್ವತವಾದ ಅಸ್ತಿತ್ವ ಇದ್ದರೆ ದೇಸಾಯಿಯವರ ಪಾತ್ರಗಳಿಗೆ ಶಾಶ್ವತವಾದ ಅಸ್ತಿತ್ವ ಇಲ್ಲ. ವೈಯಕ್ತಿಕ ನೆಲೆಯಲ್ಲಿ ಅಸ್ತಿತ್ವ ಇದೆಯೇ ಹೊರತು ಸಾಮೂಹಿಕವಾದ ನೆಲೆಯಲ್ಲಿ ಅಲ್ಲ.

ಚ. ಸರ್ವಮಂಗಳಾ ಅವರು ಅಭಿಪ್ರಾಯ ಪಡುವಂತೆ, ''ಸಮಾಜ ಒಪ್ಪಿದ ನೈತಿಕ ಮೌಲ್ಯಗಳಿಂದ ದೇಸಾಯರ ಪಾತ್ರಗಳನ್ನು ಅಳೆದರೆ ಎಲ್ಲರೂ ಹಾದಿತಪ್ಪಿದವರು ಅಥವಾ ತಪ್ಪುವವರು.''[೮] ಲೋಕ ಒಪ್ಪಿತ ಅಥವಾ ಲೋಕ ನಿರ್ಮಿತ ನೈತಿಕತೆಯಿಂದ ಸರ್ವಮಂಗಳಾ ದೇಸಾಯಿಯವರ ಪಾತ್ರಗಳನ್ನು ನೋಡುವುದಿಲ್ಲ. ಲೋಕ ಒಪ್ಪಿತ ನೈತಿಕತೆಗಿಂತ ದೇಸಾಯರ ನೈತಿಕ ಪ್ರಜ್ಞೆ ಭಿನ್ನವಾದುದು. ದೇಸಾಯಿಯವರು ಹೆಣ್ಣಿಗೂ ಗಂಡಿಗೂ ಬೇರೆ-ಬೇರೆ ನೈತಿಕತೆಯನ್ನು ಗುರುತಿಸುವುದಿಲ್ಲ. ಅಂದರೆ ಹೆಣ್ಣು ಮತ್ತು ಗಂಡಿನ ನಡುವಿನ ಸಂಪರ್ಕದಲ್ಲಿ ಹೆಣ್ಣು, ಬೇರೆಯವರೊಡನೆ ಸಂಪರ್ಕ ಬೆಳೆಸಿದಾಗ ಅದನ್ನು ಅನೈತಿಕತೆ ಎಂದು ಭಾವಿಸುವುದಿಲ್ಲ. ತನ್ನನ್ನು ತಾನು ವ್ಯಾಖ್ಯಾನಿಸಿಕೊಳ್ಳುವಾಗ ಗಂಡು ಹೇಗೆ ಇದು ಅಪರಾಧ ಅಲ್ಲ ಎಂದು ಭಾವಿಸುತ್ತಾನೋ ಹೆಣ್ಣು ಹಾಗೆ ಭಾವಿಸುತ್ತಾಳೆ. ನವೋದಯ ಸಾಹಿತ್ಯದಲ್ಲಿ ಬರುವಂತೆ ಇದನ್ನೊಂದು ಅಪರಾಧಿ ಭಾವನೆ ಎಂದು ಕಾಣುವುದಿಲ್ಲ. ತುಂಬಾ ಸಹಜವಾಗಿ ಆ ಪಾತ್ರಗಳು ಇರುತ್ತವೆ.

'ಸಾಮಾಜಿಕ ಬದ್ಧತೆ' ಅಥವಾ 'ಸಾಮಾಜಿಕ ನ್ಯಾಯ' ಎನ್ನುವ ತತ್ವವನ್ನು ಇಟ್ಟುಕೊಂಡು ನವೋದಯ ಸಾಹಿತ್ಯ ಸೃಷ್ಟಿಯಾದರೆ ಈ ಮೌಲ್ಯಗಳನ್ನು ಕಾಣುವುದಕ್ಕೆ ಆಸ್ಪದ ಇರದ ನಗರ ಕೇಂದ್ರಿತ ಜೀವನ ಕ್ರಮ ಇವರದ್ದು. ದೇಸಾಯಿಯವರ ಪಾತ್ರಗಳಿಗೆ ವೈಯಕ್ತಿಕ ಹಿತ ಮುಖ್ಯವೇ ಹೊರತು ಸಾಮಾಜಿಕ ಹಿತವಲ್ಲ. ನವೋದಯ ಲೇಖಕರಿಗೆ ಕಾಲ, ಸ್ಥಳ, ಮುಖ್ಯವಾದರೆ, ದೇಸಾಯಿಯವರಿಗೆ ಅದು ಮುಖ್ಯ ಆಗುವುದಿಲ್ಲ. ಅವರು ತಮ್ಮ ಪಾತ್ರಗಳನ್ನು ಯಾವುದೇ ಒಂದು ಸ್ಥಳಕ್ಕೆ ನಿರ್ಬಂಧಿಸದೆ ಮುಕ್ತವಾಗಿ ನೋಡುತ್ತಾರೆ. ನಗರ ಕೇಂದ್ರಿತ ಪ್ರದೇಶಗಳಲ್ಲಿ ಈ ಪಾತ್ರಗಳನ್ನು ಇಟ್ಟುನೋಡುವುದರಿಂದ ಯಾವ ಸಂಬಂಧಗಳನ್ನು ಉಳಿಸಿಕೊಳ್ಳಲಾಗದ ಅಂದರೆ ರಕ್ತಸಂಬಂಧಗಳನ್ನು ಮುಖ್ಯ ಎಂದು ಭಾವಿಸದೆ ಇರುವ ನಾಯಕರನ್ನು, ಯಾವುದೇ ಬಂಧನವಿಲ್ಲದ, ಒಂಟಿಯಾಗಿರುವ ನಾಯಕರನ್ನು ಚಿತ್ರಿಸುತ್ತಾರೆ. ಸರ್ವಮಂಗಳಾ ಇವರನ್ನೇ 'ಡ್ಯಾಂಡಿ'ಗಳೆಂದು ಕರೆಯುತ್ತಾರೆ.

ಎಲ್.ಜಿ.ಮೀರಾರವರು ಅಭಿಪ್ರಾಯ ಪಡುವಂತೆ, ''ಲೈಂಗಿಕತೆಯು ನವ್ಯ ಲೇಖಕರ ಶೋಧನೆಯ ಪ್ರಮುಖ ನೆಲೆಗಳಲ್ಲಿ ಒಂದು. ಶಾಂತಿನಾಥ ದೇಸಾಯಿಯವರೂ ಇದಕ್ಕೆ ಹೊರತಲ್ಲ.''[೯] ದೇಸಾಯಿಯವರು ತಮ್ಮದೇ ಆದ ನೈತಿಕತೆಯನ್ನು ಸೃಷ್ಟಿಸಿಕೊಂಡ ಲೇಖಕ. ದೇಸಾಯಿಯವರ ಸ್ತ್ರೀಪುರುಷರಿಬ್ಬರಲ್ಲೂ

[illegible]

[illegible]

[illegible]

[illegible]

[illegible]

ನೈತಿಕತೆಯೆನ್ನುವುದು ಸಮಾನ ಪ್ರಭಾವ ಬೀರುತ್ತದೆ. ಇವರ ನೈತಿಕತೆ ಸ್ತ್ರೀಪುರುಷರಿಬ್ಬರಿಗೂ ಏಕಕಾಲಕ್ಕೆ ಅನ್ವಯವಾಗುವಂಥದ್ದು. ಆದ್ದರಿಂದ ದೇಸಾಯಿಯವರ ಸಾಹಿತ್ಯದಲ್ಲಿ ಪುರುಷ ಪ್ರಧಾನ ಸ್ತ್ರೀಶೋಷಣೆ ಎನ್ನುವುದು ಅಪ್ರಸ್ತುತವೆಂದು ಹೇಳಬಹುದು.

ಹೆಣ್ಣು ಮತ್ತು ಗಂಡು ಜೀವನದ ಪ್ರಯೋಗಗಳಲ್ಲಿ ತೊಡಗಿದ್ದಾಗ ಅಂದರೆ ಹೆಣ್ಣಾಗಲಿ, ಗಂಡಾಗಲಿ ತಮ್ಮ ಮುಕ್ತ ಲೈಂಗಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ವ್ಯಾಖ್ಯಾನಿಸಿಕೊಳ್ಳುತ್ತಾರೆ. ಹೆಣ್ಣಿನ ಮೇಲೆ ನೈತಿಕ ಪ್ರಜ್ಞೆ ಎನ್ನುವುದನ್ನು ಸಮಾಜ ಹೇರಿರುತ್ತದೆಯೇ ಹೊರತು ಅದು ಆಂತರಂಗಿಕವಾಗಿರುವುದಿಲ್ಲ. ವಿವಾಹಪೂರ್ವ ಹಾಗೂ ವಿವಾಹೇತರ ಸಂಬಂಧಗಳನ್ನು ದೇಸಾಯಿಯವರು ಚಿತ್ರಿಸುತ್ತಾರೆ. ಗಂಡು-ಹೆಣ್ಣಿಗೆ ಸಮಾನವಾದ ಅವಕಾಶವನ್ನು ಗುರುತಿಸುತ್ತಾರೆ. ಆದ್ದರಿಂದ ಇಲ್ಲಿ ಮುಕ್ತಲೈಂಗಿಕತೆಯನ್ನು ಕಾಮುಕತೆ ಲೋಲುಪತೆ ಅಂತ ಗುರುತಿಸುವುದಿಲ್ಲ.

ರಹಮತ್ ತರೀಕೆರೆ ಅವರು ದೇಸಾಯಿಯವರನ್ನು ಕುರಿತು ಹೇಳುವಾಗ ಹಿಂದಿನ ಲೇಖಕರೆಲ್ಲ ಇವರಿಗೆ ಸಂಪ್ರದಾಯವಾದಿಗಳಾಗಿ ಕಾಣಿಸಲಿಕ್ಕೆ ಶುರು ಆಗ್ತಾರೆ. ಇದು ಗೊತ್ತಾಗಿಯೋ, ಗೊತ್ತಿಲ್ಲದೆಯೋ ಮಾಡುವ ಟೀಕೆಯಾಗಿದೆ. ನವೋದಯ ಕಾಲದ ಕಥೆಗಾರರನ್ನು ಗಮನದಲ್ಲಿಟ್ಟುಕೊಂಡು ಶಾಂತಿನಾಥ ದೇಸಾಯಿಯವರನ್ನು ಹೇಳುವಾಗ ಹಿಂದಿನ ಎಲ್ಲ ಕಥನಕಾರರು ಸಂಪ್ರದಾಯಸ್ಥರು ಅನ್ನುವ ರೀತಿಯಲ್ಲಿ ಬರುತ್ತದೆ. ನವೋದಯ ಕಾಲದ ಕಥನ ಸಾಹಿತ್ಯವನ್ನು ಓದುವಾಗ ಇವು ಸಾಂಪ್ರದಾಯಿಕ ಕಥನಕ್ರಮದಂತೆ ಇಲ್ಲ ಅಂತ ಹೇಳುತ್ತಿರುತ್ತೇವೆ. ಆದರೆ ಅದೇ ನಾವು ನವ್ಯಕ್ಕೆ ಬಂದಾಗ ಅವರನ್ನು ಸಂಪ್ರದಾಯ ಅಂತ ಕರೆಯಲಿಕ್ಕೆ ಶುರು ಮಾಡುತ್ತೇವೆ.

ಕನ್ನಡ ಸಾಹಿತ್ಯದಲ್ಲಿ ಇನ್ನಿತರ ಇವರ ಸಮಕಾಲೀನರಾದ ಲಂಕೇಶ್, ತೇಜಸ್ವಿ, ಚಿತ್ತಾಲ, ಅನಂತಮೂರ್ತಿ ಮೊದಲಾದವರು ಚಿತ್ರಿಸದೆ ಇರುವ ಜೀವನ ದೃಷ್ಟಿಕೋನ ದೇಸಾಯಿಯವರದ್ದು. ಅಂದರೆ ಇವರು ಆಧುನಿಕತೆಯನ್ನು ಬಿಡುಗಡೆಯ ಮಾರ್ಗ ಅಂತ ಕರೆಯುತ್ತಾರೆ. 'ಎಲ್ಲರೂ ಆಧುನಿಕರಾಗಿರುವುದೇ ಬಿಡುಗಡೆಗೆ ಮಾರ್ಗ' ಎಂದು ಗುರುತಿಸುತ್ತಾರೆ. ಅಂದರೆ ದೇಸಾಯಿಯವರು ಯಾವುದನ್ನು ಬಿಡುಗಡೆ ಎಂದು ಗುರುತಿಸುತ್ತಿದ್ದಾರೆ? ಅವರ ಕಥೆಗಳಲ್ಲಿ ಬರುವ ಆಧುನಿಕತೆ ವ್ಯಕ್ತಿಗಳ ಬಿಡುಗಡೆಗೆ ಕಾರಣವಾಗುವಂತೆ ಭಾಸವಾಗುತ್ತದೆ ಎಂದು ನೋಡಿದಾಗ, ಅವರು ಯಾವ ಬಂಧನದಲ್ಲಿದ್ದರು ಮತ್ತು ಯಾವುದರಿಂದ ಬಿಡುಗಡೆ ಪಡೆದರು ಎಂಬ ಪ್ರಶ್ನೆ ಬರುತ್ತದೆ. ಆದರೂ ಇಲ್ಲಿ ರಹಮತ್ ತರೀಕೆರೆ ಅವರು ಚರ್ಚಿಸುವುದೇನೆಂದರೆ ಜಾತಿಯಿಂದ ಬಿಡುಗಡೆ. ಅವರ ಕಥೆಗಳಲ್ಲಿ ಜಾತಿ ಅನ್ನುವುದು ಒಂದು ಸಮಸ್ಯೆ ಅಲ್ಲ. ಅಂದರೆ ದೇವನೂರು ಮಹಾದೇವ ಹಾಗೂ ಕು.ವೀರಭದ್ರಪ್ಪನವರಿಗೆ ಜಾತಿ, ಬಡತನ ಎನ್ನುವುದು ಒಂದು ಸಮಸ್ಯೆಯಾಗಿ ಕಾಣುತ್ತದೆ. ಆದರೆ ದೇಸಾಯಿಯವರ ಸಾಹಿತ್ಯದಲ್ಲಿ ಬರುವ ಪಾತ್ರಗಳು ನಗರಕೇಂದ್ರಿತ ವ್ಯಕ್ತಿನಿಷ್ಠ ನೆಲೆಯನ್ನು ಮಾತ್ರ ಪೋಷಿಸುವವರಾಗಿದ್ದಾರೆ. ಅವರೆಲ್ಲ

ವಿದ್ಯಾವಂತರಾಗಿ ನಗರ ಸೇರಿರುವುದರಿಂದ ಅವರು ಜಾತಿಯನ್ನು ಕಳೆದುಕೊಂಡಿದ್ದಾರೆ. ಅಂದರೆ ಅವರಿಗೆ ಜಾತಿ ಅಷ್ಟು ಮುಖ್ಯ ಅಲ್ಲ ಅಂತ. ಕಾರಣ ಇವರೆಲ್ಲ ಆಧುನಿಕರಾಗಿರುವುದು. ಹಾಗಾಗಿ ಇವರಿಗೆ ಜಾತಿ ಪ್ರಶ್ನೆ, ಬಡತನದ ಪ್ರಶ್ನೆ, ರಕ್ತಸಂಬಂಧಗಳ ಪ್ರಶ್ನೆ ಮುಖ್ಯವಾಗುವುದಿಲ್ಲ. ವ್ಯಕ್ತಿ ವ್ಯಕ್ತಿಗಳ ಮಧ್ಯೆ ತತ್ಕಾಲೀನ ಸಂಬಂಧಗಳು ಮಾತ್ರ ಮುಖ್ಯವಾಗುತ್ತದೆ. ಈ ರೀತಿಯ ಜೀವನ ಕ್ರಮವನ್ನು ದೇಸಾಯಿಯವರು ಬಳಸಿಕೊಂಡಿದ್ದಾರೆ. ಇದಕ್ಕೆ ಕಾರಣ ಅವರು ಆಧುನಿಕತೆಯನ್ನು ಆರಾಧಿಸುವುದರಿಂದ ಮತ್ತು ಅದನ್ನು ಅವರು ತಮ್ಮ ಬದುಕಿನ ಕ್ರಮವನ್ನಾಗಿ ಸ್ವೀಕರಿಸಿರುವುದರಿಂದ ಇದು ಸಾಧ್ಯವಾಗಿದೆ.

ರಹಮತ್ ತರೀಕೆರೆ ಅವರು 'ಆಧುನಿಕತೆಯನ್ನು ಆರಾಧಿಸುವ ಕಥನಕಾರ' ಎನ್ನುವ ಲೇಖನದಲ್ಲಿ ಎರಡು ಕತೆಗಳನ್ನು ವಿವರಿಸುತ್ತಾರೆ. ೧. ಶಿವೂನ ಬಂಡಾಯ ೨. ಭರಮ್ಯಾ ಹೋಗಿ ನಿಖಿಲನಾದದ್ದು. ಆಧುನಿಕತೆಯನ್ನು ಕುರಿತು ಚರ್ಚೆ ಮಾಡುವಾಗ ಇವೆರಡೂ ಕಥೆಗಳು ಮುಖ್ಯವಾಗುವುದಿಲ್ಲ. ಆದರೆ ರಮಹತ್ ತರೀಕೆರೆ ಅವರು ಬಂಡಾಯ ವಿಮರ್ಶಕರಾಗಿರುವುದರಿಂದ ಬಂಡಾಯ ಕಥೆಗಳನ್ನು ಬರೆದಿದ್ದಾರೆ ಹಾಗೂ ಇತರ ಬಂಡಾಯ ಲೇಖಕರಿಗಿಂತ ಹೇಗೆ ಭಿನ್ನ ಎನ್ನುವುದನ್ನು ಕೂಡ ರಹಮತ್ ಅವರು concentrate ಮಾಡುವುದಿಲ್ಲ. ಅವರು ನಿಜವಾಗಿಯೂ ವಿವರಿಸಬೇಕಾಗಿದ್ದು, ಯಾವ ಜಾಯಮಾನಕ್ಕೆ ಸೇರಿದ ಲೇಖಕ ಅಂತ ಗ್ರಹಿಸಬೇಕಾದ ಕಥೆಗಳನ್ನು ವಿವರಿಸಬೇಕಾಗಿತ್ತು. ಉದಾಹರಣೆಗೆ 'ಕ್ಷಿತಿಜ' ಹಾಗೂ 'ರಾಕ್ಷಸ'ದಂತಹ ಕಥೆಗಳ ಮಹತ್ವವನ್ನು ಹೆಚ್ಚು ವಿವರಿಸಿದರೆ, ಶಾಂತಿನಾಥ ದೇಸಾಯಿಯವರ ಅನನ್ಯತೆ ತಿಳಿಯುತ್ತಿತ್ತು. ಆಧುನಿಕತೆಯನ್ನು ಆರಾಧಿಸುವುದರ ಮೂಲಕ ಇವರು ಜಾತಿ ಪ್ರಶ್ನೆ, ಬಡತನದ ಪ್ರಶ್ನೆ ಹಾಗೂ ಹಸಿವಿನ ಪ್ರಶ್ನೆಯನ್ನು ಎತ್ತುವುದಿಲ್ಲ. ಕೇವಲ ವಾಸ್ತವವನ್ನು ಮಾತ್ರ ಮತ್ತು ಆ ಸಂಬಂಧಗಳಲ್ಲಿನ ತತ್ಕಾಲಿನ ಸಂಬಂಧಗಳು ಮಾತ್ರ ಮುಖ್ಯವಾಗಿರುತ್ತವೆ. ಇದಕ್ಕೆ ಕಾರಣ ಇವರು ಆಧುನಿಕರಾಗಿರುವುದು. ಹಾಗಾಗಿ ಇವರು ಆಧುನಿಕತೆಯನ್ನು ಆರಾಧಿಸುವ ಯು.ಆರ್. ಅನಂತಮೂರ್ತಿ ಅವರ 'ಸೂರ್ಯನ ಕುದುರೆ' ಕಥೆಯನ್ನು ಟೀಕೆ ಮಾಡುತ್ತಾರೆ. ಇವರ ಆಧುನಿಕತೆಯ ಕಥೆಗಳನ್ನು ವಿವರಿಸುವಾಗ ಮೂಲಭೂತ ಅವಶ್ಯಕತೆಗಳಿಗೆ ಪರದಾಡುವವರಲ್ಲ. ಅಂದರೆ ಫ್ಯೂಡಲ್ ಜಗತ್ತು ಇಲ್ಲಿಲ್ಲ ಎನ್ನುವುದನ್ನು ಗುರುತಿಸುತ್ತಾರೆ. ಆದ್ದರಿಂದ ರಮಹತ್ ತರೀಕೆರೆ ಅವರು ದೇಸಾಯಿಯವರ ಆಧುನಿತಕೆಯನ್ನು ಇಷ್ಟಪಡುತ್ತಾರೆ.

ಟಿ.ಪಿ.ಅಶೋಕ ಅವರು 'ಶಾಂತಿನಾಥ ದೇಸಾಯಿ ಅವರ ಕಥೆಗಳು : ಕೆಲವು ವಿಮರ್ಶಾತ್ಮಕ ಟಿಪ್ಪಣಿಗಳು' ಎನ್ನುವ ಲೇಖನದಲ್ಲಿ ಗುರುತಿಸಿರುವಂತೆ ದೇಸಾಯಿಯವರು ತಮ್ಮ ಬಹುತೇಕ ಕಥೆಗಳಲ್ಲಿ ಲೈಂಗಿಕತೆಯನ್ನು ಪ್ರಧಾನ ವಸ್ತುವನ್ನಾಗಿ ತರುತ್ತಾರೆ. ಇವರು ಮುಖ್ಯವಾಗಿ ಲೈಂಗಿಕತೆಯ ಮೂಲಕ ಮನುಷ್ಯ ಸಂಬಂಧಗಳನ್ನು ಜೀವನದ ಒಟ್ಟಾರೆ ಧೋರಣೆಯನ್ನು ಶೋಧಿಸುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ. ಈ ಲೇಖನದಲ್ಲಿ ಅಶೋಕ ಅವರು ಗುರುತಿಸಿರುವಂತೆ ಕಾಮವನ್ನು ದೇಸಾಯಿಯವರು ನಿಕಷವೆಂಬಂತೆ ತರುತ್ತಾರೆ. ಹಾಗೂ ಇವರ ಕಥೆಗಳ ಜಗತ್ತು. ಮುಖ್ಯವಾಗಿ ಮಧ್ಯಮವರ್ಗದ

ವಿದ್ಯಾವಂತ ನೌಕರ ವರ್ಗದ ಅದರಲ್ಲೂ ಅಕಾಡೆಮಿಕ್ ವರ್ಗದ ಜಗತ್ತು ಮುಂದುವರೆದು ಅಶೋಕ ಅವರು ದೇಸಾಯಿಯವರ ಜೀವನ ದೃಷ್ಟಿ ಅಸ್ತಿತ್ವವಾದಿ ನೆಲೆಗಳಿಗೆ ಸಮೀಪವಾಗಿರುವಂಥದ್ದು ಎಂದು ಹೇಳುತ್ತಾ, ಭೂತ ಭವಿಷ್ಯಗಳ ಹಂಗಿಲ್ಲದೆ, ವರ್ತಮಾನ ಮಾತ್ರ ಮುಖ್ಯ ಎನ್ನುವ ನೆಲೆಯನ್ನು ಸಹ ಗುರುತಿಸುತ್ತಾರೆ.

ನವ್ಯ ಸಾಹಿತ್ಯದವರು ಮುಖ್ಯವಾಗಿ ವ್ಯಕ್ತಿ ಸುಖಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟಿರುವುದರಿಂದ ಇವರಿಗೆ ಸಾರ್ವತ್ರಿಕ ಸುಖ ಅಷ್ಟು ಮುಖ್ಯವಾಗಿ ಕಾಣಿಸುವುದಿಲ್ಲ. ಆದರೆ ಅದೇ ನಾವು ನವೋದಯ ಸಾಹಿತ್ಯವನ್ನು ತೆಗೆದುಕೊಂಡಾಗ ಅಲ್ಲಿ ಸಾರ್ವತ್ರಿಕ ಸುಖ ಮುಖ್ಯವಾಗುತ್ತದೆ ಮತ್ತು ವ್ಯಕ್ತಿ ಸುಖ ಗೌಣವಾಗುತ್ತದೆ. ಹಾಗಾಗಿ ದೇಸಾಯಿಯವರು ವ್ಯಕ್ತಿಯ ಅನುಭವಗಳನ್ನು ಲೈಂಗಿಕತೆಯ ಮೂಲಕ ಶೋಧಿಸಲಿಕ್ಕೆ ಪ್ರಯತ್ನಪಡುತ್ತಾರೆ. ಶಾಂತಿನಾಥರು ಲೈಂಗಿಕತೆಯ ಬಗ್ಗೆ ಸಾಂಪ್ರದಾಯಿಕ ದೃಷ್ಟಿಕೋನವನ್ನು ಎಂದೂ ತಾಳುವುದಿಲ್ಲ. ಕಾಮವನ್ನು ದೇಸಾಯಿಯವರು ಒಂದು ನಿರ್ದೇಶಿತ, Prescribed, ಮೌಲ್ಯವಾಗಿ ಯಾವತ್ತೂ ಎತ್ತಿ ಹಿಡಿಯುವುದಿಲ್ಲ. ಈ ಅನುಭವ ಒಬ್ಬ ವ್ಯಕ್ತಿಯ ಜೀವನದಲ್ಲಿ ಹೇಗೆ ಆಗುತ್ತದೆ. ಏನು ಪರಿಣಾಮ ಬೀರುತ್ತದೆ ಎಂಬುದರ ಮೇಲಿನಿಂದ ಅವರು ಕಾಮದ ನೈತಿಕತೆಯ ಪ್ರಶ್ನೆಯನ್ನು ಸೂಚಿಸುತ್ತಾರೆ.

ಇಡೀ ಲೇಖನದಲ್ಲಿ ಅಶೋಕ ಅವರ ವೈಧಾನಿಕತೆ-ಇವರ ಪಾತ್ರಗಳನ್ನು ಹಾಗೂ ಮುಕ್ತಲೈಂಗಿಕ ಚಟುವಟಿಕೆಗಳನ್ನು ಸಕಾರಾತ್ಮಕವಾಗಿ ನೋಡುವ ದಿಟ್ಟತನವೂ ಇಲ್ಲ. ಕೈಬಿಡುವ ಪ್ರಮೇಯವೂ ಇಲ್ಲ. ಅಂದರೆ ಈ ಲೇಖನದಲ್ಲಿ ಮುಕ್ತಲೈಂಗಿಕ ಸಂಬಂಧಗಳ ಮೂಲಕ ಶಾಂತಿನಾಥ ದೇಸಾಯಿಯವರ ದೃಷ್ಟಿಕೋನವನ್ನು ಹೀಗೆ ಗ್ರಹಿಸಬಹುದು ಅಥವಾ ಶೋಧಿಸಬಹುದು ಎನ್ನುವುದನ್ನು ಹೇಳುತ್ತಾರೆಯೇ ಹೊರತು ಯಾವ ಕಡೆಯೂ ಅವರು ಖಚಿತವಾದ ತೀರ್ಮಾನವನ್ನು ಕೊಡುವುದಿಲ್ಲ.

ಯಶವಂತ ಚಿತ್ತಾಲರು 'ಮುಕ್ತಿ' ಒಂದು ಟಿಪ್ಪಣಿ' ಎನ್ನುವ ಲೇಖನದಲ್ಲಿ ಚಿತ್ತಾಲರು ಕಾಲದ ಮಹತ್ವವನ್ನು ಕುರಿತು ಹೇಳುತ್ತಾ, ಭೂತದಿಂದ ಬಿಡುಗಡೆ ಪಡೆಯಬೇಕೆಂದು ಬಯಸಿದ ಗೌರೀಶನಿಗೆ, ಅಷ್ಟು ಸುಲಭವಾಗಿ ಬಿಡಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಗುರುತಿಸುತ್ತಾರೆ. ಬದುಕಿನಿಂದ ಪಲಾಯನವಾಗಬೇಕೆಂದು ಬಯಸಿದ ಗೌರೀಶನು ಹೊಸ ಸಂಬಂಧದ ಮೂಲಕ ಪುನಃ ಜೀವನಕ್ಕೆ ಅಭಿಮುಖವಾಗುವುದನ್ನು ಚಿತ್ರಿಸುತ್ತಾರೆ. ದೇಸಾಯಿಯವರಿಗೆ ರಕ್ತಸಂಬಂಧ ಅಷ್ಟು ಮುಖ್ಯವಾಗದಿದ್ದರೂ ಸಹ, ಇಲ್ಲಿ ಚಿತ್ತಾಲರು ದೇಸಾಯಿಯವರು ಹೊಸ ನೈತಿಕತೆಯನ್ನು ನೆಲೆಗೊಳಿಸುವುದಕ್ಕೆ ಪ್ರಯತ್ನಪಟ್ಟ ಲೇಖಕ ಎಂಬುದಾಗಿ ಗುರುತಿಸಿದ್ದಾರೆ.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ಶಾಂತಿನಾಥ ದೇಸಾಯಿ ಅವರ 'ವಿಕ್ಷೇಪ' ಒಂದು ವಿವೇಚನೆ' ಎನ್ನುವ ಲೇಖನದಲ್ಲಿ ದೇಸಾಯಿಯವರ ಎರಡು ಕಾದಂಬರಿಗಳಾದ 'ಮುಕ್ತಿ' ಹಾಗೂ

‘ವಿಕ್ಷೇಪ’ಗಳ ಸಾಮ್ಯತೆಯನ್ನು ಗುರುತಿಸುತ್ತಾ ಯುವಜನಾಂಗದ ಮನಸ್ಥಿತಿಯ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಯಾವುದೇ ವ್ಯಕ್ತಿಗೆ ತನ್ನ ಜೀವನದಲ್ಲಿ ಬಹುಮುಖ್ಯವಾದ ದಿನಗಳೆಂದರೆ ತಾರುಣ್ಯದ ದಿನಗಳು. ಬಾಲ್ಯವನ್ನು ಮುಗಿಸಿ ಯೌವನಕ್ಕೆ ಕಾಲಿಟ್ಟ ಯುವಜನಾಂಗಕ್ಕೆ ಲೋಕವನ್ನು ನೋಡುವ ಕಣ್ಣು ಮೊನಚಾಗುತ್ತದೆ. ಇಂಥ ಸನ್ನಿವೇಶದಲ್ಲಿ ರಕ್ತದ ನಾಗಾಲೋಟದೊಡನೆ ಉಳಿದ ಸಂವೇದನೆಗಳು ಸೋತು ಹೋಗುವುದರಿಂದ ರಕ್ತದ ಒತ್ತಡಕ್ಕೆ ಸಿಕ್ಕುವ ಅನುಭವಗಳು ಮನಸ್ಸಿನ ಆಳಕ್ಕೆ ಇಳಿದು ಕೆದಕುತ್ತವೆ. ಈ ಪಾತಳಿಯಿಂದ ಅನುಭವಗಳನ್ನು ರಾಹುಲನ ಪಾತ್ರದಲ್ಲಿ ಪದರು ಪದರಾಗಿ ಬಿಡಿಸುತ್ತ, ಅದರ ಹಿನ್ನೆಲೆಯಲ್ಲಿ ಜೀವನದ ಬಗೆಗಿನ ದೃಷ್ಟಿಕೋನವನ್ನು ರೂಪಿಸಲು ಯತ್ನಿಸಿರುವುದು ದೇಸಾಯಿಯವರ ಸಾಧನೆ ಎಂದು ಅಭಿಪ್ರಾಯ ಪಡುತ್ತಾರೆ.

“ಶಾಂತಿನಾಥ ದೇಸಾಯಿ ಯಾವುದೇ ಮೌಲ್ಯಗಳನ್ನು ಬುನಾದಿಯನ್ನಾಗಿಟ್ಟುಕೊಂಡು ಪಾತ್ರ ಸೃಷ್ಟಿಸಿಲ್ಲ. ಇದು ಒಳ್ಳೆಯದು, ಇದು ಕೆಟ್ಟದ್ದು ಎಂದು ಸ್ಥಾಪಿಸಿ ಅದರ ಮೇಲೆ ಪಾತ್ರಗಳನ್ನು ಬೆಳೆಸುವುದಿಲ್ಲ.”[೧೦]

ಸಂಧ್ಯಾರಾಗದ ಲಕ್ಷ್ಮಣ, ‘ಚಂದವಳ್ಳಿಯ ತೋಟ’ದ ಚಂದ್ರೇಗೌಡ ಮೊದಲಿನಿಂದ ಕಡೆಯವರೆಗೂ ಒಳ್ಳೆಯವರಾಗಿಯೇ ಉಳಿಯುವುದನ್ನು ಕಾದಂಬರಿಕಾರರು ಚಿತ್ರಿಸಿದರೆ, ದೇಸಾಯಿಯವರು ಇಂಥ ಮೌಲ್ಯಗಳಿಗೆ ಯಾವ ಮಹತ್ವವೂ ಇಲ್ಲದ ಪಾತ್ರಗಳ ಅನುಭವಗಳನ್ನು ವಿಶ್ಲೇಷಿಸುತ್ತಾರೆ. ಅಂತಿಮವಾಗಿ ನರಹಳ್ಳಿಯವರು ಈ ಲೇಖನದಲ್ಲಿ ದೇಸಾಯಿಯವರ ಪಾತ್ರಗಳು ಯಾವುದೇ ಬಂಧನಗಳಿಗೆ ಸಿಕ್ಕಿ ಒದ್ದಾಡದೆ, ಸ್ವತಂತ್ರವಾಗಿ ಉಳಿಯುವುದನ್ನು ಗುರುತಿಸುತ್ತಾರೆ.

ಜಿ.ಎನ್. ರಂಗನಾಥರಾವ್ ಅವರು ‘ದೇಸಾಯಿಯವರ ‘ವಿಕ್ಷೇಪ’ ಎನ್ನುವ ಲೇಖನದಲ್ಲಿ ಲಂಕೇಶರ ‘ಬಿರುಕು’ ಹಾಗೂ ದೇಸಾಯಿಯವರ ‘ವಿಕ್ಷೇಪ’ ಈ ಎರಡೂ ಕಾದಂಬರಿಗಳನ್ನಿಟ್ಟುಕೊಂಡು ದೇಸಾಯಿರ ವೈಶಿಷ್ಟ್ಯವನ್ನು ಗುರುತಿಸುತ್ತಾರೆ. ಆಧುನಿಕ ಯುವಕರ ಮನಸ್ಥಿತಿಯ ಚಿತ್ರಣವನ್ನು ಹೇಳುತ್ತಾರೆ.

“ಕನಸು, ಭ್ರಮೆ, Fantacy, ಹಿಂಸಾಚಾರ, ಕ್ರೌರ್ಯಗಳಲ್ಲಿ ಬದುಕಿನ ಮೂಲ ಸ್ವರೂಪಗಳನ್ನು ಕಡೆದಿರಿಸುವುದು ಲಂಕೇಶರ ಬರವಣಿಗೆಯ ಧಾಟಿ. ಶಾಂತಿನಾಥ ದೇಸಾಯಿಯವರ ಪಾತ್ರಗಳಿಗೂ ಲಂಕೇಶರ ಪಾತ್ರಗಳಿಗೂ ಸಾಮ್ಯ ಇದ್ದರೂ ದೇಸಾಯಿಯವರು ತಮ್ಮ ಪಾತ್ರಗಳನ್ನು ಅನಾವರಣಗೊಳಿಸುವ ರೀತಿ ಇದಲ್ಲ. “ದೇಸಾಯಿಯವರ ಬರವಣಿಗೆಯ ಲಿಪಿ ಇರುವುದು ಸಂಪೂರ್ಣವಾಗಿ ಆಧುನಿಕ ಮನಸ್ಸು ಮತ್ತು usban sensibility. ಅವರ ಪಾತ್ರಗಳೂ ಒಂದು ಬಗೆಯ Sophisticated ಪ್ರಪಂಚದಲ್ಲೇ ಸಮಾಜದ ಆಗುಹೋಗುಗಳನ್ನೂ ವೈಯಕ್ತಿಕ ಸಮಸ್ಯೆಯ ತೀವ್ರತೆಯನ್ನೂ ಅನುಭವಿಸುತ್ತವೆ. ಆದ್ದರಿಂದ ದೇಸಾಯಿಯವರ ಪಾತ್ರದ ವಿಚಾರಗಳು Raw ಆಗಿರದೇ Polished ಆಗಿರುತ್ತದೆ.”[೧೧]

'ಬಿರುಕು' ನಗರ ಸಂಸ್ಕೃತಿ ಮತ್ತು ಗ್ರಾಮಸಂಸ್ಕೃತಿಗಳ ನಡುವಣ ಕಂದರವನ್ನು ತಿಕ್ಕಾಟವನ್ನೂ ಚಿತ್ರಿಸುವ ಕಾದಂಬರಿಯಾಗಿದೆ ಎಂದು ಗುರುತಿಸಿದರೆ, ವಿಕ್ಷೇಪದಲ್ಲಿ ಭಾರತೀಯ ಜೀವನಕ್ಕೆ ಒಗ್ಗಿಕೊಳ್ಳದ ವ್ಯಕ್ತಿ ಒಂದು ನಿಶ್ಚಿಂತೆಯಿಂದ ನೆಲೆಯೂರುವುದು ಅವನಿಂದ ಸಾಧ್ಯವಿಲ್ಲ ಎನ್ನುವುದನ್ನು ಗುರುತಿಸುತ್ತಾರೆ. ಒಟ್ಟಿನಲ್ಲಿ ದೇಸಾಯಿಯವರ ಬರವಣಿಗೆಯ ಹಿಂದೆ ಕೆಲಸ ಮಾಡುತ್ತಿರುವುದು ಈ ಆಧುನಿಕತೆ ಎಂದು ರಂಗನಾಥರವರ ಅಭಿಪ್ರಾಯ.

ಕೆ.ವಿ.ನಾರಾಯಣ ಅವರು 'ಬೀಜ:ಗೌರೀಶ ಶ್ರೇಯಾಂಸನಾಗುವ ಬಗೆ' ಈ ಲೇಖನದಲ್ಲಿ ಗುರುತಿಸುವಂತೆ ವ್ಯಕ್ತಿ ಮತ್ತು ಪರಿಸರದ ನಡುವಿನ ಸಂಬಂಧವನ್ನು ಹೇಳುತ್ತಾ, ವ್ಯಕ್ತಿಗೆ ತಾನು ಕಟ್ಟಿಕೊಂಡ ಲೋಕಕ್ಕಿಂತ, ಬಿಟ್ಟು ಬಂದ ಲೋಕವೇ ಮುಖ್ಯ ಎಂದು ಹೇಳುತ್ತಾರೆ. ಇದಕ್ಕೆ ಕಾರಣವೆಂದರೆ ವಂಶವಾಹಿಗಳು ಎಂದು ಅಭಿಪ್ರಾಯಪಡುತ್ತಾರೆ.

ಮುಕ್ತಿಯ ಗೌರೀಶನೆ ಬೀಜ ರೂಪದಲ್ಲಿ ಶ್ರೇಯಾಂಸನಾಗಿ ಮುಂದುವರೆದಿರುವುದನ್ನು ಗುರುತಿಸು ತ್ತಾರೆ. ಒಬ್ಬ ವ್ಯಕ್ತಿ ತನ್ನನ್ನು ತಾನು ಕಂಡುಕೊಳ್ಳುವುದು ತನ್ನ ಭೂತಕಾಲದ ನೆನಪುಗಳ ಮೂಲಕವೇ ಎನ್ನುವುದನ್ನೂ ಸಹ ನಾರಾಯಣರು ಗುರುತಿಸುತ್ತಾರೆ. ಕಾದಂಬರಿಯ ಕೇಂದ್ರ ನಾಯಕನಾದ ಶ್ರೇಯಾಂಸನು ಕೃಷ್ಣಾಪುರಕ್ಕೆ ಮರಳುವುದು ತನ್ನ ತಂದೆ ಅಪ್ಪಾ ಸಾಹೇಬರ ಮರಣದ ನಂತರ. ಶ್ರೇಯಾಂಸನು ತಾನು ಕಟ್ಟಿಕೊಂಡ ಲೋಕ ದುರ್ಬಲವಾಗಿರುವುದರಿಂದ ಶ್ರೇಯಾಂಸ ಪುನಃ ಕೃಷ್ಣಾಪುರಕ್ಕೆ ಬರುತ್ತಾನೆ ಎಂದು ಅಭಿಪ್ರಾಯ ಪಡುತ್ತಾರೆ.

ಎಚ್.ಎಸ್. ರಾಘವೇಂದ್ರರಾವ್ ಅವರು 'ಬೀಜ' ಕಾದಂಬರಿಯ ಶ್ರೇಯಾಂಸನ ನಿರ್ಧಾರ ಕೆಲವು ವಿಚಾರಗಳು' ಎನ್ನುವ ಲೇಖನದಲ್ಲಿ ಭೂತ ಮತ್ತು ವರ್ತಮಾನಗಳ ಮುಖಾಮುಖಿಯನ್ನು ಮಾಡುತ್ತಾ, ಭವಿಷ್ಯವನ್ನು ರೂಪಿಸುತ್ತಾ ಹೋಗುತ್ತಾರೆ. ಕೊನೆಯಲ್ಲಿ ಶ್ರೇಯಾಂಸ ಕೃಷ್ಣಾಪುರದಲ್ಲಿಯೇ ಉಳಿಯಲು ಕಾರಣವೇನೆಂದು ಈ ಲೇಖನದಲ್ಲಿ ಶೋಧಿಸುತ್ತಾರೆ. ಅಂತಿಮವಾಗಿ ರೇವತಿಯೇ ಕಾರಣ ಎಂದು ಹಲವಾರು ನಿದರ್ಶನಗಳನ್ನು ಲೇಖನದಲ್ಲಿ ಕೊಡುತ್ತಾ ಹೋಗುತ್ತಾರೆ. "ರೇವತಿ ನನಗೆ ನೀ ಬೇಕು ಎಂದು ನಾ ಸ್ಪಷ್ಟವಾಗಿಯೇ ಹೇಳಿಬಿಡ್ತೀನಿ. ಅದಕ್ಕೆ ನೀನೇ ಇಲ್ಲಿ ಅಂದರೆ ಮುಂಬಯಿಯಲ್ಲಿ ಬಂದಿರಬೇಕು, ಇಲ್ಲ ನಾನೇ ಅಲ್ಲಿಗೆ ಬರಬೇಕು ಈ ಕಠಿಣವಾದ ಕಾತರ ಸಮಯದಲ್ಲಿ, ರೇವತಿ ನೀನೇ ಹೃದಯಕ್ಕೆ ಆಧಾರ."

ಈ ಮಾತುಗಳಿಂದ ಗಮನಿಸುವುದೇನೆಂದರೆ ಶ್ರೇಯಾಂಸನು ಕೃಷ್ಣಾಪುರದಲ್ಲಿಯೇ ಉಳಿಯಲು ಮುಖ್ಯ ಕಾರಣವೆಂದರೆ ರೇವತಿಯನ್ನು ಕುರಿತಾದ ಅವನ ಆಕರ್ಷಣೆ ಮತ್ತು ಅವಳಿಂದ ದೊರೆತ ಆಶ್ವಾಸನೆ ಎನ್ನುವುದನ್ನು ಗಮನಿಸಬಹುದು. ಶ್ರೇಯಾಂಸನ ನಿರ್ಧಾರಕ್ಕೆ ಸಾಮಾಜಿಕವಾದ ಕಾರಣಗಳಿಗಿಂತ ವೈಯಕ್ತಿಕವಾದ ಕಾರಣಗಳು ಹೆಚ್ಚು ಮುಖ್ಯ ಎನ್ನುವುದನ್ನು ಶೋಧಿಸುತ್ತಾರೆ.

ಕೆ. ಸತ್ಯನಾರಾಯಣ ಅವರು 'ಧರ್ಮ ಮತ್ತು ಪರಂಪರೆಯ ಚೌಕಟ್ಟಿನಲ್ಲಿ ಜೀವನದ ಅರ್ಥ ಹುಡುಕತ್ತಾ....' ಎಂಬ ಲೇಖನದಲ್ಲಿ 'ಓಂಣವೋ' ಕಾದಂಬರಿಯ ದೃಷ್ಟಿಕೋನವನ್ನು ಕುರಿತು ಚರ್ಚಿಸಿದ್ದಾರೆ. ಜೈನ ಸಮಾಜವನ್ನು ಕುರಿತ ಅವರ ಆಸಕ್ತಿ ನೂರಕ್ಕೆ ನೂರರಷ್ಟು ಕಾದಂಬರಿಕಾರರದೆ ಹೊರತು ಸಮಾಜಶಾಸ್ತ್ರಜ್ಞನದಲ್ಲ. ಸಾಮಾಜಿಕ ಚರಿತ್ರಕಾರನದೂ ಅಲ್ಲ. ಸಲ್ಮಾನ್ ರಶ್ದಿಯಂತೆ ಧರ್ಮವನ್ನೂ, ಸಮಾಜವನ್ನೂ ಭರ್ತ್ಸನೆಗೆ ಒಳಪಡಿಸುವ ಇರಾದೆ ತಮಗಿಲ್ಲವೆಂದು ಇತಿಹಾಸ ಬರೆಯುವುದು ಕೂಡ ಬೇಸರದ ಕೆಲಸವೆಂದು, ತನ್ನ ಉದ್ದೇಶವೇನಿದ್ದರೂ, "ನನ್ನ ಜೈನ ಅನುಭವಗಳ (ಅದು ಎಷ್ಟೇ ಸೀಮಿತವಾಗಿದ್ದರೂ) ಬಗ್ಗೆ ಒಂದು ಕಾದಂಬರಿ ಬರೆಯುವುದು" ಎಂದು ದೇಸಾಯಿ ಸ್ಪಷ್ಟಪಡಿಸುತ್ತಾರೆ. ನಮ್ಮ ಶ್ರೇಣೀಕೃತ ಸಮಾಜದಲ್ಲಿ ಲೇಖಕರೆಲ್ಲ ಒಂದಲ್ಲ ಒಂದು ನಿರ್ದಿಷ್ಟ ವರ್ಗಕ್ಕೆ, ಅನುಭವ ವಲಯಗಳಿಗೆ ಸೇರಿದವರಾಗಿರುತ್ತಾರೆ. ಇಂತಹ ಲೇಖಕರಿಗೆ ತಮ್ಮ ಸಮಾಜದ ಅನುಭವಗಳನ್ನು ಕುರಿತು ಇರಬೇಕಾದ ದೃಷ್ಟಿಕೋನದ ಬಗ್ಗೆ ಸ್ಪಷ್ಟತೆಯೇ ಇರುವುದಿಲ್ಲ ಎನ್ನುತ್ತಾರೆ.

ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯವನ್ನು ಕುರಿತು ಈ ಬಗೆಯಲ್ಲಿ ವಿಮರ್ಶಕರು ಅಧ್ಯಯನ ನಡೆಸಿದ್ದರೂ, ಸಮಗ್ರವಾಗಿ ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ನವ್ಯ ಸಾಹಿತ್ಯಕ್ಕೆ ಯುರೋಪಿನ ಪ್ರೇರಣೆ ಆಗಿದ್ದರೆ, ಯಾವ ಆಯಾಮ ಪ್ರೇರಣೆಯಾಯಿತು? ಯಾಕೆ ಆಯಿತು? ಕನ್ನಡದಲ್ಲಿ ನವ್ಯ ಸಾಹಿತ್ಯವನ್ನು ಯಾರು ಹೇಗೆ ರಚಿಸಿದರು? ಅದರ ಪರಿಣಾಮಗಳೇನು? ಎಂದು ಸಮಗ್ರವಾಗಿ ನೋಡುವ ಅಧ್ಯಯನಗಳು ನಡೆಯುವ ಅಗತ್ಯವಿದೆ. ಅದರಲ್ಲೂ ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಬರುವ ಮಹಿಳೆಯರನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೆಲವು ಪ್ರಯತ್ನಗಳು ನಡೆದಿವೆ. ಆದರೆ ಸ್ತ್ರೀವಾದದ ಹಲವು ಧಾರೆಗಳಲ್ಲಿ, ಯಾವ ಧಾರೆ ಶಾಂತಿನಾಥ ದೇಸಾಯಿ ಅವರ ಸ್ತ್ರೀಯರನ್ನು ಅಧ್ಯಯನ ಮಾಡಲಿಕ್ಕೆ ಸೂಕ್ತ ಎಂದು ಗುರುತಿಸಬೇಕಾಗಿದೆ.

ಇನ್ನೊಂದು ಆಧುನಿಕೋತ್ತರವಾದದಿಂದ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಅಧ್ಯಯನ ಮಾಡುವ ಅಗತ್ಯವಿದೆ. ಕನ್ನಡದಲ್ಲಿ ಇನ್ನೊಬ್ಬ ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರನ್ನೂ ಕೂಡ ಆಧುನಿಕೋತ್ತರವಾದದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು. ಈಗ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ನಡೆದ ಅಧ್ಯಯನದಲ್ಲಿ ಸಮಗ್ರತೆಯಿಲ್ಲ. ನಡೆದ ಅಧ್ಯಯನಗಳಲ್ಲಿ ಒಳನೋಟಗಳಿವೆ.

ಕೊನೆ ಟಿಪ್ಪಣಿಗಳು

೧. ನಾರಾಯಣ ಕೆ.ವಿ., ೨೦೦೧, ಸದ್ಯಕ್ಕೆ ಹೊಳೆಯುವ ಉತ್ತರಗಳು, **ಮುಕ್ತಚಂದ** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೩೪

೨. ರಾಮಚಂದ್ರನ್ ಸಿ.ಎನ್., ೧೯೮೬, ಸ್ವಾಭಿಮುಖ ಸಾಹಿತ್ಯ : ಮುದ್ದಣನ 'ರಾಮಾಶ್ವಮೇಧ' ಮತ್ತು ಶಾಂತಿನಾಥ ದೇಸಾಯರ 'ಸೃಷ್ಟಿ': ಒಂದು ವ್ಯಾಖ್ಯಾನ, ಶಿಲ್ಪವಿನ್ಯಾಸ, ಕನ್ನಡ ಸಂಘ, ಪುತ್ತೂರು, ದಕ್ಷಿಣ ಕನ್ನಡ, ಪು.೧೫

೩. ಗಿರಿಡ್ಡಿ ಗೋವಿದರಾಜ, ೨೦೦೭, **ಪ್ರಮಾಣು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೯೩

೪. ರಾಜೇಂದ್ರ ಚೆನ್ನಿ, ೨೦೦೪, ದೇಸಾಯಿಯವರ ಕಾದಂಬರಿಗಳ ಮುಖ್ಯ ಕಾಳಜಿಗಳು, **ನಡುಹಗಲಿನಲ್ಲಿ ಕಂದೀಲುಗಳು**, ಲೋಹಿಯಾ ಪ್ರಕಾಶನ, ಬಳ್ಳಾರಿ, ಪು.೨೪-೨೫

೫. ಅದೇ, ಪು.೩೨

೬. ರಾಮಚಂದ್ರನ್ ಸಿ.ಎನ್., ೧೯೮೬, ಸ್ವಾಭಿಮುಖಿ ಸಾಹಿತ್ಯ : ಮುದ್ದಣನ 'ರಾಮಾಶ್ವಮೇಧ' ಮತ್ತು ಶಾಂತಿನಾಥ ದೇಸಾಯರ 'ಸೃಷ್ಟಿ': ಒಂದು ವ್ಯಾಖ್ಯಾನ, **ಶಿಲ್ಪವಿನ್ಯಾಸ**, ಕನ್ನಡ ಸಂಘ, ಪುತ್ತೂರು, ದಕ್ಷಿಣ ಕನ್ನಡ, ಪು.೮೩-೮೪

೭. ಜಯಂತ್ ಕಾಯ್ಕಿಣಿ, ೨೦೦೧, 'ಓಂಣಮೋ' ಶಾಂತಿನಾಥ, **ಮುಕ್ತಚಂದ**, (ಸಂ) ಡಿ.ವಿ.ಪಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೪

೮. ಸರ್ವಮಂಗಳಾ ಚ., ೨೦೦೧, ದೇಸಾಯರ ಕಥಾಪ್ರಪಂಚ, **ಮುಕ್ತಚಂದ**, (ಸಂ) ಡಿ.ವಿ.ಪಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೪೭

೯. ಮೀರಾ ಎಲ್.ಜಿ., ೨೦೦೧, ಶಾಂತಿನಾಥ ದೇಸಾಯಿಯವರ ಕೆಲವು ಸ್ತ್ರೀಪಾತ್ರಗಳು, **ಮುಕ್ತಚಂದ**, (ಸಂ)ಡಿ.ವಿ.ಪಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೫೬

೧೦. ನರಹಳ್ಳಿ ಬಾಲಸುಬ್ರಹ್ಮಣ್ಯ, ೨೦೦೧, ಶಾಂತಿನಾಥ ದೇಸಾಯಿ ಅವರ 'ವಿಕ್ಷೇಪ' ಒಂದು ವಿವೇಚನೆ, ಮುಕ್ತಚಂದ, (ಸಂ) ಡಿ.ವಿ.ಪಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೮೪

೧೧. ರಂಗನಾಥರಾವ್ ಜಿ.ಎನ್., ದೇಸಾಯಿಯವರ 'ವಿಕ್ಷೇಪ', **ಮುಕ್ತಚಂದ**, (ಸಂ) ಡಿ.ವಿ.ಪಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೮೭

ಅಧ್ಯಾಯ ೩

ಕನ್ನಡದಲ್ಲಿ ನವ್ಯಸಾಹಿತ್ಯ ಹಾಗೂ ಶಾಂತಿನಾಥ ದೇಸಾಯಿಯವರ ಸಾಹಿತ್ಯದ ಅನನ್ಯತೆ

೩

ಕನ್ನಡದಲ್ಲಿ ನವ್ಯಸಾಹಿತ್ಯ ಹಾಗೂ ಶಾಂತಿನಾಥ ದೇಸಾಯಿಯವರ ಸಾಹಿತ್ಯದ ಅನನ್ಯತೆ

ಸ್ವಾತಂತ್ರ್ಯೋತ್ತರ ಕಾಲದ ಭಾರತದಲ್ಲಿ ಆದರ್ಶದ ಕನಸು ಒಡೆದು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ನ್ಯಾಯ ನೀತಿಗಳು ಸಡಿಲವಾದವು. ಇದರಿಂದ ಮನುಷ್ಯನ ಜೀವನದಲ್ಲಿ ಭ್ರಷ್ಟತೆ, ಸ್ವಾರ್ಥಪರತೆ, ದ್ವಂದ್ವ ಗೊಂದಲಗಳು ಹೆಚ್ಚಾಗತೊಡಗಿದವು. ಹಳ್ಳಿಗಳಿಂದ ನಗರಗಳಿಗೆ ಶಿಕ್ಷಣಕ್ಕಾಗಿ ಬರುತ್ತಿದ್ದ ಸೂಕ್ಷ್ಮ ಸಂವೇದನೆಯನ್ನುಳ್ಳ ಯುವಕ ಯುವತಿಯರ ಮೇಲೆ ನಗರ ಜೀವನದ ಆಧುನಿಕ ವಾತಾವರಣ, ಜೀವನಶೈಲಿ, ನಾಗರಿಕತೆ, ಸಿನಿಕತನಗಳು ಪ್ರಭಾವ ಬೀರುತ್ತವೆ. ಈ ಅಂಶಗಳಿಂದ ಪ್ರಭಾವಿತರಾದ ಇಂಥವರು ವ್ಯಕ್ತಿ ಸ್ವಾತಂತ್ರ್ಯದ ಹೊಸ ಜೀವನ ವಿಧಾನಕ್ಕೆ ಹಂಬಲಿಸುತ್ತಾರೆ. ಅತೃಪ್ತ ಬಯಕೆಗಳನ್ನು ಈಡೇರಿಸಿಕೊಳ್ಳಲು ಉತ್ಸುಕರಾಗುತ್ತಾರೆ.

ಇಂಥ ಆಧುನಿಕ ವಾತಾವರಣದ ಪ್ರಭಾವದಿಂದ ಕನ್ನಡ ಸಾಹಿತ್ಯದಲ್ಲಿ ಅನೇಕ ಬದಲಾವಣೆಗಳಾದವು. ನವ್ಯ ಘಟ್ಟದ ಸಾಹಿತ್ಯದಲ್ಲಿ ಹೊಸ ಸಂಸ್ಕೃತಿಯ ಪ್ರವೇಶಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿನ ಈ ಕಾಲವನ್ನು ಸಾಹಿತ್ಯಿಕ ಬೆಳವಣಿಗೆಯಲ್ಲಿನ ಹೊಸ ಹಂತದ ಆರಂಭದ ಕಾಲವೆಂದು ಪರಿಗಣಿಸಬಹುದು. ಮನುಷ್ಯನ ಖಾಸಗಿ ಕ್ಷಣಗಳ ಸಾಮಾಜಿಕತೆ, ಅವನ ಸಾಮಾಜಿಕ ಅನುಭವಗಳ ವ್ಯಕ್ತಿಗತ ಶೋಧನೆ, ವಾಸ್ತವತೆಯ ದಾರ್ಶನಿಕ ವ್ಯಾಖ್ಯಾನ, ಮಾನವನ ಅಂತರಂಗದ ಹುಡುಕಾಟ ಇವು ನವ್ಯ ಬರಹಗಾರರನ್ನು ಹೆಚ್ಚು ಕಾಡುತ್ತವೆ. ಇವೆಲ್ಲವುಗಳ ಜೊತೆಗೆ ಪಶ್ಚಿಮದಿಂದ ಬಂದ ಸಾಹಿತ್ಯಿಕ, ವೈಜ್ಞಾನಿಕ, ತಾಂತ್ರಿಕ, ಮನಃಶಾಸ್ತ್ರೀಯ ವಿಚಾರಗಳು ನಮ್ಮ ಬದುಕು ಮತ್ತು ಚಿಂತನೆಗಳ ಮೇಲೆ ಗಾಢ ಪ್ರಭಾವ ಬೀರುತ್ತಿದ್ದವು. ಇದಲ್ಲದೆ "ಭಾರತೀಯ ವಿಶ್ವವಿದ್ಯಾಲಯಗಳ ಇಂಗ್ಲೀಷ್ ವಿಭಾಗದ ಪಠ್ಯಾವಳಿಯಲ್ಲಿ ಎಲಿಯೆಟ್, ಲಾರೆನ್ಸ್, ಲೀವಿಸ್ ಮುಂತಾದವರ ಸಾಹಿತ್ಯವನ್ನು ಪರಿಚಯಿಸಲಾಗುತ್ತಿತ್ತು."[೧] ಹೀಗೆ ಪರಿಚಯಿಸಲಾದ ಇಂಗ್ಲೀಷ್ ಸಾಹಿತ್ಯವನ್ನು ಓದಿಕೊಂಡ ಕನ್ನಡದ ಲೇಖಕರು ರೂಢಿಗತ ಮಾರ್ಗವನ್ನು ಬಿಟ್ಟು ಬದಲಾದ ಸಂವೇದನೆಗನುಗುಣವಾಗಿ ಸಾಹಿತ್ಯದಲ್ಲಿ ಹೊಸದನ್ನು ತರಲು ಶ್ರಮಿಸಿದರು. ಈ ಎಲ್ಲ ಅಂಶಗಳು ಒಟ್ಟಿಗೆ ನವ್ಯಸಾಹಿತ್ಯ ಉದಯವಾಗಲಿಕ್ಕೆ ಕಾರಣವಾಯಿತು.

[illegible]

[illegible]

[illegible]

[illegible]

'ನವ್ಯ' ಎಂಬುದು "ವಿಶಿಷ್ಟ್ಯ ಸಂವೇದನೆ. ವಿಶಿಷ್ಟವಾದ ಜೀವನ ಧೋರಣೆ, ವಿಶಿಷ್ಟ ರೂಪಗಳು, ವಿಶಿಷ್ಟ ಸೃಷ್ಟಿ ಪ್ರಕ್ರಿಯೆ ಇವುಗಳೆಲ್ಲದರ ಸಂಬಂಧದಿಂದ ಹುಟ್ಟಿದ ವಿಶಿಷ್ಟ ಸಾಹಿತ್ಯ ಪರಂಪರೆ"[೨] ಇದು ಒಂದು ಮನೋಧರ್ಮ, ನಿರ್ದಿಷ್ಟ ತಾತ್ವಿಕತೆಗೆ ಸಂಬಂಧಿಸಿದ್ದು. ಇದರಿಂದ ನವ್ಯ ಎಂಬುದು ನಿರಂತರ ಕ್ರಾಂತಿಯ ಸ್ಥಿತಿಯಾಗಿ ಇಂದು ಇರುತ್ತದೆ, ಮುಂದೂ ಇರುತ್ತದೆ. ಯಾವಾಗ ಕಾಣಿಸಿಕೊಂಡರೂ ಅದು ತನ್ನ ಹಿಂದಿನ ಸಂಪ್ರದಾಯಕ್ಕೆ ತೋರಿಸುವ ಪ್ರತಿಕ್ರಿಯೆಯಾಗಿರುತ್ತದೆ. ಇದು ಹೊಸದನ್ನು ಹುಟ್ಟು ಹಾಕಲು ಬದ್ಧವಾದದ್ದು. ಇದರ ಮುಖ್ಯ ಗುಣ ಶೋಧಕ ಗುಣ, ವಸ್ತು, ತಂತ್ರ ಮತ್ತು ಭಾಷೆ ಈ ಎಲ್ಲದರ ಹೊಸದನ್ನು ಸೃಷ್ಟಿಸಲು ನಿರಂತರ ಪ್ರಯೋಗಶೀಲವಾಗಿರುತ್ತದೆ. ವೈಜ್ಞಾನಿಕ ದೃಷ್ಟಿ, ವಿಶ್ಲೇಷಣ ವಿಧಾನ, ಸಂದೇಹ ಭಾವ ಮುಂತಾದ ಅಂಶಗಳನ್ನು ತುಂಬಿಕೊಂಡಿರುತ್ತದೆ. ವೈಜ್ಞಾನಿಕ ವಸ್ತು ಮತ್ತು ತಂತ್ರಗಳನ್ನು ಬಳಸಿಕೊಂಡು ಹೊಸ ಆಯಾಮವನ್ನು ಕಲ್ಪಿಸಿಕೊಳ್ಳುತ್ತದೆ. ವರ್ತಮಾನದಲ್ಲಿ ತನ್ನ ಪ್ರಜ್ಞೆಯನ್ನಿಟ್ಟಿರುತ್ತದೆ. ಇದರಿಂದ ಎಂಥದ್ದೇ ಇರಲಿ ಅದರ ಒಳಗಿದ್ದು ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಲು ಸೆಣಸುತ್ತದೆ. ನೆಲದೊಂದಿಗೆ ಅವಿನಾಭಾವ ಸಂಬಂಧವನ್ನಿರಿಸಿಕೊಂಡಿರುತ್ತದೆ. ಇದರಿಂದ ಭ್ರಾಮಕ ಮತ್ತು ಅವಾಸ್ತವ ಸಂಗತಿಗಳಿಂದ ಮುಕ್ತವಾಗಿರಲು ಬಯಸುತ್ತದೆ. ಅನುಭವ ಮತ್ತು ಅದರ ಅಭಿವ್ಯಕ್ತಿಗೆ ಬದ್ಧವಾಗಿರುತ್ತದೆ. ಇದರಿಂದ ಪ್ರಾಮಾಣಿಕತೆಯು ಸಹಜವಾಗಿರುತ್ತದೆ. ಇದು ಬದುಕಿನಲ್ಲಿ ಬೆರೆತು ಅದರ ಒಳ ಹೊರಗನ್ನು ಕಣ್ತೆರೆದು ನೋಡಿ ತನ್ನ ಸಂವೇದನೆಯನ್ನು ತೀಕ್ಷ್ಣಗೊಳಿಸಿ ಅಭಿವ್ಯಕ್ತಿಯನ್ನು ಶ್ರೀಮಂತಗೊಳಿಸುತ್ತದೆ. ಅನುಭವವನ್ನು ನಿಖರವಾಗಿ, ಖಚಿತವಾಗಿ ಮತ್ತು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಲು ಸಾಧ್ಯವಾಗುವಂತೆ ಆಡುಭಾಷೆಯನ್ನು ಬಳಸಿಕೊಳ್ಳುತ್ತದೆ.

ಈ ಎಲ್ಲ ಅಂಶಗಳನ್ನು 'ನವ್ಯ' ಹೊಂದಿರುತ್ತದೆ. ಪಾಶ್ಚಾತ್ಯ ನವ್ಯ ಸಾಹಿತ್ಯವನ್ನು ಅನುಸರಿಸಿದರೂ ಕನ್ನಡ ನವ್ಯ ಸಾಹಿತ್ಯ ಅದರ ಸಂಪೂರ್ಣ ನೆರಳಲ್ಲ. ರಶಿಯಾ ಮತ್ತು ಇಂಗ್ಲೆಂಡ್‌ನಲ್ಲಿ ಹುಟ್ಟಿಕೊಂಡ ನವ್ಯತೆಯಲ್ಲಿ ವ್ಯತ್ಯಾಸವಿದೆ. ಕನ್ನಡ ಸಂದರ್ಭದಲ್ಲಿಯೂ ಈ ನವ್ಯತೆ ಆಯಾ ಬರಹಗಾರನ ಪ್ರತಿಭೆ ಮತ್ತು ಸಾಮರ್ಥ್ಯವನ್ನವಲಂಬಿಸಿ ಬೆಳೆದಿದೆ. ಕನ್ನಡ ಸಾಹಿತ್ಯದಲ್ಲಿ ನವ್ಯತೆ ಕಾಣಿಸಿಕೊಳ್ಳಲು ಶುರುವಾದದ್ದು ೧೯೫೦ ರ ಸುಮಾರು. ನವ್ಯ ಸಾಹಿತ್ಯದ ಸ್ವರೂಪ ಗಮನಿಸಿದರೆ, ಇದು ನಮ್ಮ ಅನುಭವದಿಂದ ದೂರವೇ ಸರಿ ಎಂಬ ಅಭಿಪ್ರಾಯ ಯಾರಿಗೂ ಬರುವಂಥದ್ದೇ. ನಮ್ಮ ಸಾಹಿತ್ಯದಲ್ಲಿ ನವ್ಯತೆಯ ಅನಿವಾರ್ಯತೆ ಇತ್ತೆ ಎಂಬ ಅನುಮಾನ ಸುಳಿಯಲು ಕಾರಣವೆಂದರೆ, ಔದ್ಯೋಗಿಕ ಕ್ರಾಂತಿಯಿಂದ ಇಂಗ್ಲೆಂಡಿನಲ್ಲಿ ಜನಜೀವನ ಅಸ್ತವ್ಯಸ್ತಗೊಂಡು ಅಲ್ಲಿ ನವ್ಯ ಸಾಹಿತ್ಯ ಸೃಷ್ಟಿಯಾಗಲು ಕಾರಣವಾದಂತೆ ನಮ್ಮಲ್ಲಿ ಐತಿಹಾಸಿಕ ಅನಿವಾರ್ಯತೆ ಇರಲಿಲ್ಲವೆಂಬುದೇ ಕಾರಣ. ಆದರೂ ಸ್ವಾತಂತ್ರ್ಯಾನಂತರದ ಭಾರತ ಹಲವು ಸಮಸ್ಯೆಗಳಿಗೆ ಗುರಿಯಾದದ್ದು ಸುಳ್ಳಲ್ಲ. ಆಶಾವಾದಿಯಾಗಿದ್ದ ಮನುಷ್ಯ ತಾನು ನಂಬಿಕೊಂಡಿದ್ದ

ಮೌಲ್ಯಗಳ ಕುಸಿತದಿಂದ, ಕಂಡ ಕನಸುಗಳು ಭಗ್ನವಾದ್ದರಿಂದ ಹಾಗೂ ಎಲ್ಲ ನಿರೀಕ್ಷೆಗಳು ಸುಳ್ಳಾಗತೊಡಗಿದಾಗ ಸಹಜವಾಗಿ ಆತನ ಸಂಬಂಧಗಳಲ್ಲಿ ಭಿನ್ನತೆ ಕಾಣತೊಡಗಿದವು. ಬದುಕಿನಲ್ಲಿ ಬದಲಾವಣೆಗಳು ಕಾಣಿಸತೊಡಗಿದವು. ಬದಲಾದ ಬದುಕಿಗೆ ಮನುಷ್ಯ ಸ್ಪಂದಿಸುವ ರೀತಿಯೇ ಬೇರೆಯಾಯಿತು. ಸಂವೇದನೆಯಲ್ಲಿ ಭಿನ್ನತೆ ಶುರುವಾದದ್ದೇ ನವ್ಯತೆ ಕಾಣಿಸಿಕೊಳ್ಳಲು ಕಾರಣವಾಯಿತು. ಕೆಲವು ಲೇಖಕರಿಗೆ ಈ ಬದಲಾದ ಸಂವೇದನೆಯು ಬೇರೆ ರೀತಿಯಲ್ಲಿ ಬರೆಯುವ ಒತ್ತಾಸೆ ಮೂಡಿಸಿದ್ದರೆ ಅಚ್ಚರಿಯ ಸಂಗತಿಯಲ್ಲ.

೧೯೫೦ ರಲ್ಲಿ ಗೋಕಾಕರು ನವ್ಯ ಕಾವ್ಯದ ಬಗ್ಗೆ ಮೊದಲು ಪ್ರಸ್ತಾಪ ಮಾಡಿ ಅದರ ಬಗ್ಗೆ ಒಂದು ಸೈದ್ಧಾಂತಿಕ ಪುಸ್ತಕವನ್ನೇ ಬರೆದರು. ನವ್ಯಕಾವ್ಯವನ್ನೂ ಬರೆದರು. ಇವರ ಜೊತೆಯಲ್ಲಿಯೇ ಅಡಿಗರೂ ನವ್ಯಕಾವ್ಯದ ಬಗ್ಗೆ ಪ್ರಸ್ತಾಪಿಸಿ, ಕಾವ್ಯವನ್ನೂ ಬರೆದರು. ಆದರೆ ಮುಂದೆ ಗೋಕಾಕರ ನವ್ಯ ಹಲವು ವಿಮರ್ಶಕರಿಂದ ಉಗ್ರ ರೀತಿಯಲ್ಲಿ ಟೀಕೆಗೆ ಗುರಿಯಾಯಿತು. ಮಾನವ ಕೇಂದ್ರವುಳ್ಳ humanist ಧೋರಣೆಯಾಗಿ ರೂಪಗೊಳ್ಳಬೇಕೆಂದು ಗೋಕಾಕರು ಹೇಳಿದ್ದುದೇ "ಇದು ಪಾಶ್ಚಾತ್ಯ 'ನವ್ಯ'ಕ್ಕೆ ತೀರ ವಿರೋಧವಾದ ಧೋರಣೆ 'ನವ್ಯ'ದ ಪರಿಕಲ್ಪನೆಗೇ ವಿರೋಧವಾದಂತಹವು. ಆದ್ದರಿಂದ ಆಗ ಗೋಕಾಕರು ಕನ್ನಡದಲ್ಲಿ ಹೊಸದು ಬರಬೇಕೆಂದು ಇಚ್ಛಿಸಿದರಾದರೂ 'ನವ್ಯ'ದ ಬಗೆಗೆ ಅವರು ತಾಳಿದ ದೃಷ್ಟಿಧೋರಣೆ ನವ್ಯದ್ದಲ್ಲ"[೬] "ಗೋಕಾಕರಲ್ಲಿ ನವ್ಯತೆ ಪ್ರಜ್ಞೆಯಾಗಿ ಮೂಡದೇ ಪ್ರತಿಜ್ಞೆಯಾಗಿ ಬಂದಿತು."[೭] 'ನವೋದಯದ ಮಾರ್ಗದೊಂದಿಗೆ ಇವರಿಗೆ ಮೂಲಭೂತವಾಗಿ ಜಗಳ ಇರಲಿಲ್ಲ."[೮] ಅಷ್ಟೇಯಲ್ಲ 'ಸಂಪ್ರದಾಯದ ಪರವಾಗಿರುವ ಗೋಕಾಕರಿಗೆ ಜನಪರವಾದ ಕಾವ್ಯ ಬರೆಯಲಾಗಲೇ ಇಲ್ಲ. ಕನಿಷ್ಟ ಅವರು ಆಧುನಿಕರೇ ಆಗಲಿಲ್ಲ'[೯] ಎಂಬಲ್ಲಿ ಬಂದು ನಿಂತರು. ಇನ್ನು ಅವರ ಸಾಹಿತ್ಯದಿಂದ ಆಧುನಿಕ ಮನುಷ್ಯನನ್ನು ಹುಡುಕುವುದು ದೂರವೇ ಉಳಿಯಿತು.

"ಅನ್ಯರೊರೆದುದನೆ, ಬರೆದುದನೆ ನಾ ಬರೆಬರೆದು
ಖಿನ್ನಗಾಗಿದೆ ಮನವು; ಬಗೆಯೊಳಗನೇ ತೆರೆದು
ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ,
ಪನ್ನತಿಕೆ ಬರುವತನಕ ನನ್ನ ಬಾಳಿದು ನರಕ"

ಹೀಗೆ ಗೋಪಾಲಕೃಷ್ಣ ಅಡಿಗರೂ ನವೋದಯ ಕಾವ್ಯ ಮಾರ್ಗವನ್ನು ಬಿಟ್ಟು 'ನವ್ಯಕಾವ್ಯ' ಮಾರ್ಗವನ್ನು ಹಿಡಿಯಲು ತಮ್ಮನ್ನು ಸಿದ್ಧಗೊಳಿಸಿಕೊಂಡರು. ಆದರೂ ಅವರೇ "ಪರಂಪರೆಯ ಸಾರವನ್ನು ಆದಷ್ಟು ಒಳಗೊಂಡೆ ನವ್ಯಕಾವ್ಯ ಭವಿಷ್ಯದತ್ತ ಕೈ ಚಾಚಬಯಸುತ್ತದೆ" ಎಂದು ಸೂಚಿಸಿದರು. ಗೋಕಾಕರು ಮತ್ತು ಅಡಿಗರು ನವ್ಯತೆಯನ್ನು ಎತ್ತಿ ಹಿಡಿದು ಅದರ ಅವಶ್ಯಕತೆಯನ್ನು ಬಯಸಿದರು. ಆದರೆ ಭಿನ್ನ ಭಿನ್ನ ನೆಲೆಯಲ್ಲಿ ಕಂಡುಕೊಳ್ಳಲು ತೊಡಗಿದರು. ಇದರಿಂದ ಗೋಕಾಕರ ಕಾವ್ಯ ಬಹಳ ಟೀಕೆಗೆ

ಗುರಿಯಾಯಿತು. ಅಡಿಗರ ಕಾವ್ಯ ಒಂದು ಪರಂಪರೆಯನ್ನೇ ಸೃಷ್ಟಿಸಿತು. ಆದರೂ ಗೋಕಾಕರು ಮತ್ತು ಅಡಿಗರು ಹೇಗೆ ಭಿನ್ನ ಹೇಗೆ ಸಮಾನರು ಎಂಬ ಬಗ್ಗೆ ಎಚ್.ಎಂ.ಚೆನ್ನಯ್ಯನವರು ಬರೆಯುತ್ತಾರೆ.

"ಇಬ್ಬರೂ ಮಾನವನು ಎಲ್ಲದರ ಕೇಂದ್ರವೆಂದು ನೋಡುವ humanist ದೃಷ್ಟಿಯವರೆ; ಅದರಲ್ಲಿ ಪ್ರಗತಿಪರ ಧೋರಣೆಯೂ ಸೇರಿಕೊಂಡಿದೆ. ಇದು 'ನವೋದಯ'ದ ಧೋರಣೆಗಳಿಗೆ ಸಮಾನವಾದದ್ದು. ಗೋಕಾಕರು ಮತ್ತು ಅಡಿಗರು ಇಬ್ಬರೂ ನವೋದಯ, ಪ್ರಗತಿಶೀಲದ ಮೂಲಕವೇ ಹಾದು ಬಂದವರು. ಜೀವನದ ಗುರಿಯ ವಿಚಾರದಲ್ಲಿ ಇಬ್ಬರಿಗೂ ಸಮಾನ ಅಂಶಗಳಿವೆ. ಅವು 'ನವೋದಯ'ದೊಂದಿಗೆ ಸಮಾನ ಅಂಶಗಳನ್ನು ಹಂಚಿಕೊಳ್ಳುತ್ತ ಇಬ್ಬರ ಕಾವ್ಯ ಪ್ರಣಾಲಿಕೆಗಳೂ ಮಾನವ ಕೇಂದ್ರವುಳ್ಳ humanism ಅನ್ನೇ ಎತ್ತಿ ಹಿಡಿಯುವಂತಹವು. ಆದರೆ ಅಡಿಗರು 'ಒಳ್ಳೆಯ ಕಾವ್ಯ' ಬರೆದರು; ಗೋಕಾಕರು ಅಷ್ಟು 'ಒಳ್ಳೆಯ ಕಾವ್ಯ' ಬರೆಯಲಿಲ್ಲ. ನವೋದಯದಿಂದ ಭಿನ್ನವಾದ ಕಾವ್ಯ ರಚಿಸಿದರು. 'ಒಳ್ಳೆಯ ಕಾವ್ಯ' ರಚಿಸಿದರು ಅಡಿಗರು ಎನ್ನುವುದು ನಿಜ. ಆದರೆ, ನವೋದಯ ಯಾವ ಸಂಸ್ಕೃತಿಯನ್ನು ಒಪ್ಪಿ ಗುಣಗಾನಮಾಡಿತೊ, ಕೀರ್ತನಮಾಡಿತೊ, ಅದೇ ಸಂಸ್ಕೃತಿಯನ್ನು ಅಡಿಗರು ಕೂಡ ಒಪ್ಪಿಕೊಂಡವರೇ ಅದರ 'ಮೌಲ್ಯಗಳ' ವಿಚಾರದಲ್ಲಿ ಅಡಿಗರಿಗೂ ಗೌರವವಿದೆ. ಅಡಿಗರು ದಾರಿ ನಡೆದದ್ದನ್ನೂ ತೋರಿಸಿ ಗುರಿ ಮುಟ್ಟಿದ್ದನ್ನೂ ತೋರಿಸಿದರು. ಒಂದಕ್ಕೆ ವಿರುದ್ಧವಾದ ಇನ್ನೊಂದನ್ನೂ ತಮ್ಮ ಕಾವ್ಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ಮುಖಾಮುಖಿ ಮಾಡಿದರೂ, ಅವರು ತಲುಪುವ ಗುರಿ ಒಂದೇ, ಅದು 'ಸಂಸ್ಕೃತಿ' ಆಗಲೇ ಒಪ್ಪಿಕೊಂಡದ್ದು. ಅಂದರೆ ಅಡಿಗರು ಮತ್ತು ಗೋಕಾಕರೂ, ಇಬ್ಬರೂ ಒಂದೇ ಸಂಸ್ಕೃತಿಯ ಒಳಗಿನವರು. ಈ ಅರ್ಥದಲ್ಲಿ ಗೋಕಾಕರಿಗೆ ಹೇಗೆ ನವೋದಯದ ಜೊತೆ ಮೂಲಭೂತ ಜಗಳವಿರಲಿಲ್ಲವೊ, ಹಾಗೆಯೇ ಅಡಿಗರಿಗೂ ಇರಲಿಲ್ಲ. ತಾತ್ವಿಕವಾಗಿ ಇಬ್ಬರೂ ಸಹಯಾತ್ರಿಕರು." ಆದರೂ ಅಡಿಗರು ನೆಲೆಯೂರಿ ನಿಂತರು. 'ಅಡಿಗ ಯುಗ'ವಾಯಿತು.

ಅಡಿಗರ ಕಾವ್ಯದಲ್ಲಿ ಕಾಣಿಸಿಕೊಳ್ಳುವ ಮನುಷ್ಯ ಆಧುನಿಕ ಸಂವೇದನೆಯುಳ್ಳವನು. ಅದು ಈ ಶತಮಾನದ ಸ್ವಾತಂತ್ರ್ಯೋತ್ತರ ಭಾರತದ ಸಂವೇದನಾಶೀಲನು ಸ್ವಾತಂತ್ರ್ಯಾನಂತರದ ಒಟ್ಟು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಾಸ್ತವ ನೆಲೆಗಳನ್ನು ಶೋಧಿಸುವ ಗುಣ ಅಡಿಗರ ಕಾವ್ಯ ಮಾಡಿದಂತೆ ಅವರ ಸಮಕಾಲೀನರ ಕಾವ್ಯಕ್ಕೆ ದಕ್ಕಲಿಲ್ಲ. ರಾಜಕೀಯ, ಸಾಮಾಜಿಕ ವಾಸ್ತವ ಅವರ ಕಾವ್ಯಕ್ಕೆ ದಕ್ಕಿದ ಪರಿಧಿ ಅಡಿಗರ ಪ್ರತಿಭಾಶಕ್ತಿಯನ್ನು ಗುರುತಿಸುತ್ತದೆ. ಈಗಾಗಲೇ ಒಪ್ಪಿಕೊಂಡಿರುವ ಸನಾತನ ಮೌಲ್ಯಗಳನ್ನು ಸಂಪ್ರದಾಯವನ್ನು ಒಪ್ಪಿಕೊಳ್ಳದ, ಆರಾಧಿಸದ ಮನುಷ್ಯ ಒರೆಗೆಹಚ್ಚಿ ನೋಡುವ ಸ್ವಭಾವವುಳ್ಳ ಈ ಮನುಷ್ಯ ಸನಾತನ ಮೌಲ್ಯಗಳನ್ನು ಸಂಪ್ರದಾಯಗಳನ್ನು ಪ್ರಖರ ವೈಚಾರಿಕತೆಯಿಂದ ನೋಡಿ ತಿರಸ್ಕರಿಸುವ ಸಾಮರ್ಥ್ಯವುಳ್ಳ ಮನುಷ್ಯನೂ ಅಲ್ಲ. ಭಾರತೀಯ ಸಾಮಾಜಿಕ, ಧಾರ್ಮಿಕ ಹಿನ್ನೆಲೆಯುಳ್ಳ ಈ ಮನುಷ್ಯ ತನ್ನ ಸಮಕಾಲೀನ ಅಗತ್ಯಕ್ಕೆ ತಕ್ಕಂತೆ ಆ ಸನಾತನ ಮೌಲ್ಯಗಳನ್ನು ನಂಬಿಕೆಗಳನ್ನು ಸೂಕ್ತ ರೀತಿಯಲ್ಲಿ

ಅಳವಡಿಸಿಕೊಳ್ಳಬೇಕೆಂಬ ಬಲವಾದ ಆಸಕ್ತಿಯುಳ್ಳವನು. ತನ್ನನ್ನು ಶೋಧಿಸಿಕೊಳ್ಳುವ, ಆತ್ಮ ವಿಶ್ಲೇಷಣೆಯ ಪ್ರತೀಕದಂತೆ ಬರುವ ಕೆಲವು ಕ್ರಿಯೆಗಳು ಈ ಮನುಷ್ಯನಲ್ಲಿವೆ. ಹೋರಾಟ ಮಾಡುವ, ಎಲ್ಲದರ ಬಗ್ಗೆ ಕಾಲುಕೆದರುವ ಬಂಡಾಯಗಾರ, ವ್ಯಂಗ್ಯದ ಮೂಲಕ ಬದುಕಿನಲ್ಲಿರುವ ಎಲ್ಲ ರೀತಿಯ ಶಕ್ತಿಗಳ ವಿರುದ್ಧವೂ ಈ ಮನುಷ್ಯ ದನಿ ತೆಗೆಯುತ್ತಾನೆ. ಹತ್ತರೊಳಗೊಂದಾಗದ ಅನನ್ಯತೆಯನ್ನು ಪಡೆಯುವ ವಿಶಿಷ್ಟ ಸ್ವಭಾವದ ಮನುಷ್ಯ ಅಸ್ವಸ್ಥತೆ, ದುರ್ಬಲ, ವಿಕ್ಷಿಪ್ತತೆ ಮುಂತಾದ ಗುಣವುಳ್ಳವರು ನವ್ಯ ಸಾಹಿತ್ಯದಲ್ಲಿ ಮುಂದೆ ಹುಟ್ಟಿಕೊಂಡರಾದರೂ ಅಡಿಗರ ಈ ಮನುಷ್ಯ ಈ ಅಂಶಗಳಿಂದ ದೂರವಾಗಿದ್ದಾನೆ. "ಆಧುನಿಕ ಮಾನವನ ಸಂಘರ್ಷ ಸ್ಥಿತಿ ಈ ಸಂಘರ್ಷ ಭೂಮಿ ಆಕಾಶಗಳ ಸೆಳೆತಕ್ಕೆ ಸಿಕ್ಕ, ದೇಹ ಮನಸ್ಸು ಘರ್ಷಣೆಗೆ ಸಿಕ್ಕ, ಆದರ್ಶ ವಾಸ್ತವಗಳ ನಡುವಿನ ತಿಕ್ಕಾಟಕ್ಕೆ ಸಿಕ್ಕ ಮಾನವನ ಸ್ಥಿತಿಯೂ ಆಗಿದೆ. ಸಾಮಾನ್ಯ ಮನುಷ್ಯನಾಗಿ ಹುಟ್ಟಿ ಪುರುಷೋತ್ತಮನಾಗಿ ಬೆಳೆದ ರಾಮನ ಬದುಕಿನಲ್ಲಿ ಆತನ ವ್ಯಕ್ತಿತ್ವ ವಿಕಾಸದಲ್ಲಿ ಆಸಕ್ತಿ ಹೊಂದಿದ ಅಡಿಗರಿಗೆ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಾನೇ ವಿಕಾಸವಾಗಬೇಕು. ಈ ನೆಲದ ಪ್ರಜ್ಞೆ ಬೆಳೆದು ದೊಡ್ಡವನಾಗಬೇಕು. ಉನ್ನತ ಚೇತನವಾಗಿ ರೂಪಗೊಳ್ಳಬೇಕು."[೭] ಆದರೂ ಇದೆಲ್ಲ ಕಾವ್ಯದಲ್ಲಿ ಮುಖಕ್ಕೆ ಹೊಡೆದಂತೆ ಕಂಡರೂ ಮೂಲತಃ ಅಡಿಗರು ಮೇಲ್‌ಸ್ತರದ ಸಂಪ್ರದಾಯ ವಾದಿಗಳು.

ಇಲ್ಲಿ ಮುಖ್ಯವಾಗಿ ಒಂದು ಅಂಶವನ್ನು ಗಮನಿಸಬೇಕು. ಈ ಆಧುನಿಕ ಸಂವೇದನೆ ಎನ್ನುವುದು ಕೇವಲ ಕಾವ್ಯಗಳಲ್ಲಿ ಮಾತ್ರ ಕಾಣಲಿಲ್ಲ. ಕಥೆ, ಕಾದಂಬರಿಗಳಲ್ಲೂ ಕಾಣಿಸಿಕೊಳ್ಳತೊಡಗಿತು. ನವ್ಯತೆ ಕಥಾ ಸಾಹಿತ್ಯದಲ್ಲಿ ಸ್ಪಷ್ಟತೆಯ ರೂಪವನ್ನು ಪಡೆದುಕೊಂಡದ್ದು, ದೇಸಾಯಿ, ಚಿತ್ತಾಲ, ಲಂಕೇಶ, ಅನಂತಮೂರ್ತಿ ಹಾಗೂ ತೇಜಸ್ವಿ ಮೊದಲಾದವರ ಪ್ರವೇಶದ ನಂತರ. ಈ ಎಲ್ಲ ಲೇಖಕರ ದೃಷ್ಟಿ ಧೋರಣೆ, ಜೀವನ ವಿಧಾನ, ಮೌಲ್ಯಗಳು ಒಂದೇ ತೆರನಾಗಿ ಕಂಡರೂ ಕೆಲವೊಂದು ಅಂಶಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಬಹುದು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಬದುಕನ್ನು ವಿಶ್ಲೇಷಣೆ ಮಾಡಿದ್ದಾರೆ.

ನವ್ಯ ಸಾಹಿತ್ಯದಲ್ಲಿ ಚಿತ್ತಾಲರ ಹೆಸರು ಪ್ರಧಾನವಾದದ್ದು. ಅವರ ಕಥೆಗಳು ಕಾದಂಬರಿಗಳ ಜಗತ್ತು ಬೆರಗುಗೊಳಿಸುವಂಥದ್ದು. ಆಧುನಿಕ ಜಗತ್ತಿನ ಕ್ರೌರ್ಯ, ಹಿಂಸೆ ಮತ್ತು ಅಮಾನವೀಯ ಮನುಷ್ಯರ ಪ್ರಪಂಚವನ್ನು ಅವರ ಸಾಹಿತ್ಯದಿಂದ ಅರಿಯಬಹುದಾಗಿದೆ. ಚಿತ್ತಾಲರ ಬೇರುಗಳು ಹನೇಹಳ್ಳಿಯಲ್ಲಿವೆ. ಸಂಪನ್ನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದಿದ್ದ ಅವರು ಬದುಕನ್ನು ನಿರ್ವಹಿಸುತ್ತಿದುದು ಮುಂಬಯಿಯಲ್ಲಿ. ಹೀಗಾಗಿ ಚಿತ್ತಾಲರ ಅನ್ವೇಷಣೆ ಈ ಎರಡರ ಮುಖಾಮುಖಿಯಲ್ಲಿದೆ, ಮೊದಮೊದಲು ಮಾಸ್ತಿಯವರ ಹಾದಿಯಲ್ಲಿದ್ದ ಅವರ ಬರವಣಿಗೆಯ ಸ್ವರೂಪ ಬಹುಬೇಗನೆ ಬೇರೆ ದಾರಿ ಹಿಡಿಯಿತು. ಮುಂಬಯಿ ಎಂಬ ಅತ್ಯಾಧುನಿಕ ನಗರವನ್ನು ಸೇರಿದ ಮೇಲೆ, ಅವರ ಸಾಹಿತ್ಯದಲ್ಲಿ ಕಾಣುವ ಮನುಷ್ಯನು

ಆ ಅತ್ಯಾಧುನಿಕ ನಗರದಲ್ಲಿ ಎದುರಿಸುವ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಹುಟ್ಟಿಕೊಂಡ ಸಂಘರ್ಷಗಳು ಅವನ ಸ್ವರೂಪವನ್ನು ಬದಲಿಸತೊಡಗುತ್ತವೆ. ಇದಕ್ಕೆ ಚಿತ್ತಾಲರ ಜೀವನಾನುಭವವೂ ಕಾರಣವಾಗಿರಬೇಕು.

"ನವಮಾನವತಾವಾದದ ಮಾರ್ಗವಾಗಿ ಮಾರ್ಕ್ಸ್, ಎರಿಕಫ್ರಾಂ, ಹರ್ಕ್ರ್ಲೆ ಎಡಿಂಗ್‌ಟನ್, ಫ್ರಾಯ್ಡ್, ಎಡ್ಲೆರ್ ಮುಂತಾದ ಹಲವು ಧೀಮಂತ ಚಿಂತಕರ ವಿಚಾರಗಳಿಗೆ ತಮ್ಮ ಮನಸ್ಸನ್ನು ಅನಾವರಣ ಮಾಡಿಕೊಂಡಿರುವ ಇವುಗಳ ಜೊತೆಗೆ ತಮ್ಮ ಆಯ್ಕೆಯ ವಿಷಯವಾದ ಪ್ಲಾಸ್ಟಿಕ್ ತಂತ್ರವಿಜ್ಞಾನದಲ್ಲಿ ಪಡೆದ ಪದವಿಯು ಬೇಕ್‌ಲೈಟ್ ಹೈಲಂ ಸಂಸ್ಥೆಯಲ್ಲಿ ಕೆಲಸ ದೊರಕಿಸಿಕೊಟ್ಟಿತು. ಅದೇ ಸಂಸ್ಥೆಯಲ್ಲಿ ಮೂವತ್ತು ವರ್ಷಗಳಿಗೂ ಮೀರಿದ ಸುದೀರ್ಘ ದುಡಿಮೆಯು ಆಧುನಿಕ ಜಗತ್ತಿನ ಸ್ವರೂಪವನ್ನೇ ನಿಯಂತ್ರಿಸುತ್ತಿರುವ ಬಂಡವಾಳಶಾಹಿ, ಕೈಗಾರಿಕಾ ಜಗತ್ತಿನ ನಿಕಟ ಪರಿಚಯವನ್ನು ತಂದುಕೊಟ್ಟಿತು. ಹನೇಹಳ್ಳಿಯ ಹಸಿರು ತುಂಬಿದ ಪರಿಸರದಿಂದ ಸೃಜನಶೀಲ ಚೈತನ್ಯದ ಬುತ್ತಿಹೊತ್ತು ತಂದ ತರುಣನಿಗೆ ಮುಂಬಯಿಯೆಂಬ ರಾಕ್ಷಸನೊಂದಿಗೆ ಅದು ಮುಖಾಮುಖಿ ಹುಟ್ಟಿಸಿದ ತಲ್ಲಣಗಳು ಅವರ ಬರೆವಣಿಗೆಯ ಹಲವು ಕಾಳಜಿಗಳಿಗೆ ಕಾರಣವಾದವು."[೮]

ಸಾಮಾನ್ಯವಾಗಿ ನವ್ಯಸಾಹಿತ್ಯದಲ್ಲಿ ಕಾಣುವ ಅಂತರ್ಮುಖಿ ಪ್ರಜ್ಞೆಯ ವಿಕ್ಷಿಪ್ತ, ದುರ್ಬಲ ನಾಯಕರು ಚಿತ್ತಾಲರ ಕಥಾ ಸಾಹಿತ್ಯದಲ್ಲಿ ಕಾಣುತ್ತಾರೆ. ಆಧುನಿಕ ಜಗತ್ತಿನ ಸಂಬಂಧಿಯಾದ ಮನುಷ್ಯನು 'ಪೀಜಿ', 'ಸಂದರ್ಶನ', 'ಖಾಲಿಕೋಣೆ', 'ಅಪರಿಚಿತರು' ಹಾಗೂ ಮೊದಲಾದ ಕಥೆಗಳಲ್ಲಿ ಕಾಣಿಸಿ ಕೊಳ್ಳುತ್ತಾನೆ.

'ಅಪರಿಚಿತ'ರು ಕಥೆಯಲ್ಲಿ ರಾಮಕೃಷ್ಣ, ಜಾನಕಿ ನವದಂಪತಿಗಳು, ಯಾವ ಅಡ್ಡಿ ಆತಂಕಗಳಿಲ್ಲದೆ ನೆಮ್ಮದಿಯಿಂದ ದಿನಗಳನ್ನು ಕಳೆಯುವ ಹಂಬಲ. ಮುಂಬಯಿಯಲ್ಲಿರುವ ಅವರು ಬರುವ ಅತಿಥಿಗಳನ್ನು ಉಪಚರಿಸುವುದರಲ್ಲಿ ಕಾಲಹರಣವಾಗಿ ಸುಸ್ತಾಗುವ ಸಂದರ್ಭಗಳು ಬರುತ್ತವೆ. ತಮ್ಮ ತಮ್ಮ ವ್ಯಕ್ತಿತ್ವಗಳನ್ನು ಕಂಡುಕೊಳ್ಳುವ ಸ್ಥಿತಿಯಿಂದ ವಂಚಿತರಾಗುವ ಈ ದಂಪತಿಗಳು ಇದ್ದಕ್ಕಿದ್ದ ಹಾಗೆ ಒಂದು ದಿನ 'ಅಪರಿಚಿತರ' ಆಗಮನದಿಂದ ಗೊಂದಲಕ್ಕೀಡಾಗುತ್ತಾರೆ. ಅವರ ದರ್ಪಕ್ಕೆ ತಲ್ಲಣಗೊಂಡು ಅವರ ಕೈಗೊಂಬೆಯಾಗಿ ಬಿಡುತ್ತಾರೆ. ಈ ಸಂದರ್ಭದಲ್ಲಿ ಈ ದಂಪತಿಗಳ ನೈತಿಕ ಬೆಂಬಲವಾಗಲಿ, ಮನಸ್ಥೈರ್ಯವಾಗಲಿ ಯಾವುದೂ ಕೆಲಸ ಮಾಡದೆ ಹಿಂಸೆಗೆ ಗುರಿಯಾಗುತ್ತಾರೆ. ಮನೆಗೆ ಬಂದ ಅಪರಿಚಿತರನ್ನು ನೀವ್ಯಾರು ಎಂದು ಕೇಳುವುದು ಅಸಂಸ್ಕೃತಿಯ ವರ್ತನೆಯಾಗಬಹುದೆಂದು ಸುಮ್ಮನಿದ್ದರೆ, ಅವರ ದರ್ಪವನ್ನು ಅನುಭವಿಸುವುದು ಅನಿವಾರ್ಯ ಪರಿಸ್ಥಿತಿ. ಸ್ಟೀಲ್ ರೋಲರ್ ದೊಡ್ಡ ಕಲ್ಲೊಂದನ್ನು ಸಮಮಾಡುವುದು ಕಂಡು ಎಂಥದೋ ಸತ್ಯ ಕಂಡುಕೊಳ್ಳುತ್ತಾನೆ.

'ಪೀಜೀ' ಕಥೆಯ ನಾಯಕ ಅನಂತ ಒಬ್ಬ ನೌಕರ. ಹಳ್ಳಿ ಬಿಟ್ಟು ಬಂದವನು. ಮುಂಬಯಿಯಂಥ ನಗರದಲ್ಲಿ ಅವನಿಗೆ ಸಮಾಧಾನವೇ ಇಲ್ಲ. ಇರಲು ಮನೆ ಸಿಗುವುದಿಲ್ಲ. ಆಫೀಸಿಗೆ ಹೋಗಲು ಬಸ್ಸು ಸಿಗುವುದಿಲ್ಲ. ಇನ್ನಾರೋ ಮನೆಯಲ್ಲಿ ಪೇಯಿಂಗ್ ಗೆಸ್ಟ್ ಆಗಿರುವುದು. ಹೀಗೆ ಅಸ್ಥಿರತೆ ಅವನಲ್ಲಿ ಮನೆಮಾಡಿಕೊಂಡಿರುವಾಗ ಗೆಳೆಯ ಗಜಾನನ ಭೇಟಿಯಾಗುತ್ತಾನೆ. ಅವನಲ್ಲಿರುವ ಜೀವನೋತ್ಸಾಹ ಕಂಡು ಮತ್ತಷ್ಟು ಕುಂದುತ್ತಾನೆ. ಇನ್ನಾರನ್ನೋ ನೋಡಿದಾಗ ತನ್ನ ಭೂತಕಾಲ ನೆನೆಸಿಕೊಂಡು ಸಂಕಟ ಪಡುತ್ತಾನೆ. ಮನೆಗೆ ಬಂದು ಮಲಗಿದರೆ ಅಲ್ಲಿ ಅರವಿಂದ ಮತ್ತು ಅವನ ಹೆಂಡತಿಯ ಸರಸದ ಮಾತುಗಳು ಕೇಳಿಸಿಕೊಳ್ಳುವುದು ತಪ್ಪೆಂದು ಪೇಚಾಡುತ್ತಾನೆ. ಅವರೇ ಇವನನ್ನು ಮನೆಯಿಂದ ಓಡಿಸುವುದು ಗೊತ್ತಾದಾಗ ಅಪ್ಪ, ಅಮ್ಮರನ್ನು ನೆನೆಸಿಕೊಂಡು ಅಳತೊಡಗುತ್ತಾನೆ. ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ಬಿಡಬೇಕು ಎಂಬ ಅಸಮಾಧಾನವೇ ಸ್ಥಾಯಿ ಮಾಡಿಕೊಂಡು ಯಾಂತ್ರಿಕ ಬದುಕು ಸಾಗುವ ಪರಿಯೇ ಆಧುನಿಕ ಜಗತ್ತಿನ ರೀತಿಯೇ? ಅಸಂತ, ಆಧುನಿಕ ಜಗತ್ತಿನ ಹುಡುಗ.

'ಖಾಲಿಕೋಣೆ' ಕಥೆಯಲ್ಲಿ ನಿರ್ಮಲೆ, ತನ್ನೆಲ್ಲ ಆಸೆಗಳನ್ನು ಹೊತ್ತು ಮುಂಬಯಿಗೆ ಬಂದು ಅಕ್ಕನ ಮನೆಯಲ್ಲಿರುವ ಹುಡುಗಿಯ ಯಾಂತ್ರಿಕ ಬದುಕನ್ನು ಆದರಿಸುವ ಹೊತ್ತಿಗೆ, ಪಕ್ಕದಲ್ಲಿ ಒಂದು ಕೋಣೆ ಖಾಲಿಯಾಗುತ್ತದೆ. ಅಲ್ಲಿಗೊಬ್ಬ ನವತರುಣ ಬರುತ್ತಾನೆಂಬ ವಿಚಾರ ಅವಳ ಗೆಳತಿಯಿಂದ ತಿಳಿದಾಗ, ಅವಳ ಕನಸುಗಳು ಅರಳತೊಡಗುತ್ತವೆ. ಮನಸ್ಸಿಗೆ ಕಾವು ಮೂಡುತ್ತದೆ. ಹರೆಯದ ನಿರ್ಮಲೆಯ ಆ ಕೋಣೆಗೆ ಬರಲಿರುವ ತರುಣ ಅನಂತನನ್ನು ನೆನೆನೆನೆದು ನೂರಾರು ಹಗಲುಗನಸುಗಳ ಹಂದರದಲ್ಲಿ ಕುಳಿತು ಬಿಡುತ್ತಾಳೆ. ವಾಸ್ತವ ಜಗತ್ತಿನ ಹಂಗನ್ನೇ ಮರೆತಂತಾಗುತ್ತದೆ. ಕೊನೆಗೆ ಅದೇ ಗೆಳತಿಯಿಂದ, ಅನಂತನಿಗೆ paralysis attac ಆಗಿದೇ ಎಂದು ಹೇಳಿದಾಗ ಕಟ್ಟಿದ ತನ್ನೆಲ್ಲ ಕನಸುಗಳು ಮುರಿದುಬಿದ್ದು ಆಘಾತಕ್ಕೀಡಾಗುತ್ತಾಳೆ. ಅವಳು ಕಾಣುವ ಕನಸು ಮತ್ತು ನಂತರದ ಮನಸ್ಥಿತಿ ಕಥೆಯಲ್ಲಿ ಜೀವಂತವಾಗಿ ಬಂದಿದೆ. 'ಖಾಲಿಕೋಣೆ' ಅವಳ ಮನಸ್ಸಿನ ಸಂಕೇತವಾಗಿ ಉಳಿಯುತ್ತದೆ.

'ಸಂದರ್ಶನ' ಕಥೆಯ ಮಾಧವ ಸ್ವಂತ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂಬ ಮನಸ್ಸುಳ್ಳವನು. ಆದರೆ ಅದ್ಯಾವುದು ಸಾಧ್ಯವಾಗುವುದಿಲ್ಲ. ಸೇಲ್ಸ್‌ಮ್ಯಾನ್ ಹುದ್ದೆಗಾಗಿ 'ಸಂದರ್ಶನ'ಕ್ಕೆ ಹೋಗಬೇಕಾಗಿದೆ. ಅಲ್ಲಿಯೇ ಅವನಿಗಿಷ್ಟವಿಲ್ಲ. ಅಣ್ಣನ ಒತ್ತಾಯಕ್ಕೆ ಹೋಗಬೇಕಾಗಿದೆ. ಅವನಿಗೆ ಆ ಹುದ್ದೆ ಕೊಡಿಸಬೇಕಾದರೆ ಅಣ್ಣ ಬೇಕಾದಷ್ಟು ಕಷ್ಟಪಡುತ್ತಿದ್ದಾನೆ. ಸಂದರ್ಶನಕ್ಕೆ ಹೋಗಬೇಕಾದರೆ ಕೋಟು ಟೈ ಹಾಕಿಕೊಂಡೇ ಹೋಗಬೇಕು. ಭರ್ಜರಿ ಕಾಣಬೇಕು. ಮಾಧವನಿಗೆ ಅದೊಂದು ಮುಜುಗರದ, ತನಗಾಗದ ಪ್ರಶ್ನೆಯ ಸಂದರ್ಭ. ಡ್ರೆಸ್ ಚೆನ್ನಾಗಿದ್ದರೆ ನೌಕರಿ ಕೊಡುತ್ತಾರೆಯೆ? ನಮ್ಮ ಬುದ್ಧಿಮತ್ತೆಗೆ ಯಾವ ಬೆಲೆಯಿಲ್ಲವೆ ಇದು ಅವನ ಗೊಂದಲ ಹಣಖರ್ಚುಮಾಡುವಾಗಲೂ ಅದು ತನ್ನದಲ್ಲ ಅಣ್ಣನದೆಂದು, ಹೀಗೆ ಅಸ್ವಸ್ಥತೆ, ಏಕಾಕೀತನ, ಭೀತಿ, ಇಂಥ ಮಾನಸಿಕ ಅವಸ್ಥೆಯ ನಾಯಕರು ಚಿತ್ತಾಲರ ಕಥೆಗಳಲ್ಲಿ ಬರುತ್ತಾರೆ.

"ನಾಗರಿಕ ಒತ್ತಡಗಳಿಗೆ ಸಿಕ್ಕಿ ವ್ಯಕ್ತಿ ಅನುಭವಿಸುವ ನೋವಿನ ಅನೇಕ ಪ್ರಕಾರಗಳನ್ನು ಪ್ರತ್ಯೇಕತೆ, ಅಸ್ವಸ್ಥತೆ, ಪರಕೀಯತೆ, ಲೈಂಗಿಕ ಅತೃಪ್ತಿ, ಬೇಸರ, ನೀಚಭಾವ, ದ್ವಿಧಾವೃತ್ತಿ ಇತ್ಯಾದಿಗಳನ್ನು"[೯] ಕಥೆಯ ನಾಯಕರಲ್ಲಿ ಕಾಣುತ್ತೇವೆ. ಚಿತ್ತಾಲರು ಚಿತ್ರಿಸಬೇಕಾದದು ಇಲ್ಲವೆಂದು ಅನಿಸುತ್ತದೆ. ಕಥೆಗಾರನು ಕಂಡ ವಿಷಾದ ಮಡುಗಟ್ಟಿದೆಯೇ ಹೊರತು 'ಉಂಡ' ವಿಷಾದವಲ್ಲ"[೧೦] ಚಿತ್ತಾಲರ ನಿಜವಾದ ಆಸ್ಥೆಯಿರುವುದು ಆಟ, ಸೆರೆ ಮುಂತಾದ ಕಥೆಗಳಲ್ಲಿ ಮತ್ತು ಇತ್ತೀಚಿನ ಕಥೆಗಳಲ್ಲಿ. ಆದರೆ ನವ್ಯದ ಭರಾಟೆಯಲ್ಲಿ ಚಿತ್ತಾಲರು ಒತ್ತಡಕ್ಕೆ ಬಂದರೇನೋ, ಆದರೂ ಈ ಕಥೆಗಳ ಸಫಲತೆ ಇರುವುದು ಜಿ.ಎಸ್.ಆಮೂರರು ಹೇಳಿರುವಂತೆ ಮನೋವೈಜ್ಞಾನಿಕ ಆಸೆಗಳಿಗೆ ಕಲಾತ್ಮಕ ಶರೀರವನ್ನು ದೊರಕಿಸುವ ಮೂಲಕ.

ಅದರ ಶಕ್ತಿಯಿರುವುದು 'ಶಿಕಾರಿ' ಕಾದಂಬರಿಯಲ್ಲಿ ಕನ್ನಡ ಕಾದಂಬರಿ ಸಂದರ್ಭದಲ್ಲಿ ಶಿಕಾರಿಗೆ ಪ್ರಧಾನವಾದ ಸ್ಥಾನವಿದೆ. 'ಚಿತ್ತಾಲರ ನಾಗಪ್ಪ' ಎನ್ನುವಷ್ಟರ ಮಟ್ಟಿಗೆ ಜೀವಂತ ಪಾತ್ರವೊಂದನ್ನು ಸೃಷ್ಟಿಸಿದ್ದಾರೆ. ಕಾದಂಬರಿಯ ಪರಿಸರ ಮುಂಬಯಿ ನಗರ. ಇದರ ನಾಯಕ ನಾಗಪ್ಪ ಹನೇಹಳ್ಳಿಯವನಾದರೂ ಆಧುನಿಕ ನಗರವಾದ ಮುಂಬಯಿಯಲ್ಲಿ ಒಬ್ಬ ನೌಕರ. ಅದು ಅಮೇರಿಕನ್ ಮ್ಯಾನೇಜ್‌ಮೆಂಟಿನ ಕಂಪನಿಯಲ್ಲಿ ನಾಗಪ್ಪನ ಬದುಕು ಸುಗಮವಾಗಿ ಸಾಗಿ ಬಂದುದ್ದಲ್ಲ. ದುರಂತಗಳ ಹಾದಿಯಲ್ಲಿದ್ದವನು. ಅಪ್ಪ ಬಾವಿಯಲ್ಲಿ ಬಿದ್ದು ಸತ್ತ. ಅಣ್ಣನೊಬ್ಬ ಇದ್ದುದು ನಿಜ. ನೋಡಲು ಇಂದಿಗೂ ಆಗಿಲ್ಲ. ಮುಂಬಯಿ ಎಂಬ ರಾಕ್ಷಸ ನಗರದ ಗದ್ದಲದಲ್ಲಿ ತಂಗಿ ಕಳೆದು ಹೋದವಳು ಸಿಕ್ಕದೆ, ತಂದೆಯಿಂದಲೇ ಕೊಲೆಗೆ ಈಡಾಗುವ ಸಾಧ್ಯತೆಗೆ ಸಿಕ್ಕ ಸಂದರ್ಭಗಳು. ನಾಗಪ್ಪ ಆಧುನಿಕ ಜಗತ್ತಿನಲ್ಲಿದ್ದರೂ ಅವನ ನಂಬುಗೆ ಮೌಲ್ಯಗಳೆಲ್ಲ ಹನೇಹಳ್ಳಿಯಿಂದಲೇ ಬಂದವುಗಳಾಗಿದ್ದವು. ಅವನು ವಿಜ್ಞಾನದ ವಿದ್ಯಾರ್ಥಿ. ಅವನ ಒಲವುಗಳಲ್ಲಿ ಸಾಹಿತ್ಯ ಮನೋವಿಜ್ಞಾನ, ತತ್ವಜ್ಞಾನ ಸೇರಿಕೊಂಡವುಗಳು. "ತಂತ್ರವಿಜ್ಞಾನದ ಪ್ರಾವೀಣ್ಯದಲ್ಲಿ ನಾಗಪ್ಪನನ್ನು ಸರಿಗಟ್ಟುವ ಇನ್ನೊಬ್ಬ ಇಡೀ ಕಾರ್ಖಾನೆಯಲ್ಲೇ ಇಲ್ಲ ಎನ್ನುವ ಪ್ರತೀತಿ ಇದ್ದರೂನೂ ಈತ ತುಂಬ ಭಾವನಾಪ್ರಧಾನನಾದವನು. ವ್ಯವಹಾರಜ್ಞಾನವಿಲ್ಲದವನು ಎನ್ನುವ ಅಭಿಪ್ರಾಯವೊಂದು ಮೇಲಿನ ಅಧಿಕಾರಿಗಳಲ್ಲಿ ನೆಲೆಗೊಂಡಿತ್ತು."(ಪು.೬೬) ಅಧಿಕಾರಶಾಹಿ, ಬಂಡವಾಳಶಾಹಿ ಒಡಿತದಲ್ಲಿ ನಾಗಪ್ಪನಂಥವರು ಜೀವಿಸುವುದೇ ಕಷ್ಟವಾಗುತ್ತದೆ. ಅಷ್ಟೇ ಅಲ್ಲ ಹಚ್ಚಹಸುರಿನ ತನ್ನೂರು ಬಿಟ್ಟು ಬಂದ ಆತನಿಗೆ ಮುಂಬಯಿ ಕಂಡ ರೀತಿ ಹೀಗಿದೆ. "ಮುಂಬಯಿಯಂಥ ನಗರಗಳಲ್ಲಂತು ದೇವರು ಹುಟ್ಟಿಸಿದ ಸೃಷ್ಟಿ ಕಣ್ಣಿಗೆ ಬೀಳುವುದೇ ಕಷ್ಟವಾಗಿದೆ. ಎಲ್ಲೆಲ್ಲೂ ಇಂದಿನ ಮಾನವ ತನ್ನ ಅಹಂಕಾರದ ಮೇಲೆ, ಸ್ವಾರ್ಥದ ಮೇಲೆ ನಿಂತ ನಿರ್ಜೀವ ವಸ್ತುಗಳಿಂದಲೇ ಸುತ್ತುವರಿದಿದ್ದಾನೆ. ಆದ್ದರಿಂದಲೇ ತನ್ನೊಬ್ಬನ ಸ್ವಾರ್ಥಕ್ಕಾಗಿ ಉಳಿದವರನ್ನು ಅವರೂ ನಿರ್ಜೀವ ವಸ್ತುಗಳೇ ಎನ್ನುವ ಹಾಗೆ ಉಪಯೋಗಿಸಿ ಕೊಳ್ಳಲು ತೊಡಗಿದ್ದಾನೆ."(ಪು.೬೫)

ಇಂಥ ಭೀಕರ ನಗರ ಮತ್ತು ಮನುಷ್ಯರ ನಡುವೆ ನಾಗಪ್ಪನಿದ್ದಾನೆ. ಒಂದು ಗಂಭೀರ ಆಪಾದನೆಯ ಕಾರಣದಿಂದ ನಿಮ್ಮನ್ನು ಕೂಡಲೇ ಸಸ್ಪೆಂಡ್ ಮಾಡಬೇಕಾಗಿ ಬಂದಿತು. ಯಾಕೆ ಎನ್ನುವುದನ್ನು ಆದಷ್ಟು, ಬೇಗ ತಿಳಿಸುತ್ತೇವೆ. ಆದರೆ ಆಫೀಸಿಗೆ ಬರಕೂಡದು ಅಮೇರಿಕ ಮ್ಯಾನೇಜ್‌ಮೆಂಟಿನ ಕಂಪನಿಯೊಂದರಲ್ಲಿ ಆರ್ ಅಂಡ್ ಡಿ ಮ್ಯಾನೇಜರ್‌ನಾಗಿದ್ದ ನಾಗಪ್ಪನ ಮೇಲೆ ಈ ರೀತಿಯ ನೆವದಿಂದ ದೂರವಿಡುತ್ತಾರೆ. ಇಲ್ಲಿಂದ ನಾಗಪ್ಪನ ಬವಣೆ ಸುರುವಾಗುತ್ತದೆ. ಒಂದು ದಿನ ತನಿಖೆಯೂ ಆಗುತ್ತದೆ. ಅದರ ಪರಿಣಾಮವಾಗಿ ಕೆಲಸವನ್ನು ಬಿಡುತ್ತಾನೆ. ಈ ನಡುವೆ ಅದು ತನಗಾದ ಈ ಅವಸ್ಥೆಗೆ ಕಾರಣಗಳನ್ನು ಹುಡುಕಲು ಮಾನಸಿಕ ಧೈರ್ಯ ಮತ್ತು ನೈತಿಕ ಬೆಂಬಲಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಾನೆ. ಬಿ.ಎಂ.ಡಿ.ಫಿರೋಜ್, ಶ್ರೀನಿವಾಸ (ಹಳೆಯ ವೈರಿ ತನ್ನ ಊರಿನವನು ತನ್ನ ಜಾತಿಯವನು) ಅರ್ಜುನರಾವ್ (ಪತ್ರಕರ್ತ) ಮೇರಿ, ಡಯಾನಾ, ಥ್ರಿಟರ್ ಇವರೆಲ್ಲರ ಕಾರಸ್ಥಾನದಿಂದ ನಾಗಪ್ಪನಿಗೆ ಆ ದುರ್ಗತಿ ಬಂದದ್ದೆಂದು ತಿಳಿಯುತ್ತಾನೆ. ಅವನ ಸಂಘರ್ಷದ ಕಾವು ಎಲ್ಲಿಯವರೆಗೆ ಇರುತ್ತದೆ ಎಂದರೆ ಆತ ನಂಬಿದ ಮೇರಿಯು ಆ ಕಾರ್ಯಸ್ಥಾನದಲ್ಲಿದ್ದಾಳೆಂದು ತಿಳಿಯುವವರೆಗೆ ಸೀತಾರಾಮ್, ರಾಣಿ ಇವರೂ ಕೈ ಬಿಡುತ್ತಾರೆ. ಆದರೆ ನಾಗಪ್ಪ ಈ ವ್ಯವಸ್ಥೆಯ ಶೋಷಣೆಗೆ ಒಳಗಾಗುವ ಸಾಮಾನ್ಯ ವ್ಯಕ್ತಿಯ ಪ್ರತಿನಿಧಿಯಲ್ಲ. ಆ ವ್ಯವಸ್ಥೆಯ ಅಂಗವಾಗಿಯೇ ಇದ್ದು. ಅದು ಬೆಳೆಯಲಿಕ್ಕೆ ಭದ್ರವಾಗುವುದಕ್ಕೆ ಕಾರಣನಾಗಿ, ಈಗ ಅದರ ಮನಸ್ಸಿನಲ್ಲಿ ತಾನೇ ಸಿಕ್ಕಿಹಾಕಿಕೊಂಡಿರುವಂತವನು. ಅದು ಯಾವ ತಪ್ಪನ್ನು ಮಾಡದೆ.”[೧೧] ನಾಗಪ್ಪನಿಗೆ ಇಷ್ಟೆಲ್ಲ ಆದರೂ “ನನ್ನ ಮಟ್ಟಿಗೆ ಇನ್ನೂ ಕಂಡಿರದ ಅಣ್ಣನನ್ನು, ಕಾಣೆಯಾದ ತಂಗಿಯನ್ನು ಹುಡುಕಿ ತೆಗೆಯುವುದೇ ನನ್ನ ಇನ್ನು ಮುಂದಿನ ಆಯುಷ್ಯದ ಗುರಿಯಾಗಬೇಕು” ಎಂಬ ಹಂತವನ್ನು ತಲುಪುತ್ತಾನೆ. ಚಿತ್ತಾಲರ ಮನುಷ್ಯ, ಮನುಷ್ಯತ್ವವಿಲ್ಲದ ವ್ಯವಸ್ಥೆಯಲ್ಲಿ ಮುಖಹೀನ ನಗರಗಳ ವಿಷಿದ್ಧತೆಯ ನಡುವೆ ಒಳಿತನ್ನು ಹುಡುಕುವ ಪ್ರೀತಿಯನ್ನು ವ್ಯಕ್ತಪಡಿಸುವ ಸಾಹಸದಲ್ಲಿದ್ದಾನೆ.

ಇಪ್ಪತ್ತನೆಯ ಶತಮಾನದ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಲಂಕೇಶ್ ಒಬ್ಬ ಪ್ರಮುಖ ಶಕ್ತ ಸಾಹಿತಿ. ಅವರ ಸಾಹಿತ್ಯಕ್ಕೆ ಜೀವವಿದೆ, ಗತಿಯಿದೆ. ಅವರಿಗೆ ದಕ್ಕಿದ ಸಾಹಿತ್ಯಿಕ ಶಕ್ತಿಯಿಂದ ಅನನ್ಯ ರೀತಿಯಲ್ಲಿ ಸೃಷ್ಟಿಸುತ್ತ, ಆ ಶಕ್ತಿಗಿರುವ ಲಯವನ್ನು ಮುರಿಯುತ್ತ, ಮತ್ತೆ ಕಟ್ಟುತ್ತ ನಡೆದಿರುವ ಲಂಕೇಶ 'ಕೆರೆಯ ನೀರನು ಕೆರೆಗೆ ಚೆಲ್ಲಿ', 'ನಾನಲ್ಲ', 'ಬಿರುಕು' ಇವುಗಳ ಶಕ್ತಿಯೊಂದಾದರೆ, 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಮತ್ತು 'ಮುಸ್ಸಂಜೆಯ ಕಥಾಪ್ರಸಂಗ' ಇವುಗಳ ಶಕ್ತಿ ಬೇರೆಯಾದುದು. 'ಕಲ್ಲು ಕರಗುವ ಸಮಯ' ಕೃತಿಯ ಮೂಲಕ ಮತ್ತೊಂದು ಆಯಾಮದಲ್ಲಿ ನಡೆದಿದ್ದಾರೆ. ಮನುಷ್ಯನ ಒಳ ವ್ಯಕ್ತಿತ್ವವನ್ನು, ಹೊರ ವ್ಯಕ್ತಿತ್ವವನ್ನು ಬಹು ಸೂಕ್ಷ್ಮವಾಗಿ ಬಿಡಿಸಿ ಹಿಡಿಯುವ ರೀತಿ ಅನನ್ಯವಾದದ್ದು. ಆಳದಲ್ಲಿ ಅಡಗಿರುವ ಮನುಷ್ಯನ ಸ್ವಭಾವಗಳನ್ನು ದಿನನಿತ್ಯದ ಸಂಗತಿಗಳೊಂದಿಗೆ ಹೊರಗೆಡಹುವ ಸಾಮರ್ಥ್ಯ ಲಂಕೇಶರಿಗಿರುವಷ್ಟು ಮತ್ತೊಬ್ಬ ಸಾಹಿತಿಯಲ್ಲಿ ಕಾಣುವುದು ವಿರಳ. ಯಾವುದೇ ಸಂದರ್ಭದಲ್ಲಿ ಬರೆದರೂ ಲಂಕೇಶರ ಮನುಷ್ಯ ಎದ್ದು ಕಾಣುವಂಥವನು.

ಅವರ 'ಬಿರುಕು' ಕಾದಂಬರಿ ನವ್ಯ ಸಾಹಿತ್ಯ ಸಂದರ್ಭದಲ್ಲಿ ಬಂದದ್ದು. ಬೌದ್ಧಿಕ ಹಾಗೂ ನಗರ ಪರಿಸರವನ್ನು ಹೊಂದಿದ್ದರೂ ಅದರ ವ್ಯಕ್ತಿ ಬಸವರಾಜನ ಬೇರುಗಳು ಹಳ್ಳಿಯಲ್ಲಿವೆ. ತನ್ನ ಪರಿಸರದಿಂದ ತಪ್ಪಿಸಿಕೊಂಡವನು ಆತ ಅಲ್ಲಿಂದ ಕಾಲಿಟ್ಟದ್ದು ಬೇರುಗಳಿಲ್ಲದ ಜವಾಬ್ದಾರಿಗಳಿಲ್ಲದ, ಯಾಂತ್ರಿಕ ವ್ಯಕ್ತಿಗಳನ್ನು ಸಂಧಿಸುತ್ತಾನೆ. ಪ್ರೊ.ರಂಗಯ್ಯ, ಗಂಗಪ್ಪ, ಚಂದ್ರಕಾಂತ, ತಿಮಿಂಗಿಲ, ಸುವರ್ಣ, ಆನಂದ ಮುಂತಾದವರು ಆಧುನಿಕ ಜೀವನದ ಪ್ರತಿನಿಧಿಗಳು. ಇವರ ಮುಖಾಮುಖಿಯಲ್ಲಿ ಅವರ ಪ್ರತಿಕ್ರಿಯೆಗಳು ಅವನ ವ್ಯಕ್ತಿತ್ವದ ಪ್ರದರ್ಶನವಾಗ ತೊಡಗುತ್ತದೆ. ಒಂದು ರೀತಿಯ ಮುಗ್ಧತೆಯಿಂದ ಬಸವರಾಜ ಅಲ್ಲಿಯ ಪರಿಸ್ಥಿತಿಗೆ ಹೊಂದಿಕೊಳ್ಳದೆ ಭಯಗ್ರಸ್ಥನಾಗುತ್ತಾನೆ. ಹೇಳಿಕೊಳ್ಳುವ ಸಂಬಂಧಗಳು ಸೃಷ್ಟಿಯಾಗದೆ ಹೋದಾಗ ಗೊಂದಲಕ್ಕೀಡಾಗಿ ಅಸಹಾಯಕನಾಗುತ್ತಾನೆ. 'ಅವಳ ಕಾಯಿಲೆ ಇವತ್ತು ನಿನ್ನೆಯದಲ್ಲ ಸಾರ್, ನನ್ನನ್ನು ಹೆತ್ತಾಗ ಮನೇಲಿ ಕೆಲಸ ಮಾಡೋಕೆ ಯಾರೂ ಇರಲಿಲ್ಲವಂತೆ ಹೆರಿಗೆಯಾದ ಸ್ವಲ್ಪ ಹೊತ್ತಿನಲ್ಲೇ ದನದ ಕೊಟ್ಟಿಗೆಯಿಂದ ಹಂಡಿಯ ಕೂಗು ಬರುತ್ತಂತೆ ಅದರ ಕರು ಬಿಟ್ಟುಕೊಳ್ಳೋಕೆ ನನ್ನ ತಾಯಿಯೇ ಆಗಬೇಕು. ಹೋಗಿ ಹಾಲು ಕರೆದೇ ಬಿಟ್ಟಳು. ನನ್ನವ್ವ, ಹೀಗಾಗಿ ಬಂದದ್ದು ಕಾಯಿಲೆ. ಅದಕ್ಕೆ ನಾನೇ ಕಾರಣ ಅನ್ನುತ್ತೆ.' ಹೀಗೆ ಬಸವರಾಜ ಪಾರಾಗುವ ಇಲ್ಲ ಸಹಾನುಭೂತಿ ಗಿಟ್ಟಿಸುವಂತೆ ಮಾತಾಡುತ್ತಾನೆ. ಅದು ಸಹಜವಾದ ಅವನ ಸ್ವಭಾವವೇ. ಅಲ್ಲಿ ತನಗೆ ಎದುರಾಗುವ ಪ್ರಸಂಗಗಳಿಗೆಲ್ಲ ಏನಾದರೊಂದು ಪ್ರತಿಕ್ರಿಯಿಸುತ್ತ ಅದರಿಂದ ಬಿಡುಗಡೆ ಹೊಂದಬೇಕೆಂದು ಹಾತೊರೆಯುತ್ತಾನಾದರೂ ಯಾವುದೇ ರೀತಿಯ ಅರ್ಥವಂತಿಕೆ ಏರ್ಪಡುವುದಿಲ್ಲ. ಇದಕ್ಕೆ ಕಾರಣವೂ ಇದೆ. ಬಸವರಾಜ ತನ್ನ ಮೂಗಿನ ನೇರಕ್ಕೆ ಜನ ಸಿಗದೆ ಪರಿತಪಿಸಿದಂತಿದೆ. ಅವನ ಆಲೋಚನೆಗೆ ತಕ್ಕಂತೆ ಸಮಾಜ ಇಲ್ಲವೋ, ಸಮಾಜದ ಆಲೋಚನೆಗೆ ತಕ್ಕಂತೆ ಅವನಿಲ್ಲವೋ ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಬಿರುಕು ಸಹಜ. 'ವ್ಯಕ್ತಿ ವ್ಯಕ್ತಿಯ ಮಧ್ಯದಲ್ಲಿನ ಸಂವಹನದ ಬಿರುಕು, ವ್ಯಕ್ತಿ ಸಮಾಜ' ಮಧ್ಯದಲ್ಲಿನ ಸಂವಹನದ ಬಿರುಕು, ವ್ಯಕ್ತಿಯ ತನ್ನೊಂದಿಗಿನ ಸಂವಹನದ ಬಿರುಕು..."[೨೨] ಇದು ಆಧುನಿಕ ಜಗತ್ತಿನಲ್ಲಿ ಆಧುನಿಕ ಮನುಷ್ಯನ ಸಂಬಂಧ ಎಂಬಂತೆ ಕಂಡರೂ ಮುಖ್ಯವಾಗಿ ವ್ಯವಸ್ಥೆ ವ್ಯವಸ್ಥೆಗಳ ಮುಖಾಮುಖಿಯ ನಡುವಿನ ಸಂಬಂಧವಾಗುತ್ತದೆ. ಬದಲಾದ ಪರಿಸರದಲ್ಲಿ ಬಸವರಾಜನಿಗೆ ತನ್ನ ಅನುಭವವನ್ನು ಅರ್ಥೈಸುವುದು ಆಗುವುದಿಲ್ಲ. ಇತರರ ಅನುಭವವನ್ನು ಅರಿತುಕೊಳ್ಳುವುದು ಸಾಧ್ಯವಾಗುವುದಿಲ್ಲ. ಇದರಿಂದ ತನ್ನನ್ನು ಎಲ್ಲದರ ಮಧ್ಯೆ ಗುರುತಿಸಿಕೊಳ್ಳಲಾರದೆ ಪ್ರತಿಕ್ಷಣ ಸೋಲು ಇಲ್ಲ ಅವಮಾನ, ಅಸಹಾಯಕತೆ, ಸಿಟ್ಟು ಮಾತ್ರ ವ್ಯಕ್ತಪಡಿಸುತ್ತಾನೆ.

ಲಂಕೇಶರು ತಮ್ಮ ಕಥಾಲೋಕದಲ್ಲಿ ಮನುಷ್ಯನ ಸಣ್ಣತನ ಹಾಗೂ ಗೋಸುಂಬೆತನಗಳನ್ನು ಚಿತ್ರಿಸುತ್ತಾ, ಸಮಾಜದಲ್ಲಿ ವ್ಯಕ್ತಿ ಸಾಚಾನೂ ಅಲ್ಲ, ಉದಾರಿಯೂ ಅಲ್ಲ ಎಂದು ಹೇಳುತ್ತಾರೆ. 'ಕುರುಡು ಕಾಂಚಾಣ' ಕಥೆಯಲ್ಲಿ ಬರುವ ವ್ಯಕ್ತಿ ಅಸಹಾಯಕನೋ ಆ ಅಸಹಾಯಕತೆ ತನ್ನ ಸಣ್ಣತನದಿಂದಾಗಿ

ಬಂದುದ್ದೇ ಎಂಬುದು ಕೂಡ ಅಷ್ಟೇ ಮುಖ್ಯ. ಹಜಾಮನ ಬಗ್ಗೆ ಮರುಗುವ ಮನಸ್ಸಿದೆ. ಒಮ್ಮೆ ತಾಯಿ ಸತ್ತಿದ್ದಾಳೆ ಎಂದು ಸಾಲ ಕೇಳಿದರೆ ಕೊಡಲಾಗದೆ ತಲೆತಪ್ಪಿಸಿಕೊಳ್ಳುವ, ಸುಳ್ಳು ಹೇಳುವ ಮೂಲಕ ಸಣ್ಣವನಾದೆ ಎಂದು ಪೇಚಿಗೆ ಬೀಳುತ್ತಾನೆ. ಹೆಂಡತಿಯ ದೆಸೆಯಿಂದ ಆದರೂ ಅವನಿಗೆ ಹಜಾಮಬೇಕು. ಹೀಗೆ ಒಂದು ಪ್ರಸಂಗದ ಸಂದಿಗ್ಧತೆಯಲ್ಲಿ ಮನುಷ್ಯನ ಒಳಗನ್ನೂ ಅದೇ ಕಾಲಕ್ಕೆ ಹೊರಗನ್ನೂ ಎತ್ತಿ ತೋರಿಸುವ ಕಥೆ. 'ಕುರುಡು ಕಾಂಚಾಣ'ದ ಈ ವ್ಯಕ್ತಿ ಹೆಂಡತಿಯ ದೆಸೆಯಿಂದ ಅಸಹಾಯಕನಾದನೋ ಮೂಲತಃ ಅವನ ಸ್ವಭಾವದಲ್ಲಿ ಸಣ್ಣತನವಿದೆಯೋ? ಈ ಬಗೆಯ ಮತ್ತೊಬ್ಬ ವ್ಯಕ್ತಿಯನ್ನು 'ನಮ್ಮ ನಡುವಿನ ಹುಡುಗ' ಕಥೆಯಲ್ಲಿ ಕಾಣಬಹುದು. ಒಳ್ಳೆಯವನು, ಆದರ್ಶವಾದಿ ಎಂದು ಕಂಡರೂ ಹೆಂಡತಿಯ ಮಾತನ್ನು ದಾಟದೆ ತೊಂದರೆಗೆ ಸಿಕ್ಕಿ ಹಲಬುತ್ತಾನೆ. ಒಂದು ಘಟನೆಯಲ್ಲಿ ಗೌರೀಶ ತಾನು ಬರೆದ ಕಥೆಯೊಂದು ಪತ್ರಿಕೆಯಲ್ಲಿ ಪ್ರಕಟವಾದ ಬಗ್ಗೆ ಅದರ ಸಂಭಾವನೆಯನ್ನು ಪಡೆಯಲು ಸಂಪಾದಕರ ಬಳಿಗೆ ಹೋಗುತ್ತಾನೆ. ಅಲ್ಲಿ ಅವನಿಗೆ ಎದುರಾಗುವ ವ್ಯಕ್ತಿಗಳ ಮುಂದೆ, ಅವರ ಪ್ರಶ್ನೆಗಳ ಮುಂದೆ ಅಸಹಾಯಕನಾಗುತ್ತಾ, ಹಣ ಕೇಳಿದರೆ ಎಲ್ಲಿ ತನ್ನ ಸಣ್ಣತನ ಕಾಣುತ್ತದೆ ಎಂದು ಮರುಳುವುದು ಅವನು ತನ್ನ ನೈತಿಕ ದೌರ್ಬಲ್ಯದಿಂದ 'ವಾಮನ' ಕಥೆಯಲ್ಲಿ ತನ್ನ ಮನೋದೌರ್ಬಲ್ಯವನ್ನು ಅಡಗಿಸಿಕೊಳ್ಳಲು ಪ್ರಯತ್ನಿಸುವ ಮತ್ತೊಬ್ಬ ಈ ಎಲ್ಲ ಅಂಶಗಳನ್ನು ಮೀರಿದ ಮತ್ತೊಬ್ಬ 'ಹೇಳದ ಸಂಗತಿಗಳು' ಕಥೆಯಲ್ಲಿ ಕಾಣುತ್ತಾನೆ. ಶಂಕರನು ಸಾವು ಬದುಕಿನ ಹೋರಾಟದಲ್ಲಿದ್ದ ತಂದೆಯನ್ನು ನೋಡಲು ಆಸ್ಪತ್ರೆಗೆ ಹೋಗುತ್ತಾನೆ. ಅಲ್ಲಿ ತಂದೆಯನ್ನು ಕಾಳಜಿಯಿಂದ ಜವಾಬ್ದಾರಿಯಿಂದ ನೋಡಲು ಡಾಕ್ಟರ್ ಲಂಚ ಕೇಳುತ್ತಾನೆ. ತಂದೆಯನ್ನು ಉಳಿಸಿಕೊಳ್ಳುವ ಕರ್ತವ್ಯ ಮರೆತು ದೊಡ್ಡತನ ಮೆರೆಯುವುದು ಬಿಟ್ಟು 'ಕ್ಷಮಿಸಿ ಡಾಕ್ಟರ್' ಎಂದು ಬಿಡುತ್ತಾನೆ. ತಂದೆಗಾಗಿ ಏನನ್ನು ಮಾಡಲಾಗದ ಈ ಮನುಷ್ಯ ಆಳದಲ್ಲಿ ಎಂಥ ಸ್ವಾರ್ಥಿ, ಕ್ರೂರಿ ಎಂಬುದು ವ್ಯಕ್ತವಾಗುತ್ತದೆ.

ಆಧುನಿಕ ಜಗತ್ತು ಮತ್ತು ಆಧುನಿಕ ಮನಸ್ಸುಗಳ 'ಖಂಡಕಾವ್ಯ' ದಂತಿರುವ 'ರೊಟ್ಟಿ' ಕಥೆಯಲ್ಲಿ ಹಸಿವು, ಕರುಣೆ, ದಾರಿದ್ರ್ಯ, ಕ್ರೌರ್ಯ ಮತ್ತು ಮುಖಹೀನ ನಗರದ ಸ್ಥಿತಿ ಎಲ್ಲವನ್ನೂ ಏಕಕಾಲಕ್ಕೆ ಬಿಚ್ಚಿ ತೋರಿಸುವ ಅದ್ಭುತ ಕಥೆ.

ಆಧುನಿಕ ಜಗತ್ತಿನ ಪರಿಸರದಲ್ಲಿ ಈ ಮನುಷ್ಯನ ಒಡನಾಟ ಸಮಯ ಸಾಧಕತನ ಗುಣದಿಂದ ತನ್ನ ಪ್ರತಿಕೂಲ ಸಂದರ್ಭದಲ್ಲಿ ಕುಗ್ಗುವುದು, ಅಸಹಾಯಕತೆ ತೋರಿಸುವುದು ಮಾಡುತ್ತಾನೆ. ಅನುಕೂಲ ಸಂದರ್ಭದಲ್ಲೆಲ್ಲ ಅಹಂನಿಂದ ಬೀಗುವುದು. ಈ ಮನುಷ್ಯನಿಗೆ ಜವಾಬ್ದಾರಿಯಾಗಲಿ, ಕಾಳಜಿಯಾಗಲಿ ಇಲ್ಲ. ಅಂತಃಕರುಣೆ, ಆತ್ಮೀಯತೆ ಎಂಬುದು ಇಲ್ಲದೆ ಯಾವಾಗಲೂ ಅನುಮಾನದಿಂದ ನೋಡುವುದು, ಬೇಸರ, ಅಸ್ವಸ್ಥತೆ, ಸಿಟ್ಟುಗಳಿಂದ ಧೈರ್ಯ ಕಳೆದುಕೊಂಡು ನೈತಿಕ ದೌರ್ಬಲ್ಯದಿಂದ ಕುಗ್ಗುವುದು ಏನೋ ಮಹಾನ್ ಕಾರ್ಯ ಮಾಡಲು ಹೋಗಿ ಪೇಚಿಗೆ ಬಿದ್ದು ಮನೋದೌರ್ಬಲ್ಯದಿಂದ ನರಳುವುದು. ಕೊನೆಗೆ

ಅಳುವುದು ಈ ಮನುಷ್ಯನ ಸ್ವರೂಪವಾಗಿದೆ. ಹಾಗೆ ನೋಡಿದರೆ ಲಂಕೇಶನ ಈ 'ಮನುಷ್ಯ' ಆಧುನಿಕ ಜಗತ್ತಿಗೆ ಮಾತ್ರ ಸೇರಿದವನಲ್ಲ. ಈ ಮನುಷ್ಯ ಯಾವ ಕಾಲದಲ್ಲಿಯಾದರೂ ಇರುವವನು, ಕಾಲಮಾನದ ಮೌಲ್ಯಗಳ ಜೊತೆಗೆ ಬದುಕುವವನು, ಸಾಯುವವನು.

ನವ್ಯಸಾಹಿತ್ಯಕ್ಕೆ ತಮ್ಮ ಕಥೆ, ಕಾದಂಬರಿ, ವಿಮರ್ಶೆಯ ಮೂಲಕ ವಿಶೇಷ ಕೊಡುಗೆ ಕೊಟ್ಟ ಯು.ಆರ್.ಅನಂತಮೂರ್ತಿಯವರ ಹೆಸರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟವಾಗಿದೆ. ಅವರ ಒಟ್ಟು ಸಾಹಿತ್ಯದ ವ್ಯಾಪ್ತಿ ವಿಶಾಲವಾದದ್ದು. ಅವರ ಸಾಹಿತ್ಯದ ಪರಿಸರ ಹೆಚ್ಚಾಗಿ ಬ್ರಾಹ್ಮಣ ಸಮಾಜ. ಇದಕ್ಕೆ ಕಾರಣ ಅವರು ಅದೇ ಸಮಾಜದಲ್ಲಿ ಹುಟ್ಟಿ ಬೆಳೆದವರು. ಜನ್ಯ ಅನುಭವ ಮತ್ತು ಪಡೆದ ಅನುಭವ ಈ ಎರಡರ ಮುಖಾಮುಖಿಯೇ ಅವರ ಒಟ್ಟು ಸಾಹಿತ್ಯದ ಫಲ.

ಅನಂತಮೂರ್ತಿಯವರು ಪರಂಪರಾಗತ ಮೌಲ್ಯಗಳನ್ನು ಪರೀಕ್ಷೆಗೀಡು ಮಾಡುತ್ತಾರೆ. ಬೌದ್ಧಿಕವಾಗಿ ಶೋಧಿಸುತ್ತಾರೆ. ವೈಯಕ್ತಿಕ ಅನುಭವಗಳ ನೆಲೆಯಲ್ಲಿಯೇ ಅವುಗಳ ಮುಖಾಮುಖಿಯಾಗಿ ಸಂಘರ್ಷಣೆಗೆ ದಾರಿಯಾಗುವುದರ ಮೂಲಕ ವೈಚಾರಿಕತೆಯನ್ನು ಸೃಷ್ಟಿಸುತ್ತಾರೆ. ಸಾಮಾನ್ಯವಾಗಿ ಅವರ ಸಾಹಿತ್ಯದಲ್ಲಿ ಸಂಘರ್ಷಣೆ ಏರ್ಪಡುವುದು ಪರಂಪರಾಗತ ಮೌಲ್ಯಗಳ ಪ್ರತಿನಿಧಿಯಾಗಿರುವ ಮತ್ತು ಅವುಗಳನ್ನು ಪರೀಕ್ಷೆಗೆ ಒಳಪಡಿಸಲೆಂದೇ ಬರುವವರ ಮಧ್ಯೆ. ಹೀಗಾಗಿ ಎರಡು ಮುಖಗಳು ಅವರ ಸಾಹಿತ್ಯದಲ್ಲಿ ಕಾಣುತ್ತವೆ. ಈ ಎರಡು ಮುಖಗಳು ಕೇಶವ, ಸ್ಟೂಅರ್ಟ್, ರಂಗನಾಥ, ಶಂಕರಯ್ಯ ಆಗಬಹುದು. ನಾಣಿ, ವಿಶ್ವನಾಥಶಾಸ್ತ್ರೀ ಆಗಬಹುದು, ಪ್ರಾಣೇಶಾಚಾರ್ಯ, ನಾರಾಯಣಪ್ಪ ಆಗಬಹುದು ಅಥವಾ ಜಿ.ಎಚ್.ನಾಯಕರು ಹೇಳುವಂತೆ ಇಚ್ಛಾಶಕ್ತಿ ಮತ್ತು ಸಂಕಲ್ಪ ಬಲ ಆಗಿರಬಹುದು.

ಒಂದು ಗಟ್ಟಿ ಸಾಂಸ್ಕೃತಿಕ ಪರಂಪರೆಯ ಬೇರುಗಳಿಂದ ಬಂದ ಮನುಷ್ಯರನ್ನು ಅನಂತಮೂರ್ತಿ ಸೃಷ್ಟಿಸುತ್ತಾರೆ. ಆ ಮನುಷ್ಯ ಪಡೆದುಕೊಳ್ಳುವ ನೆಲೆ ಅವನ ಶಕ್ತಿ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು. ನವ್ಯ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಬರುವ ಅಸ್ವಸ್ಥತೆ, ದುರ್ಬಲ, ಸುಶಿಕ್ಷಿತ, ಸಂವೇದನಾಶೀಲ, ಅಂತರ್ಮುಖಿ ಮನುಷ್ಯರು ಇವರ ಸಾಹಿತ್ಯದಲ್ಲಿಯೂ ಇದ್ದಾರೆ. ಈ ಗುಣಗಳಿಗೆ ಕಾರಣ ಇವರು ಪರಂಪರಾಗತ ಮೌಲ್ಯಗಳನ್ನು ಸಂಪೂರ್ಣ ತಿರಸ್ಕರಿಸುವ ಬಲವಿಲ್ಲದಿರುವುದು ಒಂದಾದರೆ, ತಾವು ರೂಪಿಸಿಕೊಳ್ಳಲು ಪ್ರಯತ್ನಿಸುವ ಹೊಸ ಮೌಲ್ಯಗಳನ್ನು ಅರ್ಥಪೂರ್ಣವಾಗಿ ಸ್ಪಷ್ಟಪಡಿಸಿಕೊಳ್ಳಲು ಆಗದ ಸ್ಥಿತಿ ಇನ್ನೊಂದು. ಇದರಿಂದ ಪರಕೀಯ ಅನ್ನಿಸುವ ಸ್ಥಿತಿಯಲ್ಲಿ ಉಳಿಯುವುದು 'ಘೋಜರಾಜ'ದ ರಾಜಣ್ಣ, 'ಪ್ರಶ್ನೆ'ಯ ರಂಗನಾಥ, 'ಕಾರ್ತೀಕ'ದ ರಾಘವ, 'ಕ್ಲಿಪ್‌ಜಾಯಿಂಟ್'ನ ಕೇಶವ ಮತ್ತು 'ನವಿಲು' ಕಥೆಯ ನಾಯಕ ಇದಕ್ಕೆ ಉದಾಹರಣೆ. ಇವರೆಲ್ಲ ಬೇರೆ ಬೇರೆ ವ್ಯಕ್ತಿತ್ವವುಳ್ಳವರಲ್ಲ, ಒಬ್ಬ ಮನುಷ್ಯ ಮಾತ್ರ. ಈ ಮನುಷ್ಯನ ಹುಡುಕಾಟಗಳು ಬೇರೆ ಬೇರೆ ಸಂದರ್ಭ ಸ್ತರ ಮತ್ತು ಸ್ಥಳಗಳಲ್ಲಿ ನಡೆದು ಅವನ ಹುಡುಕಾಟದ ಓನ್ನೆಲೆಯಲ್ಲಿಯೇ ಹಂತ ಹಂತ ಬೆಳವಣಿಗೆಯಿದೆ. 'ಘೋಜರಾಜ',

‘ಪ್ರಶ್ನೆ’, ‘ಕಾರ್ತೀಕ’, ‘ಕ್ಲಿಪ್‌ಜಾಯಿಂಟ್’ ಹಾಗೂ ‘ನವಿಲುಗಳು’ ಕಥೆಗಳಲ್ಲಿ ಈ ಮನುಷ್ಯನನ್ನು ಕಾಣಬಹುದು. ಅವನು ಎದುರಿಸುವ, ಆ ಮೂಲಕ ಅನುಭವಿಸುವ ಮತ್ತು ಕಂಡುಕೊಳ್ಳುವ ನೆಲೆಗಳಲ್ಲಿ ನಿರಂತರ ಹೋರಾಟವಿದೆ. ಬದುಕಿಗೆ ಹೊಸ ನೆಲೆಯನ್ನು ಕಲ್ಪಿಸುವ ಸಾಧ್ಯತೆಯ ಕಡೆ ಈ ಮನುಷ್ಯನ ತುಡಿತವಿದೆ. ‘ನವಿಲು’ಗಳು ಕಥೆಯಲ್ಲಿ ಬರುವ ನಾಯಕನಿಗೆ ಯಾವ ಕೊರತೆಯಿಲ್ಲ. ನೌಕರಿ, ಹೆಂಡತಿ, ಮಕ್ಕಳು, ಮನೆ, ಕಾರು ಎಲ್ಲಾ ಇದೆ. ಆದರೆ ಇದ್ಯಾವುದರಲ್ಲಿ ಅವನಿಗೆ ನೆಮ್ಮದಿಯಿಲ್ಲ. ಅವನನ್ನು ಕಾಡುವ ವಿಷಯವೆಂದರೆ, ಜೀವನವನ್ನೇ ಅಲುಗಾಡಿಸುವಂಥ ಘಟನೆ ಏನೂ ಘಟಿಸುತ್ತಿಲ್ಲವಲ್ಲ ಎಂದು ತನ್ನಲ್ಲಿ ಪರಿಶುದ್ಧತೆ ಎಂಬುದು ತನ್ನ ಬಾಲ್ಯದಲ್ಲಿದೆಯಾದರೂ ಇತ್ತೆ ಎಂಬುದನ್ನು ಕಾಣುವುದಕ್ಕೆ ತನ್ನ ಹಳ್ಳಿಗೆ ಬಂದು ಕುಣಿಯುವ ನವಿಲುಗಳನ್ನು ನೋಡುತ್ತ ತತ್ಪರತೆಯಿಂದ ಆನಂದಿಸುವುದು ಸಾಧ್ಯವಾಗುವುದಿಲ್ಲ. ಎಲ್ಲವನ್ನು ದಾಟಿ ಹೊಸ ಜೀವನವನ್ನು ಕಂಡುಕೊಳ್ಳಬೇಕೆಂಬ ನೋವು ಮಾತ್ರ ಅವನಲ್ಲಿ ಉಳಿಯುತ್ತದೆ. ಇದೇ ಸ್ಥಿತಿಯು ‘ಆಕಾಶ ಮತ್ತು ಬೆಕ್ಕು’ ಹಾಗೂ ‘ಸೂರ್ಯನ ಕುದುರೆ’ ಕಥೆಗಳಲ್ಲಿ ಇನ್ನೂ ಪಕ್ವ ರೀತಿಯಲ್ಲಿ ಮುಂದುವರಿದಿದೆ.

‘ಕ್ಲಿಪ್ ಜಾಯಿಂಟ್’ ಕಥೆಯಲ್ಲಿ ಕೇಶವನಿಗೆ ತನ್ನ ಇರುವಿಕೆಯ ಬಗ್ಗೆ ಅಷ್ಟೇ ಏಕೆ ತಾನು ಕಳೆದ ದಿನಗಳ ಬಗ್ಗೆ ಬೇಸರ ಜಿಗುಪ್ಸೆ. ಇದರಿಂದ ಮುಕ್ತನಾಗಲು, ಹೊಸದನ್ನು ಅರಸಲು ಬಯಸುತ್ತಾನೆ. ಕೇಶವ ವಿವೇಕಿ, ಬದುಕನ್ನು ಅರ್ಥೈಸುವ ಶಕ್ತಿಯಿದೆ. ಆದರೂ ಯಾವುದರಲ್ಲೂ ಶ್ರದ್ಧೆಯನ್ನು ಉಳಿಸಿ ಕೊಳ್ಳಲಾಗುತ್ತಿಲ್ಲ. ಇಂಗ್ಲೆಂಡಿಗೆ ಬಂದು ಸ್ಟೂಅರ್ಟ್‌ನ ಸಹವಾಸದಲ್ಲಿದ್ದರೂ ಅವನಿಗೆ ಹೊಸದನ್ನು ಕಂಡುಕೊಳ್ಳಲಾಗುವುದಿಲ್ಲ. ಎರಡು ವಿರುದ್ಧ ದಿಕ್ಕಿನ ಸಂಸ್ಕೃತಿಗಳಂತಿದ್ದ ಕೇಶವ ತನ್ನ ಭೂತದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ವರ್ತಮಾನವನ್ನು ಅನುಭವಿಸುವುದೂ ಆಗುವುದಿಲ್ಲ. ಕೊನೆಗೆ ಶೂನ್ಯದ (ಮಳೆಗಳನ್ನು ನೋಡಿ) ಅನುಭವ ಮಾತ್ರ ಅವನಿಗಾಗುತ್ತದೆ. ಇದರಿಂದ ಅವನ ಹುಡುಕಾಟ ಹೊಸ ಬಾಳಿನ ಹಂಬಲ ಎಲ್ಲವೂ ಸೋಲಿನಲ್ಲಿ, ನಿರಾಶೆಯಲ್ಲಿ ಕೊನೆಯಾಗುತ್ತದೆ.

‘ಸಂಸ್ಕಾರ’ ಕಾದಂಬರಿಯಲ್ಲಿಯೂ ಪರಂಪರಾಗತ ಮೌಲ್ಯಗಳ ಪರೀಕ್ಷೆಯಿದೆ. ಕಥೆಗಳಲ್ಲಿ ಬಂದಂತೆ ಬೌದ್ಧಿಕ ಮಟ್ಟದ, ತಾತ್ವಿಕ ಚರ್ಚೆ ಇಲ್ಲಿ ಇಲ್ಲವಾದರೂ ಪ್ರಾಣೇಶಾಚಾರ್ಯ ಪ್ರಾರಂಭದಲ್ಲಿ ರುವಷ್ಟು ಸಾಂಪ್ರದಾಯಿಕವಾಗಿ, ಬರುಬರುತ್ತ ಉಳಿಯುವುದಿಲ್ಲ. ಬೌದ್ಧಿಕ ಮಟ್ಟದ ಆಲೋಚನೆಗಳು ಮತ್ತು ಅಸ್ತಿತ್ವವಾದದ ಚಿಂತನೆಗಳು ತುಂಬಿಕೊಳ್ಳುತ್ತ ಹೋಗುತ್ತವೆ. ಸಾಂಪ್ರದಾಯಿಕ ವ್ಯಕ್ತಿಯಾದ ಪ್ರಾಣೇಶಾಚಾರ್ಯ ತನ್ನ ಅದೇ ವ್ಯಕ್ತಿತ್ವದಿಂದ ಎಲ್ಲವನ್ನು ನಿಭಾಯಿಸುವ ಸಾಧ್ಯತೆಯನ್ನು ತಲುಪದೆ “ಮಾಧ್ವಸಿದ್ಧಾಂತದಲ್ಲಿ ಪ್ರವೀಣನಾದ. ಆದರೆ ಸಾರ್ತ್ರೆ, ಮಾರ್ಕ್ಸ್‌ರಂತೆ ಆಲೋಚಿಸುವ...”[೧೭] ನಿಲುಪಿಗೇರುವುದು ವಿಚಿತ್ರವೆನಿಸುತ್ತದೆ. ಪ್ರಾಣೇಶಾಚಾರ್ಯ ತನ್ನ ಬದುಕನ್ನು ರೂಪಿಸಿಕೊಂಡಿರುವುದು ತನ್ನೆಲ್ಲ ಆದರ್ಶಗಳು ಸಾಂಪ್ರದಾಯಿಕ ವೈದಿಕ ಧರ್ಮಕ್ಕೆ ಬದ್ಧವಾದದ್ದು. ಆದರೆ ಜೀವನದಲ್ಲಿ ಬಂದು

ಒದಗಿದ ಘಟನೆಯಿಂದ, ತಾನು ಯಾವ ಮೌಲ್ಯಗಳಿಗೆ ಬದ್ಧನಾಗಿದ್ದನೋ ಅದು ನಿಜವಾದ ಅರ್ಥವನ್ನು ನೀಡುವುದೆಂದು ಗೊತ್ತಾದಾಗ, ಅದಕ್ಕೆ ಚಂದ್ರಿಯ ಸಂಗ ಕಾರಣವಾದಾಗ ಆ ಘಟನೆಯಿಂದ ಹೊಸದೊಂದು ಬದುಕನ್ನು ರೂಪಿಸುವ ಜವಾಬ್ದಾರಿಯನ್ನು ಹೊತ್ತು ಹಿಂದಿರುಗುತ್ತಾನೆ.

'ಭಾರತೀಪುರ' ಕಾದಂಬರಿಯಲ್ಲಿ ಜಗನ್ನಾಥ, ಕ್ರಿಯೆಯ ಮೂಲಕ ಕ್ರಾಂತಿ ಮಾಡಲು ಹೊರಡುವ ಬುದ್ಧಿವಂತ ಯುವಕ. ಭಾರತೀಪುರ ಮುಂಜುನಾಥನ ದೆಸೆಯಿಂದ ಜಡವಾಗಿದೆ. ಹಳೆಯ ಮೌಲ್ಯಗಳು ನಂಬಿಕೆಗಳು ಮನುಷ್ಯ ಜನಾಂಗವನ್ನೇ ಆಳುತ್ತವೆ. ಒಟ್ಟಿನಲ್ಲಿ ಬದಲಾವಣೆಯಾಗಬೇಕು. ಹೊಲೆಯರನ್ನು ಗುಡಿಯೊಳಗೆ ಹೋಗಿಸುವ ಮೂಲಕ ನಂಬಿಕೆಗಳು ಸುಳ್ಳಾಗಬೇಕೆಂದು ಜಗನ್ನಾಥ ಯೋಚಿಸುತ್ತಾನೆ. ಪ್ರಾರಂಭಕ್ಕೆ ಹೊಸ ಸಂಬಂಧವನ್ನು ಹುಟ್ಟುಹಾಕಲು, ಮೌಲ್ಯಗಳನ್ನು ಪ್ರಶ್ನಿಸಲು ಕ್ರಿಯೆಯ ಮೂಲಕ ಪ್ರಯತ್ನಿಸುತ್ತಾನೆ. ಹೀಗಾಗಿ ಹೊಲೆಯರನ್ನು ಹತ್ತಿರ ಕರೆದುಕೊಳ್ಳುವ ಮೂಲಕ ತನ್ನ ಸಂಬಂಧವನ್ನು ಅರ್ಥಪೂರ್ಣವಾಗಿ ಸೃಷ್ಟಿಸುವುದು ಒಂದಾದರೇ ಆ ಮೂಲಕವೇ ಮಂಜುನಾಥ ಎಂಬ ದೇವರ ಕಪಿಮುಷ್ಠಿಯಿಂದ ಸಮಾಜವನ್ನು ಬಿಡಿಸುವುದು ಅವನ ಧ್ಯೇಯವಾಗುತ್ತದೆ.

ಜಗನ್ನಾಥ ಒಂದು ಹೊಸ ಪರಂಪರೆಯನ್ನು ನೆಲೆಗೊಳಿಸಲು ತೊಡಗುವ ಮೊದಲು ತನ್ನ ಸ್ವಂತ ಜೀವನವನ್ನು ಪ್ರಶ್ನಿಸಿಕೊಳ್ಳಲು ತೊಡಗುತ್ತಾನೆ. ಅವನ ಮುಖ್ಯ ಧ್ಯೇಯ ಕ್ರಿಯಾಶೀಲತೆ ಮತ್ತು ಬದಲಾವಣೆ ಇದನ್ನು ಸಮಾಜ ಸುಲಭವಾಗಿ ಒಪ್ಪುವುದಿಲ್ಲ. ಆದರೂ ಕೆಲವರು ಅವನ ಕ್ರಿಯೆಗೆ ಸ್ಪಂದಿಸುವುದಾದರೂ ಹೇಗೆ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ನೋಡುತ್ತಾರೆ. ಶ್ರೀಪತಿರಾಯರಿಗೆ ಜಗನ್ನಾಥನ ಬುದ್ಧಿವಂತಿಕೆ ಕ್ರಿಯಾಶೀಲತೆಗಳ ಬಗ್ಗೆ ಮಾತ್ರ ಅಭಿಮಾನ ವ್ಯಕ್ತಪಡಿಸುವುದಾಗುತ್ತದೆ. ನೀಲಕಂಠಸ್ವಾಮಿ, ಅನಂತಕೃಷ್ಣ ಅಂಥವರು ಬರೀ ಅಬ್ಬರದಲ್ಲಿ ತೇಲಿ ಹೋಗುವವರು. ಹೀಗಾಗಿ ಜಗನ್ನಾಥನ ಕ್ರಾಂತಿ ಸೋಲುತ್ತದೆ. "ಕ್ರಿಯೆಯಲ್ಲಿ ಪಾಲ್ಗೊಳ್ಳುವವನೊಬ್ಬನೆ, ಜಗನ್ನಾಥನಿಂದ ಪರೋಕ್ಷವಾಗಿ ಪ್ರಭಾವಿತನಾದ ದೇವಸ್ಥಾನದ ಮುಖ್ಯ ಪೂಜಾರಿಗಳ ಮಗ, ಗಣೇಶ. ಆದರೆ ಅವನ ಕ್ರಿಯೆಗೆ ಒಂದು ತಾತ್ವಿಕ ಹಿನ್ನೆಲೆ ಸಾಧ್ಯವಾಗದಿರುವಷ್ಟು ಮೂಢ ತಾತ್ವಿಕ ಹಿನ್ನೆಲೆಯುಳ್ಳ ಜಗನ್ನಾಥ, ಕೈಕೆಸರು ಮಾಡಿಕೊಳ್ಳಲಾರದ ಜಮೀನ್ದಾರನ ಮಗ ಅಂದರೆ, ಜನಗಳನ್ನು ಜೊತೆಗೆ ಒಯ್ಯಲಾರದ 'ಕ್ರಿಯೆ' ಗೆಲ್ಲಲಾರದು. ಅಂಥ ಶಕ್ತಿ ಜಗನ್ನಾಥನ ಕ್ರಿಯೆಗೆ ಇಲ್ಲ."[೧೪]

ಕನ್ನಡಕ್ಕೆ ಮೊದಲ ನವ್ಯ ಕಾದಂಬರಿಯನ್ನು 'ಮುಕ್ತಿ'(೧೯೬೧) ಕೊಟ್ಟವರೆಂದು ಪ್ರಸಿದ್ಧರಾಗಿರುವ ಶಾಂತಿನಾಥ ದೇಸಾಯಿಯವರು ಆಧುನಿಕ ಬದುಕಿನ ವಿಕ್ಷಿಪ್ತ ಸ್ಥಿತಿಯನ್ನು, ನೆಲೆಯಿಲ್ಲದ ಬದುಕಿನ ದಾರುಣತೆಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಇತರ ನವ್ಯ ಲೇಖಕರು ಕಟ್ಟಿಕೊಡದೆ ಇರುವಂಥ ಜೀವನ ದೃಷ್ಟಿಕೋನ ದೇಸಾಯಿಯವರದ್ದು. ಇವರು ಚಿತ್ರಿಸಿದಷ್ಟು

ಆಧುನಿಕ ಜಗತ್ತನ್ನು ಕನ್ನಡದಲ್ಲಿ ಮತ್ಯಾರೂ ಚಿತ್ರಿಸಿಲ್ಲ. ಹೀಗಾಗಿ ಇವರು ಕಥಾತಂತ್ರ, ಪಾತ್ರವರ್ಗ, ಭಾಷೆ, ನಿರೂಪಣಾ ವಿಧಾನ ಎಲ್ಲದರಲ್ಲೂ ಭಿನ್ನವಾಗಿ ನಿಲ್ಲುತ್ತಾರೆ.

ತಮ್ಮ ಮೊದಲ ಕಥಾ ಸಂಕಲನ 'ಮಂಜುಗಡ್ಡೆ'ಯ ಮುನ್ನುಡಿಯಲ್ಲಿ ಆಧುನಿಕತೆ ಎಂದರೇನು ಎಂಬುದರ ಬಗ್ಗೆ ಬಾಹ್ಯ ಘಟನೆಗಳಿಗಿಂತಲೂ ಮನಸ್ಸಿನ ಘಟನೆಗಳನ್ನು ಚಿತ್ರಿಸುವುದರಲ್ಲಿ ಆಧುನಿಕತೆ ಇರುವುದು; ಆಧುನಿಕತೆಯ ಮೂಲ ಜೀವನ ದೃಷ್ಟಿಯದೆ; ಅಂತರ್ಮನಸ್ಸಿನ ಪ್ರವರ್ತಕ ಶಕ್ತಿಯೇ ಹೆಚ್ಚು ಮೌಲಿಕವಾದುದು ಎಂಬ ದೃಡ ವಿಶ್ವಾಸ; ಸತ್ಯದ ವೈಯಕ್ತಿಕ ಅನ್ವೇಷಣೆ ಮತ್ತು ದರ್ಶನವೇ ಆಧುನಿಕತೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ದೇಸಾಯಿಯವರ ನಾಲ್ಕನೆಯ ಕಾದಂಬರಿ 'ಸಂಬಂಧದ' ಒಂದು ಸನ್ನಿವೇಶದಲ್ಲಿ ಬರುವ ಸಂಭಾಷಣೆಗಳು ಹೀಗಿದೆ:

"ಆಧುನಿಕತೆಯೆಂದರೆ ಸ್ವಾತಂತ್ರ್ಯ, ಬುದ್ಧಿವಾದ, ವ್ಯಕ್ತಿ ವೈಶಿಷ್ಟ್ಯ. ಅದಕ್ಕೆಂದೇ ನಿಮ್ಮ ಕಾದಂಬರಿ ಗಳು ನಮಗೆಲ್ಲಾ ಹಿಡಿಸ್ತಾವೆ. ಆದರೆ ನಿಮ್ಮ ನಾಯಕ ನಾಯಕಿಯರೆಲ್ಲ ಯಾವುದೋ ಭವಿಷ್ಯತ್ತಿನ ಕನಸಿನ ರಾಜ್ಯದ ವ್ಯಕ್ತಿಗಳಂತೆ ಕಾಣಿಸುತ್ತಾರೆ. ಅಥವಾ ಪಾಶ್ಚಾತ್ಯರಂತೆ ತೋರುತ್ತಾರೆ ಹಿಂಗೇನು? ಆಧುನೀಕರಣ ಅಂದರೆ ಒಂದು ರೀತಿಯಿಂದ ಪಾಶ್ಚಾತ್ಯೀಕರಣ. ಆದರೆ ಪಾಶ್ಚಾತ್ಯರ ಅನುಕರಣ ಅಲ್ಲ. ನಾನು ಪ್ರತಿಪಾದಿಸೋದು ಸ್ವರಾಜ್ಯ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯ."(ಪು.೧೦)

ಶಾಂತಿನಾಥ ದೇಸಾಯಿಯವರ ಸಾಹಿತ್ಯದ ಜಗತ್ತೆ ಆಧುನಿಕವಾದದ್ದು ಮಧ್ಯಮವರ್ಗದ, ವಿದ್ಯಾವಂತರ, ಉದ್ಯೋಗಸ್ಥರ ಮತ್ತು ಬೌದ್ಧಿಕವಾಗಿರುವ ಜಗತ್ತು. ಜನತುಂಬಿದ ನಗರಗಳ ಮಧ್ಯೆ ಯಂತ್ರ ನಾಗರಿಕತೆಯ ಮಧ್ಯೆ, ಬೌದ್ಧಿಕತೆಯ ಮಧ್ಯೆ, ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ಸಂಕೀರ್ಣತೆಯನ್ನು ದೇಸಾಯಿಯವರ ಆಧುನಿಕ ಮನುಷ್ಯರು ಬದುಕಿನ ಜೊತೆ ವ್ಯವಹರಿಸುವ ರೀತಿ ವಿಶಿಷ್ಟವಾದದ್ದು. ಪ್ರಧಾನವಾಗಿ ಕಾಣುವ ಅಂಶವೆಂದರೆ, ಸಾಂಪ್ರದಾಯಿಕ ನೈತಿಕ ಕ್ಷಿತಿಜವನ್ನು ವಿಸ್ತರಿಸುವ ಮೂಲಕ ಅದಕ್ಕೊಂದು ಹೊಸ ನೆಲೆಯನ್ನು ಒದಗಿಸುವ ಪ್ರಯತ್ನ ಎದ್ದು ಕಾಣುತ್ತದೆ. ದೇಸಾಯಿಯವರ ಸಾಹಿತ್ಯ ಅವಲೋಕಿಸಿದರೆ, ಇಲ್ಲಿಯ ಆಧುನಿಕ ಮನುಷ್ಯ ಯಾವುದೇ ಪರಂಪರೆಗೆ ಅಂಟಿಕೊಂಡಂತೆ ಕಾಣುವುದಿಲ್ಲ. ಜಾತಿ, ಭಾಷೆ, ಸಂಸ್ಕೃತಿಯ ಬೇರುಗಳಿಂದ ತಪ್ಪಿಸಿಕೊಂಡಂತೆ ಕಾಣುತ್ತಾರೆ. "ಪರಂಪರೆಯಿಂದ ದೂರವಾಗಿಯೇ ಬದುಕಿದ್ದರಿಂದ ಅದರ ನೆರವೂ ಇಲ್ಲದೆ ಅಚ್ಚನಗರ ವಾತಾವರಣದಲ್ಲಿ ದೇಸಾಯಿಯವರು ಸಂಪೂರ್ಣವಾಗಿ ತಮ್ಮ ಸ್ವಂತ ಪ್ರತಿಭೆಯನ್ನು ದುಡಿಸಿಕೊಳ್ಳುತ್ತಾರೆ. ಅನಂತಮೂರ್ತಿ, ಚಿತ್ತಾಲರ ಸೃಜನಶೀಲತೆ, ಪರಂಪರೆಯ ಗಳಿಕೆಯಿಂದ ಸಾಕಷ್ಟು ಶ್ರೀಮಂತ ಸ್ಮೃತಿಗಳನ್ನು ಹೊತ್ತುಕೊಂಡದ್ದಾದರೆ ದೇಸಾಯಿಯವರದು ಸ್ವತಃ ಸಂಪಾದನೆ ಮಾಡಿದ ಆಧುನಿಕಪ್ರಜ್ಞೆಯ ನಾಗರಿಕತೆಯ ಹಲವು ಹೊಸ ಅಂಶಗಳನ್ನು ಹೊತ್ತುಕೊಂಡದ್ದಾಗಿದೆ."[೧೫]

'ಐವತ್ತು ತುಂಬಿದಾಗ' ಎಂಬ ಅವರ ಒಂದು ಕಥೆಯಲ್ಲಿ ನಾಯಕನಿಗೆ 'ಅಲ್ಲ ನನ್ನ ನೆನಪೆಂದರೆ ಬರೇ ಲೈಂಗಿಕತೆಯ ಬಿಚಾನೆಯಾಗಿದೆ ಯಾಕೆ? ಆ ಕ್ಷಣಗಳೇ ನನ್ನ ಸ್ಮೃತಿಪಟಲದಲ್ಲಿ ಮೊಳೆ ಹೊಡೆದಂತೆ ಅಚಲವಾಗಿ ನಿಂತಿದೆಯಲ್ಲ' ಎಂದು ಅನಿಸುತ್ತದೆ. ದೇಸಾಯಿಯವರ ಮುಖ್ಯ ಕಾಳಜಿ ಕಾಮ. ಒಟ್ಟು ಸಾಹಿತ್ಯದ ತಳಹದಿಯೇ ಅದಾಗಿ ಕಾಮವನ್ನು ಬದುಕಿನಲ್ಲಿ ಎಲ್ಲವನ್ನು ನಿರ್ಣಯಿಸುವ ಸಾಧನವಾಗಿ ಬಳಸುತ್ತಾರೆ. ಇದಕ್ಕೆ ಕಾರಣ ಮನುಷ್ಯನ ಮೂಲಭೂತ ಪ್ರವೃತ್ತಿಯೇ ಕಾಮವಾಗಿದೆ ಎಂದು ತಿಳಿದಿರುವುದು. ಈ ಪ್ರವೃತ್ತಿ ವ್ಯಕ್ತಿಗಳ ಚಿಂತನೆ, ಕ್ರಿಯೆ ಮತ್ತು ಸಂದರ್ಭಗಳಲ್ಲಿ ವ್ಯಕ್ತವಾಗುವ ವಿನ್ಯಾಸದಲ್ಲಿ ಅವರು ಜೀವನ ವಿನ್ಯಾಸವನ್ನು ಕಾಣಬಯಸುತ್ತಾರೆ. ಒಂದು ಮುಖ್ಯವಾದ ಅಂಶವನ್ನು ಅವರ ಸಾಹಿತ್ಯದಿಂದ ಕಾಣಬಹುದು. ಆಧುನಿಕತೆಯನ್ನು ಮೈಗೂಡಿಸುವ ದಿಕ್ಕಿನಲ್ಲಿ ನಮ್ಮ ಸನಾತನ ಮೌಲ್ಯಗಳಿಂದ, ಸಂಪ್ರದಾಯಗಳಿಂದ ಒಟ್ಟು ಭಾರತೀಯ ಸಂಸ್ಕೃತಿಯಿಂದ ನೆಲೆಕಳೆದುಕೊಳ್ಳುವ ಪಾತ್ರಗಳನ್ನು, ಸನ್ನಿವೇಶಗಳನ್ನು ಸೃಷ್ಟಿಸಿ ಬಿಡುತ್ತಾರೆ. 'ಕ್ಷಿತಿಜ'ದ ಮಂದಾಕಿನಿಯನ್ನು 'ಮುಕ್ತಿ'ಯ ಗೌರೀಶನನ್ನು ಕಾಣಬಹುದು. ಒಂದು ಪರಿಸರದಿಂದ ಇನ್ನೊಂದು ಪರಿಸರಕ್ಕೆ ಹೊಂದಿಕೊಳ್ಳುವ ಬಗೆಯಲ್ಲಿಯೇ ಆಧುನಿಕ ಜಗತ್ತಿಗೆ ಪ್ರವೇಶಿಸುವ, ಆಧುನಿಕರಾಗುವ ಬಗೆಯನ್ನು ಕಾಣುತ್ತೇವೆ. ಮಂದಾಕಿನಿ ಭಾರತೀಯ ಹೆಣ್ಣು, ಮಧ್ಯಮವರ್ಗದ, ದುಡಿಯುವ, ದುಡಿದು ಕುಟುಂಬದ ಜವಾಬ್ದಾರಿಯಲ್ಲಿ ಮದುವೆಯ ವಯಸ್ಸನ್ನು ಮೀರುತ್ತಲಿದ್ದಾಳೆ. ಆಕಸ್ಮಿಕವಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗುವ ಸಮಯ ಬಂದು ಹಡಗು ಹತ್ತುತ್ತಾಳೆ. ಎಲ್ಲ ನಾಗರಿಕತೆಯ ಪಾಕದಂತಿರುವ ಹಡಗಿನಲ್ಲಿ ಆಕೆಗೆ ಎದುರಾಗುವ ಸಮಸ್ಯೆಗಳು ಆಕೆಯನ್ನು ಇಕ್ಕಟ್ಟಿಗೆ ತರುತ್ತವೆ. ಎಲ್ಲವುಗಳಿಂದ ಮುಕ್ತವಾದ ಜನ ಪ್ರತಿಕ್ಷಣವನ್ನು ಜೀವಿಸುವ ಜನರಿಂದ ಆಹ್ವಾನ ಬರುತ್ತದೆ. ಆದರೆ ಆಕೆ ಇಂಡಿಯನ್ ಹೆಣ್ಣು, ಹಿಂದೂ ಹೆಣ್ಣು. "...ನಾವು ಈಗ ತಾನೇ ಅಡಿಗೆ ಮನೆಯಿಂದ ಸ್ವಲ್ಪ ಹೊರಗೆ ಬಂದಿದ್ದೇವೆ. ಇದೆಲ್ಲ ನಮಗೆ ಒಂದು ಹೊಸ ವಿಶ್ವ. ಬರಿ ಪುಸ್ತಕ ಪಿಕ್ಚರ್‌ಗಳಲ್ಲಿಯ ಕಲ್ಪನೆಯ ವಿಶ್ವ..." ಅನ್ನಬೇಕಾಗುತ್ತದೆ. ಅವಳಲ್ಲಿ ಸಂದಿಗ್ಧತೆ ಕಾಣುತ್ತೇವೆ.

"...ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವನ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣುತ್ತದೆ. ಸಂಕೋಚ, ನಾಚಿಕೆ, ಅಧೈರ್ಯ, ಮೈಚಳಿಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೇ ಇಲ್ಲವೇನೋ ಇವರಿಗೆ. ಉದಾಹರಣೆಗಾಗಿ ನಿಮ್ಮನ್ನೇ ತೆಗೆದುಕೊಳ್ಳಿ... ನಿಮ್ಮ ಗಾಂಭೀರ್ಯ, ಏಕಾಕಿತನ ಮುದುಡಿಕೊಳ್ಳುವ ವೃತ್ತಿ ನೋಡಿ ನನಗಂತೂ ಹೇಗೆ ಹೇಗೋ ಅನ್ನಿಸುತ್ತದೆ. Why dont you enjoy your self! ಯಾಕೆ?" ಎಂಬ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಸುಪ್ತ ಪಾತಳಿಯಲ್ಲಿ ಲೈಂಗಿಕ ಪ್ರಜ್ಞೆಯುಳ್ಳ, ಆಕೆ ಪಾಶ್ಚಾತ್ಯ ಸಂಸ್ಕೃತಿಯ ಮುಕ್ತತೆಗೆ ನಿಧಾನವಾಗಿ ಬಿಚ್ಚಿಕೊಳ್ಳತೊಡಗುತ್ತಾಳೆ. ಮುಖರ್ಜಿ, ಸಪ್ರು, ಲೆಗ್ಗಿ ಮುಂತಾದವರ ಮುಖಾಮುಖಿಯಲ್ಲಿ ಮಂದಾಕಿನಿ ಒಂದು ರೀತಿಯಲ್ಲಿ ಸಿಟ್ಟು

ಸೆಡವು, ಪ್ರೀತಿಗಳಿಂದ ಲೈಂಗಿಕ ಸಂಕೋಚದಿಂದ ಬಿಡುಗಡೆ ಪಡೆಯುತ್ತಾಳೆ. "ದುಃಖ! ವಿಷಾದ! ಛೆ...ಎಲ್ಲವೂ ಇಂಟರೆಸ್ಟಿಂಗ್ ಆಗಿತ್ತು" ಎಂದು ಮೆಕಾರ್ಥಿಯ ಕಣ್ಣುಗಳಲ್ಲಿ ಕಣ್ಣಿಟ್ಟು ಮಂದಾ ನಕ್ಕಳು.

ಹೀಗೆ ದೇಸಾಯಿಯವರ ಪಾತ್ರಗಳು ಆಧುನಿಕವಾಗುತ್ತ ಹೋಗುತ್ತವೆ. ಪ್ರಾರಂಭದಲ್ಲಿ ಮಂದಾಕಿನಿಯಂತೆ ಹಳ್ಳಿಯಿಂದ ಪಟ್ಟಣಕ್ಕೆ ಬಂದ 'ಮುಕ್ತಿ'ಯ ಗೌರೀಶ ಅನುಭವಿಸುವ ಪರಕೀಯತೆ ಕೂಡ ಇಂಥದ್ದೆ. ದುರ್ಬಲ, ಆದರೆ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ಗೌರೀಶನು ಹೊಸ ವಾತಾವರಣಕ್ಕೆ ಬಂದು ಸತ್ಯೇಂದ್ರ, ಶ್ರೀಕಾಂತರ ಸಹವಾಸದಲ್ಲಿ ತನ್ನನ್ನು ತಾನು ಮರೆತು ಅವರ ಪ್ರಭಾವಗಳಿಗೆ ಸಿಕ್ಕಿ ಗೊಂದಲದಲ್ಲಿ ಬೀಳುತ್ತಾನೆ. ಕಾಮಿನಿಯನ್ನು ಪ್ರೀತಿಸುವುದರ ಮೂಲಕ ಒಟ್ಟು ಆ ಪರಿಸ್ಥಿತಿಯ ವಾತಾವರಣದಿಂದ ಆಧುನಿಕ ಜಗತ್ತನ್ನು ಪ್ರವೇಶಿಸಿ ಹೊಂದಿಕೊಳ್ಳುತ್ತಾನೆ. ಡಾಲಿಯ ಸಹವಾಸದಿಂದ, ಆಕೆಯ ನಿರ್ಲಿಪ್ತ ಮನಸ್ಸನ್ನು ಕಂಡು ಬೆರಗಾಗುತ್ತಾನೆ. ಇಲ್ಲಿ ಅವನು ಕಲಿಯುವ ಪಾಠ; ತಮ್ಮ ತಮ್ಮ ಬದುಕಿಗೆ ತಾವೇ ಜವಾಬ್ದಾರರು 'ಶ್ರೀಕಾಂತ ಕೂಡ ತಾನು ನಂಬಿಕೊಂಡ ಮೌಲ್ಯಗಳ ಜೊತೆಗೆ ಬದುಕಲು ಹೆಣಗುತ್ತಾನೆ. ಸಾವು ಸಮೀಪವಿದ್ದರೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. 'ಮುಕ್ತಿ'ಯಲ್ಲಿ ಬರುವ ಪಾತ್ರಗಳು ಗೌರೀಶ, ಶ್ರೀಕಾಂತ, ಕಾಮಿನಿ ಸತ್ಯೇಂದ್ರ, ಡಾಲಿ ಮುಂತಾದವರು ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಪಡೆದುಕೊಳ್ಳುವ ಅನುಭವ, ಅದರಿಂದ ಒಂದೊಂದು ರೀತಿಯಲ್ಲಿ ಬಿಡುಗಡೆ ಪಡೆಯುತ್ತಾರೆ.

ದೇಸಾಯಿಯವರ 'ವಿಕ್ಷೇಪ' ಕಾದಂಬರಿಯಲ್ಲಿ ಬರುವ ರಾಹುಲ ಎದುರಿಸುವ ಸನ್ನಿವೇಶಗಳೆ ಬೇರೆ. ಅವನ ವ್ಯಕ್ತಿತ್ವದಲ್ಲಿ ಬೆಳವಣಿಗೆಯಲ್ಲಿ ಅವನು ಆಗಲೇ ಬೆಳೆದಿದ್ದಾನೆ. ಅವನು ಕ್ಷಣಕ್ಕೊಮ್ಮೆ ಬದಲಾಗುವ, ಎಲ್ಲೂ ಹೊಂದಿಕೊಳ್ಳದ ಮನುಷ್ಯ. ಅವನಿಗೆ ನೆಲೆ ಹೊಂದಲು ಬಹಳಷ್ಟು ಅವಕಾಶಗಳಿದ್ದರೂ ನೆಲೆ ತಪ್ಪಿಸಿಕೊಂಡು, ಬೇರೊಂದು ಅನುಭವಕ್ಕಾಗಿ ಸಿದ್ಧನಾಗುತ್ತಾನೆ. ಯಾವ ಬಗೆಯ ಸಂಬಂಧಗಳು ಅವನನ್ನು ಬಂಧಿಸುವುದಿಲ್ಲ. ಅಸ್ಪಷ್ಟ ಮನಃಸ್ಥಿತಿಯಲ್ಲಿ ಓಡಾಡುತ್ತಾನೆ. ತನಗೂ ಸುಖವಿಲ್ಲ ಅವನನ್ನು ನಂಬಿದ ಮಾಧವಿ, ರೋಜಿ, ಕುಂದಾಗೆ ನೆಮ್ಮದಿಯಿಲ್ಲ. ಅವನ ಮೇಲೆ ಪ್ರೀತಿಯಿಟ್ಟುಕೊಂಡ ವಿಲಿಯಮ್ ಅಂಥವರಿಗೂ ನೆಮ್ಮದಿ ತರುವುದಿಲ್ಲ. ಅಸಮಾಧಾನವೇ ಅವನ ಜೀವನ ಕ್ರಮ. ಇದರ ಅರ್ಥವೇನು? ಎಂದು ಹುಡುಕಲು ತೊಡುಗುತ್ತಾನೆಯೇ ಅದೊಂದೇ ವಿಕ್ಷಿಪ್ತ ಅವಸ್ಥೆಯ ಪ್ರತೀಕ ರಾಹುಲ. ರಾಹುಲ, ಶ್ರೀಕಾಂತ, ಗೌರೀಶ, ಕಾಮಿನಿ, ಡಾಲಿ, ಮಂದಾ ಮುಂತಾದ ದೇಸಾಯರ ನಾಯಕ ನಾಯಕಿಯರು ದುರ್ಬಲರು, ಅಸ್ವಸ್ಥರು. ಆದರೂ ಸೂಕ್ಷ್ಮ ಮನಸ್ಸಿನವರು ತಮ್ಮ ಸಮಸ್ಯೆಗಳಿಗೆ ಪರರಿಂದ ಪರಿಹಾರ ಕಂಡುಕೊಳ್ಳದವರು. ತಮ್ಮ ಅನುಭವದಿಂದಲೇ ಎಲ್ಲವನ್ನು ಅರಿತುಕೊಳ್ಳುವ, ನಿರ್ಣಯಿಸಿಕೊಳ್ಳುವ ನಿಲುವಿನವರು. ಯಂತ್ರನಾಗರಿಕ ಬದುಕಿನ ಜೊತೆ ಓಡುವ ಆಧುನಿಕರು ಯಾವುದೇ ಬೇರುಗಳಿಂದ ಬಂಧಿತರಾದವರಲ್ಲ. "ದೇಸಾಯಿಯವರ ಪಾತ್ರಗಳು ತೀಕ್ಷ್ಣ

ಸಂವೇದನಾಶೀಲರಾಗಿರುವುದರಿಂದ ಇವರಿಗೆ ತಾವು ಮಾಡುವ ಕ್ರಿಯೆಯ ಅರಿವು ಇದೆ. ಜೊತೆಗೆ ಇವರು ತೊಡಗುವ ಕ್ರಿಯೆ, ನೈತಿಕ ಹೊಣೆಗಾರಿಕೆ ಅರಿತಕ್ರಿಯೆ ಕೂಡ ಆಗಿದೆ. ಈ ಬಗೆಯ ಸೂಕ್ಷ್ಮವೇದಿ ಸ್ವಮನಸ್ಕರನ್ನು ದೇಸಾಯಿಯವರು ಕನ್ನಡ ಕ್ಷೇತ್ರಕ್ಕೆ ಪರಿಚಯ ಮಾಡಿಸಿದ್ದಾರೆ. ನಮ್ಮ ಸಂಸ್ಕೃತಿಯ ನೆಲೆ ತಪ್ಪಿಸಿ ಈ ಪಾತ್ರಗಳನ್ನು ನಗರೀಕೃತಗೊಳಿಸಿರುವುದರಿಂದ ಇದು ಸುಲಭ ಸಾಧ್ಯವಾಗಿದೆ.”[೧೬] ಹೀಗಾಗಿ ಈ ಎಲ್ಲಾ ಕಾರಣಗಳಿಂದಾಗಿ ದೇಸಾಯಿಯವರು ತಮ್ಮ ಸಮಕಾಲೀನರಿಗಿಂತಲೂ ಭಿನ್ನವಾಗುತ್ತಾರೆ.

ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯವು ಅವರ ಸಮಕಾಲೀನರ ಕಥಾ ಸಾಹಿತ್ಯಕ್ಕಿಂತ ಭಿನ್ನವಾಗುವಂತೆ ಅವರು ಎಚ್ಚರವಹಿಸಿದರು. ಚಿತ್ತಾಲ, ಲಂಕೇಶ, ಅನಂತಮೂರ್ತಿ, ರಾಮಚಂದ್ರಶರ್ಮ ಅವರು ತಮ್ಮ ಹಿರಿಕರ ಸಾಹಿತ್ಯದಿಂದ ಭಿನ್ನವಾಗಿ ಸಾಹಿತ್ಯ ರಚಿಸಲು ಯತ್ನಿಸಿದ್ದು ನಿಜ. ಮನುಷ್ಯನ ಆದರ್ಶ, ಕನಸು, ಮಾನವೀಯತೆ, ದೈವಿಕತ್ವದಿಂದ ಮನುಷ್ಯ ಸಮಾನ ಪ್ರಕೃತಿಯೊಂದಿಗೆ ಅನನ್ಯ ರೀತಿಯ ಸಂಬಂಧವನ್ನಿಟ್ಟುಕೊಂಡು ಮನುಷ್ಯ ಸಂಬಂಧಗಳನ್ನು ಕೆಡದಂತೆ ಬದುಕುವ ಗುಣ ಹೊಂದಿದ್ದನಷ್ಟೆ. ಆದರೆ ನವ್ಯದವರು ಮನುಷ್ಯನನ್ನು ಪ್ರತ್ಯೇಕಿಸಿ ವ್ಯಕ್ತಿ ವಿಶಿಷ್ಟತೆಯನ್ನು ಎತ್ತಿ ಹಿಡಿದರು. ತಮ್ಮ ಅನುಭವಗಳಿಗೆ ಸಾಮಾಜಿಕತೆಯನ್ನು ಸೇರಿಸಿಕೊಳ್ಳದೇ ತಮ್ಮ ಅಂತರಂಗದ ಮನಸ್ಥಿತಿಗೆ ಹೆಚ್ಚು ಬೆಲೆಯನ್ನು ಕೊಟ್ಟರು ಬಾಲ್ಯದ ಅನುಭವಗಳಿಗ ಹಿಂದಿರುಗಿದರು. ಸಂಪ್ರದಾಯ, ನಂಬಿಕೆ, ಲೋಕ ರೂಢಿಗಳ ವಿರುದ್ಧ ಬಂಡೆದ್ದರು. ಕಳ್ಳುಬಳ್ಳಿಗಳ ಸಂಬಂಧದಲ್ಲಿ ಮಾನವೀಯತೆಗೆ ಬೆಲೆ ನೀಡಲಿಲ್ಲ. ಹೆಣ್ಣಿಗೆ ಅನನ್ಯ ಸ್ಥಾನವನ್ನು ನೀಡುವುದಿರಲಿ, ಕಲ್ಪಿಸಿಕೊಳ್ಳಲು ಹಿಂಜರಿದರು. ಪುರುಷನ ಕಾಮದಾಹಕ್ಕೆ ಒದಗುವ ಜೀವವಾಗಿ ಹೆಣ್ಣನ್ನು ಗ್ರಹಿಸಿದರು.

ಹೀಗಿರುವಾಗ ಶಾಂತಿನಾಥ ದೇಸಾಯಿ ಅವರು ಬಾಲ್ಯ ಕಾಲಕ್ಕೆ ಹೋಗಲಿಲ್ಲ. ಆರಂಭದ ಕಥೆಗಳಲ್ಲಿ ಟೀನೇಜ್ ಯುವಕ-ಯುವತಿಯರು ಕಾಣಿಸಿಕೊಂಡರೂ ಬಾಲ್ಯದ ಅನುಭವಗಳಿಗಾಗಿ ಬಳಸಿದಂತೆ ಕಾಣುವುದಿಲ್ಲ. ಶಾಂತಿನಾಥ ದೇಸಾಯಿ ಅವರು ಮನೋವಿಜ್ಞಾನದ ನೆಲೆಯನ್ನು ತಮ್ಮ ಕಥನ ಸಾಹಿತ್ಯಕ್ಕೆ ಒದಗಿಸಿಕೊಂಡ ಪರಿಣಾಮವದು. ಫ್ರಾಯಿಡ್‌ನ ತತ್ವದ ಮುಖೇನ ಎಳೆಯ ತಾರುಣ್ಯದ ಯುವಕ-ಯುವತಿಯರ ಕಾಮದ ಸಹಜ ಸ್ಥಿತಿಗತಿಯ ಚಿತ್ರಣವನ್ನು ಕೊಡುತ್ತಾರೆ. ಎಳೆತಾರುಣ್ಯದ ತುಮುಲಗಳನ್ನು ಮನೋವಿಜ್ಞಾನದ ನೆಲೆಯಿಂದ ಗ್ರಹಿಸಿದ್ದು ಶಾಂತಿನಾಥ ದೇಸಾಯಿ ಅವರು ಮಾತ್ರ. ಮೇಲುನೋಟಕ್ಕೆ ಪ್ರೇಮ-ಕಾಮದ ಕಥೆಗಳಂತೆ ಕಂಡರೂ ಅವುಗಳ ಆಂತರ್ಯದಲ್ಲಿ ಅಸ್ತಿತ್ವದ ಹುಡುಕಾಟವೇ ಪ್ರಧಾನವಾಗಿದೆ. ಸಮಕಾಲೀನ ನವ್ಯದ ಲೇಖಕರು ವ್ಯಕ್ತಿ ಎಂದರೆ ಪುರುಷ ಮಾತ್ರ ಎಂದು ಗ್ರಹಿಸಿದಂತೆ ಕಾಣುತ್ತದೆ. ಮಹಿಳೆಯನ್ನು ಪರಿಗಣಿಸದೇ ಇರುವ ಕಾರಣದಿಂದ ಆಕೆಯನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಗ್ರಹಿಸಲಾಯಿತು. ಆದರೆ ದೇಸಾಯಿ ಅವರು ಮಹಿಳೆಯ ಸ್ವಾತಂತ್ರ್ಯವನ್ನು, ವ್ಯಕ್ತಿ ವಿಶಿಷ್ಟತೆಯನ್ನು ನಿರಾಕರಿಸಲಿಲ್ಲ. ಬದಲಾಗಿ ಪ್ರಧಾನ ಸ್ಥಾನವನ್ನೇ ಕಲ್ಪಿಸಿದರು. ಬದುಕಿನ

ಯಾವುದೇ ಸಂದರ್ಭದಲ್ಲಿ, ಯಾವುದೇ ಸಮಸ್ಯೆ ಎದುರಾದರೆ ಅದನ್ನು 'ಆಯ್ಕೆ'ಯ ಸ್ವಾತಂತ್ರ್ಯದಿಂದ ಹಿಂಜರಿಯುವುದಿಲ್ಲ. ಆಯ್ಕೆಮಾಡಿಕೊಂಡು ಅದನ್ನು ನಿಭಾಯಿಸುವ ದೃಢನಿಲುವನ್ನು ಮೆರೆಯುತ್ತಾಳೆ. ಇದನ್ನು ಮಹಿಳೆಯರಲ್ಲಿ ಮಾತ್ರ ವಿಶೇಷವಾಗಿ ಕಾಣುತ್ತೇವೆ. ಜೊತೆಗೆ ಶಾಂತಿನಾಥ ದೇಸಾಯಿ ಅವರ ಪುರುಷರು ಮೇಲುನೋಟಕ್ಕೆ ಅಧಿಕಾರ ಚಲಾಯಿಸುವವರಂತೆ ಕಂಡರೂ ಮಹಿಳೆಯ ಸ್ವಾತಂತ್ರ್ಯವನ್ನು, ಆಯ್ಕೆಯ ನಿಲುವನ್ನು ಸಹನೆಯಿಂದ ಗ್ರಹಿಸುವ ಗುಣ ಉಳ್ಳವರಾಗಿ ಕಾಣುತ್ತಾರೆ. ಕಾಮಾತುರರಾಗಿ ಕಂಡರೂ ಅಂತಿಮವಾಗಿ ಮಹಿಳೆಯ ಅಸ್ತಿತ್ವವನ್ನು ಸ್ವಾತಂತ್ರ್ಯವನ್ನು ನಿರಾಕರಿಸದೆ ಬೆಲೆಕೊಡುವವರಂತೆ ಕಾಣುತ್ತಾರೆ.

ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಅಸ್ತಿತ್ವವಾದದ ನೆಲೆಯಲ್ಲಿ ರಚಿತವಾಗಿದೆ. ಆದರೆ ಅವರು ಚಿತ್ರಿಸುವ ಪಾತ್ರಗಳು, ಕಟ್ಟುವ ಸನ್ನಿವೇಶಗಳು, ವಿವರಗಳು ವಾಸ್ತವವಾದಿ ನೆಲೆಯಲ್ಲಿಯೇ ಇವೆ. ಕಥೆಗಳಲ್ಲಿ ವಾಸ್ತವವಾದಿ ನೆಲೆಯನ್ನು ಮೀರುವ ಗುಣ ಕಾಣುತ್ತದೆ. ಕಾದಂಬರಿಗಳ ನಿರೂಪಣೆಯಲ್ಲಿ ವಾಸ್ತವವಾದಿ ನೆಲೆ ಇದೆ. ಕಥನದ ಆಂತರ್ಯದಲ್ಲಿ ಚರಿತ್ರೆಯ ಭಾರವಿಲ್ಲ. ವರ್ತಮಾನದ ಸಂಗತಿಗಳೇ ಹೆಚ್ಚು. ಚರಿತ್ರೆಯ ಭಾರವಿಲ್ಲದೇ ಇರುವುದರಿಂದ ಪಾತ್ರಗಳು ವರ್ತಮಾನದ ನೆಲೆಯಲ್ಲಿ ನಿಂತಿರುವುದರಿಂದ ಚೇತೋಹಾರಿಯಾಗಿ ಕಾಣುತ್ತವೆ. ಹುಸಿ ಗಾಂಭೀರ್ಯ, ಹುಸಿ ಆದರ್ಶ, ಹುಸಿ ಮಾನವೀಯತೆಗೆ ಅವಕಾಶವಿರುವುದಿಲ್ಲ. ಹಾಗೆಂದು ಎಲ್ಲವನ್ನೂ ಬಿಚ್ಚಿಡುವ ವಾಚ್ಯತನಕ್ಕೂ ಇಳಿಯುವುದಿಲ್ಲ. ಬಹಳ ಮುಖ್ಯವಾಗಿ ಮಹಿಳೆ-ಪುರುಷರ ನಡುವಿನ ಸಂಬಂಧದಲ್ಲಿ ಮುಕ್ತತೆಯಿದೆ, ಜವಾಬ್ದಾರಿಯು ಇದೆ. ಇದೆಲ್ಲವನ್ನು ನಿರೂಪಿಸುವ ಕಥನ ಕ್ರಮದಲ್ಲಿ ಲಾಲಿತ್ಯವಿದೆ. ನಗರ ಪರಿಸರವಿದ್ದರೂ, ಆಧುನಿಕ ವ್ಯಕ್ತಿಗಳಿದ್ದರೂ ಪಾತ್ರಗಳಾಡುವ ಸಂಭಾಷಣೆಯಲ್ಲಿ ಸ್ಥಳೀಯತೆ, ಜವಾರಿತನ ಕಾಣುತ್ತೇವೆ. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಓದಿಸಿಕೊಳ್ಳುವ ಗುಣದಿಂದ ಓದುಗರನ್ನು ಆಕರ್ಷಿಸುತ್ತದೆ. ಇದು ಒಳ್ಳೆಯ ಗುಣಗಳಲ್ಲಿ ಒಂದು. ಹೀಗೆ ತಮ್ಮ ಸಮಕಾಲೀನರ ಸಾಹಿತ್ಯದಿಂದ ತಮ್ಮ ಸಾಹಿತ್ಯವನ್ನು ಭಿನ್ನವಾಗಿ ರಚಿಸಿದ್ದಾರೆ.

ಕೊನೆ ಟಿಪ್ಪಣಿಗಳು

೧. ರಾಮಚಂದ್ರನ್ ಸಿ.ಎನ್., ನವ್ಯ: ಸತ್ಯದ ಬಹುಮುಖೀ ಶೋಧ, ಪ್ರಜಾವಾಣಿ, ೧೧ನೇ ಫೆಬ್ರವರಿ ೨೦೦೭, ಪು.೭

೨. ಚೆನ್ನಯ್ಯ ಎಚ್.ಎಂ., ೧೯೯೦, *ಕನ್ನಡ ನವ್ಯ ಚಳುವಳಿ*, ಕನ್ನಡ ಸಾಹಿತ್ಯ ಸಂದರ್ಭ, ಜಿ.ಎಸ್.ಶಿವರುದ್ರಪ್ಪ(ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೬೨

೩. ಅದೇ, ಪು.೬೪

೪. ನಾಯಕ ಜಿ.ಎಚ್., ೧೯೭೩, ಸಮಕಾಲೀನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಪು.೯೧

೫. ಅದೇ,

೬. ಪುರುಷೋತ್ತಮ ಬಿಳಿಮಲೆ, ೧೯೯೨, **ಶಿಷ್ಟಪರಿಶಿಷ್ಟ**, ಮದಿಪು ಪ್ರಕಾಶನ, ಮಂಗಳೂರು, ಪು.೧೫೯

೭. ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೯, **ನವ್ಯತೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೫೨-೫೩

೮. ರಾಘವೇಂದ್ರ ಎಚ್.ಎಸ್., ೧೯೯೦, **ಸಾಲುದೀಪಗಳು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೩೨೯

೯. ಆಮೂರ ಜಿ.ಎಸ್., ೧೯೮೬, **ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು**, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು, ಪು.೮೭

೧೦. ರಾಘವೇಂದ್ರ ಎಚ್.ಎಸ್., ೧೯೯೦, **ಸಾಲುದೀಪಗಳು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೩೨೪

೧೧. ಚೆನ್ನಯ್ಯ ಎಚ್.ಎಂ., ೧೯೯೦, *ಕನ್ನಡ ನವ್ಯ ಚಳುವಳಿ,* **ಕನ್ನಡ ಸಾಹಿತ್ಯ ಸಂದರ್ಭ**, ಜಿ.ಎಸ್.ಶಿವರುದ್ರಪ್ಪ(ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೮೫-೮೬

೧೨. ಅದೇ, ಪು.೮೨

೧೩. ಅದೇ,

೧೪. ಅದೇ, ಪು.೮೩

೧೫. ಸರ್ವಮಂಗಳ ಚ., ೨೦೦೧, *ದೇಸಾಯರ ಕಥಾ ಪ್ರಪಂಚ,* **ಮುಕ್ತಚಂದ**, ಡಿ.ವಿ.ಪ್ರಹ್ಲಾದ(ಸಂ), ಸಂಚಯ ಪ್ರಕಾಶನ, ಬೆಂಗಳೂರು, ಪು.೪೮

೧೬. ಅದೇ, ಪು.೪೭

ಅಧ್ಯಾಯ ೪

ಆಧುನಿಕತೆ : ಬೆಳವಣಿಗೆಗಳು ಮತ್ತು ಕನ್ನಡ ಸಾಹಿತ್ಯ

೪

ಆಧುನಿಕತೆ : ಬೆಳವಣಿಗೆಗಳು ಮತ್ತು ಕನ್ನಡ ಸಾಹಿತ್ಯ

ವಿಶ್ವಮಟ್ಟದಲ್ಲಿ ಆಧುನಿಕತೆ ಬೆಳೆದದ್ದು ಅದು ಬೇರೆ ಬೇರೆ ದೇಶಗಳಲ್ಲಿ ನೆಲೆ ಪಡೆದು ಪರಿವರ್ತನೆಗೆ ಕಾರಣವಾದದ್ದು, ಪರಿವರ್ತನೆ ಇದ್ದಲ್ಲಿ ಹಳೆಯ ಮೌಲ್ಯಗಳ ಬಿಕ್ಕಟ್ಟನ್ನು ಎದುರಿಸಿದ್ದು ಈಗ ರೋಚಕ ಇತಿಹಾಸವಾಗಿ ಕಾಣುತ್ತಿದೆ. ಆಧುನಿಕತೆಯನ್ನು ಪರಿಭಾವಿಸುವುದು ಸುಲಭದ ಕೆಲಸವಲ್ಲ. ವಿಜ್ಞಾನ ರಂಗದಲ್ಲಿ ಸಂಶೋಧನೆಗಳು ನಡೆದು ಹೊಸ ಹೊಸ ವಿಷಯಗಳು ಗೋಚರಿಸಿದಂತೆಲ್ಲ ಹಳೆಯ ನಂಬಿಕೆಗಳು ಪರೀಕ್ಷೆಗೆ ಒಳಗಾದವು. ನಂಬಿಕೆಗಳನ್ನು ಬಿಡದ ಪ್ರಭುತ್ವಗಳು, ಧರ್ಮಗಳು ಹೊಸ ಆವಿಷ್ಕಾರಗಳನ್ನು ದಮನ ಮಾಡುವ ಕೆಲಸಕ್ಕೆ ತೊಡಗಿದವು. ಆದರೆ ವಿಜ್ಞಾನದ ಶೋಧಗಳು ಮೇಲುಗೈ ಸಾಧಿಸಿದಂತೆ, ನಂಬಿಕೆಗಳು ಮಾಸತೊಡಗಿದವು. ಇದರ ಜತೆ ಜತೆಯಲ್ಲೇ ಬೆಳೆದ ಔದ್ಯೋಗಿಕರಣದಿಂದ ಸಮಾಜದ ಸ್ವರೂಪವೇ ಬದಲಾಗತೊಡಗಿತು. ನಗರಗಳ ಬೆಳವಣಿಗೆಗಳು, ಶಿಕ್ಷಣದ ಸ್ವರೂಪ, ಉದ್ಯೋಗದ ಸ್ವರೂಪ, ಆಡಳಿತದ ಸ್ವರೂಪಗಳು ಭಿನ್ನವಾಗಿ ಹೊಸ ಜೀವನ ವಿಧಾನವೇ ಆರಂಭವಾಯಿತು. ಇದರಿಂದ ಕಲೆ, ಸಾಹಿತ್ಯ, ಸಂಸ್ಕೃತಿಯ ಚಿಂತನೆಯಲ್ಲಿ ಹೊಸ ಆಯಾಮಗಳು ಸೇರಿಕೊಂಡವು. ಬ್ರಿಟೀಷ್ ಆಳ್ವಿಕೆಯಿಂದ ಹುಟ್ಟಿಕೊಂಡ ಆಧುನಿಕತೆ, ಯುರೋಪ್‌ನಲ್ಲಿ ಹುಟ್ಟಿಕೊಂಡ ಹೊಸ ಚಿಂತನೆಗಳಿಂದ ರೂಪುಗೊಂಡ ಆಧುನಿಕತೆಯ ಸ್ವರೂಪಗಳು ಭಿನ್ನ. ಕನ್ನಡ ಸಾಹಿತ್ಯದಲ್ಲಿ ಬ್ರಿಟೀಷ್ ಆಳ್ವಿಕೆಯಿಂದ ಹುಟ್ಟಿ ಬೆಳೆದ ಆಧುನಿಕತೆಯ ಪರಿಣಾಮಗಳನ್ನು ಮತ್ತು ಯುರೋಪಿನ ಆಧುನಿಕತೆಯ ಪರಿಣಾಮಗಳನ್ನು ಕಾಣುತ್ತೇವೆ. ಹೀಗಾಗಿ ಆಧುನಿಕತೆಯನ್ನು ಹೇಗೆ ಪರಿಭಾವಿಸಬೇಕು ಎಂಬುದು ಒಂದು ಸಮಸ್ಯಾತ್ಮಕವಾಗಿದೆ.

"ಆಧುನಿಕತೆಯನ್ನು ಕುರಿತು ಮಾತಾಡುವಾಗ ಮೊದಲನೆಯದಾಗಿ ನಾವು ಗಮನಿಸಬೇಕಾದ ಸಂಗತಿಯೆಂದರೆ, 'ಆಧುನಿಕತೆ' ಮತ್ತು 'ನವ್ಯತೆ' ಎರಡು ತೀರಾ ಭಿನ್ನ ಅರ್ಥ ಕೊಡುವ ಪರಿಕಲ್ಪನೆಗಳು. ಇಂಗ್ಲೀಷಿನ 'Modernity' ಎಂಬುದನ್ನು ಆಧುನಿಕತೆ ಎಂದೂ, 'Modernism' ಎಂಬುದನ್ನು 'ನವ್ಯತೆ' ಎಂದೂ ನಾವು ಸಾಂಸ್ಕೃತಿಕ ಸಂಕಥನದಲ್ಲಿ ಬಳಸುತ್ತಿದ್ದೇವೆ. ಇಂಗ್ಲೀಷಿನ 'Modernity' ಮತ್ತು 'Modernism' ಎಂಬ ಎರಡೂ ಶಬ್ದಗಳು 'Modern' ಎಂಬ ಒಂದೇ ಮೂಲದಿಂದ ಬಂದಿರುವುದರಿಂದ ಅವುಗಳ ಅರ್ಥದಲ್ಲಿ ಸ್ವಲ್ಪ ಗೊಂದಲವಾಗಿದೆ. ಆದರೂ ಅವುಗಳಿಗೆ ಪ್ರಚಲಿತ ಸಂಕಥನಗಳು (Discourses) ಬೇರೆ ಬೇರೆ ಅರ್ಥಗಳನ್ನು ಆರೋಪಿಸಿವೆ. ಈಗ 'Modernity', Modernisation'

[illegible]

[illegible]

[illegible]

ಎಂಬ ಶಬ್ದಗಳನ್ನು 'ಆಧುನಿಕತೆ' 'ಆಧುನೀಕರಣ' ಎಂದೂ, 'Modernism', 'Modernist' ಎಂಬ ಶಬ್ದಗಳನ್ನು 'ನವ್ಯತೆ', 'ನವ್ಯ' ಎಂದೂ ಕನ್ನಡದಲ್ಲಿ ಬಳಸುತ್ತಿದ್ದೇವೆ. ಇವುಗಳ ನಡುವೆ 'Contem porary' ಎಂಬ ಇನ್ನೊಂದು ಶಬ್ದ 'ಸಮಕಾಲೀನ' ಎಂಬ ಅರ್ಥದಲ್ಲಿ ಸೇರಿಕೊಂಡು ಅದೂ ಸ್ವಲ್ಪ ಗೊಂದಲವನ್ನು ಹೆಚ್ಚಿಸಿದೆ. ಈ ಶಬ್ದ ಆಧುನಿಕತೆ ಮತ್ತು ನವ್ಯತೆಗಳಿಗಿಂತ ಭಿನ್ನವಾಗಿದೆ. ಹಾಗೆ ಅದಕ್ಕೆ ಪಾರಿಭಾಷಿಕ ಶಬ್ದವಾಗಿ ವಿಶೇಷ ಅರ್ಥವಿಲ್ಲ. ಸಮಕಾಲೀನವಾಗಿದ್ದೂ, ಆಧುನಿಕ ಅಥವಾ ನವ್ಯವಾಗಿರದೆ ಇರಬಹುದಾದ ಸಾಧ್ಯತೆ ಇದೆ. 'ನವ್ಯತೆ' ಎಂಬುದು ಒಂದು ವಿಶಿಷ್ಟ Creed, ತತ್ವಪ್ರಣಾಲಿ, ಜೀವನ ದೃಷ್ಟಿ, ಶೈಲಿ. 'ಆಧುನಿಕತೆ'ಯ ವಿಶಾಲ ಪರಿಪ್ರೇಕ್ಷ್ಯದಲ್ಲಿ 'ನವ್ಯತೆ' ಅದರ ಒಂದು 'ಅಂಶ' ಎಂದು ಪರಿಗಣಿಸಬಹುದು."[೨] ಈ ವಿವರಣೆಯಿಂದ ಆಧುನಿಕತೆಯನ್ನು ಪರಿಭಾವಿಸುವುದು ಸರಿಯಾದ ಕ್ರಮವಾಗಿದೆ.

ಈ ಪ್ರಬಂಧದಲ್ಲಿ ಒಟ್ಟು ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ವಸಾಹತುಶಾಹಿಯ ಸ್ವರೂಪವನ್ನು ಅದರ ಒಟ್ಟು ಧೋರಣೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ(ಅಂದರೆ ಆರ್ಥಿಕ ಅಜೆಂಡಾದಿಂದ ಬಂಡವಾಳಶಾಹಿ ಧೋರಣೆವರೆಗೆ). ಎರಡನೆಯ ಭಾಗದಲ್ಲಿ ಆಧುನಿಕತೆ ಮತ್ತು ಸಮಾಜವನ್ನು ಕುರಿತಾದಂತಹ ಚರ್ಚೆಯಿದೆ.

ವಸಾಹತುಶಾಹಿಯನ್ನು ಕುರಿತು ಮಾತನಾಡುವಾಗ ಮೊದಲನೆಯದಾಗಿ ನಾವು ವಸಾಹತುಶಾಹಿ ಎಂದರೇನು? ಭಾರತಕ್ಕೆ ಯಾವಾಗ ವಸಾಹತುಶಾಹಿಯ ಆಗಮನವಾಯಿತು. ಇದರಿಂದ ಭಾರತದಲ್ಲಾದಂತ ಸುಧಾರಣೆಗಳು ಯಾವುವು? ಇದು ಕನ್ನಡ ಸಾಹಿತ್ಯದ ಮೇಲೆ ಬೀರಿದ ಪರಿಣಾಮ ಯಾವ ತೆರನಾದದ್ದು ಎಂದು ಇಲ್ಲಿ ಚರ್ಚಿಸಲಾಗುತ್ತದೆ.

ವಸಾಹತುಶಾಹಿ ಎಂದರೆ ಹೊರ ಮತ್ತು ಒಳಗಿನ ಕಾರಣಗಳಿಂದ ಏರ್ಪಡುವ ದಮನಾವಸ್ಥೆ. ಯಾವುದೇ ರೀತಿಯ ದಬ್ಬಾಳಿಕೆ, ಶೋಷಿತ ಸ್ಥಿತಿಯನ್ನು ವಸಾಹತುಶಾಹಿ ಸಂಸ್ಕೃತಿಯೆಂದು ತಿಳಿಯಬಹುದು. ರಾಷ್ಟ್ರ-ರಾಷ್ಟ್ರಗಳ, ವರ್ಣ-ವರ್ಗಗಳ ದೇಶ-ಭಾಷೆಗಳ, ಗಂಡು-ಹೆಣ್ಣುಗಳ ಮಟ್ಟಗಳಲ್ಲಿ ಏರ್ಪಡುವ ಕ್ರೌರ್ಯ, ಶೋಷಿತಾವಸ್ಥೆ, ಧಾರ್ಮಿಕ, ಆರ್ಥಿಕ ಬಲತ್ಕಾರವನ್ನು ವಸಾಹತುಶಾಹಿ ಸಂಸ್ಕೃತಿಯೆಂದು ಗುರುತಿಸಿಕೊಳ್ಳಬಹುದಾಗಿದೆ. ಡಾ. ಡಿ.ಆರ್. ನಾಗರಾಜ್ ಅವರ ಮಾತುಗಳಲ್ಲಿ ಹೇಳುವುದಾದರೆ ಚರಿತ್ರೆಯಲ್ಲಿ 'ಮುಂದುವರಿದ' ಸಮಾಜಗಳು, ಶಕ್ತಿಗಳು 'ಹಿಂದುಳಿದಿರುವ' ಸಮಾಜಗಳನ್ನು ಆಕ್ರಮಿಸುವ ಪ್ರಕ್ರಿಯೆಯೇ ವಸಾಹತುಶಾಹಿ.

ಕನ್ನಡದ ವಸಾಹತುಶಾಹಿ ಎಂಬ ಪದ ಇಂಗ್ಲೀಷ್‌ನ colonialismಗೆ ಸಂವಾದಿಯಾಗಿದೆ. colonialism ಎಂಬುದು colony ಶಬ್ದ ಸ್ವರೂಪದೊಂದಿಗೆ ಸಂಬಂಧ ಹೊಂದಿದೆ. "colonialism is Relating to a colony"[೩] Colonialism ಎನ್ನುವುದರಲ್ಲಿ ಎರಡು ಪ್ರತ್ಯೇಕ ಪದಗಳಿವೆ. ಒಂದು colony, ಇನ್ನೊಂದು ism. Colony ಎಂದರೆ ವಸಾಹತು. ಅಂದರೆ ವ್ಯಾಪಾರದ ಮಳಿಗೆ, ವಲಸೆ ನಗರ,

ವಲಸೆ ಬಂದವರ ಪ್ರದೇಶ, ವಿದೇಶಿ ಜನರ ಗುಂಪು ಇತ್ಯಾದಿ ನಿಘಂಟು ಅರ್ಥಗಳಿವೆ. ಇನ್ನೂ ಮುಂದುವರೆದು ಹೀನಾಯ ಪ್ರಜ್ಞೆಯಿಂದ ಹಿಂದುಳಿದ ಅಥವಾ ದುರ್ಬಲ ಜನಾಂಗವನ್ನು ಶೋಷಿಸುವ ಅತ್ಯಂತ ದೊಡ್ಡ ಶಕ್ತಿಯೆಂದು ಅರ್ಥೈಸಲಾಗಿದೆ.

"The colonial System or principle now freq used in the derogatary sense of an alleged policy of Explotation of backword of weak peoples by a large power"[೩]

colony ಎನ್ನುವುದು ಯಾವಾಗಲೂ ಪರಕೀಯವಾಗಿರುತ್ತದೆ. ಮತ್ತು ಹೊರದೇಶಕ್ಕೆ ಅಥವಾ ಪರಿಚಯವಲ್ಲದ ಇನ್ನೊಂದು ಸ್ಥಳಕ್ಕೆ ಹೋಗಿ ಒಕ್ಕಲು ಮಾಡಿದ ನೆಲೆಯಾಗಿರುತ್ತದೆ. ism ಎಂದರೆ ನಿರ್ದಿಷ್ಟ ತತ್ವಸಿದ್ಧಾಂತ ಎಂದು ಹೇಳಲಾಗಿದೆ. ism ಯಾವಾಗಲೂ ಒಂದು ಘಟನೆ ಮತ್ತು ಸಾಮಾಜಿಕ ಸಂಗತಿಯೊಂದರ ಮೂಲಕ ಹುಟ್ಟಿಕೊಳ್ಳುತ್ತದೆ. ಅಂದರೆ ism ತನ್ನಷ್ಟಕ್ಕೆ ತಾನು ಸ್ವತಂತ್ರವಾದುದಲ್ಲ ಅದಕ್ಕೊಂದು ನಿರ್ದಿಷ್ಟ ಕಾರಣವಿರಬೇಕು. ಉದಾ : ಸಮಾಜವಾದ, ಕೋಮುವಾದ, ಮಾರ್ಕ್ಸ್‌ವಾದ, ಮತೀಯವಾದ, ಸ್ತ್ರೀವಾದ, ಮಾನವತಾವಾದ ಇತ್ಯಾದಿ. ಇಲ್ಲೆಲ್ಲ ismಗೆ ಸಹಾಯಕವಾದ ಒಂದು ನಿರ್ದಿಷ್ಟವಾದ ಕಾರಣವಿದೆ. ಆ ಕಾರಣವೇ ಕ್ರಮೇಣವಾಗಿ ಸಮಾಜದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿಯೂ ಐಡಿಯಾಲಾಜಿಯಾಗಿಯೂ ರೂಪುಗೊಳ್ಳುತ್ತದೆ. colonialism ರೂಪುಗೊಂಡಿದ್ದು ಕೂಡಾ ಇದೇ ಕ್ರಮದಲ್ಲಿ

ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಲೊನಿ ಸ್ವರೂಪದ ಚಟುವಟಿಕೆಗಳು ಆರಂಭವಾಗಿದ್ದು ಯುರೋಪಿಯನ್ ವ್ಯಾಪಾರಿಗಳ ಆಗಮನದಿಂದ. ಮಹಮ್ಮದ್ ಘೋರಿಯಿಂದಾದ ದಾಳಿಗಳು ಈ ಬಗೆಯ ಕಾಲೊನಿಗಳನ್ನು ಸ್ಥಾಪಿಸಲಿಲ್ಲ. ಯಾಕೆಂದರೆ ವಸಾಹತುಶಾಹಿಗೆ ಇರುವ ಆರ್ಥಿಕ ಪ್ರಣಾಳಿಕೆ ಅದಕ್ಕಿರಲಿಲ್ಲ ಮತ್ತು ಭಾರತೀಯ ಸಮಾಜದೊಳಗೆ ಅದು ಹಸ್ತಕ್ಷೇಪ ಮಾಡಲಿಲ್ಲ. ಭಾರತ ಇಂಗ್ಲೆಂಡಿನೊಡನೆ ಹೊಂದಿದ್ದ ಸಂಪರ್ಕವಿರುವಷ್ಟು ಮೂಲಭೂತ ಪ್ರಾಮುಖ್ಯ ಕೂಡ ಇದಕ್ಕಿದ್ದಿಲ್ಲ. ಹಾಗಾಗಿ ಪರಕೀಯ ಕಾಲೊನಿಗಳು ಬಲವಾಗಿ ಬೇರೂರಿದ್ದು, ಮತ್ತು ಜೀವಂತಿಕೆ ಪಡೆದಿದ್ದು ಯುರೋಪಿಯನ್ ಕಂಪನಿಗಳಿಂದಲೇ ಭಾರತದಲ್ಲಿ ಈ ತರಹದ ಕಾಲೊನಿಗಳನ್ನು ಸ್ಥಾಪಿಸಲು ಡಚ್, ಪೋರ್ಚುಗೀಸ್, ಫ್ರೆಂಚ್ ಮತ್ತು ಇಂಗ್ಲೀಷರ ಮಧ್ಯೆ ನಡೆದ ಸ್ಪರ್ಧೆಯಲ್ಲಿ ಅಂತಿಮವಾಗಿ ಗೆಲುವು ಸಾಧಿಸಿದ್ದು ಇಂಗ್ಲೆಂಡಿನ 'ಈಸ್ಟ್ ಇಂಡಿಯಾ ಕಂಪನಿ'.

ಕ್ರಿ.ಶ. ೧೬೦೦ರಲ್ಲಿ ಹುಟ್ಟಿದ ಈ 'ಈಸ್ಟ್ ಇಂಡಿಯಾ ಕಂಪನಿ'ಯೆಂಬ ಇಂಗ್ಲೀಷರ ವಾಣಿಜ್ಯ ಸಂಘವು ೧೬೧೩ರಲ್ಲಿ ಸುಲ್ತಾನ್ ಜಹಾಂಗೀರ್‌ನಿಂದ ಅನುಮತಿಯನ್ನು ಪಡೆದು 'ಸೂರತ್'ನಲ್ಲಿ ಮೊತ್ತಮೊದಲು ವ್ಯಾಪಾರದ ಕೋಟೆಯನ್ನು ಸ್ಥಾಪಿಸುವುದರ ಮೂಲಕ ಬ್ರಿಟೀಷರು ನೆಲೆಯೂರಿದರು. ಅನಂತರ ಮಚಲೀಪಟ್ಟಣ, ಹರಿಹರಪುರ, ಮದ್ರಾಸ್, ಹೂಗ್ಲಿ, ಮುಂಬೈ, ಕೋಲ್ಕೋತ್ತಾಗಳಲ್ಲಿ ಕೇವಲ

ಎಂಟು ದಶಕಗಳಲ್ಲಿಯೇ ಭಾರತದ ಸಮುದ್ರ ತೀರ ಪ್ರದೇಶಗಳ ಬಹುಮುಖ್ಯ ಸ್ಥಾನಗಳನ್ನು ವಶಪಡಿಸಿಕೊಂಡರು. ಆ ಮೂಲಕ ವ್ಯಾಪಾರ ಮತ್ತು ರಾಜಕೀಯ ತಂತ್ರಗಳಿಗೆ ನೆಲೆಯನ್ನು ಸ್ಥಾಪಿಸಿಕೊಂಡರು. ತಮ್ಮ ವ್ಯಾಪಾರ ವಹಿವಾಟು ಮತ್ತು ರಕ್ಷಣೆಗೆ ಬೇಕಾದ ಲಾಭವನ್ನು ಗಳಿಸಿಕೊಂಡದ್ದು ಬ್ರಿಟೀಷರ ರಾಜಕೀಯ ತಂತ್ರಕ್ಕೂ ಉತ್ತಮ ಉದಾಹರಣೆಯಾಗಿದೆ. ಅಂತೆಯೇ ಆರ್ಥಿಕ ಸಂಪನ್ಮೂಲಗಳನ್ನು ರಾಜ್ಯ ವಿಸ್ತಾರವನ್ನು ತನ್ನ ರಾಜಕೀಯ ಚಾಣಾಕ್ಷತೆಯ ಮೂಲಕ ವಿಸ್ತರಿಸಿಕೊಂಡಿದ್ದು ಬ್ರಿಟೀಷರ ಆಕ್ರಮಣಕಾರಿ ಧೋರಣೆಯನ್ನು ಪರಿಚಯಿಸುತ್ತದೆ. 'ಈಸ್ಟ್ ಇಂಡಿಯಾ ಕಂಪನಿ'ಯು ಮತ್ತಷ್ಟು ಬಲಗೊಳ್ಳಲು ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿ ರಂಗಗಳಲ್ಲಿ ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡುವ ಮತ್ತು ತಾನು ಗೆದ್ದ ಪ್ರದೇಶಗಳಲ್ಲಿ ಕಂದಾಯದ ಮೇಲೆ ನೇರ ಹತೋಟಿಯನ್ನು ಇಟ್ಟುಕೊಂಡಿತು. ಆ ಮುಖೇನ ಅರಸರು, ಜಮೀನ್ದಾರರು ಸಂಗ್ರಹಿಸಿಟ್ಟ ಸಂಪತ್ತನ್ನು ಕಬಳಿಸುವುದರ ಜೊತೆಗೆ ತನ್ನ ಅಧಿಪತ್ಯವನ್ನು ಭಾರತದಲ್ಲಿ ಮತ್ತಷ್ಟು ಬಲಪಡಿಸಲು ಬಳಸಿತು. ಇದೇ ಸಮಯದಲ್ಲಿ ಭಾರತದ ವಾಣಿಜ್ಯ ಮತ್ತು ಉತ್ಪಾದನೆಯ ಮೇಲೆ ಏಕಸ್ವಾಮ್ಯ ನಿಯಂತ್ರಣವನ್ನು ಸಾಧಿಸುವುದರ ಮೂಲಕ ಭಾರತೀಯ ವರ್ತಕರನ್ನು ಸುಲಿಗೆ ಮಾಡಿತು. ನೇತಾರರು, ಕುಶಲಕರ್ಮಿಗಳು ಉತ್ಪಾದಿಸಿದ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವಂತೆ ಅಥವಾ ಕಂಪನಿಯಲ್ಲಿ ತುಂಬಾ ಕಡಿಮೆ ಸಂಬಳಕ್ಕೆ ದುಡಿಯುವಂತೆ ಬಲಾತ್ಕರಿಸುವ ಕಾರ್ಯಕ್ಕೂ ಕೈ ಹಾಕಿತು.

ಹೀಗೆ ರಾಜಕೀಯ ನೆಲೆಯಲ್ಲಿ ವಿಭಜಿಸಿ ಆಳುವ ನೀತಿಯಿಂದ ಮೇಲುಗೈ ಸಾಧಿಸಿದಂತೆ ವಾಣಿಜ್ಯ ಮತ್ತು ಕೈಗಾರಿಕೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತ, ಹತ್ತೊಂಬತ್ತನೆ ಶತಮಾನದ ವೇಳೆಗೆ ಭಾರತವನ್ನು ಒಂದು ಪಕ್ಕಾ ವಸಾಹತುವಾಗಿ ಪರಿವರ್ತಿಸಿತು. ಭಾರತ ಬ್ರಿಟೀಷ್ ವಸ್ತುಗಳಿಗೆ ಮಾರುಕಟ್ಟೆಯಾಗಿಯೂ ಕಚ್ಚಾ ವಸ್ತುಗಳ ಮತ್ತು ಆಹಾರ ಪದಾರ್ಥಗಳ ಗಣಿಯಾಗಿಯೂ ಕಂಪನಿ ತನ್ನ ಬಂಡವಾಳವನ್ನು ಹೂಡಲು ಮುಖ್ಯ ಕ್ಷೇತ್ರವನ್ನಾಗಿ ನಿರ್ಮಿಸಿಕೊಂಡಿತು. ತಾನು ವಸಾಹತು ಭಾರತದಲ್ಲಿ ಸುಧಾರಣೆಯ ನೆಪದಲ್ಲಿ ಜಾರಿಗೊಳಿಸಿದ ಶಿಕ್ಷಣ, ಸಾರಿಗೆ, ಆಧುನಿಕ ಗಣಿ ಮತ್ತು ಕೈಗಾರಿಕೆಗಳು, ವಿದೇಶಿ ವ್ಯಾಪಾರ, ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳನ್ನು ರೈಲ್ವೆ ಹಾದಿ, ಇಂಗ್ಲೀಷ್ ವೈದ್ಯಕೀಯ ಪದ್ಧತಿ ಇವುಗಳನ್ನು ನೆಲೆಗೊಳಿಸುವುದರ ಮೂಲಕ ಉದಾರ ಮತ್ತು ಸಹಾಯಾರ್ಥ ಯೋಜನೆಗಳೆಂದು ತೋರಿದರೂ ಅದರಲ್ಲಿನ ತನ್ನ ಸ್ವಲಾಭದ ತಂತ್ರ ಹೆಚ್ಚು ಕಾಲ ಗುಟ್ಟಾಗಿ ಉಳಿಯದೇ ಹೋಯಿತು.

> "ಇದುವರೆಗೆ ಹಿಂದುಸ್ತಾನಕ್ಕೆ ಲಾಭಕರ
> ಎಂದು ನಾವು ತಿಳಿದಿದ್ದುದೆಲ್ಲವೂ ಈಗ
> ಹಾನಿಕರವೆಂದೇ ನನಗೆ ಕಾಣುತ್ತದೆ."[೪]

ಹೀಗೆ ತಮ್ಮೆಲ್ಲ ಆಳ್ವಿಕೆಯ ಮತ್ತು ಸುಧಾರಣೆಯ ತಂತ್ರಗಳು ಇಂಡಿಯಾ ದೇಶವನ್ನು ಭಾರತೀಯರ ಒಳಿತಿಗಾಗಿಯೇ ಆಳತೊಡಗುತ್ತೇವೆಂಬ ಮನೋಭಾವನೆಯನ್ನು ಭಾರತೀಯರಲ್ಲಿ ಉಂಟುಮಾಡಿತು. ಆದರೆ ಈ ನಂಬಿಕೆ ಹೆಚ್ಚು ಕಾಲ ಉಳಿಯಲಿಲ್ಲ. ಬ್ರಿಟೀಷರ ಆಳ್ವಿಕೆಗೆ ಒಳಗಾದ ವಸಾಹತು ಭಾರತವು ರಾಜಕೀಯ ವಾಣಿಜ್ಯ ಕ್ಷೇತ್ರಗಳಲ್ಲಿನ ದೌರ್ಬಲ್ಯಗಳಿಂದ ದೀನಾವಸ್ಥೆಗೆ ಒಳಗಾದರೂ ಮತ್ತೊಂದು ದೃಷ್ಟಿಯಿಂದ ಬ್ರಿಟೀಷರ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ವಿಚಾರಧಾರೆಗಳು ನಮ್ಮ ಮೌಢ್ಯತೆಗೆ ಅಗ್ನಿಸ್ಪರ್ಷವನ್ನು ಉಂಟುಮಾಡಿತು. ಇದರಿಂದ ಹೊಸದೊಂದು ಸಾಂಸ್ಕೃತಿಕ ಕ್ರಾಂತಿಯನ್ನೇ ಹುಟ್ಟಿ ಹಾಕಿದ ಕೀರ್ತಿ ಅದರದಾಗಿದೆ. ಅಂತಹ ಅಗ್ನಿಸ್ಪರ್ಶದ ಸಂಪರ್ಕದಿಂದ ಪಡೆದ ವಿವೇಕದ ಎಚ್ಚರದಿಂದಲೇ ಮುಂದೆ ಸ್ವಾತಂತ್ರ್ಯದ ಗಳಿಕೆಗೆ ಭಾರತದ ಸಂವೇದನೆ ತೊಡಗಿತೆನ್ನಬಹುದು. ನಮ್ಮ ಸಂಸ್ಕೃತಿಯ ಮೂಲಭೂತ ನೆಲೆಗಳನ್ನು ಪುನರ್ ಮೌಲ್ಯಕ್ಕೆ ಗುರಿಪಡಿಸುವುದರ ಮೂಲಕ ಹೊಸ ವಿಚಾರಧಾರೆಯನ್ನು ಶೋಧಿಸಿಕೊಳ್ಳಲು ಪ್ರಯತ್ನಗಳು ನಡೆದವು.

ಬ್ರಿಟೀಷರು ಭಾರತವನ್ನು ಪ್ರವೇಶಿಸಿದಾಗ ದೇಶದ ಸ್ಥಿತಿ ಶೋಚನೀಯ ನೆಲೆಯನ್ನು ಮುಟ್ಟಿತ್ತು. ಕುವೆಂಪು ಅವರು ಹೇಳುವಂತೆ: ‘‘ಮೊಗಲರ ಚಕ್ರಾಧಿಪತ್ಯ ಒರಲೆ ಹಿಡಿದ ಮುದಿಮರದಂತೆ ತತ್ತರಿಸುತ್ತಿದ್ದಿತು... ರಾಜಕೀಯ ಪ್ರಪಂಚದಲ್ಲಿದ್ದಂತೆಯೇ ಧರ್ಮಪ್ರಪಂಚದಲ್ಲಿಯೂ ಸಂಕುಚಿತ ಭಾವಗಳೂ ಕುಂದುಕೊರತೆಗಳೂ ಒಡಕು ಬಿರುಕುಗಳೂ ಯಥೇಚ್ಛವಾಗಿದ್ದವು. ಅರ್ಥಹೀನವಾದ ನೂರಾರು ದೇಶಾಚಾರ ಲೋಕಾಚಾರ, ಮತಾಚಾರಗಳೂ, ಐಕ್ಯಭಂಗಕಾರಿಗಳಾದ ಸಾವಿರಾರು ಸಾಂಕ್ರಾಮಿಕ ಜಾತಿಪದ್ಧತಿಗಳೂ ಕ್ಷುದ್ರವೂ, ಶುಷ್ಕವೂ ಈರ್ಷ್ಯಮೂಲವೂ ಆದ ಅನೇಕ ವಾದ-ವಿವಾದಗಳು ಭರತ ವರ್ಷವನ್ನು ಛಿದ್ರ ಛಿದ್ರವಾಗಿ ಮಾಡಿದ್ದವು... ಜನರಲ್ಲಿ ರಾಜಕೀಯ ಬುದ್ಧಿಯಂತೆಯೇ ಆಧ್ಯಾತ್ಮಿಕ ಬುದ್ಧಿಯೂ ಲೋಪವಾಗಿತ್ತು. ಆರ್ಯ ಧರ್ಮದ ಉದಾರ ಚಿರಜ್ವಾಜಲ್ಯಮಾನವಾಗಿದ್ದ ಪ್ರದೀಪವೂ ಜನರ ಭಾಗಕ್ಕೆ ನಂದಿಹೋಗಿತ್ತು’’[೫]

ಇಲ್ಲಿನ ಧಾರ್ಮಿಕ ಮಾನವೀಯ ನೆಲೆಗಳು ಪುರೋಹಿತಶಾಹಿಯ ಕಪಿಮುಷ್ಟಿಗೆ ಸಿಕ್ಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕು ದಿಕ್ಕು ತಪ್ಪಿ ಅನೇಕ ಶತಮಾನಗಳೇ ಸಂದಿದ್ದವು. ಬ್ರಿಟೀಷರ ಇಂಗ್ಲೀಷ್ ಶಿಕ್ಷಣದ ಪ್ರಭಾವ ಹೊಸ ಚೈತನ್ಯವನ್ನು ವೈಜ್ಞಾನಿಕ ಮತಿಯನ್ನು, ಹೊಸ ಎಚ್ಚರವನ್ನು ಉಂಟು ಮಾಡಿತು. ಆರಂಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಗೆ ಒಳಗಾದರೂ ಹೊಸ ಎಚ್ಚರದ ಅನಂತರ ವೈಜ್ಞಾನಿಕ ಮತೀಯ ಮಥನಕ್ಕೆ ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳು ಗುರಿಯಾಗುವುದರ ಮೂಲಕ ಹೊಸ ಪರಿಸರವೊಂದನ್ನು ಭಾರತೀಯ ಸಂವೇದನೆಗೆ ನಿರ್ಮಿಸಿಕೊಂಡಿದ್ದು ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಮಹತ್ತರವಾದ ಮುಖ್ಯ ನೆಲೆಯೆನ್ನಬಹುದು.

ಅಸಂಖ್ಯ ಸಂಸ್ಥಾನ ಹಾಗೂ ಅಸಂಖ್ಯ ಭಾಷೆಗಳ ತವರಾಗಿದ್ದ ಭಾರತ ಬ್ರಿಟೀಷರ ಏಕಚಕ್ರಾಧಿಪತ್ಯ ಇಂಗ್ಲೀಷ್ ಭಾಷೆಯ ಬಳಕೆ ಭಾರತೀಯರಲ್ಲಿ ಮೊದಲಿಗೆ ರಾಷ್ಟ್ರದ ಕಲ್ಪನೆಯೊಂದು ಮೂಡಲು ಕಾರಣವಾಯಿತು. ಈ ಮುಖೇನ ವಿಭಿನ್ನ ಭಾಷೆಯ, ಸಂಸ್ಕೃತಿಗಳ ಅದರಲ್ಲಿಯೂ ಇಂಗ್ಲೀಷ್ ಶಿಕ್ಷಣದ ಸಂಪರ್ಕಕ್ಕೆ ಒಳಗಾದ ನಮ್ಮಲ್ಲಿ ಭಾರತವು ಏಕರಾಷ್ಟ್ರವೆಂಬ ಕಲ್ಪನೆ ಉಂಟಾದದ್ದು ಅಥವಾ ಬ್ರಿಟೀಷರ ಶಿಕ್ಷಣ ವ್ಯವಸ್ಥೆಯು ಅಂತಹ ಕಲ್ಪನೆಯೊಂದನ್ನು ಉಂಟು ಮಾಡಿದ್ದು ಸ್ವಾತಂತ್ರ್ಯದ ಹಾದಿಗೆ ಅವರು ಕೊಟ್ಟ ಕೊಡುಗೆ ಎನ್ನಬಹುದು. "ನಾವು ಒಂದು ರಾಷ್ಟ್ರವಾಗಿದ್ದುದರಿಂದಲೇ ಇಂಗ್ಲೀಷರಿಗೆ ಇಲ್ಲಿ ಒಂದೇ ರಾಜ್ಯ ಕಟ್ಟಲು ಅವಕಾಶವಾದುದು."[೬] ಅಂತೆಯೇ ಇಂಗ್ಲೀಷ್ ಶಿಕ್ಷಣ ಕೂಡ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ಆ ಮೂಲಕ ಆರಂಭಸಿತು.

ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳ ಸಂಘರ್ಷ ಮೊತ್ತ ಮೊದಲು ಎದುರಾದದ್ದು ಬಂಗಾಳದಲ್ಲಿ. ಅನಂತರ ಮಹಾರಾಷ್ಟ್ರ ಕರ್ನಾಟಕಗಳಲ್ಲೂ ಪ್ರಬಲವಾದ ಹೋರಾಟಕ್ಕೆ ಎಡೆಮಾಡಿಕೊಟ್ಟಿತು. ಈ ಎರಡೂ ಸಂಸ್ಕೃತಿಗಳ ಸಂಘರ್ಷವು ಹಿಂದೂ ಸಮಾಜದ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನೇ ಉಂಟು ಮಾಡಿದವು. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಕಾಲೇಜುಗಳು, ಶೈಕ್ಷಣಿಕ ಸಂಸ್ಥೆಗಳು ಪ್ರಾರಂಭವಾದವು. ಮುಂಬಯಿ, ಕಲ್ಕತ್ತ, ಮದರಾಸುಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಭಾರತದಲ್ಲಿ ಬ್ರಿಟೀಷ್ ಸಾಮ್ರಾಜ್ಯ ರಾಜಕೀಯ ಶೈಲಿಯಾಗಿ ತಳವೂರುತ್ತಿದ್ದಾಗಲೇ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕ್ರೈಸ್ತ ಪಾದ್ರಿಗಳು ಗುಂಪು ಗುಂಪಾಗಿ ಭಾರತಕ್ಕೆ ಬಂದರು. ಹೀಗೆ ಧರ್ಮ ಪ್ರಚಾರಕ್ಕೆ ಬಂದ ಪಾದ್ರಿಗಳು ಶಿಕ್ಷಣ ಪ್ರಚಾರಕ್ಕೂ ಕೈ ಹಾಕಿದ್ದು ಅತ್ಯಂತ ಮಹತ್ವದ ವಿಚಾರ. ಶಿಕ್ಷಣ ಪ್ರಚಾರದ ಜೊತೆ ಜೊತೆಯಲ್ಲಿಯೇ ತನ್ನ ಆಕ್ರಮಣಶೀಲ ಧೋರಣೆಯಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಕ್ರೈಸ್ತ ಮತದ ವಿಚಾರಗಳನ್ನು ಬಿತ್ತಿದರು. ಅಂತೆಯೇ ಹಿಂದೂ ಧರ್ಮದಲ್ಲಿನ ಅವೈಜ್ಞಾನಿಕ (ಮೂಢ) ಹಾಗೂ ಅಮಾನವೀಯ ಮೂಲ ನೆಲೆಗಳು ಮೊದಲು ಮಾಡಿ ಹಿಂದೂ ಧರ್ಮದ ಆಶಯಗಳ ನಿಂದೆಗೆ ಗುರಿಯಾದವು. ಆ ಮೂಲಕ ಕ್ರೈಸ್ತ ಧರ್ಮದ ಶ್ರೇಷ್ಠತೆ, ಮಹತ್ವಗಳನ್ನು ಸಾರಿದರು ಅಥವಾ ಹಿಂದೂಧರ್ಮದಲ್ಲಿ ಯಾವ ವಿಚಾರಗಳನ್ನು ದೂರಿದರೋ ಅಂತಹ ವಿಚಾರಗಳನ್ನೇ ಶ್ರೇಷ್ಠವೆಂದು ಬೋಧಿಸಲು ತೊಡಗಿದರು. ಇಂತಹ ಪ್ರಭಾವಕ್ಕೆ ಒಳಾಗದ ಅನೇಕ ಭಾರತೀಯರು ಸ್ವಧರ್ಮ ಖಂಡನೆಗೆ ತೊಡಗುವುದು ಬಹುಮುಖ್ಯ ಮೌಲ್ಯವೆಂದೇ ಭಾವಿಸಿದರು. ವೈಜ್ಞಾನಿಕ ಮತಿಯಿಂದ ಎಲ್ಲವನ್ನೂ ವಿಮರ್ಶಿಸಿ ಪರೀಕ್ಷಿಸಿ ಸ್ವೀಕರಿಸಬೇಕೆಂಬ ವಿಚಾರವನ್ನು ಬ್ರಿಟೀಷರಿಂದ ಕಲಿತರೂ ಪಾಶ್ಚಾತ್ಯರ ಸಂಸ್ಕೃತಿಯ ಅನುಕರಣೆಯ ವಿಚಾರದಲ್ಲಿ ಅದನ್ನು ಮರೆತರು. ಪಾಶ್ಚಾತ್ಯರ ಸಂಪ್ರದಾಯಗಳನ್ನು ಅನುಕರಿಸುವುದು ನವೀನತೆಯ ಲಕ್ಷಣವೆಂಬ ಧೋರಣೆ ಗಾಢವಾಯಿತು.

ಆದರೆ ಎಲ್ಲ ಕಾಲಗಳಲ್ಲಿಯೂ ವಿಭಿನ್ನ ಪರಕೀಯ ಸಂಸ್ಕೃತಿಗಳ ಸಂಘರ್ಷಕ್ಕೆ ಒಳಗಾಗುತ್ತಲೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದ ಭಾರತೀಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗೆ ಎದುರಾಗುತ್ತಲೇ ಹೊಸ ಸಂಸ್ಕೃತಿಯ ಉತ್ತಮಾಂಶಗಳನ್ನು ಮೈಗೂಡಿಸಿಕೊಳ್ಳುವ ಕ್ರಿಯೆಗೆ ತೊಡಗಿತು. ಅಂತಹ ಕ್ರಿಯೆಗೆ ಕಾರಣ ಪುರುಷರಾದ ಮೊದಲ ವ್ಯಕ್ತಿಯೆಂದರೆ ರಾಜಾರಾಮ ಮೋಹನರಾಯ. ಹಲವಾರು ಭಾಷೆಗಳನ್ನು ಬಲ್ಲ ಇವರು ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಪರಿಸರದಲ್ಲಿ ಹೊಸ ಕ್ರಾಂತಿಗೆ ಕಾರಣರಾದರು. ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯಗಳೇ ಶ್ರೇಷ್ಠವೆಂಬ ನಂಬಿಕೆ ಆರಂಭ ಹಂತದಲ್ಲಿ ಮೋಹನರಾಯರಲ್ಲಿದ್ದರೂ ಭಾರತೀಯ ಸಂಸ್ಕೃತಿಯ ಸುಧಾರಣೆಗೆ ತೊಡಗಿದ್ದು ಹಾಗೂ ಇಂಗ್ಲೀಷರ ಸಹಾಯದಿಂದ 'ಸಹಗಮನ'ದಂತಹ ಅನಾಗರಿಕ, ಕ್ರೂರ ಪದ್ಧತಿಯ ನಿರ್ನಾಮಕ್ಕೆ, ಮೂರ್ತಿಪೂಜೆಯ ಖಂಡನೆಗೆ ವಿರೋಧಿ ನೆಲೆಯನ್ನು ಸಮರ್ಥವಾಗಿ ರೂಪಿಸಿದರು. ಆರಂಭದಲ್ಲಿ ಹಿಂದೂ ಪುರಾಣಗಳ ಅಪ್ರಸ್ತುತತೆಯನ್ನು ಅವತಾರಗಳನ್ನು ಟೀಕೆಗೆ ಗುರಿಪಡಿಸಿದಂತೆ, ಅನಂತರ ಕ್ರಿಸ್ತನ ಅವತಾರಗಳನ್ನು ಪ್ರಶ್ನಿಸಿದ್ದು ರಾಜಾರಾಮ ಮೋಹನರಾಯರ ಬಹುದೊಡ್ಡ ಸಾಧನೆಯಾಗಿದೆ. ಆ ಕಾಲದ ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆ ವಿಕರ್ಷಣೆಗಳು ಹಾಗೂ ಹೊಸತು ಹಳತರ ಸಮನ್ವಯವನ್ನು ರಾಜಾರಾಮ ಮೋಹನರಾಯ ಮತ್ತು ಬಂಕಿಮಚಂದ್ರ ಚಟರ್ಜಿಯವರ ಕ್ರಿಯಾಶೀಲತೆಯ ಹಂತಗಳನ್ನು ಸುಬೋಧಚಂದ್ರ ಸೇನ್ ಗುಪ್ತ ಅವರು ಹೀಗೆ ಗುರುತಿಸುತ್ತಾರೆ:

''ಬಂಗಾಲಿ ನಾಯಕರಿಗೆ ಮಾತ್ರವೇ ಸೀಮಿತಗೊಳಿಸಿಕೊಂಡಲ್ಲಿ ಭಾರತೀಯ ಪುನರುಜ್ಜೀವನಕ್ಕೆ ಎರಡು ಹಂತಗಳಿದ್ದವೆಂದು ಹೇಳಬಹುದು. ಮೊದಲನೆಯ ಹಂತದಲ್ಲಿ ರಾಜರಾಮಮೋಹನರಾಯ್ ಅವರು ಮೊದಲಿಗರಾಗಿ ನಿಂತು ಪ್ರಾಚೀನ ವ್ಯಾಕರಣ, ನಿರುಪಯುಕ್ತವಾದ ತಾತ್ವಿಕ ತತ್ವಮೀಮಾಂಸೆ ಹಾಗೂ ಅಂಧಶ್ರದ್ಧೆ ಇವೆಲ್ಲವಕ್ಕೂ ದಾಸರಾಗಿದ್ದ ನಮ್ಮನ್ನು ಮುಕ್ತಗೊಳಿಸಲು ಹೋರಾಡಿದರು. ಮುಂದೆ ಈ ಚಳುವಳಿಯು ಪಾಶ್ಚಿಮಾತ್ಯ ವೈಚಾರಿಕತೆ ಹಾಗೂ ವಿಜ್ಞಾನದೊಡನೆ ನಮ್ಮ ಮನಸ್ಸನ್ನು ಅನುಗೊಳಿಸಿತು. ಅನಂತರ, ಎರಡನೆಯ ಹಂತದಲ್ಲಿ ಹಿಂದು-ಮುಂದುಗಳೆರಡರ ಬಗೆಗೂ ಆಸಕ್ತಿ ಹೊಂದಿ, ಮಿತಿ ಮೀರಿದ ಪಾಶ್ಚಾತ್ಯೀಕರಣದ ವಿರುದ್ಧವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಪ್ರಾಚೀನ ಜ್ಞಾನ ಸಂಪತ್ತು ಹಾಗೂ ಆಧುನಿಕ ಕಾಲದ ವೈಜ್ಞಾನಿಕ ವೈಚಾರಿಕ ಆಲೋಚನೆಗೆ ಹೀಗೆ ಹಳತು-ಹೊಸತು ಇವೆರಡರ ಸಮನ್ವಯದ ಆಧಾರದ ಮೇಲೆ ರೂಪಿಸಲಾದ ಜೀವನ ತತ್ವದ ಅರಿವನ್ನು ಪಡೆಯಲು ಪ್ರಯತ್ನಪಡಲಾಯಿತು. ಆಗಸ್ಟ್‌ಕಾಮ್ಟೆಯ ಲೋಕಸಿದ್ಧವಾದದೊಡನೆ ಭಗವದ್ಗೀತೆಯ ಈಶ್ವರವಾದವನ್ನು ಸಮನ್ವಯಗೊಳಿಸಿ ತಮ್ಮದೇ ಆದ 'ಸಂಸ್ಕೃತಿಯ ಧರ್ಮ'ವನ್ನು ಬೋಧಿಸಿದ ಬಂಕಿಮಚಂದ್ರರು ಎರಡನೆಯ ಹಂತದ ಪ್ರಮುಖ ಪ್ರತಿಪಾದಕರಾಗಿದ್ದರು.''[೨] ಮೇಲಿನ ಉದ್ಧರಣದ ಮೊದಲನೆಯ ಹಂತಕ್ಕೆ ರಾಮಮೋಹನರಾಯರ ಸಾಲಿಗೆ ಸೇರಿ, ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗುತ್ತ, ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿದ್ದ ಅನಿಷ್ಟಗಳನ್ನು ನಿರ್ಮೂಲನ ಮಾಡಲು ಕ್ರಿಯಾಶೀಲರಾದವರಲ್ಲಿ

ಬಹುಮುಖ್ಯರಾದವರೆಂದರೆ ದೇವೇಂದ್ರನಾಥ ಠಾಕೂರ್, ಈಶ್ವರಚಂದ್ರ ವಿದ್ಯಾಸಾಗರ್, ಕೇಶವಚಂದ್ರ ಮೊದಲಾದವರು ಸ್ತ್ರೀ ಸ್ವಾತಂತ್ರ್ಯ, ಯಜ್ಞೋಪವೀತ ಪರಿತ್ಯಾಗ, ಅಸವರ್ಣ ವಿವಾಹ ಮೊದಲಾದ ಸುಧಾರಣೆಗಳಿಗಾಗಿ ಆ ಕಾಲದಲ್ಲಿ ತೊಡಗಿದರು. ಕೇಶವಚಂದ್ರ ಸೇನನಂತಹ ಸುಧಾರಕನ ಚಂಚಲ ಪ್ರವೃತ್ತಿಯು ಪ್ರಾಚ್ಯ ಮತ್ತು ಪಾಶ್ಚಾತ್ಯಗಳ ಆದರ್ಶಗಳ, ಸಂಸ್ಕೃತಿಗಳ ಸಂಘರ್ಷ ಕೊನೆಯವರೆಗೂ ಬಿಡದ ಕಾರಣ ಒಂದು ರೀತಿಯ ದ್ವಂದ್ವ ಪರಿಸ್ಥಿತಿ ಆ ಕಾಲಮಾನದಲ್ಲಿ ಏರ್ಪಟ್ಟಿತ್ತೆಂದರೆ ಸುಳ್ಳಲ್ಲ. ಭಾರತೀಯ ಸಾಮಾಜಿಕ ಸುಧಾರಕ ಹಾಗೂ ಕ್ರೈಸ್ತ ಪಾದ್ರಿಗಳ ಸಭೆಗಳು, ಉಪನ್ಯಾಸಗಳು, ಚರ್ಚೆಗಳು, ವಾಗ್ವಾದಗಳು ಅಂದಿನ ಸಮಾಜವನ್ನು ಶ್ರೀ ಸಾಮಾನ್ಯನನ್ನು ಒಂದು ರೀತಿಯ ಗೊಂದಲದಲ್ಲಿ ಸಿಲುಕಿಸಿದ್ದವೆನ್ನಬಹುದು. ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳು ಒಂದನ್ನೊಂದು ಕಬಳಿಸುತ್ತಿದ್ದ ಸಂದರ್ಭ ಅದಾಗಿತ್ತು. ಈ ಕಾಲಮಾನವನ್ನು ಕುವೆಂಪು 'ಭರತ ಖಂಡವು ಕುಲುಮೆಯ ಮೇಲಿನ ಮೂಷೆಯಂತಿತ್ತು' ಎನ್ನುತ್ತಾರೆ.

''ಬ್ರಹ್ಮ ಸಮಾಜವು ಮೂರ್ತಿಪೂಜೆ, ದೇವ ದೇವತೆಯರ ಆರಾಧನೆ, ಅವತಾರವಾದ ಜನ್ಮಾಂತರ ಮೊದಲಾದವುಗಳನ್ನು ಖಂಡಿಸಿ, ಜನರನ್ನು ದಂಡಿಸಿದ್ದರೆ ಆರ್ಯ ಸಮಾಜವು ವೇದವನ್ನು ಮೇಲೆತ್ತಿ ವೇದಾಂತವನ್ನು ಹಳಿದು, ಕ್ರೈಸ್ತಾದಿ ಮತಗಳನ್ನು ದೂಷಿಸಿ, ಮೂರ್ತಿಪೂಜೆಯನ್ನು ಧಿಕ್ಕರಿಸಿ ವರ್ಣಭೇದವನ್ನು ಮೇಲ್ಬಾಯ್ದು ವಿರೋಧಿಸಿ ಸಂಪ್ರದಾಯವನ್ನು ನೋಯಿಸಿತ್ತು. ಕ್ರೈಸ್ತ ಪಾದ್ರಿಗಳು ಹಿಂದೂ ಮತ ಖಂಡನೆಯಿಂದ ಜನರ ಜಿಗುಪ್ಸೆಗೆ ಪಕ್ಕಾಗುತ್ತಿದ್ದರು. ಥಿಯೊಸೋಫಿ ವರ್ಣಮಿಶ್ರಣ ಮಾಡುತ್ತಿದೆ ಎಂಬ ನಿಂದೆಗೆ ಗುರಿಯಾಗುತ್ತಿತ್ತು. ಈ ಸಂಸ್ಥೆಗಳಲ್ಲದೆ ನೂರಾರು ದೊಡ್ಡ ಸಣ್ಣ ಸುಧಾರಕರು ಸ್ವಯಂ ಆಚಾರ್ಯರಾಗಿ ತಮಗೆ ಸೂಕ್ತ ತೋರಿದಂತೆ ಸಮಾಜದ ರೀತಿ-ನೀತಿ ಧರ್ಮಗಳನ್ನು ವಿರೋಧಿಸಿ ಆರ್ಯಧರ್ಮವೆಂಬ ಅತಿ ಪುರಾತನ ಮಹಾವಟವೃಕ್ಷವನ್ನು ಬೇರು ಸಹಿತ ಕಿತ್ತು ಹಿಂದುಮುಂದಾಗಿ ನೆಡಲು ಹವಣಿಸುತ್ತಿದ್ದರು. ಎಲ್ಲರೂ ಖಂಡನೆಯ ಖಡ್ಗವನ್ನು ಬೀಸಿ ರೋಗಕ್ಕೆ ಶಸ್ತ್ರ ಚಿಕಿತ್ಸೆ ಮಾಡುವ ಸಾಹಸದಲ್ಲಿದ್ದಾರೆ ಹೊರತು, ರೋಗವನ್ನು ಪರೀಕ್ಷಿಸಿ ರೋಗಿ ಕಠಿಣಶಸ್ತ್ರ ಚಿಕಿತ್ಸೆಯನ್ನು ಹೊಂದಿ ಪಾರಾಗಲು ಶಕ್ತನಾಗಿದ್ದಾನೆಯೇ ಎಂಬುದನ್ನು ಒಬ್ಬರಾದರೂ ಯೋಚಿಸಲಿಲ್ಲ ವಿಚಾರಿಸಲೂ ಇಲ್ಲ.''[೮]

ಟಿಪ್ಪು ನಾಲ್ಕನೆಯ ಮೈಸೂರು ಯುದ್ಧ(೧೭೯೯)ದಲ್ಲಿ ಮರಣವಾದಾಗಲೇ ಮೈಸೂರು ಪ್ರಾಂತ್ಯಕ್ಕೆ ವಸಾಹತುಶಾಹಿಯ ಆಗಮನವಾಯಿತೆನ್ನಬಹುದು. ಟಿಪ್ಪು ದೇಶವನ್ನು ಬ್ರಿಟೀಷ್ ದಾಸ್ಯದಿಂದ ಬಿಡುಗಡೆಗೊಳಿಸಲು ಮಾಡಿದ ಪ್ರಯತ್ನಗಳೆಲ್ಲವೂ ಸ್ಥಳೀಯ ರಾಜರ ಹಾಗೂ ಬ್ರಿಟೀಷರ ಕುತಂತ್ರಕ್ಕೆ ಬಲಿಯಾದವು. ಬ್ರಿಟೀಷರ ರಾಜಕೀಯ ತಂತ್ರ ಸ್ಥಳೀಯ ರಾಜರ ಸಹಾಯವನ್ನು ಚೆನ್ನಾಗಿಯೇ ಬಳಸಿಕೊಳ್ಳುವುದರ ಮೂಲಕ ಅಂದರೆ ಬ್ರಿಟೀಷ್ ಸಾಮ್ರಾಜ್ಯ ನಿಜಾಂ, ಮರಾಠಾ ಮೈತ್ರಿ ಕೂಟವನ್ನು ಏರ್ಪಡಿಸಿಕೊಂಡು ಟಿಪ್ಪುವನ್ನು ವ್ಯವಸ್ಥಿತವಾಗಿ ಕೊಲ್ಲಲಾಯಿತು.

ಟಿಪ್ಪು ಬ್ರಿಟೀಷರ ವಿರುದ್ಧ ಪ್ರತಿಭಟಿಸುತ್ತಿದ್ದ ಕಾಲಮಾನದಲ್ಲಿಯೆ ಮೈಸೂರು ಅರಸರ ಮನೆತನ ಬ್ರಿಟೀಷರ ಮೊರೆ ಹೋದದ್ದು ಸಂಪೂರ್ಣವಾಗಿ ವಸಾಹತುಶಾಹಿ ತಂತ್ರಗಳಿಗೆ ಮೈಸೂರು ಪ್ರಾಂತ್ಯವನ್ನು ಬಲಿ ಕೊಟ್ಟಂತಾಯಿತು. ಮೈಸೂರು ಅರಸು ಮನೆತನದ ದೌರ್ಬಲ್ಯವನ್ನು ಅರಿತ ಬ್ರಿಟೀಷ್ ಸಾಮ್ರಾಜ್ಯಶಾಹಿ ನೀತಿಯು ಅರಸರನ್ನು ಸಂಪೂರ್ಣವಾಗಿ ಅತಂತ್ರಗೊಳಿಸುವುದರ ಮೂಲಕ ಕೈಗೊಂಬೆಗಳನ್ನಾಗಿ ಮಾಡಿ ಕೊಂಡಿತು. ಮೈಸೂರು ಮನೆತನದ ಇಂತಹ ದುರಂತ ನಿರ್ಧಾರಗಳಿಂದಾಗಿ ಆ ಪ್ರಾಂತ್ಯವು ಯಾವುದೇ ತಕರಾರುಗಳೂ ಪ್ರತಿರೋಧಗಳೂ ಇಲ್ಲದೆ ಅತಿ ಶೀಘ್ರವಾಗಿ ಬ್ರಿಟೀಷರ ಹಿಡಿತಕ್ಕೆ ಒಳಪಟ್ಟಿತು. ಇದರಿಂದ ಅವರ ಪ್ರಭಾವ ಕರ್ನಾಟಕದಲ್ಲಿ ಪ್ರಬಲಗೊಳ್ಳುವಂತಾಯಿತು. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು, ಹಳೆಯ ಮೈಸೂರು, ದಕ್ಷಿಣ ಕನ್ನಡ ಅಂದರೆ ಅಖಂಡ ಕರ್ನಾಟಕದ ಸಂದರ್ಭದಲ್ಲಿಯೂ ಈ ಮಾತು ನಿಜ. ಹೀಗೆ ಎರಡು ಶಕ್ತಿಗಳು ಏಕಕಾಲದಲ್ಲಿ ಆಡಳಿತ ವನ್ನು ನಡೆಸಲು ಮುಂದಾದಾಗ ಗೊಂದಲಗಳು ಏರ್ಪಟ್ಟು ಸಾಮಾಜಿಕ, ರಾಜಕೀಯ ಹಾಗೂ ಕೃಷಿ ವಲಯಗಳಲ್ಲಿ ಕ್ರಾಂತಿಯೇ ಆಯಿತೆನ್ನಬಹುದು.

ಈಸ್ಟ್ ಇಂಡಿಯಾ ಕಂಪನಿಯು ಜಾರಿಗೊಳಿಸಿದ ತೆರಿಗೆ, ನ್ಯಾಯ ಪದ್ಧತಿ, ಆರ್ಥಿಕ, ಸುಧಾರಣೆಗಳು ಸ್ಥಳೀಯರನ್ನು ಸಂಕಷ್ಟಗಳಿಗೆ ಗುರಿಮಾಡಿದವು. ಅಲ್ಲದೆ, ಬ್ರಿಟೀಷರು ಒಡ್ಡಿದ ತೆರಿಗೆ, ಕಪ್ಪಗಳನ್ನು ಸ್ಥಳೀಯರಿಂದ ವಸೂಲಿ ಮಾಡಿಕೊಡುವುದು ದಾಸ್ಯವನ್ನು ಸ್ವೀಕರಿಸಿದ ಮೈಸೂರು ಅರಸರಿಗೆ ಸುಲಭದ ಕೆಲಸವಾಗಿರಲಿಲ್ಲ. ಸ್ಥಳೀಯ ಸಂಪನ್ಮೂಲಗಳಿಂದಲೇ ಬ್ರಿಟೀಷರಿಗೆ ಪ್ರತಿವರ್ಷ ಕೊಡಬೇಕಾಗಿದ್ದ ಅಪಾರ ಮೊತ್ತದ ಕಾಣಿಕೆಗಳನ್ನು ಒದಗಿಸಿ ಕೊಡಬೇಕಾಗಿತ್ತು. ಅಂತೆಯೇ ದತ್ತು ಮಕ್ಕಳಿಗೆ ಹಕ್ಕಿಲ್ಲ, ನಿರಾಯುಧ ಕಾಯಿದೆ ಮೊದಲಾದ ಕಾಯಿದೆಗಳು ಸ್ಥಳೀಯರನ್ನು ದುರ್ಬಲಗೊಳಿಸಿದವು. ಇಂತಹ ಧೋರಣೆ, ನೀತಿಗಳು ಸ್ಥಳೀಯ ನಾಯಕರನ್ನು ರೊಚ್ಚಿಗೆಬ್ಬಿಸಿದವು. ಧೊಂಡಿಯವಾಘ, ಐನೂರು ವೆಂಕಟಾದ್ರಿ ನಾಯಕ ಮೊದಲಾದವರಿಗೆ ಬ್ರಿಟೀಷರ ಪ್ರಭಾವವು ಮೈಸೂರು ಪ್ರಾಂತ್ಯದಲ್ಲಿ ಪ್ರಬಲವಾಗಬಾರದೆಂಬ ಆಶಯವಿತ್ತು. ಅದರಲ್ಲಿಯೂ ಪರಾಕ್ರಮಿ ಹಾಗೂ ಆಕ್ರಮಣಶೀಲನಾದ ಧೊಂಡಿಯವಾಘನು ಬ್ರಿಟೀಷರಿಗೆ ತೊಡಕಾಗಿಯೇ ಕಾಣಿಸಿದನು. ಈ ಕಾಲಮಾನದಲ್ಲಿ ಕರ್ನಾಟಕದಲ್ಲಿ ಅನೇಕ ಬಂಡಾಯಗಳು ನಡೆದವು. ಕಿತ್ತೂರು, ಸಂಗೊಳ್ಳಿ, ಶಿಂದಗಿ, ಸುರಪುರ, ದಕ್ಷಿಣ ಕನ್ನಡ, ಕೊಡಗು ಮತ್ತು ರೈತ ಬಂಡಾಯಗಳು ಅವುಗಳಲ್ಲಿ ಮುಖ್ಯವಾದವು. ಆದರೆ, 'ಒಡೆದು-ಆಳುವ' ಆಂಗ್ಲರ ನೀತಿ ಇಲ್ಲಿಯೂ ಚೆನ್ನಾಗಿಯೇ ಫಲಿಸಿತು. ಆದರೂ ಇಂತಹ ಸ್ಥಳೀಯ ನಾಯಕರ ಬಂಡಾಯಗಳು ಸ್ಥಳೀಯರಲ್ಲಿ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವ ಮನಃಸ್ಥಿತಿಯನ್ನು ಉಂಟು ಮಾಡಿದವೆನ್ನಬಹುದು. ಇಂತಹ ದಂಗೆಗಳ ಅನನ್ಯತೆ, ಹೋರಾಟಗಾರರ ವೀರತ್ವ, ತ್ಯಾಗ ಜೀವನ ಹಾಗೂ ಆಂಗ್ಲರ ಸಾಮ್ರಾಜ್ಯಶಾಹಿ ನೀತಿಯ ಬಗೆಗೆ ಅವರು ತೋರಿದ ಪ್ರತಿರೋಧ ಗಮನಾರ್ಹವಾದುದು.

ಇದೇ ಕಾಲಮಾನದಲ್ಲಿ ರೂಪುಗೊಳ್ಳುತ್ತಿದ್ದ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಇಂತಹ ಪ್ರಾದೇಶಿಕ ದಂಗೆಗಳ ಮೇಲೆ ನೇರ ಪ್ರಭಾವವನ್ನುಂಟು ಮಾಡದಿದ್ದರೂ ಒಂದು ಬಗೆಯ ಸ್ಫೂರ್ತಿ ನೀಡಿತು. ಪರೋಕ್ಷವಾಗಿ ಸಿಕ್ಕ ಈ ಪ್ರಭಾವವನ್ನು ಉಪಯೋಗಿಸಿಕೊಂಡ ಸ್ಥಳೀಯ ದಂಗೆಗಳು ರಾಷ್ಟ್ರವ್ಯಾಪಿ ಹರಡಿಕೊಳ್ಳುವುದರ ಮುಖೇನ ಬ್ರಿಟೀಷ್ ಸಾಮ್ರಾಜ್ಯದ ಮೇಲೆ ಮಹತ್ವದ ಪರಿಣಾಮಗಳನ್ನು ಬೀರಿದವು. ಹೀಗೆ ಆಂಗ್ಲರು ನಮ್ಮ ರಾಷ್ಟ್ರವನ್ನು ಆಕ್ರಮಿಸಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನೆಲೆಗಳನ್ನು ಆಘಾತಕ್ಕೆ ಗುರಿ ಮಾಡುತ್ತಿದ್ದ ಸಂದರ್ಭದಲ್ಲಿ ಭಾರತೀಯ ಸಾಂಸ್ಕೃತಿಕ ಪರಿಸರವೂ ತನ್ನದೇ ಆದ ಪ್ರತಿರೋಧವನ್ನು ತೋರಿರುವುದನ್ನು ಆ ಕಾಲದಲ್ಲಿ ರಚಿತಗೊಂಡಿರುವ ಸಾಹಿತ್ಯ ಕೃತಿಗಳು ಮನದಟ್ಟು ಮಾಡುತ್ತವೆ.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಸೃಷ್ಟಿಗೊಂಡ ಕನ್ನಡ ಸಾಹಿತ್ಯ ತುಂಬಾ ವ್ಯಾಪಕವಾಗಿದ್ದು ಅನೇಕ ದೃಷ್ಟಿಗಳಿಂದ ಗಮನಾರ್ಹವಾದದ್ದಾಗಿದೆ. ಈ ಕಾಲಘಟ್ಟ ಭಾರತದ ಚರಿತ್ರೆಯ ದೃಷ್ಟಿಯಿಂದ ತುಂಬ ಮಹತ್ವದ್ದು. ಭಾರತದ ಇನ್ನಿತರ ಭಾಷಾ ಸಂದರ್ಭಗಳಲ್ಲಿ ಹೇಗೋ ಹಾಗೆಯೇ ಕನ್ನಡ ಸಂದರ್ಭದಲ್ಲಿಯೂ ಕೂಡ ವಸಾಹತುಶಾಹಿ ಪ್ರಭಾವಕ್ಕೆ ಹಾಗೂ ಅಂಥ ವಾತಾವರಣಕ್ಕೆ ಕನ್ನಡ ಸಾಹಿತ್ಯ ತೋರಿದ ಪ್ರತಿಕ್ರಿಯೆಯನ್ನು ಅನೇಕ ಮಟ್ಟಗಳಲ್ಲಿ ಪರಿಶೀಲಿಸುವುದು ಸಾಧ್ಯ. ಭಿನ್ನ ಸಂಸ್ಕೃತಿಯೊಂದು ಜೀವಂತ ಸಂಸ್ಕೃತಿಯ ಮೇಲೆ ಆಕ್ರಮಣ ಹೂಡಿದಾಗ ಉಂಟಾಗುವ ಘರ್ಷಣೆ ಅದಕ್ಕೆ ಎದುರಾಗುವ ಪ್ರತಿಕ್ರಿಯೆ ಯಾವುದೇ ಸಾಂಸ್ಕೃತಿಕ ಅಧ್ಯಯನದ ಮುಖ್ಯ ನೆಲೆ ಆಗುತ್ತದೆ. ಪರಕೀಯ ಆಕ್ರಮಣದಿಂದ ನಮ್ಮ ಸಂಸ್ಕೃತಿಯ ಮುಖ್ಯ ನೆಲೆಗಳು ತೀವ್ರವಾದ ಆಘಾತಕ್ಕೆ ಗುರಿಯಾದದ್ದನ್ನು ಈ ಕಾಲಮಾನದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ ಕಾಣುತ್ತೇವೆ. ಹೊಸ ಪರಿಸರ ನಮ್ಮ ಒಟ್ಟು ಸಂದರ್ಭವನ್ನು ಆವರಿಸಿದ್ದರಿಂದ ಮನುಷ್ಯ ಎದುರಿಸಬೇಕಾಗಿ ಬಂದ ಸವಾಲುಗಳು ಕೂಡ ಬಹುಮುಖ್ಯವಾಗಿದ್ದವು. ಪಾರಂಪರಿಕ ಜೀವನ ವಿಧಾನಕ್ಕೂ ಹೊಸ ಸಂದರ್ಭದಿಂದ ನಿರ್ಮಾಣವಾದ ವಾತಾವರಣಕ್ಕೂ ಘರ್ಷಣೆ ಏರ್ಪಡುವುದು ಅನಿವಾರ್ಯವೇ ಆಯಿತು.

ಬ್ರಿಟೀಷರು ಭಾರತದಲ್ಲಿ ಅಧಿಕಾರವನ್ನು ನೆಲೆಗೊಳಿಸಲು ನಡೆಸಿದ ಪ್ರಯತ್ನ ಹಾಗೂ ತಂತ್ರಗಳು ಅನೇಕ ಸ್ಥಿತ್ಯಂತರಗಳಿಗೆ ದಾರಿ ಮಾಡಿಕೊಟ್ಟವು. ಇದು ವ್ಯಾಪಾರೀ ಕೇಂದ್ರದಿಂದ ಹೊರಟು ರಾಜಕೀಯ ಆಳ್ವಿಕೆಯ ತನಕ ಹಂತಹಂತವಾಗಿ ವ್ಯಾಪಿಸಿತು. ಇದರಿಂದ ಭಾರತೀಯ ಸಂದರ್ಭದಲ್ಲಿ ಅನೇಕ ತಳಮಳಗಳಿಗೆ ಕಾರಣವಾಗುತ್ತಲೇ ಹೊಸ ಎಚ್ಚರ ಮತ್ತು ಸ್ಥಳೀಯ ಸಂಸ್ಕೃತಿಯ ನೆಲೆಗಳನ್ನು ಮತ್ತೆ ಕಂಡುಕೊಳ್ಳಲು ದಾರಿಮಾಡಿಕೊಟ್ಟಿತು. ಪರಕೀಯ ಆಕ್ರಮಣದ ಅಸಹಾಯಕತೆಯ ಮಧ್ಯದಲ್ಲಿಯೇ ಹುಟ್ಟಿಕೊಂಡ ಆತ್ಮವಿಶ್ವಾಸದ ನೆಲೆ ನಮ್ಮ ಸಾಹಿತ್ಯ ಸಂದರ್ಭದ ಅಭಿವ್ಯಕ್ತಿಯ ಮುಖ್ಯ ಭಾಗವಾಗಿದೆ.

ಬ್ರಿಟೀಷರ ಆಗಮನಕ್ಕೆ ಮುಂಚೆ ಭಾರತೀಯ ರಾಜ್ಯವ್ಯವಸ್ಥೆಯಲ್ಲಿ ಅನೇಕ ಪಲ್ಲಟಗಳಾಗಿದ್ದವು. ಸಣ್ಣ ಸಣ್ಣ ಸಂಸ್ಥಾನಗಳಾಗಿ ಹರಿದು ಹಂಚಿಹೋಗಿದ್ದ ಭಾರತದಲ್ಲಿ ಬ್ರಿಟೀಷರ ರಾಜಕೀಯ ವ್ಯವಸ್ಥೆ ಏಕಚಕ್ರಾಧಿಪತ್ಯವನ್ನು ನಿರ್ಮಿಸುವ ಪ್ರಯತ್ನಕ್ಕೆ ತಕ್ಕ ಅನುಕೂಲಗಳೇ ಒದಗಿಬಂದವು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಅನೇಕ ಮಟ್ಟದ ಛಿದ್ರಾವಸ್ಥೆ ನಿರ್ಮಾಣಗೊಂಡಿತ್ತು. ಪಾರಂಪರಿಕ ಸಮಾಜ ವ್ಯವಸ್ಥೆಯಲ್ಲಿಯೇ ಇದ್ದ ಏರುಪೇರುಗಳು ಬ್ರಿಟೀಷ್ ರಾಜಕೀಯ ವ್ಯವಸ್ಥೆಯಿಂದಾಗಿ ಇನ್ನೂ ಹೆಚ್ಚು ಬಲಗೊಳ್ಳಲು ಇಂಬುಕೊಟ್ಟವು. ಇಂಥ ಸ್ಥಿತಿಗಳಲ್ಲಿ ನಮ್ಮ ಸಂಸ್ಕೃತಿಯ ಮೂಲ ಚಹರೆಗಳನ್ನೇ ಬದಲಿಸಿದವು. ಪುರೋಹಿತಶಾಹಿ, ಅದರ ನೇತೃತ್ವದಲ್ಲಿದ್ದ ಜಾತಿ, ಮತ, ಸ್ಪೃಶ್ಯ-ಅಸ್ಪೃಶ್ಯ, ಶಿಷ್ಟ-ಪರಿಶಿಷ್ಟ ನೆಲೆಗಳು ಹೊರಗಿನ ಶಕ್ತಿಯು ನಿರ್ಮಿಸಿದ ಕಾನೂನು ಹಾಗೂ ಕ್ರೂರ ಶಾಸನಗಳಿಂದಾಗಿ ಆಂತರಿಕವಾಗಿ ಹೆಚ್ಚು ಬಲಗೊಳ್ಳುತ್ತಲೂ ಬಾಹ್ಯ ಸಂದರ್ಭದಲ್ಲಿ ಉದಾರವಾದಿಯಾಗಿ ಕಾಣಿಸಿಕೊಳ್ಳುತ್ತಲೂ ವಿಲಕ್ಷಣ ಸಂದರ್ಭ ಒಂದನ್ನು ಸೃಷ್ಟಿಸಿದ್ದು ವಸಾಹತುಶಾಹಿಯ ಮುಖ್ಯ ತಂತ್ರವಾಯಿತು.

ಕನ್ನಡ ಭಾಷಾ ಸಂದರ್ಭದಲ್ಲಿ ಮತ್ತೊಂದು ಗಂಭೀರ ಸಮಸ್ಯೆ ಪ್ರಧಾನವಾಗಿತ್ತು. ಕನ್ನಡ ಸಂಸ್ಕೃತಿಯ ಮುಖ್ಯ ಪ್ರಾದೇಶಿಕ ಭಾಗಗಳು ಹರಿದು ಹಂಚಿ ಹೋಗಿದ್ದವು. ಮದರಾಸು, ಹೈದರಾಬಾದ್, ಮುಂಬಯಿ ಹಾಗೂ ಕೇರಳದ ಅನೇಕ ಭಾಗಗಳಿಗೆ ನಮ್ಮ ಭೂಭಾಗ ಸೇರಿಕೊಂಡು ಹೋಗಿದ್ದರಿಂದ ಕನ್ನಡಿಗರ ಐಕ್ಯತೆ ಹಾಗೂ ಜಾಗೃತಿಯ ವಿಚಾರದಲ್ಲಿ ತುಂಬ ದೊಡ್ಡ ವಿಘ್ನವನ್ನೇ ತಂದೊಡ್ಡಿತು. ಕನ್ನಡಿಗರು ತಮ್ಮನ್ನು ತಾವು ಸಂವಹಿನಿಸುವುದಕ್ಕೂ ಸಾಧ್ಯವಿಲ್ಲದಂಥ, ಉಸಿರುಕಟ್ಟಿಸುವ ಸ್ಥಿತಿ ಏರ್ಪಟ್ಟಿತು.

ಇಂಥ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ತನ್ನ ಅಭಿವ್ಯಕ್ತಿಯನ್ನು ಗಂಭೀರವಾಗಿ ಪ್ರಸ್ತುತಪಡಿಸುವುದಕ್ಕೆ ಹದಿನೆಂಟನೆ ಶತಮಾನದ ಆರಂಭದಲ್ಲಿ ಪ್ರಾರಂಭಿಸಿತು. ಆ ಹೊತ್ತಿಗೆ ಕ್ರೈಸ್ತ ಮಿಶನರಿಗಳು ವ್ಯವಸ್ಥಿತವಾಗಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನೆಲೆಯೂರಿದವು. ಮುದ್ರಣಯಂತ್ರ, ಪಾಶ್ಚಾತ್ಯ ಶಿಕ್ಷಣಕ್ರಮ, ಪಠ್ಯ ಪುಸ್ತಕಗಳ ರಚನೆ, ನಿಘಂಟು ವ್ಯಾಕರಣಗಳನ್ನು ರೂಪಿಸಿದ ಪಾಶ್ಚಾತ್ಯ ವಿದ್ವಾಂಸರು ಕನ್ನಡ ಸಾಹಿತ್ಯದ ಅಧಿಕೃತ ವಕ್ತಾರರೇ ಆಗಿಬಿಟ್ಟರು. ಕನ್ನಡ ಸಾಹಿತ್ಯ ಸೃಷ್ಟಿಯನ್ನು ಒಂದು ಅವಶೇಷವನ್ನು ನೋಡುವ ದೃಷ್ಟಿಯಿಂದ ನೋಡಿ ಅವರು ತಮ್ಮ ಗ್ರಹಿಕೆಗಳನ್ನು ರೂಪಿಸಿಕೊಂಡವರಾಗಿದ್ದರು. ಅವರು ರೂಪಿಸಿದ ಗ್ರಂಥ ಸಂಪಾದನೆ ಹಾಗೂ ಕಾವ್ಯ ಸಂಕಲನಗಳು ಪ್ರಸಾರಗೊಂಡಿತಾದರೂ ಕನ್ನಡ ಸಾಹಿತ್ಯ ಪರಂಪರೆಯ ಜೀವಂತಿಕೆಯನ್ನು ಕ್ರಿಯಾತ್ಮಕಗೊಳಿಸುವುದು ಅವರ ಪಠ್ಯ ನಿರ್ಮಾಣದ ಉದ್ದೇಶವಾಗಿರಲಿಲ್ಲ. ಕ್ರೈಸ್ತ ಮಿಶನರಿಗಳ ಮೂಲಕ ನಿರ್ಮಾಣವಾದ ಧಾರ್ಮಿಕ ಸಾಹಿತ್ಯ, ಭಕ್ತಿಗೀತೆ, ಪ್ರಾರ್ಥನಾ ಗೀತೆಗಳ ರಚನೆಗಳು ಅಪಾರ ಪ್ರಮಾಣದಲ್ಲಿ ಈ ಕಾಲಮಾನದಲ್ಲಿ ಪ್ರಕಟಗೊಂಡವು.

ಇಂಡಿಯಾದಲ್ಲಿ ಬ್ರಿಟೀಷರ ಆಳ್ವಿಕೆಯಿಂದುಂಟಾದ ಪರಿಣಾಮವನ್ನು ಕುರಿತು ಆಲೋಚಿಸಿದಾಗ 'ಆಧುನಿಕತೆ'ಗೆ ಇರುವ ಅರ್ಥದ ವಲಯಗಳೂ ಬ್ರಿಟೀಷರು ಬರುವುದಕ್ಕಿಂತ ಪೂರ್ವದ ಇಂಡಿಯಾದ ಸಮಾಜವನ್ನು ಕುರಿತು ಆಲೋಚಿಸಿದಾಗ 'ಆಧುನಿಕತೆ' ಎಂಬುದು ಇತ್ತೆ? ಆಧುನಿಕ ಸಮಾಜ ಇತ್ತೆ? ಅಥವಾ ಬೇರೊಂದು ರೀತಿಯಲ್ಲಿ ಈ 'ಆಧುನಿಕತೆ' ಎಂಬುದನ್ನು ನೋಡಲು ಸಾಧ್ಯವಿದೆಯೇ? ಅಥವಾ ಇವತ್ತು ಯಾವುದನ್ನು ಈ 'ಆಧುನಿಕತೆ' ಎಂದು ಕರೆಯುತ್ತೇವೆಯೋ ಅದಕ್ಕೂ 'ವೈಚಾರಿಕತೆ' ಎಂಬುದಕ್ಕೂ ಸಂಬಂಧವಿದೆಯೆ? ಎಂಬ ಪ್ರಾಥಮಿಕ ಪ್ರಶ್ನೆಗಳಿಗೆ ಸರಳವಾದ ಉತ್ತರಗಳನ್ನು ಆಲೋಚಿಸುವುದಾದರೆ, ಯಾವುದೇ ಒಂದು ನಾಗರಿಕತೆಯು ತನ್ನ ಬದುಕಿನ ಇತಿಹಾಸದಲ್ಲಿ ಹೊಸ ಹೊಸ ಚಿಂತನೆಗಳ ಮೂಲಕ ವಿಕಾಸವನ್ನು, ಪ್ರಗತಿಯನ್ನು ಪಡೆಯುತ್ತ ಗಟ್ಟಿಗೊಳ್ಳಲು ಹುಟ್ಟುವ ಸಂಘರ್ಷಗಳನ್ನು ಮೀರಿ ಮುಂದುವರಿಯುತ್ತ ಉತ್ಕೃಷ್ಟ ಆಲೋಚನೆಗಳ ಮೂಲಕ ಮನುಷ್ಯನ ಒಳಿತನ್ನು ಬಯಸುವ ಸಮಾಜವನ್ನು, ಮನಸ್ಸುಗಳ ಆಧುನಿಕ ಸಮಾಜ ಎಂದು ಕರೆಯಬೇಕಾಗುತ್ತದೆ.

''ಇಂಗ್ಲೀಷಿನ 'Modern' ಎಂಬ ಶಬ್ದ ೧೫ನೇ ಶತಮಾನದ ಲ್ಯಾಟಿನ್‌ನ 'Modernus' ಎಂಬ ಪದದಿಂದ ರೂಪುಗೊಂಡಿದೆ. ಲ್ಯಾಟಿನ್‌ನಲ್ಲಿ 'ಮಾಡರ್ನಸ್' ಎಂಬ ಪದವನ್ನು ೧೫ನೇ ಶತಮಾನದ ಕ್ರಿಶ್ಚಿಯನ್ ಘಟ್ಟವನ್ನು ರೋಮನ್ನರ ಕ್ಷುದ್ರ ಧರ್ಮಗಳ ಭೂತಕಾಲದಿಂದ ಪ್ರತ್ಯೇಕಿಸಲು ಬಳಸಲಾಯಿತು. ಮಧ್ಯಯುಗದಲ್ಲಿ 'ಮಾಡರ್ನ್' ಎಂಬ ಪದವನ್ನು 'ಪ್ರಾಚೀನ' ಎಂಬ ಹಂತದಿಂದ ಸಮಕಾಲೀನ ಘಟ್ಟವನ್ನು ಪ್ರತ್ಯೇಕಿಸಲು ಬಳಸಲಾಯಿತು. ಕ್ರಮೇಣ ಮಾಡರ್ನಿಟಿ ಎಂಬ ಪದ ಹದಿನಾರನೆಯ ಶತಮಾನದ ಹೊತ್ತಿಗೆ ಯುರೋಪಿನಲ್ಲಿ ಹುಟ್ಟಿದ ಸಾಮಾಜಿಕ ಸಂಸ್ಥೆಗಳನ್ನು ವಿವರಿಸಿಕೊಳ್ಳಲು ಹೆಚ್ಚು ಬಳಕೆಗೆ ಬಂತು. ಯುರೋಪು ಭೂಮಂಡಲವನ್ನು ಹೊಸದಾಗಿ ಶೋಧಿಸುವ ಹಾಗೂ ವಸಾಹತೀಕರಿಸುವ ಕೆಲಸದಲ್ಲಿ ತೊಡಗಿದಾಗ, ಈ ಸಾಮಾಜಿಕ ಸಂಸ್ಥೆಗಳು 'ಮಾಡರ್ನಿಟಿ'ಯನ್ನು ಎಲ್ಲೆಡೆ ಹಬ್ಬಿಸತೊಡಗಿದವು. ಎಂದು ಮಾಡರ್ನಿಟಿ ಶಬ್ದದ ಚರಿತ್ರೆ ಹೇಳುತ್ತದೆ.''[೬]

''ಪುನರುಜ್ಜೀವನ ಯುಗ ಹಾಗೂ ಸುಧಾರಣಾ ಯುಗಗಳು ಕೂಡ 'ಆಧುನಿಕಯುಗ' ಹಾಗೂ 'ಮಧ್ಯಯುಗ' ಎಂಬ ನಿರ್ಣಾಯಕ ವರ್ಗೀಕರಣವನ್ನು ಮಾಡಿದವು. ಧರ್ಮ ಹಾಗೂ ಆಧ್ಯಾತ್ಮಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ ಘಟ್ಟ ಇದು. ಈ ದೃಷ್ಟಿಯಿಂದ ವಿಜ್ಞಾನ ಕೇಂದ್ರಕ್ಕೆ ಬಂದ ನಂತರ ಸ್ಥಾಪಿತಗೊಂಡ ನೋಟ ಕ್ರಮ 'ಆಧುನಿಕತೆ'. ಆದರೆ ಹನ್ನೆರಡನೆಯ ಶತಮಾನದ ಚಾರ್ಲ್ಸ್ ದೊರೆಯ ಕಾಲದಲ್ಲೇ ಜನ ತಮ್ಮನ್ನು ತಾವು 'ಮಾಡರ್ನ್' ಎಂದು ಕರೆದುಕೊಂಡ ಉದಾಹರಣೆಗಳಿವೆ. ಅಂದರೆ, ಒಂದು ಕಾಲದ ಜನ ೧. ಭೂತದೊಂದಿಗೆ ತಮ್ಮ ಸಂಬಂಧವನ್ನು ಪುನರ್ ವ್ಯಾಖ್ಯಾನಿಸಿಕೊಂಡಾಗ, ಅಥವಾ ೨. ಭೂತದಿಂದ ತಮ್ಮನ್ನು ತಾವು

ಕಡಿದುಕೊಂಡಾಗ ಅಥವಾ ೩. ಭೂತದೊಂದಿಗೆ ಕಡಿದು ಹೋದ ತಮ್ಮ ಸಂಬಂಧವನ್ನು ಪುನರ್ ಸ್ಥಾಪಿಸಿಕೊಳ್ಳಲೆತ್ನಿಸಿದಾಗ ಈ ಮೂರು ಹಂತಗಳಲ್ಲಿ 'ಆಧುನಿಕತೆ' ಎಂಬ ಪರಿಕಲ್ಪನೆ ಇತಿಹಾಸದಲ್ಲಿ ಹೆಚ್ಚು ಚಾಲ್ತಿಗೆ ಬಂದಂತಿದೆ. ಆದರೆ ಆಧುನಿಕತೆ ಒಂದು ಬಹುದೊಡ್ಡ ಆಳುವ ಭಾಷೆಯಾಗಿ, ಸಂಕಥನವಾಗಿ, ವ್ಯವಸ್ಥೆಯಾಗಿ, ಧೋರಣೆಯಾಗಿ, ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನವಾಗಿ ಮಾನವನ ಪ್ರಜ್ಞೆ ಹಾಗೂ ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ನೋಟಕ್ರಮವಾಗಿ ಪುನರುಜ್ಜೀವನದಿಂದೀಚೆಗೆ ಬೆಳೆದು ಬಂತು ಹಾಗೂ ಇಪ್ಪತ್ತನೇ ಶತಮಾನದ ಮುಖವನ್ನೇ ಬದಲಿಸಿತು."[೧೦]

"ಆಧುನಿಕತೆ, ಆಧುನೀಕರಣ ಮೊದಲು ಆರಂಭವಾದದ್ದು ಪಶ್ಚಿಮದ ದೇಶಗಳಲ್ಲಿ. ಆದರೆ ಅದು ಆರಂಭವಾದದ್ದು ಯಾವಾಗ ಎಂದು ಖಚಿತವಾಗಿ ಹೇಳುವುದು ಕಷ್ಟ. ಪ್ರಚಲಿತ ಸಂಪ್ರದಾಯಕ್ಕೆ ಬದಲಾಗಿ ಕಾಣಿಸಿಕೊಂಡ ಹೊಸ ಬೆಳವಣಿಗೆಯನ್ನೆಲ್ಲ ಆಧುನಿಕ - ಮಾಡರ್ನ್ ಎಂದು ಕರೆದಿರುವ ಅನೇಕ ಉದಾಹರಣೆಗಳು ಸಿಗುತ್ತವೆ. ಎಲಿಜಬೀಥನ್ ಸಾಹಿತ್ಯಕ್ಕಿಂತ ಭಿನ್ನವಾಗಿ ರಚನೆಯಾದ ತನ್ನ ಕಾಲದ ೧೭ನೇ ಶತಮಾನದ ಇಂಗ್ಲೀಷ್ ಸಾಹಿತ್ಯವನ್ನು ಡ್ರೈಡನ್ ಎಂಬ ವಿಮರ್ಶಕ 'ಮಾಡರ್ನ್' ಎಂದು ವರ್ಣಿಸಿದ್ದ. ರಾಣಿ ಎಲಿಜಬೆಥ್‌ಳ ಕಾಲದವರೂ ತಾವು 'ಆಧುನಿಕ'ರೆಂದು ಭಾವಿಸಿದ್ದರು."[೧೧]

ಇವತ್ತು ನಾವು 'ಆಧುನಿಕತೆ' ಎಂದು ಯಾವುದನ್ನು ಕುರಿತು ಆಲೋಚಿಸುತ್ತೇವೆಯೋ ಅದೆಲ್ಲವನ್ನೂ ಪಾಶ್ಚಾತ್ಯರ ಆಲೋಚನೆಯಿಂದ ಪಡೆದುಕೊಂಡದ್ದು. ಬ್ರಿಟೀಷರ ಆಳ್ವಿಕೆಯಿಂದ ಉಂಟಾದ ವಸಾಹತೀಕರಣ, ಕೈಗಾರಿಕೀಕರಣ, ನಗರೀಕರಣಗಳ ಪರಿಣಾಮದಿಂದ ಭಾರತೀಯ ಸಮಾಜವನ್ನು ಸ್ಕೂಲ್, ಹೋಟಲ್, ಸಿನಿಮಾ, ಥಿಯೇಟರ್, ಬಸ್, ರೋಡ್, ಸೆಲೂನ್, ಕೋರ್ಟು, ಪೋಲೀಸ್, ಅಂಚೆ, ರೇಡಿಯೋ, ಟಿ.ವಿ., ಸೈಕಲ್ ಮುಂತಾದ ಸಾವಿರಾರು ವಸ್ತು ವಿಷಯಗಳು ತುಂಬಿಕೊಂಡ ಕಾರಣದಿಂದ ಭಾರತದಲ್ಲಿ ಮನೆ ಮಾಡಿಕೊಂಡಿದ್ದ ಜಾತಿಪದ್ಧತಿ, ಸ್ತ್ರೀ ವಿರೋಧಿ ನಿಲುವು, ಮೂಢನಂಬಿಕೆಗಳು, ಕಂದಾಚಾರ ಮುಂತಾದ ಅನಿಷ್ಟಗಳಿಂದ ಬಿಡುಗಡೆ ಹೊಂದಬೇಕೆಂಬ ಸಂಗತಿಗಳು ವೈಚಾರಿಕತೆಗೆ ಕಾರಣವಾದ್ದರಿಂದ ಆಧುನಿಕತೆಯ ಸಂವೇದನೆಗೆ ಒಳಗಾಯಿತು. ಅಲ್ಲದೆ ನಗರ ಸಂಬಂಧಿಯಾದದ್ದು, ಸಮಕಾಲೀನವಾದದ್ದು, ವೈಚಾರಿಕ ಪ್ರಗತಿ ಸಂಬಂಧಿಯಾದದ್ದು ಮತ್ತು ಅಕ್ಷರ ಸಂಬಂಧಿಯಾದದ್ದು ಎಂಬ ಅಂಶಗಳು 'ಆಧುನಿಕತೆ'ಯ ಪರಿಕಲ್ಪನೆಗಳಿಗೆ ಕಾರಣವಾದವು.

ಆಧುನಿಕತೆಯ ನಿರ್ವಚನ ಆಧುನಿಕತೆ ಮತ್ತು ಪರಂಪರೆಯ ನಡುವಿನ ಸಂಬಂಧದ ಮೇಲೆ ಆಧಾರಿತವಾಗಿದೆ. ಸಾಮಾನ್ಯವಾಗಿ ಈ ಎರಡೂ ಪರಿಕಲ್ಪನೆಗಳನ್ನು ಪರಸ್ಪರ ವಿರುದ್ಧವಾದವು ಎಂದು ನೋಡಲಾಗಿದೆ. ಈ ರೀತಿಯ ಪರಿಕಲ್ಪನೆಗಳು ಉದ್ಭವವಾದದ್ದು ವಸಾಹತುಶಾಹಿ ಸಂದರ್ಭದಲ್ಲಿ ವಸಾಹತುಶಾಹಿ ಸಂಸ್ಕೃತಿಯ ವಸಾಹತೀಕರಣಗೊಂಡ ಸಂಸ್ಕೃತಿಯ ಜನರ ಮೇಲೆ ತನ್ನ ಯಾಜಮಾನ್ಯವನ್ನು

ಸ್ಥಾಪಿಸುವ ಪ್ರಕ್ರಿಯೆಯಲ್ಲಿ ರುಥಾಲ್ಫ್ ಮತ್ತು ರುಥಾಲ್ಫ್ ಈ ಪ್ರಕ್ರಿಯೆಯನ್ನು ಈ ರೀತಿ ವಿವರಿಸಿದ್ದಾರೆ. ''ಯಜಮಾನವರ್ಗ, ಜನಾಂಗ ಮತ್ತು ರಾಷ್ಟ್ರಗಳು ಅನ್ಯರನ್ನು ಅಡಿಯಾಳಾಗಿಸಲು ಸಹಕಾರಿಯಾದುವೆಂದು ತಾವು ಭಾವಿಸುವ ಅಂಶಗಳಿಗೆ ಕಾರಣಶಕ್ತಿಯನ್ನು ಆರೋಪಿಸುತ್ತಾರೆ. ಒಂದು ಜನಾಂಗದ, ರಾಷ್ಟ್ರದ ಮತ್ತು ಸ್ವಂತದ ಪ್ರತಿಷ್ಠೆಗೆ, 'ಅನ್ಯ'ರನ್ನು 'ಸ್ವ'ಬಿಂಬಕ್ಕೆ ವಿರುದ್ಧವಾಗಿ ನೋಡುವ ಅಂಶ ಮುಖ್ಯವಾಗಿ ಬಿಡುತ್ತದೆ.''[೧೨] ವಸಾಹತು ಸಂದರ್ಭದಲ್ಲಿ ಪಶ್ಚಿಮವು ತನ್ನನ್ನು ಆಧುನಿಕವಾಗಿ ಕಂಡರೆ, ಭಾರತವನ್ನು ಪರಂಪರೆಯಾಗಿ ಕಾಣುತ್ತದೆ. ಈ ವಿಚಾರಧಾರೆಯಲ್ಲಿ ಪಶ್ಚಿಮಕ್ಕೆ ತನ್ನ ಬಗ್ಗೆ ಇರುವ ಕಲ್ಪನೆಯೇ ಆಧುನಿಕವಾಗಿ ಬಿಡುತ್ತದೆ. ಇಂದೂ ಸಹ ನಾವು 'ಆಧುನಿಕತೆ'ಯ ಪರಿಕಲ್ಪನೆಯನ್ನು ಬಹುಪಾಲು ಹೀಗೆಯೇ ಬಳಸುತ್ತೇವೆ. ವಸಾಹತು ಸಂದರ್ಭದಲ್ಲಿ 'ಆಧುನಿಕ' ಉತ್ತಮವೆಂದೂ, 'ಪರಂಪರೆ' ಕೆಟ್ಟದೆಂದು ಬಿಂಬಿತವಾಗಿದ್ದರೆ, ಇಂದು ಆಧುನಿಕತೆ ಕೆಟ್ಟದೆಂದು 'ಪರಂಪರೆ' ಒಳ್ಳೆಯದೆಂದು ಬಿಂಬಿಸುವ ಯತ್ನಗಳನ್ನು ನಾವು ಕಾಣುತ್ತಲಿದ್ದೇವೆ.

ಇಲ್ಲಿ 'ಆಧುನಿಕತೆ' ಮತ್ತು 'ಸಂಪ್ರದಾಯ' ಎಂಬ ಪರಿಕಲ್ಪನೆಗಳನ್ನು ಪರಸ್ಪರ ಬೇರೆಯಾದ ವಿರೋಧವುಳ್ಳ ಪರಿಕಲ್ಪನೆಗಳನ್ನಾಗಿ ನೋಡದೆ, ಸಂಪ್ರದಾಯ ಎನ್ನುವುದೇ ಆಧುನಿಕತೆಯ ಸಂದರ್ಭದಲ್ಲಿ ಆಧುನಿಕತೆಯ ಉತ್ಪನ್ನವೇ ಹೊರತು ಅದರ ವಿರೋಧಿ ಅಲ್ಲ ಅಥವಾ ಆಧುನಿಕತೆಗೆ ಇಂದಿನ ಪರ್ಯಾಯವೂ ಅಲ್ಲ ಎಂದು ನೋಡಲಾಗಿದೆ. ಪ್ರಸ್ತುತ ಭಾರತದಲ್ಲಿ ನಡೆದಿರುವ 'ಆಧುನಿಕತೆ' ಕುರಿತ ವಿಚಾರಧಾರೆಯನ್ನು ಗಮನಿಸುವ ಮೊದಲು ವಸಾಹತುಕಾಲದ ಕಡೆಗೆ ಒಂದು ಚಾರಿತ್ರಿಕ ನೋಟ ಬೀರುವುದು ಅಗತ್ಯವಾಗಿದೆ. ಏಕೆಂದರೆ ವಸಾಹತು ಕಾಲದಲ್ಲಿ ಆಧುನಿಕತೆಯ ನೀತಿ-ನಿಯಮಾವಳಿಗಳನ್ನು ಅರಿತು ಅಳವಡಿಸಿಕೊಂಡವರಾರು ಮತ್ತು ಅದರ ಪರಿಣಾಮಗಳೇನು ಎಂಬುದು ಚಾರಿತ್ರಿಕವಾಗಿ ಮುಖ್ಯವಾದ ಸಂಗತಿಗಳು. ಆಧುನಿಕತೆಯ ಪರಿಣಾಮಗಳು/ಅದರ ನೀತಿ ನಿಯಮಗಳ ಕಲಿಕೆ ಸಮಾಜದ ಒಂದು ವರ್ಗ/ಜಾತಿಗಿಂತ ಮತ್ತೊಂದಕ್ಕೆ ಭಿನ್ನವಾಗಿದೆ/ಅನೇಕವಾಗಿದೆ.

ಆಧುನಿಕತೆಯನ್ನು ಇಂಗ್ಲೀಷಿನ ವಸಾಹತುಶಾಹಿಯ ಆಗಮನದೊಂದಿಗೆ ಸಮೀಕರಿಸಿದರೆ ಅದರ ಪರಿಣಾಮವಾಗಿ ಭಾರತದಲ್ಲಿ (ಒಂದು ಕಲಿತ ಸಮುದಾಯ - ಆಧುನಿಕವಾದ ಪರಿಕಲ್ಪನೆ) ಶತಮಾನಗಳಿಂದ ಇತರರ ಮೇಲೆ ತಮ್ಮ ಯಾಜಮಾನ್ಯವನ್ನು ಸ್ಥಾಪಿಸಿದ್ದ ಜಾತಿಗಳು ಬೆಚ್ಚಿಬಿದ್ದವು. ತಮ್ಮ ಯಾಜಮಾನಿಕೆಯನ್ನು ಉಳಿಸಿ/ಬೆಳೆಸಿಕೊಂಡು ಹೋಗಲು ಆಧುನಿಕತೆಯನ್ನು ವಿರೋಧಿಸುವುದು/ಅಗತ್ಯಕ್ಕೆ ತಕ್ಕಂತೆ ಅನುಸರಿಸುವುದು/ತಮಗೆ ಬೇಕಾದ ರೀತಿ ಮಾರ್ಪಾಡು ಮಾಡಿ ತಮ್ಮದಾಗಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು.

ಪಶ್ಚಿಮದಲ್ಲಿ ಆಧುನಿಕತೆಯ ಪರಿಣಾಮಗಳನ್ನು ಚಿತ್ರಿಸಲು ಕಾದಂಬರಿ ಪ್ರಕಾರ ಹುಟ್ಟಿ ಬೆಳೆಯಿತು. ವಾಸ್ತವವಾದವು ಕಾದಂಬರಿ ಬರವಣಿಗೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳ್ಳಲು

ಸಾಧ್ಯವಾಯಿತು. ಕನ್ನಡದಲ್ಲಿ ಕಾದಂಬರಿಗಳು ಹುಟ್ಟಿ ಬೆಳೆದದ್ದು, ಇಲ್ಲಿನ ಆಧುನಿಕತೆಯ ಸಾಂಪ್ರದಾಯಿಕ ಸಮಾಜದ ಮೇಲೆ ಉಂಟು ಮಾಡಿದ ಪರಿಣಾಮಗಳನ್ನು ವಾಸ್ತವವಾದದ ನೆಲೆಯಲ್ಲಿ ಕಟ್ಟಿಕೊಡಲು. ಕಥೆ-ಕಾದಂಬರಿಗಳು ರಚನೆಯಾಗುತ್ತಿದ್ದ ಕಾಲದಲ್ಲಿ ಅದಕ್ಕಿಂತ ಮುನ್ನಿನಿಂದಲೂ ಬ್ರಿಟೀಷ್ ಆಡಳಿತ ಶುರುವಾಗಿ ಆಧುನಿಕತೆ ಕಾಲೂರಲು ತೊಡಗಿತ್ತು. ಅದು ಕಾಲೂರಿ ನಿಂತ ಮೇಲೆ ಸಮಾಜದಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ಕಾಣಿಸಿಕೊಂಡ ಈ ಹೊಸ ಬದಲಾವಣೆಗಳನ್ನು ಕನ್ನಡ ಕಥೆ-ಕಾದಂಬರಿಗಳು ಚಿತ್ರಿಸುವುದರ ಹಿನ್ನೆಲೆಯಲ್ಲಿ ಆಧುನಿಕತೆಯ ಬೇಕು-ಬೇಡಗಳ ಸಂಘರ್ಷವೂ ಕಾಣುತ್ತದೆ. ಕರ್ನಾಟಕದ ಕರಾವಳಿಗೆ ಬ್ರಿಟೀಷರ ಆಡಳಿತ ಮೊದಲು ಬಂದಿತು. ಅಂದರೆ ಕರಾವಳಿಗೆ ಆಧುನಿಕತೆ ಮೊದಲು ಕಾಲಿಟ್ಟಿತು. ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದ ಈ ಪ್ರದೇಶ ಬ್ರಿಟೀಷರಿಂದ ಅವರ ಆಧುನಿಕ ತಿಳುವಳಿಕೆಯಿಂದ ಪ್ರಯೋಜನ ಪಡೆಯಲು ಯತ್ನಿಸಿತು.

ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ'(೧೮೯೯) ಕಾದಂಬರಿಯು, ಬ್ರಿಟೀಷ್ ಆಡಳಿತ, ಆಧುನಿಕತೆಯ ಜೊತೆಗೆ ಸಂಪ್ರದಾಯಸ್ಥ ಸಮಾಜವನ್ನು ಮುಖಾಮುಖಿ ಮಾಡಲು ಯತ್ನಿಸುತ್ತದೆ. ಮಹಿಳೆಯಾದ ಇಂದಿರಾಬಾಯಿ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿಬೆಳೆದರೂ ಆಧುನಿಕ ವಿಚಾರಗಳನ್ನು ತಿಳಿದುಕೊಂಡು ಬದಲಾಗುತ್ತಾಳೆ. ವಿಧವೆಯಾದ ಇಂದಿರಾಬಾಯಿ ಸುಧಾರಣಾವಾದಿ ಚಿಂತನೆಗಳಿಗೆ ಮಾರುಹೋಗಿ ಅದೇ ಹಾದಿಯಲ್ಲಿ ನಡೆದು, ಕ್ರಾಂತಿಕಾರಿಯಾಗಿ ಆಲೋಚಿಸಿ, ಕ್ರಿಯಾಶೀಲಳಾಗುತ್ತಾಳೆ. ಸೋಲು-ಗೆಲುವಿನ ಪ್ರಶ್ನೆಗಿಂತ ಸಂಘರ್ಷವೇ ಇಲ್ಲಿ ಮುಖ್ಯವಾಗುತ್ತದೆ. ಕಾದಂಬರಿಕಾರರು ಆಧುನಿಕತೆಯನ್ನು ತಿರಸ್ಕರಿಸದೆ ಅನುಮಾನಿಸದೆ ಆಶಾಭಾವನೆಯಿಂದ ಕಾಣುತ್ತಾರೆ. ಈ ಕಾದಂಬರಿಯ ಬೆನ್ನ ಹಿಂದೆಯೇ ರಚನೆಯಾದ ಬೋಳಾರಬಾಬುರಾಯರ 'ವಾಗ್ದೇವಿ' (೧೯೦೫) ಕಾದಂಬರಿ ಆಧುನಿಕತೆಯ ಪರಿಣಾಮಗಳನ್ನು ವಾಸ್ತವವಾದಿ ನೆಲೆಯಲ್ಲಿ ಚಿತ್ರಿಸಿದೆ. ಚಂಚಲನೇತ್ರ ಎಂಬ ಕಪಟ ಸನ್ಯಾಸಿ ಮತ್ತು ಸಾತ್ವಿಕನಾದ ವೇದವ್ಯಾಸ ಇವರ ನಡುವೆ ನಡೆಯುವ ಸಂಘರ್ಷದಲ್ಲಿ ಭ್ರಷ್ಟವ್ಯವಸ್ಥೆಯೊಂದು ಬಯಲಿಗೆ ಬರುತ್ತದೆ. ಮಠದ ಪಾವಿತ್ರ್ಯವನ್ನು ಪುನಃ ಸ್ಥಾಪಿಸಬೇಕೆಂದು ವೇದವ್ಯಾಸನು ಚಂಚಲನೇತ್ರನ ವಿರುದ್ಧ ಮಠಾಧೀಶರ ಮೊರೆ ಹೋಗುತ್ತಾನೆ. ಅಲ್ಲಿ ನ್ಯಾಯ ಸಿಗುವುದಿಲ್ಲ. ಮುಂದೆ ನ್ಯಾಯಕ್ಕಾಗಿ ಪೇಷ್ಕಾರ ತಿಮ್ಮಯ್ಯ, ಕೊತ್ವಾಲ ಭೀಮಾಜಿ, ಫೌಜುದಾರ ಕಾರಭಾರಿ ಶಾಂಬಯ್ಯ, ಪುನರ್ವಿಮರ್ಶಾಧಿಕಾರಿ, ಕಿರಿಯ ದಿವಾನ ಮುಂದೆ ಹೋಗಿ ಸೋಲುತ್ತಾನೆ. ಅಂತಿಮವಾಗಿ ರಾಜನಲ್ಲಿಗೆ ಹೋಗಿ ಪುನಃ ತನ್ನ ಸ್ಥಾನ ಸಿಗುವಂತೆ ನ್ಯಾಯ ಪಡೆಯುತ್ತಾನೆ. ವೇದವ್ಯಾಸನ ಈ ಹೋರಾಟದಲ್ಲಿಯೇ ಆಡಳಿತದ ಸ್ವರೂಪವನ್ನು ಅದು ಹೇಗೆ ಭ್ರಷ್ಟವಾಗಿದೆ ಎಂದು ತಿಳಿಯಲು ಸಾಧ್ಯವಾಗುತ್ತದೆ. "ಆಧುನಿಕ ಇಂಗ್ಲೀಷ್ ಶಿಕ್ಷಣ, ಮಿಶನರಿ ಚಟುವಟಿಕೆ, ಆರ್ಯ ಸಮಾಜ, ಬ್ರಹ್ಮಸಮಾಜಗಳ ಪುನರುತ್ಥಾನ ಕಾರ್ಯಗಳು, ಸಂಪ್ರದಾಯ, ಆಧುನಿಕತೆ ಎರಡೂ ಮೇಳೈಸಿರುವ ಯಕ್ಷಗಾನ ಇವೆಲ್ಲವುಗಳ ಪ್ರಭಾವದಿಂದ ರೂಪಗೊಂಡ ಸುಧಾರಣಾವಾದಿ ಕಾದಂಬರಿ ಮೊದಲು ಕರಾವಳಿಯಲ್ಲಿ ಬೇರು ಬಿಟ್ಟು, ಅನಂತರ ಅನೇಕ ದಶಕಗಳ ಕಾಲ ಕನ್ನಡ ಕಾದಂಬರಿ

ಲೋಕದಲ್ಲಿ ಸಮೃದ್ಧವಾಗಿ ಬೆಳೆಯಿತು. ಕಳೆದ ಶತಮಾನದ ವಿವಿಧ ಘಟ್ಟಗಳಲ್ಲಿ ಬಂದ ಪ್ರಮುಖ ಕಾದಂಬರಿಗಳೆಲ್ಲವೂ 'ಇಂದಿರಾಬಾಯಿ' ಮತ್ತು 'ವಾಗ್ದೇವಿ' ಕಾದಂಬರಿಗಳನ್ನೊಳಗೊಳ್ಳುವ ಸುಧಾರಣಾವಾದಿ ಕಾದಂಬರಿಯ ವಿವಿಧ ವಿನ್ಯಾಸಗಳೇ."[೧೩]

ಕರಾವಳಿ ಪ್ರದೇಶದಿಂದ ಮೂಡಿಬಂದ ಕಥೆ-ಕಾದಂಬರಿಗಳು ಆಧುನಿಕತೆಯ ಬೆಳವಣಿಗೆಯನ್ನು ಆಶಾಭಾವದಿಂದ ಚಿತ್ರಿಸುತ್ತವೆ. ಉತ್ತರ ಕರ್ನಾಟಕದ ಪೇಶ್ವೆಗಳ ಆಡಳಿತವಿದ್ದ ಪ್ರಾಂತ್ಯದಿಂದ ಪ್ರಕಟವಾದ ಕಾದಂಬರಿ 'ಇಂದಿರಾ'. ಇದನ್ನು ಕೆರೂರು ವಾಸುದೇವಾಚಾರ್ಯರು ಬರೆದಿದ್ದಾರೆ. ಇವರು ವೈದಿಕರಾಗಿದ್ದು, ಬ್ರಿಟೀಷ್ ಆಡಳಿತದಲ್ಲಿ ಸೇವೆ ಮಾಡಿದವರು. 'ಇಂದಿರಾ' ಕಾದಂಬರಿ ಆಧುನಿಕತೆಯ ಪ್ರಭಾವದಿಂದ ರಚನೆಯಾದದ್ದು ನಿಜ. ಆದರೆ ಆಧುನಿಕತೆಯನ್ನು ಅನುಮಾನದಿಂದ ನೋಡುತ್ತಾರೆ. ವಿಧವಾ ವಿವಾಹವನ್ನು ನಿರಾಕರಿಸಿದಂತಿದೆ. ಕಾದಂಬರಿಯಲ್ಲಿ ಬರುವ ದೇವಯಾನಿ ವಿಧವೆ. ಇವಳು ಸುಧಾರಣಾವಾದಿ ನಿಲುವಿನವಳು. ಸಮಾಜದ ಅನಿಷ್ಟಗಳ ವಿರುದ್ಧ ದನಿ ಎತ್ತಿದರೂ, ತನ್ನ ಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳದ ದೇವಯಾನಿ, ಸಮಾಜದ ಸಮಸ್ಯೆಗಳನ್ನೇನು ಸುಧಾರಿಸಬಲ್ಲಳು ಎಂಬ ನಿಲುವು ಕಾದಂಬರಿಕಾರರದೂ ಆಗಿದೆ. ಆಧುನಿಕತೆಯ ಪ್ರಭಾವದಿಂದ ನಡೆದ ಸುಧಾರಣಾ ಚಳುವಳಿಯನ್ನು ಈ ಕಾದಂಬರಿ ನಿರಾಕರಿಸಿದಂತೆ ತೋರುತ್ತದೆ.

ಎಂ.ಎಸ್. ಪುಟ್ಟಣ್ಣಯ್ಯ ಅವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ಮಹತ್ವದ್ದು. ಕೃಷ್ಣರಾಜ ಒಡೆಯರ ಕಾಲದ ಹಳೆಯ ಮೈಸೂರು ಪ್ರದೇಶದ ಜನಜೀವನವನ್ನು ಚಿತ್ರಿಸುವ ಈ ಕಾದಂಬರಿಯು ತನ್ನ ಒಡಲಲ್ಲಿ ನೀತಿಬೋಧನೆಯನ್ನು ಇಟ್ಟುಕೊಂಡಿದೆ. ರಾಮಾಯಣದ ಕಥಾವಸ್ತುವನ್ನು ಹೋಲುವ ಈ ಕಾದಂಬರಿಯಲ್ಲಿ ನಂಜನಗೂಡು ಹಳ್ಳಿಯನ್ನು ಕೇಂದ್ರೀಕರಿಸಿದೆ. ನಂಜನಗೂಡು, ಚಾಮರಾಜನಗರ ಪ್ರದೇಶಗಳನ್ನು ಒಳಗೊಂಡಿದೆ. ಸದಾಶಿವ ದೀಕ್ಷಿತ-ಸೀತಮ್ಮ ಸದ್ಗುಣ ದಂಪತಿಗಳು. ಪೂಜಾರಿ ಅಪ್ಪಾಜಿ ಸೀತಮ್ಮನನ್ನು ಮಾನಭಂಗ ಮಾಡಲು ಯತ್ನಿಸಿ, ಆಕೆಯನ್ನು ಸಂಕಷ್ಟದಲ್ಲಿ ಸಿಲುಕಿಸುತ್ತಾನೆ. ಭಟಜಿ ಎಂಬ ವ್ಯಕ್ತಿಯಿಂದ ಸೀತಮ್ಮ ತನಗೊದಗಿದ ದುರಂತದಿಂದ ಪಾರಾಗುತ್ತಾಳೆ. ಕಿಟ್ಟಿ, ಸುಬೇದಾರ, ನಾರಪ್ಪಯ್ಯ, ಅಮಾಸೆ ಮುಂತಾದ ವ್ಯಕ್ತಿಗಳು ತಮ್ಮ ಕಳಂಕ ವ್ಯಕ್ತಿತ್ವದಿಂದ ಸಮಾಜದ ಅವನತಿಗೆ ಕಾರಣರಾಗುತ್ತಾರೆ. ಕಾದಂಬರಿಯಲ್ಲಿ ಹಳೆಯ ವ್ಯವಸ್ಥೆಯನ್ನು, ಅದರ ದುರ್ಗತಿಯನ್ನು ತೋರಿಸಲಾಗಿದೆ. ಕಾದಂಬರಿಯು, "ಸದ್ಗುಣಗಳಿಂದ ಕೂಡಿದ ಮುಮ್ಮಡಿ ಕೃಷ್ಣರಾಜ ಒಡೆಯರು ವೈಯಕ್ತಿಕವಾಗಿ ಒಳ್ಳೆಯ ವ್ಯಕ್ತಿಯಾಗಿದ್ದರೂ, ಧಾರ್ಮಿಕ ಸ್ವಭಾವದವರಾಗಿದ್ದರೂ, ತಮ್ಮ ಮುಗ್ಧತೆಯಿಂದಾಗಿ ರಾಜ್ಯದಲ್ಲಿನ ಲಂಚಗುಳಿತನವನ್ನು, ಜಾತಿಗಳ ನಡುವಿನ ಜಗಳವನ್ನು, ಸಜ್ಜನರಿಗಾಗುತ್ತಿದ್ದ ಅನ್ಯಾಯ ಅಪಮಾನಗಳನ್ನು ತಪ್ಪಿಸಲಾಗದ ಅದಕ್ಷ, ಅಸಹಾಯಕ ವ್ಯಕ್ತಿಯಾಗಿ ಚಿತ್ರಿತರಾಗಿದ್ದಾರೆ."[೧೪] ಹಳೆಯ ಕಾಲದ ಶಿಕ್ಷಣ ಪದ್ಧತಿಯನ್ನು ಇಲ್ಲಿ ತೋರಿಸಿ ಅದರ ದುಃಸ್ಥಿತಿಯ ಮುಖವನ್ನು ಎತ್ತಿ ಹಿಡಿದಿದ್ದಾರೆ.

ಒಟ್ಟಿನಲ್ಲಿ ಈ ಕಾದಂಬರಿ ಸಾಮಾಜಿಕ ಜೀವನದ ದುರಂತವನ್ನು ಚಿತ್ರಿಸಿರುವುದು ಆಧುನಿಕತೆಯ ಪರಿಣಾಮವಾಗಿ.

ಸೇಡಿಯಾಪು ಕೃಷ್ಣಭಟ್ ಅವರ 'ನಾಗರಬೆತ್ತ' ಕಥೆ ತುಂಬಾ ಮಹತ್ವದ್ದು. ಸಂಪ್ರದಾಯದ ಮೊದಲ ತಲೆಮಾರು, ಆಧುನಿಕತೆಯನ್ನು, ಬ್ರಿಟೀಷರ ಅಭಿವೃದ್ಧಿಯನ್ನು ಹೆಮ್ಮೆಯಿಂದ ಸ್ವಾಗತಿಸುವ ಎರಡನೆ ತಲೆಮಾರು ಈ ಕಥೆಯಲ್ಲಿ ಬರುತ್ತದೆ. ಬ್ರಿಟೀಷರ ಆಡಳಿತ ಊರುಗೋಲಿನಲ್ಲಿ ಪರಿಣಮಿಸಬೇಕಾದದ್ದು, ಸಾಯಿಸುವ, 'ನಾಗರಬೆತ್ತ'ವಾಗಿ ಪರಿಣಮಿಸುವ ದುರಂತವನ್ನು ಈ ಕಥೆ ಮಾರ್ಮಿಕವಾಗಿ ಕಟ್ಟುತ್ತದೆ.

ಮೊದಲ ಘಟ್ಟದ ಕಾದಂಬರಿಗಳು ಆಧುನಿಕತೆಯನ್ನು ಸ್ವೀಕರಿಸಿದ ಬಗೆಯನ್ನು ನೋಡಲಾಗಿದೆ. ಕರಾವಳಿ ನಾಡಿನಿಂದ ರಚನೆಯಾದ ಕಾದಂಬರಿಗಳು ಆಧುನಿಕತೆಯನ್ನು ನಿರಾಕರಿಸುವುದಿಲ್ಲ. ಮುಂಬಯಿ ಕರ್ನಾಟಕ ಪ್ರಾಂತದಿಂದ ರಚನೆಯಾದ ಕಾದಂಬರಿಗಳು ಆಧುನಿಕತೆಯನ್ನು ಅನುಮಾನಿಸುತ್ತವೆ. ಈ ನಡುವೆ ಗಳಗನಾಥರು ಹಿಂದುತ್ವವನ್ನು ಮುನ್ನೆಲೆಗೆ ತರಲು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಹಳೆಯ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಈ ಕಾಲದಲ್ಲಿ ಕೆಲವರು ಪ್ರಯತ್ನಿಸಿದ್ದಾರೆ.

ಬಹಳ ಚರ್ಚೆಗೆ ಗುರಿಯಾದ ಮಹತ್ವಪೂರ್ಣ ಕಾದಂಬರಿಗಳಲ್ಲಿ 'ಕಾನೂರು ಹೆಗ್ಗಡಿತಿ', 'ಮರಳಿ ಮಣ್ಣಿಗೆ', 'ಗ್ರಾಮಾಯಣ' ಮುಂತಾದವುಗಳಲ್ಲಿ ಆಧುನಿಕತೆ ಮತ್ತು ಸಂಪ್ರದಾಯ ನಡುವಿನ ಸಂಘರ್ಷದ ತೀವ್ರವಾದ ಚಿತ್ರಣವಿದೆ. ಕಾರಂತ, ಕುವೆಂಪು ನಿಸ್ಸಂದೇಹವಾಗಿ ಆಧುನಿಕತೆಯ ಪರವಾಗಿದ್ದವರು. ಹಾಗೆಂದು ಆಧುನಿಕತೆ ಸಮಾಜದ ಮೇಲೆ ಮಾಡಿದ ಪರಿಣಾಮಗಳನ್ನು ಎಚ್ಚರಿಕೆಯಿಂದ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಆಧುನಿಕತೆ ಮೂಡಿಸಿದ ವೈಚಾರಿಕತೆಯನ್ನು, ಸಮಾಜದಲ್ಲಾಗುವ ಬದಲಾವಣೆಗಳು, ಅದರಿಂದ ಜನರಿಗಾಗುವ ಅನುಕೂಲಗಳನ್ನು ಕಾರಂತ, ಕುವೆಂಪು, ಒಪ್ಪಿದ್ದರು. 'ಮರಳಿ ಮಣ್ಣಿಗೆ'ಯಲ್ಲಿ ಸಂಪ್ರದಾಯದ ರಾಮ ಐತಾಳರು ಒಂದು ಕಡೆ, ಆಧುನಿಕ ಪ್ರವಾಹದಲ್ಲಿ ಮುಳುಗಿದ ಮಗ ಲಚ್ಚ ಇನ್ನೊಂದು ಕಡೆ ಕಾಣಿಸಿದ್ದಾರೆ. ಇವರ ವಂಶದ ಕುಡಿ ರಾಮ ಅದೇ ಆಧುನಿಕತೆಯನ್ನು ಅರಿತು ಅದನ್ನು ಹೇಗೆ ಬಳಸಿಕೊಳ್ಳಬೇಕೆಂಬ ಅರಿವಿದ್ದು, ಅದರಿಂದ ಒಳ್ಳೆಯ ಆಧುನಿಕ ವ್ಯಕ್ತಿಯಾಗಿ ನಿಲ್ಲುತ್ತಾನೆ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ, ಆಧುನಿಕ ಶಿಕ್ಷಣ ಪಡೆದ ಹೂವಯ್ಯ, ರಾಮಯ್ಯ ಒಂದು ನೆಲೆಯಲ್ಲಿದ್ದರೆ, ಅವರ ಮನೆತನ, ಊರು, ಚಂದ್ರೇಗೌಡ, ಮನೆ ಮಂದಿ, ದುಡಿವ ವರ್ಗ ಇನ್ನೊಂದು ಕಡೆಗಿದ್ದಾರೆ. ಜಮೀನ್ದಾರಿ, ಆಳ್ವಿಕೆ, ದುಡಿವ ವರ್ಗಗಳ ನಡುವಿನ ಶೋಷಣೆ, ಪುರೋಹಿತ ಶಾಹಿ ಹಿಡಿತದಿಂದ ಒಟ್ಟು ಸಮಾಜ ಮೌಢ್ಯಗಳಿಂದ ತುಂಬಿ ಹೋಗಿದ್ದನ್ನು ಹೂವಯ್ಯ ಎದುರುಗೊಳ್ಳುತ್ತಾನೆ.

ಆಧುನಿಕತೆ ತಂದ ವೈಚಾರಿಕತೆ, ವೈಜ್ಞಾನಿಕ ಮನೋಧರ್ಮದ ಹೂವಯ್ಯ ತನ್ನ ಊರಿನ ಜನರ ಮೌಢ್ಯ ಅಜ್ಞಾನ, ಶೋಷಣೆಯಿಂದ ಪಾರಾಗಲು ಯತ್ನಿಸಿದಂತೆ ಸಮಾಜವನ್ನೂ ಮುನ್ನಡೆಸಲು ಪ್ರಯತ್ನಿಸುತ್ತಾನೆ. ಆದರೆ ಹೂವಯ್ಯನ ಶಕ್ತಿ, ಪರಂಪರಾಗತವಾಗಿ ಬೆಳೆದು ನಿಂತ ಮೌಢ್ಯ, ಅಜ್ಞಾನವನ್ನು ತೊಡೆದು ಹಾಕಲು ಸಾಲುವುದಿಲ್ಲ. ಕುವೆಂಪು ಆಧುನಿಕತೆಯನ್ನು ಇಂಗ್ಲೀಶ್ ಶಿಕ್ಷಣವನ್ನು, ವಿಜ್ಞಾನವನ್ನು ಇಷ್ಟಪಡುತ್ತಾರೆ. ಮತಾಂತರವನ್ನು ಅನುಮಾನಿಸುತ್ತಾರೆ.

'ಗ್ರಾಮಾಯಣ' ಕಾದಂಬರಿ, ಪಾದಳ್ಳಿಯ ಜೀವನ ವಿಧಾನವನ್ನು ಚಿತ್ರಿಸಿದರೂ, ದುರಂತಕ್ಕೆ ಕಾರಣಗಳನ್ನು ಸಮಾಜದ ಆಳುವ ಸಂಸ್ಥೆಗಳಲ್ಲಿ ಹುಡುಕುತ್ತದೆ. ಬ್ರಿಟೀಷರ ಆಡಳಿತ, ಸ್ಥಳೀಯ ಆಡಳಿತ, ಜಮೀನ್ದಾರಿ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆಗಳು ಜನಸಾಮಾನ್ಯರನ್ನು ಹೇಗೆ ಶೋಷಿಸುತ್ತವೆ ಎಂಬುದನ್ನು ಹೇಳುತ್ತ ಆಧುನಿಕತೆ ಇವುಗಳನ್ನು ಬದಲಿಸುವುದಿಲ್ಲ. ಬದಲಾಗಿ ಪ್ರಕೃತಿಯೇ ಬದಲಾವಣೆಯನ್ನು ತರಬಹುದೆಂಬ ಸೂಚನೆ ಕಾಣುತ್ತದೆ. ಉತ್ತರ ಕರ್ನಾಟಕ ಪ್ರಾಂತದಲ್ಲಿ ರಚನೆಯಾದ ಈ ಕಾದಂಬರಿ, ಆಧುನಿಕತೆಗೆ ತನ್ನನ್ನು ಒಡ್ಡಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬ ಪರೋಕ್ಷ ದನಿ ಇದೆ.

ನವೋದಯ ಕಾಲದ, ಅಂದರೆ ಸ್ವಾತಂತ್ರ್ಯ ಪೂರ್ವದ ಆಧುನಿಕ ಸಮಾಜವನ್ನು, ಅದರ ಪರಿಣಾಮಗಳನ್ನು ಮೊದಲ ತಲೆಮಾರಿನವರು ಗ್ರಹಿಸಿದ ಬಗೆ ಇದಾಗಿದೆ. ಅಂದರೆ ಸಮಾಜದಲ್ಲಿ ಆಧುನಿಕತೆ ಉಂಟು ಮಾಡಿದ ಪರಿಣಾಮಗಳನ್ನು ಚಿಂತಿಸಿದರೆ, ನವ್ಯದ ಬರಹಗಾರರು ವ್ಯಕ್ತಿಯನ್ನು ಕೇಂದ್ರವಾಗಿರಿಸಿಕೊಂಡು ಆಲೋಚಿಸಿದರು. ಆಧುನಿಕ ಸಮಾಜದಲ್ಲಿ ವ್ಯಕ್ತಿಯ ವಿಶಿಷ್ಟತೆಯನ್ನು ಶೋಧಿಸಿದ ನವ್ಯ ಲೇಖಕರು, ಸಮಾಜ ಮತ್ತು ವ್ಯಕ್ತಿಯ ಸಂಬಂಧದಲ್ಲಿ ಸಮಾಜ ವ್ಯಕ್ತಿತ್ವ ರಹಿತವಾದದ್ದೆಂದು ಗ್ರಹಿಸಿದರು. ಅಂಥ ಸಮಾಜದಲ್ಲಿ ವ್ಯಕ್ತಿ ಹೇಗೆ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳಬೇಕೆಂಬ ಚಿಂತನೆ ನವ್ಯರದ್ದಾಯಿತು. ಅಸ್ತಿತ್ವವಾದದ ಪ್ರಭಾವ ಎಲ್ಲ ನವ್ಯ ಲೇಖಕರ ಮೇಲಾಯಿತು. ಅದನ್ನು ತಮ್ಮ ಅಭಿವ್ಯಕ್ತಿಗೆ ಒಗ್ಗಿಸಿಕೊಳ್ಳುವಾಗ ಭಿನ್ನ ಭಿನ್ನ ಆಯಾಮಗಳನ್ನು ಹೊಂದಿದರು. ಮೂಲತಃ ವ್ಯಕ್ತಿ ಸಮಾಜದ ಅಂಗವೇ ಆಗಿದ್ದರೂ ವ್ಯಕ್ತಿ ಕೇಂದ್ರಿತ ಚಿಂತನೆಗೆ ಮಹತ್ವ ನೀಡಲಾಯಿತು. ಸಮಾಜದಲ್ಲಿ ಕಾಣುವ ಮದುವೆ, ಕುಟುಂಬ, ಜಾತಿ, ಧರ್ಮ, ಸಂಘ-ಸಂಸ್ಥೆಗಳು ಸ್ಥಾಪಿತ ಮೌಲ್ಯಗಳನ್ನು ರಕ್ಷಿಸಿಕೊಂಡು ಜನರು ಬಾಳುತ್ತಿದ್ದಾರೆ. ವ್ಯಕ್ತಿಗೆ ಆಯ್ಕೆ ಸ್ವಾತಂತ್ರ್ಯವಿಲ್ಲ. ಯಾರೋ ರೂಪಿಸಿದ ಸಿದ್ಧವಾದ ಜೀವನ ವಿಧಾನದಲ್ಲಿ ವ್ಯಕ್ತಿ ಬದುಕುತ್ತಿದ್ದಾನೆ. ಅದನ್ನು ಪ್ರಶ್ನಿಸಲು, ಅದನ್ನು ಮೀರಿ ಹೊಸ ಜೀವನ ವಿಧಾನವನ್ನು ರೂಪಿಸಿಕೊಳ್ಳಲು ವ್ಯಕ್ತಿಗೆ ಕಷ್ಟವಾಗಿ ಸಾಧ್ಯವಾಗುವುದಿಲ್ಲ. ಪ್ರಯತ್ನಿಸಿದರೆ ವ್ಯಕ್ತಿಗತ ನೆಲೆಯಲ್ಲಿ ಹೋರಾಟ ಮಾಡಬೇಕಾಗುತ್ತದೆ. ಪ್ರತಿ ಹೆಜ್ಜೆಗೆ ಅಡ್ಡಿ-ಆತಂಕಗಳು ಎದುರಿಸಬೇಕಾಗುತ್ತದೆ. ಎದುರಿಸಿ ಗೆದ್ದರೂ ಹೊಸ ನೈತಿಕತೆಯನ್ನು ನೆಲೆಗೊಳಿಸುವ ಜವಾಬ್ದಾರಿಯು ವ್ಯಕ್ತಿಯ ಮೇಲಿರುತ್ತದೆ. ಸ್ಥಾಪಿತ ಮೌಲ್ಯಗಳ ಪರಿಸರದಲ್ಲಿ ಹುಸಿ ನೈತಿಕತೆಯಲ್ಲಿ ವ್ಯಕ್ತಿ ಬದುಕುತ್ತಿದ್ದಾನೆಂಬ ಅರಿವು ಮೂಡಿದರೂ,

ಬದುಕುವುದು ಅನಿವಾರ್ಯವಾಗಿ, ಅದನ್ನೇ ಸಮರ್ಥಿಸಿಕೊಳ್ಳುತ್ತ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿಗೆ ತಲುಪುತ್ತಾನೆ. ಈ ಸ್ಥಿತಿಯಿಂದ ವ್ಯಕ್ತಿ ಹಿಡಿದು ಏಳಬೇಕಾಗುತ್ತದೆ. ವ್ಯಕ್ತಿ ಏನೂ ಆಗಿರುವುದಿಲ್ಲವೋ ಅದು ಆಗಬೇಕು. ಅದನ್ನು ಸಾಧಿಸಲು ಸ್ವಾತಂತ್ರ್ಯ ಆಯ್ಕೆ ಮತ್ತು ಅದನ್ನು ಸಮರ್ಥವಾಗಿ ನಿಭಾಯಿಸುವ ಛಲಬೇಕು. ಆಗ ನಿಜವಾದ ವ್ಯಕ್ತಿ ಆಗುತ್ತಾನೆ. ಇರುವಿಕೆ ಮುಖ್ಯವಲ್ಲ, ಆಗುವಿಕೆ ಮುಖ್ಯ. ಆಗುವಿಕೆಗಾಗಿ ವ್ಯಕ್ತಿ ತನ್ನ ಕುಟುಂಬ, ಧರ್ಮ, ಬದುಕುವ ಪರಿಸರ, ಸಂಘ-ಸಂಸ್ಥೆ ಎಲ್ಲದರ ವಿರುದ್ಧ ಹೋರಾಡಬೇಕು. ಈ ದಾರಿ ಕಷ್ಟದ್ದು, ವ್ಯಕ್ತಿ ಏಕಾಂಗಿಯಾಗುತ್ತಾನೆ. ಹತಾಶನಾಗುತ್ತಾನೆ. ವಿಕ್ಷಿಪ್ತನಾಗುತ್ತಾನೆ. ಉಸಿರುಗಟ್ಟುವ ಪರಿಸರದಿಂದ ಹೊರಬರಲು ಹೆಣಗುತ್ತಾನೆ. ನಿಜವಾದ ವ್ಯಕ್ತಿಯಾಗಲು ಪ್ರಾಮಾಣಿಕ ಹೋರಾಟ ಮಾಡುತ್ತಾನೆ. ಅಸ್ತಿತ್ವವಾದದ ಈ ಬಗೆಯ ನಿಲುವನ್ನು ಕನ್ನಡದ ಎಲ್ಲ ನವ್ಯ ಕಥನಕಾರರು ಹೊಂದಿದ್ದಾರೆ.

ಹೊಸ ವ್ಯಕ್ತಿಯನ್ನು ರೂಪಿಸುವ ನವ್ಯರ ಕಥನ ಸಾಹಿತ್ಯ ವಿಶಿಷ್ಟವಾದದ್ದು. ಅನಂತಮೂರ್ತಿ ತಮ್ಮ ಕಥನ ಸಾಹಿತ್ಯದಲ್ಲಿ, ವ್ಯಕ್ತಿಯ ಅನನ್ಯತೆಯನ್ನು, ಪೊಳ್ಳು ಸಮಾಜದಲ್ಲಿ ಶೋಧಿಸಲು ಯತ್ನಿಸಿದ್ದಾರೆ. ಆಧುನಿಕತೆ ಮತ್ತು ಸಂಪ್ರದಾಯದ ಎದುರುಬದುರಿನಲ್ಲಿ ದೊಡ್ಡ ಸಂಘರ್ಷ ನಡೆದರೂ ಸಂಪ್ರದಾಯದ ಗ್ರಾಮ್ಯದ ಸಂಸ್ಕೃತಿಯ ಹಿನ್ನೆಲೆಯಲ್ಲಿ ವ್ಯಕ್ತಿಯ ವಿಶಿಷ್ಟತೆಯನ್ನು ಅನಂತಮೂರ್ತಿ ಹುಡುಕುತ್ತಾರೆ. ಆಧುನಿಕತೆಯ ಬಗ್ಗೆ ಅವರಿಗೆ ಒಲವಿಲ್ಲ ಎಂದು ತೋರುತ್ತದೆ. 'ಸೂರ್ಯನ ಕುದುರೆ' ಎಂಬ ಅವರ ಕಥೆ ಇದನ್ನು ತಿಳಿಸುತ್ತದೆ.

ಪಿ.ಲಂಕೇಶ್ ಅವರ 'ಬಿರುಕು' ಕಾದಂಬರಿಯಲ್ಲಿ ನಾಯಕಹಳ್ಳಿಯಿಂದ ನಗರ ಸೇರಿ ಉಸಿರು ಗಟ್ಟುವ ಅನುಭವ ಅವನಿಗಾಗುತ್ತದೆ. ಇಲ್ಲಿಯೂ ಸಮಾಜ ಮುಖರಹಿತವಾದದ್ದೇ. ಇಂಥ ಸಮಾಜದಲ್ಲಿ ವ್ಯಕ್ತಿಯ ಬದುಕನ್ನು ಶೋಧಿಸಲು ಲಂಕೇಶ ಯತ್ನಿಸುತ್ತಾರೆ.

ಯಶವಂತ ಚಿತ್ತಾಲರ ಕಥನಸಾಹಿತ್ಯದಲ್ಲಿ, ನಗರ, ಆಧುನಿಕ ಜಗತ್ತು ಎಷ್ಟು ಭೀಕರವಾದದ್ದೆಂದು ಚಿತ್ರಿಸಲಾಗಿದೆ. ವ್ಯಕ್ತಿಯ ನೋವನ್ನು ಸಮಾಜ ಅರಿಯುವುದಿಲ್ಲ. ಅದರಲ್ಲೂ ಕಾರ್ಪೋರೇಟ್ ಜಗತ್ತು ಮನುಷ್ಯನನ್ನೇ ಬೇಟೆಯಾಡುತ್ತದೆ ಎಂದು ಚಿತ್ರಿಸಿದ್ದಾರೆ. ವ್ಯಕ್ತಿಯ ನೋವನ್ನು, ಸಮಾಜದ ಪರಿಸರ ನೆರೆ ಹೊರೆಯು ಅರಿತು ಅದು ತನ್ನ ನೋವೆಂದು ಸಹಾಯಕ್ಕೆ ಬರುವುದಿಲ್ಲ ಎಂಬ ದುರಂತ ಇಲ್ಲಿ ಕಾಣುತ್ತದೆ.

ಶ್ರೀಕೃಷ್ಣ ಆಲನಹಳ್ಳಿಯವರ ಕಥನ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಸಂಪ್ರದಾಯಸ್ಥ ಸಮಾಜದ ನಡುವೆ ದೊಡ್ಡ ಸಂಘರ್ಷವೇ ನಡೆಯುತ್ತದೆ. ತಾಂತ್ರಿಕವಾಗಿ ಕಥನಕ್ರಮದಲ್ಲಿ ನವ್ಯತೆ ಅಳವಡಿಸಿಕೊಂಡ ಆಲನಹಳ್ಳಿ ಕಥಾವಸ್ತುವಿನಲ್ಲಿ ಮೊದಲ ತಲೆಮಾರಿನ ನವೋದಯದ ಸಾಹಿತಿಗಳಿಗೆ ಹತ್ತಿರವಾಗಿದ್ದಾರೆ.

ಇದರಿಂದ ಇವರು ಚಿತ್ರಿಸುವ ಪಾತ್ರಗಳಲ್ಲಿ ಹೆಣ್ಣು ಒಂದು ಸರಕು ಮಾತ್ರ, ಮರಂಕಿಯನ್ನು ಭೋಗದ ವಸ್ತು ಎಂಬಂತೆಯೇ ಚಿತ್ರಿಸಲಾಗಿದೆ. ಸುಶೀಲೆ ಮಾತ್ರ ಜೀವ ಇರುವ ಮಹಿಳೆ ಆಗಿದ್ದಾಳೆ.

ನವ್ಯದವರು ಆಧುನಿಕತೆಯನ್ನು ನವೋದಯದ ಲೇಖಕರಿಗಿಂತ ಭಿನ್ನವಾಗಿ ಗ್ರಹಿಸಿದ್ದಾರೆ. ಸಾಮಾಜಿಕವಾಗಿ ಆದ ಬದಲಾವಣೆಗಳನ್ನು ಅಂದರೆ ಶಿಕ್ಷಣ, ಸಾರಿಗೆ, ಆಸ್ಪತ್ರೆ, ಹೋಟೆಲ್ , ಸಿನಿಮಾ ಮುಂತಾದವುಗಳು ಸಮಾಜವನ್ನು ಬದಲಿಸಿದವು. ವ್ಯಕ್ತಿ ಇವುಗಳನ್ನು ಬಳಸಿಕೊಳ್ಳುವ ಗ್ರಾಹಕನಾಗಿ ನಿಂತ. ಇದು ನವೋದಯದಲ್ಲಿ ಕಾಣುತ್ತೇವೆ. ವ್ಯಕ್ತಿ ಆಧುನಿಕವಾಗಲು, ಹೊಸ ನೈತಿಕತೆಯನ್ನು ಸೃಷ್ಟಿಸಲು ಪ್ರಯತ್ನಿಸುವುದನ್ನು ನವ್ಯರಲ್ಲಿ ಕಾಣುತ್ತೇವೆ. ಶಾಂತಿನಾಥ ದೇಸಾಯಿ ಅವರ ಸಾಹಿತ್ಯದಲ್ಲಿ ಹೊಸ ಜೀವನ ವಿಧಾನ ಅಂದರೆ ಹೊಸ ನೈತಿಕತೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ಸಂಪ್ರದಾಯಸ್ಥ ಸಮಾಜಕ್ಕೆ ಈ ಹೊಸ ನೈತಿಕತೆ ಅಪರಾಧದಂತೆ ಕಾಣಿಸಬಹುದು. ಆದರೆ ಶಾಂತಿನಾಥರ ಸಾಹಿತ್ಯದಲ್ಲಿ ಕಾಣುವ ಸಮಾಜ, ವ್ಯಕ್ತಿ, ಪರಿಸರ ಎಲ್ಲವೂ ಆಧುನಿಕವಾದದ್ದು, ಇಲ್ಲಿಯ ರೀತಿ ರಿವಾಜೇ ಭಿನ್ನ. ಮಹಿಳೆಯ ಸ್ವಾತಂತ್ರ್ಯ, ಆಯ್ಕೆ ಅದನ್ನು ಬದುಕುವ ವಿಧಾನ ಎಲ್ಲವೂ ಭಿನ್ನವಾಗುತ್ತವೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಶಾಂತಿನಾಥರ ಸಾಹಿತ್ಯ ಭಿನ್ನವಾಗಿ ಕಾಣುತ್ತದೆ.

ಕನ್ನಡದ ಆಧುನಿಕ ಸಾಹಿತ್ಯವು ಉದ್ದಕ್ಕೂ ಆಧುನಿಕತೆಯನ್ನು ಎದುರಿಸಿರುವ ಪರಿಯನ್ನೂ, ಅದರ ವಿವಿಧ ಮುಖಗಳನ್ನು ಚಿತ್ರಿಸಿದೆ. ಯಾಕೆಂದರೆ ಆಧುನಿಕತೆಯು ಕೂಡ ಭಿನ್ನ ಭಿನ್ನ ರೂಪದಲ್ಲಿ ಮುಂದೆ ನಿಲ್ಲುತ್ತಿದೆ. ಅದನ್ನು ಎದುರುಗೊಳ್ಳುವ ಸಮಾಜ ವ್ಯಕ್ತಿಗಳ ಹೋರಾಟವನ್ನು ಸಾಹಿತ್ಯ ಚಿತ್ರಿಸುತ್ತಲೇ ಇದೆ. ಈಗ ಆಧುನಿಕತೆಯ ರೂಪವು ಜಾಗತೀಕರಣದಿಂದ ಬದಲಾಗಿದೆ. ಬದಲಾದ ಈ ಅವತಾರದ ಜತೆ ನಮ್ಮ ಸಮಾಜ, ವ್ಯಕ್ತಿಗಳು, ಸಮುದಾಯಗಳು ಎದುರುಗೊಳ್ಳುತ್ತಲಿದೆ. ಈ ನಿರಂತರ ಸಂಘರ್ಷದ ಸ್ವರೂಪವನ್ನು ಸಾಹಿತ್ಯದಲ್ಲಿ ಕಾಣುತ್ತಲೇ ಹೋಗಬೇಕಾಗುತ್ತದೆ.

ಕೊನೆ ಟಿಪ್ಪಣಿಗಳು

೧. ಗಿರಡ್ಡಿ ಗೋವಿಂದರಾಜ, ೨೦೦೭, ಆಧುನಿಕತೆ ಮತ್ತು ಕನ್ನಡ ಕಾದಂಬರಿ, ಪ್ರಮಾಣು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೫೧

೨. The Oxford English Dictionary 2nd edition, P.495

೩. ಅದೇ,

೪. ಗಾಂಧೀ ಮೋ.ಕ., ೧೯೫೪, ಆತ್ಮಕಥೆ (ಸಂಕ್ಷಿಪ್ತ) ಮತ್ತು ಹಿಂದ್ ಸ್ವರಾಜ್, ಸಿದ್ಧವನಹಳ್ಳಿ ಕೃಷ್ಣಶರ್ಮ (ಅನು), ಗಾಂಧೀ ಸ್ಮಾರಕ ನಿಧಿ, ಪು.೨೭

೫. ಕುವೆಂಪು, ೧೯೩೪, ಶ್ರೀರಾಮಕೃಷ್ಣ ಪರಮಹಂಸ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೧-೨

೬. ಗಾಂಧೀ ಮೋ.ಕ., ೧೯೫೮, **ಆತ್ಮಕಥೆ (ಸಂಕ್ಷಿಪ್ತ) ಮತ್ತು ಹಿಂದ್ ಸ್ವರಾಜ್**, ಸಿದ್ಧವನಹಳ್ಳಿ ಕೃಷ್ಣಶರ್ಮ (ಅನು), ಗಾಂಧೀ ಸ್ಮಾರಕ ನಿಧಿ, ಪು.೨೯

೭. ಸುಬೋಧ ಚಂದ್ರಸೇನಗುಪ್ತ, ೧೯೮೧, **ಬಂಕಿಮಚಂದ್ರ ಚಟರ್ಜಿ**, ಯ.ಶ್ರೀ.ಜ್ಯೋತಿ(ಅನು) ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ಪು.೬

೮. ಕುವೆಂಪು, ೧೯೩೪, **ಶ್ರೀರಾಮಕೃಷ್ಣ ಪರಮಹಂಸ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೧೫

೯. ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩೨

೧೦. ಅದೇ, ಪು.೧೩೨-೧೩೩

೧೧. ಗಿರಡ್ಡಿ ಗೋವಿಂದರಾಜ, ೨೦೦೭, ಆಧುನಿಕತೆ ಮತ್ತು ಕನ್ನಡ ಕಾದಂಬರಿ, **ಪ್ರಮಾಣು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೫೧-೧೫೨

೧೨. ರುಡಾಲ್ಫ್ ಲಾಯ್ಡ್ ಐ ಮತ್ತು ರುಡಾಲ್ಫ್ ಸೂಸನ್ ಹೋಬರ್, ೧೯೮೭(೧೯೬೭), **The Modernity of Tradition : Political development in India,** ಹೈದರಾಬಾದ್ ಓರಿಯಂಟಲ್ ಲಾಂಗ್‌ಮನ್, ಪು.೮

೧೩. ರಾಮಚಂದ್ರನ್ ಸಿ.ಎನ್., ಸುಧಾರಣಾವಾದಿ ಕಾದಂಬರಿಯ ಒಂದು ವಿನ್ಯಾಸ, **ವಾಗ್ದೇವಿ**, ಸಾಪ್ತಾಹಿಕ ಪುರವಣಿ, ಪ್ರಜಾವಾಣಿ ದಿನಪತ್ರಿಕೆ

೧೪. ಶಂಕರನಾರಾಯಣ ತೀ.ನಂ., **ಮಾಡಿದ್ದುಣ್ಣೋ ಮಹಾರಾಯ**, ಸಾಪ್ತಾಹಿಕ ಪುರವಣಿ, ಪ್ರಜಾವಾಣಿ ದಿನಪತ್ರಿಕೆ

ಅಧ್ಯಾಯ ೫

ಕಥಾಸಾಹಿತ್ಯ : ವಸ್ತುವಿನ ಸ್ವರೂಪ

೫

ಕಥಾಸಾಹಿತ್ಯ : ವಸ್ತುವಿನ ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಂಜೆ ಮಂಗೇಶರಾಯ, ಕೆರೂರು ವಾಸುದೇವಾಚಾರ್ಯ, ಎಂ.ಎನ್.ಕಾಮತ್, ಎಸ್.ಜಿ.ಶಾಸ್ತ್ರೀ, ಮಾಸ್ತಿ, ದ.ರಾ.ಬೇಂದ್ರೆ, ಶಿವರಾಮಕಾರಂತ, ಎ.ಆರ್.ಕೃಷ್ಣಶಾಸ್ತ್ರೀ, ಆನಂದ, ಹ.ಪಿ.ಜೋಶಿ, ಸೇಡಿಯಾಪು ಕೃಷ್ಣಭಟ್, ಕೆ.ಗೋಪಾಲಕೃಷ್ಣರಾಯ, ಕುವೆಂಪು, ಟೇಂಗ್ಸೆ ಗೋವಿಂದರಾಯ, ನವರತ್ನರಾಮರಾವ್, ಗೊರೂರು, ಬಾಗಲೋಡಿ ದೇವರಾಯ, ಆನಂದಕಂದ, ಸರಸ್ವತಿಬಾಯಿ ರಾಜವಾಡೆ, ಕೊಡಗಿನ ಗೌರಮ್ಮ ಮುಂತಾದ ಕಥೆಗಾರರನ್ನು ಹೆಸರಿಸಬಹುದು. ಆದರೂ ಮೊದಲ ತಲೆಮಾರಿನವರು ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರನ್ನು ಹೊರತುಪಡಿಸಿ ಕಥಾಲೋಕವನ್ನು ವಿಸ್ತರಿಸಿದವರಲ್ಲ. ಗೊರೂರು, ಆನಂದಕಂದ ಹೆಚ್ಚು ಕಥೆಗಳನ್ನು ಬರೆದಿರುವರು. ಆದರೂ ಈ ಲೇಖಕರು ಸಣ್ಣಕಥೆ ಪ್ರಕಾರವನ್ನು ತಮ್ಮ ಜೀವನದರ್ಶನ ಹೊರ ಹೊಮ್ಮಿಸಲು ಬಳಸಿಕೊಳ್ಳಲಿಲ್ಲ. ಕಾವ್ಯ, ಕಾದಂಬರಿ ಅಂಥ ಪ್ರಕಾರಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿದರು. ಮಾಸ್ತಿ ಅವರು ಮಾತ್ರ ಸಣ್ಣಕಥೆ ಪ್ರಕಾರವನ್ನು ತಮ್ಮ ಜೀವನಾನುಭವವನ್ನು, ಲೋಕದರ್ಶನವನ್ನು ವ್ಯಕ್ತಪಡಿಸಲು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡರು. ವಸ್ತು ವೈವಿಧ್ಯದಿಂದ ಅವರ ಕಥೆಗಳು ಈ ಹೊತ್ತಿಗೂ ಬೆರಗನ್ನುಂಟು ಮಾಡುತ್ತವೆ. ಉಳಿದ ಸಮಕಾಲೀನ ಲೇಖಕರು ಸಣ್ಣಕಥೆಯನ್ನು ಸಮರ್ಥವಾಗಿ ಬರೆಯುವ ಸಾಮರ್ಥ್ಯವಿದ್ದರೂ ಇದನ್ನು ಒಂದು 'ಮೈನರ್ ಫಾರಂ' ಎಂದು ತಿಳಿದು ಅಲ್ಪಸ್ವಲ್ಪ ಕಥೆಗಳನ್ನು ಬರೆದಿರುವರು. ಆದರೂ 'ಕಮಲಾಪುರದ ಹೊಟ್ಲಿನಲ್ಲಿ'(ಪಂಜೆ ಮಂಗೇಶರಾಯ), 'ಮಲ್ಲೇಶಿಯ ನಲ್ಲೆಯರು' (ಕೆರೂರು ವಾಸುದೇವಚಾರ್ಯ), 'ಧನಿಯರ ಸತ್ಯನಾರಾಯಣ'(ಕೊರಡ್ಕಲ್ ಶ್ರೀನಿವಾಸರಾವ್), 'ನಾಗರಬೆತ್ತ'(ಸೇಡಿಯಪ್ಪು ಕೃಷ್ಣಭಟ್), 'ಧನ್ವಂತರಿಯ ಚಿಕಿತ್ಸೆ'(ಕುವೆಂಪು), 'ಗುಬ್ಬಿಗಳ ಸಂಸಾರ' (ಕೃಷ್ಣಕುಮಾರ ಕಲ್ಲೂರ), 'ಮೋಚಿ'(ಭಾರತೀಪ್ರಿಯ), 'ವಾಣಿಯ ಸಮಸ್ಯೆ'(ಕೊಡಗಿನ ಗೌರಮ್ಮ), 'ಗಂಗೆಯ ಗುತ್ತಿಗೆ'(ಟೇಂಗ್ಸೆ ಗೋವಿಂದರಾವ್), 'ಮಗುವಿನ ಕರೆ'(ದ.ರಾ.ಬೇಂದ್ರೆ), 'ಪವಾಡ ಪುರುಷ' (ಬಾಗಲೋಡಿ ದೇವರಾಯ) ಮುಂತಾದ ಕಥೆಗಳು ವಸ್ತು ವೈವಿಧ್ಯದಿಂದ ಅಧ್ಯಯನ ಯೋಗ್ಯವಾಗಿ ಉಳಿದಿವೆ. ಮಾಸ್ತಿ ಅವರ ಕಥೆಗಳು ಈ ಸಾಲಿಗೆ ಬೇಕಾದಷ್ಟು ಸೇರಿಕೊಳ್ಳುವ ಶಕ್ತಿಯನ್ನು ಪಡೆದಿವೆ.

[illegible]

[illegible]

ವ್ಯಕ್ತಿಗಳ ಸಾಮಾಜಿಕ ಬದುಕನ್ನು ಈ ಕಥೆಗಳು ಶೋಧಿಸುತ್ತವೆ. ಅಂದರೆ ಮೊದಲ ತಲೆಮಾರಿನ ಕಥೆಗಾರರು ಬದುಕನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ನೆಲೆಯಲ್ಲಿ ಗ್ರಹಿಸುತ್ತಿದ್ದರು. ವ್ಯಕ್ತಿಯ ವೈಯಕ್ತಿಕ ಸಮಸ್ಯೆಗಳನ್ನು ಕೇವಲ ಆ ವ್ಯಕ್ತಿಗೇ ಸಂಬಂಧಿಸಿದಂತೆ ಗ್ರಹಿಸುತ್ತಿರಲಿಲ್ಲ. ವ್ಯಕ್ತಿಯ ಸಾಮಾಜಿಕತೆಯನ್ನು ಅಥವಾ ವ್ಯಕ್ತಿ ಮತ್ತು ಸಮಾಜ ಎರಡರ ಅಂತರ್ ಸಂಬಂಧದಲ್ಲಿ ನೋಡಲಾಗುತ್ತಿತ್ತು. ಮೇಲೆ ಹೆಸರಿಸಿದ ಕಥೆಗಳಿಗೆ ಅನುಗುಣವಾಗಿ ಮಾತ್ರ ಇದನ್ನು ಹೇಳಲಾಗುತ್ತಿಲ್ಲ. ಒಟ್ಟು ಮೊದಲ ತಲೆಮಾರಿನ ಅಂದರೆ ನವೋದಯ ಕಥಾಸಾಹಿತ್ಯವನ್ನು ಕುರಿತು ಹೇಳುವಾಗ ಬದುಕಿನ ಹಲವು ಮುಖಗಳನ್ನು ಸಮಾಜದ ಸ್ಥಿತಿಗತಿಗಳೊಂದಿಗೆ ಕಟ್ಟಿಕೊಡಲಾಗುತ್ತಿತ್ತು. ವ್ಯಕ್ತಿಯ ಸಮಸ್ಯೆ ಸಾಮಾಜಿಕ ಸಮಸ್ಯೆಯಾಗಿ ಕಾಣುತ್ತಿತ್ತು. ಬಡತನ, ಶೋಷಣೆ, ದೌರ್ಜನ್ಯಗಳ ನಡುವೆಯೂ ಮನುಷ್ಯನ ಮಾನವೀಯತೆಗೆ ಹೆಚ್ಚಿನ ಬೆಲೆಯನ್ನು ನೀಡಲಾಗುತ್ತಿತ್ತು. ಕುಟುಂಬದ ಸಮಸ್ಯೆಗಳು ಕೇವಲ ಕುಟುಂಬದಲ್ಲೇ ಉಳಿಯದೆ, ನೆರೆಹೊರೆಯವರ ಜೊತೆ ಆ ಸಮಸ್ಯೆ ಬೆರೆತು ಹೋಗಿರುತ್ತಿತ್ತು. ವ್ಯಕ್ತಿ-ಸಮಾಜದ ಅಂತರ್‌ಸಂಬಂಧ ಗಳಲ್ಲಿಯೇ ಕಥಾವಸ್ತು ಮೂಡಿ ಬರುತ್ತಿತ್ತು.

ನಂತರ ತಲೆಮಾರಿನ ನವ್ಯರು ಸಮಾಜ, ಸಾಮಾಜಿಕತೆಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ವ್ಯಕ್ತಿಯ ಪ್ರಜ್ಞೆಯನ್ನು ಗುರಿಯಾಗಿ ಕಥಾಸಾಹಿತ್ಯವನ್ನು ಕಟ್ಟಿದರು. ನೆರೆಹೊರೆ, ಸಮಾಜ, ಪರಿಸರ ಕೇಂದ್ರಿತ ಪ್ರಜ್ಞೆಯನ್ನು ನಿರಾಕರಿಸಿದರು. ಮೂಲತಃ ವ್ಯಕ್ತಿಗೆ ಸ್ವಾತಂತ್ರ್ಯವಿಲ್ಲ. ಸಮಾಜ, ಕುಟುಂಬ, ಧರ್ಮದ ಸಾಂಸ್ಥೀಕರಣದ ಸಂವಿಧಾನ ಬದ್ಧ ನಿಯಮಗಳ ಒಳಗೇ ವ್ಯಕ್ತಿ ಬದುಕಬೇಕು. ಇದು ವ್ಯಕ್ತಿಗೆ ಉಸಿರುಗಟ್ಟುವ ಸ್ಥಿತಿ. ಇದರಿಂದ ಹೊರಬರಬೇಕು. ಸಂಪ್ರದಾಯ, ಆಚರಣೆ, ನಂಬಿಕೆಗಳ ಸಿದ್ಧ ಜೀವನ ಶೈಲಿಯಲ್ಲಿ ವ್ಯಕ್ತಿಯ ಬದುಕು ಕಮರಿಹೋಗಿದೆ. ಇದರಿಂದ ಹೊರಬರುವ, ತನ್ನ ಬದುಕು ಅನ್ಯ ಶಕ್ತಿಗಳಿಂದ ನಿಯಂತ್ರಣಕ್ಕೊಳಗಾಗದೆ, ಸ್ವತಂತ್ರವಾಗಿ ಅರಳಬೇಕು. ಆಯ್ಕೆಯ ಸ್ವಾತಂತ್ರ್ಯವಿರಬೇಕು. ಬಂಧನಗಳಿರಬಾರದು ಎಂಬ ನಿಲುವು ನವ್ಯ ಲೇಖಕರದಾಗಿದೆ. ವ್ಯಕ್ತಿಯ ಅಸ್ತಿತ್ವವನ್ನು ಶೋಧಿಸುವ ನೈತಿಕ ಜವಾಬ್ದಾರಿಯನ್ನು ಈ ಚಳುವಳಿಯ ಲೇಖಕರು ಹೊತ್ತರು. ಇದರಿಂದಾಗಿ ವ್ಯಕ್ತಿಯ ನೋವು, ವಿಲಕ್ಷಣತೆ, ವಿಕ್ಷಿಪ್ತತೆ, ಅಸಹಾಯಕತೆ, ಬೇಸರ, ಗೆಲ್ಲಲಾಗದ ಹತಾಶೆ, ಸಾವಿಗೆ ಶರಣಾಗುವ ಮನಸ್ಥಿತಿಯಲ್ಲೇ ನವ್ಯದ ಕಥಾವಸ್ತು ಹುಟ್ಟಿಕೊಂಡಿತು. ಆದರೂ ಶಾಂತಿನಾಥ ದೇಸಾಯಿ ಅವರು ಇತರ ನವ್ಯ ಕಥೆಗಾರರಿಗಿಂತ ಭಿನ್ನ ಕಥಾವಸ್ತುವನ್ನು ತಮ್ಮ ಕಥೆಗೆ ಆಯ್ದುಕೊಂಡರು. ಆದರೆ ಮೂಲತಃ ಅಸ್ತಿತ್ವವಾದದ ನೆಲೆಯನ್ನೇ ತಮ್ಮ ಕಥಾ ಸಾಹಿತ್ಯದಲ್ಲಿ ತಂದರು. ಕಾಮ-ಪ್ರೇಮಗಳ ಹಿನ್ನೆಲೆಯಲ್ಲಿ ವ್ಯಕ್ತಿಗಳ ಮನುಷ್ಯ ಸಂಬಂಧಗಳನ್ನು ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಹುಡುಕಾಟ ನಡೆಸಿದ ಶಾಂತಿನಾಥ ದೇಸಾಯಿಯರ ಕಥಾವಸ್ತು ವೈವಿಧ್ಯಮಯವಾಗಿದೆ. ಮನೋವಿಜ್ಞಾನದ ಹಿನ್ನೆಲೆಯೂ ಈ ಕಥೆಗಳಲ್ಲಿದೆ. ವ್ಯಕ್ತಿಗಳ ಸಂಬಂಧವನ್ನು ಅಂತರಂಗದ ಪರಿಳಿತಗಳೊಂದಿಗೆ ಮುಕ್ತವಾಗಿ ಚಿತ್ರಿಸಿದರು. ಹೆಣ್ಣು-ಗಂಡುಗಳ

ಕಾಮ-ಪ್ರೇಮ ಸಂಬಂಧಗಳನ್ನು ನೈತಿಕ ನೆಲೆಯಲ್ಲೇ ಚಿತ್ರಿಸಿದರೂ ಅದು ಸಂಪ್ರದಾಯವನ್ನು ಮೀರಿ ಆಧುನಿಕ ನೈತಿಕ ಪ್ರಜ್ಞೆಯೊಂದಿಗೆ ವ್ಯಕ್ತವಾಗುತ್ತಿತ್ತು. ಹೀಗಾಗಿ ಲಘು ಪ್ರೇಮ-ಕಾಮಗಳ ಕಥಾವಸ್ತುವಾಗದೇ ಗಂಭೀರವಾದ ಪರಿಣಾಮದಲ್ಲೇ ಕಥೆಗಳು ಹುಟ್ಟಿಕೊಂಡಿದ್ದನ್ನು ಕಾಣಬಹುದು.

'ಶೋಭನೆಯ ಹಾದಿ' ಮತ್ತು 'ಹೊಸತಿಲಾಚೆಗೆ' ಕಥೆಗಳು ಸ್ತ್ರೀಕೇಂದ್ರಿತ ನೆಲೆಯಲ್ಲಿ ಹದಿಹರೆಯದ ಹೆಣ್ಣಿನ ಸೂಕ್ಷ್ಮ ಸಂವೇದನೆಗಳನ್ನು ಅನಾವರಣಗೊಳಿಸುತ್ತವೆ. ಸ್ತ್ರೀ ಲೈಂಗಿಕತೆ ಪ್ರಕಟವಾಗುವ ಬಗೆಯಲ್ಲಿ ಹಿಂಸೆ ಕೇವಲ ಮಾನಸಿಕವಾಗದೆ ಭೌತಿಕವೂ ಆಗುತ್ತದೆ. "ಲೈಂಗಿಕ ಭಾವಗಳು ಉಂಟಾಗಲಿಕ್ಕೆ ಕಾರಣನಾಗುವ ಗಂಡು ಏಕಕಾಲದಲ್ಲಿ ಮೃದು ಪ್ರೇಮಿಯೂ, ಕ್ರೂರಿ-ಅತ್ಯಾಚಾರಿ-ಕಾಮುಕನೂ ಆಗಿ ಹೆಣ್ಣಿಗೆ ಪರಿಚಿತನಾಗುತ್ತಾನೆ."[೧] ವಿವಾಹಿತನಾಗಿರುವ ಶೋಭನೆಯ ಭಾವ, 'ಹೊಸತಿಲಾಚೆಗೆ'ಯ ಕಿಶೋರಿಯ ಗೆಳತಿಯ ಅಣ್ಣ ಮಾಧವ ಇಂಥ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಇವರು ಹದಿಹರೆಯಕ್ಕೆ ಬಂದ ಹೆಣ್ಣಿನ ಸುಪ್ತ ಮನಸ್ಸಿನ ಪ್ರಣಯಾಸಕ್ತಿಯನ್ನು ಅತ್ಯಂತ ನವಿರಾಗಿ ಹೊಡೆದೆಬ್ಬಿಸುವ ಗಂಡಸರು. ಇದರಿಂದ ಏನೇ ಹೆಚ್ಚು ಕಡಿಮೆಯಾದರೂ ಅನುಭೋಗಿಸುವುದು ಹೆಣ್ಣೇ ಹೊರತು ಗಂಡಸಲ್ಲ. ಗಂಡಸಿಗೆ ಎಲ್ಲವನ್ನೂ ದಕ್ಕಿಸಿಕೊಳ್ಳುವ ಶಕ್ತಿಯಿರುತ್ತದೆ. ಅಲ್ಲದೆ ಸಾಮಾಜಿಕವಾಗಿ ಕೌಟುಂಬಿಕವಾಗಿ ಅವನಿಗೆ ಯಾವುದೇ ನಿರ್ಬಂಧಗಳಿರುವುದಿಲ್ಲ. ಆದರೆ ಹೆಣ್ಣನ್ನು ಸಮಾಜ ನಿಯಂತ್ರಿಸುತ್ತಾ ಇರುತ್ತದೆ. 'ಶೋಭನೆಯ ಹಾದಿ' ಕಥೆಯಲ್ಲಿ ಬರುವ ಶೋಭಾ ವಿದ್ಯಾಭ್ಯಾಸಕ್ಕೆಂದು ತನ್ನ ಅಕ್ಕನ ಮನೆಯಲ್ಲಿ ಉಳಿಯಲಿಕ್ಕೆ ಬಂದಿರುತ್ತಾಳೆ. ಭಾವನ ಕಾಮುಕ ಕಣ್ಣಿಗೆ ಬಲಿಯಾಗುತ್ತಾಳೆ. ನಂತರ ಆಕೆ ಗರ್ಭಿಣಿಯೂ ಆಗುತ್ತಾಳೆ. ಇದರಿಂದ ಆಕೆ ಮಾನಸಿಕವಾಗಿ ಯಾತನೆಯನ್ನು ಅನುಭೋಗಿಸುತ್ತಾಳೆ. ಶೋಭಾಳಲ್ಲಿ ಕಾಮಪ್ರಜ್ಞೆ ಉಂಟಾಗಲಿಕ್ಕೆ ಕಾರಣನಾಗುವ ಆಕೆಯ ಭಾವ, ಆಕೆ ಗರ್ಭಿಣಿ ಎಂಬ ವಿಷಯ ತಿಳಿದಾಗ ಮದುವೆಯಾಗುವ ನೈತಿಕ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

"ನಾನು ನಿನ್ನನ್ನು ಲಗ್ನವಾಗುವುದೇ...? ಹುಚ್ಚೀ? ಜನರೇನೆಂದಾರು? ನಿನ್ನ ಅಕ್ಕ! ಅಷ್ಟೇ ಅಲ್ಲದೆ ಕಾಯಿದೆ ಬೇರೆ!"[೨] ಆಗ ಶೋಭಾ ಬಹಳ ದಿಟ್ಟತನದಿಂದ ತನ್ನ ಭಾವನನ್ನು ಎದುರಿಸಿ ಮದುವೆ ಯಾಗುವುದಾದರೆ, ತನ್ನ ಭಾವನನ್ನೇ ಎಂದು ಮಾನಸಿಕವಾಗಿ ಸಿದ್ಧಳಾಗುತ್ತಾಳೆ. ಅವಳ ಈ ರೀತಿಯ ತೀರ್ಮಾನಗಳಿಗೆ ಸಾಮಾಜಿಕವಾಗಿ, ಕೌಟುಂಬಿಕವಾಗಿ ಅಪವಾದಗಳಿದ್ದರೂ ಅದು ಯಾವುದನ್ನೂ ಆಕೆ ಲೆಕ್ಕಿಸುವುದಿಲ್ಲ. ತನ್ನ ಸುಖವನ್ನೇ ಮುಂದುಮಾಡಿಕೊಳ್ಳುತ್ತಾಳೆ. ಶೋಭಾಳಿಗೆ ತನ್ನ ಬದುಕಿನ ಬಗ್ಗೆ ತಾನು ತೆಗೆದುಕೊಳ್ಳುತ್ತಿರುವ ನಿರ್ಣಯದ ಬಗೆಗೆ ಅರಿವಿಲ್ಲ. ಮೋಹಕ್ಕೆ ಒಳಗಾಗಿ ಅಪ್ರಬುದ್ಧವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾಳೆ.

ಪ್ರಾಯಕ್ಕೆ ಬಂದವರಲ್ಲಿ ಒಂದು ರೀತಿಯ ಸಾಹಸ ಪ್ರವೃತ್ತಿ, ಆಕರ್ಷಣೆ, ಮೋಹ ಎನ್ನುವುದು ಹೆಚ್ಚಾಗಿ ಕೆಲಸ ಮಾಡುತ್ತಿರುತ್ತದೆ. ಅದು ಕ್ಷಣಿಕ ಸೆಳೆತ ಮಾತ್ರ. ಆ ಸಂದರ್ಭದಲ್ಲಿ ಅವರಿಗೆ ಜಗತ್ತೇ

ಶೂನ್ಯವಾಗಿ ಕಾಣಿಸುತ್ತಿರುತ್ತದೆ. ಯಾರ ಮಾತನ್ನು ಕೇಳುವಷ್ಟು ತಾಳ್ಮೆ ವ್ಯವಧಾನ ಅವರಲ್ಲಿ ಇರುವುದಿಲ್ಲ. ತಾವು ಮನಸ್ಸಿನಲ್ಲಿ ಏನು ಅಂದುಕೊಳ್ಳುತ್ತಿರುತ್ತಾರೋ ಅದನ್ನೇ ಮಾಡುತ್ತಿರುತ್ತಾರೆ. ಯಾರನ್ನೂ, ಯಾವುದನ್ನೂ ಲೆಕ್ಕಿಸುವುದಿಲ್ಲ. ಈ ರೀತಿಯ ಮೋಹದಲ್ಲಿ ಸುಖ ಮಾತ್ರ ಇರುತ್ತದೆ. ಅದು ತಲುಪುವ ಸ್ಥಿತಿ ಅನಿರೀಕ್ಷಿತವಾಗಿರುತ್ತದೆ.

''ಹೊಸತಿಲಾಚೆಗೆ'' ಕಥೆಯ ಕೇಂದ್ರವಿರುವುದು ಕಿಶೋರಾವಸ್ಥೆಯನ್ನು ದಾಟಲಿರುವ ಕಿಶೋರಿಯಲ್ಲಿ ನಡೆಯುವ ಸುಪ್ತ ಹಾಗೂ ಜಾಗೃತ ಮನಸ್ಸುಗಳ ಸಂಘರ್ಷ. ಅದರ ಪರಿಣಾಮವಾಗಿ ಅವಳಿಗೆ ಬೀಳುವ ಕನಸುಗಳು ಹಾಗೂ ಮನೆಯಾಳು ತರುಣ ಬಂಡ್ಯಾನ ಬಗ್ಗೆ ಅವಳು ಬೆಳೆಸಿಕೊಳ್ಳುವ ಕುತೂಹಲ ಭೀತಿ ಇವು ಪ್ರೌಢಾವಸ್ಥೆಯನ್ನು ತಲುಪುವ ಸೂಚನೆಗಳಾಗಿ ಕಥೆಯಲ್ಲಿ ಬರುತ್ತವೆ. ಗೆಳತಿ ಶಾಲಿನಿಯ ಅಣ್ಣ ಮಾಧವನ ಬಗ್ಗೆ ಅವಳಲ್ಲಿ ಹುಟ್ಟುವ ಭಾವನೆಗಳಲ್ಲಿಯೇ ಸಂದಿಗ್ಧತೆಯಿದೆ. ಅವಳು ಅವನ ಸಹವಾಸ ಬಯಸುತ್ತಾಳೆ. ಸ್ಪರ್ಶವನ್ನು ಆನಂದದಿಂದಲೇ ಅನುಭವಿಸುತ್ತಾಳೆ. ಆದರೆ ಅವಳ ಜಾಗೃತ ಮನಸ್ಸಿನ ಸಾಮಾಜಿಕ ಸಂಸ್ಕಾರಗಳ ಪರಿಣಾಮವಾಗಿ ಆಕೆ ಅವನೊಂದಿಗೆ ಮುಕ್ತವಾಗಿ ಬೆರೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಸಾಂಪ್ರದಾಯಿಕ ಸಮಾಜದಲ್ಲಿ ಸಮಾಜ ಒಪ್ಪಿತ ಮೌಲ್ಯಗಳನ್ನು ಕಟ್ಟುಪಾಡುಗಳನ್ನು ಒಪ್ಪಿಕೊಂಡು ಹೋಗುವ ಅನಿವಾರ್ಯತೆ ಹೆಣ್ಣಿಗಿರುತ್ತದೆ.

ಆ ಕ್ಷಣಕ್ಕೆ ಅದು ಸುಖ ಅಂತ ಅನ್ನಿಸಬಹುದು. ಆದರೆ ಅದು ತಲುಪುವ ಹಾದಿ ಯಾವುದಾದರೂ ಆಗಿರಬಹುದು. ಅಂಥ ಸಂದರ್ಭದಲ್ಲಿ ಹುಡುಗಿಯರನ್ನು ವಂಚಿಸುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ. ತುಂಬಾ ಬುದ್ಧಿವಂತಳಾದವಳು ಅವರನ್ನೇ ಬಳಸಿಕೊಂಡು ಆಟವಾಡಿಸುತ್ತಾಳೆ. ಈ ಕಥೆಯಲ್ಲಿ ಬರುವ ಕಿಶೋರಿ ಸಹ ತನ್ನ ಪ್ರಾಯದ ಉನ್ಮಾದಕತೆಯಿಂದ ಬಹುಬೇಗನೆ ಹೊರಬಂದು ತನ್ನ ಹೆಣ್ತನದ ಸಾಮರ್ಥ್ಯವೇನೆಂಬುದನ್ನು ತಿಳಿದುಕೊಳ್ಳುತ್ತಾಳೆ. ಲೈಂಗಿಕತೆಯನ್ನು ಹತ್ತಿಕ್ಕದೆಯೂ ಅದರ ಮೇಲೆ ಸಂಪೂರ್ಣ ಹತೋಟಿ ಸಾಧಿಸಿದಾಗ ಮಾತ್ರ ತನಗೆ 'ಸುಖ' ಪ್ರಾಪ್ತವಾಗಬಲ್ಲದೆಂಬ ವ್ಯಾವಹಾರಿಕ ತಿಳುವಳಿಕೆಯೂ ಆಕೆಗೆ ದೊರಕುತ್ತದೆ.

''...ದೇಹದ ಬಗ್ಗೆ ಮುಖದ ಬಗ್ಗೆ ಕಾಳಜಿ ತೆಗೆದುಕೊಂಡರೆ ಮಾಧವನಂಥ ಎಷ್ಟೋ ಜನರನ್ನು ಮಂಕುಗೊಳಿಸಬಹುದು!!... ಅದರಲ್ಲಿಯ ಮೋಜೇ ಮೋಜು! ಆ ರೇಗೇ ಹುಡುಗನ ಮೇಲೆ ತನ್ನ ಸಾಮರ್ಥ್ಯದ ಪ್ರಯೋಗ ಮಾಡಿ ನೋಡಿದರೆ ಹೇಗೆ? ಒಂದೆರೆಡು ಸವಿ ಮಾತುಗಳಿಂದ, ನಗೆಯಿಂದ, ದೈಹಿಕ ಸೌಷ್ಠವದಿಂದ ಜನರ ಹೃದಯವನ್ನು ಕುಣಿಸಲಿಕ್ಕಾಗುತ್ತಿದ್ದರೆ ಯಾಕೆ ಆ ಸಂತೋಷವನ್ನನು ಭವಿಸಬಾರದು?''[೩] ಎಂದು ಕಿಶೋರಿ ಆಲೋಚನೆ ಮಾಡುತ್ತಾಳೆ.

ನವಪ್ರಾಯದ ಹುಡುಗಿಯರು ಬಹಳ ಬೇಗನೆ ಗಂಡಸರ ಬಲೆಗೆ ಬೀಳುವ ಸಾಧ್ಯತೆಗಳಿರುತ್ತವೆ. ಚಾಲಾಕಿ ಗಂಡಸರು ಪ್ರೀತಿ, ಪ್ರೇಮ ಅಂತ ಹೇಳಿ ಆ ಪ್ರಾಯದ ಹುಡುಗಿಯರ ಮನಸ್ಸನ್ನು ಕೆಡಿಸಿ,

ವಂಚಿಸುವ ಸಾಧ್ಯತೆಗಳೇ ಹೆಚ್ಚು. 'ಮಳೆ' ಕಥೆಯಲ್ಲಿ ಬರುವ ಸುಶೀಲಳು ಈ ರೀತಿಯ ಪ್ರೀತಿಗೆ ಬಲಿಯಾದಂತ ಹೆಣ್ಣು. ಶ್ರೀಧರ ಮೊದಲೆಲ್ಲ ಆಕೆಯನ್ನು ಪ್ರೀತಿಸಿ, ನಂಬಿಸಿ ಮೋಸ ಮಾಡಿ ಹೊರಟು ಹೋಗಿರುತ್ತಾನೆ. ಆ ಸಂದರ್ಭದಲ್ಲಿ ಆಕೆಗೆ ತಾನು ಗರ್ಭಿಣಿಯಾದ ವಿಷಯ ತಿಳಿಯುತ್ತದೆ. ವಿವಾಹಕ್ಕಿಂತ ಪೂರ್ವದಲ್ಲಿ ಸಮಾಜ ಗರ್ಭಿಣಿಯಾದ ಸ್ತ್ರೀಯನ್ನು ನೋಡುವ ದೃಷ್ಟಿಕೋನವೇ ಭಿನ್ನವಾಗಿರುತ್ತದೆ. ಆಗ ಸುಶೀಲಳಿಗೆ ಬೇರೆ ದಾರಿ ತೋಚದೆ ತನ್ನನ್ನು ಮೊದಲಿನಿಂದಲೂ ಪ್ರೀತಿಸುತ್ತಿದ್ದ ಶ್ಯಾಮನನ್ನು ಮದುವೆಯಾಗುತ್ತಾಳೆ. ಆದರೂ ಆಕೆಯ ಮನಸ್ಸೆಲ್ಲ ಶ್ರೀಧರನ ಮೇಲೆಯೇ ಇರುತ್ತದೆ. ಈಗಾಗಲೇ ಆಕೆಗೆ ನಿರ್ದಿಷ್ಟವಾದ ಬದುಕು ಸಿಕ್ಕಿದೆ. ಅದನ್ನು ಒಪ್ಪಿಕೊಳ್ಳುವ ದಾರಿಯನ್ನು ಸರಳವಾಗಿ ಶೋಧಿಸದೆ, ತನ್ನ ಮನಸ್ಸಿನ ವ್ಯಾಪಾರದಲ್ಲಿ ಎಲ್ಲವನ್ನೂ ತೂಗಿ ಅಳತೆ ಮಾಡುತ್ತಿರುತ್ತಾಳೆ. ಕೈಯಲ್ಲಿರುವುದರ ಬಗೆಗೆ ಆಲೋಚನೆ ಮಾಡದೆ, ಕಳೆದು ಹೋದುದರ ಬಗ್ಗೆ ವ್ಯಥೆ ಪಡುತ್ತಿರುತ್ತಾಳೆ. ಆಕೆಗೆ ಬಾಳನ್ನು ಕೊಟ್ಟ ಶ್ಯಾಮನನ್ನೇ ಆಕೆ ದ್ವೇಷಿಸುತ್ತಿರುತ್ತಾಳೆ. ಆಕೆ ಭಾವನಾತ್ಮಕವಾಗಿ ಸೋತಿರಬಹುದು. ಶ್ರೀಧರ ತನಗೆ ಮೋಸ ಮಾಡಿದ ಅಂತ ಅತೃಪ್ತಿ, ಅಸಮಾಧಾನ ಆಕೆಗೆ ಆಗಿರಬಹುದು. ಆಕೆಯ ಬದುಕು ದುರಂತಮಯವಾಗುವುದನ್ನು ಶ್ಯಾಮ ತಪ್ಪಿಸಿದ್ದಾನೆ. ಹಾಗೆ ನೋಡಿದರೆ ವ್ಯಾವಹಾರಿಕ ಗೆಲುವು ಆಕೆಯದೇ ಆಗಿದೆ. ಆಕೆ ವಿವಾಹದ ಚೌಕಟ್ಟಿನಲ್ಲಿ ಬಂಧಿತಳಾಗಿ ಒಂದು ಆಸರೆಯನ್ನು ಪಡೆದುಕೊಂಡಿದ್ದಾಳೆ. ಆ ಪ್ರಜ್ಞೆ ಆಕೆಗಿಲ್ಲದೆ ಮಾನಸಿಕವಾಗಿ ತೊಳಲಾಡುತ್ತಾ ಇದ್ದಾಳೆ. ಇರುವ ಬದುಕನ್ನು ಒಪ್ಪಿಕೊಳ್ಳದ ಹೊರತು ಆಕೆಗೆ ಮತ್ತೊಂದು ಮಾರ್ಗ ಇಲ್ಲ.

ಗಂಡು ಹೆಣ್ಣಿನ ಸಂಬಂಧವು ವಿವಾಹದ ಮೂಲಕ ಏರ್ಪಡುವುದು ಸಾಮಾನ್ಯ. ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರ್ಯ ಇರುವುದಿಲ್ಲ. ಪೋಷಕರ ಸಮ್ಮತಿಯೇ ಅಂತಿಮ ಅನ್ನುವಂತಿರುತ್ತದೆ. ಹೆಣ್ಣಿನ ಅಭಿಪ್ರಾಯ ಬಹಳ ಮುಖ್ಯ ಎಂದು ಪರಿಗಣಿಸುವುದಿಲ್ಲ. ಆಧುನಿಕ ಸಮಾಜದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರ್ಯ, ಆಯ್ಕೆಯ ಹಕ್ಕು, ಅಭಿಪ್ರಾಯ ತಿಳಿಸುವ ಎದೆಗಾರಿಕೆ ಇರುತ್ತದೆ. ಆದರೂ ಸಮಾಜ ಒಪ್ಪಿತ ಮೌಲ್ಯಗಳಲ್ಲಿಯೇ ಹೆಣ್ಣು ಬದುಕುವ ಸ್ಥಿತಿಯಲ್ಲೇ ಇರಬೇಕಾಗುತ್ತದೆ. 'ಇದೂ ಒಂದು ರೀತಿ' ಕಥೆಯಲ್ಲಿ ಸಂಪ್ರದಾಯ ಮತ್ತು ಆಧುನಿಕ ಸಮಾಜಗಳ ಒಪ್ಪಿತ ಮೌಲ್ಯಗಳಲ್ಲಿ ಬದುಕುವ ಹೆಣ್ಣಿನ ಸ್ಥಿತಿಗಿಂತ ಭಿನ್ನವಾಗಿ ಸುಚೇತ ತನ್ನ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾಳೆ. ತಂದೆ, ತಾಯಿ ನಿರ್ಧರಿಸಿದ ಹುಡುಗ ಮಾಧವನನ್ನು ಮದುವೆಯಾಗುವ ಸಂದರ್ಭ ಬಂದಾಗ, ತನ್ನ ಸ್ವಾತಂತ್ರ್ಯವನ್ನು ಮುನ್ನೆಲೆಗೆ ತರಲು ಹೆಣಗುತ್ತಾಳೆ. ಮಾಧವ ಆಧುನಿಕ ಸಮಾಜದವನಾದರೂ, ಆಧುನಿಕ ಸಮಾಜದ ಮೌಲ್ಯಗಳ ನೆಲೆಯಲ್ಲೇ ಸುಚೇತಳನ್ನು ಮದುವೆಗೆ ಒಪ್ಪಿರುತ್ತಾನೆ. ಆದರೆ ಅದು ಸುಚೇತಳಿಗೆ ತಮಾಷೆಯಾಗಿ ಕಾಣುತ್ತದೆ. ತನ್ನನ್ನು ಮದುವೆಯಾಗುವ ಹುಡುಗನಿಗೆ ಅನೇಕ ಪ್ರಶ್ನೆಗಳನ್ನು ಹಾಕುವ ಮೂಲಕ ತನ್ನ ಜೀವನ ವಿಧಾನವನ್ನು ನಿರೂಪಿಸಲು ಬಯಸುತ್ತಾಳೆ. ಮಾಧವನಿಗೆ ಸುಚೇತಳ ಪ್ರಶ್ನೆಗಳು

ಅಸಂಗತವಾಗಿ ಕಂಡರೂ ಅವುಗಳಲ್ಲಿ ಸತ್ಯತೆ ಇರುವುದು ಅರಿವಿಗೆ ಬರುತ್ತದೆ. ಆದರೆ ಹೆಣ್ಣು ಇಂಥ ಪ್ರಶ್ನೆಗಳನ್ನು ಕೇಳುವುದನ್ನು ಗ್ರಹಿಸಲು ಸಾಧ್ಯವಾಗದೆ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ಆದರೆ ಇಲ್ಲಿ ಮಾಧವನ ಹಿನ್ನೆಲೆ ಸುಚೇತಳಿಗೆ ಗೊತ್ತಿರುತ್ತದೆ. ಹಾಗೆಯೇ ಸುಚೇತಳ ಹಿನ್ನೆಲೆ ಮಾಧವನಿಗೆ ಗೊತ್ತಿರುತ್ತದೆ. ಇದು ಬಾಹ್ಯ ಪರಿಸರದ ಹಿನ್ನೆಲೆಯೇ ಹೊರತು ಅವರಿಬ್ಬರ ಆಂತರ್ಯದ ಹಿನ್ನೆಲೆ, ಒಬ್ಬರಿಗೊಬ್ಬರು ಅರಿತುಕೊಳ್ಳುವ ಪ್ರಯತ್ನಗಳಿಗೆ ಅವಕಾಶ ಕೂಡಿಬಂದಿರುವುದಿಲ್ಲ. ಸುಚೇತಳ ತಂದೆ, ತಾಯಿಯರ ಸಮ್ಮತಿಗೆ ಬೆಲೆ ಕೊಟ್ಟು ಮದುವೆಗೆ ಒಪ್ಪಿರುತ್ತಾಳೆ. ಆದರೆ ಸುಚೇತಳ ಮನಸ್ಥಿತಿ ಇದಕ್ಕೆ ಒಪ್ಪಿಗೆಯನ್ನು ಸೂಚಿಸಿರುತ್ತದೆಯೇ ಎಂದು ಗ್ರಹಿಸುವ ಆಸಕ್ತಿ ಅಥವಾ ಸಹಜತೆ ಯಾರಲ್ಲೂ ಕಾಣುವುದಿಲ್ಲ. ಅದಕ್ಕಾಗಿ ಸುಚೇತಳೇ ತನ್ನನ್ನು ಮದುವೆಯಾಗಲಿರುವ ಮಾಧವನನ್ನೇ ಪ್ರಶ್ನಿಸುವ ಎದೆಗಾರಿಕೆಯನ್ನು ತೋರಿಸುತ್ತಾಳೆ. ಇಲ್ಲಿ ಮಾಧವ ಸೋಲುತ್ತಾನೆ. ಆದರೆ ಅವನ ಪ್ರಜ್ಞೆ ಜಾಗೃತವಾಗುತ್ತದೆ. ಸುಚೇತ ಅವನನ್ನು ಪರಿಶೀಲಿಸುವ ಮನೋಭಾವ ಅವಳ ಸ್ವಾತಂತ್ರ್ಯದ ವ್ಯಕ್ತಿತ್ವವನ್ನು ಸೂಚಿಸುತ್ತದೆ.

ತನ್ನ ಅರಿವಿನ, ಅನುಭವದ ಸಾಮಾಜಿಕತೆಯನ್ನು ಭೂಮಿ ಹಾಗೂ ಅದರಾಚೆಗಿನ ಅಗಮ್ಯ, ಅನಂತ ಅವಕಾಶವನ್ನು ಆಕಾಶ ಸಂಕೇತಿಸುತ್ತದೆ. ಇವೆರಡನ್ನೂ ಕೂಡಿಸುವ ಕ್ಷಿತಿಜವು ಒಟ್ಟಾರೆ ವ್ಯಕ್ತಿಯ ಅಸ್ತಿತ್ವವನ್ನು ನಿರ್ಧರಿಸುತ್ತದೆ. ವ್ಯಕ್ತಿನಿಂತ ಅನುಭವ, ಅರಿವು, ಸಾಮಾಜಿಕತೆಯ ನೆಲೆಯನ್ನಾಧರಿಸಿ 'ಕ್ಷಿತಿಜ'ದ ನೆಲೆ ಸಿದ್ಧ ಗೊಳ್ಳುತ್ತದೆ. ಮೊದಲನೆಯದು ಬದಲಾದಂತೆಲ್ಲ ಎರಡನೆಯದೂ ಬದಲಾಗಲೇಬೇಕು. ಈ ಸಾಪೇಕ್ಷತ್ವವನ್ನು 'ಕ್ಷಿತಿಜ' ಕಥೆ ತೋರಿಸುತ್ತದೆ.

ಸಾಂಪ್ರದಾಯಿಕ ಮನೋಭಾವದ ವ್ಯಕ್ತಿತ್ವವುಳ್ಳ ಮಂದಾಕಿನಿಯ ಕ್ಷಿತಿಜ ಏಕಾಏಕೀ ಬದಲಾಗಬಹುದೇನೋ ಎನಿಸುವಂಥ ಸಂದರ್ಭವೊಂದು ಇಂಗ್ಲೆಂಡಿನ ಹಡಗಿನ ಪ್ರವಾಸದ ನಿಮಿತ್ತ ಒದಗುತ್ತದೆ. ಆದರೆ ಈ ಬದಲಾವಣೆ ಕನಸಿನ ವಿಶ್ವವೊಂದನ್ನು ಮಾತ್ರ ಸೃಷ್ಟಿಸುತ್ತದೆ. ಹಡಗಿನ ಡೆಕ್ಕಿನಲ್ಲಿ ಮಂದಾಕಿನಿಗೆ ಆಗುವ ಅನುಭವಗಳು ಅವಳ ಪ್ರಜ್ಞೆಯ ಆಳದಲ್ಲಿ ಇಳಿಯಲಾರದವು. ಆಂತರಿಕವಾಗಿ ಆಕೆಯನ್ನು ಮಾರ್ಪಡಿಸುವಷ್ಟು, ಆಕೆಯ ಕ್ಷಿತಿಜವನ್ನು ವಿಸ್ತರಿಸುವಷ್ಟು ಡೆಕ್ಕಿನ ಅನುಭವಗಳು ಸಶಕ್ತವಾಗಿಲ್ಲ. ಹೊಸಿಲೊಳಗೆ ಉಳಿದ ಆಕೆಯ ಕಾಮನೆಗಳು ಡೆಕ್ಕಿನ ಶೂನ್ಯ, ನಿರ್ವಾತ ಪಾತಳಿಯ ಮೇಲೆ ಸೃಷ್ಟಿಗೊಂಡ ಲೋಕದಲ್ಲಿ ಇಣುಕಿ ಹಾಕಬಲ್ಲವಷ್ಟೇ. ಯಾವುದೇ ಸಾಮಾಜಿಕ ಪ್ರತಿರೋಧದ ಹಂಗಿಲ್ಲದೆ, ತಾತ್ಕಾಲಿಕ ಉಪಭೋಗ ಭೂಮಿಕೆಯನ್ನು ಸಮುದ್ರದ ಮೇಲೆ ತೇಲುವ ಹಡಗು ಕೃತಕವಾಗಿ ಸೃಷ್ಟಿಸಿದೆ. ಈ ಕೃತಕ ಸೃಷ್ಟಿಯೊಳಗೇ ಉಳಿದ ಪಾತ್ರಗಳೂ ಅವುಗಳ ವರ್ತನೆಗಳೂ ಅಡಕವಾಗಿವೆ. ಲೆಗ್ಗಿಯೊಂದಿಗೆ ಮಂದಾಕಿನಿ ಕಳೆದ ಕ್ಷಣಗಳು ಮುಕ್ತ ಅನುಭವ ಲೋಕವನ್ನು ಅರ್ಥಪೂರ್ಣವಾಗಿ ಪರಿಚಯಿಸುವುದಿಲ್ಲ. ಬದಲಿಗೆ ತನ್ನೊಳಗಿನ ಕರ್ಷಣವನ್ನು ಅರಿವಿಗೆ ತರುವಷ್ಟು ಜೀವಂತವಾದುದ್ದೇನೋ ಈ ಹಡಗಿನ ಲೋಕದಲ್ಲಿದೆ ಎಂದು ಆಕೆಗೆ ಅರಿವಾಗುತ್ತದೆ. ಸಾಂಪ್ರದಾಯಿಕತೆಯ ಗೆರೆ ದಾಟಿದ ಹೊಸ

ಕ್ಷಿತಿಜದ ಸಾಧ್ಯತೆಯ ಅರಿವು ಆಕೆಗೊದಗಿದರೂ, ಅದನ್ನು ತನ್ನ ಪ್ರಜ್ಞೆಯ ಭಾಗವಾಗಿ ಮಾಡಿಕೊಳ್ಳಲಾರದ ತನ್ನ ಸೋಲಿನ ಅರಿವೂ ಆಕೆಗಾಗುತ್ತದೆ. ಲೆಗ್ಗಿಯೊಂದಿಗಿನ ಗಾಲಾ ಡಿನ್ನರಿನಲ್ಲಾದ ಅನುಭವಗಳು ಅವಳ ವ್ಯಕ್ತಿತ್ವದ ನಗ್ನ ಸತ್ಯವನ್ನು ಆಕೆಗೆ ತೋರಿಸುತ್ತವೆ. "ಸೇವೆಗೆ ಇಡಿಯ ಜೀವನ ಮುಡಿಪಾಗಿಡುವುದರಲ್ಲಿ ಉನ್ನತ ಆನಂದವಿದೆಯಲ್ಲವೆ?..." ಎಂಬ ಸಾರ್ಥಕ ಭಾವಕ್ಕೆ ಬದಲಾಗಿ, ಇಂಗ್ಲೆಂಡಿಗೆ ಹೋಗಿ ಅಲ್ಲಿರಲು ತಾನು ಅಯೋಗ್ಯಳೆಂಬ ಭಾವನೆ ಅವಳನ್ನು ಮುತ್ತುತ್ತದೆ. ಜೀವನ ರಸವನ್ನು ಆಸ್ವಾದಿಸುವ ನಾಲಿಗೆ, ತುಟಿ, ಕೈಗಳಿಲ್ಲದ ಬರಿಯ ಕಣ್ಣಿನಿಂದೇನು ತಿನ್ನುವುದಿದೆ? ಎಂಬ ನಿರಾಶೆ ಆಕೆಯಲ್ಲುಂಟಾಗುತ್ತದೆ. ಹಾಗಾಗಿ ಇಂಗ್ಲೆಂಡಿನ ಕ್ಷಿತಿಜದಲ್ಲಿ ಮಂಜು ತಿಳಿಯಾಗಿ ಕಂಡರೂ ಇಂಗ್ಲೆಂಡ್ ಆಕೆಗೆ ಭೂತದಂತೆ ಕಾಣುತ್ತದೆ.

"ಮಾತೃತ್ವದ ಹಿಂದಿರುವ ವೈಭವೀಕರಣವನ್ನು 'ಗಂಡ ಸತ್ತ ಮೇಲೆ' ಕಥೆ ಇಲ್ಲವಾಗಿಸುವ ರೀತಿಯೇ ವಿಶಿಷ್ಟವಾದುದು."[೪] ಈ ಕಥೆಯಲ್ಲಿ ಬರುವ ವಿಜಯಾಬಾಯಿ ಪ್ರತಿಯೊಬ್ಬ ತಾಯಿಯು ತನ್ನ ಮಕ್ಕಳಿಗೆ ಮಾಡುವಂಥ ಕರ್ತವ್ಯವನ್ನು ತಾನು ಮಾಡುತ್ತಿದ್ದೇನೆಂದು ತಿಳಿದುಕೊಂಡಿರುತ್ತಾಳೆ. ಅದಕ್ಕೋಸ್ಕರ ಆಕೆ ತನ್ನ ಬದುಕಿನಲ್ಲಿ ಸಾಧ್ಯವಾಗದೇ ಇರುವ ಆಸೆ-ಆಕಾಂಕ್ಷೆಗಳನ್ನು ತನ್ನ ಮಗಳಾದ ಶಶಿಕಲೆಯ ಮೂಲಕ ಈಡೇರಿಸಿಕೊಳ್ಳುತ್ತಿರುತ್ತಾಳೆ. ತನಗೆ ಸಿಗದ ಸೌಕರ್ಯಗಳನ್ನು ತನ್ನ ಮಗಳಿಗೆ ಒದಗಿಸುವಾಗ ಹಾಗೂ ಆರ್ಥಿಕವಾಗಿ ಅವಳು ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡುವಾಗ ತಾಯಿಯಾಗಿ ತನ್ನ ಕರ್ತವ್ಯವನ್ನು ನೆರವೇರಿಸುತ್ತಿದ್ದೇನೆಂದು ತಿಳಿದಿರುತ್ತಾಳೆ. ಹಾಗೆ ನೋಡಿದರೆ ತನ್ನ ಆಸೆ, ಆಕಾಂಕ್ಷೆಗಳೆಲ್ಲಾ, ಮಗಳ ಆಸೆ, ಆಕಾಂಕ್ಷೆಗಳಾಗಿವೆಯೇ ಎಂದು ವಿಜಯಾಬಾಯಿ ಒಂದು ದಿನಕ್ಕೂ ಆಲೋಚನೆ ಮಾಡುವುದಿಲ್ಲ. ಬದಲಾಗಿ ತನ್ನ ಅಭಿಪ್ರಾಯಗಳನ್ನು, ಅಭಿರುಚಿಗಳನ್ನು ಮಗಳ ಮೇಲೆ ಹೇರುತ್ತಾ ಹೋಗುತ್ತಾಳೆ.

"ಇಲ್ಲಿ ನೋಡು, ಶಶಿ. ನಿನ್ನ ಸಲುವಾಗಿ ಇಷ್ಟೆಲ್ಲ ಮಾಡುತ್ತಿರುವೆ, ಇಷ್ಟೆಲ್ಲ ಸಹಿಸುತ್ತಿರುವೆ ನಿನ್ನ ಹೊರತಾಗಿ ನನಗೆ ಯಾರಿದ್ದಾರೆ? ನೀನು ಕಲಿಯಬೇಕು, ಜಾಣೆಯಾಗಬೇಕು, ದೊಡ್ಡವಳಾಗಬೇಕು, ನಾಲ್ಕು ಜನರಲ್ಲಿ ಎದ್ದು ಕಾಣಬೇಕು, ಒಬ್ಬ ಒಳ್ಳೆಯ ಆಫೀಸರನ ಅಥವಾ ಡಾಕ್ಟರನ ಕೈಹಿಡಿಯಬೇಕು ಎಂದು ನಾನು ಇಷ್ಟೆಲ್ಲ ಧಡಪಡ ಮಾಡುತ್ತಿರುವೆ"[೫] ಎನ್ನುತ್ತಾಳೆ.

ಇಲ್ಲಿ ತಾಯಿಯ ಅತಿಯಾದ ಶ್ರೀರಕ್ಷೆಯೇ ಸೆರಮನೆಯಾಗಿ ಮಾರ್ಪಟ್ಟು, ಶಶಿಕಲೆಗೆ ಸ್ವಾತಂತ್ರ್ಯವಿಲ್ಲದೆ ಹೋಗುತ್ತದೆ. ಹೀಗಾಗಿ "ದೈಹಿಕವಾಗಿ ಹಾಗೂ ಮಾನಸಿಕವಾಗಿ ಅವಳು ಶಶಿಯನ್ನು ನಾಶಮಾಡುತ್ತಾಳೆ."[೬] ತನ್ನ ತಾಯಿಯಿಂದ ಬಿಡುಗಡೆ ಪಡೆಯುವುದರ ಮೂಲಕ ಗೆಲುವು ಶಶಿಕಲೆಯದ್ದೇ ಆಗುತ್ತದೆ "ಡಾಕ್ಟರರು ಹೋದೊಡನೆ ವಿಜಯಬಾಯಿ ಒಮ್ಮೆಲೆ ಕುಸಿದಳು. ಅವಳಿಗೆ ಜಗತ್ತೇ ಶೂನ್ಯವಾಯಿತು.

ಬಾಗಿಲ ಬಳಿ ನಿಂತ ಶಶಿಕಲೆಯನ್ನು ನೋಡಿ,

"ಶಶೀ!" ಎಂದು ಕಣ್ಣೀರು ಒರೆಸಿದಳು.

"ಯಾಕಮ್ಮ?" ಶಶಿ ನಿರ್ವಿಕಾರವಾಗಿ ನುಡಿದಳು. ಡಾಕ್ಟರರು ಹೇಳಿದ್ದನ್ನೆಲ್ಲ ನಾ ಕೇಳಿದ್ದೇನೆ. ಬಿಡಮ್ಮಾ ನನಗೆ ಮೊದಲೇ ಗೊತ್ತಿತ್ತು..." ಶಶಿಯ ತುಟಿಯ ತುದಿಗೆ ಒಂದು ವಕ್ರ ನಗೆ ಅರಳಿತು. ಆ ನಗೆಯಲ್ಲಿ ಒಂದು ತರದ ಆನಂದವಿತ್ತು. ವಿಜಯಾನಂದವಿತ್ತು!"[೭]

ಸಾಮಾಜಿಕ ಪರಿಧಿಯ ಸೀಮಿತತೆಯಲ್ಲಿ ಅರಳಲಾರದ ಹೆಣ್ಣಿನ ವ್ಯಕ್ತಿತ್ವದ ಶೋಧ 'ಬೇಸರ' ಕಥೆಯಲ್ಲಿದೆ. ಗಂಡ ಆಫೀಸಿಗೆ ಹೊರಟಾಗಿನಿಂದ ಜರುಗುವ ರಾಗಿಣಿಯ ಮನೋವ್ಯಾಪಾರ ಇಲ್ಲಿದೆ. "ಹೆಚ್ಚು ಓದಲಾಗದ, ನೌಕರಿ ಮಾಡಲಾಗದ ರಾಗಿಣಿಯ ಬೇಸರಕ್ಕೆ ಸಿದ್ಧ ನೈತಿಕತೆಯನ್ನಾಧರಿಸಿದ ಮಾನದಂಡವನ್ನು ಬಳಸದ ಅರ್ಥವಂತಿಕೆ ದಕ್ಕಿದೆ."[೮] ರಾಗಿಣಿಯ ಮನಸ್ಸಿನಲ್ಲಿರುವ ಕಾಮನೆಗಳು ಎದುರು ಫ್ಲ್ಯಾಟಿನ ವ್ಯಕ್ತಿಯ ರೂಪದಲ್ಲಿ ಹೊರಗಡೆ ಬಂದಿವೆ. ಎದುರು ಫ್ಲ್ಯಾಟಿನವನಿಗೆ ಎದುರಾಗಿ, ತೆರೆದ ಕಿಟಕಿಯೊಳಗಿನಿಂದ ತನ್ನನ್ನು ತಾನು ದೈಹಿಕ ಆಕರ್ಷಣೆಗೆ ಗುರಿಪಡಿಸಿಕೊಳ್ಳುತ್ತಾಳೆ.

"ಜಗತ್ತಿನಲ್ಲಿ ನೀತಿ-ಅನೀತಿಗಳೆಂಬ ಮಾತೇ ಇರದಿದ್ದರೆ, ಪ್ರಾಣಿಗಳಂತೆ ಸ್ವಚ್ಛಂದವಾಗಿ, ಸ್ವಾತಂತ್ರ್ಯವಾಗಿ ವಿಹರಿಸುವಂತಿದ್ದರೆ, ಎಷ್ಟೊಂದು ಮಜವಾಗಬಹುದಿತ್ತು-ವಿಚಿತ್ರವಾಗಬಹುದಿತ್ತು ಈ ಜೀವನ!"[೯] ತನ್ನ ದೇಹದ ವರ್ತನೆಯನ್ನು ಗಂಡಸಿನ ಕಣ್ಣಿ ತುತ್ತಾಗಿ ಭಾವಿಸಿಕೊಳ್ಳುವಲ್ಲಿಯೇ ಎಂದಿಲ್ಲದ ರೋಚಕತೆಯನ್ನು ಆಕೆ ಹೊಂದುತ್ತಾಳೆ. ಸ್ತ್ರೀ ತನ್ನ ಲೈಂಗಿಕತೆಯನ್ನು ಗಂಡಸಿನ ಕಣ್ಣುಗಳ ಮೂಲಕ ಕಲ್ಪಿಸಿಕೊಳ್ಳುವ ಅಸಹಜತೆ ಈ ಕಥೆಯಲ್ಲಿದೆ. ಅಂತರಾಳದ ನಿರ್ಬಂಧಗಳ ಸ್ತರ ಕೊಟ್ಟ ಎಚ್ಚರಿಕೆಯ ಪರಿಣಾಮವಾಗಿ, ಅಪರಿಚಿತನೊಡನೆ ತಾನು ಬಯಸಿದ ಸಮಾಗಮವನ್ನು ರಾಗಿಣಿ ತಾನೇ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವಳು ಯಾವುದರ ಬಗೆಗೆ ಆಲೋಚನೆ ಮಾಡುತ್ತಿದ್ದಾಳೋ ಅದು ಎದುರುಗಡೆ ಬಂದು ನಿಂತಾಗ, ಅದನ್ನು ಎದುರಿಸುವ ಸಾಮರ್ಥ್ಯ ಆಕೆಗಿಲ್ಲ ಆಸಕ್ತಿ ಇದೆ. ಜಿಜ್ಞಾಸೆ ಇದೆ. ಆದರೆ ನೇರವಾಗಿ ಮುಖಾಮುಖಿಯಾಗುವ ಶಕ್ತಿಯಿಲ್ಲ. ಅವಳಲ್ಲೇ ದೌರ್ಬಲ್ಯ ಇದೆ. ಇಲ್ಲಿ ವ್ಯಕ್ತಿ ಅನ್ನುವವನು ಸಾಂಕೇತಿಕವಾಗಿದ್ದಾನೆ. ತನ್ನಲ್ಲಿರುವ ಪ್ರವೃತ್ತಿಯನ್ನೇ ಮುಂದುವರೆಸಿದರೆ ಎಲ್ಲಿ ಸಮಸ್ಯೆ ಆಗುತ್ತದೋ ಅನ್ನುವ ಅರಿವು ಆಕೆಗೆ ಬಂದಿದ್ದರಿಂದ ತುಂಬಾ ಪ್ರಜ್ಞಾ ಪೂರ್ವಕವಾಗಿ ಆಕೆ ಅದನ್ನು ದೂರವಿರಿಸುತ್ತಾಳೆ.

ಸಮಾಜದಲ್ಲಿ ಪ್ರತಿಯೊಂದು ಹೆಣ್ಣು, ತನಗೂ ತನ್ನದೇ ಆದ ಜೀವನಬೇಕು, ಕುಟುಂಬಬೇಕು ಎಂದು ತಹತಹಿಸುತ್ತಿರುತ್ತಾಳೆ. ಆ ಮೂಲಕ ಆಕೆ ತಾನು ಒಂದು ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುತ್ತಾಳೆ. 'ಏಕಾಂಗಿ' ಕಥೆಯಲ್ಲಿ ಬರುವ ಆ್ಯನ್ ಕೂಡ ಈ ನಿಟ್ಟಿನಲ್ಲಿ ಸಾಗುತ್ತಿರುವಂಥವಳು. ಈಕೆ ಒಬ್ಬ ಪಾಶ್ಚಾತ್ಯ ಸಂಸ್ಕೃತಿಯ ಆಧುನಿಕ ಹೆಣ್ಣು. ಇವಳಿಗೆ ಈಗಾಗಲೇ ಮದುವೆಯಾಗಿ ಯಾವುದೋ ಕಾರಣಕ್ಕಾಗಿ ಗಂಡನಿಂದ ವಿಚ್ಛೇದನವನ್ನು ಪಡೆದುಕೊಂಡಿದ್ದಾಳೆ. ಆದರೆ ಈಕೆಗೆ ಒಬ್ಬ ಮಗಳಿರುತ್ತಾಳೆ.

ಅದಕ್ಕಾಗಿ ಆಕೆ ತನ್ನ ಮಗಳಿಗೆ ತಂದೆಯಾಗಬಲ್ಲ, ಸಂಗಾತಿಯ ಶೋಧದಲ್ಲಿದ್ದಾಳೆ. ಅಂಥ ಸಂದರ್ಭದಲ್ಲಿ ಆಕೆಗೆ ಮುಕುಂದನ ಜೊತೆಗೆ ಸ್ನೇಹ ಬೆಳೆಯುತ್ತದೆ. ಆದರೆ ಇವನು ಇಂಗ್ಲೆಂಡಿನ ಅಪರಿಚಿತ ಪರಿಸರದಲ್ಲಿ ನಿರ್ಭಿಡೆಯಿಂದ ಲೈಂಗಿಕ ಸಹವಾಸವನ್ನು ಪಡೆಯಲು ಹಾಗೂ ಅಲ್ಲಿದ್ದಷ್ಟು ದಿನ ಕಾಲಹರಣ ಮಾಡಲು ಆ್ಯನಳ ಸ್ನೇಹವನ್ನು ಮಾಡುತ್ತಾನೆ. ಆದರೆ ಯಾವಾಗ ಆ ಸ್ನೇಹ ಸಂಬಂಧವಾಗಿ ಪರಿವರ್ತಿತ ಆಗುತ್ತಿದೆ ಎಂದು ಅವನಿಗೆ ಗೊತ್ತಾಗುತ್ತದೋ ಆಗ ಆ್ಯನಳಿಂದ ದೂರವಿರಲು ಪ್ರಯತ್ನಿಸುತ್ತಾನೆ. ಇಲ್ಲಿ ಮುಕುಂದನಿಗೆ ಸುಖ ಬೇಕು, ಸಂತೋಷಬೇಕು ಆದರೆ ಜವಾಬ್ದಾರಿ ಹೊರಲಿಕ್ಕೆ ತಯಾರಿಲ್ಲ. ಸಮಸ್ಯೆ ಎದುರಾದಾಗ ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಅವನು ಭಾರತೀಯನಾಗಿರುವುದರಿಂದ ಈಗಾಗಲೇ ಮದುವೆಯಾಗಿ, ಒಬ್ಬ ಮಗಳಿರುವಂಥ ಆ್ಯನಳನ್ನು ತನ್ನ ಸಂಗಾತಿಯನ್ನಾಗಿ ಸ್ವೀಕರಿಸಲಿಕ್ಕೆ ಆತನ ಮನಸ್ಸು ಸಿದ್ಧವಿರುವುದಿಲ್ಲ. ಇದಲ್ಲದೆ, ತನ್ನದಲ್ಲದ ಮಗುವಿಗೆ ತಂದೆಯಾಗಿ, ಲಂಡನ್ನಿನ ಪರಿಸರದಲ್ಲಿ ಒಂದು ನೆಲೆಯನ್ನು ಪಡೆದುಕೊಳ್ಳಲಿಕ್ಕೆ ಅವನು ಇಷ್ಟಪಡುವುದಿಲ್ಲ. ಅದಕ್ಕಾಗಿ ಅವನು ಮತ್ತೊಂದು ಹೆಣ್ಣಿನ ಸ್ನೇಹ ಅರಸಿ ಹೊರಡುತ್ತಾನೆ. ಆ್ಯನಳನ್ನು ವಂಚಿಸಿದ ಭಾವ ಮುಕುಂದನನ್ನಾವರಿಸಿದರೂ, ಅವಳ ಬಲೆಯಿಂದ ತಾನು ತಪ್ಪಿಸಿಕೊಂಡೆನೆಂಬ ವ್ಯಾವಹಾರಿಕ ಸಮಾಧಾನ ಪಡೆಯುತ್ತಾನೆ. "ಇದೂ ಒಂದು ಅನುಭವ ಎಂಬ ಧನ್ಯಭಾವವನ್ನು ಹೊಂದುವಷ್ಟು ಭಾವರಾಹಿತ್ಯ ಅವನಲ್ಲಿದೆ"[೦೦] ಆದರೆ ಆ್ಯನಳ ಏಕಾಂಗಿತನದ ಅನುಭವವನ್ನು ಮತ್ತೆ ಆಕೆಯನ್ನು ಸಂಧಿಸಿದಾಗ ತಿಳಿಯುತ್ತದೆ. ಮುಕುಂದನ 'ವ್ಯಾವಹಾರಿಕ ಕ್ರೌರ್ಯವನ್ನು ಸದ್ದಿಲ್ಲದೆ, ತಣ್ಣನೆಯ ಮಾತುಗಳಲ್ಲಿ ಆ್ಯನ್ ತೋರಿಸಿಕೊಟ್ಟು, ಆತನಲ್ಲಿ 'ಏಕಾಂಗಿ' ಭಾವವನ್ನು ಹುಟ್ಟು ಹಾಕುತ್ತಾಳೆ.

'ಮಗು?"

"ವ್ಹರ್ಜಿನ್ನೆಂದ ಮೇಲೆ ಎಲ್ಲ ಸ್ಪಷ್ಟ ತಾನೇ - ಲಗ್ನವಿಲ್ಲ, ಮಕ್ಕಳಿಲ್ಲ, ಅಷ್ಟೇ ಅಲ್ಲದೆ ಹಳೆ ಪ್ರಿಯಕರರಿಲ್ಲ, ಫ್ರೆಂಡಿಲ್ಲ - ಯಾರಿಲ್ಲ."

"ಆತ ನಂಬಿದನೇ?"

"ಆತ ನಂಬಬೇಕೆಂದೆಲ್ಲಿದೆ? ಅದೊಂದು ಮಾತಿನ ರೀತಿ, ಅದರ ಅರ್ಥ ಅವನಿಗೆ ಗೊತ್ತು..."

"ಎಲ್ಲಿ-ಯಾವಾಗ ಬರ್ತಾನವ?"

"ನೀ ಹೋದ ಮೇಲೆ!"[೦೦] ಇಲ್ಲಿ ಆ್ಯನ್ ತಾತ್ಕಾಲಿಕವಾಗಿ ಆತಂಕ, ಖಿನ್ನತೆಗೆ ಒಳಗಾಗಿದ್ದಾಳೆ ಹೊರತು, ಮಾನಸಿಕ ಅಸ್ಥಿರತೆ ಕಡೆಗೆ ಹೋಗಿಲ್ಲ. ಏಕೆಂದರೆ ಬದುಕನ್ನು ರೂಪಿಸಿಕೊಳ್ಳುವ ಜಾಣತನ ಆಕೆಯಲ್ಲಿದೆ.

ನಾಗರಿಕ ಜಗತ್ತಿನ ಕೆಲವು ಸೂಕ್ಷ್ಮ ಹೊಳಹುಗಳನ್ನು 'ಅವರು, ಕಾರು ಮತ್ತು ನಗೆ' ಕಥೆಯು ಪರಿಚಯಿಸುತ್ತದೆ. ಒಂದು ನಿಮಿಷದ ಮಟ್ಟಿಗೆ ಕಾಲವನ್ನು ಸ್ಥಗಿತಗೊಳಿಸಿ ನಾಲ್ಕು ವ್ಯಕ್ತಿಗಳ ಒಳಜೀವನವನ್ನು ಇಲ್ಲಿ ತೋರಿಸಲಾಗಿದೆ. ಜೀವನದಲ್ಲಿ ತನ್ನನ್ನು ತೊಡಗಿಸಿಕೊಳ್ಳದೆ ಬದುಕಿನ ರೀತಿಯನ್ನಾಗಿ ಶಕುಂತಲಾ ಮಾಡಿಕೊಂಡಿದ್ದಾಳೆ. ತೃಪ್ತ ಮನೋವೃತ್ತಿಯ ಅವಳ ಗಂಡ ಮಾಧವರಾಯ, ಬೌದ್ಧಿಕ ನಿರ್ಲಿಪ್ತತೆಯನ್ನು ಬಿಟ್ಟುಕೊಡದ ಪ್ರೊಫೆಸರ್ ಪ್ರಭು ಇವರುಗಳಿಗೆ ತಮ್ಮ ತಮ್ಮ ಸಂಬಂಧಗಳ ಸತ್ಯವನ್ನು ಕಂಡುಕೊಳ್ಳಬೇಕೆನ್ನುವ ಜರೂರು ಇಲ್ಲ. ಈ ಕಥೆಯ ಶಕುಂತಲಾ ಸಂದರ್ಭಕ್ಕೆ ಹೊಂದಿಕೊಂಡು ಹೋಗುವ ಮನೋಭಾವದವಳು. ಅವಳಿಗೆ ಬದುಕು ಕೃತಕ ಅನಿಸಿದರೂ, ಆಧುನಿಕ ಬದುಕಿನಲ್ಲಿ ಯಾವುದು ಅವಶ್ಯಕವೋ ಅದೆಲ್ಲವನ್ನು ಬಳಸಿಕೊಂಡು ಹೋಗುವ ಅರಿವು ಈಕೆಗಿದೆ. ಆದರೆ ಪ್ರಭುವಿನ ಬುದ್ಧಿಮತ್ತತೆಯಲ್ಲಿ ಪ್ರೇಮಸಂಬಂಧವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವ ಸಾಮರ್ಥ್ಯವಿಲ್ಲ. ತಾನು ತಿರಸ್ಕರಿಸಿದ ಶಕುಂತಲೆಯ ವೈವಾಹಿಕ ಸ್ಥಿತಿಯ ಬಗೆಗೆ ಆಂತರ್ಯದಲ್ಲೇ ಮತ್ಸರಿಸುತ್ತ ಆಕೆಯ ಅವಗುಣಗಳನ್ನು ನೆನಪಿಸಿಕೊಳ್ಳುತ್ತಾನೆ. ಆಕೆಯಿಂದ ತನಗೆ ಯಾವುದೇ ರೀತಿ ತೊಂದರೆಯಾಗದಂತೆ ಸಂರಕ್ಷಿಸಿಕೊಳ್ಳುತ್ತಾನೆ. ಪ್ರಭುವಿನ ಮನೆಗೆ ಹೋಗಬೇಕೆನ್ನುವ ಆಕೆಯ ನಿರ್ಧಾರದಲ್ಲಿ ಯಾವುದೇ ರೀತಿಯ ಪ್ರಣಯದ ಉದಾತ್ತ ಭಾವನೆಗಳಿಲ್ಲ. ಬದುಕನ್ನು ಗೆಲ್ಲುವ ನಿಟ್ಟಿನಲ್ಲಿ ಯಶಸ್ವಿ ನಡೆ ಶಕುಂತಳದಾಗಿದೆ.

ತೃಪ್ತ ಮತ್ತು ತಪ್ತ ಸ್ಥಿತಿಗಳ ನಡುವಿನ ದ್ವಂದ್ವವನ್ನು ಬಿಗಿಯಾಗಿ ತನ್ನ ನಿರೂಪಣೆಯಲ್ಲಿ ಹಿಡಿದಿಟ್ಟುಕೊಂಡಿರುವ ಕಥೆ 'ತೃಪ್ತ', ಕಥಾ ನಾಯಕ ವಿಶ್ವನಾಥನ ತಪ್ತಸ್ಥಿತಿಗೆ ಆತನ ಹೆಂಡತಿ ಪದ್ಮಿನಿಯ ಬಗೆಗಿನ ಲೈಂಗಿಕ ಅಸೂಯೆ ಕಾರಣವಾಗಿದೆ. ತೃಪ್ತ ಸ್ಥಿತಿಗೆ ತನ್ನ ಮನಸ್ಸನ್ನು ತರಲು ಆತ ನಡೆಸುವ ಪ್ರಯತ್ನಗಳ ಹಿಂದೆ ಆತನದೇ ಆದ ತರ್ಕವೊಂದಿದೆ.

"....ಹೀಗೆಲ್ಲ ಜೀವನಕ್ಕೆ ಸರಳ ರೂಪುಗೊಟ್ಟರೆ ಜೀವನದಲ್ಲಿಯ ಸಮಸ್ಯೆಗಳನ್ನೆಲ್ಲ ನಿರ್ನಾಮ ಮಾಡಿಬಿಡಬಹುದು! ಹೀಗೆ ನಿರ್ನಾಮ ಮಾಡುವುದರಲ್ಲಿಯೇ ಸುಖವಿದೆ, ಶಾಂತಿಯಿದೆ, ತೃಪ್ತಿಯಿದೆ..."[೧೨]

ಈ ತರ್ಕವನ್ನು ಮೀರಿ ಆತನಲ್ಲಿ ಅಸ್ವಸ್ಥತೆ, ಸಿಟ್ಟು, ಅಸಹಾಯಕತೆ ಮನೆ ಮಾಡಿದೆ. ಇಲ್ಲಿ ಪದ್ಮಿನಿ ಹೊರಗಡೆ ಹೋಗಿ ದುಡಿದುಕೊಂಡು ಬರುವ ಆಧುನಿಕ ಹೆಣ್ಣು ಇವಳು ಆಧುನಿಕ ಸಮಾಜದಲ್ಲಿ ತನ್ನ ಜೀವನ ಶೈಲಿಗೆ ತಕ್ಕ ಹಾಗೆ ಇರುತ್ತಾಳೆ. ಅವಳ ಈ ನಡವಳಿಕೆ, ಅವಳ ಬದುಕಿಗೆ ಅನಿವಾರ್ಯ. ಆದರೆ ಸಮಸ್ಯೆ ಇರುವುದು ಆಕೆಯ ಗಂಡ ವಿಶ್ವನಾಥನಲ್ಲಿ ಇವನು ತನ್ನ ಮನಸ್ಸಿನ ವ್ಯಾಪಾರದಲ್ಲಿ ಎಲ್ಲವನ್ನೂ ತೂಗಿ ಅಳತೆ ಮಾಡುತ್ತಿರುತ್ತಾನೆ. ಅದು ಇವಳ ಅರಿವಿಗೆ ಬರುವುದಿಲ್ಲ. ಅವಳಿಗಿರುವ ವ್ಯಾವಹಾರಿಕತೆ ಸಮಚಿತ್ತ ಇವನಲ್ಲಿಲ್ಲ. ವರ್ತಮಾನದಲ್ಲಿ ನಡೆಯುತ್ತಿರುವುದಕ್ಕಿಂತಲೂ, ಇವನು ತನ್ನ ಕಲ್ಪನೆಯಲ್ಲಿ ಮಾಡುವಂಥ ಆಲೋಚನೆಗಳು ಇವನನ್ನು ಹೆಚ್ಚು ಘಾಸಿಗೊಳಿಸುತ್ತಿರುತ್ತವೆ. ಆದರೆ

ಪದ್ಮಿನಿ ಪ್ರಬುದ್ಧಳಾಗಿದ್ದಾಳೆ. ಇವಳಿಗೆ ತನ್ನ ಬದುಕು, ಸಂಸಾರ, ಉದ್ಯೋಗ ಎಲ್ಲದರ ಬಗೆಗೂ ಜವಾಬ್ದಾರಿ ಇದೆ. ಎರಡೂ ಕಡೆ ಬ್ಯಾಲೆನ್ಸ್ ಮಾಡುವ ಕಲೆ ಆಕೆಗಿದೆ.

ಪ್ರತಿ ಸಲವೂ ಹೆಂಡತಿ ಕೊಟ್ಟ ಉತ್ತರದಿಂದ ಆತ ಹೊಂದುತ್ತಿದ್ದ ಸಮಾಧಾನವೇ ಆತನ ಸಮಸ್ಯೆಗೆ ಪರಿಹಾರವಾಗುತ್ತಿತ್ತು. ಆದರೆ ಈ ರೀತಿ ತಾನು ಹೊಂದುತ್ತಿದ್ದ ಸಮಾಧಾನವು ತಮ್ಮ ಸಂಬಂಧಗಳ ವಿಘಟನೆಯನ್ನು ಉದ್ದೇಶಪೂರ್ಣವಾಗಿ ತಡೆಯುವ ಯತ್ನವಾಗಿತ್ತೆಂಬುದು ಆತನ ಅರಿವಿಗೆ ಬರುತ್ತದೆ.

''...ಯಾಕೆ ಇಷ್ಟು ತಡವಾದದ್ದು? ಎಂದು ಕೇಳಿದಾಗ ಆಕೆ ಥಪ್ಪನೆ ಅವನ ಮುಖದ ಮೇಲೆ ಸತ್ಯವನ್ನೇ ಉಗುಳಿಬಿಟ್ಟರೆ, ವಿಶ್ವನಾಥನಿಗೆ ವಿಚಿತ್ರ ಭಯವಾಯಿತು. ಡಾ. ಪಾರೀಖರ ಜೊತೆಗಿದ್ದೆ. ಇಷ್ಟೂ ತಿಳೀಬಾರದೆ ನಿನ್ನ ದಟ್ಟವಾದ ಮಿದುಳಿಗೆ? ಎಂದು ಅವಳು ಖಡಾಖಂಡಿತವಾಗಿ ಹೇಳಿಬಿಟ್ಟರೆ? ಹಾಗೆ ಅವಳು ಅಂದುಬಿಟ್ಟರೆ, ತಾನೂ 'ಹಾಗಾದರೆ ಅವನ ಜೊತೆಗೇ ಹೋಗಿಬಿಡು, ಇಲ್ಲಿಗೇಕೆ ಬಂದಿ?' ಎಂದು ಹೇಳಬೇಕಾಗುವುದಲ್ಲ ಎಂದು ಅಸ್ವಸ್ಥಗೊಂಡ.''[೧೩]

ಮನೆಯಾಚೆಗಿನ ಹೆಣ್ಣಿನ ಚಟುವಟಿಕೆಗಳು ಗಂಡಿಗೆ ಸಹಿಸಲಾರದ ತುತ್ತಾಗಲಾರಂಭಿಸುತ್ತವೆ. ಆದರೂ ಸಂಬಂಧವನ್ನು ಕಡಿದುಕೊಂಡು ಶೂನ್ಯದಲ್ಲಿ ಬಾಳುವ ಧೈರ್ಯ ವಿಶ್ವನಾಥನಿಗಿಲ್ಲ. ಹಾಗಾಗಿ ಒಂದು ಬಗೆಯ ಮಂದ ತುಯ್ತದಲ್ಲೇ ಬದುಕಿನ ಗತಿ ಸಾಗಿಹೋಗುವ ಪರಿಯನ್ನು ವಿಶ್ವನಾಥನ ಕ್ಷಣಕ್ಷಣಕ್ಕೂ ಬದಲಾಗುವ ಆಲೋಚನಾ ಲಹರಿಯಲ್ಲಿ ಕಾಣಬಹುದು.

'ನಿರ್ಣಯ' ಕಥೆಯಲ್ಲಿ ಬರುವ ಗಂಗಿ ನೈಸರ್ಗಿಕವಾಗಿ ದೇಹ ಮತ್ತು ಮನಸ್ಸುಗಳೆರಡರ ತೃಪ್ತಿಯನ್ನು ಬಯಸುವಂಥವಳು. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ಮಂಜುಳೆ ಸಹ 'ದೈಹಿಕ ಸುಖ ಅಷ್ಟೇ ಅಲ್ಲ ಮಾನಸಿಕ ಸುಖ ಹಾಗೂ ನೆಮ್ಮದಿ ಬೇಕು' ಅಂತ ಅನ್ನುವವಳು. ಆದರೆ ಈ ಕಥೆಯಲ್ಲಿ ಬರುವ ಗಂಗಿ, ತನ್ನ ಗಂಡನಾದ ಮಲ್ಲೇಶಿಯಿಂದ ಯಾವುದೇ ರೀತಿಯ ಸುಖವನ್ನು ಪಡೆಯದ ಹೆಂಗಸು ತುಂಬಾ ಒರಟನಾದ ಮಲ್ಲೇಶಿಗೆ ಕೇವಲ ದುಡಿಯುವುದು ಮಾತ್ರ ಗೊತ್ತು. ಹೆಣ್ಣಿನ ಮನಸ್ಸನ್ನು ಅರಿಯುವಷ್ಟು ಸೂಕ್ಷ್ಮತೆ ಅವನಲ್ಲಿಲ್ಲ. ತನ್ನ ಹೆಂಡತಿಯಾದ ಗಂಗಿಗೆ ಅವಳದೇ ಆದ ಆಸೆ, ಆಕಾಂಕ್ಷೆಗಳಿರುತ್ತವೆ ಎನ್ನುವುದನ್ನು ಮಲ್ಲೇಶಿ ಅರಿಯದೇ ಹೋಗುತ್ತಾನೆ. ಹೀಗಾಗಿ ಗಂಗಿಯ ಮನಸ್ಸು ಸಹಜವಾಗಿಯೇ ಬೇರೆ ಕಡೆಗೆ ತುಡಿಯುತ್ತದೆ. ಇದನ್ನು ತಿಳಿದ ಮಲ್ಲೇಶಿ ಊರಮುಖಂಡರಾದ ದೇಶಪಾಂಡೆಯವರ ಹತ್ತಿರ ಬಂದು, ಸಮಸ್ಯೆಯ ಇತ್ಯರ್ಥಕ್ಕೆ ಮೊರೆ ಹೋಗುತ್ತಾನೆ. ಆದರೆ ದೇಶಪಾಂಡೆಯವರು ಅವರಿಬ್ಬರ ನಡುವೆ ಸಾಮರಸ್ಯ ತರುವಲ್ಲಿ ಯಶಸ್ವಿಯಾಗುವುದಿಲ್ಲ. ಹಾಗೆ ನೋಡಿದರೆ ದೇಶಪಾಂಡೆಯವರಿಗೆ ಗಂಗಿಯ ಮನಸ್ಥಿತಿ ಅರ್ಥವಾಗಿರುತ್ತದೆ. ಅದನ್ನು ನಾವು ಅವರ ಮಾತಿನ ಮೂಲಕ ತಿಳಿಯಬಹುದು.

''ಥೂ ಸೂಳೇಮಗನ, ಸೋಡಚೀಟಿ ಅಂತ ಗಂಗೀನ್ನ ಕಳಿಸಿ ನಿನ್ನ ಹೊಟ್ಟೀಗೆ, ನಿನ್ನ ಮೈಗೆ ಕ್ಯಾರ ಹಾಕ್ಕೊಳ್ಳೀಯೇನು? ಇಂಥಾ ಮೇನಕಾದಂಥ ಹೆಂಡತಿ ಇದ್ದಾಳ - ಅವಳ ಪೂಜೆ ಮಾಡಬೇಕು ನಿನ್ನಂಥವರು. ಹುಚ್ಚುರಂಡೆಗಂಡ, ಹೆಂಡತಿ ಅಂದರ ಏನಂತ ತಿಳಿದಿಯೋ, ಹುಚ್ಚ? ಅವಳಿಗೆ ಏನು ಬೇಕು ಏನು ಬ್ಯಾಡ - ಅವಳಿಗೂ ಸ್ವಲ್ಪ ಮನಸ್ಸಿರ್ತದ, ಹೃದಯ ಇರ್ತದ ಅನ್ನೋ ಮಾತ ಮರೆತು ನೀನು ನಿನ್ನ ಕೆಲಸದಾಗ ಗರ್ಕ ಆದಿ ಅಂದರ ಮುಗೀತು.... ದಾರೀಲೆ ಹೋಗೋ ನಾಯಿ ಮೂಸಿ ನೋಡಲಿಕ್ಕೆ ಸುರು ಮಾಡ್ತಾವ. ಗಂಗೀ ಕಾಲ ಬಿದ್ದು ಕರ್ಕೊಂಡು ಹೋಗು-ಮನೀ ಲಕ್ಷ್ಮೀ ಆಕಿ. ಮನೀಗೆ ಕರಕೊಂಡು ಹೋಗಿ ಅವಳು ಹೇಳಿದ್ಹಾಂಗ ಕೇಳ್ಕೋತ ಹೋಗು.''[೧೪] ಇಲ್ಲಿ ಹೆಣ್ಣಿನ ನಿಜವಾದ ಭಾವನೆಯನ್ನು ಗಂಡು ಅರ್ಥಮಾಡಿಕೊಳ್ಳುತ್ತಿಲ್ಲ ಅನ್ನುವುದು ಪ್ರಮುಖವಾದ ಪ್ರಶ್ನೆ. ಅವಳನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿ ಸಿಕ್ಕಾಗ ಸಹಜವೇ ಅವಳಿಗೆ ಆ ಕಡೆಗೆ ಸೆಳೆತ ಉಂಟಾಗುತ್ತದೆ. ಸಾಧ್ಯವಾದರೆ ಅದನ್ನೇ ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಹಾಗಾಗಿ ಇಲ್ಲಿ ಗಂಗಿಯ ಆಯ್ಕೆ ಶಂಕರ್ಯಾನೇ ಆಗಿರುತ್ತಾನೆ. ಆದರೆ ಆಕೆ ಅದನ್ನು ಬಾಯಿಬಿಟ್ಟು ಹೇಳುವುದಿಲ್ಲ. ತುಂಬಾ ನಿರ್ಲಿಪ್ತವಾಗಿರ್ತಾಳೆ. ಕೊನೆಗೆ ಅದನ್ನು ಆಕೆ ಪ್ರಯೋಗಾತ್ಮಕವಾಗಿ ಮಾಡಿತೋರಿಸುತ್ತಾಳೆ. ಗಂಗೀ ಕೇವಲ ಕಾಮನೆಗಳ ಬೆನ್ನು ಹತ್ತಿ ಹೋಗುತ್ತಿಲ್ಲ. ತನ್ನ ಬದುಕಿನ ಅರ್ಥವನ್ನು ಕಂಡುಕೊಂಡು, ಆ ಮೂಲಕ ಸಾರ್ಥಕತೆಯನ್ನು ಪಡೆಯಲಿಕ್ಕೆ ಇಡೀ ವ್ಯವಸ್ಥೆಯನ್ನೇ ಆಕೆ ಧಿಕ್ಕರಿಸಿ ಹೋಗುತ್ತಾಳೆ.

ಮೂವತ್ತೈದರ ಅಂಚಿನ ವಿವಾಹಿತ ಹೆಣ್ಣೊಬ್ಬಳು ಇಪ್ಪತ್ತು, ಇಪ್ಪತ್ತೆರಡರ ಹರೆಯದ ತರುಣನ ಆಕರ್ಷಣೆಗೆ ಒಳಗಾಗುವ ಸನ್ನಿವೇಶ 'ರಾಕ್ಷಸ' ಕಥೆಯಲ್ಲಿದೆ. ಈ ಕಥೆಯಲ್ಲಿ ಬರುವ ನಳಿನಿ ತನ್ನಲ್ಲಿ ಹುಟ್ಟಿದ ಲೈಂಗಿಕ ಭಾವಗಳನ್ನು ಸರಳ ನೈತಿಕತೆಯಾಧಾರಿತ ತೀರ್ಮಾನಗಳಿಂದ ನಿರಾಕರಿಸಲು ಯತ್ನಿಸುವುದಿಲ್ಲ. ತಾನು ಭೇಟಿಯಾದ ತರುಣ ಕಮಲಾಕರನಲ್ಲಿ ಅನುರಕ್ತಳಾದಂತೆ ಆಕೆ ಕನಸು ಕಾಣುತ್ತಾಳೆ. ಆ ಕನಸಿನಿಂದಾಗಿ ಆಕೆಗೇನೂ ಕಸಿವಿಸಿ ಪಶ್ಚಾತ್ತಾಪವಿಲ್ಲ. ''ಅರ್ಥವಿಲ್ಲದ ಕನಸುಗಳು-ತಳವಿಲ್ಲ, ಬುಡವಿಲ್ಲ, ಅಷ್ಟೇಕೆ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು'' ಎಂಬ ನಿರ್ಭಾವುಕತೆಯೂ ಆಕೆಯನ್ನಾವರಿಸಿದೆ. ಗಂಡನಿಲ್ಲದಾಗ ಆಕೆ ಆ ತರುಣನಿಗೆ ಬರುವ ಆಹ್ವಾನ ಕೊಟ್ಟಿದ್ದಕ್ಕೆ ಕೊಂಚ ವಿಚಲಿತಳಾಗುತ್ತಾಳೆ. ಮನಸ್ಸನ್ನು ಚುಚ್ಚುವ ಭೀತಿಯನ್ನು, ಎದುರಿಸಲೇಬೇಕೆಂಬ ನಿರ್ಧಾರ ಆಕೆಯದು. ''ಆ ರಾಕ್ಷಸನ ಮುಖವನ್ನೊಮ್ಮೆ ನೋಡಲೇಬೇಕು ಅಂದಾಗಲೇ ಮನಸ್ಸಿಗೆ ಸ್ಥೈರ್ಯ ಬರಬಹುದು ಎದುರಿಸುವ ಧೈರ್ಯ ಬರಬಹುದು.''[೧೫] ಎಂಬ ನಿರ್ಧಾರವೇ ಕಥೆಯ ತಾತ್ವಿಕತೆಯನ್ನು ರೂಪಿಸುತ್ತದೆ. ಅತ್ಯಂತ ಸಹಜವಾದ ನಾಟಕೀಯ ಮುಕ್ತಾಯವೆಂಬಂತೆ ಆಕೆಯೊಳಗಿನ ರಾಕ್ಷಸ ಪೂರ್ಣರೂಪದಲ್ಲಿ ಪ್ರಕಟವಾಗುತ್ತಾನೆ.

ನಳಿನಿಗೆ ಕಮಲಾಕರನ ಜೊತೆಗಿನ ಸಂಬಂಧ ಶಾಶ್ವತ ಅಲ್ಲ ಅಂತಗೊತ್ತು. ಆದರೂ ಆಕೆ ಆತನ ಜೊತೆಗೆ ಸಂಬಂಧವನ್ನು ಬೆಳೆಸಿರುತ್ತಾಳೆ. ಹಾಗೂ ಆತನನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುತ್ತಾಳೆ.

ಆದರೆ ಅವನಿಗೆ ಈಗಾಗಲೇ ಈ ಸಂಬಂಧ ಸಾಕೆನಿಸಿಬಿಟ್ಟಿದೆ ಅದಕ್ಕಾಗಿ ಆತ ನನ್ನಿಂದಾಗಿಯೇ ನಿನ್ನ ಜೀವನ ಹಾಳಾತು ಎಂದು ಹೇಳುವುದರ ಮೂಲಕ ಆಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ''ಇಲ್ಲ ರಾಜಾ, ನಾನು ಇದಕ್ಕಿಂತ ಮೊದಲು ಜೀವಿಸಿರಲೇ ಇಲ್ಲ. ಒಂದು ರೀತಿಯ ನಿದ್ದೆಯಲ್ಲಿದ್ದೆ, ಶವದಂತಿದ್ದೆ. ನೀನು ಬಂದಿ, ಪ್ರಾಣ ತುಂಬಿದಿ ನಾನು ಜೀವಂತಳಾದೆ ಎಚ್ಚೆತ್ತೆ, ಎದ್ದೆ, ಕುಣಿದಾಡಿದೆ, ನಲಿದಾಡಿದೆ...''[೧೬]

ಕಮಲಾಕರ, ನಳಿನಿಯ ಬಾಳಿನಲ್ಲಿ ಬಂದಿದ್ದರಿಂದಾಗಿ, ಆಕೆ ತನ್ನ ಬದುಕಿಗೆ ಸಾರ್ಥಕತೆಯನ್ನು ಪಡೆದುಕೊಂಡಿರುವುದಾಗಿ ಹೇಳುತ್ತಾಳೆ. ಆದರೆ ಕಮಲಾಕರ ಗುಪ್ತ ವ್ಯವಹಾರದಿಂದ ಬಿಡುಗಡೆ ಪಡೆಯಲು ಯತ್ನಿಸುತ್ತಾನೆ. ಅವನಿಗೆ ಸುಖ ಮಾತ್ರ ಬೇಕಾಗಿತ್ತು. ಜವಾಬ್ದಾರಿಯಲ್ಲ. ಅದಕ್ಕಾಗಿ ಆಕೆ ಅವನನ್ನು ತ್ಯಜಿಸುವ ನಿರ್ಧಾರ ಕೂಡ 'ರಾಕ್ಷಸ' ಪಾತಳಿಯಿಂದಲೇ ಬಂದಿದೆ. ಇಲ್ಲಿ ರಾಕ್ಷಸ ಅನ್ನುವುದು ವ್ಯಕ್ತಿಯ ಸುಪ್ತ ಮನಸ್ಸಿನಲ್ಲಿ ಅದುಮಿಟ್ಟ ಎಷ್ಟೋ ಭಾವನೆಗಳು ಅವ್ಯಕ್ತವಾಗಿ ಉಳಿದಿರುತ್ತವೆ. ಅವು ಹೊರಬರಲಿಕ್ಕೆ ಸಂದರ್ಭ, ಸನ್ನಿವೇಶಗಳನ್ನು ಕಾಯುತ್ತಿರುತ್ತವೆ. ಅಂಥ ಸಂದರ್ಭ ಸಿಕ್ಕಾಗ ಅವು ಜಾಗೃತಗೊಂಡು ವ್ಯಕ್ತಿಯ ವ್ಯಕ್ತಿತ್ವವನ್ನೇ ತುಳಿದು ಹಾಕಿ ತಾವೇ ಮುಂದಾಗಿ ಬಿಡುತ್ತವೆ. ಅಂಥ ಸ್ಥಿತಿಗೆ ತಲುಪಿದ ವ್ಯಕ್ತಿಗಳು ಸಮಾಜ, ಕುಟುಂಬ, ಸ್ಥಾನಮಾನ ಯಾವುದನ್ನು ಲೆಕ್ಕಿಸುವುದಿಲ್ಲ. ತಮ್ಮ ಸುಖವನ್ನೇ ಮುಂದುಮಾಡುತ್ತಾರೆ.

''ಬದುಕೆಂಬ ನದಿಯ ನೀರಿನ ಹರಿಯುವಿಕೆಗೆ ನಿರ್ದಿಷ್ಟ ಉದ್ದೇಶವಿಲ್ಲದಿದ್ದರೂ ವರ್ತಮಾನ ಕ್ಷಣಗಳ ಜೀವಂತ ಅನುಭವ ಲೋಕವನ್ನು ಸೃಜಿಸಬಲ್ಲ ಚೈತನ್ಯವಿದೆ.''[೧೭] ಈ ಚೈತನ್ಯವನ್ನು 'ಯಥಾ ಕಾಷ್ಠಂ ಚ ಕಾಷ್ಠಂ ಚ' ಕಥೆಯ ಕೇಂದ್ರ ಪಾತ್ರ ಶಾರದಾಬಾಯಿಯ ಪ್ರಜ್ಞೆಯ ಮೂಲಕ ಇದನ್ನು ಶೋಧಿಸಬಹುದು. ಕಟ್ಟುಪಾಡುಗಳಿರುವ ನಾಗರಿಕ ಜಗತ್ತಿನಲ್ಲಿ ಹೆಣ್ಣಿಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲಿಕ್ಕಾಗದೆ, ಒಳಗೆ ಅದುಮಿಟ್ಟುಕೊಳ್ಳುತ್ತಿರುತ್ತಾಳೆ. ಅಂಥ ಭಾವನೆಗಳು ಹೊರ ಬರಲಿಕ್ಕೆ ಕೆಲವೊಂದು ಸಂದರ್ಭ, ಸನ್ನಿವೇಶಗಳಿಗಾಗಿ ಹಾತೊರೆಯುತ್ತಿರುತ್ತವೆ. ಅಂಥ ಸಂದರ್ಭ, ಸನ್ನಿವೇಶಗಳು ಬಂದಾಗ ಅವು ಜಾಗೃತಗೊಳ್ಳುತ್ತಿರುತ್ತವೆ. ಈ ಕಥೆಯಲ್ಲಿ ಬರುವ ಶಾರದಾಬಾಯಿ ತನ್ನ ಗಂಡನನ್ನು ಕಳೆದುಕೊಂಡು ಆಸೆ, ಆಕಾಂಕ್ಷೆಗಳಿಂದ ವಂಚಿತಳಾಗಿದ್ದಾಳೆ. ಆದರೆ ಆ ಆಸೆ-ಆಕಾಂಕ್ಷೆಗಳು ಅವಳಿಂದ ದೂರ ಆಗಿಲ್ಲ. ಅವು ಅವಳಲ್ಲಿಯೇ ಅಡಗಿವೆ. ಅದನ್ನು ವ್ಯಕ್ತಪಡಿಸಲಿಕ್ಕೆ ಆಕೆಗೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಆಕೆ ಸಮಾಜದಲ್ಲಿ ಒಂದು ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಣ್ಣು. ಒಂದು ವೇಳೆ ಆಕೆ ತನ್ನ ಮನಸ್ಸಿಗೆ ಬಂದಂತೆ ವರ್ತಿಸಿದರೆ, ವ್ಯವಸ್ಥೆ ತನ್ನನ್ನು ನೋಡುವ ದೃಷ್ಟಿ ಬದಲಾಗಬಹುದೆನ್ನುವ ಆತಂಕ ಆಕೆಯಲ್ಲಿದೆ. ಅದಕ್ಕೋಸ್ಕರ ಆಕೆಗೆ ತನ್ನ ಆಸೆಗಳನ್ನು ವ್ಯಕ್ತಪಡಿಸಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಂಥ ಸಂದರ್ಭದಲ್ಲಿ ಆಕೆಯ ಭಾವನೆಗಳಿಗೆ ಪ್ರಚೋದನೆ ನೀಡಲೆಂಬಂತೆ ಡಾ. ಕೃಷ್ಣಕುಮಾರರ

ಪರಿಚಯ ಆಕೆಗಾಗುತ್ತದೆ. ಇವನು ಶಾಲೆಯ ವಾರ್ಷಿಕೋತ್ಸವಕ್ಕೆಂದು ಬಂದ ಅತಿಥಿ. ಇವರಿಬ್ಬರ ಭೇಟಿ ತೀರ ಆಕಸ್ಮಿಕ. ಅಂಥ ಸಂದರ್ಭದಲ್ಲಿ ಆಕೆಯೊಳಗೆ ಅಡಗಿದ್ದ ಅವ್ಯಕ್ತ ಕಾಮಭಾವನೆಗಳು ಜಾಗೃತಗೊಂಡು ಬಿಡುತ್ತವೆ. "ಹುಲಿ ಹೀಗೆ ಒಮ್ಮೆಲೆ ಮೈಮೇಲೆ ಹಾರಿಬಿಡುತ್ತದೆ-ಮೈಯೆಲ್ಲ ರಕ್ತರಂಜಿತವಾಗುತ್ತದೆ-ಮಿದುಳೆಲ್ಲ, ಕರುಳೆಲ್ಲ ಚೆಲ್ಲಾಪಿಲ್ಲಿಯಾಗಿ ಅತ್ತಿತ್ತ ಹರವಿ ಬೀಳುತ್ತವೆ-ಹೃದಯ ನಿಲ್ಲುತ್ತದೆ-ನೋವೆಲ್ಲ ಒಮ್ಮೆಲೆ ಮಾಯವಾಗಿ ಎಲ್ಲವೂ ಶೂನ್ಯವಾಗುತ್ತದೆ."[೧೮]

ಇಲ್ಲಿ ಶಾರದಾಬಾಯಿ ಆತನ ಜೊತೆಗೆ ಆಟ ಆಡುವ ನೆಪದಲ್ಲಿ ಅರ್ಧ ತಮಾಷೆಯಾಗಿ, ಅರ್ಧ ಗಂಭೀರವಾಗಿ ತನ್ನ ಮನಸ್ಸಿನೊಳಗಿರುವ ಕಾಮಭಾವನೆಯನ್ನು ಹೊರಹಾಕುತ್ತಿದ್ದಾಳೆ. "ನಡೀರಿ ಈಗಿಂದೀಗಲೇ ಹೋಗಿಬಿಡುವ..." ಶಾರದಾಬಾಯಿಯ ಧ್ವನಿಯಲ್ಲಿ ಅಪೂರ್ವ ಉತ್ಸಾಹವಿತ್ತು, ನಿರ್ಧಾರವಿತ್ತು. "ಇಲ್ಲಿ ನೋಡು, ಕುಮಾರ, ನಿನಗೆ ಬೇಕಾದಾಗ ನನ್ನನ್ನು ಬಿಟ್ಟು ಹೋಗಬಹುದು-ನಿನಗೆ ಯಾವ ತರದ ತೊಂದರೆಯಾಗದು-ಯಾವ ಅಡ್ಡಿ-ಆತಂಕ ಬರಲಾರದು,"

"ಶಾರದಾಬಾಯಿ ಹುಲಿಯಾದಳು. "ಹುಚ್ಚು! ಹೌದು, ಹುಚ್ಚು ಅಲ್ಲ ಅಂತ ಯಾರಂತಾರೆ..." ಎಂದು ಕುಮಾರನ ಕೋಟಿನ ಕಾಲರನ್ನು ಗಟ್ಟಿಯಾಗಿ ಜಗ್ಗಿ ಹಿಡಿದು ಅವನ ಕತ್ತು ಬಗ್ಗಿಸಿ, ಬಲವಾಗಿ ಮುದ್ದಿಸಿದಳು. ಇನ್ನು ನೀನು ಪಾರಾಗಲಾರೆ."[೧೯] ಬಹುಕಾಲದಿಂದ ಲೈಂಗಿಕ ಬದುಕಿನಿಂದ ವಂಚಿತಳಾದ ಶಾರದಾಬಾಯಿ ತನ್ನೊಳಗಿನ ಕಾಡು, ಕಾಡಿನ ಹುಲಿಯನ್ನು ಕಂಡುಕೊಂಡದ್ದೇ ಮುಖ್ಯವಾಗುತ್ತದೆ.

'-ನ್ನು ತನ್ನ ಹಿಂದೆ ಬಿಟ್ಟು ಹೋಗಿದ್ದಾಳೆ' ಕಥೆಯಲ್ಲಿ ಬರುವ ನಂದಿನಿ ಒಬ್ಬ ಜವಾಬ್ದಾರಿಯುತ ಹೆಣ್ಣು. ಆಕೆಯ ತಾಯಿ ತೀರಿಕೊಂಡು ಹೋಗಿದ್ದಾಳೆ ಅದಕ್ಕಾಗಿ ಆಕೆ ತನ್ನ ಕುಟುಂಬದ ಸ್ವಾಸ್ಥ್ಯಕ್ಕಾಗಿ ಶ್ರಮಿಸುತ್ತಿದ್ದಾಳೆ. ಈಕೆ ಸದಾಶಿವಯ್ಯನಿಗೆ ಮಗಳ ರೂಪದಲ್ಲಿರುವ ಹೆಂಡತಿಯಾಗಿ, ಆತನ ಜವಾಬ್ದಾರಿಯನ್ನು ನೆನಪಿಸುತ್ತಿರುತ್ತಾಳೆ. ಆದರೆ ಇವನು ಜವಾಬ್ದಾರಿಯನ್ನು ಹೊರದೆ, ತನ್ನ ಸುಖದ ಬಗ್ಗೆ ಮಾತ್ರ ಆಲೋಚನೆ ಮಾಡುತ್ತಿರುತ್ತಾನೆ. ಅದಕ್ಕಾಗಿ ಇವನು ಮನೆಕೆಲಸದಾಕೆಯ ಜೊತೆ ಸಂಬಂಧವಿಟ್ಟುಕೊಳ್ಳುತ್ತಾನೆ. ವಯಸ್ಸಿಗೆ ಬಂದ ಮಗಳ ಮದುವೆ ಬಗ್ಗೆ ಆಲೋಚನೆ ಮಾಡದೆ, ತನ್ನ ಮದುವೆಯ ಬಗ್ಗೆ ಆಲೋಚನೆ ಮಾಡುತ್ತಾನೆ. ಪ್ರಜ್ಞಾಪೂರ್ವಕವಾಗಿ ಕುಟುಂಬದ ಬಗ್ಗೆ ಜವಾಬ್ದಾರಿಯಿದ್ದ ನಂದಿನಿಗೆ, ತನ್ನ ತಂದೆ ಕೆಲಸದಾಕೆಯ ಜೊತೆ ಸಂಬಂಧ ಬೆಳೆಸುತ್ತಿದ್ದಾನೆ ಎನ್ನುವುದರ ಸೂಕ್ಷ್ಮ ಅರಿವು ಆಕೆಗಾಗುತ್ತದೆ. ಅದಕ್ಕಾಗಿ ಆಕೆ ಕೆಲಸದಾಕೆಯನ್ನು ಕೆಲಸದಿಂದ ಬಿಡಿಸಿಬಿಡುತ್ತಾಳೆ. ಹಾಗೂ ತನ್ನ ತಂದೆಯಿಂದ ಆಕೆಯನ್ನು ದೂರಮಾಡುತ್ತಾಳೆ. ಕೊನೆಗೆ ಸದಾಶಿವಯ್ಯ ಗಿರಿಜೆಯನ್ನು ಮದುವೆಯಾಗುವ ಭಾವವನ್ನು ವ್ಯಕ್ತಪಡಿಸಿದಾಗ "ಅಂಥಾ ಹೊಲಸು ಹುಡುಗಿನ್ನ? ಅದು ಎಂದೂ ಶಕ್ಯವಿಲ್ಲ"[೨೦] ಎಂದು ತನ್ನ ಅಭಿಪ್ರಾಯವನ್ನು ಬಹಳ ದಿಟ್ಟವಾಗಿ ಹೇಳುತ್ತಾಳೆ.

"ಅಷ್ಟೂ ಮೀರಿ, ನಿಮಗೆ ನಿಜವಾಗಿಯೂ ಅವಳ ಮೇಲೆ ಪ್ರೀತಿಯಿದ್ದರೆ-ನಾನೇಕೆ ಅಡ್ಡಬರಬೇಕು? ಹಾಗಿದ್ದರೆ ಹೇಳಿಬಿಡ್ರಿ - ನಾನೂ ಪಿಟ್ಟೆನ್ನದೆ ಇಂದೇ ಮಹೇಶನನ್ನು ಕರಕೊಂಡು ಅಜ್ಜನ ಮನೆಗೆ ಹೋಗಿ ಬಿಡುವೆ."[೨೧] ಕೊನೆಗೆ ಆತನಿಗೆ ಕರ್ತವ್ಯಪ್ರಜ್ಞೆ, ಪಾಪಪ್ರಜ್ಞೆ, ಜವಾಬ್ದಾರಿ ಎಲ್ಲವೂ ನೆನಪಾಗಿ ತನಗನ್ನಿಸಿದ ಹಾಗೆ ನಡೆದುಕೊಳ್ಳಲಿಕ್ಕಾಗಲಿಲ್ಲ. ಸಾಮಾಜಿಕ ಚೌಕಟ್ಟಿನಲ್ಲಿರುವ ಬಾಂಧವ್ಯಗಳು ಅವನನ್ನು ಬಂಧಿಸುತ್ತವೆ. ಕುಟುಂಬದ ಶ್ರೇಯಸ್ಸಿಗೋಸ್ಕರ ನಂದಿನಿ ತಾಯಿ, ಮಗಳು, ಹೆಂಡತಿಯಾಗಿ, ಬದುಕನ್ನೇ ಸವಾಲಾಗಿ ತೆಗೆದುಕೊಂಡು ಆ ಗಂಡಸಿನ ಜೊತೆ ಹೋರಾಟವನ್ನು ಮಾಡಿದ್ದಾಳೆ.

ವಿವಾಹಿತಳಾದ ಯಾವುದೇ ಹೆಣ್ಣು ತನ್ನ ಬದುಕನ್ನು ಮತ್ತೊಂದು ಹೆಣ್ಣಿನ ಜೊತೆ ಹಂಚಿಕೊಳ್ಳಲಿಕ್ಕೆ ಇಷ್ಟ ಪಡುವುದಿಲ್ಲ. ತನ್ನ ದಾಂಪತ್ಯದ ಬದುಕಿನ ಬಗ್ಗೆ ತಾನೇ ಒಂದು ಆಶಾ ಗೋಪುರವನ್ನು ಕಟ್ಟಿಕೊಂಡಿರುತ್ತಾಳೆ. ಆದರೆ ಆ ಆಶಾ ಗೋಪುರ ಮುರಿದು ಬಿದ್ದಾಗ ಅವಳಿಗೆ ಬದುಕಿನ ಬಗ್ಗೆ ಯಾವುದೇ ಆಸೆಗಳು ಉಳಿಯದೇ ಹೋಗುತ್ತವೆ. 'ಬಿಡುಗಡೆ' ಕಥೆಯಲ್ಲಿ ಬರುವ ಮೀನಾಳ ಬದುಕು ಇದೇ ತೆರನಾದದ್ದು. ಈಕೆಯ ಗಂಡ ಮತ್ತೊಂದು ಹೆಣ್ಣಿನ ಜೊತೆಗೆ ಸಂಬಂಧವನ್ನಿಟ್ಟುಕೊಂಡಿದ್ದಾನೆ. ಎರಡೂ ದಂಡೆಯ ಮೇಲೆ ಕಾಲಿಡಬೇಕೆನ್ನುವುದು ಮೀನಾಳ ಗಂಡನ ಬಯಕೆ. ಅವನಿಗೆ ಸುಳ್ಳಿನ ಅವಶ್ಯಕತೆಯಿದೆ. ಅವಳಿಗೆ ಇಷ್ಟು ಸುಂದರವಾದ ಸಂಸಾರ ಕೆಡಿಸೋ ವಿಚಾರವಿಲ್ಲ..."[೨೨] ಎಂದು ಹೆಂಡತಿಗೆ ಹೇಳುವುದು ಇಂಥ ಸುಳ್ಳುಗಳಲ್ಲಿ ಒಂದು. ಬೇರೆ ಹೆಣ್ಣಿನ ಜೊತೆಗಿನ ತನ್ನ ಗಂಡನ ಸಂಬಂಧವನ್ನು ಮೀನಾ ಅಪಮಾನಕರವೆಂದು ಭಾವಿಸುವುದಿಲ್ಲ. ಹಾಗೂ ಯಾವುದೇ ರೀತಿಯ ಅಡ್ಡಿಯನ್ನುಂಟು ಮಾಡುವುದಿಲ್ಲ. ಬದಲಾಗಿ ತಾನೇ ಇಂಥ ಸನ್ನಿವೇಶವನ್ನು ನಿರ್ಮಾಣ ಮಾಡುತ್ತಾಳೆ. ಏಕೆಂದರೆ ಅರ್ಥವಿಲ್ಲದ ಬದುಕಿನಲ್ಲಿ ಇರುವುದಕ್ಕಿಂತ ಅವನಿಂದ ಬಿಡುಗಡೆಯನ್ನು ಪಡೆಯುವುದೇ ಉತ್ತಮ ಎಂದು ಭಾವಿಸುತ್ತಾಳೆ. ಆ ಮೂಲಕ ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಮುಂದಾಗುತ್ತಾಳೆ. "ಇಲ್ಲಿ ಅವಳ ಬಿಡುಗಡೆಯ ಭಾವನೆ ತೋರಿಕೆಯದಾಗದೆ, ಆಂತರಿಕ ಅನುಭವವೆಂದೇ ಕಥೆಯಲ್ಲಿ ಮೂಡಿಬಿಡುತ್ತದೆ."[೨೩] ಎನ್ನುವ ಅಭಿಪ್ರಾಯವನ್ನು ಮಂಡಿಸುತ್ತಾರೆ. ಇಷ್ಟು ವರ್ಷ ಸಿಮೆಂಟ್ ಹಾಕಿ ಕೂಡಿಸಿದ ಜೀವನದ ಚೌಕಟ್ಟನ್ನು ಅವರಂತೂ ಮುರಿದು ಹೋಗಲಾರರು... ಬರಲಿ, ಬಿಡಲಿ, ನನಗೆ ಮಾತ್ರ ಬಿಡುಗಡೆ ಸಿಕ್ಕಿದೆ."[೨೪] ಎಂದು ಸಮಾಧಾನ ಪಡುತ್ತಾಳೆ. ಇಲ್ಲಿ ಮೀನಾ ಪುರುಷ ನಿರ್ಮಿತ ಮೌಲ್ಯವನ್ನು ದಾಟಿ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುತ್ತಾಳೆ. ಆ ಮೂಲಕ ತನ್ನ ಬದುಕಿಗೆ ಒಂದು ಅರ್ಥವನ್ನು ಕಂಡುಕೊಳ್ಳುತ್ತಾಳೆ.

ಅನುಭವ ಅನ್ನುವುದು ವ್ಯಕ್ತಿಗತವಾದದ್ದು. ಈ ವ್ಯಕ್ತಗತವಾದ ಅನುಭವವನ್ನು ಪ್ರತಿಯೊಬ್ಬರೂ ಸ್ವತಃ ಅನುಭವಿಸಿ ಅದರಿಂದ ಬಂದಂತ ಕಷ್ಟವನ್ನೋ ಸುಖವನ್ನೋ ಪಡೆಯಬೇಕಾಗುತ್ತದೆ. 'ಪರಿವರ್ತನೆ' ಕಥೆಯಲ್ಲಿ ಬರುವ ರಾಜಶೇಖರ ಈ ತತ್ವವನ್ನು ಅರಿಯದೆ, ತನ್ನ ಅನುಭವದ ಒನ್ನೆಲೆಯಲ್ಲಿ ಸ್ನೇಹಿತನ

ಮಗಳಾದ ಬೇಬಿಯ ಸಮಸ್ಯೆಯನ್ನು ಇತ್ಯರ್ಥ ಪಡಿಸಲು ಪ್ರಯತ್ನಿಸುತ್ತಿರುತ್ತಾನೆ. ಬೇಬಿ ಇಲ್ಲಿ ಪ್ರೌಢಾವಸ್ಥೆಗೆ ಬಂದ ಹೆಣ್ಣು. ಅವಳು ತನ್ನ ಬದುಕನ್ನು ತನಗನ್ನಿಸಿದ ರೀತಿಯಲ್ಲಿ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸಾಗುತ್ತಿರುತ್ತಾಳೆ. ಅದಕ್ಕಾಗಿ ಆಕೆ ತನ್ನ ಆಸೆ-ಆಕಾಂಕ್ಷೆಗಳಿಗೆ ಅಡ್ಡಿ ಮಾಡುತ್ತಿರುವ ಕುಟುಂಬವನ್ನು ನಗಣ್ಯ ಮಾಡಿಕೊಳ್ಳುತ್ತಾಳೆ. ಆದರೆ ಅವಳ ಈ ನಿರ್ಧಾರ ಕುಟುಂಬದವರಿಗೆ ಸಮಸ್ಯೆಯಾಗಿ ಕಾಡುತ್ತದೆ. ಹೀಗಾಗಿ ಬೇಬಿಯ ತಂದೆಯ ಸ್ನೇಹಿತ ರಾಜಶೇಖರ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬಲ್ಲೆನೆಂಬ ಆತ್ಮವಿಶ್ವಾಸವನ್ನು ಹೊಂದುತ್ತಾನೆ.

"ಬದಲಾಗುತ್ತಿರುವ ಸಮಾಜದ ಒಂದು ಯಕಃಶ್ಚಿತ ಸಮಸ್ಯೆ ಇದು. ಇದನ್ನು ಹೊಸ ರೀತಿಯಿಂದ ಹೊಸ ಮೌಲ್ಯಗಳ ದೃಷ್ಟಿಯಿಂದ ಬಿಡಿಸಬೇಕೇ ಹೊರತು, ಈ ಹಳೇ ಪಾರಂಪರಿಕ ರೀತಿಯಿಂದ ಬಿಡಿಸಬಾರದು."[೨೫] ಅದಕ್ಕಾಗಿ ಅವನು ಬೇಬಿಯನ್ನು ಒಂದು ಹೊಟೇಲಿಗೆ ಕರೆದುಕೊಂಡು ಹೋಗಿ ಬಿಯರನ್ನು ಕುಡಿಸುವುದರ ಮೂಲಕ ಆಕೆಯ ಮನಸ್ಸನ್ನು ಪರಿವರ್ತನೆ ಮಾಡಲು ಶ್ರಮಿಸುತ್ತಾನೆ. ಬೇಬಿ ತನ್ನ ಹಾಗೂ ಮಹೇಶನ ನಡುವಿನ ಸಂಬಂಧ ಗಟ್ಟಿಯಾಗಿರುವಂಥದ್ದು ಎಂದು ತನ್ನ ತೀರ್ಮಾನವನ್ನು ಸ್ಪಷ್ಟವಾಗಿ ಹೇಳುತ್ತಾಳೆ. ಆದರೂ ರಾಜಶೇಖರ ತನ್ನ ಪ್ರಯತ್ನವನ್ನು ತಾನು ಮಾಡುತ್ತಲೇ ಇರುತ್ತಾನೆ. ಆತನ ಹುಚ್ಚು ಆತ್ಮವಿಶ್ವಾಸದಲ್ಲಿ ಬೇಬಿ ಆತನನ್ನೇ ಚುಚ್ಚುತ್ತಿರುವುದು ತಿಳಿಯುವುದಿಲ್ಲ. "ಮಹೇಶ ನೋಡ್ರೀ ಹಾಂಗ ಸ್ವಲ್ಪ ಲಫಂಗನ ಅದಾನ್ರೀ... ಆದ್ರ ಈಗಿನ ಕಾಲದಾಗ ಯಾರು ಲಫಂಗ ಇಲ್ರಿ?"[೨೬]

ರಾಜಶೇಖರ ಕೂಡ ತನ್ನ ಆಕರ್ಷಣೆಗೆ ಒಳಗಾಗಿದ್ದಾನೆ ಅಂತ ಬೇಬಿಗೆ ತುಂಬಾ ಸೂಕ್ಷ್ಮವಾಗಿ ಗೊತ್ತಾಗುತ್ತದೆ. "ಇವಳನ್ನು ಸೀದಾ ಒಂದು ಹೋಟೆಲ್ಲಿಗೆ ಕರೆದುಕೊಂಡು ಹೋಗಿ ನಾಳೆ ಮುಂಜಾನೆ ಅವಳ ಮನೆಗೆ ಒಯ್ದು ಬಿಟ್ಟರೆ ಹೇಗೆ?"[೨೭] ಎಂಬ ವಿಚಾರ ಕೂಡ ರಾಜಶೇಖರನಲ್ಲಿ ಸುಳಿದು ಹೋಗುತ್ತದೆ. ಕೊನೆಗೆ ಬೇಬಿಯನ್ನು ಅವಳ ಮನೆಗೆ ಬಿಟ್ಟು ಬಂದ ನಂತರ ಅವನಿಗೆ ಯಾವುದೋ ಆಘಾತದಿಂದ ತಪ್ಪಿಸಿಕೊಂಡೆನೆಂದು ಸಮಾಧಾನ ತಾಳುತ್ತಾನೆ. ಮಹೇಶನ ಭಾನಗಡಿ ತನ್ನ ಜಾಣತನದಿಂದ ಮುಗಿದುಹೋಯಿತು ಎಂದು ರಾಜಶೇಖರ ಬೀಗುತ್ತಿರುವಾಗಲೇ ಬೇಬಿ ಮಹೇಶನೊಡನೆ ಹೋದ ಸುದ್ದಿ ಬರುತ್ತದೆ. ಆಧುನಿಕ ಬದುಕಿಗೆ ತನ್ನನ್ನು ತೆರೆದುಕೊಂಡ ಬೇಬಿದು ಸರಳ ದಾರಿ. ಅವಳು ಯಾರ ವಿರೋಧವನ್ನು ಲೆಕ್ಕಿಸದೆ, ಮಹೇಶನ ಜೊತೆಗೆ ಹೋಗುತ್ತಾಳೆ.

"ನಾವು ಮುದುಕರಾದಿವಿ. ಇನ್ನು ನಾವು ಹಳೇ ಫೀಡೀ ಜನ. ನಾವೇ ನಮ್ಮ ಮನಸ್ಸನ್ನು ಬದಲು ಮಾಡಿಕೋಬೇಕು. ಅಂದರೇನೇ ನಮ್ಮ ಬಾಳುವೀ ಛಂದ. ಚಂದ್ರೂ, ತಗೋ ಇನ್ನೊಂದು! (ಪೆಗ್) ಜೀವನ ಅಂದರೇನು ಗೊತ್ತದಯೇನ -ನಿನಗ? ಹಾ ಹಾ ಹಾ! ಜೀವನಂದರ - ಇದನ್ನ ತಗೋ ಏನಪಾ-ನಾ ಆಮ್ಯಾಲ ಹೇಳ್ತೀನಿ."[೨೮] ಆಧುನಿಕಳಾದ ಬೇಬಿ ಯೌವನ ಸಹಜವಾದ ತೀರ್ಮಾನಕ್ಕೆ ಒಳಗಾಗಿ ತನಗನ್ನಿಸಿದ ರೀತಿಯಲ್ಲಿ ತನ್ನ ಬದುಕನ್ನು ತಾನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸಾಗುತ್ತಾಳೆ.

ಸಂಸಾರದಲ್ಲಿ ಅನುಮಾನ ಅಥವಾ ಸಂಶಯ ಅನ್ನುವುದು ಒಂದು ಸಾರಿ ಸುಳಿದು ಬಿಟ್ಟರೆ, ಆ ಸಂಸಾರ ನೆಮ್ಮದಿಯಾಗಿರಲಿಕ್ಕೆ ಸಾಧ್ಯವಾಗುವುದಿಲ್ಲ. ಅನುಮಾನ ಪಡುವ ಗಂಡಸಿನ ಜೊತೆ ಸಂಸಾರ ಮಾಡುವುದು ನರಕಯಾತನೆ. ಗಂಡಸಿಗೆ ಅಹಂನ ಪ್ರಶ್ನೆ. ಹೆಣ್ಣು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿರಬೇಕೆಂದು ಬಯಸುತ್ತಿರುತ್ತಾನೆ. "ಯಾಕೆ?" ಕಥೆಯಲ್ಲಿ ಬರುವ ಕಥಾನಾಯಕನೂ ತನ್ನ ಹೆಂಡತಿಯ ಬಗೆಗೆ ಅನುಮಾನ ಪಡುತ್ತಾ ಇಲ್ಲದ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತಿರುತ್ತಾನೆ. ಆ ಮೂಲಕ ತಾನು ನೆಮ್ಮದಿಯಾಗಿರದೆ, ತನ್ನ ಹೆಂಡತಿಗೂ ನೆಮ್ಮದಿಯಾಗಿರಲಿಕ್ಕೆ ಬಿಡುತ್ತಿಲ್ಲ. ಮೂಲತಃ ಪ್ರಮೀಳೆಯ ಗಂಡ ವಿಕ್ಷಿಪ್ತ ಮನಸ್ಥಿತಿಯುಳ್ಳವನು. ಆಕೆ ಪರಪುರುಷನ ಬಗ್ಗೆ ಆಲೋಚನೆ ಮಾಡುವುದೇ ತಪ್ಪು ಅಂತ ಭಾವಿಸುತ್ತಿರುತ್ತಾನೆ. ತಾನು ಮತ್ತೊಂದು ಹೆಣ್ಣಿನ ಜೊತೆಗೆ ಇಟ್ಟುಕೊಂಡ ಸಂಬಂಧ ತಪ್ಪು ಅಲ್ಲ ಅಂತ ಭಾವಿಸುವುದಾದರೆ, ಆಕೆ ಇನ್ನೊಬ್ಬನ ಜೊತೆಗೆ ಇಟ್ಟುಕೊಂಡ ಸಂಬಂಧ ತಪ್ಪು ಅಂತ ಯಾಕೆ ಭಾವಿಸಬೇಕು. ಎಷ್ಟೋ ಜನ ಗಂಡಸರು ಮದುವೆಗಿಂತ ಮುಂಚೆ ತಮಗೆ ಇದ್ದಿರಬಹುದಾದ ಗೆಳತಿ ಅಥವಾ ಪ್ರೇಯಸಿ ಬಗೆಗೆ ತಮ್ಮ ಹೆಂಡತಿಯರ ಬಳಿ ಹೇಳಿಕೊಳ್ಳುತ್ತಿರುತ್ತಾರೆ. ಅದೇ ಹೆಣ್ಣು ಹಾಗೆ ಹೇಳಿಕೊಳ್ಳುವಂತಿಲ್ಲ. ಒಂದು ವೇಳೆ ಆಕೆಯೇನಾದರೂ ಹೇಳಿಕೊಂಡರೆ, ಆಕೆಯ ಭವಿಷ್ಯದ ಬಗೆಗೆ ಭರವಸೆಯಿಲ್ಲದಂತಾಗುತ್ತದೆ. ಇಲ್ಲಿ ಪ್ರಮೀಳೆಯ ಗಂಡ ತನಗೆ ಭೂತ ಇದ್ದ ಹಾಗೆ ಆಕೆಗೂ ಇದೆ ಅಂತ ಯಾಕೆ ತಿಳಿಯುವುದಿಲ್ಲ.

ಅಹಂನ್ನು ತ್ಯಜಿಸದ ಹೊರತು, ಬದುಕನ್ನು ಹೆಣ್ಣಿನ ಕಣ್ಣಿನಿಂದ ಗ್ರಹಿಸಲು ಗಂಡಸಿಗೆ ಸಾಧ್ಯವಾಗುವುದಿಲ್ಲ. ಹೆಣ್ಣಿನ ದೇಹ ಮತ್ತು ಮನಸ್ಸುಗಳೆರಡರ ಮೇಲೆ ತನ್ನ ಅಧಿಕಾರದ ಮುದ್ರೆಯೊತ್ತುವ ಗಂಡಸಿಗೆ ಆಕೆಯ ಸ್ವಾಯತ್ತತೆಯ ಕಲ್ಪನೆಯೇ ಭಯಾನಕವಾಗಬಲ್ಲದೆಂಬುದನ್ನು ಕಥೆ ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ. ಆಕೆಯ ಮೇಲೆ ಅಧಿಕಾರ ಸ್ಥಾಪನೆಯ ಪ್ರಯತ್ನವಾಗಿ ಗಂಡನಾಡುವ ಮಾತು ಕ್ರಿಯೆಗಳಲ್ಲಿ ತಲೆದೋರಿದ ಕ್ರೌರ್ಯಕ್ಕೆ ಆಕೆ ಸ್ಪಂದಿಸಲಾರದಷ್ಟು ಶೂನ್ಯಳಾಗಿರುವುದು ಆತನನ್ನು ಮತ್ತೂ ಹೆದರಿಸುತ್ತದೆ. ಅವಳ ತಾಳ್ಮೆ ಮೀರಿದ ಮೇಲೆ "ನೀವು ನನಗೆ ಬೇಕಾಗಿಲ್ಲ-ನನ್ನ-ನಿಮ್ಮ ಬಂಧನದಲ್ಲಿ ಅರ್ಥವಿಲ್ಲ - ಅರ್ಥವಿಲ್ಲ ಯಾಕೆ? ಯಾಕೆ? ಅಂತ ಮತ್ತೆ ಕೇಳಬ್ಯಾಡ್ರಿ ಪ್ಲೀಸ್ ನನಗೆ ಈ ಬಂಧನದ ನರಕವಾಸ ಸಾಕಾಗೇದ - ಇನ್ನು ಎಷ್ಟಂತ ಸಹನ ಮಾಡೋದು ದೇವರೇ, ನನ್ನ ಬಿಡುಗಡೆ ಮಾಡು"[೫] ಉಸಿರುಗಟ್ಟಿಸುವ ವಾತಾವರಣದಲ್ಲಿ ಬದುಕಲಾರದ ಪ್ರಮೀಳೆ ತನ್ನ ಗಂಡನ ಸ್ವಾಯತ್ತತೆಯನ್ನು ಶೂನ್ಯದಿಂದಲೇ ಗಳಿಸಿಕೊಳ್ಳುತ್ತಾಳೆ. ಇಲ್ಲಿ ಪ್ರಮೀಳೆಯ ಆಂತರಿಕ ಪ್ರಾಮಾಣಿಕತೆಯೇ ನೈತಿಕತೆಯಾಗುತ್ತದೆ.

ಪ್ರಾಯದ ಹುಮ್ಮಸ್ಸಿನಲ್ಲಿ ವ್ಯಕ್ತಿ ಯಾವ ಸಾಹಸವನ್ನಾದರೂ ಮಾಡಲಿಕ್ಕೆ ಸಿದ್ಧನಾಗಿರುತ್ತಾನೆ. ಈ ಹುಮ್ಮಸ್ಸು ಎಲ್ಲ ಕಾಲಕ್ಕೆ ಒಂದೇ ರೀತಿಯಾಗಿರುವುದಿಲ್ಲ. ಅದೊಂದು ಸೆಳೆತ ಮಾತ್ರ ಆಗಿರುತ್ತದೆ. 'ನೇಣುಗಂಬ' ಕಥೆಯಲ್ಲಿ ಬರುವ ಪ್ರತಾಪನು ಪ್ರಾಯದ ಹುಮ್ಮಸ್ಸಿನಲ್ಲಿ ತನ್ನ ಕುಟುಂಬವನ್ನೇ

ವಿರೋಧಿಸಿ ವೇಶ್ಯೆಯ ಮಗಳನ್ನು ಮದುವೆಯಾಗುತ್ತಾನೆ. ಇವರ ದಾಂಪತ್ಯ ಬಂಧ ಬಹಳ ದಿನ ಗಟ್ಟಿಯಾಗಿ ಮುಂದುವರೆಯುವುದಿಲ್ಲ. ಅದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಪ್ರತಾಪ ತನ್ನ ಹೆಂಡತಿ ಲಕ್ಷ್ಮಿ ಬಗ್ಗೆ ಕೇಳಿಬಂದ ಒಡಕು ಮಾತುಗಳಿಂದಾಗಿ, ಆತನ ಅಹಂ ಸ್ಫೋಟಗೊಂಡು ಸೇಡಾಗಿ ಪರಿವರ್ತನೆ ಹೊಂದುತ್ತದೆ. ಪ್ರತೀಕಾರ್ಥವಾಗಿ ತನ್ನ ಹೆಂಡತಿ ಲಕ್ಷ್ಮಿಯನ್ನು ಮತ್ತೊಬ್ಬ ವೇಶ್ಯೆಗೆ ಮಾರಲೆತ್ನಿಸುತ್ತಾನೆ.

ಆದರ್ಶದ ಅಮಲಿನಲ್ಲಿ ಮದುವೆಯಾದ ಪ್ರತಾಪ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಳ್ಳುತ್ತಾನೆ. ಹೆಂಡತಿ ಲಕ್ಷ್ಮಿಯನ್ನು ಗೋವಾದ ಸೂಳೆಗೇರಿಗೆ ಮಾರಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಗೋವಾದಲ್ಲಿ ವೇಶ್ಯಾವಾಟಿಕೆಯನ್ನು ನಡೆಸುತ್ತಿರುವ ಕೃಷ್ಣಾಬಾಯಿ ಮಾನವೀಯತೆಯಿಂದ ಕೂಡಿದವಳು. ಆಕೆ ಯಾವುದೇ ಕಾರಣಕ್ಕೂ ಲಕ್ಷ್ಮಿಯ ಮನಸ್ಸಿನ ವಿರುದ್ಧ ನಡೆದುಕೊಳ್ಳುವುದಿಲ್ಲ. ವೇಶ್ಯಾಗೃಹಕ್ಕೆ ಬಂದವರಿಗೆಲ್ಲ "ಇವಳು ನನ್ನ ಅಕ್ಕನ ಮಗಳು. ಮೊನ್ನೆ ಮೊನ್ನೆ ಗಂಡ ಸತ್ತಾನ. ಆಕೀಗೆ ಈಗ ತ್ರಾಸ ಕೊಡಬ್ಯಾಡ್ರಿ"[೩೦] ಎಂದು ಹೇಳುತ್ತಾ ಪರಿಸ್ಥಿತಿಯನ್ನು ತಿಳಿಮಾಡುತ್ತಿರುತ್ತಾಳೆ. ಕೊನೆಗೆ ಲಕ್ಷ್ಮೀನೆ ಇಲ್ಲಿನ ವಾತಾವರಣಕ್ಕೆ ಒಗ್ಗಿಕೊಳ್ಳುತ್ತಾಳೆ. ನಿಧಾನವಾಗಿ ಆಕೆಯ ಮನಸ್ಸು ಹೋಟೆಲ್ ಮಾಲೀಕ ಶ್ರೀಕಾಂತರಾಯನ ಬಗ್ಗೆ ತೆರೆದುಕೊಳ್ಳುತ್ತದೆ. ಆತನ ಜೊತೆಗೆ ಹರಟೆ ಹೊಡೆಯುವುದು, ಹೊರಗಡೆ ಹೋಗಿ ಸುತ್ತಾಡಿ ಬರುವುದು ಮಾಡುತ್ತಾಳೆ.

"ಲಕ್ಷ್ಮೀ? ಮುಂದೇನು ಇಲ್ಲೇ ಇರುವಾಕಿಯೇನ ನೀನು?"

"ಇಲ್ಲ"

"ಮತ್ತೇನು ಮಾಡುವಾಕಿ"

"ಸೇಡು-ಸೇಡು ತೀರಿಸುವಾಕಿ"

"ಯಾರ ಮ್ಯಾಲೆ?"

"ನನ್ನ ದೈವದ ಮ್ಯಾಲೆ, ನನ್ನ ಈ ಜೀವನದ ಮ್ಯಾಲೆ"[೩೧]ಎಂದು ತನ್ನ ವಿಧಿಯನ್ನೇ ಹಳಿಯುತ್ತಾಳೆ. ಲಕ್ಷ್ಮಿ ತಾನು ಮಾಡಿದ ತಪ್ಪಿಗಾಗಿ ತನ್ನ ಮೇಲೆ ತಾನೇ ಸೇಡುತೀರಿಸಿಕೊಳ್ಳುವುದಕ್ಕಾಗಿ ಶ್ರೀಕಾಂತರಾಯನ ಉಪಪತ್ನಿಯಾಗಲು ಒಪ್ಪುತ್ತಾಳೆ. ಇಲ್ಲಿ ಲಕ್ಷ್ಮಿಗೆ ಯಾರು 'ಜೀವನ'ವನ್ನು ಕೊಟ್ಟರೋ ಅವರ ಜೊತೆಗೆ ಹೋಗುವ ಅನಿವಾರ್ಯ ಆಕೆಗೆ ಬರುತ್ತದೆ. ಇಷ್ಟೆಲ್ಲ ಸಮಸ್ಯೆಗಳ ನಡುವೆಯೂ ಲಕ್ಷ್ಮಿ ಒಂದು ನೆಲೆಯನ್ನು ಕಂಡುಕೊಳ್ಳುವ ತೀರ್ಮಾನ ಕೈಗೊಳ್ಳುತ್ತಾಳೆ.

ಸೂಕ್ಷ್ಮ ಸಂವೇದನೆಯುಳ್ಳ ದುರ್ಬಲ ಮನಸ್ಸಿನವರು ಜೀವನದಲ್ಲಿ ತಾವು ಅಂದುಕೊಂಡಿದ್ದೇನಾದರೂ ಈಡೇರದೆ ಹೋದಾಗ, ಮಾನಸಿಕವಾಗಿ ಆಘಾತಕ್ಕೊಳಗಾಗುತ್ತಾರೆ. 'ಹುಚ್ಚ' ಕಥೆಯಲ್ಲಿ ಬರುವ ಹೇಮಾಳ ಬದುಕಿನಲ್ಲಿ ಇಂಥದ್ದೊಂದು ಘಟನೆ ಸಂಭವಿಸುತ್ತದೆ. ಆಕೆ ಎಲ್ಲರ ನಿರ್ಲಕ್ಷ್ಯಕ್ಕೊಳಗಾದಂತ

ಹೆಣ್ಣು. ತಾನು ಪ್ರೀತಿಸಿದ ವ್ಯಕ್ತಿ ಆನಂದನಿಂದಲೂ ಮೋಸಕ್ಕೆ ಒಳಗಾಗಿರುತ್ತಾಳೆ. ಬದುಕಿನಲ್ಲಿ ಅತಿಯಾದ ನಿರೀಕ್ಷೆಯನ್ನಿಟ್ಟುಕೊಂಡ ಹೇಮಾ ಇಂಥ ಘಟನೆಗಳಿಂದ ಬಹಳ ಬೇಗನೆ ಉನ್ಮಾದ ಸ್ಥಿತಿಯನ್ನು ತಲುಪುತ್ತಾಳೆ. ಹೇಮಾ ತನ್ನಲ್ಲಿ ಅದುಮಿಟ್ಟುಕೊಂಡಿರುವ ಆಸೆ-ಆಕಾಂಕ್ಷೆಗಳೇ 'ಹುಚ್ಚ'ನ ರೂಪದಲ್ಲಿ ಹೊರಗೆ ಬರುತ್ತವೆ. ದುರ್ಬಲ ಮನಸ್ಸಿನ ಹೇಮಾಳಿಗೆ ವಾಸ್ತವ ಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಇರುವುದಿಲ್ಲ. ಹೀಗಾಗಿ ಚಿಕ್ಕ ಸಮಸ್ಯೆಯನ್ನು ದೊಡ್ಡದನ್ನಾಗಿ ಮಾಡಿಕೊಳ್ಳುತ್ತಿರುತ್ತಾಳೆ. ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಹೇಮಾ ಕೊರಗಿ ಭ್ರಾಮಕ ಸ್ಥಿತಿಯನ್ನು ತಲುಪಿಬಿಡುತ್ತಾಳೆ. ಆಕೆ ವಾಸ್ತವಕ್ಕೆ ಮರಳಿದಾಗ ಆಕೆ ಹುಚ್ಚನೆಂದು ತಿಳಿದ ವ್ಯಕ್ತಿ ನಿಜವಾದ ಹುಚ್ಚನಾಗಿರದೆ ಆನಂದನೇ ಆಗಿರುತ್ತಾನೆ. ಹೇಮಾ ತಾನು ಇಷ್ಟಪಟ್ಟಂತ ಗಂಡು ತನ್ನ ಬದುಕಿನಲ್ಲಿ ಬಂದು ಒಂದು ಆಸರೆಯನ್ನು ಕೊಡಬಲ್ಲನೆಂಬ ಅತಿಯಾದ ನಿರೀಕ್ಷೆಯನ್ನಿಟ್ಟುಕೊಂಡು ಈ ಸ್ಥಿತಿಯನ್ನು ತಲುಪಿರುತ್ತಾಳೆ.

ಸಾಂಪ್ರದಾಯಿಕ ಸಮಾಜದಲ್ಲಿ ಒಬ್ಬ ಹೆಣ್ಣಿನ ಹೊರತಾಗಿ ಮತ್ತೊಂದು ಹೆಣ್ಣಿನ ಜೊತೆ ಸಂಬಂಧ ಬೆಳೆಸುವುದು ನಿಶಿದ್ಧ. 'ಕೂರ್ಮಾವತಾರ' ಕಥೆಯಲ್ಲಿ, ಬರುವ ಪತಂಗರಾವ್ ವ್ಯವಸ್ಥೆಯೊಳಗಡೆ ಸಾಧ್ಯವಾಗದೆ ಇರುವುದನ್ನು ಮಾಡಲಿಕ್ಕೆ ಹೋಗಿ ಒಂಟಿಯಾದ. ತನ್ನ ಇಳಿವಯಸ್ಸಿನಲ್ಲೂ ಮನೆ ಕೆಲಸದಾಕೆಯ ಜೊತೆಗೆ ಸಂಬಂಧವನ್ನಿರಿಸಿಕೊಂಡಿರುತ್ತಾನೆ. ಈ ವಿಷಯ ಹೆಂಡತಿಯಾದ ಜೀಜಾಬಾಯಿಗೆ ಗೊತ್ತಿಲ್ಲದಿರುವುದಿಲ್ಲ.

ಒಂದು ಮೌಲ್ಯಹೀನ ಹಾಗೂ ಭ್ರಷ್ಟಸಮಾಜದಲ್ಲಿ ಬದುಕುತ್ತಿರುವ ಪತಂಗರಾವ್‌ನ ಬಹಳಷ್ಟು ಕ್ರಿಯೆಗಳು ದೈಹಿಕ ಪಾತಳಿಗೆಯೇ ಸಂಬಂಧಿಸಿದವುಗಳು. ಮಾನಸಿಕವಾದ ಯಾವ ಆಹ್ವಾನವನ್ನು ಸ್ವೀಕರಿಸದಂಥ ಒಂದು ಪ್ರವೃತ್ತಿಯನ್ನು ಅವನು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದ್ದಾನೆ. ಹೆಂಡತಿ ಜೀಜಾ ಬೇರೆಯವರೊಡನೆ ಸಂಬಂಧ ಇಟ್ಟುಕೊಂಡಿರಬಹುದು ಎಂದು ಸಂಶಯ ಬಂದರೂ ಅದನ್ನು ಬೆಳೆಯಗೊಡುವುದಿಲ್ಲ. "ಒಟ್ಟಿನಲ್ಲಿ ಜೀವನವೆಂದರೆ ಹಾಳು" ಎಂಬ ಭಾವನೆಯಿಂದಲೇ ಅವನು ಬದುಕುತ್ತಿರುತ್ತಾನೆ.

ಅಡುಗೆಯ ಆಳು ಸೋನೂನೊಡನಿದ್ದ ಅವನ ಸಂಬಂಧದಲ್ಲಿಯೂ ಉತ್ಕಟತೆಯಿಲ್ಲ ಒಟ್ಟಿನಲ್ಲಿ ಜೀವನ ಸುಸೂತ್ರ ನಡೆಯಬೇಕು ಎನ್ನುವುದು ಅವನ ಜೀವನ ಸೂತ್ರ. ಆದರೆ ಒಂದೇ ಗಂಡಸಿನ ನಡುವೆ ಇಬ್ಬರು ಹೆಂಗಸರು ಬದುಕುವುದು ಕಷ್ಟ. ಸಾಮಾಜಿಕ ವ್ಯವಸ್ಥೆಯೊಳಗಡೆ ತನ್ನ ಗಂಡನ ತಪ್ಪನ್ನು ಸಹಿಸಿಕೊಂಡು ಇರಲಿಕ್ಕೆ ಒಪ್ಪುವುದಿಲ್ಲ. "ನಾನು ಹೋಗುತ್ತಿರುವೆ-ಮನೆಬಿಟ್ಟು ಹೋಗುತ್ತಿರುವೆ. ನೀವು ಒಬ್ಬರೇ ಇರಲು ಸಮರ್ಥರು. ನಿಮಗೆ ನನ್ನ ಅವಶ್ಯಕತೆ ಇಲ್ಲ. ನನ್ನ ಅವಶ್ಯಕತೆ ಇದ್ದ ಒಬ್ಬ ವ್ಯಕ್ತಿ ಈ ಜಗತ್ತಿನಲ್ಲಿದ್ದಾನೆ. ಅವನ ಕೂಡ ನಾನು ಹೋಗುತ್ತಿರುವೆ... ನಾನೆಂದರೆ ನಿಮಗೆ ಒಜ್ಜೆಯಾಗಿದ್ದೆ.

ನೀವು ಅವಳ ಜೊತೆ ಸುಖವಾಗಿರಿ... ಕ್ಷಮಿಸಬೇಕು.''[೩೨] ತನ್ನ ಅಸ್ತಿತ್ವ, ಸ್ವಾತಂತ್ರ್ಯ, ನೆಮ್ಮದಿ ಮುಖ್ಯ ಅಂತ ತಿಳಿದ ಜೀಜಾ ಅವನನ್ನು ತಿರಸ್ಕರಿಸಿ ತನ್ನ ಅವಶ್ಯಕತೆ ಇರುವವರ ಬಳಿ ಹೋಗುತ್ತಾಳೆ.

'ಅಂತರ' ಕಥೆಯಲ್ಲಿ ಬರುವ ಶಂಕರ ಪೊಳ್ಳು ಮನುಷ್ಯ ತನ್ನ ಸುರಕ್ಷಿತತೆಯನ್ನು ಶ್ರೇಷ್ಠ ಮೌಲ್ಯವನ್ನಾಗಿ ಸ್ವೀಕರಿಸಿದವ. ಅವನು ತನ್ನದೇ ಆದ ಒಂದು ಕುಟುಂಬವನ್ನು ಕಟ್ಟಿಕೊಂಡಿದ್ದಾನೆ. ಹೀಗಿದ್ದರೂ ಸಹ ಅವನ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ತಾನೊಮ್ಮೆ ಸಂಬಂಧ ಬೆಳೆಸಿದ ಸರಸ್ವತಿಯ ನೆನಪು, ಅವನ ಸ್ಮೃತಿಯಲ್ಲಿ ಉಳಿದುಕೊಂಡಿರುತ್ತದೆ. ಅವನು ಮನಸ್ಸು ಮಾಡಿದ್ದರೆ ಸರಸ್ವತಿಯನ್ನು ಮದುವೆಯಾಗಬಹುದಿತ್ತು. ಆದರೆ ಜಾತಿಯ ನೆಪಹೂಡಿ ಅದರಿಂದ ತಪ್ಪಿಸಿಕೊಂಡಿದ್ದಾನೆ. ತನ್ನ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕಾಗಿ ಬೇರೆ ಕಾರಣವನ್ನು ಕೊಡುತ್ತಾನೆ.

''ನಮ್ಮ ಜಾತಿಯ ಅಂತರಕ್ಕಿಂತ ನಮ್ಮ ಸ್ವಭಾವಗಳ ಅಂತರ, ನಮ್ಮ ಬೌದ್ಧಿಕ ಪಾತಳಿಗಳ ಅಂತರ ನಮ್ಮ ಲಕ್ಷ್ಯಕ್ಕೆ ಬಂದಿತ್ತು.''[೩೩] ಶಂಕರನ ಚಿಲ್ಲರೆ ವ್ಯವಹಾರಗಳನ್ನು ಗಮನಿಸಿದಾಗ ಅವನಲ್ಲಿ ಬಲವಾದ ಬೌದ್ಧಿಕ ಆಸ್ಥೆಗಳಾಗಲಿ, ಸೂಕ್ಷ್ಮ ಸಂವೇದನೆಯಾಗಲಿ ಇಲ್ಲ ಎನಿಸುತ್ತದೆ. ಕೊಲ್ಲಾಪುರ ಯುನಿವರ್ಸಿಟಿಯಿಂದ ಭಾಷಣಕ್ಕಾಗಿ ಆಮಂತ್ರಣ ಸಿಕ್ಕಾಗ ಅವನಿಗೆ ಪುನಃ ಸರಸ್ವತಿಯೊಡನೆ ಸಂಬಂಧ ಬೆಳೆಸುವ ಇಚ್ಛೆಯಾಗುತ್ತದೆ. ಆದರೆ ಸರಸ್ವತಿ ತುಂಬಾ ಸ್ಪಷ್ಟವಾದ ನಿಲುವಿನ ಆಧುನಿಕ ಮನಸ್ಥಿತಿಯಿರುವ ಹೆಣ್ಣು. ಶಂಕರನ ಯಾವ ಆಟಕ್ಕೂ ಆಕೆ ಅವಕಾಶವನ್ನೇ ಕೊಡುವುದಿಲ್ಲ. ಹಳೆಯ ನೆನಪುಗಳಿಗೆ ಸಿಕ್ಕಿಹಾಕಿಕೊಳ್ಳದೆ, ತನ್ನ ಗೃಹಸ್ಥ ಜೀವನವನ್ನು ಹೇಗೆ ಕಾಪಾಡಿಕೊಳ್ಳಬೇಕೆನ್ನುವ ಪ್ರಜ್ಞೆ ಈಕೆಯಲ್ಲಿದೆ. ಆದರೆ ಇಲ್ಲಿ ಶಂಕರ ಮಾತ್ರ ಉದ್ವೇಗಕ್ಕೆ ಒಳಗಾಗುತ್ತಿರುತ್ತಾನೆ.

''ಹಾಂಗ ಕೇಳಿದರ ನಿನ್ನ ಭೇಟಿಯ ಸಲುವಾಗಿಯೇ ನಾ ಕೊಲ್ಹಾಪುರಕ್ಕೆ ಬಂದೀನಿ. ಸರೂ, ನನ್ನ ಬರೀ ಕೈಲೆ, ಬರೀ ಹೃದಯದಿಂದ ತಿರುಗಿ ಕಳಿಸಬ್ಯಾಡಾ. ನಮ್ಮ ಕೊನೆಯ ಬೈ ಬೈ ಅಂದರ ಹೀಂಗ ಮರುಭೂಮಿಯಲ್ಲಿ ನದೀ ಹರದು ಬತ್ತಿ ಹೋದಾಂಗ ಆಗಬಾರದು. ನಮ್ಮ ಬೀಳ್ಕೊಡುಗೆ ಅಂದರ ಮಹಾಪೂರ ಆಗಬೇಕು, ಮಹಾಪೂರ ಸರೂ...''[೩೪] ಸರಸ್ವತಿ ತನ್ನ ಸಾಮಾಜಿಕ ಸುರಕ್ಷತೆಯನ್ನು ಹಾಗೂ ಕೌಟುಂಬಿಕ ಸುರಕ್ಷತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಶಂಕರನನ್ನು ದೂರ ಇಡುತ್ತಾಳೆ. ಆಗ ಅವನಿಗೆ ಅವನ ವರ್ತನೆಯ ಬಗೆಗೆ ಜಿಗುಪ್ಸೆ ಬರುತ್ತದೆ. ಸರಸ್ವತಿಗೆ ಅವಳದೇ ಆದ ಒಂದು ಜಗತ್ತಿದೆ. ಅವನಿಗೂ ಒಂದು ಜಗತ್ತಿದೆ. ಅದು ಅವನ ಕರ್ಮದ ಜಗತ್ತು.

ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಾದವಳು ಉನ್ನತ ಶಿಕ್ಷಣವನ್ನು ಪಡೆಯಲಿಕ್ಕೆ ಬಂದಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. 'ಪ್ರತಿಕೃತಿ' ಕಥೆಯ ರತ್ನಾಳ ಸಮಸ್ಯೆಯು ಇದೇ ಆಗಿದೆ. ಉನ್ನತ ಶಿಕ್ಷಣವನ್ನು ಪಡೆಯಲಿಕ್ಕಾಗಿ ಬಂದ ರತ್ನಾ ತನ್ನ ಅಧ್ಯಾಪಕ ದೇಶಮುಖರ ವಕ್ರದೃಷ್ಟಿಗೆ ಬಲಿಯಾಗುತ್ತಾಳೆ.

ಹೆಣ್ಣಿನ ಬಗೆಗೆ ತುಂಬಾ ಆಸಕ್ತಿಯನ್ನಿಟ್ಟುಕೊಂಡ ದೇಶಮುಖ ರತ್ನಾಳಿಗೆ ಬಲವಂತ ಮಾಡುತ್ತಾನೆ. ಹೆಣ್ಣನ್ನು ಬಲವಂತವಾಗಿ ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಅವಳಾಗಿಯೇ ಒಲಿದು ಬರಬೇಕು. ರತ್ನಾಳ ದಾರಿ ಬೇರೆಯಾಗಿರುವುದರಿಂದ, ದೇಶಮುಖನಿಗೆ ಯಾವುದೇ ರೀತಿ ಸಹಕರಿಸುವುದಿಲ್ಲ. ಏಕೆಂದರೆ ಅವಳ ಇಷ್ಟದ ಗಂಡು ದೇಶಮುಖನಾಗಿರದೆ, ಸುಖಾಡಿಯಾ ಆಗಿರುತ್ತಾನೆ. ಅವಳಿಗೆ ಅವಳ ಭವಿಷ್ಯದ ಬಗ್ಗೆ ಯೋಚನೆ ಇರುವುದರಿಂದ, ಇರುವ ಅವಕಾಶಗಳನ್ನು ಬಳಸಿಕೊಂಡು ಹೇಗೆ ತನ್ನ ಭವಿಷ್ಯವನ್ನು ಕಂಡುಕೊಳ್ಳಬೇಕೆನ್ನುವ ಜಾಣ್ಮೆ ಆಕೆಯಲ್ಲಿದೆ. ಏಕೆಂದರೆ ಆಕೆಗೆ ಕುಟುಂಬದ ಕಡೆಯಿಂದಲೂ ನೆಮ್ಮದಿಯಿಲ್ಲ. ಹೀಗಾಗಿ ಅವಳು ತನ್ನ ಬದುಕಿನ ದಾರಿಯನ್ನು ತಾನೇ ಕಂಡುಕೊಳ್ಳುವ ದಿಕ್ಕಿನಲ್ಲಿ ಆಲೋಚಿಸುತ್ತಾಳೆ.

'ಜವಾಬ್ದಾರಿ' ಕಥೆಯಲ್ಲಿ ಬರುವ ಶಿಲ್ಪಾಸರದೇಸಾಯಿ ಆಧುನಿಕ ಸಮಾಜದ ಪ್ರಜ್ಞಾವಂತ ಹೆಣ್ಣು. ಕಥೆಯ ಶೀರ್ಷಿಕೆ ಸೂಚಿಸುವಂತೆ ಆಕೆಯೇ ಕೇಂದ್ರದಲ್ಲಿದ್ದಾಳೆ. ಕಥೆ ಅವಳು ತನ್ನ ಅಸ್ತಿತ್ವವಾದೀ ಜವಾಬ್ದಾರಿಯನ್ನು ನಿರ್ವಹಿಸುವ ಕ್ರಿಯೆಯಲ್ಲಿ ತನ್ನ ಆಕಾರ ಪಡೆದುಕೊಳ್ಳುತ್ತದೆ. ಸಮಾಜಶಾಸ್ತ್ರ ವಿಭಾಗದ ರೀಡರ್ ಡಾ. ಶರ್ಮ ಹಾಗೂ ಅದೇ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿನಿ ಶಿಲ್ಪಾ ಅವರ ನಡುವೆ ಬೆಳೆಯುತ್ತಿರುವ ಸಂಬಂಧದ ಬಗ್ಗೆ ವಿಭಾಗದ ಮುಖ್ಯಸ್ಥ ಹಾಗೂ ಶಿಲ್ಪಾಳ ಮಾರ್ಗದರ್ಶಕನಾದ ದೇಶಮುಖ ಚಿಂತಿತನಾಗುತ್ತಾನೆ. ಈ ಸಂಬಂಧದಿಂದ ತನ್ನ ಶಿಷ್ಯೆಯನ್ನು ಪಾರುಮಾಡುವುದು ತನ್ನ ಹೊಣೆ ಎಂಬ ಭಾವನೆಯಿಂದ ಅವನು ಕಾರ್ಯಗತನಾಗುತ್ತಾನೆ. ದೇಶಮುಖನಲ್ಲಿ ಸ್ವವಿಮರ್ಶೆಯ ಶಕ್ತಿಯಿರುವುದರಿಂದ ಈ ಕ್ರಿಯೆಯ ನೈತಿಕತೆಯ ಬಗ್ಗೆ ಅವನಲ್ಲಿ ಸಂಶಯಗಳಿರುತ್ತವೆ.

ಆಧುನಿಕ ಪ್ರಜ್ಞಾವಂತ ಹೆಣ್ಣಾದ ಶಿಲ್ಪಾ ತನ್ನ ಸಮಸ್ಯೆಯ ಪರಿಹಾರವನ್ನು ತಾನೇ ಕಂಡುಕೊಳ್ಳುತ್ತಾಳೆ. ಶರ್ಮಾನ ಸಂಬಂಧ ಅವಳ ಬಸಿರಿನಲ್ಲಿ ಪರಿಣಮಿಸುವುದರಿಂದ ಆ ಹೊಣೆಯನ್ನು ತಾನೇ ಹೊತ್ತುಕೊಳ್ಳಲು ನಿರ್ಧರಿಸುತ್ತಾಳೆ. "ನನ್ನ ದಾರಿ ನಾನೇ ಹುಡುಕಬೇಕು. ನನ್ನ ಭವಿಷ್ಯ ನಾನೇ ರೂಪಿಸಬೇಕು."[೩೫] ಎಂದು ಅವಳು ಊರು ಬಿಡುತ್ತಾಳೆ. "...ನನಗೆ ನನ್ನ ಮಗುವಿನ ಜವಾಬ್ದಾರಿ ಹೊರಲೇಬೇಕು. ಅದನ್ನು ನಾಶಮಾಡೋದು ನನ್ನಿಂದ ಸಾಧ್ಯವಿಲ್ಲ. ಹಾಗೆ ಮಾಡೋದೆಂದರೆ ಮಹಾ ಪಾಪ!"[೩೬] ಶಿಲ್ಪಾಳ ಧೈರ್ಯ ಮೆಚ್ಚಿಕೊಂಡ ಡಾ. ಮ್ಯಾಕ್ಸವೆಲ್ ಅವಳನ್ನು ಮದುವೆಯಾಗುತ್ತಾನೆ. ತನ್ನ ಜವಾಬ್ದಾರಿ ವಹಿಸಿದ ರೀತಿ ದೇಶಮುಖನ ಮೆಚ್ಚುಗೆ ಗಳಿಸುತ್ತದೆ. "ಶಿಲ್ಪಾ ನೀ ಜಾಣೆ ತುಂಬಾ ಜಾಣೆ. ಆಧುನಿಕ ಸ್ತ್ರೀ ನೀನು... ನನ್ನ ಮಾತಿನಲ್ಲಿ ಐರನಿ ಇಲ್ಲ ಶಿಲ್ಪಾ...."[೩೭]

ದೇಸಾಯಿಯವರ ಮತ್ತೊಂದು ಕಥೆಯಾದ 'ವಿಯೋಗ'ದಲ್ಲಿಯೂ ಒಬ್ಬ ಆಧುನಿಕ ಸ್ತ್ರೀ ಇದ್ದಾಳೆ. ಶಿಲ್ಪಾಳಂತೆ ಅವಳೂ ಧೈರ್ಯವಂತೆ. ಆದರೆ ಶಿಲ್ಪಾಳ ಸಮಸ್ಯೆಗಿಂತ ಅವಳ ಸಮಸ್ಯೆ ಜಟಿಲವಾದುದು. ಅನೈಸರ್ಗಿಕ ಚಟವನ್ನು ಬೆಳೆಸಿಕೊಂಡ ಜಯಶ್ರೀಯ ಗಂಡ, ಆಕೆಗೆ ಯಾವುದೇ

ಸುಖವನ್ನು ಕೊಡದೆ ಹೋಗುತ್ತಾನೆ. ಸಲಿಂಗಕಾಮಿ ಪತಿಯಿಂದ ದಾಂಪತ್ಯದ ಸುಖ-ಸಂತೋಷವನ್ನು ಆಸ್ವಾದಿಸಲಾಗದ ಜಯಶ್ರೀ, ಈ ಸಂಬಂಧವನ್ನು ಕಡಿದು ಹಾಕಿ ತನ್ನ ದಾರಿಯನ್ನು ತಾನು ಕಂಡುಕೊಳ್ಳಲು ಆಲೋಚಿಸುತ್ತಾಳೆ. ತನ್ನೊಳಗಿನ ಸಂವೇದನೆಗಳನ್ನು ಅದುಮಿಟ್ಟು ಗಂಡನಿಗೆ ಹೊಂದಿಕೊಂಡು ಹೋಗಬೇಕೆಂಬ ಸಾಮಾಜಿಕ ನಿರೀಕ್ಷೆಗಳು ಕಲ್ಪಿಸಿಕೊಟ್ಟ ನಾರ್ಮಲ್ ವ್ಯಕ್ತಿತ್ವದಿಂದಾಚೆಗೆ ಹೊರಬರಲು ಜಯಶ್ರೀ ಯತ್ನಿಸುತ್ತಾಳೆ. ಇದ್ದುದನ್ನು ಇದ್ದಂತೆ ನೋಡಿಯಾದ ಮೇಲೆ ಅದನ್ನು ಸಹಿಸುತ್ತ ಉಳಿಯುವುದು ಕಷ್ಟದ ಕೆಲಸ. ಪ್ರಖರ ಸೂರ್ಯನಂತಿರುವ ಸತ್ಯವನ್ನು ಹೆಚ್ಚು ಹೊತ್ತು ನೋಡಲಾಗುವುದಿಲ್ಲ ಎಂಬ ತೀರ್ಮಾನಗಳು, ಜಯಶ್ರೀಗೆ ಖಾಸಗಿ ವಿಶ್ವವನ್ನು ತನ್ನ ಮಗಳೊಂದಿಗೆ ಕಟ್ಟಿಕೊಳ್ಳಬಲ್ಲ ಭರವಸೆ ನೀಡುತ್ತವೆ. ಪ್ರತಿಭಟನೆಯನ್ನು ಜೀವಂತ ಮೌಲ್ಯವಾಗಿ ರೂಪಿಸಿಕೊಳ್ಳುವಲ್ಲಿಯೇ ನಿಜವಾದ ಆಧುನಿಕ ಮನಸ್ಸು ಸಿದ್ಧಗೊಳ್ಳಬಲ್ಲದೆಂಬುದನ್ನು 'ವಿಯೋಗ'ದ ಜಯಶ್ರೀ ಸಾಬೀತು ಪಡಿಸುತ್ತಾಳೆ.

ಕೊನೆ ಟಿಪ್ಪಣಿಗಳು

೧. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೧೪

೨. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೪೩

೩. ಅದೇ, ಪು.೭೬

೪. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೨೭-೨೮

೫. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೨೫

೬. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೭೫

೭. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೨೮

೮. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೨೭

೯. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೪೮

೧೦. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೩೧

೧೧. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೭೧

೧೨. ಅದೇ, ಪು.೧೮೧

೧೩. ಅದೇ, ಪು.೧೮೩-೧೮೪

೧೪. ಅದೇ, ಪು.೨೦೩-೨೦೪

೧೫. ಅದೇ, ಪು.೨೨೧

೧೬. ಅದೇ, ಪು.೨೨೮

೧೭. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೩೬

೧೮. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೨೫೩

೧೯. ಅದೇ,

೨೦. ಅದೇ, ಪು.೨೭೧

೨೧. ಅದೇ, ಪು.೨೭೩

೨೨. ಅದೇ, ಪು.೨೮೨

೨೩. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೮೫

೨೪. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೨೮೩

೨೫. ಅದೇ, ಪು.೩೦೬

೨೬. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೩೦೯

೨೭. ಅದೇ, ಪು.೩೧೨

೨೮. ಅದೇ, ಪು.೩೧೪

೨೯. ಅದೇ, ಪು.೩೨೩

೩೦. ಅದೇ, ಪು.೩೪೬

೩೧. ಅದೇ,

೩೨. ಅದೇ, ಪು.೩೮೭

೩೩. ಅದೇ, ಪು.೪೦೪

೩೪. ಅದೇ, ಪು.೪೧೨

೩೫. ಅದೇ, ಪು.೪೮೫

೩೬. ಅದೇ

೩೭. ಅದೇ, ಪು.೪೮೭

ಅಧ್ಯಾಯ ೬

ಕಥಾಸಾಹಿತ್ಯ : ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪ

೬

ಕಥಾಸಾಹಿತ್ಯ : ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪ

ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಮದುವೆ ಮತ್ತು ಕುಟುಂಬ ಎಂಬ ವ್ಯವಸ್ಥೆಗಳ ಸ್ವರೂಪವನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಈ ಎರಡರ ಸ್ವರೂಪ ಗ್ರಾಮ ಸಮಾಜದಲ್ಲಿ ಮತ್ತು ನಗರ ಸಮಾಜದಲ್ಲಿ ಭಿನ್ನವಾಗಿರುವುದನ್ನು ಕಾಣಬಹುದು. ಸಂಪ್ರದಾಯಸ್ಥ ಗ್ರಾಮ ಸಮಾಜದಲ್ಲಿ ಮದುವೆಗೆ ಒಂದು ಪವಿತ್ರವಾದ ಸ್ಥಾನ ನೀಡಲಾಗಿದೆ. ಮದುವೆ ಹೇಗೋ ಹಾಗೆಯೇ ಕುಟುಂಬಕ್ಕೂ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಗಂಡ-ಹೆಂಡತಿ ನಡುವೆ ಎಷ್ಟೇ ಭಿನ್ನಾಭಿಪ್ರಾಗಳಿದ್ದರೂ ಗಂಡನ ಮಾತಿಗೆ ಮನ್ನಣೆ ಇದ್ದಂತೆ ಹೆಂಡತಿ ಮಾತಿಗೆ ಇರುವುದಿಲ್ಲ. ಆದರೂ ಮೇಲ್ಮಧ್ಯಮವರ್ಗದಲ್ಲಿ ಹೆಂಡತಿಗೂ ಗೌರವ ಸ್ಥಾನ ಇರುತ್ತದೆ. ಇದು ಆಯಾ ಕುಟುಂಬಗಳ ಗೌರವವನ್ನು ಅವಲಂಬಿಸಿರುತ್ತದೆ. ಹೆಂಡತಿಯ ಮಾತುಗಳು ಅಥವಾ ಅಭಿಪ್ರಾಯಗಳು ಗೌಣವಾದರೂ ಮಕ್ಕಳ ಪೋಷಣೆಯ, ಕುಟುಂಬದ ಹೊರೆ ಹೊರುವ ಹೆಂಗಸು ಸಹನೆಯಿಂದ ಇರುವುದನ್ನು ಸಂಪ್ರದಾಯವೆಂದು ತಿಳಿಯಲಾಗುತ್ತದೆ. ಗಂಡ-ಹೆಂಡತಿಯ ನಡುವೆ ಅನನ್ಯ ಸಂಬಂಧ ಇರದಿದ್ದರೂ ತಗ್ಗಿ ನಡೆಯುವುದು ಅನಿವಾರ್ಯವಾಗುತ್ತದೆ. ಸಂಹಾರವನ್ನು ಛಿದ್ರಮಾಡಿಕೊಳ್ಳಲು ಕುಟುಂಬದ ನೈತಿಕತೆಯಿಂದ ಸಾಧ್ಯವಾಗುವುದಿಲ್ಲ. ಅದೇ ಕುಟುಂಬ ಎಂದರೆ ಕೂಡುಕುಟುಂಬ. ಕುಟುಂಬವನ್ನೂ ಒಡೆಯದಂತೆ ತಡೆಯಲು ಸಂಪ್ರದಾಯದ ನೈತಿಕತೆ ಬಲವಾಗಿ ನಿಂತಿರುತ್ತದೆ. ಕುಟುಂಬ ಮತ್ತು ಮದುವೆ ಈ ಎರಡರ ವ್ಯವಸ್ಥೆಗಳಲ್ಲಿ ಗಂಡು-ಹೆಣ್ಣಿನ ನಡುವೆ ಅನ್ಯೋನ್ಯವಾದ ಕ್ಷಣಗಳಿದ್ದಂತೆ, ಸಂಘರ್ಷದ ಸಂದರ್ಭಗಳೂ ಇರುತ್ತವೆ. ಸಂಪ್ರದಾಯಸ್ಥ ಸಮಾಜದ ಈ ವ್ಯವಸ್ಥೆಗಳಲ್ಲಿ ಬಿರುಕಿಗೆ ಕಾರಣಗಳು ಅನೇಕ ಇರುತ್ತವೆ. ವಿದ್ಯೆ ಕಲಿತವರು, ಕಲಿಯದವರ ನಡುವೆ, ತಲೆಮಾರುಗಳ ಅಂತರ, ಹೊರಗಿನಿಂದ ಬಂದು ನೆಲೆ ಪಡೆಯುವ ಹೆಣ್ಣು ಮುಂತಾದ ಸಂಗತಿಗಳು ಸಂಘರ್ಷಕ್ಕೂ ಕಾರಣವಾಗುತ್ತದೆ.

ಇನ್ನು ನಗರಕೇಂದ್ರಿತ ಬದುಕಿನಲ್ಲಿ ಕುಟುಂಬ ಎಂದರೆ ಗಂಡ-ಹೆಂಡತಿ ಅವರ ಮಿತ ಸಂತಾನ. ಕೂಡುಕುಟುಂಬಗಳು ವಿರಳ. ವಿದ್ಯಾವಂತ, ಸುಶಿಕ್ಷಿತ ವರ್ಗಗಳಲ್ಲಿ ಮದುವೆ ಮತ್ತು ಗಂಡ-ಹೆಂಡತಿ ನಡುವಿನ ಸಂಬಂಧ ಸಂಪ್ರದಾಯಸ್ಥ ಗ್ರಾಮ ಸಮಾಜದಲ್ಲಿರುವುದಕ್ಕಿಂತ ಭಿನ್ನವಾಗಿರುತ್ತದೆ. ಗಂಡ-

ಹೆಂಡತಿ ನಡುವಿನ ಸಂಬಂಧದಲ್ಲಿ ಬಿರುಕುಗಳಿದ್ದರೂ ಇಲ್ಲಿಯೂ ಕೂಡ ಹೊಂದಾಣಿಕೆಯಿಂದಿರುವುದು ಹೆಣ್ಣಿಗೇ ಹೆಚ್ಚು. ಮಕ್ಕಳ ಪೋಷಣೆಯ ಸಂಬಂಧವಾಗಿ ಹೊಂದಾಣಿಕೆ ಏರ್ಪಡುತ್ತದೆ. ಹೆಣ್ಣಿಗೆ ಇಲ್ಲಿಯೂ ಎರಡನೆಯ ಸ್ಥಾನವೇ ಹೆಚ್ಚು. ಒಂದು ವೇಳೆ ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೆ, ಗಂಡನನ್ನು ಒಂದು ಹಂತದವರೆಗೆ ಮಾತ್ರ ತಾಳಿಕೊಂಡಿರಬಹುದು. ಅದು ಮೀರಿದರೆ ಸ್ವತಂತ್ರವಾಗಿರಲು ಬಯಸುತ್ತಾಳೆ. ಆಕೆಗಿರುವ ಆರ್ಥಿಕ ಸ್ವಾವಲಂಬನೆಯೇ ಕಾರಣವಾಗಿ ಇದು ಕುಟುಂಬಗಳ ಮತ್ತು ಮದುವೆ ವ್ಯವಸ್ಥೆಗಳಲ್ಲಿ ಹೆಣ್ಣು-ಗಂಡಿನ ಸಂಬಂಧದ ಸ್ವರೂಪವಾಗಿದೆ. ಇನ್ನೂ ಸಮಾಜದಲ್ಲಿ ನೌಕರಸ್ಥ ಮಹಿಳೆಯನ್ನು ಮೇಲಧಿಕಾರಿಗಳು ನೋಡುವ, ನಡೆಸಿಕೊಳ್ಳುವ ರೀತಿಯಲ್ಲಿ ಶೋಷಣೆ ಇದ್ದದ್ದೆ. ಮಹಿಳೆಯನ್ನು ಭೋಗದ ಸರಕು ಎಂದು ಪರಿಗಣಿಸುವ ಮನೋಧರ್ಮ ಇದ್ದದ್ದೆ. ಇಂಥಹ ಗಂಡು-ಹೆಣ್ಣಿನ ಸಂಬಂಧದ ಸ್ವರೂಪವನ್ನು ಕನ್ನಡ ಕಥಾ ಸಾಹಿತ್ಯದಲ್ಲಿ ಕಾಣುತ್ತೇವೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿ ಹೆಣ್ಣಿಗೆ ಎರಡನೇ ದರ್ಜೆ ಪ್ರಜೆಯನ್ನಾಗಿ ಗ್ರಹಿಸಲಾಗಿದೆ. ಶಾಂತಿನಾಥ ದೇಸಾಯಿ ಅವರ ಕಾದಂಬರಿ ಸಾಹಿತ್ಯದಲ್ಲಿ ಹೆಣ್ಣು ಆಧುನಿಕ ಪ್ರಜ್ಞೆ ಉಳ್ಳವಳಾಗಿ ಕಾಣುತ್ತಾಳೆ. ಆದರೆ ಕಥಾಸಾಹಿತ್ಯದಲ್ಲಿ ಕೌಟುಂಬಿಕ ಪರಿಸರದಲ್ಲಿ ಗಂಡಿನಷ್ಟೇ ಸ್ವಾಭಿಮಾನಿಯಾಗಿ, ಸ್ವತಂತ್ರ ಮನೋಭಾವದಿಂದ, ಮುಕ್ತವಾಗಿ ಇರಲು ಬಯಸಿದರೂ ಗಂಡಿನ ಅಧಿಕಾರದಿಂದ ಅದು ಸಾಧ್ಯವಾಗುವುದಿಲ್ಲ. ಸ್ವಾಭಿಮಾನ, ಮುಕ್ತತೆ, ಸಮಾನತೆ ಮತ್ತು ಸ್ವಾತಂತ್ರ್ಯ ಬಯಸುವ ಹೆಣ್ಣು-ಗಂಡಿನ ಮುಂದೆ ಬಿಕ್ಕಟ್ಟಿಗೆ ಒಳಗಾಗುತ್ತಾಳೆ. ಮದುವೆಗೆ ಮುನ್ನಿನ ಲೈಂಗಿಕ ಸ್ವಾತಂತ್ರ್ಯ ಹೆಣ್ಣು-ಗಂಡಿನ ನಡುವೆ ಸಮಾನ ಸ್ಥಾನಮಾನವಾಗಿ ಪರಿಗಣಿತವಾಗುವುದಿಲ್ಲ. ಮದುವೆ ಪೂರ್ವ ಲೈಂಗಿಕತೆ. ಗಂಡಿಗೆ ಯಾವ ತೊಂದರೆಯನ್ನುಂಟು ಮಾಡುವುದಿಲ್ಲ. ಅದೇ ಹೆಣ್ಣಿನ ವಿಷಯದಲ್ಲಿ ಅಪರಾಧ ಅಥವಾ ನೀತಿಗೆಟ್ಟವಳು ಎನ್ನುವ ಆರೋಪ. ಮದುವೆಗೆ ಮುನ್ನಿನ ಪ್ರೇಮ ಪ್ರಕರಣವೂ ಹೆಣ್ಣಿಗೆ ಮುಳುವಾಗುತ್ತದೆ. ಮದುವೆಯ ನಂತರ ಗಂಡು ಅನ್ಯಸಂಬಂಧ ಹೊಂದಿದರೂ ಅದನ್ನು ಹೆಣ್ಣು ಮಾನ್ಯ ಮಾಡಬೇಕು. ಹೆಣ್ಣಿಗೆ ಅದು ಅಪರಾಧ. ಈ ಹೆಣ್ಣು-ಗಂಡಿನ ಸಂಘರ್ಷವನ್ನು ಶಾಂತಿನಾಥ ದೇಸಾಯಿ ತಮ್ಮ ಕಥೆಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಕುಟುಂಬ ಮತ್ತು ಮದುವೆ ಪರಿಸರದಲ್ಲಿ ಹೆಣ್ಣು ಪ್ರಶ್ನಿಸುವ ಹಕ್ಕನ್ನು ಉಳಿಸಿಕೊಳ್ಳುತ್ತಾಳೆ. ಪುರುಷನನ್ನು ವಿರೋಧಿಸುತ್ತಾಳೆ, ಪ್ರತಿಭಟಿಸುತ್ತಾರೆ. ಗಂಡನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಬಿಡುತ್ತಾಳೆ. ಇದು ಹೆಣ್ಣಿನ ಆಧುನಿಕ ಪ್ರಶ್ನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಹೆಣ್ಣು-ಗಂಡನ್ನು ಪರೀಕ್ಷೆಗೆ ಒಡ್ಡಿ ಪುರುಷ ಕೇಂದ್ರಿತ ಸಮಾಜವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾಳೆ. ಶಾಂತಿನಾಥ ದೇಸಾಯಿ ಅವರ ಕಥೆಗಳಲ್ಲಿ ಬರುವ ಮಹಿಳೆಯರು ಗೌರವ ಸ್ಥಾನದಲ್ಲಿ ನಿಲ್ಲುತ್ತಾರೆ. ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಕೆಲವೊಂದು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಅವು ಈ ಕೆಳಗಿನಂತಿವೆ.

೧. ದಾಂಪತ್ಯದ ನಡುವಿನ ಸಂಘರ್ಷ

೨. ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ

೩. ಲೈಂಗಿಕ ಬದುಕಿನ ಸಂಬಂಧಿ ಸಂಘರ್ಷ

೪. ಮಾನಸಿಕ ಸಂಘರ್ಷ

೫. ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷ

೧. ದಾಂಪತ್ಯದ ನಡುವಿನ ಸಂಘರ್ಷ

ಸಂಸಾರದಲ್ಲಿ ಎಷ್ಟೋ ಸಲ ಸಣ್ಣಪುಟ್ಟ ವಿಷಯಗಳಿಗೆ ಅಭಿಪ್ರಾಯ ಭೇದವುಂಟಾಗಿ ಕೋಪ, ತಾಪ, ವಿರಸಗಳು ಕಾಣಿಸಿಕೊಳ್ಳುವುದು ಸಹಜ. 'ಅಂಟಿದ ನಂಟು' ಕಥೆಯಲ್ಲಿ ಬರುವ ಮಾಧವ ಮತ್ತು ಲಲಿತೆಯರು ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರೂ ಒಂದು ಸಣ್ಣ ಘಟನೆಯಿಂದಾಗಿ ಇವರಿಬ್ಬರ ನಡುವೆ ವಿರಸ ಮೂಡಿ ಪಡಬಾರದ ನೋವು ಅನುಭವಿಸುತ್ತಾರೆ.

ಲಲಿತೆ ತನ್ನ ಅಕ್ಕನನ್ನು ತಮ್ಮ ಮನೆಗೆ ಕರೆಯಿಸಿಕೊಳ್ಳಬೇಕೆಂಬ ಆಸೆಯನ್ನು ಗಂಡನಾದ ಮಾಧವನಿಗೆ ಹೇಳುತ್ತಾಳೆ. ಇದು ಇವರಿಬ್ಬರ ನಡುವಿನ ಸಂಘರ್ಷಕ್ಕೆ ಕಾರಣವಾಗಿರುತ್ತದೆ. ಅನ್ಯೋನ್ಯವಾಗಿ ಬದುಕಿದ ಇವರು ಭಿನ್ನಾಭಿಪ್ರಾಯಗಳಿಗೆ ಗುರಿಯಾಗುತ್ತಾರೆ. ಆಗ ಇವರಿಬ್ಬರ ನಡುವಿನ ಪ್ರೀತಿ ಮಾಯ ವಾಗಿ ಬಿಡುತ್ತದೆ. ಸಿಟ್ಟಿನ ರಭಸದಲ್ಲಿ ಮಾಧವ, ಲಲಿತೆಯನ್ನು ಹಿಡಿದು ಹೊಡೆಯುವಷ್ಟು ಮನಸ್ಸನ್ನು ಕೆಡಿಸಿಕೊಳ್ಳುತ್ತಾನೆ. ಆರಂಭದಲ್ಲಿ ಲಲಿತೆ ಮಾಡಿದ ಪ್ರತಿಯೊಂದು ಕೆಲಸ, ನಡೆ-ನುಡಿ ಎಲ್ಲವೂ ಅವನಿಗೆ ಮೋಹಕವಾಗಿ ಕಾಣಿಸುತ್ತಿದ್ದವು. ಕ್ರಮೇಣ ಆ ಮೋಹ ಕಡಿಮೆಯಾಗಿ, ಅವಳು ಮಾಡುವ ಪ್ರತಿಯೊಂದು ಕಾರ್ಯವೂ, ಅವನಿಗೆ ಅಸಹ್ಯ ತರಿಸಲಿಕ್ಕೆ ಶುರುವಾಗುತ್ತದೆ. 'ಮನೆ ಹೆಂಡತಿ ಕುರುಡು' ಅನ್ನುವ ಹಾಗೆ ಕ್ರಮೇಣ ತನ್ನ ಹೆಂಡತಿಯ ಬಗೆಗಿನ ಆಕರ್ಷಣೆಯನ್ನು ಕಳೆದುಕೊಳ್ಳುತ್ತಾನೆ. ಇವಳಿಂದ ಸ್ವಲ್ಪ ದಿನ ದೂರ ಇರಬೇಕೆಂದು ಆಲೋಚಿಸುತ್ತಾನೆ.

ತನ್ನ ಗಂಡ ತನ್ನನ್ನು ಅಲಕ್ಷಿಸುತ್ತಿರುವುದು ಲಲಿತಾಳಿಗೆ ಸೂಕ್ಷ್ಮವಾಗಿ ಗೊತ್ತಾಗುತ್ತಿರುತ್ತದೆ. "ನಂಗೊತ್ತು ನಿಮ್ಮ ಮನಸ್ಸು ನನ್ನ ಬಗ್ಗೆ ನಿಮ್ಮಲ್ಲಿ ತಿರಸ್ಕಾರ..." ಉಂಟಾಗುತ್ತಿದೆ ಎಂದು ಹೇಳುವುದರ ಮುಖಾಂತರ ಮಾಧವನ ಪ್ರೀತಿಯನ್ನು ಶಂಕಿಸುತ್ತಾಳೆ. "ನನಗೆ ತಿಳಿದಿದೆ ನಿಮ್ಮ ಅರ್ಥ! ನಮ್ಮ ಅಕ್ಕನನ್ನೇನೂ ಇಲ್ಲಿ ಕರೆಯುವುದು ಬೇಡ. ನಾನೇ ನಮ್ಮ ಊರಿಗೆ ಹೋಗಿಬಿಡ್ತೀನಿ. ನಾನು ನಿಮಗೆ ತಕ್ಕವಳಲ್ಲ." ಎಂದು ಹೇಳುತ್ತಾಳೆ. ಕೊನೆಯಲ್ಲಿ ಮಾಧವನೇ ಸಹನೆಯಿಂದ ಪರಿಸ್ಥಿತಿ ಕೈಮೀರಿ ಹೋಗುವುದನ್ನು ತಡೆಯುತ್ತಾನೆ. ಲಲಿತೆಯಲ್ಲಿ ಕ್ಷಮೆ ಕೇಳುವುದರ ಮುಖಾಂತರ ವಾತಾವರಣವನ್ನು ತಿಳಿಯಾಗಿಸುತ್ತಾನೆ. ಲಲಿತೆ ಗರ್ಭವತಿಯಾಗಿದ್ದಾಳೆಂಬ ಸೂಚನೆ ಮಾಧವನಿಗೆ ಸಿಕ್ಕಕೂಡಲೇ ಇವರಿಬ್ಬರ ನಡುವಿನ ಜಗಳ ಮಾಯವಾಗುತ್ತದೆ. ಇಲ್ಲಿ ಮಕ್ಕಳು ಅನ್ನುವಂತಹ ಬಂಧ ಇವರ ಸಂಬಂಧವನ್ನು

ಮತ್ತೆ ಗಟ್ಟಿಗೊಳಿಸುತ್ತಿದೆ. ಲಲಿತೆ ತನ್ನ ಅಕ್ಕಳನ್ನು ಕರೆಸಿಕೊಳ್ಳಲು ಅಪೇಕ್ಷೆ ಪಟ್ಟದ್ದು ಈ ಕಾರಣಕ್ಕಾಗಿಯೇ ಎಂಬುದು ಮಾಧವನಿಗೆ ತಿಳಿಯುತ್ತದೆ.

ಯಾವುದೇ ಹೆಣ್ಣು ತನ್ನ ಬದುಕನ್ನು ಇನ್ನೊಂದು ಹೆಣ್ಣಿನ ಜೊತೆಗೆ ಹಂಚಿಕೊಳ್ಳಲಿಕ್ಕೆ ಇಷ್ಟಪಡುವುದಿಲ್ಲ. ಹಾಗೊಂದು ವೇಳೆ ಗಂಡನಾದವನು ತನ್ನ ಹೆಂಡತಿ ಇದ್ದಾಗ್ಯೂ ಪರಸ್ತ್ರೀ ಜೊತೆಗೆ ಸಂಬಂಧವನ್ನು ಬೆಳೆಸಿದರೆ, ಅಂಥ ಬದುಕಿನ ವಿರುದ್ಧ ಆಕೆ ಸಂಘರ್ಷಕ್ಕಿಳಿಯುತ್ತಾಳೆ. ಅಂಥ ಬದುಕನ್ನೇ ಧಿಕ್ಕರಿಸಿ ಹೊರಬರುತ್ತಾಳೆ. ಈ ರೀತಿಯ ವಸ್ತುವನ್ನು 'ದಿಗ್ಭ್ರಮೆ', 'ಬಿಡುಗಡೆ', 'ಕೂರ್ಮಾವತಾರ', 'ತೃಪ್ತ', 'ಯಾಕೆ?', 'ವಿಯೋಗ' ಮುಂತಾದ ಕಥೆಗಳಲ್ಲಿ ಕಾಣಬಹುದು.

ಜಮೀನ್ದಾರಿ ಕುಟುಂಬಗಳಲ್ಲಿ ಹೆಣ್ಣು ಹೇಗೆ ಶೋಷಣೆಗೆ ಒಳಗಾಗುತ್ತಾಳೆ ಅನ್ನುವುದನ್ನು 'ದಿಗ್ಭ್ರಮೆ' ಕಥೆಯಲ್ಲಿ ಕಾಣಬಹುದು. ಜಮೀನ್ದಾರಿ ಮನೆತನಗಳಲ್ಲಿ ಗಂಡಸರು, ಹೆಂಡತಿಯಿದ್ದಾಗಲೂ ಮತ್ತೊಂದು ಹೆಣ್ಣಿನ ಜೊತೆಗೆ ಸಂಬಂಧ ಇಟ್ಟುಕೊಳ್ಳುವುದನ್ನು ಪ್ರತಿಷ್ಠೆ ಎಂದು ತಿಳಿದಿರುತ್ತಾರೆ. ಚೆನ್ನೂನ ತಂದೆ ಕುಂದಾ ಎಂಬ ಹೆಣ್ಣಿನ ಜೊತೆಗೆ ಇಟ್ಟುಕೊಂಡ ಸಂಬಂಧ, ಚೆನ್ನೂನ ತಂದೆ-ತಾಯಿಯರ ನಡುವಿನ ಸಂಘರ್ಷಕ್ಕೆ ಕಾರಣವಾಗಿರುತ್ತದೆ. ''ಇತ್ತಿತ್ತಲಾಗಿ ನೀವು ಅಲ್ಲಿ ಹೋಗೋದು ಬಹಳ ಆಗೇತಿ ಅಂತೀನಿ.... ಊರಿಗೆಲ್ಲಾ ಗೊತ್ತಾಗೇದ, ಹುಲ್ಲಿನ ಮನಿ ಶಂಕರಿ ಹಾಲುಕೊಡಾಕ ಹೋದಾಗ ನೀವೇನೋ...''[೨] ಎಂದು ತನ್ನ ಗಂಡನಿಗೆ ಹೇಳುತ್ತಿರುತ್ತಾಳೆ. ಆದರೂ ಆತ ತನ್ನ ಸಂಬಂಧವನ್ನು ಸಮರ್ಥನೆ ಮಾಡಿಕೊಳ್ಳುತ್ತಿರುತ್ತಾನೆ. ತನ್ನ ದಾಂಪತ್ಯದ ಬಗ್ಗೆ ಕಾಳಜಿ ಇದ್ದ ಚೆನ್ನೂನ ತಾಯಿ 'ಅದಕ್ಕೇನು ಲಗ್ನಾ ಇಲ್ಲದ ಖಾಲಿ ಕೂತಿರ್ತದ ರಂಡಿ, ಗಂಡಸರಂದರ ಆ ಅಂತ ಹಸಿದು ನೋಡ್ತದ ಸುಟ್ಟಮಾರೀ ಹರೇಮಿ... ನಿಮಗ ಮೊದಲ ಬುದ್ಧಿ ಇರಬಾರದೇನು? ನೀವ್ಯಾಕ ಅವಳ ಕೂಡ ನಾಚಿಕೆ ಮರ್ಯಾದೆ ಬಿಟ್ಟು...''[೩] ಎಂದು ತನ್ನ ಗಂಡನ ಅಡ್ಡದಾರಿಯ ವಿರುದ್ಧ ಪ್ರತಿಭಟಿಸುತ್ತಾಳೆ. ಕೊನೆಗೆ ತನ್ನ ಬಾಳಿಗೆ ಮುಳ್ಳಾದ ಕುಂದಾ ಸತ್ತಾಗ, ಚೆನ್ನೂನ ತಾಯಿ ಅನುಕಂಪವನ್ನು ವ್ಯಕ್ತಪಡಿಸುತ್ತಾಳೆ. ಇದು ಅವಳ ಮಾನವೀಯತೆಯನ್ನು ತೋರಿಸುತ್ತದೆ.

'ಬಿಡುಗಡೆ' ಕಥೆಯಲ್ಲಿ ಬರುವ ಮೀನಾಳ ಬದುಕು ಇದೇ ತೆರನಾದದ್ದು. ಆದರೆ ಮೀನಾ, ಚೆನ್ನೂನ ತಾಯಿಯಂತೆ ಶೋಷಣೆಗೆ ಒಳಗಾಗುವುದಿಲ್ಲ. ತನ್ನ ಗಂಡನ ವಿರುದ್ಧ ಬಂಡೇಳುತ್ತಾಳೆ. ತನ್ನ ಗಂಡ ಮತ್ತೊಬ್ಬ ಹೆಂಗಸಿನೊಡನೆ ಸಂಬಂಧ ಹೊಂದಿರುವ ಪ್ರಕರಣದ ಬಗ್ಗೆ ಮೀನಾಳಿಗೆ ಸಂಶಯ ಬರುತ್ತದೆ. ಈ ಸಂಶಯ ಭಾವನೆ ಮೀನಾಳಲ್ಲಿ ದಿನೇ ದಿನೇ ಹೆಚ್ಚುತ್ತಾ ಹೋಗಿ ಕೊನೆಗೊಮ್ಮೆ ಸತ್ಯದ ಅರಿವಾಗುತ್ತದೆ. ಮೊದಮೊದಲು ಗಂಡನ ಅನೈತಿಕ ಸಂಬಂಧವನ್ನು ಅಸಹಾಯಕಳಾಗಿ ಮೀನಾ ಸಹಿಸಿಕೊಳ್ಳುತ್ತಿರುತ್ತಾಳೆ. ಆಗ ಮೀನಾಳಿಗೆ ಜೀವನವೇ ಬೇಸರವಾಗುತ್ತದೆ. ತನ್ನ ಗಂಡನ ಬಗ್ಗೆ ಜಿಗುಪ್ಸೆ ತಳೆದ ಮೀನಾ... ''ನಿಮ್ಮ ವಿಷಯದಲ್ಲಿ ನನ್ನ ಮನಸ್ಸು ಸತ್ತು ಹೋಗಿಬಿಟ್ಟಿದೆ. ಇಂದು ಅದರ

ಅಂತ್ಯಕ್ರಿಯೆಯೂ ಆದಂತಾಗಿದೆ. ಇನ್ನು ಒಂದೇ ಹಾದಿ ನೀವಾದರೂ ಮನೆಬಿಟ್ಟು ಹೋಗಬೇಕು, ನಾನಾದರೂ ಹೋಗಬೇಕು''[೪] ಎಂದು ಪ್ರತಿಭಟಿಸುತ್ತಾಳೆ.

ಸಂಸಾರದಲ್ಲಿ ನಂಬಿಕೆಯಿಲ್ಲದ ವ್ಯಕ್ತಿಯ ಜೊತೆಗೆ ಇರುವುದಕ್ಕಿಂತಲೂ ಬಿಡುಗಡೆಯನ್ನು ಪಡೆಯುವುದೇ ಉತ್ತಮ ಎಂದು ಭಾವಿಸುತ್ತಾಳೆ. ಇಲ್ಲಿ ಮೀನಾ ''ಪುರುಷ ಸಮಾಜದ ಮೌಲ್ಯಗಳೊಂದಿಗೆ ರಾಜಿಮಾಡಿಕೊಳ್ಳುವುದಿಲ್ಲ. ಪುರುಷನ ಕೈಗೊಂಬೆಯಾಗುವುದರಲ್ಲಿ ನೆಮ್ಮದಿಯಿದೆ, ಸಂತೋಷವಿದೆಯೆಂದು ತೃಪ್ತಿಪಟ್ಟು, ಲಜ್ಜೆಗೆಟ್ಟು ಬಾಳುವುದಕ್ಕಿಂತ ಹೋರಾಟದ ಬದುಕನ್ನು ಆರಿಸಿಕೊಳ್ಳುವುದರಲ್ಲಿ ಘನತೆಯಿದೆ, ಗೌರವವಿದೆ ಹಾಗೂ ಸಾರ್ಥಕತೆಯಿದೆ''[೫] ಎಂದು ತಿಳಿಯುತ್ತಾಳೆ.

'ಯಾಕೆ? ಕಥೆಯಲ್ಲಿ ಬರುವ ಕಥಾನಾಯಕ ತನ್ನ ಹೆಂಡತಿಯ ಬಗೆಗೆ ಸಂಶಯವನ್ನು ವ್ಯಕ್ತಪಡಿಸುತ್ತಾ ಇಲ್ಲದ ಸಮಸ್ಯೆಗಳನ್ನು ಸೃಷ್ಟಿಮಾಡುತ್ತಿರುತ್ತಾನೆ. ಸಂಪೂರ್ಣವಾಗಿ ತನ್ನ ಹೆಂಡತಿ ತನ್ನ ಮುಷ್ಠಿಯಲ್ಲಿರಬೇಕೆಂದು ಬಯಸುತ್ತಿರುತ್ತಾನೆ. ಆದರೆ ಅವಳಿಗೂ ಅವಳದೇ ಆದ ಮನಸ್ಸಿದೆ ಎಂದು ಆಲೋಚನೆ ಮಾಡುವುದಿಲ್ಲ. ಆಕೆ ಬೇರೆ ಗಂಡಸಿನ ಬಗ್ಗೆ ಆಲೋಚನೆ ಮಾಡುವುದೇ ತಪ್ಪೆಂದು ಭಾವಿಸುತ್ತಿರುತ್ತಾನೆ. ವಿಕ್ಷಿಪ್ತ ಮನಸ್ಥಿತಿಯುಳ್ಳ ಪ್ರಮೀಲೆಯ ಗಂಡ ತಾನು ನೆಮ್ಮದಿಯಾಗಿರದೆ, ಆಕೆಗೂ ನೆಮ್ಮದಿಯಾಗಿರಲಿಕ್ಕೆ ಬಿಡುವುದಿಲ್ಲ. ಮದುವೆಗಿಂತ ಮುಂಚೆ ಅವಳಿಗಿದ್ದಿರಬಹುದಾದ ಎಲ್ಲ ಸಂಬಂಧಗಳನ್ನು ಕುರಿತು ಆಲೋಚಿಸುತ್ತಿರುತ್ತಾನೆ. ಹಾಗೆ ನೋಡಿದರೆ ಅವನೇ ಬೇರೆ ಹೆಣ್ಣಿನ ಜೊತೆಗೆ ಸಂಬಂಧವನ್ನು ಇಟ್ಟಿಕೊಂಡಿದ್ದಾನೆ. ಇಲ್ಲಿ ಪ್ರಮೀಲೆಯ ಗಂಡ ತಾನು ಮತ್ತೊಂದು ಹೆಣ್ಣಿನ ಜೊತೆಗೆ ಇಟ್ಟುಕೊಂಡ ಸಂಬಂಧ ತಪ್ಪು ಅಲ್ಲ ಅಂತ ಭಾವಿಸುವುದಾದರೆ, ತನ್ನ ಹೆಂಡತಿ ಇತರರ ಜೊತೆಗೆ ಇಟ್ಟುಕೊಂಡ ಸಂಬಂಧ ತಪ್ಪು ಅಂತ ಯಾಕೆ ಭಾವಿಸಬೇಕು?

ಅಹಂ ಅನ್ನು ತ್ಯಜಿಸದ ಹೊರತು ಬದುಕನ್ನು ಹೆಣ್ಣಿನ ಕಣ್ಣಿನಿಂದ ಗ್ರಹಿಸಲು ಗಂಡನಿಗೆ ಸಾಧ್ಯವಾಗುವುದಿಲ್ಲ. ಆಕೆಯ ಮೇಲೆ ಅಧಿಕಾರ ಸ್ಥಾಪನೆಯ ಪ್ರಯತ್ನವಾಗಿ ಗಂಡನಾಡುವ ಮಾತು ಕ್ರಿಯೆಗಳಲ್ಲಿ ತಲೆದೋರಿದ ಕ್ರೌರ್ಯಕ್ಕೂ ಆಕೆ ಸ್ಪಂದಿಸಲಾರದಷ್ಟು ಶೂನ್ಯಳಾಗಿರುವುದು ಆತನನ್ನು ಹೆದರಿಸುತ್ತದೆ. ಪ್ರತಿಯೊಂದು ಹೆಣ್ಣಿಗೂ ಸಹನೆ, ತಾಳ್ಮೆ ಅನ್ನುವುದು ಒಂದು ಹಂತದವರೆಗೆ ಮಾತ್ರ ಇರುತ್ತದೆ. ಅದು ಮೀರಿದ ಮೇಲೆ ಆಕೆ ತನ್ನತನವನ್ನು ತೋರಿಸಬೇಕಾಗುತ್ತದೆ.

''ನೀವು ನನಗೆ ಬೇಕಾಗಿಲ್ಲ ನನ್ನ-ನಿಮ್ಮ ಬಂಧನದಲ್ಲಿ ಅರ್ಥವಿಲ್ಲ - ಅರ್ಥವಿಲ್ಲ ಯಾಕೆ - ಯಾಕೆ ಅಂತ ಮತ್ತೆ ಕೇಳಬ್ಯಾಡ್ರಿ ಪ್ಲೀಜ್ - ನನಗೆ ಈ ಬಂಧನದ ನರಕವಾಸ ಸಾಕಾಗೇದ - ಇನ್ನು ಎಷ್ಟುಂತ ಸಹನ ಮಾಡೋದು ದೇವರೇ ನನ್ನ ಬಿಡುಗಡೆ ಮಾಡು.''[೬] ಉಸಿರುಗಟ್ಟಿಸುವ ವಾತಾವರಣದಲ್ಲಿ ಬದುಕಲಾರದ ಪ್ರಮೀಲೆ, ತನ್ನ ಗಂಡನಿಂದ, ನರಕದ ಬದುಕಿನಿಂದ ಹೊರಬರುವುದನ್ನು ಗಮನಿಸಬಹುದು.

'ಕೂರ್ಮಾವತಾರ' ಕಥೆಯಲ್ಲಿ ಬರುವ ಪತಂಗರಾವ್ ಜೀವನವನ್ನು ಮೊದಲಿನಿಂದಲೂ ಗಂಭೀರವಾಗಿ ಪರಿಗಣಿಸಿದವನಲ್ಲ. ಕೆಟ್ಟವರ ಸಹವಾಸ ಹಾಗೂ ಕೆಟ್ಟ ಚಟಗಳಿಗೆ ಬಲಿಯಾಗಿ ಬದುಕನ್ನು ಸಾಗಿಸಿದವನು. ಶ್ರೀಮಂತರ ಮಗಳು ಸಿಕ್ಕಿದ್ದರಿಂದ ಒಂದು ರೀತಿಯಲ್ಲಿ ಸುಖವಾಗಿ ಜೀವನವನ್ನು ನಡೆಸುತ್ತಿರುತ್ತಾನೆ. ಇವರಿಗಿದ್ದ ಒಬ್ಬಳೇ ಹೆಣ್ಣುಮಗಳು ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿ ಅವನೊಂದಿಗೆ ಓಡಿಹೋಗಿರುತ್ತಾಳೆ. ಮಾನಸಿಕವಾದ ಯಾವ ಆಹ್ವಾನವನ್ನು ಸ್ವೀಕರಿಸದಂಥ ಒಂದು ಪ್ರವೃತ್ತಿಯನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದ ಪತಂಗರಾವ್‌ನಿಗೆ ತನ್ನ ಮಗಳು ಓಡಿಹೋದದ್ದರ ಬಗ್ಗೆ ದುಃಖವಾಗುವುದಿಲ್ಲ.

ಪತಂಗರಾವ್‌ನ ಮನೆಗೆ ಕೆಲಸದಾಳಾಗಿ ಬಂದ ಸೋನೂಬಾಯಿಯಿಂದಾಗಿ ಇವರ ದಾಂಪತ್ಯದಲ್ಲಿ ಒಂದು ರೀತಿಯ ಬಿರುಕು ಕಾಣಿಸಿಕೊಳ್ಳುತ್ತದೆ. ಪತಂಗರಾವ್ ವಿಧವೆಯಾದ ಸೋನೂಬಾಯಿಯ ಜೊತೆಗೆ ಸಂಬಂಧವನ್ನಿಟ್ಟುಕೊಳ್ಳುತ್ತಾನೆ. ಇದು ಅವನ ಹೆಂಡತಿ ಜೀಜಾಬಾಯಿಗೆ ಗೊತ್ತಾದರೂ ಅದನ್ನು ಅವಳು ಸಹಿಸಿಕೊಂಡು ಬದುಕುತ್ತಿರುತ್ತಾಳೆ. ಆದರೂ ಅವಳಲ್ಲಿ ಒಂದು ರೀತಿಯ ಜಿಗುಪ್ಸೆ ಬರುತ್ತದೆ. ಇದು ಪತಂಗರಾವ್‌ನ ಅರಿವಿಗೂ ಬರುತ್ತದೆ. ಒಂದು ದಿನ ಜೀಜಾಬಾಯಿ ಕೆಲಸದಾಳು ಸೋನೂಬಾಯಿಯೊಂದಿಗೆ ಜಗಳವಾಡಿ ಮನೆಯನ್ನು ಬಿಟ್ಟು ಹೊರಟು ಹೋಗುತ್ತಾಳೆ. "ನಾನು ಹೋಗುತ್ತಿರುವೆ ಮನೆಬಿಟ್ಟು ಹೋಗುತ್ತಿರುವೆ. ನೀವು ಒಬ್ಬರೇ ಇರಲು ಸಮರ್ಥರು. ನಿಮಗೆ ನನ್ನ ಅವಶ್ಯಕತೆ ಇಲ್ಲ. ನನ್ನ ಅವಶ್ಯಕತೆ ಇದ್ದ ಒಬ್ಬ ವ್ಯಕ್ತಿ ಈ ಜಗತ್ತಿನಲ್ಲಿದ್ದಾನೆ. ಅವನ ಕೂಡ ನಾನು ಹೋಗುತ್ತಿರುವೆ... ನಾನೆಂದರೆ ನಿಮಗೆ ಬಹಳ ಒಜ್ಜೆಯಾಗಿದ್ದೆ. ನೀವು ಅವಳ ಜೊತೆ ಸುಖವಾಗಿರಿ... ಕ್ಷಮಿಸಬೇಕು"[೭] ಎಂದು ಚೀಟಿ ಬರೆದಿಟ್ಟು ಹೋಗಿರುತ್ತಾಳೆ. ಅರ್ಥಹೀನ ಬದುಕಿನಿಂದ ಬಿಡುಗಡೆ ಪಡೆದ ಜೀಜಾಬಾಯಿ ತನ್ನ ಅವಶ್ಯಕತೆ ಇರುವವರ ಕಡೆ ಹೋಗುತ್ತಾಳೆ. ಜೀಜಾಬಾಯಿಯ ಜೊತೆಗೆ ಜಗಳ ಆಡಿದ ಸೋನೂಬಾಯಿಯೂ ಮನೆಬಿಟ್ಟು ಹೋಗುತ್ತಾಳೆ.

ಪ್ರತಿಭಟನೆಯನ್ನು ಜೀವಂತ ಮೌಲ್ಯವಾಗಿ ರೂಪಿಸಿಕೊಳ್ಳುವಲ್ಲಿಯೇ ನಿಜವಾದ ಆಧುನಿಕ ಮನಸ್ಸು ಸಿದ್ಧಗೊಳ್ಳಬಲ್ಲದೆಂಬುದನ್ನು 'ವಿಯೋಗ'ದ ಜಯಶ್ರೀ ಸಾಬೀತುಪಡಿಸುತ್ತಾಳೆ. ತನ್ನೊಳಗಿನ ಪ್ರತಿಭಟನಾ ಶಕ್ತಿಯನ್ನು ಸರಿಯಾಗಿ ಅರ್ಥೈಸುವ ಸಾಮರ್ಥ್ಯವನ್ನು, ಜಯಶ್ರೀ ಪಡೆಯುವುದೇ ಆಕೆಯ ಜಯವಾಗುತ್ತದೆ. ಸಲಿಂಗಕಾಮಿ ಪತಿಯಿಂದ ದಾಂಪತ್ಯ ಸಂಬಂಧದ ಸಂತೋಷವನ್ನು ಆಸ್ವಾದಿಸಲಾಗದ ಅನಿವಾರ್ಯತೆಯನ್ನು, ವಾಸ್ತವ ಸತ್ಯವಾಗಿ ಆಕೆ ಕಂಡುಕೊಳ್ಳುತ್ತಾಳೆ. ಅನಗತ್ಯವಾದ ಈ ಸಂಬಂಧವನ್ನು ಕಡಿದುಹಾಕಿ, ಮುಂದಕ್ಕೆ ದಾರಿ ಹುಡುಕುತ್ತ ನಡೆಯುವುದೇ ವಿಜಯಕ್ಕೆ ಹತ್ತಿರವಾದ ದಾರಿಯಾಗುತ್ತದೆ. ತನ್ನೊಳಗಿನ ಸಂವೇದನೆಗಳನ್ನು ಅದುಮಿಟ್ಟು ಗಂಡನಿಗೆ ಹೊಂದಿಕೊಂಡು ಹೋಗಬೇಕೆಂಬ, ಸಾಮಾಜಿಕ ನಿರೀಕ್ಷೆಗಳು ಕಲ್ಪಿಸಿಕೊಟ್ಟ 'ನಾರ್ಮಲ್' ವ್ಯಕ್ತಿತ್ವದಿಂದಾಚೆಗೆ ಹೊರಬರಲು ಜಯಶ್ರೀ ಯತ್ನಿಸುತ್ತಾಳೆ.

ಇದ್ದುದನ್ನು ಇದ್ದಂತೆ ನೋಡಿಯಾದ ಮೇಲೆ ಅದನ್ನು ಸಹಿಸುತ್ತ ಉಳಿಯುವುದು ಕಷ್ಟದ ಕೆಲಸ. ಪ್ರಖರ ಸೂರ್ಯನಂತಿರುವ ಸತ್ಯವನ್ನು ಹೆಚ್ಚು ಹೊತ್ತು ನೋಡಲಾಗುವುದಿಲ್ಲ ಎಂಬ ತೀರ್ಮಾನಗಳು ಜಯಶ್ರೀಗೆ ಖಾಸಗಿ ವಿಶ್ವವನ್ನು ತನ್ನ ಮಗಳೊಂದಿಗೆ ನಿರ್ಮಿಸಿಕೊಳ್ಳಬಲ್ಲೆನೆಂಬ ಭರವಸೆ ನೀಡುತ್ತವೆ.

ಹೆಣ್ಣು ಅಬಲೆಯಲ್ಲ, ಸಬಲೆ. ಬದುಕಿನ ಅರ್ಥವನ್ನು ಶೋಧಿಸುವ ಹಕ್ಕು ಗಂಡಿನಷ್ಟೇ ಹೆಣ್ಣಿಗೂ ಇದೆ. ಗಂಡು ಸಿಡಿಯುವಂತೆ ಹೆಣ್ಣು ಸಿಡಿಯುತ್ತಾಳೆ. ಅರ್ಥಹೀನ ಬದುಕಿನಿಂದ ಬಿಡುಗಡೆ ಪಡೆಯುವುದರ ಕಡೆ ಆಕೆಯ ಒಲವಿರುವುದನ್ನು ಕಾಣಬಹುದು.

ದಾಂಪತ್ಯದ ಚೌಕಟ್ಟನ್ನು ಮುರಿದು ಹೊರಗೆ ಬರುವುದು ಗಂಡಿಗಿಂತ ಹೆಣ್ಣಿಗೆ ಹೆಚ್ಚು ಆತಂಕದ ವಿಷಯ. ಆರ್ಥಿಕ ಬಲವಿಲ್ಲದಿದ್ದಾಗ ಹೆಣ್ಣಿಗೆ ಇಂಥ ನಿರ್ಣಯ ಸುಲಭವಲ್ಲ. ಅವಳನ್ನು ವ್ಯವಸ್ಥೆ ಗ್ರಹಿಸುವ ರೀತಿಯೇ ಬೇರೆಯಾಗಿರುತ್ತದೆ. ಆದರೆ ದೇಸಾಯಿಯವರ ಪಾತ್ರಗಳಿಗೆ ಸಮಾಜಕ್ಕಿಂತಲೂ ವೈಯಕ್ತಿಕ ಬದುಕು ಮುಖ್ಯವಾಗುತ್ತದೆ. ಅದಕ್ಕೋಸ್ಕರ ಅವರು ಇಡೀ ವ್ಯವಸ್ಥೆಯನ್ನೇ ಧಿಕ್ಕರಿಸಿ ಧೈರ್ಯದಿಂದ ಹೊರಬಂದು ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ.

೨. ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ

ಈ ಅಂಶದ ಅಡಿ ಬಹಳಷ್ಟು ವಸ್ತುಗಳುಳ್ಳ ಕಥೆಗಳು ಇವೆ. ಆದರೆ ಒಟ್ಟಾರೆಯಾಗಿ ಸಂಪ್ರದಾಯ ಮತ್ತು ಆಧುನಿಕತೆಯ ಹಿನ್ನೆಲೆಯಲ್ಲಿ ದೇಸಾಯಿಯವರ ಕಥನ ಸಾಹಿತ್ಯವನ್ನು ಅಧ್ಯಯನ ಮಾಡುವ ಸಾಧ್ಯತೆಯಿದ್ದರೂ ಇಲ್ಲಿ ವಿಶೇಷವಾಗಿ 'ಕ್ಷಿತಿಜ' ಹಾಗೂ 'ಪರಿವರ್ತನೆ' ಕಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

'ಕ್ಷಿತಿಜ' ಕಥೆಯಲ್ಲಿ ಬರುವ ಮಂದಾಕಿನಿ ಆಧುನಿಕ ಭಾರತದ ಸಾಂಪ್ರದಾಯಿಕ ಹೆಣ್ಣು. ಆಧುನಿಕ ವಿದ್ಯಾಭ್ಯಾಸವನ್ನು ಪಡೆದ ಮಂದಾಕಿನಿ ಪಾಶ್ಚಾತ್ಯ ಸಂಸ್ಕೃತಿಗೆ ಮುಖಾಮುಖಿಯಾಗುವಾಗ ಅವಳಲ್ಲಿ ಉಂಟಾಗುವ ಸಂಘರ್ಷಗಳು ಈ ಕಥೆಯಲ್ಲಿ ಮುಖ್ಯವಾಗುತ್ತವೆ. ಇಲ್ಲಿ ಮಂದಾಕಿನಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಹೊರಟಿದ್ದಾಳೆ. ಭಾರತೀಯ ಸಂಸ್ಕೃತಿಯ ಪ್ರತೀಕಳಾದ ಮಂದಾಕಿನಿಗೆ, ಇನ್ನೂ ಇಲ್ಲಿನ ಆಚಾರ-ವಿಚಾರಗಳೇ ಅವಳ ತಲೆಯಲ್ಲಿವೆ. ಆದ್ದರಿಂದ ಹಡಗಿನ ಒಂದು ಮುಕ್ತವಾದ ಆಧುನಿಕ ಪರಿಸರಕ್ಕೆ ತನ್ನನ್ನು ತೆರೆದುಕೊಳ್ಳಲು ಮಂದಾಕಿನಿಗೆ ಸಾಧ್ಯವಾಗುವುದಿಲ್ಲ.

ಪ್ರಯಾಣದ ಪ್ರಾರಂಭದಲ್ಲಿಯೇ ಭಾರತೀಯರಾದರೂ ಸ್ವಚ್ಛಂದ ವೃತ್ತಿಯವರಾದ ಮಿಸ್ ಜೋಸೆಫ್ ಹಾಗೂ ಮುಖರ್ಜಿಯವರು, ಹಡಗಿನ ಮುಕ್ತ ಪರಿಸರದ ಲಾಭ ಪಡೆದು ಸುಖಿಸಬಯಸುತ್ತಾರೆ. ಆದರೆ ಈ ವರ್ತನೆ ಮಂದಾಕಿನಿಗೆ ಸೇರದೆ ಹೋದರೂ ಅದು ಅವಳ ಮನಸ್ಸಿನ ಸ್ಥಿರತೆಯನ್ನು ಕದಡುವುದಿಲ್ಲ. ಆದರೆ ಓರಿಯು ಅಮೇರಿಕನ್ ಪ್ರಯಾಣಿಕ ಹ್ಯಾರಿ ಮೆಕಾರ್ಥಿಯಿಂದ ಬರುವ

ಭಾರತೀಯರ ನೇರ ಟೀಕೆ ಅವಳ ಮೇಲೆ ಪರಿಣಾಮ ಬೀರುತ್ತದೆ. ''ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವನ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣುತ್ತದೆ. ಸಂಕೋಚ, ನಾಚಿಕೆ, ಅಧೈರ್ಯ, ಮೈ ಚಳಿ ಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೇ ಇಲ್ಲವೇನೋ ಇವರಿಗೆ''[೮] ಎಂದು ಹೇಳುತ್ತಾನೆ. ಇದು ಬದಲಾಗುತ್ತಿರುವ ಸಂಸ್ಕೃತಿಗೆ ಭಾರತೀಯರು ತಮ್ಮನ್ನು ಇನ್ನೂ ತೆರೆದುಕೊಳ್ಳುತ್ತಿಲ್ಲ ಎನ್ನುವುದನ್ನು ಸೂಚಿಸುತ್ತದೆ. ಬಾಲ್ಯದಿಂದಲೂ ಭಾರತೀಯ ಹಿನ್ನೆಲೆಯಲ್ಲಿ ಬೆಳೆದ ಮಂದಾಕಿನಿಗೆ ದಿಢೀರನೆ ಕಂಡ ಹಡಗಿನ ಹೊಸ ಪ್ರಪಂಚ ಅವಳಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ. ಮುಖರ್ಜಿಯ ಒರಟುತನಕ್ಕೆ ಮಂದಾಕಿನಿ ಪ್ರತಿಕ್ರಿಯಿಸುವ ರೀತಿ ತುಂಬಾ ಭಯಂಕರವಾಗಿರುತ್ತದೆ. ''ನಾನೆಂದರೆ ಯಃಕಶ್ಚಿತ್ ಹಾದಿಯ ಮೇಲಿನ ಹೆಣ್ಣೆಂದು ತಿಳಿದಿದ್ದಾನೆ. ಆತ! ಎಷ್ಟೊಂದು ಧೈರ್ಯವಾಗಿ ಏನೂ ನಾಚಿಕೆಯಿಲ್ಲದೆ ಕೇಳುವುದೆಂದರೇನು? ನಮ್ಮ ದೇಶವಾಗಿದ್ದರೆ ಚಪ್ಪಲಿಯಿಂದ ಹೊಡೆಯುತ್ತಿದ್ದೆ. ಪೋಲೀಸರ ಕೈಯಲ್ಲಿ ಕೊಡುತ್ತಿದ್ದೆ''[೯] ಎಂದು ಮಂದಾಕಿನಿ ಹೇಳುತ್ತಾಳೆ. ಈ ವಿಷಯ ಮೆಕಾರ್ಥಿಗೆ ಆಶ್ಚರ್ಯವೆನಿಸುತ್ತದೆ.

''ದೇವರೇ ಇಂಥವನ್ನೆಲ್ಲ ಇಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಾರೆಯೇ ನಿಮ್ಮ ದೇಶದಲ್ಲಿ? ಹಾಗಿದ್ದರೆ ಜೀವನ ಭಯಂಕರವಾಗಿರಬೇಕು ಅಲ್ಲಿ''[೧೦] ಮೆಕಾರ್ಥಿಯ ನೇರ ಮಾತುಗಳು ಮಂದಾಕಿನಿಯ ಅನೈಸರ್ಗಿಕ ರಕ್ಷಾಕವಚವನ್ನು ಭೇದಿಸುತ್ತದೆ. ಮನಸ್ಸಿಲ್ಲದಿದ್ದರೂ ಅವಳು ಮೆಕಾರ್ಥಿ ತರಿಸಿದ ಬಿಯರನ್ನು ಕುಡಿಯುತ್ತಾಳೆ.

ಆದರೆ ಮಂದಾಕಿನಿಯ ವ್ಯಕ್ತಿತ್ವದಲ್ಲಿ ನಿಜವಾದ ಪರಿವರ್ತನೆ ಪ್ರಾರಂಭವಾಗುವುದು ಫ್ರೆಂಚ್‌ಮನ್ ಪಾಲ್‌ಲೆಗ್ಗಿಯ ಸಹವಾಸದಲ್ಲಿ. ಮುಖರ್ಜಿಯ ಅನಾಗರಿಕ ವರ್ತನೆಗೆ ತೀರ ವಿರುದ್ಧವಾದ ಲೆಗ್ಗಿಯ ಸುಸಂಸ್ಕೃತ ನಡತೆ, ಭಾರತದ ಬಗ್ಗೆ ಅವನಲ್ಲಿರುವ ಪ್ರೇಮ ಮಂದಾಕಿನಿಯ ಮನಸ್ಸನ್ನು ಗೆಲ್ಲುತ್ತದೆ. ಲೆಗ್ಗಿಯ ಸಹವಾಸದಲ್ಲಿ ಮಂದಾಕಿನಿ ಮನಸ್ಸು ನಿಧಾನವಾಗಿ ತೆರೆಯುತ್ತದೆ. ಆದರೆ ತುಂಬಾ ಸಾಂಪ್ರದಾಯಿಕಳಾದ ಮಂದಾಕಿನಿಗೆ ಆಧುನಿಕ ಪರಿಸರ ತನ್ನ ಕಡೆಗೆ ಸೆಳೆದುಕೊಳ್ಳುತ್ತಿದ್ದರೂ, ಅದನ್ನು ಪರಿಪೂರ್ಣವಾಗಿ ಸ್ವೀಕರಿಸುವ ಸಾಮರ್ಥ್ಯ ಆಕೆಗಿಲ್ಲದೆ ಹೋಗುತ್ತದೆ. ಗಾಲಾ ಡಿನ್ನರಿನಲ್ಲಾದ ಅನುಭವಗಳು ಅವಳ ವ್ಯಕ್ತಿತ್ವದ ನಗ್ನ ಸತ್ಯವನ್ನು ಆಕೆಗೆ ತೆರೆದು ತೋರಿಸುತ್ತವೆ. ''ಸೇವೆಗೆ ಇಡಿಯ ಜೀವನ ಮುಡಿಪಾಗಿಡುವುದರಲ್ಲಿ ಉನ್ನತ ಆನಂದವಿದೆಯಲ್ಲವೆ?'' ಎಂಬ ಸಾರ್ಥಕ ಭಾವಕ್ಕೆ ಬದಲಾಗಿ ಇಂಗ್ಲೆಂಡಿಗೆ ಹೋಗಿ ಅಲ್ಲಿರಲು ತಾನು ಅಯೋಗ್ಯಳೆಂಬ ಭಾವನೆ ಅವಳನ್ನು ಮುತ್ತುತ್ತದೆ. ಭಾರತೀಯ ಸಂಪ್ರದಾಯದ ಆದರ್ಶವನ್ನು ಮೈಗೂಡಿಸಿಕೊಂಡ ಮಂದಾಕಿನಿ, ತನ್ನ ಜೀವನದಲ್ಲಿ ಮೊದಲ ಸಲ ಪಾಶ್ಚಾತ್ಯ ಸಂಸ್ಕೃತಿಯ ಆಘಾತಕ್ಕೆ ಒಳಗಾಗುತ್ತಾಳೆ. ಈ ಮುಖಾಮುಖಿಯ ಪರಿಣಾಮವಾಗಿ ಅವಳ ವ್ಯಕ್ತಿತ್ವದಲ್ಲಿ ಘಟಿಸುವ ಸೂಕ್ಷ್ಮ ಪರಿವರ್ತನೆಗಳನ್ನು, ಹೊಯ್ದಾಟಗಳನ್ನು ಈ ಕಥೆಯಲ್ಲಿ ಕಾಣಬಹುದು.

ಹಳೆಯ ಹಾಗೂ ಹೊಸ ಮೌಲ್ಯಗಳ ನಡುವಿನ ಸಂಘರ್ಷವನ್ನು 'ಪರಿವರ್ತನೆ' ಕಥೆಯಲ್ಲಿ ಕಾಣಬಹುದು. ಸಂಪ್ರದಾಯವಾದಿ ಚಂದ್ರೂ, ಪ್ರಗತಿಪರ ಚಿಂತನೆಯ ರಾಜಶೇಖರ, ಆಧುನಿಕ ನಾಗರೀಕತೆಯ ಪ್ರಭಾವಕ್ಕೆ ಒಳಗಾಗಿರುವ ಬೇಬಿ ಇವರ ನಡುವೆ ವೈಚಾರಿಕವಾದ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಬೇಬಿ ಕೆಳಜಾತಿಯ ಹುಡುಗನನ್ನು ಪ್ರೀತಿಸುತ್ತಾಳೆ. ಅವನೊಂದಿಗೆ ಮದುವೆಯಾಗಲು ನಿರ್ಧರಿಸುತ್ತಾಳೆ. ಆದರೆ ಹಳೆಯ ಮೌಲ್ಯಗಳಿಗೆ ಬದ್ಧವಾಗಿರುವ ಚಂದ್ರೂಗೆ ಮಗಳ ಈ ಕೃತ್ಯ ಒಪ್ಪಿಗೆಯಾಗುವುದಿಲ್ಲ. ಆದ್ದರಿಂದ ಮಗಳ ಇಂಥ ವರ್ತನೆಯಿಂದ ಚಿಂತೆಗೀಡಾಗಿ ಗೆಳೆಯ ರಾಜಶೇಖರನಲ್ಲಿ ಇದಕ್ಕೆ ಪರಿಹಾರ ಹುಡುಕಲು ಹೋಗುತ್ತಾನೆ.

ಚಂದ್ರೂ ಹಳೇಕಾಲದ ಪದ್ಧತಿಗಳಿಗೆ ಅಂಟಿಕೊಂಡಿರುವುದರಿಂದ ಯುವಕರ ಬದುಕಿನ ಹೊಸ ರೀತಿ-ನೀತಿಗಳು ಅವನಿಗೆ ಹಿಡಿಸುವುದಿಲ್ಲ. ತನ್ನ ಮಗಳು ಪ್ರೀತಿಸುತ್ತಿರುವ ಮಹೇಶನ ನಡತೆ ಸರಿಯಿಲ್ಲ ಎಂದು ತೆಗಳುತ್ತಾನೆ. ತನ್ನ ಮಗಳು ಮಹೇಶನೊಂದಿಗೆ ಓಡಿ ಹೋಗಿದ್ದರಿಂದ ತನ್ನ ಮರ್ಯಾದೆಗೆ ಕುಂದುಂಟಾಯಿತೆಂದು ಬಗೆದು ರಾಜಶೇಖರನ ಸಹಾಯದಿಂದ ಅವಳ ಮನಃಪರಿವರ್ತನೆ ಮಾಡಲು ಪ್ರಯತ್ನಿಸುತ್ತಾನೆ. ಆದರೆ ಬೇಬಿ ತನ್ನ ತೀರ್ಮಾನದಿಂದ ಹೊರಬರುವುದಿಲ್ಲ. ಆಗ ರಾಜಶೇಖರ "ಚಂದ್ರೂ, ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬಾರ್ದು ನಾವು ಮುದುಕರಾದಿವಿ. ಇನ್ನು ನಾವು ಹಳೇ ಫೀಡೀ ಜನ. ನಾವೇ ನಮ್ಮ ಮನಸ್ಸನ್ನು ಬದಲು ಮಾಡಿಕೊಳ್ಳಬೇಕು. ಅಂದರೇನೇ ನಮ್ಮ ಬಾಳುವಿ ಛಂದ"[೧೧] ಎಂದು ಚಂದ್ರೂಗೆ ಸಮಾಧಾನ ಹೇಳುತ್ತಾನೆ. ಇಲ್ಲಿ ಸಾಂಪ್ರದಾಯಿಕವಾದ ವಿಚಾರಗಳನ್ನು ಟೀಕೆ ಮಾಡುವುದರ ಮುಖಾಂತರ ಆಧುನಿಕ ವಿಚಾರಗಳಿಗೆ, ಮನಸ್ಸುಗಳಿಗೆ ಮಾನ್ಯತೆ ನೀಡಲಾಗಿದೆ.

೩. ಲೈಂಗಿಕ ಬದುಕಿನ ಸಂಬಂಧಿ ಸಂಘರ್ಷ

ಕಾಮ ಅಥವಾ ಲೈಂಗಿಕತೆ ಎನ್ನುವುದು ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದು. ಆದ್ದರಿಂದ ಅದರ ವಿನ್ಯಾಸದಲ್ಲಿ ಜೀವನ ವಿನ್ಯಾಸವನ್ನು ದೇಸಾಯಿಯವರು ಕಂಡುಕೊಂಡಿದ್ದಾರೆ. ಹಾಗಾಗಿ ಇವರು ಕಾಮವನ್ನೇ ತಮ್ಮ ಸಾಹಿತ್ಯದ ಕೇಂದ್ರವನ್ನಾಗಿ ಮಾಡಿಕೊಂಡು ಆ ಮೂಲಕ ಬದುಕನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಾರೆ. ದೇಸಾಯಿಯವರಿಗೆ ಕಾಮ ಜೀವನದ ಸಾಫಲ್ಯ ಹಾಗೂ ವೈಫಲ್ಯಗಳನ್ನು ಅಳೆಯುವ ನಿಕಷವಾಗುತ್ತದೆ. ದೇಸಾಯಿಯವರ ಸಾಹಿತ್ಯದಲ್ಲಿ ಕಾಮ ವ್ಯಕ್ತಿತ್ವದ ಅನನ್ಯತೆಯನ್ನು ಗುರುತಿಸುವ ಅಥವಾ ವ್ಯಕ್ತಿತ್ವವನ್ನು ನಿರ್ಧರಿಸುವ ಮೌಲ್ಯಮಾಪಕವಾಗಿ ಬರುತ್ತದೆ. ಚ.ಸರ್ವಮಂಗಳ ಅವರ ಅಭಿಪ್ರಾಯದಲ್ಲಿ "ಕಾಮ ದೇಸಾಯಿಯವರಿಗೆ ವ್ಯಾಮೋಹದ ಸಂಗತಿಯಿಲ್ಲ, ಲೋಲುಪತೆಯ ಅಂಶವೂ ಇಲ್ಲ. ಕಾಡುವ ಗೀಳೂ ಅಲ್ಲ, ಆದರೆ ತಿಳುವಳಿಕೆಯ ಜೀವನಾನುಭವದ ಪ್ರಮುಖ ಘಟ್ಟ." ಆ ಮೂಲಕವೇ ಜೀವನವನ್ನು ನೋಡುವ ಕ್ರಮ ದೇಸಾಯಿಯವರು ಕೈಗೊಂಡಿದ್ದಾರೆ.

ಕನ್ನಡ ನವ್ಯ ಸಾಹಿತ್ಯದ ಸಂದರ್ಭದಲ್ಲಿ ಈ ಬಗೆಯ ಪ್ರಯೋಗಶೀಲತೆ ಬಹಳಷ್ಟು ಲೇಖಕರಲ್ಲಿ ಕಂಡುಬರುತ್ತದೆ. ಈ ಮೇಲ್ಕಂಡ ಶೀರ್ಷಿಕೆಯಡಿ ಚರ್ಚಿತವಾದ ದೇಸಾಯಿಯವರ ಕಥೆಗಳೆಲ್ಲವೂ ಈ ಹಿನ್ನೆಲೆಯಲ್ಲಿಯೇ ರಚಿತವಾದಂಥವು.

ತೃಪ್ತ ಹಾಗೂ ತಪ್ತ ಸ್ಥಿತಿಗಳ ನಡುವಿನ ದ್ವಂದ್ವವನ್ನು ತನ್ನ ನಿರೂಪಣೆಯಲ್ಲಿ ಬಿಗಿಯಾಗಿ ಹಿಡಿದಿಟ್ಟುಕೊಂಡಿರುವ ಕಥೆ 'ತೃಪ್ತ.' ಕಥಾನಾಯಕ ವಿಶ್ವನಾಥನ ತಪ್ತ ಸ್ಥಿತಿಗೆ ಹೆಂಡತಿ ಪದ್ಮಿನಿ ಬಗೆಗಿನ ಲೈಂಗಿಕ ಅಸೂಯೆ ಕಾರಣವಾಗಿದೆ. ತೃಪ್ತ ಸ್ಥಿತಿಗೆ ತನ್ನ ಮನಸ್ಸನ್ನು ತರಲು ಆತ ನಡೆಸುವ ಪ್ರಯತ್ನಗಳ ಹಿಂದೆ ಆತನದೇ ಆದ ತರ್ಕವೊಂದಿದೆ.

"...ಹೀಗೆಲ್ಲ ಜೀವನಕ್ಕೆ ಸರಳ ರೂಪುಕೊಟ್ಟರೆ ಜೀವನದಲ್ಲಿಯ ಸಮಸ್ಯೆಗಳನ್ನೆಲ್ಲ ನಿರ್ನಾಮ ಮಾಡಿಬಿಡಬಹುದು! ಹೀಗೆ ನಿರ್ನಾಮ ಮಾಡುವುದರಲ್ಲಿಯೇ ಸುಖವಿದೆ, ಶಾಂತಿಯಿದೆ, ತೃಪ್ತಿಯಿದೆ..."[೧೨] ಕೆಲವೊಂದು ಸಲ ಅವನಿಗೆ ಈ ತರ್ಕವನ್ನು ಮೀರಿ ಸಿಟ್ಟು ಬರುತ್ತದೆ. ಪತ್ನಿಯ ಬಗೆಗಿನ ಸಂಶಯವನ್ನು ಹೊಡೆದು ಹಾಕುವ ಅವನ ನಿರ್ಧಾರ ಒಂದು ರೂಢಿಯ ಕ್ರಿಯೆಯಾಗಿ ಹೋಗಿದೆ. ಆದರೆ ಕೆಲವೊಂದು ಸಾರಿ ಆತನ ಸುತ್ತಲಿನ ಸಮಾಜ ಹಾಗೂ ಕೆಲವೊಂದು ಸಂಗತಿಗಳು ಸ್ಥಿಮಿತತೆಯನ್ನು ಕಳೆದುಕೊಳ್ಳುವಂತೆ ಮಾಡುತ್ತಿರುತ್ತವೆ. ಅಂಥ ಸಂದರ್ಭದಲ್ಲಿ ಅವನು ಮನಸ್ಸಿನಲ್ಲಿಯೇ ಸಿಡಿಮಿಡಿಗೊಳ್ಳುತ್ತಿರುತ್ತಾನೆ. ವಿಶ್ವನಾಥ ಅನೇಕ ಸಲ ಪದ್ಮಿನಿ ಬಗೆಗೆ ಸಂಶಯಪಟ್ಟಾಗಲೆಲ್ಲ, ಅವಳು ಕೊಟ್ಟ ಕಾರಣದಿಂದ ತೃಪ್ತನಾಗುತ್ತಿರುತ್ತಾನೆ. ಆದರೆ ಈ ರೀತಿ ತಾನು ಹೊಂದುತ್ತಿದ್ದ ಸಮಾಧಾನ ತಮ್ಮ ಸಂಬಂಧಗಳ ವಿಘಟನೆಯನ್ನು ಉದ್ದೇಶಪೂರ್ಣವಾಗಿ ತಡೆಯುವ ಯತ್ನವಾಗಿತ್ತೆಂಬುದು ಆತನ ಅರಿವಿಗೆ ಬರುತ್ತದೆ.

"...ಯಾಕೆ ಇಷ್ಟು ತಡವಾದದ್ದು? ಎಂದು ಕೇಳಿದಾಗ ಆಕೆ ಥಪ್ಪನೆ ಅವನ ಮುಖದ ಮೇಲೆ ಸತ್ಯವನ್ನೇ ಉಗುಳಿಬಿಟ್ಟರೆ, ವಿಶ್ವನಾಥನಿಗೆ ವಿಚಿತ್ರ ಭಯವಾಯಿತು. ಡಾ. ಪಾರೀಖರ ಜೊತೆಗಿದ್ದೆ. ಇಷ್ಟು ತಿಳಿಬಾರದೆ ನಿನ್ನ ದಟ್ಟವಾದ ಮಿದುಳಿಗೆ? ಎಂದು ಅವಳು ಖಡಾಖಂಡಿತವಾಗಿ ಹೇಳಿಬಿಟ್ಟರೆ? ಹಾಗೆ ಅವಳು ಅಂದುಬಿಟ್ಟರೆ, ತಾನೂ 'ಹಾಗಾದರೆ ಅವನ ಜೊತೆಗೇ ಹೋಗಿ ಬಿಡು. ಇಲ್ಲಿಗೇಕೆ ಬಂದಿ' ಎಂದು ಹೇಳಬೇಕಾಗುವುದಲ್ಲ ಎಂದು ಅಸ್ವಸ್ಥಗೊಂಡ."[೧೩]

ತಾವು ಪರಸ್ಪರ ಹೊಂದಿರುವ 'ಅಧಿಕಾರ' ಭಾವನೆಯನ್ನೇ ಪ್ರೇಮವೆಂದು ಭ್ರಮಿಸುವ ದಂಪತಿಗಳಿಗೆ ದಾಂಪತ್ಯ ಜೀವನವು ನೀರಸ, ಶೂನ್ಯವೆನಿಸುವ ಘಳಿಗೆಗಳನ್ನು ದೇಸಾಯಿಯವರ ಹಲವಾರು ಕಥೆಗಳಲ್ಲಿ ಕಾಣಬಹುದು. ಅಧಿಕಾರ ಭಾವನೆ ಇದ್ದಲ್ಲಿ ಲೈಂಗಿಕ ಅಸೂಯೆ ಸಹಜವಾಗಿಯೇ ಹೊಗೆಯಾಡತೊಡಗುತ್ತದೆ. ಮನೆಯಾಚೆಗಿನ ಹೆಣ್ಣಿನ ಚಟುವಟಿಕೆಗಳು ಗಂಡಿಗೆ ಸಹಿಸಲಾರದ ತುತ್ತಾಗಲಾರಂಭಿಸುತ್ತವೆ. ಆದರೂ ಸಂಬಂಧವನ್ನು ಕಡಿದುಕೊಂಡು ಶೂನ್ಯದಲ್ಲಿ ಬಾಳುವ ಧೈರ್ಯ ವಿಶ್ವನಾಥನಿಗಿಲ್ಲ. ಹಾಗಾಗಿ ಒಂದು

ಬಗೆಯ ಮಂದ ತುಯ್ತದಲ್ಲೇ ಬದುಕಿನ ಗತಿ ಸಾಗಿಹೋಗುವ ಪರಿಯನ್ನು ವಿಶ್ವನಾಥನ ಕ್ಷಣಕ್ಷಣಕ್ಕೂ ಬದಲಾಗುವ ಆಲೋಚನಾ ಲಹರಿಯಲ್ಲಿ ಕಾಣಬಹುದು.

'ನಿರ್ಣಯ' ಕಥೆಯಲ್ಲಿ ಬರುವ ಗಂಗಿ ತನ್ನ ಗಂಡ ಮಲ್ಲೇಶಿಯಿಂದ ಯಾವುದೇ ರೀತಿಯ ಸುಖವನ್ನು ಪಡೆಯದ ಹೆಣ್ಣು. ಅಂಥ ಸಂದರ್ಭದಲ್ಲಿ ಆಕೆಯ ಮನಸ್ಸು ಸಹಜವಾಗಿ ಬೇರೆ ಕಡೆಗೆ ತುಡಿಯುತ್ತದೆ. ಇದು ಮಲ್ಲೇಶಿಗೆ ಗೊತ್ತಿದ್ದರೂ ತನ್ನ ತಪ್ಪನ್ನು ಮುಚ್ಚಿಕೊಂಡು ಹೆಂಡತಿಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ಅವಳನ್ನು ಹಿಂಸಿಸುತ್ತಿರುತ್ತಾನೆ. ಆದರೆ ಗಂಗಿ ತನ್ನನ್ನು ಸರಿಯಾಗಿ ನೋಡಿಕೊಳ್ಳದ, ತನಗೆ ತೃಪ್ತಿ ನೀಡದ ಗಂಡನ ವಿರುದ್ಧ ಪ್ರತಿಭಟಿಸುತ್ತಿರುತ್ತಾಳೆ. ತುಂಬಾ ಒರಟನಾದ ಮಲ್ಲೇಶಿಗೆ ದುಡಿಯುವುದು ಮಾತ್ರ ಗೊತ್ತು. ಹೆಣ್ಣಾದವಳಿಗೆ ಏನು ಬೇಕು, ಏನು ಬೇಡ ಅಂತ ತಿಳಿದುಕೊಳ್ಳುವಷ್ಟು ವ್ಯವಧಾನ ಆತನಲ್ಲಿಲ್ಲ. ಹೆಂಡತಿಯ ಸೂಕ್ಷ್ಮ ಮನಸ್ಸನ್ನು ಅರ್ಥಮಾಡಿಕೊಳ್ಳದ ಮಲ್ಲೇಶಿ ತನ್ನ ವೈಯಕ್ತಿಕ ಸಮಸ್ಯೆಯನ್ನು ಪಂಚಾಯ್ತಿ ಕಟ್ಟೆಯವರೆಗೆ ತರುತ್ತಾನೆ. ಅಲ್ಲಿ ಊರಿನ ಗೌಡ ಆಕೆಯನ್ನು ಹಿಂಸೆಗೆ ಒಳಪಡಿಸುವುದರ ಮೂಲಕ ಸರಿ ದಾರಿಗೆ ತರಲು ಪ್ರಯತ್ನಿಸುತ್ತಾನೆ. ಹಾಗೆ ನೋಡಿದರೆ ಗೌಡನಿಗೆ ಗಂಗಿಯ ಮನಸ್ಥಿತಿ ಏನು ಅಂತ ತಿಳಿದಿರುತ್ತದೆ. ಅದಕ್ಕೆ ಅವರು ಮಲ್ಲೇಶಿಗೆ ''ಹುಚ್ಚ ರಂಡೆ ಗಂಡ, ಹೆಂಡತಿ ಅಂದರ ಏನಂತ ತಿಳಿದಿಯೋ, ಹುಚ್ಚ? ಅವಳಿಗೆ ಏನು ಬೇಕು ಏನು ಬ್ಯಾಡ ಅವಳಿಗೂ ಸ್ವಲ್ಪ ಮನಸ್ಸಿರ್ತದ, ಹೃದಯ ಇರ್ತದ ಅನ್ನೋ ಮಾತು ಮರೆತು ನೀನು ನಿನ್ನ ಕೆಲಸದಾಗ ಗರ್ಕ ಆದಿ ಅಂದರ ಮುಗೀತು... ದಾರೀಲೆ ಹೋಗೋ ನಾಯಿ ಮೂಸಿ ನೋಡಲಿಕ್ಕೆ ಸುರುಮಾಡ್ತಾವ''[೧೪] ಎಂದು ಬುದ್ಧಿವಾದ ಹೇಳುತ್ತಾನೆ. ಇಲ್ಲಿ ಹೆಣ್ಣಿನ ನಿಜವಾದ ಭಾವನೆಯನ್ನು ಗಂಡು ಅರ್ಥಮಾಡಿಕೊಳ್ಳುತ್ತಿಲ್ಲ ಎನ್ನುವುದನ್ನು ಸೂಚಿಸುತ್ತದೆ. ಅಂಥ ಸಂದರ್ಭದಲ್ಲಿ ಆಕೆಯನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿ ಸಿಕ್ಕಾಗ ಸಹಜವಾಗಿ ಆಕೆ ಆ ಕಡೆಗೆ ವಾಲುತ್ತಾಳೆ. ಹೀಗಾಗಿ ತುಂಬಾ ನಿರ್ಲಿಪ್ತವಾಗಿದ್ದ ಗಂಗಿ ಇಡೀ ವ್ಯವಸ್ಥೆಯನ್ನೇ ಧಿಕ್ಕರಿಸಿ ಶಂಕರ್ಯಾನ ಜೊತೆಗೆ ಹೋಗುತ್ತಾಳೆ.

'ರಾಕ್ಷಸ' ಕಥೆ ವಿವಾಹ ಹಾಗೂ ವಿವಾಹಬಾಹಿರ ಸಂಬಂಧಗಳ ಸಮಸ್ಯೆಗಳಲ್ಲಿ ಹುಟ್ಟಿಕೊಳ್ಳುತ್ತದೆ. ತನಗಿಂತಲೂ ವಯಸ್ಸಿನಲ್ಲಿ ಚಿಕ್ಕವನಾದ ಕಮಲಾಕರನನ್ನು ಸಂಧಿಸುವ ಮೊದಲೇ ನಳಿನಿಯಲ್ಲಿ ತನ್ನ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಅನಾಸ್ಥೆ ಹುಟ್ಟಿಕೊಂಡಿರುತ್ತದೆ. ''ನನ್ನ ಕೂಡ ಇವರ ಮಾತು ಮುಗಿದು ಹತ್ತು ಹನ್ನೊಂದು ವರ್ಷಗಳಾಗಿರಬೇಕು. ''ಕಮಲಾಕರನನ್ನು ಕಂಡಾಗ ಅವಳಿಗೆ ಇದುವರೆಗೂ ಅದೃಶ್ಯನಾಗಿದ್ದ ತನ್ನ ಹಿಂದಿನ 'ರಾಕ್ಷಸ'ನ ಅರಿವಾಗುತ್ತದೆ.

ತನ್ನ ಗಂಡನಿಂದ ಯಾವುದೇ ರೀತಿಯ ಸುಖವನ್ನು ಕಾಣದ ನಳಿನಿ, ತರುಣ ಕಮಲಾಕರನ ಬಗ್ಗೆ ಅನುರಕ್ತಳಾಗುತ್ತಾಳೆ. ಬಹಳ ವರ್ಷಗಳಿಂದ ಅದುಮಿಟ್ಟುಕೊಂಡ ಕಾಮಭಾವನೆಗಳೆಲ್ಲ ಕಮಲಾಕರನನ್ನು ಸಂಧಿಸಿದಾಗ ಜಾಗೃತಗೊಳ್ಳುತ್ತವೆ. ಆದರೆ ಮುಂದೆ ಕಮಲಾಕರನ ಪರಿಚಯ ಬೆಳೆದು ಗಂಡ

ಮನೆಯಲ್ಲಿಲ್ಲದ ಒಂದು ದಿನ ಅವನು ಮನೆಗೆ ಬಂದಾಗ ಈ ನಿಶ್ಚಯ ಸಡಿಲವಾಗಿ ಅವಳು ರಾಕ್ಷಸನಿಗೆ ಸಂಪೂರ್ಣವಾಗಿ ಶರಣಾಗುತ್ತಾಳೆ. ತನ್ನ ಗಂಡನನ್ನು ಬಿಟ್ಟು ಕಮಲಾಕರನನ್ನು ಸೇರಿದ ನಳಿನಿಗೆ ರಾಕ್ಷಸ ಹೊಸ ಜೀವ ಕೊಡುತ್ತಾನೆ. ನಳಿನಿಗೆ ಕಮಲಾಕರನ ಜೊತೆಗಿನ ಸಂಬಂಧ ಶಾಶ್ವತ ಅಲ್ಲ ಅಂತ ಗೊತ್ತಿರುತ್ತದೆ. ಆದರೂ ಅವನ ಸಂಬಂಧವನ್ನು ಬೆಳೆಸುತ್ತಾಳೆ. ತನ್ನ ವಶದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಜೀವನೋತ್ಸಾಹವನ್ನು ಕಳೆದುಕೊಂಡ ಕಮಲಾಕರ ನಿರ್ಜೀವವಾಗುತ್ತಾನೆ. ತುಂಬಾ ಬುದ್ಧಿವಂತನಾದ ಕಮಲಾಕರ ನಳಿನಿಯಿಂದ ದೂರವಾಗಲು ಪ್ರಯತ್ನಿಸುತ್ತಾನೆ. 'ಇದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾದಂತಿದೆ' ಎಂದು ಹೇಳುತ್ತಾನೆ. ಅವನ ಉದ್ದೇಶವನ್ನು ಅರಿತ ನಳಿನಿ "ನಿನ್ನ ಚಿಂತೆ ನೋಡಿದರೆ, ನಿನ್ನ ಜೀವನವೇ ಹಾಳಾದಂತಿದೆ... ಹೋ ಈಗ ತಿಳೀತು -ನಿನಗೆ ನಿಜವಾಗಿ ಬೇಕಾದದ್ದು ಗುಪ್ತವಾದ ವ್ಯವಹಾರ ಮಾತ್ರ ಅಲ್ಲವೇ?"[೧೫] ಎಂದು ಹೇಳುತ್ತಾಳೆ. ಇಲ್ಲಿ ಕಮಲಾಕರ ಸುಖವನ್ನು ಮಾತ್ರ ಬಯಸುತ್ತಿದ್ದಾನೆಯೇ ಹೊರತು ಜವಾಬ್ದಾರಿಯನ್ನಲ್ಲ ಎನ್ನುವುದು ಅರ್ಥವಾಗುತ್ತದೆ. ಅದಕ್ಕೋಸ್ಕರ ಆಕೆಗೆ ಅವನನ್ನು ತಿರಸ್ಕರಿಸುವ ನಿರ್ಧಾರ ಕೂಡ ರಾಕ್ಷಸ ಪಾತಳಿಯಿಂದಲೇ ಬರುತ್ತದೆ. ಹೀಗಾಗಿ ಜೀವನೋತ್ಸಾಹವನ್ನು ಕಳೆದುಕೊಳ್ಳದ ನಳಿನಿ ಹೊಸ ಚೈತನ್ಯದೊಡನೆ ಭವಿಷ್ಯವನ್ನು ಎದುರು ನೋಡುತ್ತಾಳೆ. "ನಾವಿಬ್ಬರೂ ಕೂಡಿ ಕೆಲಸ ಮಾಡಿದರೆ ಇಂಥ ನೂರಾರು ಜನರನ್ನು ನಾವು ಕುಣಿದಾಡಿಸಬಹುದು, ಅಳಿಸಬಹುದು, ಹಿಂಡಿ ಹಿಪ್ಪಿ ಮಾಡಿ ಒಗೆಯಬಹುದು."[೧೬]

'ಸಹೋದರ' ಕಥೆಯಲ್ಲಿಯೂ ರಾಕ್ಷಸ ಕಾಣಿಸಿಕೊಳ್ಳುತ್ತಾನೆ. ಅಡುಗೆಯಾಕೆಯ ಮಗಳು ಕಮಲಿಯ ಮೇಲೆ ಪೆದ್ದ ಗುಂಡನ ಲೈಂಗಿಕ ಆಕ್ರಮಣ ಒಂದು ಅನಿಯಂತ್ರಿತ ನೈಸರ್ಗಿಕ ಪ್ರವೃತ್ತಿಯಾಗಿ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಈ ಅಪರಾಧಕ್ಕಾಗಿ ಗುಂಡೂ ಅನುಭವಿಸುವ ಶಿಕ್ಷೆಯಾದ ಆತ್ಮಹತ್ಯೆ ಅವನ ಸಹೋದರ ಶೇಷ ವಿಧಿಸುವ ಶಿಕ್ಷೆಗಿಂತ ಕ್ರೂರವಾದದ್ದು. ಗುಂಡೂನ ಸಾವಿಗೆ ಆತ್ಮಹತ್ಯೆಯೇ ಕಾರಣವಾಗಿದ್ದರೂ ಅದಕ್ಕೆ ಶೇಷ ತಾನೇ ಹೊಣೆಯೆಂದು ಹೇಳುವುದರಲ್ಲಿ ಅವನ ಹೆಂಡತಿ ಗಂಗೂಗೆ ಅರ್ಥವಾಗದ ರಹಸ್ಯವಿದೆ. ಗುಂಡನಿಗಿಂತ ಹೆಚ್ಚಾಗಿ ಶೇಷನಲ್ಲಿಯೇ ಅಪರಾಧ ಭಾವನೆ ಕಾಣಿಸಿಕೊಳ್ಳುವುದಕ್ಕೆ ಕಾರಣವೆಂದರೆ ಲೈಂಗಿಕ ಅಸೂಯೆಯ ಅರಿವು. ಶೇಷ ಕೂಡ ಕಮಲಿಯನ್ನು ಬಯಸಿದವನೇ. ಆದರೆ ಗುಂಡೂನ ಕೃತಿ ಅವನಿಗೆ ಸಾಧ್ಯವಾಗಿರುವುದಿಲ್ಲ. ಅವನು ಗುಂಡೂನಿಗೆ ವಿಧಿಸುವ ದೈಹಿಕ ದಂಡನೆಯ ಹಿಂದೆ ನೈತಿಕ ಆವೇಶಕ್ಕಿಂತ ಅಸೂಯೆಯೇ ಕೆಲಸ ಮಾಡಿರುತ್ತದೆ.

ಗಂಡು-ಹೆಣ್ಣಿನ ನಡುವಿನ ಸಂಘರ್ಷಕ್ಕಿಂತ ಗಂಡು-ಗಂಡುಗಳ ನಡುವಿನ ಸಂಘರ್ಷ ಹಾಗೂ ಹೆಣ್ಣು-ಹೆಣ್ಣುಗಳ ನಡುವಿನ ಸಂಘರ್ಷದ ಸ್ವರೂಪ ತುಂಬಾ ಭಯಂಕರವಾಗಿರುತ್ತದೆ. ಈ ಘಟನೆಗೆ ಕಮಲಿಯಿಂದ ಬರುವ ಪ್ರತಿಕ್ರಿಯೆ ಇನ್ನೂ ಹೆಚ್ಚು ಜಟಿಲವಾದದ್ದು. ಅವಳೇ ಗುಂಡೂನನ್ನು ಲೈಂಗಿಕ ಕ್ರಿಯೆಗೆ ಪ್ರಚೋದಿಸಿರುವ ಸಂಭವವನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಈ ಆರೋಪವನ್ನು ಶೇಷನ

[illegible]

ಮೇಲೆ ಹೊರಿಸಿ ಅವಳು ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸುತ್ತಾಳೆ. ಘಟನೆಯ ಬಗ್ಗೆ ಅವಳಲ್ಲಿ ಅಪರಾಧ ಭಾವನೆಯಿರುವುದಿಲ್ಲವಷ್ಟೇ ಅಲ್ಲದೆ ಅದನ್ನು ಅವಳು ವ್ಯಾವಹಾರಿಕ ಲಾಭ ಪಡೆಯುವುದಕ್ಕೆ ಬಳಸಿಕೊಳ್ಳುತ್ತಾಳೆ. ಹೀಗಾಗಿ ಇಲ್ಲಿ ಲೈಂಗಿಕ ಅಸೂಯೆಯ ಕಾರಣಕ್ಕಾಗಿ, ಅಣ್ಣ-ತಮ್ಮರ ನಡುವಿನ ಸಂಘರ್ಷ ಸಾವಿನ ಮೂಲಕ ಪರ್ಯಾವಸಾನಗೊಳ್ಳುತ್ತದೆ.

ಕಟ್ಟುಪಾಡುಗಳಿರುವ ನಾಗರಿಕ ಜಗತ್ತಿನಲ್ಲಿ ಮನುಷ್ಯನಿಗೆ ಕೆಲವೊಂದು ಭಾವನೆಗಳನ್ನು ಹೊರ ಹಾಕಲಿಕ್ಕೆ ಸಾಧ್ಯವಾಗಿರುವುದಿಲ್ಲ. ಅಂಥ ಭಾವನೆಗಳು ಹೊರಬರಲಿಕ್ಕೆ ಕೆಲವೊಂದು ಸಂದರ್ಭ ಹಾಗೂ ಸನ್ನಿವೇಶಗಳಿಗಾಗಿ ಕಾಯುತ್ತಿರುತ್ತವೆ. ಅದು ಒದಗಿಬಂದಾಗ ಅವು ಜಾಗೃತಗೊಳ್ಳುತ್ತಿರುತ್ತವೆ. 'ಯಥಾಕಾಷ್ಠಂಚ ಕಾಷ್ಠಂಚ'ದ ಶಾರದಾಬಾಯಿ ಈ ತೆರನಾದ ಸ್ಥಿತಿಗೆ ಒಳಪಟ್ಟಂತ ಹೆಣ್ಣು. ಇವಳು ಮಧ್ಯವಯಸ್ಸಿನ ವಿಧವೆ, ಬಹಳ ವರ್ಷಗಳಿಂದ ಲೈಂಗಿಕ ಸುಖದಿಂದ ವಂಚಿತಳಾಗಿ ಉಳಿದವಳು. ಈ ಸುಖವನ್ನು ಆಕೆ ಪಡೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಸಮಾಜದಲ್ಲಿ ಒಂದು ಉನ್ನತ ಹುದ್ದೆಯಲ್ಲಿ ಶಾರದಾಬಾಯಿ ಇದ್ದಾಳೆ. ಈ ಕಾರಣಕ್ಕೆ ಬಲವಂತವಾಗಿ ಆಕೆ ಕಾಮನೆಗಳನ್ನು ಅದುಮಿಟ್ಟುಕೊಂಡಿದ್ದಾಳೆ. ಹಾಗಾಗಿ ಆಕೆ ಆಂತರಿಕ ಸಂಘರ್ಷಕ್ಕೆ ಒಳಗಾಗಿದ್ದಾಳೆ. ಅವಳೊಳಗಡೆ ಇರುವಂಥ ಲೈಂಗಿಕ ಪ್ರಜ್ಞೆ, ಕೃಷ್ಣಕುಮಾರನನ್ನು ಸಂಧಿಸಿದಾಗ ತೀವ್ರವಾಗಿ ಜಾಗೃತಗೊಳ್ಳುತ್ತದೆ. ಅಂಥ ಸಂದರ್ಭದಲ್ಲಿ ಆಕೆ ತಮ್ಮ ಸಂಬಂಧಗಳಿಗೆ ಸಾಮಾಜಿಕತೆಯ ಆವರಣ ತೊಡಿಸಲಿಚ್ಛಿಸದೆ ತನ್ನೊಳಗಿನ ಕಾಮನೆಗಳನ್ನು ಕಂಡುಕೊಂಡದ್ದು ಮುಖ್ಯವಾಗುತ್ತದೆ. ಒಂದು ಮೃದು ಲೈಂಗಿಕ ಆಟ ಬಯಸಿ ಅವನನ್ನು ಶಾರದಾ ಸಂಪೂರ್ಣವಾಗಿ ಆಕ್ರಮಿಸಿಬಿಡುತ್ತಾಳೆ. "ಶಾರದಾಬಾಯಿ ಹುಲಿಯಾದಳು... ಕುಮಾರನ ಕೋಟಿನ ಕಾಲರನ್ನು ಹಿಡಿದು ಅವನ ಕತ್ತು ಬಗ್ಗಿಸಿ ಬಲವಾಗಿ ಮುದ್ದಿಸಿದಳು. ಇನ್ನು ನೀನು ಪಾರಾಗಲಾರೆ."[೧೭] ಅವನನ್ನು ಯಾವ ರೀತಿಯಲ್ಲಾದರೂ ಪರವಾಗಿಲ್ಲ ಅವನು ಬೇಕು ಎನ್ನುವುದನ್ನು ವ್ಯಕ್ತಪಡಿಸುತ್ತಾಳೆ. ಆ ಮೂಲಕವಾಗಿ ಆಕೆ ತನ್ನ ಬರಡಾದ ವ್ಯಕ್ತಿತ್ವಕ್ಕೆ ಹೊಸ ಜೀವಕಳೆಯನ್ನು ತುಂಬಿಕೊಳ್ಳುತ್ತಾಳೆ. "ಇಲ್ಲಿ ಶಾರದಾಬಾಯಿಯ ಲೈಂಗಿಕ ತುಡಿತ ಅನ್ನುವಂಥದ್ದು ಕೇವಲ ಶಾರೀರಿಕ ಮಟ್ಟದ್ದಾಗಿರದೆ, ಅವಳ ಬದುಕು ಆ ಮೂಲಕವಾಗಿ ಅರಳುವ ಚೈತನ್ಯಶಾಲಿ ಪ್ರಕ್ರಿಯೆ ಕೂಡ ಆಗಿದೆ"[೧೮] ಎನ್ನುವುದನ್ನು ಗಂಗಾನಾಯಕ ಅವರು ಅಭಿಪ್ರಾಯ ಪಡುತ್ತಾರೆ.

'ಶೋಭನೆಯ ಹಾದಿ' ಕಥೆಯಲ್ಲಿ ಬರುವ ಶೋಭಾಳ ಮನಸ್ಥಿತಿ ಇದಕ್ಕಿಂತ ಭಿನ್ನವಾದುದು. ಹೈಸ್ಕೂಲ್ ವಿದ್ಯಾರ್ಥಿನಿಯಾದ ಶೋಭಾ ವಿದ್ಯಾಭ್ಯಾಸಕ್ಕೆಂದು ಅಕ್ಕನ ಮನೆಯಲ್ಲೇ ಉಳಿದುಕೊಂಡಿರುತ್ತಾಳೆ. ತನ್ನ ವಯಸ್ಸಿನ ಸಹಜ ಸೆಳೆತದಿಂದಾಗಿ, ಅಕ್ಕನ ಗಂಡನಾದ ರಘೂನ ಪ್ರೀತಿಗೆ ಮರುಳಾಗುತ್ತಾಳೆ. ಆತನೊಂದಿಗೆ ಸಂಬಂಧ ಹೊಂದಿ ಗರ್ಭಿಣಿಯಾಗುತ್ತಾಳೆ. ಇದರಿಂದ ನೈತಿಕವಾಗಿ ಸಂಕಟಕ್ಕೆ ಒಳಗಾಗುತ್ತಾಳೆ. ಮೊದಲೆಲ್ಲ ಶೋಭಾಳನ್ನು ಪ್ರೀತಿಸುವುದಾಗಿ ನಟನೆ ಮಾಡಿದ ಅವಳ ಭಾವ ರಘು, ಆಕೆ ಗರ್ಭಿಣಿಯಾದ

ಮೇಲೆ ಮದುವೆಯಾಗುವ ನೈತಿಕ ಹೊಣೆಯಿಂದ ತಪ್ಪಿಸಿಕೊಳ್ಳಲು ನಾನಾ ಉಪಾಯಗಳನ್ನು ಹುಡುಕುತ್ತಾನೆ. ಇಷ್ಟಕ್ಕೆಲ್ಲ ತಾನೇ ಕಾರಣ ಎಂದು ತಿಳಿದು ಶೋಭಾ ''ನಾನೇ ಕೆಟ್ಟ ಹುಡುಗಿ! ನನ್ನ ನೀತಿಯನ್ನು ನಾನು ಕಾಪಾಡಿಕೊಳ್ಳಬೇಕಿತ್ತು!'' ಎಂದು ಪಾಪಪ್ರಜ್ಞೆಯಿಂದ ನಲುಗುತ್ತಾಳೆ. ತನ್ನ ಈ ಸ್ಥಿತಿಯಿಂದ ಹೊರಬರಲಿಕ್ಕಾಗದೆ ಮಾನಸಿಕ ಸಂಘರ್ಷಕ್ಕೆ ಒಳಗಾಗಿದ್ದಾಳೆ. ವ್ಯವಸ್ಥೆಯೊಳಗಡೆ ಹೆಣ್ಣು ವಿವಾಹಕ್ಕಿಂತ ಪೂರ್ವದಲ್ಲಿ ಗರ್ಭಧರಿಸುವುದನ್ನು ಅನೈತಿಕವೆಂದು ಪರಿಗಣಿಸುತ್ತದೆ. ಅದಕ್ಕೋಸ್ಕರ ಶೋಭಾ ತನ್ನ ಭಾವನನ್ನೇ ಮದುವೆಯಾಗಬೇಕೆಂದು ನಿರ್ಧರಿಸಿ ಆತನನ್ನು ಕೇಳುತ್ತಾಳೆ. ''ನಾನು ನಿನ್ನನ್ನು ಲಗ್ನವಾಗುವುದೇ...? ಹುಚ್ಚೀ! ಜನರೇನೆಂದಾರು? ನಿನ್ನ ಅಕ್ಕ? ಅಷ್ಟೇ ಅಲ್ಲದೆ ಕಾಯಿದೆ ಬೇರೆ!''[೧೯] ಎಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾನೆ. ಶೋಭಾಳಲ್ಲಿ ಕಾಮಪ್ರಜ್ಞೆಯನ್ನು ಜಾಗೃತಗೊಳಿಸಲಿಕ್ಕೆ ಕಾರಣನಾದ ರಘು ಕಾಮುಕನಾಗಿ ಪರಿಚಿತನಾಗುತ್ತಾನೆ. ಭವಿಷ್ಯದ ಬಗ್ಗೆ ಸಾಕಷ್ಟು ಕನಸನ್ನು ಕಂಡ ಶೋಭಾ, ಕೊನೆಗೆ ತನ್ನ ಸ್ಥಿತಿಗೆ ಕಾರಣನಾದ ತನ್ನ ಭಾವನನ್ನೇ ಮದುವೆಯಾಗಬೇಕೆಂದು ಮಾನಸಿಕವಾಗಿ ಸಿದ್ಧಳಾಗುತ್ತಾಳೆ.

'ಹೊಸತಿಲಾಚೆಗೆ' ಕಥೆಯಲ್ಲಿ, ಹದಿನೈದು ವರ್ಷದ ಹುಡುಗಿಯಲ್ಲಿ ಅರಳುತ್ತಿರುವ ಲೈಂಗಿಕ ಭಾವನೆಯನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ಚಿತ್ರಿಸುವ ಯತ್ನವಿದೆ. ಈ ವಯಸ್ಸಿನವರ ಮನಸ್ಸು ವಿಚಿತ್ರ ಒತ್ತಡ ಹಾಗೂ ಪ್ರಕ್ಷುಬ್ಧತೆಯಿಂದ ಕೂಡಿರುತ್ತದೆ. ಇವರಲ್ಲಿ 'ಬಾಲ್ಯದ ಮುಗ್ಧತೆ ಹಾಗೂ ಯೌವನದ ಸ್ಥಿಮಿತತೆ ಇರುವುದಿಲ್ಲ.''[೨೦] ಇಂಥವರು ಬಹಳ ಬೇಗನೆ ಆಕರ್ಷಣೆಗೆ ಒಳಗಾಗುತ್ತಿರುತ್ತಾರೆ. ಭವಿಷ್ಯದ ಬಗೆಗೆ ಯಾವುದೇ ಜವಾಬ್ದಾರಿ ಇರುವುದಿಲ್ಲ. ತಾವು ಮಾಡುತ್ತಾ ಇರುವುದೇ ಅವರಿಗೆ ಸರಿ ಎನಿಸುತ್ತಿರುತ್ತದೆ. ಈ ಕಥೆಯಲ್ಲಿನ ಕಿಶೋರಿ ಸಹ ವಯಸ್ಸಿನ ಸಹಜ ಆಕರ್ಷಣೆಗೆ ಒಳಗಾಗಿದ್ದಾಳೆ. ಹಾಗಾಗಿ ಆಕೆಯ ಮನೆ ಕೆಲಸದಾಳು ಬಂಡ್ಯಾನ ಬಗೆಗೆ ಹಾಗೂ ಗೆಳತಿಯ ಅಣ್ಣ ಮಾಧವನ ಬಗೆಗೆ ಅವಳ ಕುತೂಹಲ ಬಲಗೊಳ್ಳುತ್ತಿರುತ್ತದೆ. ಪರಿಣಾಮವಾಗಿ ಆಕೆಗೆ ಬೀಳುವಂಥ ಕನಸುಗಳು, ಅವಳ ಅಂತರಂಗದಲ್ಲಿ ಬೆಳೆದು ನಿಂತ ಲೈಂಗಿಕ ಭಾವನೆಗಳನ್ನು ಹೊರಹಾಕುತ್ತಿರುತ್ತವೆ. ಇದು ಅವಳ ಸುಪ್ತ ಹಾಗೂ ಜಾಗೃತ ಮನಸ್ಸುಗಳ ನಡುವಿನ ಸಂಘರ್ಷಗಳಾಗಿ ಕಥೆಯಲ್ಲಿ ಬರುತ್ತವೆ.

ಮಾಧವನ ಬಗೆಗೆ ಅವಳಲ್ಲಿ ಹುಟ್ಟುವ ಭಾವನೆಗಳಲ್ಲಿ ಸಂದಿಗ್ಧತೆಯಿದೆ ಅವಳು ಅವನ ಸಹವಾಸ ಬಯಸುತ್ತಾಳೆ. ಸ್ಪರ್ಶವನ್ನು ಆನಂದದಿಂದಲೇ ಅನುಭವಿಸುತ್ತಾಳೆ. ಆದರೆ ಅವಳ ಜಾಗೃತ ಮನಸ್ಸಿನ ಸಾಮಾಜಿಕ ಸಂಸ್ಕಾರಗಳ ಪರಿಣಾಮವಾಗಿ ಅವಳಿಗೆ ಅವನೊಂದಿಗೆ ಮುಕ್ತವಾಗಿ ಬೆರೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಗೊಂದಲದಲ್ಲಿ ಬೀಳುತ್ತಾಳೆ. ಆ ಕ್ಷಣಕ್ಕೆ ಸುಖ ಅಂತ ಅನ್ನಿಸಿದ್ದು, ಮುಂದೆ ಯಾವ ಹಂತವನ್ನಾದರೂ ತಲುಪಬಹುದೆಂದು ಬಹಳ ಬೇಗನೆ ಎಚ್ಚೆತ್ತುಕೊಳ್ಳುತ್ತಾಳೆ. ತನ್ನ ಪ್ರಾಯದ ಉನ್ಮಾದಕತೆಯಿಂದ ಹೊರಬಂದ ಕಿಶೋರಿ, ತನ್ನ ಹೆಣ್ತನದ ಸಾಮರ್ಥ್ಯವೇನೆಂಬುದನ್ನು ತಿಳಿದುಕೊಳ್ಳುತ್ತಾಳೆ.

ತನ್ನ ಲೈಂಗಿಕ ಕುತೂಹಲವನ್ನು ಹತ್ತಿಕ್ಕದೆಯೂ ಅದರ ಮೇಲೆ ಸಂಪೂರ್ಣ ಹತೋಟಿ ಸಾಧಿಸಿದರೆ ಮಾತ್ರ ತನಗೆ ಸುಖ ಪ್ರಾಪ್ತವಾಗಬಲ್ಲದೆಂಬುದನ್ನು ಆಕೆ ಕಂಡುಕೊಳ್ಳುತ್ತಾಳೆ.

ಪ್ರಾಯಕ್ಕೆ ಬಂದ ಹುಡುಗ-ಹುಡುಗಿಯರ ಬುದ್ಧಿ ಸ್ಥಿಮಿತವಾಗಿರುವುದಿಲ್ಲ. ಅವರು ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ತಮ್ಮಲ್ಲಿನ ತಾಳ್ಮೆ, ಸಂಯಮ ವ್ಯವಧಾನವನ್ನು ಅವರು ಕಳೆದುಕೊಂಡಿರುತ್ತಾರೆ. ತಾವು ಮಾಡಿದ್ದೇ ಸರಿ ಅಂತ ಅವರಿಗನ್ನಿಸುತ್ತಿರುತ್ತದೆ. ಈ ರೀತಿಯ ಮನಸ್ಥಿತಿಯನ್ನು 'ಸೇಡು-ಗೀಡು' ಕಥೆಯಲ್ಲಿನ ಪ್ರತಾಪ ಹೊಂದಿದವನಾಗಿದ್ದಾನೆ. ಇವನು ಪ್ರಣಯದ ಹುಮ್ಮಸ್ಸಿನಲ್ಲಿ ವೇಶ್ಯೆ ಮಗಳನ್ನು ಪ್ರೀತಿಸಿ ಮದುವೆಯಾಗಿರುತ್ತಾನೆ. ಇದಕ್ಕೆ ಇಡೀ ಕುಟುಂಬದ ವಿರೋಧ ಇದ್ದರೂ ಅದನ್ನು ಅವನು ಲೆಕ್ಕಿಸುವುದಿಲ್ಲ. ಆದರೆ ಅವನ ವಿವಾಹದ ಬಂಧನ ಬಹಳ ದಿನ ಗಟ್ಟಿಯಾಗಿ ಉಳಿಯುವುದಿಲ್ಲ. ಅದು ಸಂಶಯಕ್ಕೆ ದಾರಿ ಮಾಡಿಕೊಡುತ್ತದೆ. ತನ್ನ ಹೆಂಡತಿ ಲಕ್ಷ್ಮಿ ಹಾಗೂ ಸ್ನೇಹಿತ ಖಂಡೂನ ನಡುವೆ ಲೈಂಗಿಕ ಸಂಬಂಧ ಇದೆ ಎಂದು ಅನುಮಾನ ಪಡುತ್ತಾನೆ. ಇದು ಅವನ ಆಂತರಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ತನ್ನ ಹೆಂಡತಿಯ ವಿರುದ್ಧ ಸೇಡುತೀರಿಸಿಕೊಳ್ಳಲು ಒಬ್ಬ ವೇಶ್ಯೆಗೆ ಆಕೆಯನ್ನು ಮಾರುತ್ತಾನೆ. ಆದರೆ ವೇಶ್ಯಾವೃತ್ತಿಯನ್ನು ನಡೆಸುವ ಕೃಷ್ಣಾಬಾಯಿ ಮಾನವೀಯತೆ ಇರುವಂಥ ಹೆಣ್ಣು. ಇವಳು ಲಕ್ಷ್ಮಿಯ ವ್ಯಕ್ತಿತ್ವಕ್ಕೆ ಹಾಗೂ ಮನಸ್ಸಿಗೆ ಯಾವುದೇ ರೀತಿಯ ಆಘಾತ ಆಗದಂತೆ ನೋಡಿಕೊಳ್ಳುತ್ತಾಳೆ. ಲಕ್ಷ್ಮಿ ನಿಧಾನವಾಗಿ ಚೇತರಿಸಿಕೊಳ್ಳುತ್ತಾಳೆ. ಕೊನೆಗೆ ಆಕೆ ತನಗಾದ ಅನ್ಯಾಯಕ್ಕಾಗಿ 'ನನ್ನ ದೈವದ ಮ್ಯಾಲೆ, ನನ್ನ ಈ ಜೀವನದ ಮ್ಯಾಲೆ' ಸೇಡುತೀರಿಸಿಕೊಳ್ಳುತ್ತೇನೆಂದು ನಿರ್ಧರಿಸುತ್ತಾಳೆ. ಅದಕ್ಕಾಗಿ ಆಕೆ ಹೋಟೆಲ್ ಮಾಲೀಕನ ಮಗನಾದ ಶ್ರೀಕಾಂತರಾಯನ ಉಪಪತ್ನಿಯಾಗಿ ಬದುಕಲು ನಿರ್ಧರಿಸುತ್ತಾಳೆ.

'-ನ್ನು ತನ್ನ ಹಿಂದೆ ಬಿಟ್ಟು ಹೋಗಿದ್ದಾಳೆ' ಕಥೆಯಲ್ಲಿಯೂ ಲೈಂಗಿಕತೆ ಇದೆ. ಜಿ.ಎಸ್. ಆಮೂರರವರು ಈ ಕಥೆಯ ನಿಜವಾದ ವಸ್ತು ತಂದೆ-ಮಗಳ ಸಂಬಂಧ''[೨೧] ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಮೇಲ್ನೋಟಕ್ಕೆ ತಂದೆ-ಮಗಳ ಸಂಬಂಧದಂತೆ ಕಂಡುಬರುತ್ತದೆಯಾದರೂ ಕಥೆಯ ನಿಜವಾದ ವಸ್ತು ಲೈಂಗಿಕತೆ ಅಥವಾ ಕಾಮ ಎಂದು ಹೇಳಬಹುದು. ಸದಾಶಿವಯ್ಯನ ಹೆಂಡತಿ, ಮಗಳು ನಂದಿನಿ ಹಾಗೂ ಮಹೇಶರನ್ನು ತನ್ನ ಹಿಂದೆ ಬಿಟ್ಟು ತೀರಿಹೋಗಿದ್ದಾಳೆ. ಹೆಂಡತಿ ಬದುಕಿದ್ದಾಗ ಅವಳೊಡನೆ ತಾನು ಸಾಕಷ್ಟು ಪ್ರೀತಿಯಿಂದ ಇರಲಿಲ್ಲ ಎನ್ನುವ ಕೊರಗು ಸದಾಶಿವಯ್ಯನಲ್ಲಿದೆ. ''ಪಾಪ ಅವಳು ಹೀಂಗ ಹೋಗ್ತಾಳಂತ ಗೊತ್ತಿದ್ದರ ಅವಳ್ನ ಹೂವಿನ್ಹಾಂಗ ಪ್ರೀತಿಯಿಂದ ನೋಡಿಕೋತಿದ್ದೆ. ನಾ ದಿನ-ಖರೇ ಅಂದರೂನೂ ನಾ ಒಂದು ದಿನ'' ಈ ಪಶ್ಚಾತ್ತಾಪ ಸಾಕಷ್ಟು ಪ್ರಾಮಾಣಿಕವಾಗಿದೆಯಾದರೂ ಅದರಲ್ಲಿ ಅಡುಗೆ ಪಾರ್ವತಮ್ಮನ ಹದಿಹರೆಯದ ಮಗಳು ಗಿರಿಜೆಯ ಆಕರ್ಷಣೆಯನ್ನು ಎದುರಿಸುವ ಶಕ್ತಿಯಿಲ್ಲ. ತನ್ನ ತಾಯಿಯಾದ ಸುನಂದೆಯ ಸ್ಥಳವನ್ನು ಸಮರ್ಥವಾಗಿ ತುಂಬಿದ ನಂದಿನಿಗೆ ಗಿರಿಜೆ

ಪ್ರತಿಸ್ಪರ್ಧಿಯಾಗುತ್ತಾಳೆ. ಅವರಲ್ಲಿ ಅಧಿಕಾರದ ಪೈಪೋಟಿ ನಡೆಯುತ್ತದೆ. ನಂದಿನಿ ಗಿರಿಜೆಯನ್ನು ಸದಾಶಿವಯ್ಯನಿಂದ ದೂರಮಾಡುತ್ತಾಳೆ. ನಂದಿನಿಯ ಸಂಘರ್ಷದ ಹಿಂದೆ ಕೇವಲ ಅಧಿಕಾರದ ದಾಹವಿರದೆ, ಕುಟುಂಬದ ಬಗೆಗಿನ ಕಾಳಜಿ ಇದೆ.

"ನೀವು ಗಿರಿಜೆಯನ್ನು ಎಂದೂ ಲಗ್ನವಾಗಬಾರ್ದು. ನೀವು ಅವಳನ್ನ ಲಗ್ನವಾದರೆ ಅವಳನ್ನು ನಾನು ಕೊಂದೇ ಬಿಡುವೆ"[೨೨] ಎಂದು ಹೇಳಿ ತಂದೆಯ ವಿರುದ್ಧ, ಪ್ರತಿಭಟನೆ ಮಾಡಿ ಕುಟುಂಬದ ಸ್ವಾಸ್ಥ್ಯವನ್ನು ಕಾಪಾಡುತ್ತಾಳೆ.

ಒಟ್ಟಾರೆಯಾಗಿ ಈ ಲೈಂಗಿಕ ಬದುಕಿನ ಸಂಬಂಧಿ ಸಂಘರ್ಷದಲ್ಲಿ ಕಾಮ ಬಹಳ ಪ್ರಧಾನವಾಗಿ ಬರುತ್ತದೆ ಎನ್ನುವುದನ್ನು ಗುರುತಿಸಬಹುದು.

೪. ಮಾನಸಿಕ ಸಂಘರ್ಷ

ದೇಸಾಯಿಯವರ ಕಥೆಗಳಲ್ಲಿ ಬರುವ ಕೆಲವು ಪಾತ್ರಗಳು ತುಂಬಾ ಸೂಕ್ಷ್ಮ ಹಾಗೂ ದುರ್ಬಲ ಮನಸ್ಸಿನವರಾಗಿದ್ದಾರೆ. ಇವರು ತಮ್ಮ ಬದುಕಿನಲ್ಲಿ ಮುಖಾಮುಖಿಯಾಗುವ ಕೆಲವು ಸಂದರ್ಭ, ಸನ್ನಿವೇಶಗಳಿಂದಾಗಿ ಆಘಾತಕ್ಕೆ ಒಳಗಾಗಿರುತ್ತಾರೆ. ಈ ರೀತಿಯ ಆಘಾತ ಅವರು ಮಾನಸಿಕ ಕ್ಷೋಭೆಗೆ ಒಳಗಾಗುವಂತೆ ಮಾಡುತ್ತದೆ. ಆತಂಕ, ಉದ್ವೇಗ ಎನ್ನುವುದು ಅವರೊಳಗಡೆಯೇ ಹುಟ್ಟಿ, ಅವರೊಳಗಡೆಯೇ ಇರುತ್ತದೆ. ಅದು ಬಾಹ್ಯ ರೂಪದಲ್ಲಿ ಗೋಚರವಾಗುವುದು ಅವರ ವರ್ತನೆ ಹಾಗೂ ಸ್ವಭಾವದ ಮೂಲಕ, ಅಂಥ ಸಂದರ್ಭದಲ್ಲಿ ಅವರು ತಮ್ಮ ಮನಸ್ಸಿನ ಮೇಲಿನ ಹಿಡಿತವನ್ನು ಕಳೆದುಕೊಂಡು ಅಸ್ವಸ್ಥರಾಗುತ್ತಾರೆ. ಇದು ಅವರ ಮಾನಸಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಮಳೆ', 'ಬೇಸರ' ಹಾಗೂ 'ಹುಚ್ಚ' ಕಥೆಗಳನ್ನು ಚರ್ಚೆಗೊಳಪಡಿಸಲಾಗಿದೆ.

'ಮಳೆ' ಕಥೆಯಲ್ಲಿ ಸುಶೀಲೆ ತನ್ನ ಬದುಕಿನ ಸಂಕೀರ್ಣ ಸ್ಥಿತಿಯಿಂದ ಪಾರಾಗದೆಯೇ, ಒಬ್ಬ ಪುರುಷನೊಂದಿಗೆ ಜೀವಿಸಲೇಬೇಕೆಂಬ ಅನಿವಾರ್ಯ ಕಾರಣದಿಂದ ಶ್ಯಾಮನನ್ನು ಮದುವೆಯಾಗಿರುತ್ತಾಳೆ. ಮಾನಸಿಕವಾಗಿ ತೊಳಲಾಟಕ್ಕೆ ಒಳಗಾದ ಸುಶೀಲೆ, ಶ್ಯಾಮನನ್ನು ತನ್ನ ಗಂಡನೆಂದು ಒಪ್ಪಿಕೊಳ್ಳಲು ಸಿದ್ಧಳಿರುವುದಿಲ್ಲ. ತಾನು ಮೊದಲಿಂದಲೂ ಪ್ರೀತಿಸುತ್ತಿದ್ದ ಶ್ರೀಧರನ ನೆನಪಿನಲ್ಲಿ ಕಾಲಕಳೆಯುತ್ತಿರುತ್ತಾಳೆ. ಆದರೆ ಶ್ರೀಧರ ಸುಶೀಲಳನ್ನು ಪ್ರೀತಿಸುವುದಾಗಿ ನಂಬಿಸಿ, ವಂಚನೆ ಮಾಡಿರುತ್ತಾನೆ. ಶ್ರೀಧರನ ಜೊತೆಗಿನ ಸಂಬಂಧದಿಂದಾಗಿ ಸುಶೀಲ ಗರ್ಭಿಣಿಯಾಗಿರುತ್ತಾಳೆ. ಹೀಗಾಗಿ ಶ್ಯಾಮನ ಜೊತೆಗೆ ಮದುವೆಯಾಗಲು ಒಪ್ಪಿರುತ್ತಾಳೆ. ಆದರೆ 'ಶೋಭನೆಯ ಹಾದಿ'ಯಲ್ಲಿನ ಶೋಭಾ ತನ್ನ ಪರಿಸ್ಥಿತಿಗೆ ಕಾರಣನಾದ ತನ್ನ ಭಾವನನ್ನೇ ಮದುವೆಯಾಗಲು ನಿರ್ಧರಿಸುತ್ತಾಳೆ. ಶೋಭಾಳ ಮಾನಸಿಕ ಯಾತನೆಗಿಂತ, ಸುಶೀಲಾಳ ಮನೋವೇದನೆ ಭಿನ್ನವಾಗಿದೆ. ಜೇಡವಾದ ಗಂಡನನ್ನು ಕಟ್ಟಿಕೊಂಡು, ಆತನ ಜೊತೆಗೆ ಸಂಸಾರ

ಮಾಡಲಿಕ್ಕಾಗದೆ, ಸುಶೀಲ ಸಂಕಟವನ್ನು ಅನುಭವಿಸುತ್ತಾಳೆ. ಆದರೆ ಆಕೆಗೆ ಇರುವ ಬದುಕನ್ನು ಒಪ್ಪಿಕೊಳ್ಳದೆ, ಮತ್ತೊಂದು ಬದುಕು ಇಲ್ಲ ಅನ್ನುವ ವಾಸ್ತವ ಸತ್ಯ ಆಕೆಗೆ ತಿಳಿಯದೆ ಹೋಗುತ್ತದೆ.

'ಬೇಸರ' ಕಥೆ ಮನಸ್ಸಿನ ವ್ಯಾಪಾರಗಳನ್ನು ಚಿತ್ರಿಸುತ್ತದೆ. ಈ ಕಥೆಯ ರಾಗಿಣಿ ಗಂಡ ಆಫೀಸಿಗೆ ಹೋದಾಗ ಹಗುರಾದ ಲೈಂಗಿಕ ಉತ್ತೇಜನಕ್ಕೋಸ್ಕರ ಮಹಾಶಯನನ್ನು ಉಪಯೋಗಿಸಿ ತನ್ನನ್ನು ಮುತ್ತಿದ ಬೇಸರವನ್ನು ಕಳೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಹೆಚ್ಚು ಓದಲಾಗದ, ನೌಕರಿ ಮಾಡಲಾಗದ ರಾಗಿಣಿಯ ಬೇಸರಕ್ಕೆ ಸಿದ್ಧ ನೈತಿಕತೆಯನ್ನಾಧರಿಸಿದ ಮಾನದಂಡವನ್ನು ಬಳಸದ ಅರ್ಥವಂತಿಕೆ ದಕ್ಕಿದೆ. ತಾರುಣ್ಯದ ಹೊಸ್ತಿಲಲ್ಲಿರುವ ರಾಗಿಣಿಯ ಮನೋಕಾಮನೆಗಳು ಪೂರ್ಣಾಭಿವ್ಯಕ್ತಿಯನ್ನು ಪಡೆಯುವ ಕ್ರಮ ಕುತೂಹಲಕರವಾಗಿದೆ. ಎದುರು ಫ್ಲ್ಯಾಟಿನವನಿಗೆ ಎದುರಾಗಿ ತೆರೆದ ಕಿಟಕಿಯೊಳಗಿನಿಂದ ತನ್ನನ್ನೇ ತಾನು ಆಕರ್ಷಣೆಗೆ ಗುರಿಪಡಿಸಿಕೊಳ್ಳುತ್ತಾಳೆ. ತನ್ನ ದೇಹ ವರ್ತನೆಯನ್ನು ಗಂಡಸಿನ ಕಣ್ಣಿ ತುತ್ತಾಗಿ ಭಾವಿಸಿಕೊಳ್ಳುವಲ್ಲಿಯೇ ಎಂದಿಲ್ಲದ ರೋಚಕತೆಯನ್ನು ಆಕೆ ಪಡೆಯುತ್ತಾಳೆ. ಸ್ತ್ರೀ ತನ್ನ ಲೈಂಗಿಕತೆಯನ್ನು ಪುರುಷನ ಕಣ್ಣುಗಳ ಮೂಲಕ ಕಲ್ಪಿಸಿಕೊಳ್ಳುವ ಅಸಹಜತೆಯನ್ನು ಅತ್ಯಂತ ಸಹಜವಾಗಿ ಕಥೆಗಾರರು ಜಾಣ್ಮೆಯಿಂದ ಯೋಜಿಸಿದ್ದಾರೆ. ಮಾನಸಿಕ ಕ್ರಿಯೆಯ ಪರಿಣಾಮ ವಾಸ್ತವ ಜಗತ್ತಿಗಿಳಿದು ಮಹಾಶಯ ಅವಳತ್ತ ಬರತೊಡಗಿದಾಗ ಕಂಗೆಟ್ಟು ಓಡಿ ಹೋಗುತ್ತಾಳೆ. ಈ ಕ್ರಿಯೆಯ ಸಂಪೂರ್ಣ ಅರಿವು ರಾಗಿಣಿಯಲ್ಲಿರುವುದರಿಂದ ಅದೊಂದು ನೈತಿಕ ಕ್ರಿಯೆಯಾಗಿಯೂ ನಮ್ಮ ಅನುಭವಕ್ಕೆ ಬರುತ್ತದೆ.

'ಹುಚ್ಚ' ಕಥೆಯು ಪ್ರೀತಿಯಿಂದ ವಂಚಿತಳಾದ ಹೆಣ್ಣಿನ ನೋವು ಮಾನಸಿಕ ತಾಕಲಾಟ ಮತ್ತು ಗೊಂದಲವನ್ನು ಸಮರ್ಥವಾಗಿ ಚಿತ್ರಿಸುತ್ತದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಪಾಟೀಲರ ಕಡೆಗೆ ಹೇಮಾ ಹಾಗೂ ನೀಲಿಮಾ ಎಂಬ ವಿದ್ಯಾರ್ಥಿನಿಯರಿಬ್ಬರು ಸಂಶೋಧನೆ ಮಾಡುತ್ತಿರುತ್ತಾರೆ. ತುಂಬಾ ಸುಂದರಳಾದ ನೀಲಿಮಾಳ ಬಗ್ಗೆ ಆಸಕ್ತಿ ವಹಿಸಿದ್ದ ಡಾ. ಪಾಟೀಲರು ಅವಳ ಸಂಶೋಧನೆಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡುತ್ತಿರುತ್ತಾರೆ. ಆದರೆ ಅಷ್ಟೇನು ಸುಂದರಿಯಲ್ಲದ ಹೇಮಾಳ ಸಂಶೋಧನೆ ಬಗ್ಗೆ ಅವರಿಗೆ ಅನಾಸಕ್ತಿ ಇರುತ್ತದೆ. ಪಾಟೀಲರ ಈ ವರ್ತನೆಯಿಂದಾಗಿ ಹೇಮಾ ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ. ಅದೇ ಸಂದರ್ಭದಲ್ಲಿ ಡಾ. ಆನಂದ ಎಂಬ ಅಧ್ಯಾಪಕನನ್ನು ಪ್ರೀತಿಸಿರುತ್ತಾಳೆ. ಆದರೆ ಇವನು ಈಕೆಗೆ ವಂಚಿಸಿ ನಂತರ ಬೇರೆ ಹುಡುಗಿಯನ್ನು ಮದುವೆಯಾಗಿರುತ್ತಾನೆ. ಇದರಿಂದ ಹೇಮಾ ಮಾನಸಿಕವಾಗಿ ಅಸ್ವಸ್ಥಳಾಗಿರುತ್ತಾಳೆ.

ಹೇಮಾ ಡಿಪಾರ್ಟ್‌ಮೆಂಟಿನ ತನ್ನ ಕೊಠಡಿಯಲ್ಲಿ ಒಬ್ಬಳೆ ಇದ್ದಾಗ ಹೆಣ್ಣಿನ ಪ್ರೀತಿಯಿಂದ ವಂಚಿತನಾದ ಹುಚ್ಚನೊಬ್ಬ ಬಂದು ಹೇಮಾಳನ್ನು ತಾನು ಪ್ರೀತಿಸಿದ್ದ ಮಂದಾ ಎಂದು ಬಗೆದು ತನ್ನನ್ನು ಮದುವೆಯಾಗಬೇಕೆಂದು ದುಂಬಾಲು ಬೀಳುತ್ತಾನೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಹೇಮಾ ಆತನನ್ನು ಉಪಾಯವಾಗಿ ಹೊರಕ್ಕೆ ತಳ್ಳಿ ಬಾಗಿಲು ಹಾಕಿಕೊಳ್ಳುತ್ತಾಳೆ. ಆ ಹುಚ್ಚ ಕೊಠಡಿಯ ಬಾಗಿಲನ್ನು

ತೆರೆಯುವಂತೆ ಕದವನ್ನು ಜೋರಾಗಿ ಬಡಿದು ಚೀರಾಡಿ ಕೊನೆಗೆ ಅಟ್ಟಹಾಸದಿಂದ ನಗುತ್ತಾ ಮಾಯವಾಗಿ ಬಿಡುತ್ತಾನೆ. ಇಂಥ ಪರಿಸ್ಥಿತಿಯಿಂದ ಅಸ್ವಸ್ಥಗೊಂಡಿದ್ದ ಹೇಮಾ ಸ್ವಲ್ಪ ಸಮಯದ ನಂತರ ಬಂದ ಡಾ. ಆನಂದನನ್ನು ಆ ಹುಚ್ಚನೆಂದೇ ಬಗೆದು ಅವನನ್ನು ಪುಸ್ತಕಗಳಿಂದ ಹೊಡೆದು, ಕೈಗಳಿಂದ ಗುದ್ದಿ ಬಿಡುತ್ತಾಳೆ. ಆನಂದ್ ಹೇಮಾಳ ಈ ಏಕಾಏಕಿ ವರ್ತನೆಯಿಂದ ಚಕಿತನಾಗಿ ಅವಳ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು ಬಂದಿರುವುದು ತಾನು ಎಂದು ಅವಳಿಗೆ ಮನದಟ್ಟು ಮಾಡುತ್ತಾನೆ. ಹೇಮಾ ಕಣ್ಣುಬಿಟ್ಟು ನೋಡಿದಾಗ, ಬಂದ ವ್ಯಕ್ತಿ ಹುಚ್ಚನಾಗಿರದೆ ಆನಂದನಾಗಿರುತ್ತಾನೆ. ಇಲ್ಲಿ ಹುಚ್ಚ ಬಂದು ಹೇಮಾಳನ್ನು ಪೀಡಿಸುವುದು, ಅವಳ ಸುಪ್ತ ಮನಸ್ಸಿನ ಬಯಕೆಯ ಪ್ರತೀಕವಾಗಿದೆ. ಆನಂದನ ಬಗೆಗಿನ ಪ್ರೀತಿ ಹುಚ್ಚನ ಪ್ರತಿಮೆಯಲ್ಲಿ ಪ್ರಕಟವಾಗಿದೆ. ಹೀಗೆ ಇಲ್ಲಿ ಕಥೆಗಾರರು ಪ್ರೀತಿಯಿಂದ ವಂಚಿತಳಾದ ಹೇಮಾಳ ಮಾನಸಿಕ ನೋವು, ತಾಕಲಾಟಗಳನ್ನು ಸಾಂಕೇತಿಕವಾಗಿ ತಂದಿದ್ದಾರೆ.

ತುಂಬಾ ಸೂಕ್ಷ್ಮ ಹಾಗೂ ದುರ್ಬಲ ಮನಸ್ಸಿನವರು ತಮ್ಮ ಬದುಕಿನಲ್ಲಿ ನಡೆಯಬೇಕಿದ್ದ ಎಷ್ಟೋ ಘಟನೆಗಳು ನಡೆಯದೆ ಹೋದಾಗ ಈ ರೀತಿ ಆಘಾತಕ್ಕೆ ಒಳಗಾಗಿ ಭ್ರಮಾತ್ಮಕ ಸ್ಥಿತಿಯನ್ನು ತಲುಪಿರುತ್ತಾರೆ.

೫. ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷ

ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷ ಎಂದಾಗ ಅದು ಬಹುತೇಕ ಕೌಟುಂಬಿಕ ಸಂಘರ್ಷವೇ ಆಗಿರುತ್ತದೆ. ಮದುವೆಯಾಗಿ ತವರನ್ನು ಬಿಟ್ಟು ಬಂದ ಮೇಲೆ ತನ್ನ ಗಂಡ ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದುಕೊಳ್ಳುವುದು, ಅತಿಯಾಗಿ ಪ್ರೀತಿಸುತ್ತಿದ್ದ ಆಪ್ತದವರು ತಮ್ಮಿಂದ ದೂರವಾಗುತ್ತಿದ್ದಾರೆ ಎಂದುಕೊಳ್ಳುವುದು, ಪ್ರೀತಿ, ಪ್ರೇಮದ ಸುಳಿಗೆ ಸಿಕ್ಕು ಮಗ ಮಾತನ್ನು ಕೇಳದೆ ಇರುವುದು, ತಾಯಿಯ ಅತಿಯಾದ ಪ್ರೀತಿ ಮಗಳಿಗೆ ಮುಳುವಾಗುವುದು ಇವೆಲ್ಲವೂ ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷಕ್ಕೆ ಕಾರಣಗಳಾಗಿವೆ. ಎಲ್ಲಾ ಕೌಟುಂಬಿಕ ಸಂಘರ್ಷಗಳು ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷಗಳೇ ಆಗಿರುತ್ತವೆ. ಆದರೆ ಎಲ್ಲಾ ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷಗಳು ಕೌಟುಂಬಿಕ ಸಂಘರ್ಷಗಳಾಗಿರುವುದಿಲ್ಲ.

'ಚಂದೂ' ಕಥೆಯಲ್ಲಿ ಲೈಂಗಿಕ ಸನ್ನಿವೇಶವೊಂದರಲ್ಲಿ ಸಿಕ್ಕಿಕೊಂಡ ಎಳೆಯ ಚಂದೂನ ಮಾನಸಿಕ ಹಾಗೂ ನೈತಿಕ ಗೊಂದಲ, ಯಾತನೆ ಅವನ ಪ್ರಜ್ಞೆಯ ಮೂಲಕವಾಗಿ ನಮಗೆ ತಲುಪುವುದು ಕಥೆಯ ವೈಶಿಷ್ಟ್ಯವಾಗಿದೆ. ಅವನ ಕ್ರಿಯೆ-ಪ್ರತಿಕ್ರಿಯೆ, ಆಲೋಚನೆಗಳ ಮೂಲಕ ಈ ಅಸ್ಪಷ್ಟ ಮಿಡುಕಾಟ, ತೊಳಲಾಟಗಳ ಗತಿಯನ್ನು ವಿನ್ಯಾಸಗೊಳಿಸಲು ಕಥೆಗಾರರು ಪ್ರಯತ್ನಿಸಿದ್ದಾರೆ. ಈ ಕಥೆಯಲ್ಲಿ ಬರುವ ಸುಶೀಲ ತನ್ನ ಗಂಡನಿಂದ ಯಾವುದೇ ರೀತಿಯ ಸುಖವನ್ನು ಪಡೆಯದೆ ಮೌನವಾಗಿಯೇ ಸಂಘರ್ಷವನ್ನು

ಸಾಧಿಸುತ್ತಿರುತ್ತಾಳೆ. ಈಕೆ ಯಾವ ಕಾರಣಕ್ಕಾಗಿ ಸಂಘರ್ಷ ಮಾಡುತ್ತಿದ್ದಾಳೆ ಎನ್ನುವುದು ಚಂದೂನಿಗೆ ಸೂಕ್ಷ್ಮವಾಗಿ ಗೊತ್ತಾಗುತ್ತಿರುತ್ತದೆ. ಚಂದೂ ಹನ್ನೊಂದು ವರ್ಷದವನಾದರೂ ಸ್ವಲ್ಪ ಬಲಿತ ತಲೆ. ಸುಶೀಲಕ್ಕನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಚಂದೂ, ತನ್ನ ಅತ್ತೆ ಜೊತೆ ಧಾರವಾಡಕ್ಕೆ ಹೋಗಬೇಕಾಗಿ ಬಂದಾಗ, ತನ್ನ ಮೆಚ್ಚಿನ ಸುಶೀಲಕ್ಕನನ್ನು ಕರೆದುಕೊಂಡು ಹೋಗಿರುತ್ತಾನೆ. ಅಲ್ಲಿ ತರುಣ ಆನಂದ ಚಂದೂವಿಗೆ ಪ್ರತಿಸ್ಪರ್ಧಿಯಾಗುತ್ತಾನೆ. ಆನಂದ ಚಂದೂನ ದೊಡ್ಡತ್ತೆಯ ಮಗ. ಶ್ಯಾಮಲತ್ತೆಯ ಗಂಡ ತೀರಿಕೊಂಡು ಹೋದ ಮೇಲೆ ಮನೆಯಲ್ಲಿ ಯಾರಾದರೂ ಒಬ್ಬ ಗಂಡಸರು ಇರಲಿ ಎಂದು ಆನಂದನನ್ನು ತಂದಿಟ್ಟುಕೊಂಡಿರುತ್ತಾಳೆ. ಇಲ್ಲಿ ಆನಂದ ಕಾಲೇಜಿಗೆ ಹೋಗುತ್ತಿರುವ ಒಬ್ಬ ತರುಣ. ಆನಂದನಿಗಾಗಿ ಧಾರವಾಡಕ್ಕೆ ಬಂದ ಚಂದೂಗೆ ಆನಂದನೇ ಶತ್ರುವಾಗುತ್ತಾನೆ. ಮದುವೆಯಾಗಿದ್ದ ಸುಶೀಲಕ್ಕ, ಮದುವೆಯಾಗದ ಆನಂದನ ಜೊತೆಗೆ ತುಂಬಾ ಮುಕ್ತವಾಗಿ ವ್ಯವಹರಿಸುವುದು ಇವನ ಸಿಟ್ಟಿಗೆ ಕಾರಣವಾಗುತ್ತದೆ. ಬಟ್ಟೆ ಅಂಗಡಿಗೆ ಹೋದಾಗ, ಸಿನಿಮಾ ನೋಡಲಿಕ್ಕೆ ಹೋದಾಗ ಇವರಿಬ್ಬರ ನಡುವಿನ ವರ್ತನೆ ಚಂದೂವಿಗೆ ಹೊಸದೆಂಬಂತೆ ಗೋಚರಿಸುತ್ತಿರುತ್ತದೆ. ಆದರೂ ಅವನು ಅವರ ನಡುವಿನ ಸಂಬಂಧವನ್ನು ಪರೋಕ್ಷವಾಗಿ ಪ್ರತಿಭಟಿಸುತ್ತಿರುತ್ತಾನೆ. "ಸುಶೀಲಕ್ಕನ ವಾತ್ಸಲ್ಯದ ಕೋಟೆಯಲ್ಲಿ ಚಂದೂ ಆಕೆಯ ಬಗ್ಗೆ ಬೆಳೆಸಿಕೊಂಡ ಆಕರ್ಷಣೆ, ಆತ್ಮೀಯತೆ, ಪ್ರೀತಿಗಳು ಅಸೂಯೆ-ಆಕ್ರಮಣಶೀಲತೆ-ಹಕ್ಕುದಾರಿಕೆ ಭಾವನೆಗಳಾಗಿ ರೂಪಾಂತರಗೊಳ್ಳುತ್ತವೆ.''[೨೩] ತನಗೆ ಪ್ರವೇಶವಿಲ್ಲದ ದೊಡ್ಡವರ ಜಗತ್ತಿನ ಬಗ್ಗೆ ಕುತೂಹಲ ಹಾಗೂ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾನೆ. ಲೈಂಗಿಕತೆಯ ಪೂರ್ಣ ವಿಕಸನವಾಗದ ಚಂದೂ ಆನಂದ ಹಾಗೂ ಸುಶೀಲಕ್ಕರ ನಡುವಿನ ಅಶ್ಲೀಲದ ಕಲ್ಪನೆಯನ್ನು ಮಾಡಬಲ್ಲ ಮಟ್ಟಿಗೆ ಬೆಳೆಯುತ್ತಾನೆ. ಸುಶೀಲಕ್ಕನನ್ನು ಆನಂದನ ಕಾಮುಕತೆಯಿಂದ ಪಾರುಮಾಡುವ ಹೊಣೆ ಹೊತ್ತ ಚಂದೂ, ಅದರಲ್ಲಿ ವಿಫಲನಾಗುತ್ತಾನೆ. ರಾತ್ರಿ ಎಚ್ಚರವಾದಾಗ ಸುಶೀಲಕ್ಕ ತನ್ನ ಹಾಸಿಗೆಯಲ್ಲಿಲ್ಲದಿರುವುದರ ಸಂಕೇತವನ್ನು ತಿಳಿಯದಷ್ಟು ಅವನು ಮುಗ್ಧನಲ್ಲ. "ಜಗತ್ತೇ ಕೆಟ್ಟದ್ದು ಜಗತ್ತಿನಲ್ಲಿದ್ದವರೆಲ್ಲರೂ ಕೆಟ್ಟವರು" ಎನ್ನುವ ಅರಿವು ಅವನಿಗೆ ಸೋಲಿನ ಅನುಭವ ಕೊಡುತ್ತದೆ. ಸುಶೀಲಕ್ಕ ಹಾಗೂ ತನ್ನ ಪ್ರತಿಸ್ಪರ್ಧಿ ಆನಂದರನ್ನು ನೇರವಾಗಿ, ತೀವ್ರವಾಗಿ ನಿರಾಕರಿಸಹೋಗುವಲ್ಲಿ ವಿಜಯ ಸಾಧನೆಯ ಭಾವವನ್ನು ಚಂದೂ ಅನುಭವಿಸುತ್ತಾನೆ.

'ಸೇಡುಗೀಡು' ಕಥೆಯ ಪ್ರತಾಪ ತನ್ನ ಇಡೀ ಕುಟುಂಬವನ್ನು ವಿರೋಧಿಸಿ ತಾನು ಇಷ್ಟಪಟ್ಟಂತ ಲಕ್ಷ್ಮಿಯನ್ನು ಮದುವೆಯಾಗಲು ನಿರ್ಧರಿಸುತ್ತಾನೆ. ಲಕ್ಷ್ಮೀ ಒಬ್ಬ ವೇಶ್ಯೆಯ ಮಗಳು. ಅದಕ್ಕಾಗಿ ಅವನ ತಂದೆ-ತಾಯಿಗಳು ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಆದರೂ ಅವನು ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ. 'ಎಲ್ಲಾರ ಮನಸ್ಸಿನ ವಿರುದ್ಧ ಹೋಗಿ ಆಕೀನ್ನ ಕಟಗೊಳಾಕ ಆಕಿ ಏನ ರಂಭಾನೋ ಮೇನಕಾನೋ?' ಎಂದು ಪ್ರತಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಆದರೂ ಅವನು

ಮನೆಯವರ ವಿರೋಧವನ್ನು ಕಟ್ಟಿಕೊಂಡು ಲಕ್ಷ್ಮಿಯನ್ನು ಮದುವೆ ಮಾಡಿಕೊಂಡಿರುತ್ತಾನೆ. ತಂದೆಯ ವಿರೋಧವನ್ನು ಕಟ್ಟಿಕೊಂಡು ಗೋವಾಕ್ಕೆ ಹೋಗಿ ಸೈನ್ಯಕ್ಕೆ ಸೇರಿರುತ್ತಾನೆ. ಪ್ರತಾಪ ಗೋವಾದಲ್ಲಿದ್ದಾಗಲೇ ಲಕ್ಷ್ಮಿಯ ಚಾರಿತ್ರ್ಯದ ಬಗೆಗೆ ಪ್ರತಾಪನಲ್ಲಿ ಸಂಶಯದ ಬೀಜವನ್ನು ಬಿತ್ತಿರುತ್ತಾರೆ 'ಖಂಡೂ ಆಗಾಗ ಲಕ್ಷ್ಮಿ ಮನೆಗೆ ಬಂದು ಹೋಗುತ್ತಿರುತ್ತಾನೆ' ಎಂದು ಹೇಳಿರುತ್ತಾರೆ. ಪ್ರತಾಪ ಊರಿಗೆ ಬಂದ ಮೇಲೂ ಈ ಘಟನೆ ನಡೆದಿರುತ್ತದೆ. ಅವತ್ತಿನಿಂದಲೂ ಪ್ರತಾಪ, ಲಕ್ಷ್ಮಿಯ ಚಾರಿತ್ರ್ಯದ ಬಗೆಗೆ ಸಂಶಯವನ್ನು ಪಡುತ್ತಿರುತ್ತಾನೆ. ಅದಕ್ಕಾಗಿ ಆಕೆಯ ವಿರುದ್ಧ ಸೇಡುತೀರಿಸಿಕೊಳ್ಳುವುದಕ್ಕಾಗಿ ಆಕೆಯನ್ನು ವೇಶ್ಯೆಗೆ ಮಾರುತ್ತಾನೆ. ಲಕ್ಷ್ಮಿ ತನಗೆದುರಾದ ಬದುಕಿನ ವಿರುದ್ಧ ಸೇಡುತೀರಿಸಿಕೊಳ್ಳಲು ಮತ್ತೊಬ್ಬರ ಉಪಪತ್ನಿಯಾಗಿ ಬದುಕನ್ನು ಎದುರಿಸಲು ನಿರ್ಧರಿಸುತ್ತಾಳೆ. ದಾಂಪತ್ಯದ ಮೌಲ್ಯಗಳಾಚೆಗಿನ ವೇಶ್ಯಾವಾಟಿಕೆಯ ಯಜಮಾನತಿ ಕೃಷ್ಣಾಬಾಯಿ ಯಾವುದೇ ಬಗೆಯ ಮೌಲ್ಯಸಂಘರ್ಷಗಳಿಗೆ ಒಳಗಾಗುವವಳಲ್ಲ. ಯಾವುದೋ ಹುಚ್ಚು ಆವೇಶದಲ್ಲಿ ಕೈಗೊಂಡ ವ್ಯಕ್ತಿಗತ ಆಯ್ಕೆಗಳಿಂದ ಸಾಮಾಜಿಕ ಪರಿವರ್ತನೆ ಸಿದ್ಧಿಸಲಾರದು. ಆಯ್ಕೆಯ ಪರಿಣಾಮವನ್ನು ಧೈರ್ಯದಿಂದ ಸವಾಲೆಂಬಂತೆ ಎದುರಿಸುವಲ್ಲಿಯೇ ವ್ಯಕ್ತಿಯ ನೈತಿಕತೆ ಆಕಾರ ಪಡೆದುಕೊಳ್ಳುತ್ತದೆ. ಇದೊಂದು ಬಗೆಯ ಆಂತರಿಕ ಬೆಳವಣಿಗೆ. ಹಾಗಾದಾಗ ಮಾತ್ರ ಸಾಮಾಜಿಕ ಪರಿವರ್ತನೆಯ ಮಾದರಿಯೊಂದು ವ್ಯಕ್ತಿನಿಷ್ಠ ಪಾತಳಿಯಲ್ಲಿ ಕಾಣಸಿಗುತ್ತದೆ. ಇಲ್ಲದಿದ್ದಲ್ಲಿ ಕ್ರೌರ್ಯ ಹಾಗೂ ಭ್ರಷ್ಟತೆಯ ಬೇರುಗಳನ್ನು ವ್ಯಕ್ತಿಗತ ನೆಲೆಯಿಂದ ಸಾಮಾಜಿಕ ನೆಲೆಗೂ ವಿಸ್ತರಿಸಬಲ್ಲ ಅಪಾಯಕಾರಿ ಬೆಳವಣಿಗೆ ಸಂಭವಿಸುತ್ತದೆ.

'ಗಂಡಸತ್ತ ಮೇಲೆ' ಕಥೆಯ ವಿಜಯಾಬಾಯಿ ಪ್ರತಿಯೊಬ್ಬ ತಂದೆ-ತಾಯಿಗಳು ಮಾಡುವಂಥ ಕರ್ತವ್ಯವನ್ನು ತಾನು ಮಾಡುತ್ತಿರುತ್ತೇನೆಂದು ತಿಳಿದಿರುತ್ತಾಳೆ. ತನ್ನ ಮನದ ಬಯಕೆಗಳನ್ನೆಲ್ಲ ಮಗಳ ಮೂಲಕ ಈಡೇರಿಸಿಕೊಳ್ಳುತ್ತಿರುತ್ತಾಳೆ. ತನ್ನ ಜೀವನದಂತೆ ತನ್ನ ಮಗಳ ಜೀವನವು ಹಾಳಾಗಬಾರದು ಎಂದು ಬಯಸುತ್ತಿರುತ್ತಾಳೆ. ಅದಕ್ಕೋಸ್ಕರ ಆಕೆ ತನಗೆ ದೊರೆಯದ ಶಿಕ್ಷಣವನ್ನು ಮಗಳಾದ ಶಶಿಕಲೆಗೆ ಕೊಡಿಸುವಾಗ ಹಾಗೂ ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ಮಾಡುವಾಗ ತಾನು ತಾಯಿಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆಂದು ತಿಳಿದುಕೊಂಡಿರುತ್ತಾಳೆ. ನಿಜವಾಗಲೂ ಅದೆಲ್ಲವೂ ಶಶಿಕಲೆಯ ಆಸೆ-ಆಕಾಂಕ್ಷೆಗಳಾಗಿವೆಯೇ ಎಂಬುದನ್ನು ಒಂದು ದಿನಕ್ಕಾದರೂ ಯೋಚನೆ ಮಾಡುವುದಿಲ್ಲ.

ಮಿಸಾಳ ಮಾಸ್ತರರ ಜೊತೆಗಿನ ಮದುವೆ ವಿಷಯಕ್ಕೆ ಸಂಬಂಧಿಸಿದಂತೆ ವಿರೋಧವನ್ನು ವ್ಯಕ್ತಪಡಿಸಿರುತ್ತಾಳೆ. ತಾಯಿಯ ಇಚ್ಛೆಯ ವಿರುದ್ಧ ನಡೆದುಕೊಳ್ಳಬಾರದೆಂದು ಮೌನವಾಗಿಯೇ ಇರುತ್ತಾಳೆ. "ನಿನ್ನನ್ನು ಕೇಳದೆ, ನಿನ್ನ ಸಮ್ಮತಿಯಿಲ್ಲದೆ, ನಾನೇನೂ ಮಾಡುವುದಿಲ್ಲ ಬಿಡಮ್ಮ - ಇಷ್ಟೇಕೆ ಮನಸ್ಸಿಗೆ ಹಚ್ಚಿಕೊಳ್ಳುತ್ತಿರುವಿ? ಶಶಿಯ ಧ್ವನಿಯಲ್ಲಿ ಅವಳದಲ್ಲದ ಒಂದು ಕಾಠಿಣ್ಯ ಮೂಡಿತ್ತು..." ಶಶಿಯ ಮನಸ್ಸಿನ ಭಾವನೆಗಳನ್ನು ಅರ್ಥಮಾಡಿಕೊಳ್ಳದ ವಿಜಯಾಬಾಯಿ ಮಗಳ ಭವಿಷ್ಯವನ್ನೇ ಹೊಸಕಿ

[illegible]

ಹಾಕುತ್ತಾಳೆ. ಶಶಿಯ ಆಸೆ-ಆಕಾಂಕ್ಷೆ, ತನ್ನ ಆಸೆ-ಆಕಾಂಕ್ಷೆಗಳಲ್ಲಿ ಅಡಗಿಲ್ಲವೆಂಬ ಸತ್ಯ ಆಕೆಗೆ ತಿಳಿಯದೆ ಹೋಗುತ್ತದೆ. ತನ್ನ ತಾಯಿಯ ವಿರುದ್ಧ ಮೌನವಾಗಿಯೇ ಸಂಘರ್ಷವನ್ನು ಸಾಧಿಸುತ್ತಿರುವ ಶಶಿಕಲೆ, ತನಗೆ ಟೀ.ಬಿ.ಯಾದ ಬಗ್ಗೆ ಯಾವ ಸೂಚನೆಯನ್ನು ಕೊಡುವುದಿಲ್ಲ. ಕೊನೆಗೆ ವಿಜಯಾಬಾಯಿಗೆ ಸತ್ಯ ತಿಳಿದಾಗ ಮಾನಸಿಕವಾಗಿ ಕುಸಿಯುತ್ತಾಳೆ. ವಿಜಯಾಬಾಯಿಯ ಅತಿಯಾದ ತಾಯ್ತನ ಮಗಳನ್ನು ಮಾನಸಿಕವಾಗಿ, ದೈಹಿಕವಾಗಿ ನಾಶಪಡಿಸುವಂತೆ ಮಾಡುತ್ತದೆ. ಹೀಗಿದ್ದರೂ, ತನ್ನ ತಾಯಿಯಿಂದ ಬಿಡುಗಡೆ ಪಡೆಯುವುದರ ಮೂಲಕ ಶಶಿಗೆ ಗೆಲವು ದೊರಕುತ್ತದೆ.

'ಏಕಾಂಗಿ' ಕಥೆಯಲ್ಲಿ ಬರುವ ಆ್ಯನ್ ಪಾಶ್ಚಾತ್ಯ ಮೂಲದ ಆಧುನಿಕ ಹೆಣ್ಣು. ಈಕೆ ಈಗಾಗಲೇ ಒಂದು ಸಂಬಂಧವನ್ನು ಕಡಿದುಕೊಂಡು, ಮತ್ತೊಂದು ಸಂಬಂಧದ ಶೋಧನೆಯಲ್ಲಿ ತೊಡಗಿದ್ದಾಳೆ. ಯಾವುದೋ ಕಾರಣಕ್ಕಾಗಿ ತನ್ನ ಗಂಡನಿಂದ ವಿಚ್ಛೇದನವನ್ನು ಪಡೆದುಕೊಂಡಿರುತ್ತಾಳೆ. ತನ್ನ ಮಗಳಿಗೆ ತಂದೆಯಾಗಬಲ್ಲ ಹಾಗೂ ತನಗೆ ಸಂಗಾತಿಯಾಗಬಲ್ಲ ಮನುಷ್ಯ ಸಂಬಂಧಗಳ ಹುಡುಕಾಟದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಅದಕ್ಕೋಸ್ಕರ ಆಕೆ ಮುಕುಂದನ ಸ್ನೇಹವನ್ನು ಮಾಡುತ್ತಾಳೆ. ಇವನು ಭಾರತೀಯ ಮೂಲದವನು. ಇವನು ಬಿಜಿನೆಸ್ ಕಾರಣಕ್ಕಾಗಿ ಲಂಡನ್ನಿಗೆ ಬಂದಿದ್ದಾನೆ. ಇಲ್ಲಿರುವಷ್ಟು ದಿನ ಅವನಿಗೆ ಸುಖವಾಗಿ ಸಮಯ ಕಳೆಯಬೇಕಾಗಿದೆ. ಹಾಗಾಗಿ ಅವನು ಆ್ಯನಳನ್ನು ಬಳಸಿಕೊಳ್ಳುತ್ತಾನೆ. ಇಲ್ಲಿ ಆ್ಯನ್ ತಾನು ಸಂಬಂಧಗಳನ್ನು ಪ್ರೇರೇಪಿಸಬೇಕಾಗಿರುವುದರಿಂದ ಲೈಂಗಿಕತೆಯನ್ನು ಅಸ್ತ್ರವಾಗಿ ಬಳಸಿಕೊಂಡರೆ, ಮುಕುಂದ ಲೈಂಗಿಕತೆಗೋಸ್ಕರ ಸಂಬಂಧವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಾನೆ. ಈ ಒಳಸತ್ಯವನ್ನು ಅರಿಯದ ಆ್ಯನ್, ತನ್ನನ್ನು ಮದುವೆಯಾಗುವಂತೆ ಕೇಳಿಕೊಂಡಾಗ ಮುಕುಂದ ಮೌನವಾಗಿಯೇ ಉಳಿಯುತ್ತಾನೆ. ಇವನು ಭಾರತೀಯನಾಗಿರುವುದರಿಂದ ಲಂಡನ್ನಿನಲ್ಲಿಯೇ ನೆಲೆಯನ್ನು ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಮತ್ತೊಂದು ಹೆಣ್ಣಿನ ಸ್ನೇಹವನ್ನು ಅರಸಿ ಹೋಗುತ್ತಾನೆ. ಆ್ಯನ್‌ಳನ್ನು ವಂಚಿಸಿದ ಭಾವ ಮುಕುಂದನನ್ನಾವರಿಸಿದರೂ "ಆ ಬಿಳಿಯಳ ಬಲೆಯಿಂದ ತಾನು ಪಾರಾದೆನೆಂಬ ವ್ಯಾವಹಾರಿಕ ಸಮಾಧಾನ ಅವನದು."[೨೪] ಇದೂ ಒಂದು ಅನುಭವ ಎಂದು ಧನ್ಯಭಾವವನ್ನು ಹೊಂದುವಷ್ಟು ಭಾವರಾಹಿತ್ಯ ಅವನಲ್ಲಿದೆ. ಆದರೆ ಆ್ಯನಳ ಏಕಾಂಗಿತನದ ಅನುಭವವನ್ನು ಮತ್ತೆ ಆಕೆಯನ್ನು ಸಂಧಿಸಿದಾಗ ತಿಳಿಯುವ ಅವಕಾಶ ಅವನಿಗೊದಗುತ್ತದೆ. ಮುಕುಂದನ ವ್ಯಾವಹಾರಿಕ ಕ್ರೌರ್ಯವನ್ನು ಸದ್ದಿಲ್ಲದೆ, ತಣ್ಣನೆಯ ಮಾತುಗಳಲ್ಲಿ ಆ್ಯನ್ ತೋರಿಸಿಕೊಟ್ಟು, ಆತನಲ್ಲಿ ಏಕಾಂಗಿ ಭಾವವನ್ನು ಹುಟ್ಟುಹಾಕುತ್ತಾಳೆ.

'ಏಕಾಂಗಿ' ಕಥೆಯಲ್ಲಿ ಆ್ಯನ್ ಮನುಷ್ಯ ಸಂಬಂಧದ ಶೋಧದಲ್ಲಿ ತೊಡಗಿ ನಿರಾಶೆಯಾದರೆ, 'ನಾನಾನ ತೀರ್ಥಯಾತ್ರೆ'ಯ ನಾನಾ ಎಲ್ಲ ಸಂಬಂಧಗಳಿಂದ ಬೇಸತ್ತು ಬದುಕಿಗೆ ವಿಮುಖನಾಗುವ ಸನ್ನಿವೇಶವನ್ನು ಕಾಣಬಹುದು. ಈ ಕಥೆ ಮನುಷ್ಯ-ಮನುಷ್ಯರ ಸಂಬಂಧಗಳ ನಡುವಿನ ಕಂದರವನ್ನು

ಎತ್ತಿತೋರುತ್ತದೆ. ನಾನಾ ಮನೆಯ ಹಿರಿಯನಾಗಿದ್ದರೂ, ತಮ್ಮನ ಹೆಂಡತಿ ತಾರಾಬಾಯಿಯ ಸಾಮ್ರಾಜ್ಯದಲ್ಲಿ ಮೂಲೆಗುಂಪಾಗಿದ್ದಾನೆ. ಎಪ್ಪತ್ತೈದು ವರ್ಷದ ವೃದ್ಧ ನಾನಾನಿಗೆ ಈಗಾಗಲೇ ಈಡೇರಿಸಬೇಕಾದ ಜವಾಬ್ದಾರಿಗಳನ್ನು ಈಡೇರಿಸಲಿಕ್ಕಾಗದೆ, ಅಸಮಾಧಾನಕ್ಕೆ ಒಳಗಾಗಿದ್ದಾನೆ. ಜೊತೆಗೆ ಬೆಳೆದು ನಿಂತಿರುವ ಮಗಳು ಸುಬ್ಬಿಯ ಮದುವೆ ಆಗದಿರುವುದು ನಾನಾನ ಅಂತರಂಗವನ್ನು ಸದಾ ಸುಡುತ್ತಿರುತ್ತದೆ. ಈ ಎಲ್ಲ ಸಮಸ್ಯೆ, ನೋವುಗಳಿಂದ ನಾನಾನ ಮನಸ್ಥಿತಿ ಆಗಾಗ ಹದಗೆಡುತ್ತಿರುತ್ತದೆ. ಬದುಕು ಅರ್ಥಹೀನವೆನಿಸಿ ಬಿಟ್ಟ ಮೇಲೆ, ನೈತಿಕತೆಗೆ ಬದ್ಧನಾಗಿರಬೇಕಿಲ್ಲವೆಂಬ ನಿರ್ಧಾರ ತಂದುಕೊಡುವ ಸ್ವಾತಂತ್ರ್ಯದ ಪ್ರತೀಕವಾಗಿ ಕುಡಿತದ ಚಟಕ್ಕೆ ಬಲಿಯಾಗುತ್ತಾನೆ. ನಾನಾ ಈ ರೀತಿ ಪಡೆದುಕೊಂಡ ಸ್ವಾತಂತ್ರ್ಯ ಕೂಡ ಅವನ ಅಸಹಾಯಕ ಏಕಾಕಿತನ, ಪರಕೀಯತೆಗಳ ಪರಿಣಾಮವಾಗಿ ಅರ್ಥಹೀನವಾಗಿದೆ. ಯಾರು ಯಾರನ್ನು ಬೇಕಾದರೂ ಕೊಲ್ಲಬಹುದು. ಮತ್ತು ಕೊಲ್ಲುವುದಕ್ಕೆ ಯಾವುದೇ ಕಾರಣವೂ ಬೇಕಿಲ್ಲ. ಕೊಡುವ ಕಾರಣಗಳು ಹೀಗೆ ಅಸಂಗತವಾಗಿರಬಲ್ಲವು.

"...ವಾರಕ್ಕೆರಡು ಸಾರಿ ನದಿಗೆ ಹೋಗಿ ಮೀನು ಹಿಡಿಯುವ ನನಗೆ ಕೊಲ್ಲುವುದೇ ಗೊತ್ತಿಲ್ಲವೆ?... ಹೆಂಡತಿ ಟೀ.ಬಿ.ಯಿಂದ ಬಳಲುತ್ತಿದ್ದಾಗ ಕೊನೆಗೆ ಅವಳಿಗೆ ಮೋಸ ಮಾಡಿ ಅವಳು ಬಸಿರಾಗಿ ಸಾಯುವಂತೆ ಮಾಡಿದೆ. ತಾರಾಬಾಯಿಯ ಹಂಗಿನ ಜೇಲಿನಿಂದ ಬಿಡುಗಡೆ ಮಾಡಿದೆ."[೨೫]

ನಾನಾನ ಪ್ರಕಾರ - ರಾವಣನೇ ಹೀರೋ 'ರಾವಣ ಇರಲಿಲ್ಲಾಂದ್ರ ರಾಮಾಯಣ ಆಗುತ್ತಿರಲಿಲ್ಲ.' ಹೀಗೆ ಬದುಕನ್ನು ಕುರಿತ ಗ್ರಹಿಕೆಯಲ್ಲಿ ಎಲ್ಲವೂ ಪಲ್ಲಟಗೊಳ್ಳಲು ಮುಕ್ತ ಅವಕಾಶವಿದೆ. ಮನೆಗೆ ಹೋಗೋದು ಬಿಟ್ಟು ನದಿಗೆ ಕೂಡ ಹೋಗಬಹುದು. "ನೀರು ಬಂದು ನನ್ನನ್ನಪ್ಪಿದಾಗ ನಾನು ಹಿಂದಿರುಗಿ ಹೋಗುವುದೆ?" ಎಂಬ ಪ್ರಶ್ನೆಗೆ ಉತ್ತರವಾಗಿ ಇನ್ನೊಂದು ಪ್ರಶ್ನೆಯಿದೆ. 'ಹೋಗುವುದಾದರೂ ಎಲ್ಲಿಗೆ? ಮನೆಗೆ?' ಹೀಗೆ ಉತ್ತರಗಳಿಲ್ಲದ ಪ್ರಶ್ನೆಗಳಿಗೆ ಬದುಕು ಮತ್ತೂ ಕೆಲ ಪ್ರಶ್ನೆಗಳನ್ನೆಸೆಯುತ್ತಾ ಹೋಗುತ್ತದೆ. ಹೀಗೆ ನಾನಾ ಎಲ್ಲ ಸಂಬಂಧಗಳಿಂದ ವಿಮುಖನಾಗಿ, ಸಾವಿನ ಕಡೆ ಮುಖ ಮಾಡಿ ಹೋಗುತ್ತಾನೆ.

'ನಿರ್ಣಯ' ಕಥೆಯಲ್ಲಿ ಗಂಗಿ, ತನ್ನ ಗಂಡ ಹಾಗೂ ಇಡೀ ವ್ಯವಸ್ಥೆಯ ವಿರುದ್ಧ ಸಂಘರ್ಷಕ್ಕಿಳಿಯುತ್ತಾಳೆ. ಇವಳು ವಾಸ ಮಾಡುತ್ತಿರುವುದು ಗ್ರಾಮೀಣ ಪರಿಸರವಾದರೂ ತನ್ನದೇ ಆದ ರೀತಿಯಲ್ಲಿ ಸಂಘರ್ಷ ಮಾಡುತ್ತಾಳೆ. ಇವಳದು ಕೇವಲ ಮೌನಸಂಘರ್ಷ. ಇವಳಿಗೆ ತನ್ನ ಗಂಡನ ಬಗೆಗೆ, ವ್ಯವಸ್ಥೆಯ ಬಗೆಗೆ ಯೋಚನೆ ಇಲ್ಲ. ತನ್ನ ವೈಯಕ್ತಿಕ ಬದುಕು ಮಾತ್ರ ಈಕೆಗೆ ಮುಖ್ಯವಾಗುತ್ತದೆ. ತನ್ನ ಗಂಡನಿಂದ ಸುಖ ಪಡೆಯಲಿಕ್ಕಾಗದ ಗಂಗಿ, ಮತ್ತೊಬ್ಬನ ಆಶ್ರಯವನ್ನು ಬಯಸುತ್ತಿರುತ್ತಾಳೆ. ಗಂಗಿ ಗಂಡ ಮಲ್ಲೇಶಿಗೆ ದುಡಿಯುವುದು ಮಾತ್ರ ಗೊತ್ತು. ಹೆಣ್ಣಿನ ಮನಸ್ಸನ್ನು ಅರಿಯುವಷ್ಟು ಸೂಕ್ಷ್ಮತೆ ಅವನಲ್ಲಿಲ್ಲ. ಆದರೆ ಗಂಗಿ ನೈಸರ್ಗಿಕವಾದ ಸುಖ ಆಕಾಂಕ್ಷೆಗಳಿರುವಂಥ ಸಮೃದ್ಧ ಹೆಣ್ಣು. ಮಲ್ಲೇಶಿ

ತನ್ನ ಹೆಂಡತಿಗೆ ಏನು ಬೇಕು, ಏನು ಬೇಡ ಅಂತ ಯೋಚನೆ ಮಾಡುವುದನ್ನು ಬಿಟ್ಟು ಆಕೆ ಬಗೆಗೆ ಸಂಶಯವನ್ನು ಪಡುತ್ತಾನೆ. ಆದರೆ ಗಂಗಿ ತನ್ನನ್ನು ಸರಿಯಾಗಿ ನೋಡಿಕೊಳ್ಳದ, ತನಗೆ ತೃಪ್ತಿ ನೀಡದ ಗಂಡನ ಅಸಹಾಯಕತೆಯ ವಿರುದ್ಧ ಪ್ರತಿಭಟಿಸುತ್ತಾಳೆ. ತನ್ನಿಂದ ಅವಳನ್ನು ಬಗ್ಗಿಸಲು ಸಾಧ್ಯವಾಗದ ಮಲ್ಲೇಶಿ, ದೇಶಪಾಂಡೆಯವರ ಹತ್ತಿರ ಬಂದು ತನ್ನ ಸಮಸ್ಯೆಯ ಇತ್ಯರ್ಥಕ್ಕೆ ಮೊರೆ ಹೋಗುತ್ತಾನೆ. ಗಂಡ-ಹೆಂಡತಿಯರ ಮಧ್ಯೆ ಸಾಮರಸ್ಯ ತರಲು ದೇಶಪಾಂಡೆಯವರು ಬಳಸಿದ ತಂತ್ರ ಯಶಸ್ವಿಯಾಗದೆ, ಅವರ ನಿರ್ಣಯ ವಿಫಲವಾಗುತ್ತದೆ. ಗಂಗಿಯನ್ನು ಸರಿದಾರಿಗೆ ತರಲು ಅವಳನ್ನು ದೈಹಿಕ ಹಾಗೂ ಮಾನಸಿಕ ಹಿಂಸೆಗೆ ಒಳಪಡಿಸಲಾಗುತ್ತದೆ.

ಆದರೂ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಹಾಗೆ ನೋಡಿದರೆ ಗೌಡನಿಗೆ ಗಂಗಿಯ ಮನಸ್ಥಿತಿ ಅರ್ಥವಾಗಿರುತ್ತದೆ. ಅದಕ್ಕಾಗಿ ಆತ ಮಲ್ಲೇಶಿಗೆ ಬುದ್ಧಿವಾದ ಹೇಳಿ ಕಳಿಸಿರುತ್ತಾನೆ. ಹೆಣ್ಣಿನ ನಿಜವಾದ ಭಾವನೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅದಕ್ಕಾಗಿ ಅರ್ಥಮಾಡಿಕೊಳ್ಳುವವನು ಸಿಕ್ಕಾಗ, ತಕ್ಷಣ ಆಕೆ ಆ ಕಡೆಗೆ ವಾಲುತ್ತಾಳೆ. ಹಾಗಾಗಿ ಗಂಗಿಯ ಆಯ್ಕೆ ಶಂಕರ್ಯಾನೇ ಆಗುತ್ತಾನೆ. ಗಂಗಿ ಶಂಕರ್ಯಾನ ಜೊತೆಗೆ ಓಡಿಹೋಗುವುದರ ಮುಖಾಂತರ ತನ್ನ ಬದುಕಿಗೊಂದು ಸಾರ್ಥಕತೆಯನ್ನು ಪಡೆದುಕೊಳ್ಳುತ್ತಾಳೆ.

'ಜವಾಬ್ದಾರಿ' ಕಥೆಯಲ್ಲಿ ಬರುವ ಶಿಲ್ಪಾಸರದೇಸಾಯಿ ಆಧುನಿಕ ಸಮಾಜದ ಪ್ರಜ್ಞಾವಂತ ಹೆಣ್ಣು. ಈಕೆ 'ಮಧ್ಯಮ ವರ್ಗದ ಸ್ತ್ರೀ ಹಾಗೂ ಆಧುನೀಕರಣದ ಕೆಲವು ಸಮಸ್ಯೆಗಳು' ಎಂಬ ವಿಷಯದ ಮೇಲೆ ಸಂಶೋಧನೆ ಮಾಡುತ್ತಿರುತ್ತಾಳೆ. ಆಕೆಯ ಮಾರ್ಗದರ್ಶಿ ಪ್ರಾಧ್ಯಾಪಕ, ಕಥೆಯ ನಿರೂಪಕ ಪಾತ್ರ - 'ಪರಂಪರೆ ಮತ್ತು ಪರಿವರ್ತನೆ' ವಿಷಯದ ಮೇಲೆ ಲಂಡನ್‌ನಲ್ಲಿ ಪಿಎಚ್.ಡಿ. ಮಾಡಿದವ. ಇನ್ನೂ ಪರಂಪರೆಗೆ ಅಂಟಿಕೊಂಡ ಭಾರತೀಯ ಸಮಾಜದಲ್ಲಿ ಸ್ವಚ್ಛಂದ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ ಎಂದು ತಿಳಿದವ. ಅಷ್ಟೇ ಅಲ್ಲ, ಹಾಗೆ ಅದನ್ನು ನಂಬಿದವ ಕೂಡ. ಆದರೆ ಈ ಸಂಸ್ಕೃತಿ ದೊರಕಿಸಿಕೊಟ್ಟ ಅಸಮಾನ ಅಧಿಕಾರಗಳ ಸವಲತ್ತುಗಳನ್ನು ಗಂಡಸಾಗಿ ಬಳಸಿಕೊಳ್ಳುವಲ್ಲಿ ಈತನಿಗೆ ಯಾವುದೇ ಬಗೆಯ ನೈತಿಕ ಸಂದಿಗ್ಧಗಳಿಲ್ಲ. ಶಿಷ್ಯೆಯಲ್ಲಿ ಮೊಳೆತ ಆಕರ್ಷಣೆ ಸಹಜವಾಗಿ ಸಹೋದ್ಯೋಗಿ ಶರ್ಮಾನ ಬಗೆಗೆ ಈರ್ಷೆಯನ್ನುಂಟುಮಾಡುತ್ತದೆ. ವಿದ್ಯಾರ್ಥಿ-ವಿದ್ಯಾರ್ಥಿನಿ, ಪ್ರಾಧ್ಯಾಪಕ-ವಿದ್ಯಾರ್ಥಿನಿಯರ ನಡುವೆ ಚಿಗುರುವ ಆಕರ್ಷಣೆ, ಸಂಬಂಧಗಳನ್ನು ಹತೋಟಿಯಲ್ಲಿಡುವುದು ತನ್ನ ಮಾನವೀಯ ಜವಾಬ್ದಾರಿ ಎಂದು ತಿಳಿದವ. ಆದರೆ ಸ್ವತಃ ವಿದೇಶದಲ್ಲಿ ಹೆದರಿಕೆ ಹುಟ್ಟುವಷ್ಟು ಸ್ವಾತಂತ್ರ್ಯದ ರುಚಿ ಅನುಭವಿಸಿದವ. ತನಗೆ ನಿಜಕ್ಕೂ ಸವಾಲಾಗಿ ಬೆಳೆದ ಶಿಲ್ಪಾಸರದೇಸಾಯಿಳ ವ್ಯಕ್ತಿತ್ವಕ್ಕೆ ಈತ ಮುಖಾಮುಖಿಯಾಗುವ ಸನ್ನಿವೇಶ ಒದಗುತ್ತದೆ.

ಅವಿವಾಹಿತ ತಾಯಿಯಾಗಿ ಉಳಿವ ನಿರ್ಧಾರ ಮಾಡಿದ ಶಿಲ್ಪಾ ತನ್ನ ಜವಾಬ್ದಾರಿಯನ್ನು ತ್ಯಾಗವೆಂಬ ಭಾವುಕ ನೆಲೆಯಲ್ಲಿ ಸ್ವೀಕರಿಸಿಲ್ಲ. ಪ್ರಣಯದ ಸಾಹಸದಲ್ಲಿ ತಾನೂ ಸಹ ಭಾಗಿಯಾದುದರ

ಜವಾಬ್ದಾರಿಯನ್ನು ಆಕೆ ನಿರಾಕರಿಸಿಲ್ಲ. ತನ್ನ ಪ್ರೇಮಿ ಡಾ. ಶರ್ಮಾನ ಪ್ರೀತಿಯ ಔದಾರ್ಯದಲ್ಲಿ ನೀತಿ-ಅನೀತಿಯ ಪ್ರಶ್ನೆ ಬರಲಿಲ್ಲವೆಂದು ಒಪ್ಪಿಕೊಳ್ಳುವಷ್ಟು ಧೈರ್ಯ ಹಾಗೂ ಪ್ರಾಮಾಣಿಕತೆ ಆಕೆಯಲ್ಲಿದೆ. ಇಷ್ಟಾದರೂ ದಾಂಪತ್ಯ ಪ್ರೇಮದ ಅವಕಾಶ ಆಕೆಗೆ ದೊರಕಿದ್ದು ವಿದೇಶಿ ವ್ಯಕ್ತಿಯೊಬ್ಬನಿಂದ. ಅವಳಲ್ಲಿನ ಜವಾಬ್ದಾರಿಯುತ ಆಧುನಿಕತೆಗೆ ಸಂಘರ್ಷವಿಲ್ಲದ, ಸವಾಲುಗಳಿಲ್ಲದ ಸಾಮಾಜಿಕ ಮಾನ್ಯತೆ ದೊರಕಲು ಕೊನೆಗೂ ಪಶ್ಚಿಮಕ್ಕೇ ಶರಣು ಹೋಗಬೇಕಾಯಿತಲ್ಲ ಎಂದು ಆಕೆಯ ಪ್ರಾಧ್ಯಾಪಕ ಉದ್ಗಾರವೆತ್ತುತ್ತಾನೆ. ತನ್ನನ್ನೂ ಒಳಗೊಂಡಂತೆ ಪುರುಷ ಪ್ರಧಾನ ಭಾರತೀಯ ಸಂಸ್ಕೃತಿಯ ಸಾಂಪ್ರದಾಯಿಕತೆಯ ಕುರಿತಾದ ನಿರೂಪಕನ ಸೂಕ್ಷ್ಮ ವಿಮರ್ಶೆ ವ್ಯಂಗ್ಯಾತ್ಮಕವಾಗಿ ಈ ಕಥೆಯಲ್ಲಿ ಮೂಡಿಬಂದಿದೆ.

'ಲಗ್ನ' ಕಥೆಯಲ್ಲಿ ದೇಸಾಯಿಯವರ ಮನೋವೈಜ್ಞಾನಿಕ ಆಸ್ಥೆಗಳು ಎದ್ದು ಕಾಣುತ್ತವೆ. ಈ ಕಥೆಯ ಲೇಖಾ ಹಾಗೂ ವಾಸೂದಾದಾರ ಸಂಬಂಧ ಅಣ್ಣ-ತಂಗಿಯರ ಸಹಜ ಸಂಬಂಧವನ್ನು ಮೀರುವುದರಿಂದ ಸಮಸ್ಯೆಗೆ ಕಾರಣವಾಗುತ್ತದೆ. ವಾಸೂ ರೋಹಿಣಿಯನ್ನು ಮದುವೆಯಾಗುತ್ತಾನೆ. ಲೇಖಾ ಹಾಗೂ ಡಾ. ರಮೇಶರ ಲಗ್ನವಾಗುತ್ತದೆ. ಆದರೆ ಇವೆರಡೂ ಅಪೂರ್ವ ಸಂಬಂಧಗಳಾಗಿಯೇ ಉಳಿಯುತ್ತವೆ. ವಾಸೂನ ಮಗ ಪುಟ್ಟ ಲೇಖಾಳ ಮನೆಯಲ್ಲಿಯೇ ಬೆಳೆಯುವುದರಿಂದ ಸಮಸ್ಯೆ ಜೀವಂತವಾಗಿ ಉಳಿಯುತ್ತದೆ. ಲೇಖಾ ಹಾಗೂ ರೋಹಿಣಿಯರ ಲೈಂಗಿಕ ಈರ್ಷ್ಯೆ ಪುಟ್ಟ ಹಾಗೂ ಅವನು ಪ್ರೀತಿಸಿದ ಪ್ರೇಮಲತಾರ ಲಗ್ನಕ್ಕೆ ಅಡ್ಡ ಬರುತ್ತದೆ. ಸಂಬಂಧಗಳ ನಡುವಿನ ಸಂಘರ್ಷದಲ್ಲೂ, ಲೈಂಗಿಕತೆ ಕೆಲಸ ಮಾಡುತ್ತದೆ. ಇದು ಒಂದು ಅಂತರ್ಜಾತೀಯ ಸಂಬಂಧ ಎನ್ನುವುದು ಇಲ್ಲಿ ಗೌಣ. ರೋಹಿಣಿ, ಪುಟ್ಟ ಹಾಗೂ ಪ್ರೇಮಲತಾರ ಮದುವೆಯನ್ನು ಒಪ್ಪಿಕೊಳ್ಳುತ್ತಾಳೆ. ಆದರೆ ಲೇಖಾ ಹಾಗೂ ರಮೇಶ ಮದುವೆಗೆ ಬರಬಾರದು ಎನ್ನುವ ಕರಾರಿನ ಮೇಲೆ. ಈ ಕರಾರೇ ಲೇಖಾಳ ಮುಕ್ತಿಯ ಕಾರಣವಾಗುತ್ತದೆ.

"ನಾನು, ರಾಕ್ಷಸಿ" ರಮೇಶ ಅವಳ ಮಾತು ಕೇಳಿ ನಕ್ಕ

"ನಗರಿ-ನಗರಿ-ನಿಮಗೂ ಅದೇ ಬೇಕಿತ್ತು, ಅಣ್ಣ-ತಂಗಿಯರ ನಡುವೆ ಕಂದಕ".

ರಮೇಶ ಇನ್ನಷ್ಟು ನಗತೊಡಗಿದ. "ಹೌದು ನಾನು ಆಪರೇಷನ್ ಮಾಡಿ ಇಬ್ಬರ ನಡುವಿನ ಗಂಟನ್ನು ಕರಕರ ಕೊರೆದು ಬಿಟ್ಟೆನಲ್ಲ! ಹಾಹಾಹಾ!!"[೨೬]

ದೇಸಾಯಿಯವರು ಮನೋವಿಜ್ಞಾನದ ಒಳನೋಟಗಳನ್ನು ವ್ಯಕ್ತಿ-ವ್ಯಕ್ತಿಗಳ ಸಂಬಂಧ ಹಾಗೂ ರಹಸ್ಯಗಳನ್ನು ಭೇದಿಸುವ ತಂತ್ರವಾಗಿ ಬಳಸಿಕೊಳ್ಳುವ ವಿಧಾನವನ್ನು ತಮ್ಮ ಕೊನೆಯ ಕಥೆಗಳಲ್ಲಿಯೂ ಬಿಟ್ಟು ಕೊಡದಿರುವುದು ಮಹತ್ವದ ಸೂಚನೆಯಾಗಿದೆ.

'ಅಂತರ' ಕಥೆಯಲ್ಲಿ ಬರುವ ಶಂಕರ ಒಬ್ಬ ಪೊಳ್ಳು ಮನುಷ್ಯ. ತನ್ನ ಸುರಕ್ಷಿತತೆಯನ್ನು ಶ್ರೇಷ್ಠ ಮೌಲ್ಯವನ್ನಾಗಿ ಸ್ವೀಕರಿಸಿದವ. ಅವನಿಗೆ ಅವನದೇ ಆದ ಒಂದು ಕುಟುಂಬವಿದೆ. ಹೀಗಿದ್ದರೂ ಸಹ ಅವನ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ತಾನೊಮ್ಮೆ ಸಂಬಂಧ ಬೆಳೆಸಿದ ಸರಸ್ವತಿಯ

ನೆನಪು ಅವನ ಸ್ಮೃತಿಯಲ್ಲಿ ಉಳಿದುಕೊಂಡಿರುತ್ತದೆ. ಅವನು ಮನಸ್ಸು ಮಾಡಿದ್ದರೆ ಸರಸ್ವತಿಯನ್ನು ಮದುವೆಯಾಗಬಹುದಿತ್ತು. ಆದರೆ ಜಾತಿಯ ನೆಪಹೂಡಿ ತಪ್ಪಿಸಿಕೊಂಡಿರುತ್ತಾನೆ. ಕೊಲ್ಹಾಪುರ ಯುನಿವರ್ಸಿಟಿಯಿಂದ ಭಾಷಣಕ್ಕಾಗಿ ಆಮಂತ್ರಣ ಸಿಕ್ಕಾಗ ಅವನಿಗೆ ಪುನಃ ಸರಸ್ವತಿಯೊಡನೆ ಸಂಬಂಧ ಬೆಳೆಸುವ ಇಚ್ಛೆಯಾಗುತ್ತದೆ.

ಸರಸ್ವತಿ ತುಂಬಾ ಸ್ಪಷ್ಟವಾದ ನಿಲುವನ್ನು ಹೊಂದಿದ ಹೆಣ್ಣು. ಶಂಕರನ ಯಾವ ಆಟಕ್ಕೂ ಆಕೆ ಅವಕಾಶವನ್ನು ಕೊಡುವುದಿಲ್ಲ. ಬದಲಾಗಿ ಈಗ ಅವರ ಸಂಬಂಧ ಎಂಥದ್ದು ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತಾಳೆ. ಅವನಿಗೆ ಅವನದ್ದೇ ಆದ ಸಂಬಂಧಗಳಿರುವಂತೆ ಇವಳಿಗೂ ಇವಳದೇ ಆದ ಸಂಬಂಧಗಳಿದಾವೆ. ಹಾಗಾಗಿ ನಮ್ಮ ನಮ್ಮ ವರ್ತನೆಗಳ ಮೂಲಕ ಯಾವಾಗ ಹೇಗಿರಬೇಕು ಎಂದು ಮನುಷ್ಯ ಸಂಬಂಧಗಳ ಭಾಷ್ಯೆಯನ್ನು ಆಕೆ ಬರೆಯುತ್ತಾಳೆ. ಬದುಕಿನಲ್ಲಿ ಒಂದೇ ರೀತಿಯಾಗಿರುವುದು ಸರಿಯಲ್ಲ. ಕಾಲಕ್ಕೆ ತಕ್ಕಂತೆ ಸಂಬಂಧಗಳೂ ಬದಲಾಗಬೇಕು ಎನ್ನುವುದನ್ನು ಹೇಳುತ್ತಾಳೆ.

ಕೊನೆ ಟಿಪ್ಪಣಿಗಳು

೧. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೦೭

೨. ಅದೇ, ಪು.೧೧೨

೩. ಅದೇ

೪. ಅದೇ, ಪು.೨೮೨

೫. ಗಾಯತ್ರಿ ಎನ್., ೧೯೯೧, **ಮಹಿಳೆ ಬಿಡುಗಡೆಯ ಹಾದಿಯಲ್ಲಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೧೮-೧೯

೬. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೩೨೩

೭. ಅದೇ, ಪು.೩೮೭

೮. ಅದೇ, ಪು.೮೪

೯. ಅದೇ, ಪು.೮೮

೧೦. ಅದೇ

೧೧. ಅದೇ, ಪು.೩೧೪

೧೨. ಅದೇ, ಪು.೧೮೧

೧೩. ಅದೇ, ಪು.೧೮೪

೧೪. ಅದೇ, ಪು.೨೦೩-೦೪

೧೫. ಅದೇ, ಪು.೨೨೮

೧೬. ಅದೇ, ಪು.೨೨೯

೧೭. ಅದೇ, ಪು.೨೫೩

೧೮. ಗಂಗಾನಾಯಕ್, ೨೦೦೧, **ಶಾಂತಿನಾಥ ದೇಸಾಯಿಯವರ ಸಾಹಿತ್ಯ ಒಂದು ಅಧ್ಯಯನ**', ಬೂದಗುಪ್ಪೆ ಪ್ರಕಾಶನ, ಚಿಕ್ಕಮಗಳೂರು, ಪು.೯೪.

೧೯. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೪೩

೨೦. ಲಂಕೇಶ್ ಪಿ., ೧೯೯೧, 'ಟೀಕೆ-ಟಿಪ್ಪಣಿ', ಪತ್ರಿಕೆ ಪ್ರಕಾಶನ, ಬೆಂಗಳೂರು, ಪು.೫೦೨

೨೧. ಅಮೂರ ಜಿ.ಎಸ್., ೨೦೦೦ **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೮೪

೨೨. ಶಾಂತಿನಾಥ ದೇಸಾಯಿ, ೨೦೦೧, **ಪೂರ್ವೋಕ್ತ**, ಪು.೨೭೨

೨೩. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೨೩-೨೪

೨೪. ಅದೇ, ಪು.೧೭೧

೨೫. ಶಾಂತಿನಾಥ ದೇಸಾಯಿ, ೨೦೦೧, **ಸಮಗ್ರ ಕಥೆಗಳು**, ಸಪ್ನಬುಕ್ ಹೌಸ್, ಬೆಂಗಳೂರು, ಪು.೨೧೦

೨೬. ಅದೇ, ಪು.೫೪೦

ಅಧ್ಯಾಯ ೭

ಕಾದಂಬರಿ ಸಾಹಿತ್ಯ : ವಸ್ತುವಿನ ಸ್ವರೂಪ

೭

ಕಾದಂಬರಿ ಸಾಹಿತ್ಯ : ವಸ್ತುವಿನ ಸ್ವರೂಪ

ಆಧುನಿಕ ಕನ್ನಡ ಕಾದಂಬರಿ ಪ್ರಕಾರವು ಬಹಳ ವೈವಿಧ್ಯಮಯವಾಗಿ, ಸತ್ವಯುತವಾಗಿ ಬೆಳೆಯುತ್ತ ಬಂದಿದೆ. ಮೊದಲ ತಲೆಮಾರಿನ ಲೇಖಕರಲ್ಲಿ ಶಿವರಾಮ ಕಾರಂತ, ಮಾಸ್ತಿ, ಕುವೆಂಪು, ಗೊರೂರು, ರಾವ್‌ಬಹದ್ದೂರ, ವಿ.ಕೃ.ಗೋಕಾಕ, ದೇವುಡು, ಬಿ.ಪುಟ್ಟಸ್ವಾಮಯ್ಯ ಮುಂತಾದವರು ಮಹಾ ಕಾದಂಬರಿಗಳನ್ನು ಬರೆದು ಭದ್ರ ಬುನಾದಿಯನ್ನು ಹಾಕಿದರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ನೂರು ವರ್ಷಗಳಾದರೂ, ಈ ನೂರು ವರ್ಷಗಳಲ್ಲಿ ಕಾದಂಬರಿ ಪ್ರಕಾರಗಳಲ್ಲಿ ಸೃಷ್ಟಿಯಾದ ಕಾನೂರು ಹೆಗ್ಗಡಿತಿ, ಗ್ರಾಮಾಯಣ, ಮರಳಿ ಮಣ್ಣಿಗೆ, ಚೆನ್ನಬಸವನಾಯಕ, ಸಮರಸವೇ ಜೀವನ ಮುಂತಾದ ಕಾದಂಬರಿಗಳು ಮೊದಲ ಸ್ಥಾನದಲ್ಲಿಯೇ ಇವೆ. ಇದಕ್ಕೆ ಕಾರಣ ಬದಲಾಗುತ್ತಿದ್ದ ಜೀವನ ವಿಧಾನವನ್ನು ಸಮಗ್ರವಾಗಿ ಸೃಜನಾತ್ಮಕವಾಗಿ ಈ ಕಾದಂಬರಿಗಳು ನಿರೂಪಿಸಿವೆ. ಮಲೆನಾಡಿನ ದಟ್ಟ ಪರಿಸರದೊಂದಿಗೆ, ಅಲ್ಲಿನ ಜೀವನ ಸಂಸ್ಕೃತಿಯನ್ನು ಕುವೆಂಪು ಕಾದಂಬರಿಗಳು ಕಟ್ಟಿಕೊಟ್ಟಂತೆ, ಕರಾವಳಿಯ ಪರಿಸರವನ್ನು, ಅಲ್ಲಿಯ ಸಂಸ್ಕೃತಿಯನ್ನು ಕಾರಂತರ ಕಾದಂಬರಿಗಳು ಬಿಂಬಿಸುತ್ತವೆ. ಉತ್ತರ ಕರ್ನಾಟಕದ ಪ್ರಾದೇಶಿಕತೆಯೊಂದಿಗೆ ಬಯಲು ಸೀಮೆಯ ಬದುಕನ್ನು ರಾವ್‌ಬಹದ್ದೂರ ಅವರ ಕಾದಂಬರಿಗಳು ಚಿತ್ರಿಸುತ್ತವೆ. ಗೊರೂರರ ಕಾದಂಬರಿಗಳು ಮೈಸೂರು ಸೀಮೆಯ ಬದುಕನ್ನು ಕಟ್ಟಿಕೊಡುತ್ತವೆ. ಕರ್ನಾಟಕದ ಭಿನ್ನ ಪ್ರಾದೇಶಿಕತೆಗಳು, ಅವುಗಳ ಸ್ವರೂಪವನ್ನು ತಿಳಿಯಲು ಈ ಕಾದಂಬರಿಗಳು ಈ ಹೊತ್ತಿಗೂ ಸಹಾಯಕವಾಗಿ ನಿಂತಿವೆ.

ಈ ಪರಂಪರೆಯನ್ನು ಅಂದರೆ ಕರ್ನಾಟಕದ ಪ್ರಾದೇಶಿಕತೆಯನ್ನು, ಅದರ ಸತ್ವವನ್ನು, ಜೀವನ ವಿಧಾನದೊಂದಿಗೆ ಕಟ್ಟುವ ಜವಾಬ್ದಾರಿಯನ್ನು ಚದುರಂಗ, ಬಸವರಾಜ ಕಟ್ಟೀಮನಿ, ವ್ಯಾಸರಾಯ ಬಲ್ಲಾಳ, ನಿರಂಜನ, ಅ.ನ.ಕೃ. ಮುಂತಾದ ಕಾದಂಬರಿಕಾರರು ಹೊತ್ತರು. ಪ್ರಗತಿಶೀಲ ಲೇಖಕರು ಎಂದು ಕರೆಸಿಕೊಂಡಿರುವ ಇವರು ತಮ್ಮ ಪ್ರಗತಿಪರ ಧೋರಣೆಯೊಂದಿಗೆ ಕಾದಂಬರಿಗಳನ್ನು ಬರೆದರೂ ಇವರೆಲ್ಲರ ಕಾದಂಬರಿಗಳಲ್ಲಿ ಕರ್ನಾಟಕದ ಬೇರೆ ಬೇರೆ ಪ್ರಾದೇಶಿಕತೆಯನ್ನು, ಸಂಸ್ಕೃತಿಯನ್ನು ಕಟ್ಟಿಕೊಡುವ ಮೂಲಕ ಕಾದಂಬರಿ ಪ್ರಕಾರದಲ್ಲಿ ವಸ್ತು ವೈವಿಧ್ಯವನ್ನು ತಂದರು.

ಒಂದು ಪ್ರದೇಶದ ಸ್ಥಳೀಯ ಬದುಕನ್ನು, ಅದರ ಚಲನೆಯನ್ನು ಕಟ್ಟುವ ಮೂಲಕ ಮೊದಲ ತಲೆಮಾರಿನ ಲೇಖಕರು ಜಾತಿ, ವರ್ಗಗಳ ಸಂಘರ್ಷ, ಎಲ್ಲ ಬಗೆಯ ಜನರ ಭಾಷೆ, ಹಬ್ಬ, ಜಾತ್ರೆ, ಆಚರಣೆ, ರಾಗ ದ್ವೇಷಗಳನ್ನು ಸ್ಥಳೀಯ ಭಾಷೆಯೊಂದಿಗೆ ಚಿತ್ರಿಸಿದರು. ಮನುಷ್ಯ ಮತ್ತು ಆತ ಬದುಕುವ ಸಮಾಜದ ಅಂತರ್ ಸಂಬಂಧವನ್ನು ಕಳ್ಳುಬಳ್ಳಿಯ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ಆರ್ಥಿಕ ನೆಲೆಯಲ್ಲಿ, ಸಾಂಸ್ಕೃತಿಕ ನೆಲೆಯಲ್ಲಿ ಕಟ್ಟುವ ಮೂಲಕ ವ್ಯಕ್ತಿ-ಸಮಾಜದ, ವ್ಯಕ್ತಿ-ಪ್ರಕೃತಿಯ, ವ್ಯಕ್ತಿ-ಧರ್ಮದ ಅಂತರ್ ಸಂಬಂಧವನ್ನು ತಿಳಿಸಿದರು. ಒಟ್ಟಿನಲ್ಲಿ ಮನುಷ್ಯನ, ಸಮಾಜದ, ಪ್ರಕೃತಿಯ, ಆಧ್ಯಾತ್ಮದ ಘನತೆಯನ್ನು ಎತ್ತಿ ತೋರಿಸಿದರು ಮೊದಲ ತಲೆಮಾರಿನ ಕಾದಂಬರಿಕಾರರು.

ಹಾಗೆಯೇ ಬೆಳೆದ ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಗಳಿಂದ, ವ್ಯಕ್ತಿ ಸಮಾಜದ ಸಂಬಂಧಗಳು, ಕುಟುಂಬ ವ್ಯಕ್ತಿಯ ಸಂಬಂಧಗಳು, ಆರ್ಥಿಕ ಸಂಬಂಧಗಳಲ್ಲಿ ಸ್ಥಿತ್ಯಂತರಗಳು ಕಾಣುತ್ತವೆ. ಹಳ್ಳಿಗಳ ಸ್ವರೂಪ ಬದಲಾಗುತ್ತದೆ. ನಗರ ಸಂಬಂಧಗಳು ಬಲಗೊಳ್ಳುತ್ತವೆ. ಔದ್ಯೋಗಿಕರಣದಿಂದ ದುಡಿವ ವರ್ಗವೊಂದು ಸೃಷ್ಟಿಯಾಗಿ, ಕಾರ್ಮಿಕರ ಜೀವನ ವಿಧಾನವೊಂದು ರಚನೆಯಾಗುತ್ತದೆ. ಈ ಎಲ್ಲದರ ಸಾಂಸ್ಕೃತಿಕ ಸ್ವರೂಪವನ್ನು ಪ್ರಗತಿಶೀಲ ಕಾದಂಬರಿಕಾರರು ಕಟ್ಟಿಕೊಟ್ಟರು. ಹೀಗೆ ಕಾದಂಬರಿಗಳ ವಸ್ತು ಬೇರೆ ಬೇರೆಯಾಗಿ ನಿರಂತರ ಚಲನೆಯ ಸಮಾಜದಲ್ಲಿ ವ್ಯಕ್ತಿಯ ಬದುಕು ವೈವಿಧ್ಯಮಯವಾಗಿ ಕಾದಂಬರಿಯಲ್ಲಿ ಚಿತ್ರಿತವಾಯಿತು. ಹಳ್ಳಿ-ನಗರಗಳಲ್ಲಿ ಮನುಷ್ಯನ ಜೀವನ, ಸಮಸ್ಯೆಗಳು ರಾಜಕೀಯ ಹಿನ್ನೆಲೆಯಲ್ಲಿ ಗ್ರಹಿಸಲಾಯಿತು.

ಮೊದಲ ತಲೆಮಾರಿನ ನವೋದಯ ಸಾಹಿತ್ಯ ಪಂಥದ ಕಾದಂಬರಿಕಾರರಲ್ಲಿ ಗ್ರಾಮಜೀವನದ ಸ್ಥಿತಿ ಮತ್ತು ಗತಿಯನ್ನು ಜಾತಿ, ಭೂಮಾಲೀಕ ಮತ್ತು ಕೆಳಜಾತಿಯ ನಡುವಿನ ಸಂಬಂಧಗಳು, ಮೇಲ್ಜಾತಿ ಮತ್ತು ಕೆಳಜಾತಿಗಳಲ್ಲಿ ಹೆಣ್ಣು ಗಂಡುಗಳ ಸಂಬಂಧಗಳನ್ನು ನೈತಿಕ, ಆದರ್ಶಗಳ ನೆಲೆಯಲ್ಲಿ ಗ್ರಹಿಸಿದರು. ಮಾನವೀಯ ಸಂಬಂಧಗಳ ಸ್ವರೂಪವನ್ನು ಮೌಲ್ಯಗಳ ಹಿನ್ನೆಲೆಯಲ್ಲಿಯೂ ಗ್ರಹಿಸಿದರು. ಪ್ರಗತಿಶೀಲ ಕಾದಂಬರಿಕಾರರು ನಗರ ಕೇಂದ್ರಿತ, ದುಡಿವ ವರ್ಗ ಮತ್ತು ಬಂಡವಾಳಶಾಹಿಗಳ ನಡುವಿನ ಸಂಬಂಧಗಳನ್ನು ದುಡಿವ ವರ್ಗಗಳ ಪರ ನೆಲೆಯಿಂದ ಕಟ್ಟಿದರು. ಶೋಷಣೆಗೆ ಒಳಗಾಗುವ ದುಡಿವ ವರ್ಗದ ನಾನಾ ರೀತಿಯ ಸಮಸ್ಯೆಗಳನ್ನು ಢಾಳಾಗಿ ಚಿತ್ರಿಸಿದರು.

ಸ್ವಾತಂತ್ರ್ಯಾ ನಂತರದಲ್ಲಿ ಬದಲಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಸಮಾಜದ ಗತಿಯ ವ್ಯಕ್ತಿತ್ವವನ್ನು ಗ್ರಹಿಸಲು ನವ್ಯ ಕಾದಂಬರಿಕಾರರು ಪ್ರಯತ್ನಿಸಿದರು. ಆದರ್ಶ, ಮೌಲ್ಯಗಳು, ನೈತಿಕತೆ ಇವುಗಳನ್ನು ವಾಸ್ತವದ ನೆಲೆಯಲ್ಲಿ, ಮನೋವಿಜ್ಞಾನದ ಹಿನ್ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸಿದ ಫಲವಾಗಿ ಕಾದಂಬರಿಯ ವಸ್ತು ಭಿನ್ನವಾಗಿ ರಚನೆಯಾಗತೊಡಗಿತು. ಹಳ್ಳಿಯಿಂದ ನಗರಕ್ಕೆ ವಲಸೆ ಹೋದ ಯುವ ಮನಸ್ಸುಗಳ ಅಂತರಾಳದ ಸೃಜತೆಯನ್ನು ಅಭಿವ್ಯಕ್ತಿಸಲು ಪ್ರಯತ್ನಿಸಿದರು. ವಿದ್ಯಾರ್ಥಿ ಜೀವನ

ಇರಬಹುದು, ನೌಕರಿ ಜೀವನ ಇರಬಹುದು, ನಗರ ವಲಯಗಳಲ್ಲಿ ಅದರಲ್ಲೂ ಮೇಲ್ ಮಧ್ಯಮ ವರ್ಗದ ಜನರ ಸಮಸ್ಯೆಗಳನ್ನು ವ್ಯಂಗ್ಯ ಶೈಲಿಯಲ್ಲಿ ಗ್ರಹಿಸಲು ಯತ್ನಿಸಿದರು. ಈ ಬಗೆಯ ಗ್ರಹಿಕೆಗೆ ವ್ಯಕ್ತಿಯ, ಬದುಕಿನ ಅಸ್ತಿತ್ವದ ಏಳುಬೀಳುಗಳನ್ನು ಚಿತ್ರಿಸಲು ಅಸ್ತಿತ್ವವಾದದ ಲಕ್ಷಣಗಳೇ ನೆಲೆಯಾದವು. ಕನ್ನಡ ನವ್ಯ ಸಾಹಿತ್ಯಕ್ಕೆ ಮೊದಲಿನಿಂದ ಅಸ್ತಿತ್ವವಾದವು ಬೆನ್ನೆಲುಬಾಗಿತ್ತು. ಮೂಲತಃ ವ್ಯಕ್ತಿ, ಸಮಾಜದ ಭಾಗವೇ ಆಗಿದ್ದರೂ ವ್ಯಕ್ತಿ ಕೇಂದ್ರಿತ ಚಿಂತನೆಗೆ ಮಹತ್ವ ನೀಡಲಾಯಿತು. ಅದಕ್ಕೆ ಕಾರಣವೂ ಇದೆ. ಸಮಾಜದಲ್ಲಿ ಮದುವೆ, ಕುಟುಂಬ, ಜಾತಿ, ಧರ್ಮ, ಸಂಘ-ಸಂಸ್ಥೆಗಳು ಸ್ಥಾಪಿತ ಮೌಲ್ಯಗಳನ್ನು ಪೋಷಿಸಿಕೊಂಡು ಬರುತ್ತಿವೆ. ವ್ಯಕ್ತಿಗೆ ಆಯ್ಕೆ ಸ್ವಾತಂತ್ರ್ಯವಿಲ್ಲ. ರೂಪಗೊಂಡ, ಯಾರೋ ವಿಧಿಸಿದ ಜೀವನ ವಿಧಾನದಲ್ಲಿ ವ್ಯಕ್ತಿ ಬದುಕಬೇಕಾಗಿದೆ. ಇದನ್ನು ಮೀರಿ ಬದುಕಲು ಹೊಸ ಜೀವನ ವಿಧಾನವನ್ನು ರೂಪಿಸಿಕೊಳ್ಳಲು ವ್ಯಕ್ತಿಗೆ ಸಾಧ್ಯವಾಗುವುದಿಲ್ಲ. ಸಾಧ್ಯ ಮಾಡಿಕೊಳ್ಳಬೇಕಾದರೆ ವ್ಯಕ್ತಿಗತ ನೆಲೆಯಲ್ಲಿ ಹೋರಾಟ ಮಾಡಬೇಕು. ಪ್ರತಿಹೆಜ್ಜೆಗೆ ಅಡ್ಡಿ ಆತಂಕಗಳು ಎದುರಾಗುತ್ತವೆ. ಹೊಸ ನೈತಿಕತೆಯನ್ನು ನೆಲೆಗೊಳಿಸಲು ವ್ಯಕ್ತಿಗೆ ಕಷ್ಟವಾಗುತ್ತದೆ. ಸ್ಥಾಪಿತ ಮೌಲ್ಯಗಳ ಪರಿಸರದಲ್ಲಿ ಹುಸಿ ನೈತಿಕತೆಯಲ್ಲಿ ವ್ಯಕ್ತಿ ಬದುಕುತ್ತಿದ್ದಾನೆಂಬ ಅರಿವು ಮೂಡಿದರೂ ಬದುಕುವುದು ಅನಿವಾರ್ಯವಾಗಿ, ಅದನ್ನೇ ಸಮರ್ಥಿಸಿಕೊಳ್ಳುತ್ತ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದು ಅಸ್ತಿತ್ವವಾದದ ತಿಳುವಳಿಕೆ. ವ್ಯಕ್ತಿ ಏನು ಆಗಿರುವುದಿಲ್ಲವೋ ಅದು ಆಗಬೇಕು. ಆಗಬೇಕಾದರೆ ಸ್ವತಂತ್ರ ಆಯ್ಕೆ ಮತ್ತು ಅದನ್ನು ಸಮರ್ಥವಾಗಿ ನಿಭಾಯಿಸುವ ಛಲಬೇಕು. ಆಗ ನಿಜವಾದ ವ್ಯಕ್ತಿ ಆಗುತ್ತಾನೆ. ಇರುವಿಕೆ ಮುಖ್ಯವಲ್ಲ. ಆಗುವಿಕೆ ಮುಖ್ಯ. ಆಗುವಿಕೆಗಾಗಿ ವ್ಯಕ್ತಿ ತನ್ನ ಕುಟುಂಬ, ಧರ್ಮ, ಬದುಕುವ ಪರಿಸರ, ಸಂಘ-ಸಂಸ್ಥೆ ಎಲ್ಲದರ ವಿರುದ್ಧ ಹೋರಾಡಬೇಕು. ಇದು ಸರಳವಾದುದ್ದಲ್ಲ. ವ್ಯಕ್ತಿ ಏಕಾಂಗಿಯಾಗುತ್ತಾನೆ; ಹತಾಶನಾಗುತ್ತಾನೆ; ವಿಕ್ಷಿಪ್ತನಾಗುತ್ತಾನೆ; ಉಸಿರುಗಟ್ಟುವ ವಾತಾವರಣದಿಂದ ಹೊರಬರಲು ಹೆಣಗುತ್ತಾನೆ. ನಿಜವಾದ ವ್ಯಕ್ತಿಯಾಗಲು ಪ್ರಾಮಾಣಿಕ ಹೋರಾಟ ಮಾಡುತ್ತಾನೆ. ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸುತ್ತಾನೆ. ಸಮಾಜವೇ ಬಲವಾದ ಪ್ರತಿರೋಧ ನೀಡುತ್ತದೆ. ಈ ಸಂಘರ್ಷವೇ ನವ್ಯ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ.

ಶಾಂತಿನಾಥ ದೇಸಾಯಿ ಅವರು ನವ್ಯದ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾದ ಶೋಧ ನಡೆಸಿದರು. ತಮ್ಮ ಕಾದಂಬರಿಗಳ ನಿರೂಪಣೆಯನ್ನು ವಾಸ್ತವವಾದದ ನೆಲೆಯಲ್ಲಿ ಗ್ರಹಿಸಿದರು. ಬಾಲ್ಯ ಕಾಲದ ನೆನಪುಗಳಿಗೆ ಮೊರೆ ಹೋಗದೆ, ಪಾತ್ರಗಳನ್ನು ಚರಿತ್ರೆಯ ಭಾರದಿಂದ ತಪ್ಪಿಸಿ, ವರ್ತಮಾನದ ನೆಲೆಯಲ್ಲಿ ಚಿತ್ರಿಸಿದರು. ಮನೋವಿಜ್ಞಾನದ ನೆಲೆಯಲ್ಲಿ ಪಾತ್ರಗಳ ಅಂತರಂಗವನ್ನು, ಮನಸ್ಸಿನ ನೈಜ ಸ್ಥಿತಿಯನ್ನು ಪಾತ್ರಗಳ ಮೂಲಕ ಚಿತ್ರಿಸಿದರು. ಹೆಣ್ಣು ಗಂಡುಗಳ ನಡುವಿನ ಸಂಬಂಧವನ್ನು ಒಪ್ಪಿತ ನೈತಿಕ ಮೌಲ್ಯಗಳ ಒನ್ನೆಲೆಯಲ್ಲಿ ಗ್ರಹಿಸದೇ ಹೊಸ ನೈತಿಕ ಪ್ರಜ್ಞೆಯಿಂದ ಅಭಿವ್ಯಕ್ತಿಸಿದರು. ಕಾಮ

ಸಂಬಂಧಿ ಸಂದರ್ಭಗಳನ್ನು ಜವಾಬ್ದಾರಿಯಿಂದ ಚಿತ್ರಿಸಿದರು. ಹೀಗಾಗಿ ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳ ವಸ್ತು ಕಾಮ-ಪ್ರೇಮವೇ ಆಗಿದ್ದರೂ, ಹೆಣ್ಣು-ಗಂಡಿನ ಜೀವನ ಶೈಲಿಯನ್ನು ಹೊಸದಾಗಿ ರೂಪಿಸಲು ಪ್ರಯತ್ನಿಸಿದರು. ಹೆಣ್ಣು ಆಧುನಿಕ ಪ್ರಜ್ಞೆಯಿಂದ, ಗಂಡಸಿನ ಹುಸಿ ನೈತಿಕತೆಯನ್ನು ಪ್ರಶ್ನಿಸುತ್ತಾಳೆ. ಕನ್ನಡ ಕಾದಂಬರಿಗಳಲ್ಲಿ ಶಾಂತಿನಾಥರ ಕಾದಂಬರಿಗಳು ಭಿನ್ನವಾಗಿ ಕಾಣುತ್ತವೆ. ಕಾರಣ ಅವುಗಳ ಕಥಾವಸ್ತು.

ಮುಕ್ತಿ

'ಮುಕ್ತಿ' ದೇಸಾಯಿಯವರ ಮೊದಲ ಕಾದಂಬರಿ. ಸಾಮಾನ್ಯವಾಗಿ ಪ್ರಥಮ ಕಾದಂಬರಿಗೆ ಇರುವಂತಹ ಮಿತಿಗಳನ್ನೆಲ್ಲ ಮೀರಿ ಈ ಕಾದಂಬರಿ ಬೆಳೆದಿದೆ. ೧೯೬೧ರಲ್ಲಿ ಪ್ರಕಟವಾದ ಈ ಕಾದಂಬರಿ ಬದುಕಿನ ತಾಜಾತನದಿಂದ ಇಂದಿಗೂ ಪ್ರಸ್ತುತವಾಗುತ್ತದೆ. ನವ್ಯರ ಪ್ರಮುಖ ಲಕ್ಷಣಗಳಾದ ಆತ್ಮಶೋಧನೆ, ಮುಕ್ತಭಾಷೆ, ಕಾಮ, ಸಾವು, ಬದುಕಿನ ಹುಡುಕಾಟ, ಒಂಟಿತನ, ದ್ವಂದ್ವ ಈ ಮುಂತಾದವುಗಳು ಇಲ್ಲಿ ಕಾಣಿಸಿಕೊಂಡಿವೆ.

ಮುಕ್ತಿ ಎಂದರೆ ಇಲ್ಲಿ ಸತ್ತ ಮೇಲೆ ಸಿಗುವಂತಹುದಲ್ಲ. ಇದ್ದಾಗಲೇ ಕಾಣುವಂತಹದ್ದಾಗಿದೆ. ಆಧ್ಯಾತ್ಮದ ಹಿನ್ನಲೆಯಲ್ಲಿ ಬಳಕೆಗೊಂಡ ಈ ಪದಕ್ಕೆ ದೇಸಾಯಿ ಹೊಸ ಅರ್ಥ ಹೊರಡಿಸಿ ಬದುಕಿನ ಸ್ಪರ್ಷ ಕೊಟ್ಟಿದ್ದಾರೆ. ಮುಕ್ತಿಯೆಂದರೆ ಬಿಡುಗಡೆ. ಬದುಕಿನ ಜಟಿಲತೆಯಿಂದ ಬಿಕ್ಕಟ್ಟಿನಿಂದ ಬಿಡುಗಡೆ ಹೊಂದುವುದೇ ಇಲ್ಲಿಯ ಮುಕ್ತಿಯ ಆಶಯವಾಗಿದೆ. ಹೀಗಾಗಿ "ಮುಕ್ತಿ ಪದದ ಅರ್ಥವ್ಯಾಪ್ತಿ ಆಧ್ಯಾತ್ಮ ಪ್ರಪಂಚದಿಂದ ದೂರ ಸಿಡಿದು ಅನುಭವ ಪ್ರಪಂಚಕ್ಕೆ ಬರುತ್ತದೆ."[೧] ಇಡೀ ಜೀವನದ ಅನುಭವವೇ ಇಲ್ಲಿ ಕಾದಂಬರಿಯ ಪ್ರಮುಖ ಆಶಯವಾಗುವುದರಿಂದ, ಬದುಕಿನ ಅನೇಕ ಸಾಧ್ಯತೆಗಳನ್ನು ಲೇಖಕರು ತೆರೆದುತೋರಿಸಿದ್ದಾರೆ. "ಇರುವುದನ್ನು ಬಿಟ್ಟು ಇಲ್ಲದ್ದರ ಕಡೆ ತುಡಿಯುತ್ತಾ, ಒಮ್ಮೊಮ್ಮೆ ಇದ್ದುದರಲ್ಲಿಯೇ ಇಲ್ಲದ್ದನ್ನು ಹುಡುಕುತ್ತಾ ಅನೇಕ ಮನಸ್ಸುಗಳ ಆತ್ಮಶೋಧನೆಯನ್ನು ಈ ಕಾದಂಬರಿ ಮಾಡುತ್ತದೆ."[೨]

ಈ ಕಾದಂಬರಿಯಲ್ಲಿ ಲೇಖಕರು ಅನೇಕ ವಿಧದಲ್ಲಿ ಅಸ್ತಿತ್ವವನ್ನು ಹುಡುಕುತ್ತಾರೆ. ಹಳ್ಳಿಯಿಂದ ನಗರಕ್ಕೆ ಬಂದ ಸ್ವತಂತ್ರ ಅಸ್ತಿತ್ವವಿಲ್ಲದ ಗೌರೀಶನಂಥ ಪಾತ್ರ, ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ಜೀವನ ದೃಷ್ಟಿಯನ್ನು ಅಧ್ಯಯನ ಮಾಡಿದ ಶ್ರೀಕಾಂತನಂಥ ಪಾತ್ರ, ಪಾಶ್ಚಾತ್ಯ ಸಂಸ್ಕೃತಿಗಳ ಅಧ್ಯಯನ ಮಾಡಿ ಗಂಡಿನಂತೆ ಸ್ವೇಚ್ಛೆಯಿಂದ ಬದುಕುವ ಕಾಮಿನಿ, ಬದುಕಿನಲ್ಲಿ ಯಾವ ತೊಡಕುಗಳನ್ನು ಮಾಡಿಕೊಳ್ಳದೆ ಅತ್ಯಂತ ಸರಳವಾಗಿ ಜೀವನ ಸಾಗಿಸಿದ ಸತ್ಯೇಂದ್ರ, ರೋಹಿಣಿ, ಶಶಿಕಲಾ, ಮೇರಿ ಇಷ್ಟು ಜನ ಪಾತ್ರಗಳ ನಡುವಿನ ಸಂಬಂಧಗಳ ಜಾಲವನ್ನು ಕಾದಂಬರಿ ರೂಪಿಸಿದೆ.

ಮುಕ್ತಿ ಗೌರೀಶನ ಆತ್ಮಕಥೆ. ಈ ಕಥೆಯನ್ನು ದಿನಚರಿಯ ರೂಪದಲ್ಲಿ ಬರೆಯುವಲ್ಲಿ ಗೌರೀಶನ ಮುಖ್ಯ ಉದ್ದೇಶ ಎಲ್ಲ ಸಂಬಂಧಗಳನ್ನು ಕಡಿದುಕೊಂಡು ನೈರೋಬಿಗೆ ಹೊರಡುವ ಮೊದಲು ತನ್ನ ಗತ ಜೀವನಕ್ಕೆ ಒಂದು ರೂಪುಕೊಡುವುದು. ಈ ಕಾರ್ಯ ಕಲೆಯ ಮೂಲಕವೇ ಸಾಧ್ಯ ಎಂದು ಅವನು ನಂಬಿದ್ದಾನೆ. ಆದರೆ ಗೌರೀಶನ ಕಥೆ ಕೇವಲ ಅವನ ಭೂತಕ್ಕೆ ಮಾತ್ರ ಸೀಮಿತವಾಗಿಲ್ಲ ಜೀವನೋತ್ಸಾಹಿಯಾದ ಅವನಿಗೆ ಮಾನವೀಯ ಸಂಬಂಧಗಳಿಂದ ಬಿಡುಗಡೆ ಎನ್ನುವುದು ಸಾಧ್ಯವೇ ಇಲ್ಲ. ಹೀಗಾಗಿ ಅವನ ದಿನಚರಿಯ ಬಹಳಷ್ಟು ಭಾಗ ಅವನ ವರ್ತಮಾನ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಹೊಸ ಮೌಲ್ಯಗಳ ಬೆಳಕಿನಲ್ಲಿ ತನ್ನ ಬಾಳನ್ನು ರೂಪಿಸಿಕೊಳ್ಳಬಯಸುವ ಅವನಿಗೆ ಗತ ಜೀವನವನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಡಾಲಿಯೊಡನಿದ್ದ ತನ್ನ ಸಂಬಂಧದ ನಿಜವಾದ ಸ್ವರೂಪವನ್ನು ತಿಳಿಯುವುದು. ಕಾದಂಬರಿಯಲ್ಲಿ ಈ ಕ್ರಿಯೆ ವರ್ತಮಾನದ ಪಾತಳಿಯಲ್ಲಿ ನಡೆಯುತ್ತದೆ.

ಮುಕ್ತಿಯಲ್ಲಿ ಅನೇಕ ವ್ಯಕ್ತಿಗಳಿಗೆ ಸ್ಥಾನವಿದೆಯಾದರೂ ಗೌರೀಶನ ಭೂತದ ಮೇಲೆ ಪ್ರಭುತ್ವ ಸಂಪಾದಿಸಿದವರು ಇಬ್ಬರು ವ್ಯಕ್ತಿಗಳು. ಅವನ ಗೆಳೆಯ ಶ್ರೀಕಾಂತ ಹಾಗೂ ಶ್ರೀಕಾಂತನ ತಂಗಿ ಕಾಮಿನಿ. ಯೌವನದ ಹೊಸತಿಲಲ್ಲಿ ಈ ಸಂಬಂಧ ಒಂದು ದೃಷ್ಟಿಯಿಂದ ಅವನ ವೈಚಾರಿಕ, ಲೈಂಗಿಕ ವಿಕಾಸಕ್ಕೆ ಕಾರಣವಾದರೆ ಇನ್ನೊಂದು ರೀತಿಯಿಂದ ಅವನ ವ್ಯಕ್ತಿತ್ವದ ವಿಕಾಸಕ್ಕೆ ಮಾರಕವಾಗುತ್ತದೆ. ತನ್ನ ಗತಜೀವನದ ಕರ್ತಾರರಾದ ಇವರಿಂದ ತಾನೆಷ್ಟೇ ಪ್ರಯತ್ನಿಸಿದರೂ ಸ್ವತಂತ್ರನಾಗಲಾರೆ ಎನ್ನುವ ಭೀತಿ ಗೌರೀಶನನ್ನು ಯಾವಾಗಲೂ ಕಾಡುತ್ತಿರುತ್ತದೆ.

ಗೌರೀಶ ಶ್ರೀಕಾಂತರ ಸಂಬಂಧ ಕಾದಂಬರಿಯಲ್ಲಿ ತನ್ನ ಎಲ್ಲ ಗಹನತೆಯೊಂದಿಗೆ ಚಿತ್ರಿತವಾಗಿದೆ. ತನ್ನ ಹುಟ್ಟೂರಾದ ಸಿರ್ಸಿಯಿಂದ ಧಾರವಾಡಕ್ಕೆ ಕಾಲೇಜು ಕಲಿಯಲು ಬಂದ ಗೌರೀಶನಿಗೆ ತನ್ನೂರಿನವನೇ ಆದ ಸತ್ಯೇಂದ್ರನ ಮೂಲಕ ಶ್ರೀಕಾಂತನ ಪರಿಚಯವಾಗುತ್ತದೆ. ಮೊದಲ ಭೇಟಿಯಲ್ಲಿಯೇ ಶ್ರೀಕಾಂತನ ಮೋಹಕ ವ್ಯಕ್ತಿತ್ವ ಅವನನ್ನು ಬಲವಾಗಿ ಆಕರ್ಷಿಸುತ್ತದೆ. ಈ ಘಟನೆಯನ್ನು ವರ್ಣಿಸುವ ಗೌರೀಶನ ಮಾತುಗಳಲ್ಲಿ 'ಮೊದಲ ನೋಟದಲ್ಲಿಯೇ ನಾನು ಮಾರು ಹೋದೆ. ಅವನ ಬೆಚ್ಚಗಿನ ಕೈಯಲ್ಲಿ ಗೂಢವಾದ ಶಕ್ತಿಯಿತ್ತು.' ಅವರೀರ್ವರ ಸ್ನೇಹ ಗೌರೀಶನ ಭಾಷೆಯಲ್ಲಿ 'ಅಂಟಿದ ನಂಟು'. ಗೆಳೆತನವನ್ನು ದಾಟಿ ಗಾಢವಾದ ಪ್ರೀತಿಯಲ್ಲಿ ಕೊನೆಗೊಳ್ಳುತ್ತದೆ. ಗೌರೀಶನ ಸಹಜವಾದ ಆತ್ಮಸಮರ್ಪಣ ಶ್ರೀಕಾಂತನಿಗೆ ಶಕ್ತಿಯನ್ನೊದಗಿಸುತ್ತದೆ.

"ಗೌರೀ, ನೀನು ಯಾವಾಗಲೂ ನನ್ನ ಜೊತೆಗಿರಬೇಕು."

"ಹುಂ"

"ಯಾವಾಗಲೂ"

"ಸದೈವ"

ನನ್ನಿಂದ ತಪ್ಪುಗಳಾಗಬಹುದು, ಪ್ರಮಾದಗಳಾಗಬಹುದು, ಆದರೂ ನಿನ್ನ ಪ್ರೇಮ...

"ಅಚಲವಾಗಿರುವುದು"

"ನೀನು ಇಷ್ಟು ಒಳ್ಳೆಯವ ನಿನ್ನಲ್ಲಿ ಇಷ್ಟು ನಯ ವಿನಯ... ಗೌರೀ ನೀನು ಆ... ಆ ಚಂದ್ರನಂತೆ"

"ಆ ಚಂದ್ರನಿಗೆ ಬೆಳಕು ಸೂರ್ಯನದು"[೩]

ಶ್ರೀಕಾಂತನ ಪ್ರಭಾವೀ ವ್ಯಕ್ತಿತ್ವ, ಉದಾತ್ತತೆ, ಆದರ್ಶವಾದಿತ್ವ ಗೌರೀಶನ ಮೇಲೆ ಪ್ರಭಾವ ಬೀರುತ್ತದೆ. ಆದರೆ ಗೌರೀಶ ದುರ್ಬಲ. ಶ್ರೀಕಾಂತನ ಸ್ಥಿರತೆಯಾಗಲಿ, ಉನ್ಮುಖತೆಯಾಗಲಿ ಮೂಲತಃ ಅವನ ಸ್ವಭಾವಕ್ಕೆ ಹೊರತಾದವುಗಳು. ಇದರಿಂದಾಗಿ ಈ ಹೊಸ ವಾತಾವರಣದಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು, ತಾನಿರುವುದಕ್ಕಿಂತಲೂ ದುರ್ಬಲನಾಗಿ ಬಿಡುತ್ತಾನೆ. ಈ ಮಧ್ಯೆ ಶ್ರೀಕಾಂತನ ತಂಗಿ ಕಾಮಿನಿಯತ್ತ ಅವನ ಮನಸ್ಸು ಹರಿಯುತ್ತದೆ. ಆದರೆ ಅವಳ ತನ್ನ ಸಂಬಂಧವನ್ನು ಸ್ವತಂತ್ರವಾಗಿ ಬೆಳೆಯಿಸಿಕೊಂಡು ಬರುವ ಸಾಮರ್ಥ್ಯವಾಗಲಿ, ಅದಕ್ಕೆ ಬೇಕಾದ ಮನುಷ್ಯ ಸ್ವಭಾವದ ವಾಸ್ತವಿಕ ಜ್ಞಾನವಾಗಲಿ ಅವನಲ್ಲಿರುವುದಿಲ್ಲ. ಇದೂ ಅಲ್ಲದೆ ಕಾಮಿನಿಯದು ತನ್ನ ಅಣ್ಣನ ಸ್ವಭಾವಕ್ಕೆ ತೀರಾ ವಿರುದ್ಧವಾದ ಸ್ವತಂತ್ರ ವೃತ್ತಿಯ ಸ್ವಭಾವ. ಇದರಿಂದಾಗಿ ಗೌರೀಶನ ಜೀವನದಲ್ಲಿ ಬಗೆಹರಿಸಲಾಗದ ದುರಂತ ಸಮಸ್ಯೆಯೊಂದು ಹುಟ್ಟಿಕೊಳ್ಳುತ್ತದೆ.

ಈ ಸಮಸ್ಯೆಯಿಂದ ಅವನು ಯಾತನೆಯನ್ನನುಭವಿಸುವಾಗಲೇ ಶ್ರೀಕಾಂತನಿಗೆ ಟಿ.ಬಿ. ತಗಲಿ ಗೌರೀಶನಿಂದ ಮಾನಸಿಕವಾಗಿ ದೂರ ಸರಿಯುತ್ತಾನೆ. ಮರಣವನ್ನು ಎದುರಿಸುವ ಪ್ರಶ್ನೆಯ ಎದುರಿಗೆ ಉಳಿದ ಎಲ್ಲ ಪ್ರಶ್ನೆಗಳು ಅವನಿಗೆ ಗೌಣವಾಗಿ ಬಿಡುತ್ತವೆ. ಇದು ಗೌರೀಶನನ್ನು ಧೃತಿಗೆಡಿಸಿದರೂ ಅವನಿಗೆ ತಿಳಿಯದಂತೆಯೇ ಅವನ ಬಿಡುಗಡೆಗೆ ನಾಂದಿಯಾಗುತ್ತದೆ. ಗೌರೀಶ ಮುಂಬಯಿಗೆ ಬರುತ್ತಾನೆ. ಮುಂಬಯಿಯಂತಹ ಮಹಾನಗರದಲ್ಲಿ ಸಹಜವಾಗಿ ಅನಾಮಧೇಯಿತ್ವ ಅವನ ಅಲ್ಪತನದ ಅರಿವಿಗೆ ಹೊಂದಿಕೊಂಡು ನೆಮ್ಮದಿಯನ್ನು ತರುವುದಾದರೂ ಶ್ರೀಕಾಂತನ ಪ್ರಭಾವ ಕಡಿಮೆಯಾಗುವುದಿಲ್ಲ. ತನ್ನ ಪ್ರತಿಯೊಂದು ವಿಚಾರದಲ್ಲಿ, ಅನಿಸಿಕೆಯಲ್ಲಿ ಅದರ ಛಾಯೆಯನ್ನು ಗುರುತಿಸಿ ಗೌರೀಶ ಯಾತನೆಗೊಳಗಾಗುತ್ತಾನೆ. ಶ್ರೀಕಾಂತ ಆತ್ಮಹತ್ಯೆ ಮಾಡಿಕೊಂಡಾಗ ಆ ಆತ್ಮಹತ್ಯೆ ಒಂದು ವಿಧದಿಂದ ತನ್ನ ಆತ್ಮಹತ್ಯೆಯೂ ಹೌದು ಎನ್ನುವಂತೆ "ಅಯ್ಯೋ ಶ್ರೀಕಾಂತ ನಾನೂ ಸತ್ತೆ" ಎಂದು ಕೂಗಿಕೊಳ್ಳುತ್ತಾನೆ. ಆದರೆ ಗೌರೀಶನ ಈ "ಸಾವು" ಅವನ ಬಿಡುಗಡೆಯ ಹಾದಿಯಲ್ಲಿ ಮಹತ್ವದ ಘಟನೆಯಾಗಿ ಪರಿಣಮಿಸುತ್ತದೆ.

ಗೌರೀಶನನ್ನು ಭೂತಕ್ಕೆ ಬಂಧಿಸಿದ ಮತ್ತೊಬ್ಬ ವ್ಯಕ್ತಿ ಕಾಮಿನಿ. ಶ್ರೀಕಾಂತನಿಗೆ ತನ್ನಲ್ಲಿಯೇ ಅಮರತ್ವವನ್ನು ಕೊಟ್ಟು ಗೌರೀಶ ಅವನಿಂದ ಮುಕ್ತನಾಗುತ್ತಾನೆ. ಆದರೆ ಕಾಮಿನಿಯ ವಿಚಾರದಲ್ಲಿ

ಹಾಗಾಗುವುದಿಲ್ಲ. ಅವಳನ್ನು ತಿರಸ್ಕರಿಸಿ ಡಾಲಿಯೊಡನೆ ಆಫ್ರಿಕೆಗೆ ಹೊರಟಿದ್ದರೂ ಕೂಡ ಅವನ ಆತ್ಮ ಕಾಮಿನಿಗೆ 'ನೀನೇ ಬೇಕು ನೀನೇ ಬೇಕು' ಎಂದು ಕೂಗಿ ಹೇಳುತ್ತದೆ. ಹುಣ್ಣಿಮೆಯ ರಾತ್ರಿ ಗೌರೀಶನ ಭಾವನಾ ಜಗತ್ತನ್ನು ಪ್ರವೇಶ ಮಾಡುವ ಕಾಮಿನಿ ಅದನ್ನು ಸಂಪೂರ್ಣವಾಗಿ ಆಕ್ರಮಿಸಿಬಿಡುತ್ತಾಳೆ. ಆದರೆ ವಾಸ್ತವದ 'ಕೆಟ್ಟ ಹುಡುಗಿ' ಕಾಮಿನಿಗೂ ಗೌರೀಶನ ಕಲ್ಪನೆಯ ದಿವ್ಯ ಪ್ರೇಮದ 'ಕಾಮಿನಿ' ಪ್ರತಿಮೆಗೂ ಯಾವ ಸಂಬಂಧವೂ ಇಲ್ಲದೆ ಗೌರೀಶನ ಪ್ರೇಮ-ದ್ವೇಷಗಳಿಗೆ ಅರ್ಥವೇ ಉಳಿಯುವುದಿಲ್ಲ.

ಶ್ರೀಕಾಂತನ ಮನೆಯಲ್ಲಿ ಬೆಳೆದುನಿಂತ ಕಾಮಿನಿಯನ್ನು ಮೊದಲು ಕಂಡುಕೊಂಡವರು ಗುರುನಾಥ, ಗೋಪಾಲ. ಇವರು ಆ ಹುಡುಗಿಯ ಬಗ್ಗೆ ಮಾಡಿದ ಕಾಮೆಂಟ್ಸ್‌ನಿಂದಲೇ ಇವನಿಗೆ ಅಸೂಯೆ ಹುಟ್ಟುತ್ತದೆ. ಅವರ ಕಣ್ಣಿನಲ್ಲಿ ಅವಳನ್ನು ಮೊದಲ ಬಾರಿಗೆ ನೋಡಿ ಉದ್ಗರಿಸುತ್ತಾನೆ. "ಮೊದಲ ಸಲ ಕಾಮಿನಿಯನ್ನು ಹೊಸ ಬೆಳಕಿನಲ್ಲಿ ಕಂಡೆ... ಹದಿನೈದರ ಹೊಸತಿಲಲ್ಲಿ ಅರಳುತ್ತಿರುವ ಹೂವು ಕಾಮಪುಷ್ಪ!"[೪] positive ಆಗಿ ಪ್ರೀತಿಸುವ ಛಾತಿ ಇವನಿಗಿಲ್ಲವಾದ್ದರಿಂದ, ಗುರುನಾಥ ಗೋಪಾಲರು ಕ್ರಮವಾಗಿ ಕಾಮಿನಿಯ ಡ್ರಾಯಿಂಗ್ ಮಾಸ್ತರ್, ಕಾಲೇಜ್ ಗೆಳೆಯರು, ಶಿವರಾಮ ಕುಲಕರ್ಣಿ, ಸಂಸ್ಕೃತ ಪ್ರೊಫೆಸರು, ಕಾಂ.ಆಚಾರ್ಯ ಇವರೊಡನೆ ನಡೆಸಿದ ಸ್ನೇಹವನ್ನು ವರದಿ ಮಾಡಿ ಅಸೂಯೆಯ ಅಗ್ನಿಯಲ್ಲಿ ಬೇಯುತ್ತಿರುತ್ತಾನೆ. ಅಲ್ಲದೆ ಕಾಮಿನಿ ಏನು ಮಾಡುತ್ತಾಳೆ. ಯಾರೊಡನೆ ಮಾತನಾಡುತ್ತಾಳೆ ಎಂದು ನೋಡಲು ಪಿರೇಡುಗಳನ್ನು ತಪ್ಪಿಸಿ ಹೋಗುತ್ತಿರುತ್ತಾನೆ. ಇವಳ ಪ್ರೀತಿಯು ಗೌರೀಶನ ಕಡೆ ಹರಿಯುವ ಸಂಭವ ಇಲ್ಲದಾಗ ಸ್ವತಃ ಗೌರೀಶನೇ ಕಾಮಿನಿಯನ್ನು ಕೇಳಿರುತ್ತಾನೆ. "ಕಾಮಿನಿ, ನಿನಗೆ ನಾನು ಯೋಗ್ಯನಿಲ್ಲವೇ?" "ಯೋಗ್ಯ-ಅಯೋಗ್ಯ! ಆ ಪ್ರಶ್ನೆಯೇ ಈಗ ಬರುವುದಿಲ್ಲ... ಗೌರೀಶ, ನೀನು ಸ್ವಲ್ಪ ಹೆಚ್ಚು ಗಟ್ಟಿಯಿದ್ದಿದ್ದರೆ-ನಿನ್ನಲ್ಲಿ ಸ್ವಲ್ಪ ಹೆಚ್ಚು ಸಾಮರ್ಥ್ಯ..." ಒಮ್ಮೆಲೆ "ಕಾಮಿನಿಗೆ ತಾನು ಅನ್ನಬಾರದ್ದನ್ನು ಅಂದೆ ಎಂಬುದರ ಅರಿವಾಗುತ್ತದೆ.

ಕಾಮಿನಿಗೆ ಬೇಕಾದುದು ತನ್ನನ್ನು ಆಳಬಲ್ಲ, ತನ್ನ ಸ್ವೈರ ವೃತ್ತಿಯನ್ನು ನಿಯಂತ್ರಿಸಿ ಅಂಕಿತದಲ್ಲಿಟ್ಟುಕೊಳ್ಳಬಲ್ಲ ನಿಜವಾದ ಗಂಡು; ಪರಪ್ರಭಾವಕ್ಕೆ ಸಿಕ್ಕು ಹತ ಪೌರುಷವಾದ ಭಾವಜೀವಿಯಲ್ಲ."[೫] ಇದರ ಮಸುಕಾದ ಕಲ್ಪನೆ ಗೌರೀಶನಿಗೂ ಇದೆ. ಆದರೆ ಅವನೇನೂ ಮಾಡಲಾರ. ಅಲ್ಲದೆ ಇಲ್ಲಿ ಶ್ರೀಕಾಂತನಾಗಲಿ, ತಾಯಿ ಸರಳಾಬಾಯಿಯವರಾಗಲಿ ಅವಳ ಈ ರೀತಿಯ ವರ್ತನೆಯ ಬಗೆಗೆ ಏನನ್ನೂ ಹೇಳುವುದಿಲ್ಲ. ಹಾಗೂ ಏನನ್ನೂ ಕೇಳುವುದಿಲ್ಲ. ಒಂದು ಬಾರಿ ಗೌರೀಶನು, ಶ್ರೀಕಾಂತನಿಗೆ ಕಾಮಿನಿ 'ಅಡ್ಡದಾರಿ' ತುಳಿಯುತ್ತಿದ್ದಾಳೆ, ಅವಳಿಗೆ ಬುದ್ಧಿವಾದವನ್ನು ಹೇಳು ಅಂತ ತಿಳಿಸಿದಾಗ "ಗೌರೀಶ, ಕಾಮಿನಿ ಸ್ವತಂತ್ರಳು, ಅದರಂತೆ ನೀನು ಸ್ವತಂತ್ರ, ನಿಮ್ಮ ಅನುಭವ, ನಿಮ್ಮ ಭಾವನೆಗಳ ಬಗ್ಗೆ ಉಪದೇಶ ಮಾಡಲು ನಾನಾರು? ಉಪದೇಶ ಬೇಕಾದರೂ ಯಾತಕೆ? ಪ್ರತಿಯೊಬ್ಬ ಮನುಷ್ಯನಿಗೆ ಅನುಭವ ಪಡೆಯಲು ಹಕ್ಕಿದೆ. ಆ ಅನುಭವದಿಂದ ಉಂಟಾಗುವ ಸುಖ-ದುಃಖಕ್ಕೆ ಆತನೇ

ಹೊಣೆಗಾರ..."[1] ಗೌರೀಶ ಹಳ್ಳಿಯಿಂದ ಪಟ್ಟಣಕ್ಕೆ ಬಂದವನಾಗಿದ್ದಾನೆ. ಅವನಿಗೆ ಪಟ್ಟಣದ ಬದುಕನ್ನು ಅರಗಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ. ಆದರೆ ಶ್ರೀಕಾಂತ ಹಾಗೂ ಕಾಮಿನಿ ಪಟ್ಟಣದಲ್ಲೇ ಹುಟ್ಟಿ, ಪಟ್ಟಣದಲ್ಲೇ ಬದುಕಿದ್ದವರು. ಹೀಗಾಗಿ ಇವರಿಗೆ ಸ್ವಂತ ಅಸ್ತಿತ್ವ ಅನ್ನುವುದು ಇದೆ. ಆದರೆ ಗೌರೀಶನಿಗೆ ಸ್ವಂತ ಅಸ್ತಿತ್ವ ಎನ್ನುವುದು ಇಲ್ಲ. ಇನ್ನೊಬ್ಬರ ಮೇಲೆ ಅವಲಂಬಿತನಾಗುತ್ತಿರುತ್ತಾನೆ. ಕಾಮಿನಿಯನ್ನು ತುಂಬಾ ಉತ್ಕಟವಾಗಿ ಪ್ರೀತಿಸುತ್ತಿದ್ದ ಗೌರೀಶ, ಅವಳ ಸ್ವತಂತ್ರ ಮನೋವೃತ್ತಿಯನ್ನು ಕಂಡು ಅಸೂಯೆ ಪಡುತ್ತಿರುತ್ತಾನೆ. ಕಾಂ, ಆಚಾರ್ಯ ಗಾಂಗಲರವರೊಡನೆ ಕಾಮಿನಿ ಸಂಬಂಧ ಬೆಳೆಸಿದಾಗ ಅವನ ಪವಿತ್ರ ಪ್ರೇಮದ ಕಲ್ಪನೆ ನಾಶವಾಗಿ ದ್ವೇಷ ಸೇಡಿನ ಭಾವನೆ ಉರಿದೇಳುತ್ತದೆ.

ಎರಡನೆಯವರ ಸ್ವಾತಂತ್ರ್ಯವನ್ನು ಕಸಿಯುವ ಕಾರ್ಯಗಳೆಲ್ಲ ಪಾಪ ಎಂದು ಒಪ್ಪಿಕೊಂಡ ಗೌರೀಶ ಮರು ಉಸಿರಿನಲ್ಲೇ ನನ್ನಲ್ಲಿ ಶಕ್ತಿ ಮತ್ತು ಪ್ರಭಾವೀ ವ್ಯಕ್ತಿತ್ವ ಇದ್ದಿದ್ದರೆ ಕಾಮಿನಿಯನ್ನು ನನ್ನ ಹಿಡಿತದಲ್ಲಿಟ್ಟುಕೊಳ್ಳುತ್ತಿದ್ದೆ ಎಂದು ಆಲೋಚಿಸುತ್ತಾನೆ. ಇಲ್ಲಿ ಇವನು ಪ್ರೀತಿಸಿದ ಮಾತ್ರಕ್ಕೆ ಅವಳು ತನ್ನ ಸ್ವಾತಂತ್ರ್ಯವನ್ನು ಬಿಟ್ಟು ಕೊಡಬೇಕೆಂಬ ಧೋರಣೆಯಿದೆ. ಅದೂ ಅವಳ ಪ್ರೇಮವು ಖಾತ್ರಿಯಿಲ್ಲದಿದ್ದಾಗ, ಕಾದಂಬರಿಯಲ್ಲಿ ಶಶಿಕಲೆಯ ಪ್ರಸಂಗವು ಬರಿಯ ಸಾರಾಂಶದಲ್ಲಿ ಮುಗಿದು ಹೋಗುತ್ತದೆ. ಅವಳ ಒಂದು ವರ್ಷದ ಮುಕ್ತ ಮನಸ್ಸಿನ ಸಹವಾಸ ಒಂದು ದೃಷ್ಟಿಯಿಂದ ಅವಶ್ಯವಾಗಿ, ನಂತರ ಬೇಡವಾದಾಗ ಈ ನಿರಾಕರಣೆಯನ್ನು ಜೀವನದ ಅನಿವಾರ್ಯವಾಗಿ ಪರಿಗಣಿಸುತ್ತಾನೆ. ಆದರೆ "ಕಾಮಿನಿಯ ನಿರಾಕರಣೆಯನ್ನು ಮಾತ್ರ ಹೀಗೆ ನೋಡುವುದಿಲ್ಲ. ಇದೇ ರೀತಿ ತಾನು ಶಶಿಕಲೆಯೊಡನೆ ಸ್ವಚ್ಛಂದವಾಗಿ ವರ್ತಿಸುವಾಗ ಈ ಸ್ವಚ್ಛಂದ ಕಾಮಿನಿಯಲ್ಲೂ ಅನಿವಾರ್ಯವಿರಬಹುದೆಂಬ ವಿಚಾರ ಬರುವುದಿಲ್ಲ."[2] ಬದಲಾಗಿ ಕಾಮಿನಿ ತನ್ನನ್ನು ಹುಡುಕಿಕೊಂಡು ಬಂದು ಲಗ್ನವಾಗಲು ಒಪ್ಪಿದರೂ ಅವಳನ್ನು ಗೌರೀಶ ತಿರಸ್ಕರಿಸುತ್ತಾನೆ. ಶ್ರೀಕಾಂತನ ಮರಣದ ನಂತರ ಕಾಮಿನಿಯ ಸಂಪೂರ್ಣ ಅಧಃ ಪತನವಾದಾಗ ಅದಕ್ಕೆ ಅವಳ ಸ್ವಭಾವದಂತೆ ತನ್ನ ವರ್ತನೆಯೂ ಕೆಲಮಟ್ಟಿಗೆ ಕಾರಣ ಎನ್ನುವುದನ್ನು ಅವನು ಒಪ್ಪುವುದಿಲ್ಲ. ತಾನು ದುರ್ಬಲ, ಕಾಮಿನಿಯನ್ನು ಉಳಿಸುವ ಶಕ್ತಿ ತನ್ನಲ್ಲಿಲ್ಲ ಎನ್ನುವ ಅರ್ಧಸತ್ಯದಲ್ಲಿ ಸಮಾಧಾನ ಹೊಂದುತ್ತಾನೆ. ಕಾಮಿನಿಯ ಪ್ರಶ್ನೆ ಬಂದಾಗ ಗೌರೀಶ ಸಹಜವಾಗಿಯೇ ತನ್ನ ವಸ್ತುನಿಷ್ಠತೆಯನ್ನು ಕಳೆದುಕೊಳ್ಳುತ್ತಾನೆ. ಡಾಲಿ, ಸತ್ಯೇಂದ್ರ ಮೊದಲಾದವರಿಗೆ ಸ್ಪಷ್ಟವಾಗಿ ಕಾಣುವ ಸತ್ಯ ಅವನಿಗೆ ಎಟುಕುವುದಿಲ್ಲ.

ಶ್ರೀಕಾಂತ-ಕಾಮಿನಿಯರಿಂದ ಮುಕ್ತನಾಗಲು ಗೌರೀಶ ಮುಂಬೈಗೆ ಬರುತ್ತಾನೆ. ಅಲ್ಲಿ ಮಹೇಂದ್ರ ಮತ್ತು ಕಂಪನಿಯಲ್ಲಿ ಕೆಲಸ ಮಾಡುವಾಗ ಅವನಿಗೆ ಡಾಲಿಯ ಪರಿಚಯವಾಗುತ್ತದೆ. ಕಾಮಿನಿಯ ಸಾಹಚರ್ಯದಲ್ಲಿ ಬಂದ ಅನುಭವಗಳಿಂದ ಹಿಂಡಿ ಹಿಪ್ಪೆಯಾಗುತ್ತಿದ್ದಾಗ ಬರಿಯ ಸಹಾನುಭೂತಿ ಸಂತೈಕ್ಯ ನೀಡಿದ ಹೆಣ್ಣಲ್ಲ ಡಾಲಿ. ತನ್ನ ಭೂತಕಾಲವನ್ನು ವಸ್ತುನಿಷ್ಠವಾಗಿ ನೋಡುವ ಕಣ್ಣು

ಕೊಟ್ಟವಳೂ ಅವಳೇ. ಶ್ರೀಕಾಂತನ ಪ್ರಭಾವಕ್ಕೆ ಒಳಗಾಗಿರುವವರೆಗೂ ತನ್ನ ಬದುಕನ್ನು ತಾನೇ ಬದುಕಲಾರ ಎಂಬುದನ್ನು ಅವನೇ ಅರಿತಿರಲಿಲ್ಲ. ಶ್ರೀಕಾಂತನ ಸಾವಿನಿಂದ ತಾನೂ ಸತ್ತೆ ಎಂದೆನಿಸುತ್ತಿರುವ ಗಳಿಗೆಯಲ್ಲೇ ಅವನಿಗೆ ಪುನರ್ಜನ್ಮವಿತ್ತ ಡಾಲಿಯ ಸಂಬಂಧ ಬೆಳೆಯುತ್ತದೆ. ಭೂತಕಾಲದ ಭೂತದಿಂದ ದೂರ ಸರಿದಷ್ಟು 'ವರ್ತಮಾನ'ದ ಪ್ರತೀಕವಾಗಿದ್ದ ಡಾಲಿಗೆ ಹತ್ತಿರವಾಗುತ್ತಾನೆ. ಡಾಲಿಯ ಸಂಪರ್ಕದಲ್ಲಿ ಒಂದು ಬಗೆಯ ಸ್ಥಿರತೆಯನ್ನು ಪಡೆದುಕೊಳ್ಳುತ್ತಾನೆ. ಇವರಿಬ್ಬರ ಸಂಬಂಧದಲ್ಲಿ ಯಾವ ತರದ ಉದ್ವೇಶ, ಉದ್ವೇಗ, ಬಂಧನ, ತೊಡಕು ಇಲ್ಲವೆಂದು ಗೌರೀಶನೇ ಹೇಳುತ್ತಾನೆ. ಆರಂಭದಲ್ಲಿ ದೈಹಿಕವಾಗಿ ಒಂದಾಗಿದ್ದ ಇವರು ಕ್ರಮೇಣ ಮಾನಸಿಕವಾಗಿ ಒಂದಾಗುತ್ತಾರೆ. ಇವರಿಬ್ಬರ ನಡುವೆ ದೇಹವನ್ನು ಮೀರಿದ ಸಂಬಂಧ ಬೆಳೆದು, ಡಾಲಿಯ ಸಂಬಂಧ ಸಾಹಚರ್ಯದ ಮೂಲಕ ಸದೃಢವಾದ ವ್ಯಕ್ತಿಯಾಗುತ್ತಾನೆ. ನಿಜವಾದ ಪ್ರೀತಿ ಡಾಲಿಯ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಗೌರೀಶನೇ ಹೇಳುವ ಪ್ರಕಾರ "ಡಾಲಿ, ನಿನ್ನ ಮೂಲಕ ನನ್ನ ಹೃದಯಕ್ಕೆ ಅರ್ಥ ಹತ್ತುತ್ತಿದೆ. ನೀನು ಕೊಟ್ಟ ಕಣ್ಣಿನ ಮೂಲಕ ನನ್ನ ಹೃದಯದ ಪರಿಚಯ ನನಗಾಗಿದೆ. ಆದುದರಿಂದಲೇ ಕಾಮಿನಿ ನನಗೋಸ್ಕರ ಅಲ್ಲ ನಾನು ಅವಳಿಗೋಸ್ಕರ ಅಲ್ಲ-ಅವಳ ದಾರಿ ಬೇರೆ, ನನ್ನ ದಾರಿ ಬೇರೆ ಎಂದು ತಿಳಿವಳಿಕೆ ಬಂದದ್ದು ನಿನ್ನ ಮೂಲಕವೇ. ನೀನು ಕೊಟ್ಟ ಹೃದಯ ಸ್ಥಿರತೆಯ ಮೂಲಕವೇ..."[೮] ಎಂದು ಹೇಳುವುದರ ಮೂಲಕ ಪೂರ್ಣ ರೂಪದ ಅಸ್ತಿತ್ವವಾದೀ ಪಾತ್ರವಾಗಿ ಆತ ಬೆಳೆದು ನಿಲ್ಲುತ್ತಾನೆ.

ಗಂಡಿನಂತೆ ಸ್ವೇಚ್ಛೆಯಿಂದ ಬದುಕುವ ಕಾಮಿನಿಗೆ ಸಿದ್ಧಾಂತ, ಪ್ರೇಮ, ಕಾಮ ಇವುಗಳ ಒಳ ಅರ್ಥಗಳ ತುಡಿತ ಅನಿವಾರ್ಯವಾಗುವುದಿಲ್ಲ. ಪ್ರೇಮ, ಕಾಮಗಳನ್ನು ಆಟದ ಗೊಂಬೆಗಳಂತೆ ಬಳಸುವ ಈಕೆಗೆ ಬದುಕು ಗಂಭೀರ ಎಂದು ಅನ್ನಿಸುವುದೇ ಇಲ್ಲ. ಹೀಗಾಗಿ ಪ್ರಾರಂಭದಿಂದ ಕೊನೆಯವರೆಗೆ ಗೌರೀಶನಂತಹವರಿಗೆ ಈಕೆ ಒಡೆಯದ ಒಗಟಾಗುತ್ತಾಳೆ. ಇತರ ಸ್ತ್ರೀ ಪಾತ್ರಗಳಲ್ಲಿ ರೋಹಿಣಿ, ಶಶಿಕಲಾ, ಮೇರಿ ಈ ಮೂವರು ಪೂರಕವಾಗಿ ಬರುತ್ತಾರೆ. ರೋಹಿಣಿ ಶ್ರೀಕಾಂತನನ್ನು ಪ್ರೀತಿಸುತ್ತಿರುತ್ತಾಳೆ. ಆದರೆ ಶ್ರೀಕಾಂತ ಅವಳನ್ನು ಆ ಅರ್ಥದಲ್ಲಿ ಪ್ರೀತಿಸುತ್ತಿರುವುದಿಲ್ಲ. ಆದರೆ ಮೇರಿ ಮಾತ್ರ ಈ ಕಾದಂಬರಿಯಲ್ಲಿ ಸ್ವಲ್ಪೇ ಸಮಯದ ಪ್ರವೇಶ ಪಡೆದರೂ ಗಂಭೀರ ಆಲೋಚನೆಯತ್ತ ಗಮನ ಸೆಳೆಯುತ್ತಾಳೆ. ಶ್ರೀಕಾಂತನಿಗೆ ಮೇರಿ ಅನಿವಾರ್ಯವಾಗುವುದು ಬದುಕಿನ ಸತ್ಯವೊಂದರ ಪರಿಚಯವಾದಂತಾಗುತ್ತದೆ. ಶ್ರೀಕಾಂತನ ಮೇಲೆ ಮೇರಿ ಎಷ್ಟು ಪ್ರಭಾವ ಬೀರಿದ್ದಳೆಂದರೆ ಅವನ ಸೈದ್ಧಾಂತಿಕ ವ್ಯಕ್ತಿತ್ವವೆಲ್ಲಾ ಪುಡಿಪುಡಿಯಾಗುವಷ್ಟು. ಬದುಕು ಸಿದ್ಧಾಂತಗಳನ್ನು, ಆದರ್ಶಗಳನ್ನು ತಳ್ಳಿ ಸ್ಫುರಿಸುತ್ತದೆ ಎಂಬುದಕ್ಕೆ ಮೇರಿ ಒಳ್ಳೆಯ ಉದಾಹರಣೆಯಾಗುತ್ತಾಳೆ. ಮೇರಿಯಿಂದ ಓಡಿಹೋಗುತ್ತಿದ್ದ ಅಥವಾ ಮೇರಿಯ ಮೂಲಕ ಬೆಳಕಿಗೆ ಬಂದ ತನ್ನ ಹೊಸ ವ್ಯಕ್ತಿತ್ವದಿಂದ ಓಡಿಹೋಗುತ್ತಿದ್ದ ಶ್ರೀಕಾಂತನ ದಿನಚರಿಯಲ್ಲಿ ಮೇರಿ ವಿಶಿಷ್ಟ ಸ್ಥಾನ ಪಡೆದಿದ್ದಾಳೆ.

"ಪಾಪದ ಮಾತಲ್ಲವಿದು... ನನ್ನ ರಕ್ತದಲ್ಲಿಯ ಶ್ವಾಪದದ ಮಾತಿದು. ನನ್ನ ಅವನತಿಯ ಪ್ರಶ್ನೆಯಲ್ಲವಿದು. ನನ್ನ ವ್ಯಕ್ತಿತ್ವದ ಶಿಥಿಲತೆಯ ಪ್ರಶ್ನೆಯಿದು. ಈ ಶ್ವಾಪದವು ನನ್ನ ಅಂತರಂಗದಲ್ಲಿಯ ಅವ್ಯಕ್ತ ಮೂರ್ತಿಯನ್ನು ಭಂಜಿಸಿ, ಚೂರು ಚೂರಾಗಿ ಮಾಡಿ ಒಗೆಯುತ್ತಿದೆ ಎಂಬ ವೇದನೆ ಈ ಟೀ.ಬಿ.ಯ ವೇದನೆಗಿಂತ ತೀಕ್ಷ್ಣವಾಗಿದೆ... ಧಾರವಾಡಕ್ಕೆ ಹೋಗಬೇಕು ಅಲ್ಲಿ ನನ್ನ ಕೋಣೆಯ ಅಬಾಧಿತ ಏಕಾಂತತೆಯಲ್ಲಿ ಈ ಹಸಿದ ಹುಲಿಯನ್ನು ಕೊಂದು ಮುಕ್ತನಾಗಬೇಕು. ನಾನು ನಾನಾಗಬೇಕು... ಶ್ರೀಕಾಂತನ ಈ ಮಾತುಗಳ ಮುಖಾಂತರ ಮೇರಿಯ ವೈಶಿಷ್ಟ್ಯತೆ ಸ್ಪಷ್ಟವಾಗುತ್ತದೆ. ಒಂದರ್ಥದಲ್ಲಿ ಊರ್ಧ್ವಮುಖವಾಗಿ ಸಾಗಿದ್ದ ಶ್ರೀಕಾಂತನ ವ್ಯಕ್ತಿತ್ವವನ್ನು ಕೈಗೆ ತೆಗೆದುಕೊಂಡು ಅದರಲ್ಲಿ ಕಾಮದ ಮುಖಾಂತರ ಬದುಕಿನ ಅನಿವಾರ್ಯತೆಯನ್ನು ಹುಟ್ಟಿಸಿದ ಮೇರಿ ವಿಚಿತ್ರ ವ್ಯಕ್ತಿತ್ವ ಪಡೆದ ಪಾತ್ರವಾಗುತ್ತಾಳೆ.

ಹೀಗೆ ಗೌರೀಶನ ಬದುಕಿನ ಹುಡುಕಾಟದಲ್ಲಿ ಪಾಲ್ಗೊಂಡ ಅನೇಕ ಪಾತ್ರಗಳು ತಮ್ಮ ತನವನ್ನುಳಿಸಿಕೊಂಡೇ ಗೌರೀಶನೊಂದಿಗೆ ಸ್ಪಂದಿಸುತ್ತವೆ. ಗೌರೀಶ ಈ ಕಾದಂಬರಿಯ ಪಾತ್ರಗಳ ಮುಖಾಂತರ ಒಂದರ್ಥದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಸ್ವತಂತ್ರವಾದ ವ್ಯಕ್ತಿತ್ವವೇ ಇರದ ಗೌರೀಶನ ಬದುಕಿನಲ್ಲಿ ಬಂದ ಅನೇಕ ಪಾತ್ರಗಳು ಗೌರೀಶನಿಗೆ ಹೊಸ ವ್ಯಕ್ತಿತ್ವವೊಂದನ್ನು ರೂಪಿಸಿಕೊಡುತ್ತವೆ. ಹೀಗಾಗಿ ಗೌರೀಶ ಕೇವಲ ಇಲ್ಲಿಯ ಸೂತ್ರದ ಗೊಂಬೆಯಾಗುತ್ತಾನೆ. ಆದರೆ ಕೊನೆಕೊನೆಗೆ ತನ್ನ ವ್ಯಕ್ತಿತ್ವ ರೂಪುಗೊಂಡ ನಂತರ, ತಾನೂ ಈ ಕಾದಂಬರಿಯ ಪಾತ್ರವಾಗುವ ಅನಿವಾರ್ಯತೆಯನ್ನು ತಂದು ಕೊಡುತ್ತಾನೆ. ಹೀಗಾಗಿ ಕಾದಂಬರಿ ಮಹತ್ವಪೂರ್ಣವಾಗುತ್ತದೆ.

ವಿಕ್ಷೇಪ

ಶಾಂತಿನಾಥ ದೇಸಾಯಿಯವರ ಎರಡನೆಯ ಕಾದಂಬರಿ 'ವಿಕ್ಷೇಪ' ವಸ್ತು ಹಾಗೂ ತಂತ್ರ ಇವೆರಡರ ದೃಷ್ಟಿಯಿಂದಲೂ ಮುಕ್ತಿಗಿಂತ ಭಿನ್ನವಾಗಿದೆ. ಮುಕ್ತಿಯ ನಾಯಕ ಗೌರೀಶ ಪ್ರಭಾವಗಳಿಂದ ತಪ್ಪಿಸಿಕೊಂಡು ತನ್ನತನ ಉಳಿಸಿಕೊಳ್ಳಲು ಹೋರಾಟ ನಡೆಸಿದವ. ಆದರೆ ಕೇವಲ ಅಸ್ತಿತ್ವವಾದಿಯಾದ 'ವಿಕ್ಷೇಪ'ದ ನಾಯಕ ರಾಹುಲನಿಗೆ ಗೌರೀಶನ ಯಾತನೆಯೂ ಇಲ್ಲ. ಬಿಡುಗಡೆಯ ಜರೂರೂ ಇಲ್ಲ. ಅವನ ಅವಸ್ಥೆ 'ವಿಕ್ಷೇಪ'. ಮಾರುತಿ ಶಾನಭಾಗರು ಹೇಳುವಂತೆ 'ಯೋಗಮೀಮಾಂಸೆಯ ಈ ಪದ ಸೂಚಿಸುವುದು ಹೊಯ್ದಾಟದ ನಿರ್ದಿಷ್ಟ, ಗತಿ-ಗುರಿಗಳಿಲ್ಲದ ಅನವಸ್ಥೆ."[೧೦] ನೆಲೆ ಕಳೆದುಕೊಂಡು, ವೇಷದಿಂದ ವೇಷಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ತನ್ನನ್ನು ತೂರಿಸಿಕೊಳ್ಳುವುದು ರಾಹುಲ ಬಯಸುವ ಅವಸ್ಥೆ. ಕಾದಂಬರಿಯ ಪ್ರಮುಖ ಪಾತ್ರಗಳಾದ ಮಾಧವಿ, ವೈದೇಹಿ, ರೋಜಿ, ಕುಂದಾ ಮೊದಲಾದವರೊಡನೆ ಅವನು ಕಟ್ಟಿ ಕೆಡಿಸುವ ಸಂಬಂಧಗಳ ಮೂಲ ಪ್ರೇರಣೆ ಈ ಅವಸ್ಥೆಯಲ್ಲಿಯೇ ಇದೆ. ಮುಕ್ತಿಯ ಕಥೆಗೆ ಒಂದು ಮುಕ್ತಾಯವಿದೆ. ಆದರೆ 'ವಿಕ್ಷೇಪ'ಕ್ಕೆ ಅಂಥ

ಮುಕ್ತಾಯದ ಸಾಧ್ಯತೆಯೇ ಇಲ್ಲ. ಇದಕ್ಕಾಗಿಯೇ ಏನೋ ಭೂತ-ವರ್ತಮಾನಗಳ ನಡುವೆ ಕ್ರಿಯಾತ್ಮಕ ಸಂಬಂಧ ಬೆಳೆಸುವ ವರ್ತಮಾನಗಳ ನಡುವೆ ಕ್ರಿಯಾತ್ಮಕ ಸಂಬಂಧ ಬೆಳೆಸುವ ತಂತ್ರವನ್ನು 'ಮುಕ್ತಿ' ಹುಡುಕಿಕೊಂಡರೆ, 'ವಿಕ್ಷೇಪ' ಕಾಲಕ್ಕೆ ವಿಶೇಷ ಗಮನ ಕೊಡದೆ, ಮಾನವೀಯ ಸಂಬಂಧಗಳ ಸುತ್ತ ಘಟನೆಗಳನ್ನು ಹೆಣೆದು ನಾಯಕನ ವಿಕ್ಷಿಪ್ತ ಮನಃಸ್ಥಿತಿಯನ್ನು ಚಿತ್ರಿಸುವ ತಂತ್ರವನ್ನು ಆಯ್ದುಕೊಳ್ಳುತ್ತದೆ.

ರಾಹುಲ ಕಾದಂಬರಿಯ ಕೇಂದ್ರ ಪಾತ್ರ. ಅತ್ಯಂತ ಬುದ್ಧಿವಂತನೂ, ರೂಪವಂತನೂ ಹಣಕಾಸಿನ ಅನುಕೂಲವುಳ್ಳವನೂ ಆದ ರಾಹುಲನಿಗೆ ತನ್ನ ಕೈಯಳತೆಯಲ್ಲಿ ಸಿಗುವ ಬದುಕಿನ ಬಗೆಗೆ ಆಸಕ್ತಿಯಿಲ್ಲ. ಈ ಅನಾಸಕ್ತಿ ಇದ್ದೂ, ಮಾನವೀಯ ಸಂವೇದನೆಗಳ ಜೀವಂತ ಕ್ಷಣಗಳಿಗೆ ತನ್ನನ್ನು ತಾನು ಕೊಟ್ಟುಕೊಳ್ಳುವಲ್ಲಿಯೇ ರಾಹುಲನ ವಿಕ್ಷಿಪ್ತ ವರ್ತನೆಗಳಿಗೆ ಅರ್ಥ ಒದಗುತ್ತದೆ. ಹಾಗಾಗಿ ರಾಹುಲನಂಥ ವ್ಯಕ್ತಿಗಳಿಗೆ ಅಸ್ಪಷ್ಟ ಆಕಾರಹೀನ ಭವಿಷ್ಯವು ಇಲ್ಲದ ತಲ್ಲಣಗಳನ್ನು ವರ್ತಮಾನದ ಕ್ಷಣಗಳಲ್ಲಿ ಹುಟ್ಟು ಹಾಕುತ್ತದೆ. ಮೊದಲಿಗೆ ಮಾಧವಿಯನ್ನು ತನ್ನ ಯೋಗ್ಯತೆಗೆ ತಕ್ಕವಳೆಂದು ತಿಳಿದು ಸಂತೃಪ್ತಿಯನ್ನು ಹೊಂದಿದ ರಾಹುಲ ಅದೇ ಮಾಧವಿ ತನ್ನನ್ನು ಭವಿಷ್ಯದಲ್ಲಿ ಇಲ್ಲವಾಗಿಸಬಹುದೆಂಬ ಆತಂಕಕ್ಕೆ ಈಡಾಗುತ್ತಾನೆ. ಮಾಧವಿಯನ್ನು ನಿರಾಕರಿಸಲು ತಾರ್ಕಿಕ ಕಾರಣವೊಂದನ್ನು ಪ್ರೊ. ವಿಲಿಯಮ್ಸ್‌ರೊಂದಿಗಿನ ಚರ್ಚೆಯ ಮೂಲಕ ಆತ ಕಂಡುಕೊಳ್ಳುತ್ತಾನೆ. ಅವಳ ಪ್ರೇಮದ ಬಗ್ಗೆ ಸಂದೇಹವಿಲ್ಲವಾದರೂ ಕುತೂಹಲವಿದೆ. ಮಾಧವಿ ಬಯಸುವ 'ಪಿತೃಮೂರ್ತಿ' ರಾಹುಲನನ್ನೇ ಇಲ್ಲವೆ ವಿದೇಶಕ್ಕೆ ಹೋಗುವ ಅನುಕೂಲವಿದ್ದು, ಉಚ್ಚ ಅಧಿಕಾರಿಯಾಗಿ ಶ್ರೀಮಂತ ಜೀವನವನ್ನು ಭೋಗಿಸಲು ಅವಕಾಶವಿರುವ ರಾಹುಲನನ್ನೇ?

ಮಾಧವಿಯ ಆಧುನಿಕತೆಯ ಬಗ್ಗೆ ಸಂದೇಹವಾಗಿದ್ದರೂ ಅವಳ ಆಧುನೀಕರಣ ಶ್ರೀಮಂತಿಕೆಯಲ್ಲಿ ಬಾಳುವಷ್ಟರ ಮಟ್ಟಿಗೆ ಕಾರು, ಸೇವಕರು ಇಂತಹ ವಿಧಾನಗಳನ್ನು ಉಪಭೋಗಿಸುವಷ್ಟರ ಮಟ್ಟಿಗೆ ಮಾತ್ರ ಸೀಮಿತವಾಗಿದೆಯೆ? ಇಲ್ಲವೆ ತನ್ನಂತೆ ಬುದ್ಧಿಯ ಮೂಲಕ ಪರಿಸರಗಳ, ಸಂಬಂಧಗಳ, ನೀತಿಯ ಹೊಸ ಅರ್ಥವನ್ನು ಸಂಪಾದಿಸಿದ ವ್ಯಕ್ತಿತ್ವದ ನವೀನ ಆವಿಷ್ಕಾರವಾಗಿದೆಯೆ? ಸಾಮಾಜಿಕ ನೀತಿಗೆ ವಿಸಂಗತವಾದ ಆದರೆ ಶ್ರೀಮಂತಿಕೆಯ ಆಡಂಬರಕ್ಕೆ ಒಗ್ಗುವ ತನ್ನದೇ ತಾಯಿ ಮತ್ತು ಕಕ್ಕನ ಅನೈತಿಕ ಸಂಬಂಧದ ನೆರಳಿನಲ್ಲಿ ಸದಾ ಬದುಕುವಾಗಲೂ ಅವಳು ರಾಹುಲನಂತಹ ವಿಚಾರವಂತ ತರುಣನ ವಿವಾಹಪೂರ್ವ ದೈಹಿಕ ಸಂಬಂಧದ ಆಹ್ವಾನಕ್ಕೆ ಹಿಂದೆ ಮುಂದೆ ನೋಡುವಾಗ ಅವಳ ಅವಿಶ್ವಾಸ ಸೂಚಿಸುವುದಾದರೂ ಏನನ್ನು? ಆಧುನಿಕತೆಯನ್ನೇ, ಸಾವಧಾನವಾಗಿರುವ ಚಾತುರ್ಯವನ್ನೇ, ಇಲ್ಲವೆ ಅಪ್ರಬುದ್ಧತೆಯನ್ನೇ? ಹಣಕೇಂದ್ರಿತವಾದ ಪರಿಸರದ ಪ್ರಭಾವಕ್ಕೊಳಗಾದ ಮಾಧವಿ ತನಗೆಂದೂ ಸಂಗಾತಿಯಾಗಲಾರಳೆಂಬುದನ್ನು ರಾಹುಲ ಕಂಡುಕೊಳ್ಳುತ್ತಾನೆ.

ಆದರೆ ವ್ಯಕ್ತಿ ಸಂಬಂಧ ಮೊಳೆಯಲು ಬೇಕಾದ ಆತ್ಮ ಪ್ರೀತಿಗೆ ಅತ್ಯಗತ್ಯವಾದ ಕೇಂದ್ರ ಯಾವುದು ಎಂಬುದರ ಬಗ್ಗೆ ರಾಹುಲ ಗೊಂದಲಕ್ಕೊಳಗಾಗುತ್ತಾನೆ. "ಯೋಗಿಗಳಿಗೆ ಸಾಧ್ಯವಾಗುವ ವ್ಯಕ್ತ್ಯಾತೀತ ಕೇಂದ್ರದೊಂದಿಗಿನ ಸಂಪರ್ಕ ರಾಹುಲನಂತಹವರಿಗೆ ಸಾಧ್ಯವಿಲ್ಲ"[೧೧] ಗಂಡು ಹೆಣ್ಣಿನ ಸಂಬಂಧದಲ್ಲಿ ಆ ಕೇಂದ್ರ ದೊರಕಬಹುದೆ? ಎಂಬ ಪ್ರಶ್ನೆ ರಾಹುಲನದು. ಮಾಧವಿಯನ್ನು ಮದುವೆಯಾದರೆ ತನ್ನ ಉದ್ಧಾರವಾಗುವುದೆ? ಎಂಬ ಪ್ರಶ್ನೆಯನ್ನೆತ್ತುವ ರಾಹುಲನಿಗೆ ಉದ್ಧಾರವೆಂದರೇನು? ಎಂಬುದು ನಿಜಕ್ಕೂ ತನಗೆ ಗೊತ್ತಿಲ್ಲವೆಂದು ಒಪ್ಪಿಕೊಳ್ಳುವ ಪ್ರಾಮಾಣಿಕತೆಯಿದೆ. ರಾಹುಲನ ಈ ಅಹಂನಿಷ್ಠ ಆಲೋಚನೆಗಳೇ ಉತ್ತರ ಕಾಣದ ಪ್ರಶ್ನೆಗಳಾಗಿ, ಆತನ ಬದುಕು ಚುಕ್ಕಾಣಿ ಇಲ್ಲದ ನಾವೆಯಂತೆ ಆಗಿಬಿಡುತ್ತದೆ. ಈ ಅಹಂಭಾವವನ್ನು ಮಾಧವಿ, ಕುಂದಾರೊಂದಿಗಿನ ಸಂಬಂಧದಲ್ಲಿ ತೃಪ್ತಿಪಡಿಸಿಕೊಳ್ಳುತ್ತಲೇ ಹೋದರೂ ಆಂತರಿಕ ಶೂನ್ಯತೆಯಿಂದ ಅವನು ನರಳುತ್ತಾನೆ.

ಏಕೆಂದರೆ ಸ್ವೀಕೃತಿಗೆ ಪೂರಕವಾಗಿ 'ಪ್ರೀತಿ-ದಾನ'ವನ್ನು ಮತ್ತೊಂದು ವ್ಯಕ್ತಿಗೆ ನೀಡಲು ಬೇಕಾದ ಸಾಮರ್ಥ್ಯ ಆತನಲ್ಲಿಲ್ಲವೆಂದು ಪ್ರೊ. ವಿಲಿಯಮ್ಸ್ ಸ್ಪಷ್ಟಪಡಿಸುತ್ತಾರೆ. ಯಾವುದೇ ಆದರ್ಶಕ್ಕೆ ಕಟ್ಟುಬೀಳದ ಅಸಹಜ ನಿರಾಶಾದಾಯಕ ವ್ಯಕ್ತಿತ್ವ ತನ್ನದು ಎಂದು ವೈದೇಹಿಯ ಎದುರಿಗೆ ತನ್ನನ್ನು ಬಣ್ಣಿಸಿಕೊಳ್ಳುವ ರಾಹುಲನ ಪ್ರಜ್ಞೆಗೆ ಹೊರತಾಗಿ ಕಾದಂಬರಿಕಾರರ ನಿರೂಪಕ ಪ್ರಜ್ಞೆ ಕೆಲಸ ಮಾಡುತ್ತಿದೆ. ರಾಹುಲನ ಉದ್ವಿಗ್ನ, ವಿಕ್ಷಿಪ್ತ ಮನಸ್ಸಿನ ಅನ್ವೇಷಣೆಯನ್ನು ನಿರೂಪಕ ಪ್ರಜ್ಞೆಯೇ ಕೈಗೊಳ್ಳುವುದರಿಂದ ವಿಕಾಸಗೊಂಡ ಪಾತ್ರವಾಗಿ ರಾಹುಲ ಇಲ್ಲ. ಯಾವ ನಂಬಿಕೆಯ ನೆಲೆಯೂ ಇಲ್ಲದ ಮುಕ್ತ ಆಯ್ಕೆಯ ಸಂದಿಗ್ಧದಲ್ಲಿ ಉದ್ವಿಗ್ನ ಸ್ಥಿತಿಯನ್ನು ಅನುಭವಗಮ್ಯವಾಗಿಸುವ ಉದ್ದೇಶವನ್ನು ಕಾದಂಬರಿ ಹೊಂದಿದೆ. ಆದ್ದರಿಂದ 'ರಾಹುಲ'ತನವನ್ನು ಕಂಡರಿಸುವುದಷ್ಟೇ ನಿರೂಪಕ-ಲೇಖಕರ ಆಶಯವಾಗಿದೆ. ಇಂಥ ರಾಹುಲ ವಿಕ್ಷಿಪ್ತತೆಯನ್ನೇ ವಸ್ತುನಿಷ್ಠವಾಗಿ, ಆತ್ಮ ವಿಮರ್ಶಕ ನೆಲೆಯಲ್ಲಿ ಅರಿತು ಅದರಿಂದ ಮುಕ್ತಗೊಳ್ಳುವ ಹವಣಿಕೆಯನ್ನು 'ಮುಕ್ತಿ'ಯ ಗೌರೀಶ, 'ಅಂತರಾಳದ ವಿಕ್ರಮರಾಣೆ, 'ಸಂಬಂಧ'ದ ಶೀತಲಕುಮಾರ, 'ಬೀಜ'ದ ಶ್ರೇಯಾಂಸರಲ್ಲಿ ಕಾಣಬಹುದು.

ಕಾದಂಬರಿಯ ಮಧ್ಯಂತರದವರೆಗಿನ ಭಾಗವನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡರೆ ರಾಹುಲನೂ ಬದುಕಿನ ಅಸಂಗತತೆಯ ಎಚ್ಚರದಲ್ಲಿಯೇ ಬದುಕಿನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವ ಸ್ವಯಂತೃಪ್ತ ಪಾತ್ರವೆನಿಸಿಬಿಡುತ್ತದೆ. 'ಜೀವನವೆಂದರೆ ಅರ್ಥಹೀನವಾದ ಮರ' ಎಂದು ರಾಹುಲ ತೀರ್ಮಾನಿಸುತ್ತಾನೆ. ಅವನು ವರ್ಣಿಸುವ ಜೀವನ ಮರದ ರೂಪಕ ಇಂತಿದೆ. ಈ ಜೀವನವೆಂಬ ಮರವನ್ನು ಆನೆ ಅಲುಗಾಡಿಸುತ್ತಿದೆ; ಇಲಿಗಳೆರಡು ಟೊಂಗೆಗಳನ್ನು ಕಡಿಯುತ್ತಿವೆ; ಸರ್ಪಗಳು ಬಾಯ್ತೆರೆದು ನಿಂತ ಬಾವಿಯಲ್ಲಿ ಬೀಳದಿರಲೆಂದು ಮನುಷ್ಯ ಟೊಂಗೆಯನ್ನು ಹಿಡಿದೇ ಜೇನುಗೂಡಿನಿಂದ ತೊಟ್ಟಿಕ್ಕುವ ಜೇನನ್ನು ಆಸೆಯಿಂದ ನೆಕ್ಕುತ್ತಾನೆ.

ರಾಹುಲನ ಸ್ನೇಹಿತ ರಣಜಿತನ ಪ್ರಕಾರ, ಕಣ್ಣುಮುಚ್ಚಿ ಕಲ್ಪನೆಯ ಕುದುರೆಯನ್ನೇರಿ ಆನೆ, ಇಲಿ, ಹಾವುಗಳನ್ನೆಲ್ಲ ಮರೆತು, ತುಪ್ಪ ಸವಿಯುವುದೇ ಸರಿ. ಏಕೆಂದರೆ ಕೊನೆಯಲ್ಲಿ ಏನಾಗಬೇಕೋ ಅದು ಆಗೇ ತೀರುವುದು. ಹಾಗಾಗಿ ಮುಕ್ತಿಯ ಮಾರ್ಗದರ್ಶನ ಮಾಡುವ ಈ ರೂಪಕದಲ್ಲಿನ ಯಕ್ಷಿ ಬರೇ ಮಾಯೆ. ಬಾವಿಯೊಂದೇ ಸತ್ಯ. ಈ ಸತ್ಯ ರಣಜಿತನಂಥವರಿಗೆ ಬೇಡದ ಸತ್ಯ. ರಾಹುಲನ ಸಮಸ್ಯೆ ಏನೆಂದರೆ ಆತ ಇಂಥ ಸರಳ ನಿರ್ಧಾರಗಳನ್ನು ಕೈಗೊಳ್ಳಲಾರ; ಅದಕ್ಕೆ ಬದ್ಧನೂ ಆಗಲಾರ. ಏಕೆಂದರೆ ಯಕ್ಷಿಯ ಮಾರ್ಗದರ್ಶನದತ್ತ ನೋಡುವ ಧಾರ್ಮಿಕ ಶ್ರದ್ಧೆಯಾಗಲೀ, ರಣಜಿತನಿಗೆ ಸಾಧ್ಯವಾಗುವ ಉಪಭೋಗ ಜೀವನದ ಆಯ್ಕೆಯಾಗಲಿ ರಾಹುಲನಿಗೆ ಸಾಧ್ಯವಿಲ್ಲ. ರಣಜಿತನೊಂದಿಗಿನ ಗೋವೆಯ ವಿಲಾಸಿ ಜೀವನ ರಾಹುಲನಿಗೆ ವಾಕರಿಗೆ ಹುಟ್ಟಿಸುತ್ತದೆ. ಬಂಡವಾಳಶಾಹಿ ಲೋಲುಪತೆಯುಳ್ಳ ಮಾಧವಿಯ ಪ್ರೇಮ ಅವನಿಗೆ ಸಮುದ್ರದ ನೀರಿನಂತೆ ತೋರುತ್ತದೆ. ಅದಕ್ಕೆ ಬದಲಾಗಿ ವೈದೇಹಿಯ ಅನುಭವಪೂರ್ಣ ತೃಪ್ತ ಜೀವನದ ಗಾಂಭೀರ್ಯ ಅವನನ್ನು ಆಕರ್ಷಿಸುತ್ತದೆ. ಅವನ ಆಕರ್ಷಣೆಯ ಕೇಂದ್ರದಿಂದ ದೂರ ಸರಿಯುವ ವೈದೇಹಿ ರಾಹುಲನ ಅಹಂನ್ನು ಕಲಕುತ್ತಾಳೆ. ಈ ಕಾರಣವಾಗಿ, ಅತ್ಯಂತ ನಾಟಕೀಯ ಎನ್ನುವ ರೀತಿಯಲ್ಲಿ ವೈದೇಹಿ ಅರವಿಂದರನ್ನು ಪರಸ್ಪರ ಲಗ್ನಕ್ಕೆ ಒಪ್ಪಿಸುವಲ್ಲಿ ರಾಹುಲ ಯಶಸ್ವಿಯಾಗುತ್ತಾನೆ. ಜೀವನದಲ್ಲಿ ಮೊದಲ ಬಾರಿಗೆ, ಬೇರೆಯವರ ಸಲುವಾಗಿ ಏನಾದರೂ ಮಾಡುವುದರಲ್ಲಿ ಒಂದು ಬಗೆಯ ಆನಂದವಿದೆಯೆಂಬುದು ರಾಹುಲನಿಗೆ ಅರಿವಾಗುತ್ತದೆ.

ಆದರೆ ಇಷ್ಟಕ್ಕೆ ರಾಹುಲನ ಸಮಸ್ಯೆ ಮುಗಿಯುವುದಿಲ್ಲ. ಕ್ಷಣ ಕ್ಷಣಗಳ ಅನುಭವವೆಂಬುದು ಯಾವುದೇ ತಾತ್ಕಾಲಿಕ ತಿಳಿವಳಿಕೆಯನ್ನೂ ಮೀರಿ ಮಾಯಾ ಮರೀಚಿಕೆಯಂತೆ ನುಣುಚಿ ಹೋಗುವಂತಹದು. ಕುಂದಾಳ ಸುಂದರ ದೇಹದಲ್ಲಿ ಜಗತ್ತಿನ ಸಮಸ್ಯೆಗಳೆಲ್ಲವನ್ನೂ ಹುಗಿದಿಟ್ಟು ನಗುನಗುತ್ತಾ ಜೀವಿಸಲು ಸಾಧ್ಯವಿಲ್ಲವೇ ಎಂದು ರಾಹುಲ ತನ್ನಷ್ಟಕ್ಕೇ ತಾನೇ ಕೇಳಿಕೊಳ್ಳತೊಡಗುತ್ತಾನೆ. ಆದರೆ ತನ್ನೊಂದಿಗೆ ಆಕೆಯನ್ನು ಲಗ್ನ ಮಾಡಿಸಲು ತನ್ನ ಮಾಂಶಿ ಹೂಡಿದ ಜಾಲದಲ್ಲಿ ತಾನಿದ್ದೇನೆಂಬ ಸಂಶಯ ಬಂದೊಡನೆಯೇ ಕುಂದಾ 'ನಿರುಪದ್ರವಿ ಮೂರ್ಖ ಮಾಂಸದ ಮುದ್ದೆ'ಯಾಗಿ ತೋರುತ್ತಾಳೆ. ಯಾವುದೇ ತೊಡಕು ಸಂಬಂಧ - ಜವಾಬ್ದಾರಿಗಳಿಂದ ಸ್ವತಂತ್ರವಾದ ರಾಹುಲನ ಯೋಜನೆ ಆತ್ಮ ಕೇಂದ್ರಿತವಾದುದು. ಆದರೆ ಅವನು ಅಂದುಕೊಂಡಂತೆ ಜೀವನ ಅಷ್ಟು ಸರಳವಲ್ಲ. ಕಾದಂಬರಿಕಾರರು ಇದನ್ನು ಸ್ಪಷ್ಟಪಡಿಸುತ್ತಾರೆ. "ಜಗತ್ತಿನಲ್ಲಿ ಆತನಂತೆ ಬೇರೆ ಜನರೂ ಇದ್ದಾರೆ. ಅವರೂ ಯೋಜನೆಗಳನ್ನು ಹೂಡುತ್ತಿರುತ್ತಾರೆ! ಅವರ ಯೋಜನೆಗಳಲ್ಲಿ ಒಮ್ಮೊಮ್ಮೆ ಆತ ಒಂದು ಗಿನಿಪಿಗ್ಗಾಗಿರಬಹುದು."[೧೨] ಇದು ಗೊತ್ತಾಗುತ್ತಿದ್ದಂತೆ ಅವನ ವಿಚಾರ ಸರಣಿಯೇ ಬದಲಾಗುತ್ತದೆ. ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಲಗ್ನದ ಬಂಧನದಲ್ಲಿ ಬೀಳದಿರಲು ನಿಶ್ಚಯಿಸಿ ವೃತ್ತಿ ಬದುಕಿನ ಯಶಸ್ಸಿನ ಪೂರೈಕೆಯೆಡೆ ಅವನ ಮನಸ್ಸು ಹೊರಳುತ್ತದೆ. ತಂದೆಯ ಮೃತ್ಯು ಆತನಿಗೆ ಬದುಕಿನ ಅರ್ಥಹೀನತೆಯನ್ನು ಮನಗಾಣಿಸಿದಾಗ, ಮತ್ತೆ ಯಾವುದೇ

ತುಮುಲ, ಘರ್ಷಣೆ, ದ್ವಂದ್ವಗಳಿಲ್ಲದೆ ಉದ್ವೇಗ-ತುಡಿತಗಳಿಲ್ಲದೆ ಪಾಲಿಗೆ ಬಂದದ್ದನ್ನು ಉಂಡರಾಯಿತು ಎಂಬ ಮನಃಸ್ಥಿತಿ ಹೊಂದುತ್ತಾನೆ. ಮಾಂಶಿಯ ಮಾತೃವಾತ್ಸಲ್ಯದ ಮುಂದೆ ಕರಗಿ ಲಗ್ನಕ್ಕೆ ಒಪ್ಪಿಗೆ ಕೊಡುತ್ತಾನೆ. ಆದರೆ ಅದೇ ಮನಸ್ಸು ರೈಲಿನಲ್ಲಿ ಪಯಣಿಸುವಾಗ ಭೇಟಿಯಾದ ರೋಜಿಯೊಂದಿಗೆ ಆಟವಾಡಬಯಸುತ್ತದೆ. ಮುಂದೆ ಕುಂದಾಳನ್ನು ಮದುವೆಯಾದ ಮೇಲೂ ಅತೃಪ್ತಿಯೇ ಅವನಲ್ಲಿ ಸ್ಥಾಯಿಯಾಗಿ ಉಳಿಯುತ್ತದೆ.

"...ತಾನು ಎಲ್ಲದರಲ್ಲಿಯೂ ತೀರ ಮಾಡರ್ನ್, ತೀರ ಸ್ವತಂತ್ರ ವೃತ್ತಿಯವ, ತೀರ ಆಧುನಿಕ ಮೌಲ್ಯಗಳುಳ್ಳವ ಎಂದು ನಿರಾಯಾಸವಾಗಿ ತೋರಿಸುವ ಅಭ್ಯಾಸ ರಾಹುಲನಿಗೆ." ಅವನು ತನ್ನನ್ನು ಹಾಗೂ ಪ್ರೊ. ವಿಲಿಯಮ್ಸ್‌ರನ್ನು ಮೇಲಿಂದ ಮೇಲೆ ಕೇಳಿಕೊಳ್ಳುವ ಪ್ರಶ್ನೆಯೇನೆಂದರೆ "ಅರ್ಥವಿಲ್ಲದೆಯೂ ಜೀವನ ಇರಲಾರದೆ?"ಈ ಪ್ರಶ್ನೆ ಅವನ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದು, ಯಾಕೆಂದರೆ ಜೀವನಕ್ಕೆ ಅರ್ಥವೇ ಇಲ್ಲವೆಂದಾದರೆ ನೀತಿ, ಅನೀತಿಯ ಪ್ರಶ್ನೆಗಳೇ ಏಳಲಾರವು. "ಜೀವನದಲ್ಲಿ ಅರ್ಥವೇ ಇಲ್ಲದಿದ್ದರೆ, ಎಲ್ಲವೂ ಒಂದು ರೀತಿಯ ಆಟ, ಒಂದು ರೀತಿಯ ಲೀಲೆಯಾಗಿ ಪರಿಣಮಿಸಬಹುದಲ್ಲವೆ?" ಹಾಗೆಂದು ರಾಹುಲ ಸ್ವಾತಂತ್ರ್ಯದ ಆರಾಧಕನಲ್ಲ. ಸ್ವಾತಂತ್ರ್ಯ ಆಯ್ಕೆಯ ಸಮಸ್ಯೆಯನ್ನೊಡ್ಡುವುದರಿಂದ ಅದು ರಾಹುಲನಲ್ಲಿ ಭಯಹುಟ್ಟಿಸುತ್ತದೆ. ತಾಯಿಯನ್ನು ಕಳೆದುಕೊಂಡು, ತಂದೆಯಿಂದ ದೂರವಾಗಿ ಮಾಂಶಿಯ ಮನೆಯಲ್ಲಿ ಬೆಳೆದ ರಾಹುಲ ನೆಲೆಯಿಲ್ಲದ ವ್ಯಕ್ತಿ. ನೆಲೆಯ ಆಸೆ ಅವನಲ್ಲಿ ಆಗಾಗ ಸುಳಿದರೂ ಅದರ ಅವಕಾಶ ದೊರೆತಾಗಲೆಲ್ಲ ಅವುಗಳಿಂದ ತಪ್ಪಿಸಿಕೊಳ್ಳುತ್ತಾನೆ. ಭಾವನೆ, ಸನ್ನಿವೇಶಗಳಿಗೆ ನಾಟಕೀಯತೆಯ ರಂಗು ಬಳಿಯುವ ಚಟ ರಾಹುಲನಲ್ಲಿರುವುದರಿಂದ ಅವನು ತನ್ನನ್ನು ಕುರಿತು ಕೊಡುವ ಹೇಳಿಕೆಗಳನ್ನು ಅವುಗಳ ಮುಖಬೆಲೆಗೆ ಸ್ವೀಕರಿಸಲಾಗುವುದಿಲ್ಲ. ಆದರೂ ಕೆಲವೊಂದು ಹೇಳಿಕೆಗಳಲ್ಲಿ ಸತ್ಯಾಂಶ ಗುರುತಿಸಬಹುದು. ಉದಾಹರಣೆಗೆ "ಇಷ್ಟೆಲ್ಲಾ ವಿಕ್ಷೇಪ ಯಾಕೆ?" ಎಂಬ ಅರವಿಂದನ ಪ್ರಶ್ನೆಗೆ ರಾಹುಲ ಕೊಡುವ ಉತ್ತರ : "ನನಗೆ ನಾನಾಗಿ ಜೀವಿಸಬೇಕಾಗಿದೆ. ಹಾಗೆ ಜೀವಿಸಲಿಕ್ಕೆ ಇಲ್ಲಿ ನನಗೆ ಅಸಾಧ್ಯವಾದಂತಾಗಿದೆ... ನನ್ನದು ಶಾಪಗ್ರಸ್ತ ಆತ್ಮ. ಅದಕ್ಕೆ ತಕ್ಕಂಥ ಪರಿಸರ ಸಿಕ್ಕರೆ ಮಾತ್ರ ಅದು ವಿಕ್ಷೇಪದಿಂದ ಮುಕ್ತವಾಗಿ ಸುಖ ಸಾಯಲಿ, ಸಮಾಧಾನ ಸಾಯಲಿ, ಕನಿಷ್ಠ ಒಂದು ರೀತಿಯ ಶಾಂತಿಯನ್ನಾದರೂ ಅನುಭವಿಸಬಹುದು."[೧೩]

ಕಾದಂಬರಿಯ ಕೊನೆಯಲ್ಲಿ ರಾಹುಲ ತನ್ನ ಹೆಂಡತಿಯನ್ನು ಬಿಟ್ಟು ಇಂಗ್ಲೆಂಡಿಗೆ-ಮತ್ತೊಂದು ಪರಿಸರಕ್ಕೆ ಜಿಗಿಯುವ ಸಿದ್ಧತೆಯಲ್ಲಿದ್ದಾನೆ. ಆದರೆ ಅವನ ಸ್ವಭಾವ, ಸಿದ್ಧಾಂತಗಳನ್ನು ಗಮನಿಸಿದಾಗ, ವಿಕ್ಷೇಪ ಅವನ ಮಟ್ಟಿಗೆ ಅಂತ್ಯವಿಲ್ಲದ ಅವಸ್ಥೆಯೆಂದೇ ತೋರುತ್ತದೆ."

ರಾಹುಲನಲ್ಲಿ ಎದ್ದು ಕಾಣುವ ವಿಕ್ಷಿಪ್ತತೆಯೆಂದರೆ ಶುದ್ಧ ಸಂಬಂಧಗಳು ತನಗೆ ಸಾಧ್ಯವಿಲ್ಲ ಎಂಬುದರ ಅರಿವಿದ್ದರೂ ಸಂಬಂಧಗಳನ್ನು ಹುಡುಕುತ್ತಲೇ ಇರುವುದು. ಅರವಿಂದ ಅವನಿಗೆ ಹೇಳುವ

ನಿಷ್ಠುರದ ಮಾತುಗಳಲ್ಲಿ ಇದೂ ಒಂದು : “ರಾಹುಲ ನಿನಗೆ ಪ್ರೀತಿಯೆಂದರೇನು ಗೊತ್ತಿಲ್ಲ ಹಾಗೂ ಪ್ರೀತಿ ಮಾಡಲು ಬೇಕಾದ ಮನೋಧರ್ಮ ನಿನ್ನಲ್ಲಿಲ್ಲ. ನೀನು ಪ್ರೇಮಿಸುವುದೇ ಅಶಕ್ಯ.”[೧೪] ಈ ಮಾತಿನ ಸತ್ಯವನ್ನು ರಾಹುಲನ ಎಲ್ಲ ಮನುಷ್ಯ ಸಂಬಂಧಗಳಲ್ಲಿಯೂ ಕಂಡುಕೊಳ್ಳಬಹುದು. ಮನುಷ್ಯರ ಜಗತ್ತೆಂದರೆ ಅವನಿಗೆ ಒಂದು ಪ್ರಯೋಗಶಾಲೆ. ಅವನೇ ಈ ಮಾತನ್ನು ಹೇಳುತ್ತಾನೆ : “...ಮನುಷ್ಯ ಸಂಬಂಧವೆಂದರೆ ಹಾಗೆ. ಒಬ್ಬರನ್ನೊಬ್ಬರು ಒಂದಿಲ್ಲೊಂದು ರೀತಿಯಿಂದ ಗಿನಿಪಿಗ್ಗಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ವಿಧಾನವೇ ಮನುಷ್ಯ ಸಂಬಂಧ. ಇದರಿಂದಾಗಿ ಎಲ್ಲ ಸಂಬಂಧಗಳನ್ನೂ ಆತ ಸಂಶಯದಿಂದಲೇ ನೋಡುತ್ತಾನೆ, ತಿರಸ್ಕರಿಸುತ್ತಾನೆ. ಇದು ಅರವಿಂದನ ಸಹಾನುಭೂತಿಯಿರಬಹುದು, ಮಾಧವಿಯ ರೊಮ್ಯಾಂಟಿಕ್ ಭಾವಾವೇಶವಿರಬಹುದು. ಕುಂದಾಳ ಸಮರ್ಪಣೆಯಾಗಿರಬಹುದು, ಮಾಂಶಿಯ ಪ್ರೀತಿ ಇರಬಹುದು. ನಿಜವಿದ್ದ ಸಂಗತಿಯೆಂದರೆ, ರಾಹುಲನಿಗೆ ಗಾಢ ಸಂಬಂಧಗಳ ಅವಶ್ಯಕತೆಯೇ ಇಲ್ಲ. ಮೇಲೆ ಮೇಲೆ ಈಜುವುದೇ ಅವನ ಪ್ರವೃತ್ತಿ. ಇದರಿಂದಾಗಿಯೇ ಶಿರೀನಳ ಸಂಬಂಧ ಅವನಿಗೆ ಹೆಚ್ಚು ಸ್ವೀಕಾರಾರ್ಹವಾಗುತ್ತದೆ. ಅವಳ ಪ್ರವೃತ್ತಿಗಳು ಅವನಿಗೂ ಆದರ್ಶವೆನಿಸುತ್ತವೆ:

“ಶಿರೀನಳ ಸ್ವಚ್ಛಂದ ಪ್ರವೃತ್ತಿಯೆಂದರೆ ರಾಹುಲನಿಗೆ ಅಸೂಯೆ. ತನ್ನ ಗೆಳೆಯರ ಜೊತೆಗೆ ನಡೆದುಕೊಳ್ಳುವುದರಲ್ಲಿಯೇ ಅವಳ ಮೇಲ್ಮೆ, ಅವಳ ಆತ್ಮ ವಿಶ್ವಾಸ, ಎಲ್ಲ ತೊಡಕಿನ ಪೇಚಾಟಗಳನ್ನು ಯಶಸ್ವಿಯಾಗಿ ದೂರವಿಡುವ ಅವಳ ಕಲಾವಂತಿಕೆ, ಅವಳ ನಿರ್ಲಿಪ್ತತೆ ಇವೆಲ್ಲ ರಾಹುಲನ ಆಂತರಿಕ ಆದರ್ಶಗಳೆಂದರೂ ಸರಿಯೇ.”[೧೫] ಆದರೆ ರಾಹುಲನ ವಿಕ್ಷಿಪ್ತತೆಯಿಂದಾಗಿ ಈ ಆದರ್ಶಗಳು ಆದರ್ಶಗಳಾಗಿಯೇ ಉಳಿಯುತ್ತವೆ. ರಾಹುಲನನ್ನು ಅಸ್ತಿತ್ವವಾದೀ ಪಾತ್ರವಾಗಿಸುವಲ್ಲಿ ಒಂದು ಬಗೆಯ ಮೃದು ಸಹಾನುಭೂತಿಪರ ವಸ್ತುನಿಷ್ಠತೆ ಇದೆ. ತನ್ನ ವಿಕ್ಷಿಪ್ತತೆಯಲ್ಲಿಯೂ ರಾಹುಲ ತನ್ನ ಹಾಗೂ ತನ್ನೊಂದಿಗಿರುವವರ ಸಂಬಂಧದ ಅಸಂಗತತೆಯನ್ನು ಅನುಭವಿಸಬಲ್ಲನೆಂಬುದೇ ಇಲ್ಲಿ ಮುಖ್ಯ. ಅಷ್ಟೇ ಅಲ್ಲ, ಈ ಅಸಂಗತತೆಯನ್ನು ಪ್ರಜ್ಞೆಯ ನೆಲೆಯಲ್ಲಿ ಅರ್ಥೈಸಬಲ್ಲ ಕೂಡ. ಅವನ ಪ್ರಜ್ಞೆಯ ಪಾತಳಿಯಲ್ಲಿ ಕುಂದಾ ಜೊತೆಗೂಡದೆ ಕೇವಲ ಭಯಭೀತಳಾಗುವ ಹೆಣ್ಣಾಗುತ್ತಾಳೆ. ಈ ಭಯ ಆಕೆಯಲ್ಲಿ ಒಂದು ಬಗೆಯ ಜಡತ್ವವನ್ನು ತಂದೊಡ್ಡುತ್ತದೆ. ಜಡತ್ವವನ್ನು ಹೊಡೆದೆಬ್ಬಿಸಬಲ್ಲ ರೀತಿಯಲ್ಲಿ ಕುಂದಾ ಕೂಡ ಸಂವೇದನಾ ತೀವ್ರತೆಯ ನೆಲೆಯಲ್ಲಿ ಆತ್ಮಹತ್ಯೆಯಂಥ ಕ್ರಿಯಾತ್ಮಕ ಆಯ್ಕೆ ಮಾಡಲು ಸಾಧ್ಯವಾಗುತ್ತದೆ. ರಾಹುಲನ ಅಸ್ತಿತ್ವವಾದೀ ಎಚ್ಚರದ ಪರಿಣಾಮವಾದ ವಿಕ್ಷಿಪ್ತತೆ ಕೆಲವೊಮ್ಮೆ ಪಲಾಯನವಾದ, ಬೇಜವಾಬ್ದಾರಿತನ ಎಂದೆನಿಸಿದರೂ ಅದು ಕುಂದಾಳಲ್ಲಿ ಉಂಟು ಮಾಡುವ ಅನಿರೀಕ್ಷಿತ ಪರಿಣಾಮ ಓದುಗರನ್ನು ತೀವ್ರವಾಗಿ ತಟ್ಟುವಂತಹದು. ರಾಹುಲನಲ್ಲಿ ಈ ಎಚ್ಚರ ಉಂಟು ಮಾಡುವ ಪರಿಣಾಮಗಳ ಪರಂಪರೆಯನ್ನು ಕಾದಂಬರಿಕಾರರು ಯಾವುದೇ ನಿಲುಗಡೆಯಿಲ್ಲದೆ ಪ್ರವಾಹದೋಪಾದಿಯಲ್ಲಿ ಮುಕ್ತವಾಗಿಡುತ್ತಾರೆ.

ಸಂಬಂಧ

ಸೃಜನಶೀಲತೆ ಮತ್ತು ಬದುಕುಗಳ ನಡುವಿನ ಸಂಬಂಧವನ್ನು ಸೃಜನಶೀಲವಾಗಿ ಶೋಧಿಸುವ ಯತ್ನ ಈ ಕಾದಂಬರಿಯದು. ಕಾದಂಬರಿಯ ನಿರೂಪಕ ಪಾತ್ರವಾದ ಶೀತಲಕುಮಾರನೇ ಸ್ವತಃ ಸೃಜನಶೀಲ ಕಾದಂಬರಿಕಾರನಾಗಿದ್ದು, ತನ್ನ ಅನುಭವಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಾ ಹೋಗುತ್ತಾನೆ. ಮುಂದೆ ತಾನು ಬರೆಯಲಿರುವ ಕಾದಂಬರಿಯ ಒಳಹೂರಣವಾಗಿ ಈ ಟಿಪ್ಪಣಿಗಳು ಉಪಯುಕ್ತವಾಗಬಲ್ಲವೆಂಬ ವ್ಯಾವಹಾರಿಕ ದೃಷ್ಟಿಯನ್ನು ಮೀರಿದ ಆಶಯ ಆತನಿಗಿದೆ. "ಪ್ರಜ್ಞೆಯನ್ನು ಬಿಟ್ಟು ಬೇರೆ ಯಾವ ರೀತಿಯಿಂದಲೂ ಜೀವನವನ್ನು ತಿಳಿದುಕೊಳ್ಳುವುದು ಅಶಕ್ಯ. ಅಂತೇ ನನ್ನ ಅನುಭವಗಳನ್ನು ವಸ್ತುನಿಷ್ಠವಾಗಿ ಮುಂದಿಟ್ಟು, ತಿಳಿಗಣ್ಣಿನಿಂದ ವಿಶ್ಲೇಷಿಸಿ ನೋಡುವುದೇ ನನ್ನ ಕಥಾ ಕಾದಂಬರಿಗಳ ಹಿಂದಿನ ಮೂಲ ಪ್ರೇರಣೆ. ಇಂಥ ಟಿಪ್ಪಣಿಗಳಿಂದ, ಇಂಥ ನಿರೂಪಣೆಯಿಂದ ಇಂಥ ವಿಶ್ಲೇಷಣೆಯಿಂದ, ಇಂಥ ಸೃಷ್ಟಿಯಿಂದ ಕೊನೆಗೆ ಕೈಗೆ ಹತ್ತುವುದಾದರೂ ಏನು? ಬಹುಶಃ ವಿಶೇಷವಾದದ್ದೇನೂ ಕೈಗೆ ಹತ್ತಲಾರದು. ಆದರೆ ಇದು ತನ್ನ ಜೀವನ ಕ್ರಿಯೆಯ ರೀತಿ, ನಾನು ಜೀವನಕ್ಕೆ ಸ್ಪಂದಿಸುವ ರೀತಿ, ಜೀವನದಲ್ಲಿ ಅರ್ಥ ಶೋಧಿಸುವ ರೀತಿ, ಅರ್ಥ ತುಂಬುವ ರೀತಿ..."[೧೬]

ಕಾದಂಬರಿಕಾರರಾದ ಶೀತಲಕುಮಾರನ ಆತ್ಮೀಯ ವಿಮರ್ಶಕ ಹಾಗೂ ಅಭಿಮಾನಿ ಪ್ರೊ. ಪೊಮ್ಮಣ್ಣ. ಪೊಮ್ಮಣ್ಣನ ಮೂಲಕ ಪರಿಚಿತಳಾಗುವ ವಿಧವೆ ರಾಧಿಕೆ; ಆಕೆಯ ಪ್ರೇಮಿ ಶ್ರೀಧರ, ಗಂಡ ರಮೇಶ, ತಂಗಿ ತ್ರಿಶಾಲಾ, ಆಕೆಯ ತಂದೆ-ತಾಯಿ ಹೀಗೆ ಆಕೆಯ ವ್ಯಕ್ತಿ ಸಂಬಂಧಗಳ ನೆನಪಿನ ಹೊರೆಯನ್ನು ಹೊತ್ತು ಶೀತಲಕುಮಾರ ಮರಳಿ ತನ್ನೂರಿಗೆ ಬಂದ. ರಾಧಿಕೆಯ ವ್ಯಕ್ತಿತ್ವದಿಂದ ಶೀತಲಕುಮಾರ ಎಷ್ಟರಮಟ್ಟಿಗೆ ಪ್ರಭಾವಿತನಾದನೆಂದರೆ, ಬರೇ ಕಲಾವಿದನ ಸಾಕ್ಷೀ ಪ್ರಜ್ಞೆಯೊಂದಿಗೆ ವ್ಯವಹರಿಸಲು ಆತನಿಗೆ ಇನ್ನು ಮುಂದೆ ಸಾಧ್ಯವಾಗುವುದಿಲ್ಲ. ರಾಧಿಕೆಯ ಲೈಂಗಿಕ ವ್ಯಕ್ತಿತ್ವದ ಸೆಳೆತವನ್ನು ಮೀರಿ ಹಲವು ಆಯಾಮಗಳಲ್ಲಿ ಸಂಬಂಧದ ಬೇರುಗಳನ್ನು ಸ್ಥಾಪಿಸಿಕೊಳ್ಳುವ ಯತ್ನವೇ ಅತ್ಯಂತ ಸವಾಲಿನದೆಂದು ಶೀತಲ ಕುಮಾರನಿಗನಿಸುತ್ತದೆ. "ರಾಧಿಕೆಯ ಜೀವನಕ್ಕೆ ನಾನು ಹೇಗೆ ತಾನೇ ಹೊಣೆಯಾಗುವುದು? ವ್ಯಾಧನ ಬಲೆಯಲ್ಲಿ ಸಿಕ್ಕ ವ್ಯಾಘ್ರದಂತೆ ನನ್ನ ಗತಿಯಾಯ್ತು" ಎಂದು ತಳಮಳಿಸುವ ಶೀತಲಕುಮಾರ ಆ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುತ್ತಾನೆ. "ನಿಜವಾದ ಪ್ರೇಮ ಯಾವಾಗಲೂ ಸೃಜನಶೀಲವಾಗಿರುತ್ತದೆ. ಅದು ಆಸ್ಥೆ, ಆದರ, ಹೊಣೆಗಾರಿಕೆ ಹಾಗೂ ತಿಳುವಳಿಕೆಗಳನ್ನು ಸಮಾವೇಶಗೊಂಡಿರುತ್ತದೆ" ಎಂಬ ಎರಿಕ್ ಫ್ರಾಮ್‌ನ ವೈಚಾರಿಕ ಹೇಳಿಕೆಗೆ ಬರೆದ ವ್ಯಾಖ್ಯಾನದಂತೆ ಇಡೀ ಕಾದಂಬರಿ ವಿನ್ಯಾಸಗೊಂಡಿದೆ.

ರಾಧಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಕಾದಂಬರಿಕಾರರು 'ಆಧುನಿಕ ಮಹಿಳೆ'ಯನ್ನು ಕುರಿತಂತೆ ಒಂದು ಪರಿಕಲ್ಪನಾತ್ಮಕ ಸಿಲುವನ್ನು ರೂಪಿಸಿಕೊಳ್ಳಲು ಯತ್ನಿಸಿದ್ದಾರೆ. ಶ್ರೀಮಂತ ಜೈನ ಕುಟುಂಬದಲ್ಲಿ

ಬೆಳೆದ ರಾಧಿಕಾಳ ಆಸಕ್ತಿಯ ವಿಷಯ ತತ್ವಜ್ಞಾನವಾದರೂ ಅವಳಿಗೆ ಸಾಹಿತ್ಯದಲ್ಲಿ ತೀವ್ರವಾದ ಆಸಕ್ತಿ. ಶೀತಲಕುಮಾರನನ್ನು ಭೇಟಿಯಾಗುವ ಮೊದಲೇ ಅವಳು ಅವನ ಕಾದಂಬರಿಗಳನ್ನೋದಿ ಮೆಚ್ಚಿಕೊಂಡಿದ್ದಾಳೆ. ಈ ಮೆಚ್ಚುಗೆ ಕುರುಡು ಮೆಚ್ಚುಗೆಯೇನೂ ಅಲ್ಲ. ಶೀತಲಕುಮಾರನ ಆಧುನಿಕತೆಯ ಬಗ್ಗೆ ಎಂದರೆ ಅದರ ಮೌಲ್ಯಗಳಾದ ಸ್ವಾತಂತ್ರ್ಯ, ಬುದ್ಧಿವಾದ, ವ್ಯಕ್ತಿವೈಶಿಷ್ಟ್ಯಗಳ ಬಗ್ಗೆ ಅವಳಲ್ಲಿ ಅನುಮಾನಗಳಿವೆ. ''ನಿಮ್ಮ ನಾಯಕ ನಾಯಕಿಯರೆಲ್ಲಾ ಯಾವುದೋ ಭವಿಷ್ಯತ್ತಿನ ಕನಸಿನ ರಾಜ್ಯದ ವ್ಯಕ್ತಿಗಳಂತೆ ಕಾಣಿಸುತ್ತಾರೆ ಅಥವಾ ಪಾಶ್ಚಾತ್ಯರಂತೆ ತೋರುತ್ತಾರೆ.''[೧೭] ಪಾಶ್ಚಾತ್ಯ ಆಧುನಿಕತೆಯ ಆಧಾರವಾದ ಸ್ವಾತಂತ್ರ್ಯದ ಪರಿಕಲ್ಪನೆಗೂ ಭಾರತೀಯ ಸಂದರ್ಭದ ಸ್ವಾತಂತ್ರ್ಯಾಧಾರಿತ ಆಧುನಿಕತೆಗೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಳ್ಳಲು ಕಾದಂಬರಿಕಾರರು ಯತ್ನಿಸುತ್ತಿದ್ದಾರೆಂದೆನಿಸುತ್ತದೆ.

ಮಾನವೀಯ ಸಂಬಂಧಗಳ ನಿಯಂತ್ರಣ ಗಟ್ಟಿಯಾಗಿರುವ ಭಾರತೀಯ ಕೌಟುಂಬಿಕ ರಚನೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಸಮಸ್ಯೆ ನಿಜಕ್ಕೂ ಸಂಕೀರ್ಣವಾದುದು. ರಾಧಿಕೆಯ ವೈಯಕ್ತಿಕ ಬದುಕನ್ನು ಸಹಾನುಭೂತಿಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವುದರ ಮೂಲಕವೇ ಮಾನವೀಯ ಸಂಬಂಧಗಳ ಗೋಜುಗೊಂದಲಗಳ ನಿವಾರಣೆಯಾದೀತೆಂಬ ಪ್ರಾಮಾಣಿಕ ನಂಬಿಕೆ ಕಾದಂಬರಿಕಾರರದು. ಹಾಗಾಗಿ ಕಲಾ ನಿರ್ಮಾಣದ ಹಿಂದಿರುವ ಸುಂದರ ಸುಳ್ಳುಗಳನ್ನು ತೊಡೆದು ಹಾಕಿ ಸಹಜ, ನೈಜ ಅನುಭೂತಿಯನ್ನು ಪಡೆದುಕೊಳ್ಳಬಯಸುವ ಪರಿ ಇಲ್ಲಿದೆ. ಆದ್ದರಿಂದಲೇ ರಾಧಿಕೆಯ ಬದುಕನ್ನು ಕುರಿತ ಪ್ರೊ. ಪೊಮ್ಮಣ್ಣನವರ ಸಮಾಜಶಾಸ್ತ್ರೀಯ, ಮನೋವೈಜ್ಞಾನಿಕ ವಿಶ್ಲೇಷಣೆಗೂ ಶೀತಲಕುಮಾರನ ಧೋರಣೆಗೂ ಮೂಲಭೂತ ವ್ಯತ್ಯಾಸವಿದೆ.

''ಕುಟುಂಬದಲ್ಲಿರುವ ಜನರಿಗೆ ನಿತ್ಯ ಜೀವನವೇ ಒಂದು ಕಾದಂಬರಿಯಾಗಿರುತ್ತದೆ'' ಎಂದು ಆಲೋಚಿಸುವ ಶೀತಲಕುಮಾರ, ತನ್ನ ಸೃಜನಶೀಲ ವ್ಯಕ್ತಿತ್ವವನ್ನು ಕಾದಂಬರಿ ನಿರ್ಮಾಣದಂತಹ ಅಹಂನಿಷ್ಠ ವ್ಯಾವಹಾರಿಕ ನೆಲೆಯಲ್ಲಿ ಸ್ಥಾಪಿಸಿಕೊಳ್ಳಲು ಇಚ್ಛಿಸುವುದಿಲ್ಲ. ಕಥೆ-ಕಾದಂಬರಿಗಳ ಮೂಲಕ ತನ್ನ ವ್ಯಕ್ತಿತ್ವವನ್ನು ಮಾನವೀಕರಣ ಮಾಡಿಕೊಳ್ಳುತ್ತ, ತನ್ನನ್ನು ಶೋಧಿಸುತ್ತ ಹೋಗುವ ವ್ಯಕ್ತಿ ಆತ. ಬಾಲ್ಯದಲ್ಲಿಯೇ ತಂದೆ-ತಾಯಿಯರನ್ನು ಕಳೆದುಕೊಂಡು ಕುಟುಂಬದ ಬೇರುಗಳನ್ನು ಹೊಂದಿಲ್ಲದ ಶೀತಲಕುಮಾರನಿಗೆ ಕಾದಂಬರಿಯ ಪಾತ್ರಗಳ ಮುಖಾಂತರ ನಿತ್ಯದ ಜೀವನ ಜೀವಿಸಬೇಕಾದ ಅನಿವಾರ್ಯತೆ ಇದೆ. ಆದ್ದರಿಂದಲೇ ಮೃತ್ಯುವಿನ ಬಗ್ಗೆ ಸಂವೇದನಾ ಜಡತ್ವವಿದ್ದ ಶೀತಲಕುಮಾರ ರಾಧಿಕೆಯು ಗಂಡನ ಮೃತ್ಯುವಿನ ಬಗ್ಗೆ ಹೇಳುವಾಗ ಅರಿವಿಲ್ಲದೆಯೇ ಹನಿಗಣ್ಣಾಗುತ್ತಾನೆ. ರಾಧಿಕೆಯೊಂದಿಗಿನ ಸಂಬಂಧ ದೃಢವಾಗುತ್ತ ಬಂದಂತೆಲ್ಲ ಅವಳ ಜೀವನದ ತೊಡಕು ತೊಡಕಾದ ಜಾಲದಲ್ಲಿ ತಾನು ಸಿಕ್ಕಿಬಿದ್ದಂತೆ ಶೀತಲಕುಮಾರನಿಗೆ ಅನಿಸತೊಡಗುತ್ತದೆ. ರಾಧಿಕಾ ತಾನು ತನ್ನ ಕುಟುಂಬದವರೊಡನೆ, ಪ್ರಿಯಕರ ಶ್ರೀಧರನೊಡನೆ, ಗತಿಸಿದ ಗಂಡ ರಮೇಶನೊಡನೆ ತಾನು ಹೊಂದಿದ್ದ ಸಂಬಂಧಗಳನ್ನು ಶೀತಲಕುಮಾರನೆ

ದುರು ಬಿಚ್ಚಿಕೊಳ್ಳುವ ಮೂಲಕ, ಈ ಸಂಬಂಧಗಳ ಮೇಲೆ ಮಾನಸಿಕ ಪ್ರಭುತ್ವ ದೊರಕಿಸಿ ಗಟ್ಟಿಯಾಗುತ್ತಾಳೆ.

"ಎಲ್ಲ ಪ್ರೀತಿಯ ಸಂಬಂಧಗಳಲ್ಲಿ ಅಪರಾಧ ಭಾವ - ಗಿಲ್ಟ್ ಫೀಲಿಂಗ್ ಎಷ್ಟೊಂದು ಕ್ರಿಯಾಶೀಲವಾಗಿ ಕೆಲಸ ಮಾಡುತ್ತದೆಯೆಂದರೆ ಮತ್ಸರದಷ್ಟೆ ಅಪರಾಧ ಭಾವವೂ ಪ್ರೀತಿಯ ಸೇಂದ್ರಿಯ ಅಂಶವಾಗಿದೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ!"[೧೮] ಎಂಬುದನ್ನು ರಾಧಿಕೆಯ ಹಾಗೂ ತನ್ನ ಸ್ವಂತ ಅನುಭವದ ಮೂಲಕ ಶೀತಲಕುಮಾರ ಕಂಡುಕೊಳ್ಳುತ್ತಾನೆ. ರಾಧಿಕಾ ಬೆಂಗಳೂರಿಗೆ ಬಂದು ಅವನ ಮನೆಯಲ್ಲಿಯೇ ಇರಹತ್ತಿದಾಗ ಅವರ ಸಂಬಂಧದಲ್ಲಿ ತೊಡಕುಂಟಾಗುತ್ತದೆ. ಶೇಖರ ರಾಧಿಕಾರ ಸಂಬಂಧ ಬೆಳೆದಂತೆ ಈ ಸಂಬಂಧದ ಬಗ್ಗೆ ಶೀತಲಕುಮಾರನಲ್ಲಿ ಅಸೂಯೆಯೂ ಹುಟ್ಟಿಕೊಳ್ಳುತ್ತದೆ. "ನೀನು ನನ್ನವಳು ರಾಧಾ, ನನ್ನವಳು" ಎಂಬ ಅವನ ಘೋಷಣೆಯಲ್ಲಿ ಈ ಮಾತಿನ ಸಮರ್ಥನೆಯನ್ನು ಗುರುತಿಸಬಹುದು. ರಾಧಿಕಾಳಿಗೆ ಶೇಖರನ ಚಿತ್ರದಲ್ಲಿ ನಟಿಸುವ ಅವಕಾಶವನ್ನು ಒದಗಿಸಿಕೊಟ್ಟು, ತಾನು ತನ್ನ ಕಾದಂಬರಿಗಳ ಪಾತ್ರಗಳೊಡನೆ ಪ್ರಯೋಗ ನಡೆಸುವಂತೆ ಅವಳ ಬದುಕಿನೊಡನೆಯೂ ಪ್ರಯೋಗ ನಡೆಸುತ್ತಿದ್ದೇನೆಯೇ ಎಂಬ ಸಂಶಯ ಕೂಡ ಶೀತಲಕುಮಾರನಲ್ಲಿ ಸುಳಿದು ಹೋಗುತ್ತದೆ. ರಾಧಿಕಾ ತನ್ನನ್ನು ಗುರು, ಪಿತೃ ಸಮಾನ ಎಂದು ಕರೆದಾಗ ಈ ಪದಪ್ರಯೋಗಗಳು ಇಷ್ಟವಾಗದೇ ಹೋಗುತ್ತವೆ. ಆದರೆ, ಅವಳು ಶೇಖರನೊಡನಿದ್ದ ತನ್ನ ಸಂಬಂಧವನ್ನು ಕೊನೆಗೊಳಿಸಿ ಕೊಲ್ಹಾಪುರಕ್ಕೆ ಹೊರಟುನಿಂತಾಗ ಶೀತಲಕುಮಾರನಿಗೆ ತನ್ನ ಅವಳ ಸಂಬಂಧದ ನಿಜಸ್ವರೂಪದ ಅರಿವಾಗುತ್ತದೆ. "ರಾಧಿಕೆಯಿಲ್ಲದ ಮನೆ ಭಣಭಣವೆನಿಸತೊಡಗಿತು. ನನಗೊಬ್ಬ ಮಗಳಿದ್ದರೆ" ಎಂದು ಹಳಹಳಿಸುತ್ತಾನೆ.

ರಾಧಿಕೆ ಶೀತಲಕುಮಾರನಿಗೆ ಗೆಳತಿ, ಪ್ರೇಯಸಿ, ಮಗಳು, ತಂಗಿ ಏನಾದರೂ ಆಗಬಲ್ಲ ಸಾಧ್ಯತೆಯನ್ನು ಕಾದಂಬರಿ ಒಳಗೊಳ್ಳುತ್ತದೆ. ರಾಧಿಕೆಯ ಸಹವಾಸದಲ್ಲಿ ತಾನು ಕಳೆದ ದಿನಗಳು ತನ್ನ ಇಡಿಯ ಜೀವನಕ್ಕೆ ನೆನಪಿನ ಬುತ್ತಿಯಾಗಬಹುದು ಎನ್ನುವ ಕಲ್ಪನೆ ಕೂಡ ಅವನಲ್ಲಿ ಮೂಡಿ ಬರುತ್ತದೆ. ಶೇಖರನ ಆಕರ್ಷಣೆಯನ್ನು ಮೀರಿ ಅವಳು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದರಲ್ಲಿ, ತನ್ನ ಸ್ವಂತದ ಮಗುವನ್ನು ಕಳೆದುಕೊಂಡರೂ ಮತ್ತೊಬ್ಬರ ಮಗುವನ್ನು ದತ್ತು ತೆಗೆದುಕೊಂಡು ಅದಕ್ಕೆ ಶೀತಲಕುಮಾರನ ಹೆಸರನ್ನೇ ಇಡುತ್ತಾಳೆ. ಆದರೆ ಆತ ಯಾಕೆ ಅಂತೆನೂ ಕೇಳುವುದಿಲ್ಲ. ಇವೆಲ್ಲಕ್ಕೂ ಹೆಚ್ಚಾಗಿ, ಈ ಅನುಭವದ ಮೂಲಕ ಅವನ ಹಾಗೂ ಕಮಲಾಳ ಸಂಬಂಧದಲ್ಲಿ ಗುಣಾತ್ಮಕ ಪರಿವರ್ತನೆ ನಡೆಯುತ್ತದೆ. ಮೊದಮೊದಲು ಅಡಿಗೆಯವಳು, ನರ್ಸ್, ಹೆಚ್ಚೆಂದರೆ ಗೆಳತಿಯಾಗಿ ಕಂಡವಳು ಈಗ ಅವನ ಬರವಣಿಗೆಗೆ ಸಕ್ರಿಯವಾಗಿ ಸ್ಪಂದಿಸುವ ಮೂಲಕ 'ಸಹಧರ್ಮಿಣಿ'ಯಾಗಿ ಪರಿವರ್ತನೆಗೊಳ್ಳುತ್ತಾಳೆ.

"ಎಲ್ಲ ಸಂಬಂಧಗಳಲ್ಲಿಯೂ ಉಪಯುಕ್ತತೆ, ಹಾನಿಕಾರತೆ ಇವು ಇದ್ದೇ ಇರ್ತಾವೆ. ಒಂದು ಸಂಬಂಧ ಅಂದರೆ ಅದು ಸಂಕೀರ್ಣ ಪ್ರಕ್ರಿಯೆ." ಇದು ಒಬ್ಬ ಕಾದಂಬರಿಕಾರನಾಗಿ ಶೀತಲಕುಮಾರ

ರಾಧಿಕಾಳಿಗೆ ಕೊಡುವ ತಿಳುವಳಿಕೆ. ಕಾದಂಬರಿಯಲ್ಲಿ ಶೀತಲಕುಮಾರ ರಾಧಿಕಾ ಸಂಬಂಧ ಇಬ್ಬರಿಗೂ ಫಲದಾಯಕ ಎನಿಸುತ್ತದೆ. ಆದರೆ ರಾಧಿಕಾ-ಶ್ರೀಧರರ ಸಂಬಂಧದ ಬಗ್ಗೆ ಈ ಮಾತನ್ನು ಯಾವ ಅಡ್ಡಿ ಆತಂಕಗಳಿಲ್ಲದೆ ಹೇಳುವಂತಿಲ್ಲ. ಇವರಿಬ್ಬರಲ್ಲಿ ಯಾರು ಯಾರನ್ನು ಹೆಚ್ಚು ಉಪಯೋಗಿಸಿಕೊಂಡರು ಎನ್ನುವುದನ್ನು ನಿರ್ಧರಿಸುವುದು ಕಠಿಣ. ತ್ರಿಶಾಲಾ ಧೋಂಡಿರಾಮರ ಸಂಬಂಧವಂತೂ ತ್ರಿಶಾಲಾಳ ವ್ಯಕ್ತಿತ್ವವನ್ನೇ ದುರ್ಬಲಗೊಳಿಸುತ್ತದೆ. ಕಾದಂಬರಿಯಲ್ಲಿ ಬರುವ ಉಳಿದ ಸಂಬಂಧಗಳಲ್ಲಿ ಸಹಜತೆಯಿದ್ದರೂ ಇಂಥ ರಹಸ್ಯಮಯತೆ ಇಲ್ಲವೆಂದೇ ಹೇಳಬೇಕು. "ಮಾನವ ಸಂಬಂಧಗಳ ಅರ್ಥಹೀನತೆಯನ್ನು ಅಸಂಗತತೆಯನ್ನು ಅನುಭವಿಸುವ ಮಾನಸಿಕ 'ವಿಕ್ಷಿಪ್ತತೆ' ಎಷ್ಟೇ ಆರೋಗ್ಯಕಾರಿಯಾದರೂ ಅಲ್ಲೇ ಕೊನೆಗೊಳ್ಳುವುದು ಅಷ್ಟೇ ಅನಾರೋಗ್ಯಕಾರಿ."[೧೯] ಸಂಬಂಧ ಕಾದಂಬರಿಯ ರಾಧಿಕೆ ಮತ್ತು ಶೀತಲಕುಮಾರ ಈ ವಿಕ್ಷಿಪ್ತತೆಯ ಹಂತವನ್ನು ಮೀರಿದ ಪ್ರಬುದ್ಧ ಹಾಗೂ ಪಕ್ವ ಚೇತನಗಳಾಗಿ ನಿಲ್ಲುತ್ತಾರೆ. ಮಾನವ ಸಂಬಂಧಗಳ ಅಸಂಗತತೆಯನ್ನು ಜೀರ್ಣಿಸಿಕೊಂಡು ಜೀವಪರ ಹಾಗೂ ಸಮಾಜಮುಖಿ ನೆಲೆಗೆ ವ್ಯಕ್ತಿ ತನ್ನನ್ನು 'ಆಗು' ಮಾಡಿಕೊಳ್ಳಬೇಕಾದ ಅಗತ್ಯದೆಡೆ ಕೃತಿ ನಮ್ಮನ್ನು ಒಯ್ಯುತ್ತದೆ.

ಬೀಜ

ಕನ್ನಡ ಸಾಹಿತ್ಯದ ಬದಲಾಗುತ್ತಿರುವ ಕಾಳಜಿಗಳ ಹಿನ್ನೆಲೆಯಲ್ಲಿ 'ಬೀಜ' ಒಂದು ಔಚಿತ್ಯಪೂರ್ಣವಾದ ಕೃತಿ ಎನಿಸುತ್ತದೆ. ಶಾಂತಿನಾಥ ದೇಸಾಯಿಯವರು ತಮ್ಮ ಕೃತಿಗಳಲ್ಲಿ ಕೇವಲ ವೈಯಕ್ತಿಕ ಅನುಭವಗಳಿಗೆ, ನಗರ ಜೀವನಕ್ಕೆ ಮಹತ್ವ ಕೊಟ್ಟಿದ್ದಾರೆಂಬ ಅಪವಾದದಿಂದ ಅವರನ್ನು ಇದು ಪಾರುಮಾಡುತ್ತದೆ. ಯಾಕೆಂದರೆ ಇಲ್ಲಿ ನಗರ ಜೀವನದ ಜೊತೆಗೆ ಹಳ್ಳಿಯ ಬದುಕಿನ, ಸಮಗ್ರ ಚಿತ್ರಣವನ್ನು ವಿಶ್ಲೇಷಣೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ವೈಯಕ್ತಿಕ ಅನಿಸಿಕೆಗಿಂತ ಸಾಮಾಜಿಕ ಬದ್ಧತೆ ಮುಖ್ಯವಾಗುತ್ತದೆ. ಈ ಕಾದಂಬರಿಯ ನಾಯಕನಾದ ಶ್ರೇಯಾಂಸ ನಗರ ಜೀವನದ ಜಂಜಾಟದಿಂದ ಬಿಡಿಸಿಕೊಂಡು ತನ್ನ ಹುಟ್ಟೂರಾದ, ಕೃಷ್ಣಾಪುರಕ್ಕೆ ಬಂದು ಅಲ್ಲಿಯ ಜೀವನದಲ್ಲಿ ಭಾಗಿಯಾಗುತ್ತಾನೆ.

ತಂದೆಯೊಂದಿಗೆ ಜಗಳವಾಡಿ ಊರು ಬಿಟ್ಟು ಮುಂಬಯಿ ಸೇರಿ ಅಂತರ್ಜಾತೀಯ ವಿವಾಹವಾಗಿ ಹದಿನೇಳು ವರುಷಗಳ ನಂತರ ಅಂದರೆ ತಂದೆ ಸತ್ತಾಗ ಕೃಷ್ಣಾಪುರಕ್ಕೆ ಮರಳುವ ಶ್ರೇಯಾಂಸ ತನ್ನ ಮುಂದಿನ ಜೀವನವನ್ನು ಮುಂಬಯಿಯಲ್ಲಿ ಕಳೆಯಬೇಕೋ, ಕೃಷ್ಣಾಪುರದಲ್ಲಿ ಕಳೆಯಬೇಕೋ ಎಂಬ ದ್ವಂದ್ವಕ್ಕೆ ಒಳಗಾಗುತ್ತಾನೆ. ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡೇ ಸಾಮಾಜಿಕತೆ ರೂಪುಗೊಳ್ಳುತ್ತದೆ. ಕುಟುಂಬ, ಜಾತಿ, ವರ್ಗ, ರಾಜಕೀಯ ಅಧಿಕಾರ, ರಾಷ್ಟ್ರ, ವಿಶ್ವ ಹೀಗೆ ವ್ಯಕ್ತಿ ತನ್ನನ್ನು ಈ ಸ್ತರಗಳ ಜೊತೆ ಸಂಬಂಧಿಸಿಕೊಳ್ಳುವಲ್ಲಿಯೇ 'ಬೀಜ'ದ ಪರಿಕಲ್ಪನೆ ಸ್ಫುಟವಾಗತೊಡಗುತ್ತದೆ. ತೀವ್ರ ದ್ವೇಷದೊಂದಿಗೆ

ಅಷ್ಟೇ ಪ್ರೀತಿಯನ್ನು ಒಡಲಲ್ಲಿ ಹೊತ್ತು ಮುಂಬಯಿಗೆ ಓಡಿಹೋದ ಶ್ರೇಯಾಂಸನ ಬದುಕು ಅನೇಕ ಸಂಬಂಧಗಳ ಬೀಜವನ್ನು ಬಿತ್ತಿದೆ. ಅದರ ಪರಿಣಾಮ ಸಂಬಂಧಗಳ ಬಂಧದಲ್ಲಿ ಸಿಲುಕಿ ತೊಳಲಾಡುವ ಶ್ರೇಯಾಂಸ ಪ್ರಬುದ್ಧ ಜೀವಿ. ಈ ತೊಳಲಾಟಗಳಿಗೆಲ್ಲ ಅನುಭವದ ಅರ್ಥವಂತಿಕೆಯನ್ನು ಕಲ್ಪಿಸಬಲ್ಲ ಚಿಂತನಶೀಲ. ಒಮ್ಮೆ ಬಿತ್ತಿದ ಸಂಬಂಧದ ಬೀಜವಾಗಲಿ, ಚಿಂತನೆ ಭಾವನೆಯ ಬೀಜವಾಗಲೀ ಬುಡಕಡಿದರೂ ಆಳಕ್ಕೆ ಇಳಿದ ಬೇರುಗಳ ಮೂಲಕ ಜೀವದ್ರವ್ಯವನ್ನುಳಿಸಿಕೊಂಡೇ ಜೀವನ ಮುಖಿಯಾಗಿ ಮತ್ತೆ ಚಿಗುರೊಡೆಯಬಲ್ಲವು. ಈ ಕ್ರಿಯೆ ರೇವತಿ, ಶ್ರೇಯಾಂಸ, ಕಲ್ಪನಾ, ನಿರ್ಮಲ, ವಸಂತ ಲಿಝಿ ಎಲ್ಲರ ಬದುಕಿನ ಭರವಸೆಯ ಸಂಕೇತವಾಗುತ್ತದೆ. ಅಸ್ತಿತ್ವವಾದಿ ನಿರಾಶೆ, ಹತಾಶೆಗಳೆಲ್ಲ ಮಾನವತಾವಾದಿ ಕನಸು, ಸಂಭ್ರಮ, ಭರವಸೆಗಳಲ್ಲಿ ನಿಲುಗಡೆ ಹೊಂದುತ್ತದೆ.

''ಪ್ರೀತಿಯೆಂದರೆ ಸ್ವಾತಂತ್ರ್ಯದ ಕೂಸು'' ಎಂಬ ಹಳೆಯ ಫ್ರೆಂಚ್ ಹಾಡಿನ ಸಾಲೊಂದನ್ನು ಕಾದಂಬರಿ ಸ್ಫೂರ್ತಿಯಾಗಿ ಬಳಸಿಕೊಂಡಿದೆ. ರೇವತಿಯೊಂದಿಗಿನ ಹದಿಹರೆಯದ ಪ್ರಣಯವೇ ಕಾರಣವಾಗಿ ಶ್ರೇಯಾಂಸ ತನ್ನ ತಂದೆಯೊಡನೆ ತೀವ್ರ ಘರ್ಷಣೆಗೊಳಗಾಗಬೇಕಾಯಿತು. ಈ ಘರ್ಷಣೆ ಮನೆಬಿಟ್ಟು ಮುಂಬೈಗೆ ಓಡಿಹೋಗುವಲ್ಲಿ ಪರ್ಯಾವಸಾನವಾಯಿತು. ರೇವತಿಯೊಂದಿಗಿನ ಸಂಬಂಧವು ಅತ್ಯಂತ ನಿಷ್ಠುರ ಪರೀಕ್ಷೆಗೆ ಗುರಿಪಡಿಸಬಹುದಾದ ಸಾಧ್ಯತೆಯನ್ನು ಸ್ವೀಕರಿಸಲಾರದ ಶ್ರೇಯಾಂಸನಿಗೆ ಮುಂಬೈ ಸುರಕ್ಷಿತ ತಾಣವಾಗುತ್ತದೆ. ರೇವತಿ ಇದನ್ನು ಎತ್ತಿ ಆಡುತ್ತಾಳೆ ಕೂಡ. ಹಾಗಾಗಿ ಆ ಸಂದರ್ಭದ ಮಟ್ಟಿಗೆ ''ರೇವತಿಯ ವಿಷಯದಲ್ಲಿನ ಶ್ರೇಯಾಂಸನ ವಿಚಾರ ಭಾವನೆಗಳು ಬೇರು ಮೊಳಕೆ ಪಡೆದುಕೊಳ್ಳುವ ಅವನ ವ್ಯಕ್ತಿತ್ವದ ಬಂಚೆತನವನ್ನು ಸೂಚಿಸುತ್ತವೆ.''[೨೦] ವಿಧವೆ ರೇವತಿಯ ಬದುಕಿನ ಬಗ್ಗೆ ಶ್ರೇಯಾಂಸ ಹಾಕುವ ಯೋಜನೆಗಳಲ್ಲಿ ಆತನ ಬಯಕೆಗಳ ಪೂರ್ಣ ಉದ್ದೇಶ ಅಡಗಿರುವುದು ಸುಸ್ಪಷ್ಟ. ಅಖಂಡ ಸಹಾನುಭೂತಿ, ಸಹಸ್ಪಂದನದ ಬಾಲ್ಯದ ಗೆಳತಿ ರೇವತಿಯತ್ತ ಶ್ರೇಯಾಂಸನ ಬೇರುಗಳು ಚಲಿಸುತ್ತವೆ. ಪಿತೃ ಅಧಿಕಾರದ ನಿರ್ಬಂಧವನ್ನು ಮೀರಿ ಶ್ರೇಯಾಂಸ ತನ್ನ ಸ್ವಾತಂತ್ರ್ಯದ ಸವಿಯುಣ್ಣಲು, ವಾಸ್ತವವಾಗಿ ವಸಂತಿ, ರೇವತಿ, ರಾಧಾಬಾಯಿಯವರ ಕುಟುಂಬವೇ ಕಾರಣ. ಅವನ ಯೌವನದ ಗಿಡಕ್ಕೆ ಪೋಷಣೆ ದೊರಕಿದ್ದು ಈ ಕುಟುಂಬದಿಂದಲೇ. ಆದರೆ ''ಪಿತೃ ಅಧಿಕಾರವನ್ನು ಎದುರಿಸಿ, ಸಂಘರ್ಷದ ಕಿಡಿ ಹೊತ್ತಿಸಿ, ತಂದೆಯ ಪ್ರತಿರೂಪವಾಗಿ ಬೆಳೆದುನಿಲ್ಲಲು ಶ್ರೇಯಾಂಸನು ರೇವತಿಯೊಂದಿಗಿನ ಪ್ರಣಯವನ್ನು ವ್ಯಾವಹಾರಿಕ ನೆಲೆಯಲ್ಲಿ ಬಳಸಿಕೊಂಡನೇನೋ ಎಂಬ ಅನುಮಾನ ಬರುತ್ತದೆ.''[೨೧] ಹಾಗಾಗಿ ಕೃಷ್ಣಾಪುರಕ್ಕೆ ಹಿಂದಿರುಗಿದ ಶ್ರೇಯಾಂಸನಲ್ಲಿ ರೇವತಿಯ ವಿಷಯವಾಗಿ ವ್ಯಕ್ತವಾಗುವ ಪಶ್ಚಾತ್ತಾಪಕ್ಕೆ ಪ್ರಾಮಾಣಿಕ ಬೇರುಗಳಿಲ್ಲವೆನಿಸುತ್ತದೆ.

ರೇವತಿಯ ವಿಷಯದಲ್ಲಿ ಹೇಗೋ ಹಾಗೆ ಲಿಝಿಯ ವಿಷಯದಲ್ಲಿಯೂ ಶ್ರೇಯಾಂಸನದು ವೈಚಾರಿಕ, ವ್ಯಾವಹಾರಿಕ ದೃಷ್ಟಿ. ಪಿತೃಕೇಂದ್ರಿತ ನೆಲೆಯ ಸಾಂಪ್ರದಾಯಿಕತೆಯನ್ನು ಸಾಮಾಜಿಕ ಮೌಢ್ಯವೆಂಬ

ಹೆಸರಿನಲ್ಲಿ ತಿರಸ್ಕರಿಸಿ, ಪ್ರತಿಭಟಿಸುವ ಅವಕಾಶವನ್ನು ಲಿಝಿಯ ತಂದೆ ಸ್ಥಾಪಿಸಿದ ರಸೆಲ್ ಕ್ಲಬ್ ಒದಗಿಸಿತು. ಈ ವೈಚಾರಿಕ ವ್ಯಾವಹಾರಿಕತೆಯಲ್ಲಿ ಹೊಸ ಸಂಬಂಧದ ಬೇರುಗಳು ವಿಸ್ತಾರವಾಗಿ ಚಾಚುತ್ತವೆಯೇ ಹೊರತು ಆಳವಾಗಿ ಅಲ್ಲ. ಲಿಝಿಯೊಂದಿಗಿನ ದಾಂಪತ್ಯ ಆತನಿಗೆ ಪಿತೃ ದ್ವೇಷ ಸಾಧನೆಯ ಅವಶ್ಯಕತೆಯಾಗಿಯೂ, ಸಾಮಾಜಿಕ ಸುರಕ್ಷತೆಯಾಗಿಯೂ ಪರಿಣಮಿಸಿದೆ. ಈ ವ್ಯಾವಹಾರಿಕತೆಯಿಂದಾಗಿಯೇ ಪ್ರಣಯ ನಿವೇದನೆಯ ಉದ್ದುದ್ದನೆಯ ಕಾಗದಗಳನ್ನು ಬರೆಯುತ್ತಿದ್ದ ಶ್ರೇಯಾಂಸನಿಗೆ ರೇವತಿಯೊಂದಿಗಿನ ಸಂಬಂಧದ ಸಂಪರ್ಕವೇ ಇಲ್ಲವೆನಿಸುತ್ತದೆ. ಲಿಝಿ ಮತ್ತು ರೇವತಿ ಒಂದೇ ಮರದ ಬೇರಾದರೂ ಒಂದು ಇನ್ನೊಂದಕ್ಕೆ ಸಂಬಂಧವಿಲ್ಲದಂತೆ ಅಸ್ತಿತ್ವದಲ್ಲಿವೆ.

ಲಿಝಿ ಪಾಲ್‌ನೊಂದಿಗಿನ ಸಂಬಂಧದ ಬೇರು ತನ್ನದೇ ಆದ ವಿಶಿಷ್ಟ ಬಗೆಯ ಫಲಿತವನ್ನು ಶ್ರೇಯಾಂಸನಿಗೆ ನೀಡಿದೆ. ಈ ಬೇರಿನ ಪೋಷಣೆಯಿಂದ ಹೊರಬಂದ ಫಲವಾಗಿ ಶ್ರೇಯಾಂಸನ ಮಗಳು ಕಲ್ಪನೆ ಇದ್ದಾಳೆ. ಇವಳು ಒಂದು ರೀತಿಯಲ್ಲಿ ಶ್ರೇಯಾಂಸನ ಬದುಕಿನ ವಿಸ್ತರಣೆ. ರೇವತಿಯಂತೆ ಈಕೆಯೂ ತನ್ನಲ್ಲಿನ ಸಹಾನುಭೂತಿ ಸಹಸ್ಪಂದನಗಳಿಂದ ಶ್ರೇಯಾಂಸನ ಭರವಸೆಯ ಕೇಂದ್ರವಾಗಿ ಇದ್ದಾಳೆ. ಲಿಝಿ ಶ್ರೇಯಾಂಸನ ವ್ಯಕ್ತಿತ್ವದ ಅತಿ ನಾಗರಿಕ, ಶಿಷ್ಟ ಪ್ರಜ್ಞೆಯ ಸಂಕೇತವೂ ಆಗಿದ್ದಾಳೆ. ಅವಳದೇ ಆದ ವಿಶ್ವದಲ್ಲಿ ಕೃಷ್ಣಾಪುರದೊಂದಿಗಿನ ತನ್ನ ಸಂಬಂಧಗಳಿಗೆ ಯಾವುದೇ ಬಗೆಯ ಪ್ರವೇಶವಿಲ್ಲವೆಂಬುದನ್ನು ಶ್ರೇಯಾಂಸ ಈಗಾಗಲೇ ಅರಿತಿದ್ದಾನೆ. ಕೃಷ್ಣಾಪುರದೊಳಗಿನ ತನ್ನ ಸಂಬಂಧದ ಬೇರುಗಳೊಡನೆ ಲಿಝಿಯ ಲೋಕ ಸಂಪರ್ಕ ಹೊಂದುವುದು ಅಸಾಧ್ಯ ಹಾಗೂ ಅಸಂಭವವೆಂಬುದು ಶ್ರೇಯಾಂಸನಿಗೆ ಮನವರಿಕೆಯಾಗಿದೆ. ಲಿಝಿಯ ತಾಟಸ್ಥ್ಯ ಶ್ರೇಯಾಂಸನಿಗೆ ತಲ್ಲಣದ ವಿಷಯವಾಗುವುದಕ್ಕಿಂತ ಸಾಮಾಜಿಕ ಸುಭದ್ರತೆ ಎಲ್ಲಿ ಭಗ್ನಗೊಳ್ಳುವುದೋ ಎಂಬ ಆತಂಕದ ಸಂಗತಿಯಾಗುತ್ತದೆ. ಹಾಗಾಗಿ ತನ್ನ ಹಾಗೂ ತನ್ನ ಅಪ್ಪನ ನಡುವಿನ ಕರ್ಷಣಕ್ಕೆ ಅಪ್ಪನ ಮರಣ ಮುಕ್ತಾಯ ಹಾಡಿದರೂ, ಇನ್ನು ಮುಂದೆ ತನ್ನ ಹಾಗೂ ಲಿಝಿಯ ನಡುವೆ ಕರ್ಷಣ ಮೊದಲಾಗುವುದೆಂಬುದು ಶ್ರೇಯಾಂಸನ ಅನಿಸಿಕೆ. ವ್ಯಕ್ತಿಯಾಗಿ ಲಿಝಿ ಶ್ರೇಯಾಂಸನಿಗೆ ಸವಾಲಾಗದಿದ್ದರೂ ಅವನೊಳಗಿನ ನಗರ ಪ್ರಜ್ಞೆಯ ಸಂಕೇತವೇ ಅವಳಾಗುವುದರಿಂದ ಇನ್ನು ಮುಂದಿನ ಕರ್ಷಣವೇನಿದ್ದರೂ ಶ್ರೇಯಾಂಸನೊಳಗಿನ ಎರಡು ವಿರುದ್ಧ ಸ್ಥಿತಿಗಳ ನಡುವೆಯೇ.

ತಂದೆಯೊಂದಿಗಿನ ಸಂಬಂಧದ ಬೇರು ಶ್ರೇಯಾಂಸನ ಮನಸ್ಸಿನ ಆಳಕ್ಕೆ ಇಳಿದಿರುವಷ್ಟು ಆಳವಾಗಿ ಲಿಝಿ ಕೇಂದ್ರಿತ ಬೇರು ಇಳಿದಿಲ್ಲ. ಹೀಗಾಗಿ ಸಮಶಕ್ತಿ ಕೇಂದ್ರಗಳ ನಡುವಿನ ಕರ್ಷಣೆ ರೂಪುಗೊಳ್ಳುವುದಿಲ್ಲ. ಪಿತೃಕೇಂದ್ರಿತತೆ ಹೊಂದುವ ಸರಂಜಾಮೀದರ್ಪ ಲೋಲುಪತೆಯನ್ನು ಕೈಬಿಟ್ಟು ಸಾಮಾಜಿಕ ಹೊಣೆಗಾರಿಕೆಯಾಧಾರಿತ ನೆಲೆಯನ್ನು ಪಡೆಯುವಲ್ಲಿ ಶ್ರೇಯಾಂಸನ ಬೇರು ಆಳಕ್ಕೆ ಇಳಿಯುತ್ತದೆ. ಈ ದೃಷ್ಟಿಯಿಂದ ಆತ ಪಿತೃಸಂಬಂಧೀ ಗುಣಗಳನ್ನು ಅಂತರ್ಗತಗೊಳಿಸಿಕೊಳ್ಳಲು ಕಷ್ಟವೇನೂ ಆಗುವುದಿಲ್ಲ. ಹೋಳೀ ಹುಣ್ಣಿಮೆ ಆಚರಣೆಯಲ್ಲಿನ ತನ್ನ ಮನೆತನದ ಹಕ್ಕುದಾರಿಕೆಯನ್ನು ಸ್ಥಾಪಿಸಿದ್ದು, ಅಪ್ಪನ

ಉಪಪತ್ನಿ ಅಂಬುಜಕ್ಕಳಿಗೆ ಹೊಲವನ್ನು ಪ್ರತಿರೋಧದ ನಡುವೆಯೆ ಬಿಟ್ಟುಕೊಟ್ಟಿದ್ದು, ಕರ್ಮಾಂತರ ಪೂಜೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು, ಎಲ್ಲವೂ ಪಿತೃಕೇಂದ್ರಿತ ಸಾಂಪ್ರದಾಯಿಕತೆಯನ್ನು ಪ್ರಶ್ನಿಸದೆ ಅಂತರ್ಗತಗೊಳಿಸಿಕೊಂಡದ್ದರ ಸೂಚಕವೆ. ಶ್ರೇಯಾಂಸನ ಅಹಂನ ಭಾಗವಾಗಿರುವ ಅವನ ನಗರ ಪ್ರಜ್ಞೆ ಸ್ವತಃ ಬೆರಗುಗೊಳಿಸುವ ವಿಷಯವೇ ಆದರೂ ಅಂಥ ಪ್ರಬಲ ಸಂಘರ್ಷವೇನೂ ಏರ್ಪಡುವುದಿಲ್ಲ. ನಗರ ಪ್ರಜ್ಞೆ ಅಗಲಕ್ಕೆ ವಿಸ್ತಾರಗೊಳ್ಳುವ ಬೇರಾಗಿದ್ದು ಕೃಷ್ಣಾಪುರದ ಬೇರು ಆಳಕ್ಕಿಳಿಯುವುದಾಗಿದ್ದು, ಒಂದು ಇನ್ನೊಂದನ್ನು ಪರಸ್ಪರ ಛೇದಿಸಲಾರದ್ದರಿಂದ ಈ ಸಂಘರ್ಷವಿಲ್ಲ.

ನಿಜವಾದ ಸಂಘರ್ಷ ಏರ್ಪಡುವುದು ಕೃಷ್ಣಾಪುರದ ವಿಶ್ವವು ಶ್ರೇಯಾಂಸನನ್ನು ಪರಕೀಯ ಎಂದು ಪರಿಗಣಿಸಿ ಅವನನ್ನು ಹೊರದೂಡಲೆತ್ನಿಸಿದಾಗ. ಚಹರೆಯಿಲ್ಲದ ಮುಂಬೈನ ಬದುಕಿನಲ್ಲಿ ಕಳೆದುಕೊಂಡ ತನ್ನ ಅಸ್ತಿತ್ವದ ಬೇರುಗಳನ್ನು ಗಟ್ಟಿಗೊಳಿಸುವ ಪ್ರಯೋಗ ಭೂಮಿಯಾಗಿ ಶ್ರೇಯಾಂಸ ಕೃಷ್ಣಾಪುರವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ನಗರದ ರಾಜಕೀಯ ಸಂಕಲ್ಪ ಶಕ್ತಿಯ ಮೂಲಕ ತರಲು ಎಣಿಸುವ, ಸಾಮಾಜಿಕ ಬದಲಾವಣೆಯ ಬಗೆಗೆ ಶ್ರೇಯಾಂಸ ನಿರಾಸಕ್ತ. ಸಾಂಸ್ಕೃತಿಕ ಬದಲಾವಣೆಗೆ ಬೇಕಾದ ದೃಢವಾದ ಬೇರುಗಳು ನಗರದಲ್ಲಿ ದೊರೆಯಲಾರವು. ಅಷ್ಟೇ ಅಲ್ಲ, ಈ ರಾಜಕಾರಣ ಆತನ ಕೌಟುಂಬಿಕ ಹಾಗೂ ಔದ್ಯೋಗಿಕ ಸುಭದ್ರತೆಯನ್ನು ಅಲುಗಾಡಿಸಬಹುದು. ಹಾಗಾಗಿ ಮುಂಬೈಯನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲು ಶ್ರೇಯಾಂಸನಿಗೆ ತಾಂತ್ರಿಕ ಕಾರಣಗಳಿವೆ. ಅದೇ ಕೃಷ್ಣಾಪುರದಲ್ಲಾದರೆ, ವಂಶಪಾರಂಪರ್ಯ ಆಸ್ತಿ ಕೈತಪ್ಪಿ ಹೋಗುವ ಭಯವಿಲ್ಲದೆಯೇ ಸಾಮಾಜಿಕ ಬದಲಾವಣೆಯ ಪ್ರಯತ್ನಗಳನ್ನು ಶ್ರೇಯಾಂಸ ಮಾಡಬಹುದಾಗಿದೆ. ಕೃಷ್ಣಾಪುರದಲ್ಲೂ ರಸೆಲ್ ಕ್ಲಬ್‌ನ ಚಟುವಟಿಕೆಗಳ ಮೂಲಕ ಹೊಸ ವಿಚಾರಗಳ ಬೀಜ ಬಿತ್ತುವ ಕನಸನ್ನು ಶ್ರೇಯಾಂಸ ಕಾಣಲು ಸಾಧ್ಯವಾಗುತ್ತದೆ. ಈ ಕನಸಿಗೆ ಭದ್ರಬುನಾದಿ ಎಂಬಂತೆ ಪೂರ್ವಾರ್ಜಿತ ಆಸ್ತಿ ಶ್ರೇಯಾಂಸನಿಗಿದೆ. ವಾತ್ಸಲ್ಯದ ಮೂರ್ತಿಗಳಾದ ತಾಯಿ ಮತ್ತು ಅಕ್ಕ ಇದ್ದಾರೆ. ವಸಂತ, ನಿರ್ಮಲೆ, ರೇವತಿಯರ ಸ್ನೇಹವಿದೆ. ಕಲ್ಯಾಣ ಶೆಟ್ಟಿಯವರ ಮಾರ್ಗದರ್ಶನವಿದೆ. ಈ ಎಲ್ಲ ಸಂಬಂಧದ ಬೇರುಗಳು ಅಯಾಚಿತವಾಗಿ ಆತ ಕೃಷ್ಣಾಪುರಕ್ಕೆ ಆಗಮಿಸಿದ ನಿಮಿತ್ತ ಕೂಡಿಕೊಂಡಂಥವು.

ಉಚಿತ ಆಸ್ಪತ್ರೆಯ ಯೋಜನೆ, ಸಕ್ಕರೆ ಕಾರ್ಖಾನೆಯ ಸಂಶೋಧನಾ ವಿಭಾಗದ ಸ್ಥಾಪನೆ, ವಿಚಾರವಾದಿ ರಸೆಲ್ ಕ್ಲಬ್‌ನ ಸದಸ್ಯರ ಸಂಘಟನೆ ಇತ್ಯಾದಿ ಸಮಾಜಮುಖಿ ಕಾರ್ಯಕ್ರಮಗಳನ್ನು ಶ್ರೇಯಾಂಸ ಯೋಜಿಸುವಲ್ಲಿ ಸ್ಪಷ್ಟ ನಿಲುವಿದೆ. ಕೃಷ್ಣಾಪುರವನ್ನು ತನ್ನ ಕರ್ಮಭೂಮಿಯನ್ನಾಗಿ ಆತ ಸ್ವೀಕರಿಸಿದ್ದಾನೆ. ಸಾಂಸ್ಕೃತಿಕ ಬದಲಾವಣೆಯ ಅವನ ಯತ್ನ ಈಗಾಗಲೇ ಆರ್ಥಿಕವಾಗಿ ಸಬಲರಾಗಿರುವವರನ್ನು ರೊಚ್ಚಿಗೆಬ್ಬಿಸುವಂತೆ ಮಾಡುತ್ತದೆ. ಇದು ಅವನ ಮೇಲೆ ಹಲ್ಲೆಯುಂಟಾಗಲಿಕ್ಕೆ ಕಾರಣವಾಗುತ್ತದೆ. ಈ ಮಾರಣಾಂತಿಕ ಹಲ್ಲೆ ಶ್ರೇಯಾಂಸನ ಆಲೋಚನಾ ದಿಕ್ಕನ್ನೇ ಬದಲಿಸಿಬಿಡುತ್ತದೆ. "ಖರೇ-ಬರೇ

ಸಾಂಸ್ಕೃತಿಕ, ಸಾಮಾಜಿಕ ಕೃತಿ ಈ ದೇಶದಲ್ಲಿ ಶಕ್ಯವೇ ಇಲ್ಲ. ರಾಜಕೀಯ ಕೃತಿಯೇ ನಿಜವಾದ ಜೀವನವನ್ನು ಪರಿವರ್ತಿಸುವ ಕೃತಿ. ಆದರೆ ರಾಜಕೀಯ ಕೃತಿಯೇ ಅವರ ಗುರಿಯಲ್ಲ. ಅದು ಸಾಧನೆ, ಗುರಿ, ಸ್ವಾತಂತ್ರ್ಯ, ಸ್ವಾತಂತ್ರ್ಯದ ಅರ್ಥವೆಂದರೆ ಸಂಸ್ಕೃತಿಯ ಸಹಾನುಭೂತಿಯ, ಪ್ರೀತಿಯ ಸಂತತ ವಿಕಸನ ಪ್ರಕ್ರಿಯೆ.''[೨೨] ಶ್ರೇಯಾಂಸನ ಮೇಲಾದ ಹಲ್ಲೆಯ ಉದ್ದೇಶವೇನೇ ಇರಲಿ, ಅವನ ಮನಸ್ಸಿನಲ್ಲಿ ಅದು ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿದೆ. ತಾನು ಸತ್ತಿಲ್ಲ, ಜೀವಂತವಾಗಿದ್ದೇನೆ ಎಂಬ ಅರಿವಿನೊಂದಿಗೆ ತೂರಿಬಂದ ಆನಂದ ಆತನನ್ನು ಮತ್ತೂ ಸಶಕ್ತನನ್ನಾಗಿಸಿದೆ. ಈ ಆಘಾತ ಅವನಿಗೆ ಮತ್ತೆ ಕೃಷ್ಣಾಪುರದಲ್ಲಿ ಕೇಂದ್ರಸ್ಥಾನವನ್ನು ಒದಗಿಸಿಕೊಟ್ಟಿದೆ. ರಾಜಕಾರಣವನ್ನು ಮಾನವೀಕರಣಗೊಳಿಸುವ ನಿಟ್ಟಿನಲ್ಲಿ ಇಡೀ ಘಟನೆ ಸಹಕಾರಿಯಾಯಿತು. ಪ್ರತಿರೋಧವನ್ನು ಎದುರಿಸಿ ನಿಲ್ಲುವ ತಾಕತ್ತು ತನಗಿದೆ ಎಂಬ ಆತ್ಮವಿಶ್ವಾಸ ಶ್ರೇಯಾಂಸನಲ್ಲಿದೆ. ಈ ಆತ್ಮವಿಶ್ವಾಸವೇ ತಾನು ನಿರಾಕರಿಸಿದ ಕುಟುಂಬ ಕೇಂದ್ರದ ಯಾಜಮಾನ್ಯವನ್ನು ಪ್ರಶ್ನಿಸದಿರುವಂತೆ ಮಾಡಿದೆ. ತನ್ನ ಅಪ್ಪ ಸತ್ತಾಗ ತಾನು ತನ್ನ ಬೇರುಗಳನ್ನು ಹುಡುಕಿಕೊಂಡು ಬಂದಂತೆ, ತನ್ನ ಮಗಳೂ ಬರಬೇಕೆಂಬ ಇಂಗಿತ ಶ್ರೇಯಾಂಸನದು. ಅವನ ಅಪ್ಪನ ಪ್ರೀತಿಯ ನಾಯಿ ಸೀಜರ್‌ನ ಮುಖವನ್ನು ದಿಟ್ಟಿಸಿ ನೋಡುತ್ತ ಕೂಡುವಲ್ಲಿ ಕಾದಂಬರಿಯ ಮುಕ್ತಾಯವಿದೆ. ಆದರೆ ಈ ಸ್ಥಿತಿಯನ್ನು ವಿಮರ್ಶಕರಾದ ಕೆ.ವಿ.ನಾರಾಯಣ ಅವರು ಹತಾಶೆ ಎಂದು ಪರಿಗಣಿಸುತ್ತಾರೆ. ''ಕಾದಂಬರಿಯ ಕೊನೆಗೆ ಒಂಟಿಯಾಗಿ ಕುಸಿದು ಕೂರುವ ಶ್ರೇಯಾಂಸನಲ್ಲಿ ಮರಳುವುದರ ಬಗ್ಗೆ ತನ್ನಲ್ಲಿ ಮೂಡಿದ್ದ ತಾಕಲಾಟ ಕೊನೆಗೊಂಡದ್ದಕ್ಕೆ ನಿರಾಳವಾದ ಭಾವವಿದ್ದಿತಾದರೂ, ಜೊತೆಗೆ ತಾನು ಒಂಟಿಯಾಗಿಯೇ ಉಳಿದ ಆತಂಕ ಹತಾಶೆಗಳೂ ಇಲ್ಲದಿಲ್ಲ. ಈ ನೆಲದಲ್ಲಿ ಅವನು ಕಾಣುವ ನಾಳೆಗಳು ಹಾಲು ತುಂಬಿದ ತೆನೆಗಳುಳ್ಳ ಪಯಿರುಗಳಾಗಬಲ್ಲವೆ? ಅದಿನ್ನೂ ಅವನಲ್ಲಿ ಕೊನೆಮುಟ್ಟದ ನೆಲೆ.''[೨೩]

ಬೀಜದಿಂದ ಪ್ರಾರಂಭವಾಗುವ ಸಸ್ಯ ಸಂಬಂಧಿ ಪ್ರತಿಮೆ ರೇವತಿ ರಚಿಸಿದ ವರ್ಣಚಿತ್ರಗಳೆರಡರಲ್ಲಿ ಪೂರ್ಣ ರೂಪದಲ್ಲಿ ಬೆಳೆದು ನಿಲ್ಲುತ್ತದೆ. ಇದಕ್ಕೆ ಪೂರಕವಾಗಿ ಶ್ರೇಯಾಂಸನ ಬಾಲ್ಯದ ನೆನಪನ್ನು ಸಂಕೇತಿಸುವ ಹಣ್ಣು ತೂಗಿನಿಂತ ಮಾವಿನ ಮರದ ಟೊಂಗೆಯ ಚಿತ್ರವಿದೆ. ಮಾವಿನ ಮರ ಶ್ರೇಯಾಂಸನ ಕಳೆದುಹೋದ ವಸಂತವನ್ನು ಸಂಕೇತಿಸುತ್ತದೆ. ''.....ಶ್ರೇಯಾಂಸ ಮಾವಿನ ಗಿಡದ ಬುಡಕ್ಕೆ ನಿಂತು ತನ್ನ ಪ್ರೀತಿಯ ಜೋತಾಡುವ ಟೊಂಗೆಯನ್ನು ಶೋಧಿಸತೊಡಗಿದ. ಆ ಟೊಂಗೆ, ಆ ತೂಗುರೆಂಬೆ, ಅವನಿಗೆ ಸಿಗಲೇ ಇಲ್ಲ...''[೨೪] ಕೃಷ್ಣಾಪುರದ ಬೇರುಗಳಲ್ಲಿ ಶ್ರೇಯಾಂಸನಿಗೆ ಆಪ್ತವಾದ ಬೆಚ್ಚಗಿನ ಬಾಲ್ಯದ ನೆನಪುಗಳೂ ಇವೆ. ಹೊಲಕ್ಕೆ ಬತ್ತ ಒಕ್ಕೋ ದಿನಗಳಲ್ಲಿ ಅಪ್ಪನೊಡನೆ ಹೋಗುತ್ತಿದ್ದದ್ದು, ಇಡೀ ರಾತ್ರಿ ಕೂತು ಪಾಲು ಮಾಡುತ್ತಿದ್ದುದು ಎಲ್ಲವೂ ಶ್ರೇಯಾಂಸನ ಮನದಲ್ಲಿ ಜೀವಂತವಾಗಿ ಇವೆ. ಹಾಗಿದ್ದುದರಿಂದಲೇ ಅಪ್ಪನ ಹೆಣವನ್ನು ತಡವಿ ಹೃದಯದಾಳದಿಂದ ದುಃಖಿಸಲು ಶ್ರೇಯಾಂಸನಿಗೆ ಸಾಧ್ಯವಾಯಿತು. ಕಲ್ಯಾಣಶೆಟ್ಟರೇನೋ ಶ್ರೇಯಾಂಸನಿಗೆ ''ನೀನೂ ಸಂಬಂಧ ಕಳಕೊಂಡಂಥ ಹುಡುಗ

ಅಂದ್ಹಾಂಗ ಮುಂಬೈಕ ಹೋಗಿ ನೀ ನಿನ್ನ ಬೇರನ್ನ ಕಳಕೊಂಡಬಿಟ್ಟೆ''[೨೫] ಎಂದಿರಬಹುದು. ಆದರೆ ಬಾಲ್ಯದ, ಹದಿವಯಸ್ಸಿನ ಅನುಭವದ ಬೇರುಗಳು ಆಳವಾಗಿ, ಗುಪ್ತವಾಗಿ ಹೋಗುವಂಥವು ಈ ಬೇರುಗಳೇ ಮುಂಬೈಯ ನೀರುಕಾಣದ ಬದುಕಿನ ಅಭಾವದಲ್ಲಿ ಕಲ್ಪನೆಯ ಮಾವಿನ ಮರವನ್ನು ಸೃಷ್ಟಿಸುವ ಸೃಜನಶೀಲತೆಯನ್ನು ಬೆಳೆಸಬಲ್ಲವು. ಹಾಗಾಗಿ ಶಾಂತಿನಾಥರ ಇತರ ಕಾದಂಬರಿಗಳ ನಾಯಕರಂತೆ ಬೇರಿಲ್ಲದ ಹುಡುಕಾಟ ತಡಕಾಟಗಳ ವಿಕ್ಷಿಪ್ತತೆಯನ್ನು ಶ್ರೇಯಾಂಸ ಹೊಂದಿಲ್ಲ.

ರೇವತಿಗೆ ತಾನು ದ್ರೋಹ ಬಗೆದದ್ದನ್ನು ವಸ್ತುನಿಷ್ಠವಾಗಿಯೇ ಶ್ರೇಯಾಂಸ ಒಪ್ಪಿಕೊಳ್ಳುತ್ತಾನೆ: ''...ಇವಳ ಸಲುವಾಗಿ ಅಪ್ಪನೊಡನೆ ಜಗಳವಾಡಿದೆ ನಿಜ. ಆದರೆ ಇವಳನ್ನು ಕರಕೊಂಡು ಓಡಿ ಹೋಗುವ ಧೈರ್ಯ ಯಾಕೆ ಬರಲಿಲ್ಲ? ನನಗಾಗ ತಂದೆಯವರ ಅನುಮತಿಯ ಅವಶ್ಯಕತೆ ಇದ್ದೇ ಇತ್ತೆ? ನಾನೆಷ್ಟು ಜಗಳವಾಡಿದ್ದರೂ ಅವರ ಆತ್ಮಕ್ಕೆ ನನ್ನ ಆತ್ಮ ಅಂಟಿಕೊಂಡಿತ್ತೆ? ಅದರ ಶಕ್ತಿ ಬೆನ್ನಿಗಿರದೆ ನನ್ನ ವ್ಯಕ್ತಿತ್ವ ನನ್ನ ಸ್ವಂತ ಶಕ್ತಿಯ ಮೇಲೆ ನಿಲ್ಲಲು ಅಸಾಧ್ಯವಿತ್ತೇ? ಅವರ ವಿರೋಧದಲ್ಲಿಯೇ ನನ್ನ ವ್ಯಕ್ತಿತ್ವ ಕಟ್ಟಿಕೊಂಡವನು. ಆಗೇಕೆ ನನ್ನಿಂದ ರೇವತಿಯನ್ನೇ ಒಯ್ಯಲು ಸಾಧ್ಯವಾಗಲಿಲ್ಲ? ಅಥವಾ ರೇವತಿಯನ್ನು ನನ್ನ ವ್ಯಕ್ತಿತ್ವದ ಯಾವುದೋ ಒಂದು ಭಾಗವು ನಿರಾಕರಿಸುತ್ತಿತ್ತೇ?''

ಆಳವಾಗಿ ಇಳಿದ ಮಾವಿನ ಮರದ ಬೇರಿನಂತಹ ಬಾಲ್ಯ-ಹದಿಹರೆಯದ ನೆನಪುಗಳು ಕೃಷ್ಣಾಪುರವನ್ನೇ ತನ್ನ ಕರ್ಮಭೂಮಿಯಾಗಿ ಆಯ್ಕೆ ಮಾಡಿಕೊಳ್ಳಲು ಸೃಜನಾತ್ಮಕ ಪ್ರೇರಣೆ ನೀಡುತ್ತವೆ. ಶ್ರೇಯಾಂಸನ ವ್ಯಕ್ತಿತ್ವದ ವ್ಯಾವಹಾರಿಕ ಭಾಗ ರೇವತಿಯನ್ನು ಸ್ವೀಕರಿಸದೇ ಹೋದರೂ ಅವರ ವ್ಯಕ್ತಿತ್ವದ ಸೃಜನಶೀಲ ಭಾಗ ಆಕೆಯನ್ನು ಸ್ವೀಕರಿಸುತ್ತದೆ. ಸಾವಿನಂಚಿನಿಂದ ಹೊರಬಂದ ಶ್ರೇಯಾಂಸನ ಪ್ರಜ್ಞೆಗೆ ರೇವತಿಯ ಮುಖ, ಆಕೆಯ ದೊಡ್ಡ ಕಣ್ಣುಗಳೇ ಕಾಣುವುದು. ಮನುಷ್ಯತ್ವದ ಅತ್ಯಂತ ಸೂಕ್ಷ್ಮ ಕೋಮಲ ಹಾಗೂ ಸುಂದರ ಭಾಗವನ್ನು ಕಣ್ಣುಗಳು ಸಂಕೇತಿಸುತ್ತವೆ. ರೇವತಿಗಾಗಿ ಕೃಷ್ಣಾಪುರದಲ್ಲಿ ಉಳಿಯಲು ಶ್ರೇಯಾಂಸ ನಿರ್ಧರಿಸಿದನೆಂಬ ಅಭಿಪ್ರಾಯ ಎಚ್.ಎಸ್.ರಾಘವೇಂದ್ರರಾವ್ ಅವರದು. ಶ್ರೇಯಾಂಸನನ್ನು ತೊರೆಯುವ ತನ್ನ ತೀರ್ಮಾನವನ್ನು ಅಪಘಾತದ ನಂತರ ರೇವತಿ ಬದಲಾಯಿಸಿದಳೆಂಬುದಕ್ಕೆ ಕಾರಣವನ್ನು ಆಕೆಯ ಚಿತ್ರಪಟದಲ್ಲಾದ ಬದಲಾವಣೆಯಲ್ಲಿ ಈ ವಿಮರ್ಶಕರು ಗುರುತಿಸುತ್ತಾರೆ. ''ಮೋಕ್ಷ, ಬ್ರಹ್ಮಾನಂದಗಳನ್ನು ಬಯಸುವೆನೆಂದು ಹೇಳುತ್ತಿದ್ದ ರೇವತಿಯು ಸರ್ವಸಮರ್ಪಣ ಭಾವ ತೋರುವುದು ಅವಳ ಬದಲಾದ ಧೋರಣೆಗೆ ಕುರುಹು.''[೨೬]

ಆದರೆ ರೇವತಿಯಲ್ಲಾದ ಬದಲಾವಣೆಯ ಸ್ವರೂಪ ಬೇರೆಯದೇ ಆಗಿದೆ. ಮೊದಲು ಚಿತ್ರದಲ್ಲಿ ಶ್ರೇಯಾಂಸನ ಮುಖವನ್ನು ಹೋಲುವಂಥ ಕಪ್ಪು ಬಣ್ಣದ ಮುಖದ ಅರ್ಧ ಭಾಗವಿದೆ. ಇನ್ನರ್ಧ ಭಾಗದಲ್ಲಿ ಶಿವಲಿಂಗ, ಗುಡಿಯಂಥ ಆಕೃತಿಗಳಿವೆ. ಇವೆರಡನ್ನು ಪ್ರತ್ಯೇಕಿಸುವಂಥ ಎತ್ತರದ ಸಾಗವಾನೀ ಗಿಡ ಉಜ್ವಲ ಕೆಂಬಣ್ಣದಲ್ಲಿದೆ. ತನ್ನ ಹಾಗೂ ಶ್ರೇಯಾಂಸನ ಸಂಬಂಧವನ್ನು ರೇವತಿ ಈ ಚಿತ್ರದ

ಮೂಲಕ ಸೂಚಿಸಲು ಯತ್ನಿಸಿದ್ದಾಳೆ. ಅವರಿಬ್ಬರ ಪ್ರಣಯದ ಮಾತುಕಥೆಗಳಿಗೆ ಹಿನ್ನೆಲೆಯಾದ ಪ್ರಾಕೃತಿಕ ಪರಿಸರವನ್ನು ಈ ಚಿತ್ರ ಹೊಂದಿದೆ. ಗುಡಿಯ ಹಿನ್ನೆಲೆಯು ಅಸ್ಪಷ್ಟವಾಗಿ ಸರ್ವಸಮರ್ಪಣದ ಸೂಚಕ. ಆದರೆ ಆ ಅರ್ಪಣೆಯನ್ನು ಸ್ವೀಕರಿಸಲಾಗದ ಶ್ರೇಯಾಂಸನ ವ್ಯಕ್ತಿತ್ವವನ್ನು ಎತ್ತರಕ್ಕೆ ಬೆಳೆದ ಸಾಗವಾನಿ ಗಿಡ ಸೂಚಿಸುತ್ತದೆ. ತನಗೆ ಅನುಕೂಲವಾದೆಡೆಯಲ್ಲೆಲ್ಲ ನೀರಿನ ಸೆಲೆ ಹುಡುಕಿ ಒಳಗಿಂದಲೇ ವಿಸ್ತಾರವಾದ ಪೋಷಣೆಯನ್ನು ಗಿಡಕ್ಕೆ ಒದಗಿಸುವ ಬೇರು, ಸಾಗವಾನಿಯನ್ನು ಎತ್ತರೆತ್ತರಕ್ಕೆ ಬೆಳೆಸಬಲ್ಲದು. ಸಾಗವಾನಿ ಮಾವಿನಂತೆ ಹೂಹಣ್ಣುಗಳಿಂದ ಕಂಗೊಳಿಸುವ ಹಸಿರು ಸಮೃದ್ಧತೆಯನ್ನು ಹೊಂದಿಲ್ಲ. ಸಾಮಾಜಿಕ ವರ್ಗಪ್ರಜ್ಞೆಯುಳ್ಳ ಶ್ರೇಯಾಂಸನ ವ್ಯಕ್ತಿತ್ವವನ್ನು ಎತ್ತರಕ್ಕೆ ಬೆಳೆದ ಸಾಗವಾನಿ ಗಿಡ ಸೂಚಿಸಬಹುದು. ಹಸಿರಿಗೆ ಬದಲಾಗಿ ಕೆಂಪುಬಣ್ಣವನ್ನು ಸಾಗವಾನಿಗೆ ಬಳಸಿರುವುದು ಮನೋನುರಾಗದ ಸಂಕೇತವಿರಬಹುದು. ಚಿತ್ರದ ಒಟ್ಟು ಸಾಂಕೇತಿಕತೆ ರೇವತಿಯ ಸರ್ವಸಮರ್ಪಣ ಮನಃಸ್ಥಿತಿಯ ಸೂಚಕವಲ್ಲ, ಸಮರ್ಪಣಕ್ಕೆ ಅಗತ್ಯವಾಗಿ ಬೇಕಾದ ಸ್ವಯಂಪೂರ್ಣತೆ ರೇವತಿಯಲ್ಲಾಗಲಿ ಶ್ರೇಯಾಂಸನಲ್ಲಾಗಲಿ ಇಲ್ಲದಿರುವುದು ಈ ಚಿತ್ರ ಸೂಚಿಸುತ್ತದೆ. ಶಿವಲಿಂಗ ಕಲ್ಲಿನ ಗುಡಿ ಈ ಅಭಾವದ ಸಂಕೇತ. ನಿರ್ಮಲೆಯೆದುರಿಗಿನ ಅಸಹಾಯ ಶರಣಾಗತಿ, ಕೌಟುಂಬಿಕ ವೈಫಲ್ಯಗಳು ರೇವತಿಯನ್ನು ದೀನ-ತಟಸ್ಥ್ಯವಾಗಿಸಿವೆ. ಶ್ರೇಯಾಂಸನೊಂದಿಗಿದ್ದಾಗ ಆಕೆಯಲ್ಲುಂಟಾಗುವ ಚಡಪಡಿಕೆ, ಆತಂಕಗಳು ಸ್ವಯಂ ಪೂರ್ಣತೆಯ ಆನಂದವನ್ನು ಸ್ವೀಕರಿಸದಿರುವಂತೆ ಮಾಡಿವೆ.

ಎರಡನೆಯ ಚಿತ್ರದಲ್ಲಿ ರೇವತಿ ತನ್ನ ಹೊಯ್ದಾಟಗಳಿಗೆ ತಾತ್ವಿಕ ಉತ್ತರ ಕಂಡುಕೊಂಡ ಸೂಚನೆಯಿದೆ. ಶ್ರೇಯಾಂಸನಿಗೆ ಆಕೆ ಬರೆದ ಪತ್ರದಲ್ಲಿ ಈ ತಾತ್ವಿಕ ಹುಡುಕಾಟಕ್ಕೆ ಗಟ್ಟಿ ನೆಲೆ ದೊರಕದಿರುವುದು ಸ್ಪಷ್ಟವಾಗಿದೆ. “...ನನ್ನ ಜೀವನವೆಲ್ಲ ಮುಗಿದು ನಾನೊಂದು ಮೃತ್ಯುಪೂರ್ವದ ವಿಚಿತ್ರ ಸ್ಥಿತಿಯಲ್ಲಿದ್ದೇನೆ. ನನ್ನ ಶಕ್ತಿಯೆಲ್ಲ ಹಿಂಗಿಹೋಗಿದೆ... ಹೌದು ನನ್ನ ಚಿತ್ರಗಳಲ್ಲಿ ಒಮ್ಮೊಮ್ಮೆ ನನ್ನ ಆತ್ಮ ಭುಗಿಲ್ಲೆಂದು ಉರಿಯುತ್ತದೆ - ಜೀವವಿರುವ ತನಕ ಅದರ ಜೀವಂತ ತನಕ್ಕೆ ಒಂದು ಅವಕಾಶ ಕೊಡಬೇಕಲ್ಲವೆ?”[೨೨] ಈ ಉತ್ತರದಲ್ಲಿ ಒಂದು ಬಗೆಯ ಆತ್ಮಾನುಕಂಪೆ ಇದೆ. ಈ ಆತ್ಮಾನುಕಂಪೆಯೇ ಆಕೆಯನ್ನು ಜೀವನ ವಿಮುಖಳನ್ನಾಗಿಸಿದೆ. ಜೊತೆಗೆ ಆಕೆಗೆ ಒಂದು ವಿಷಯ ಸ್ಪಷ್ಟವಾಗಿದೆ. ‘ನೀ ಬೇಕು’ ಎನ್ನುವ ಶ್ರೇಯಾಂಸನ ಅನಿಸಿಕೆ ಕೇವಲ ವೈಯಕ್ತಿಕ ಇಷ್ಟವಾಗಿದೆ. ತಾನಿಲ್ಲದೆಯೂ ಶ್ರೇಯಾಂಸನು ಸೃಜನಶೀಲ ಸಾಮಾಜಿಕ ವ್ಯಕ್ತಿತ್ವ ಗಳಿಸಬಲ್ಲನೆಂಬುದು ಆಕೆಗೆ ಮನವರಿಕೆಯಾಗಿದೆ. ಆದರೆ ಶ್ರೇಯಾಂಸನ ಅಗತ್ಯ ತನಗಿಲ್ಲವೆಂಬುದನ್ನು ರೇವತಿ ಹೇಳಲಾರಳು. ಆಕೆಯ ಚಿತ್ರಗಳಲ್ಲಿ ಒಮ್ಮೊಮ್ಮೆ ಉರಿಯುವ ಆತ್ಮವಿದೆ. ಸಾಗವಾನಿ ಗಿಡದ ಕೆಂಪು ವರ್ಣ ಇದನ್ನು ಸೂಚಿಸುತ್ತದೆ. ಈ ಉರಿಗೆ ಸಾಮಾಜಿಕ ಅಸ್ತಿತ್ವವಿಲ್ಲವೆನ್ನುವುದೇ ಆಕೆಯ ನಿರಾಶೆಗೆ ಕಾರಣ. ತನ್ನ ಹಾಗೂ ಶ್ರೇಯಾಂಸನ ಸಂಬಂಧದ ವಿಶ್ವ ತೀರ ಖಾಸಗೀಯಾದುದು. ಅದಕ್ಕೂ ಬಾಹ್ಯ ಸಮಾಜಕ್ಕೂ ಸಂಬಂಧವಿಲ್ಲ ಎಂಬ ಭಾವ ಅವಳ ಚಿತ್ರಗಳ

ಮೂಲಕ ಅಭಿವ್ಯಕ್ತವಾಗುತ್ತದೆ. ತನ್ನ ಚಿತ್ರಗಳು ಇತರರಿಗೆ ಹಾಸ್ಯದ ವಸ್ತುವಾಗಬಹುದೆಂಬ ಹಿಂಜರಿತ, ಸಂಕೋಚಗಳೂ ಆಕೆಗಿವೆ.

ಈ ಮನಸ್ಥಿತಿ ಎರಡನೆಯ ಚಿತ್ರದಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಶಿವಲಿಂಗ ಗುಡಿಯ ಬದಲಾಗಿ ತನ್ನ ಸ್ವಂತ ವ್ಯಕ್ತಿತ್ವದ ಸೂಚಕವಾಗಿ ಉದ್ದ ಹೆರಳಿಗೆ ಸ್ತ್ರೀ ಆಕೃತಿಯನ್ನು ರೇವತಿ ಚಿತ್ರಿಸಿದ್ದಾಳೆ. ನೆನಪುಗಳ ಹಳವಂಡದಲ್ಲಿ ಕೊಳೆಯುವುದಕ್ಕಿಂತಲೂ ಚೈತನ್ಯದಾಯಕ ಸ್ವಯಂ ನಿರ್ಮಿತ ಬದುಕಿಗೆ ಆಕೆ ಹೊರಳಿಕೊಳ್ಳುವ ಸೂಚನೆಗಳು ಎರಡನೆಯ ಚಿತ್ರದಲ್ಲಿವೆ. ನೀನಿಲ್ಲಿ ಬಂದರೆ ನಾನೂ ಇಲ್ಲಿರುವುದು ತಪ್ಪು" ಎಂದಿದ್ದ ರೇವತಿ "ಬಾ ಬೇಕಾದಾಗ ಬಾ" ಎಂದು ಶ್ರೇಯಾಂಸನಿಗೆ ನೀಡುವ ಮುಕ್ತ ಆಹ್ವಾನ ಅರ್ಥಪೂರ್ಣವಾದುದು. ಶ್ರೇಯಾಂಸನ ಸಾಮಾಜಿಕ ಘನತೆಗೆ ಅವನ ಪ್ರಯೋಗಕ್ಕೆ ತಮ್ಮ ಸಂಬಂಧ ಬಾಧಕವಾಗದೆಂಬ ಭರವಸೆಯೂ ಆಕೆಯಲ್ಲಿದೆ. ಇಲ್ಲಿ ಆಧುನಿಕ ಪ್ರಜ್ಞೆಯುಳ್ಳ ರೇವತಿ ಮನಸ್ಸು ಮಾಡಿದ್ದರೆ ಶ್ರೇಯಾಂಸನನ್ನು ಮದುವೆಯಾಗಬಹುದಿತ್ತು. ಆದರೆ ಅವರಿಬ್ಬರೂ ತಮ್ಮ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಬದುಕಲಿಕ್ಕೆ ತಯಾರಿರುವುದಿಲ್ಲ. ಆಧುನಿಕಳಾದ ರೇವತಿ ತನ್ನ ಸುಖವನ್ನು ಮಾತ್ರ ನೋಡಿಕೊಳ್ಳುವುದಿಲ್ಲ. ತನ್ನ ಅಸ್ತಿತ್ವ ಮಾತ್ರ ಮುಖ್ಯ ಅಂತ ಭಾವಿಸುವುದಿಲ್ಲ. ಶ್ರೇಯಾಂಸನ ಕುಟುಂಬ, ಹೆಂಡತಿ, ಮಕ್ಕಳು, ಊರು ಎಲ್ಲದರ ಬಗೆಗೂ ಆಲೋಚನೆ ಮಾಡುತ್ತಾಳೆ. ಹೀಗೆ ಇವರ ಪ್ರೀತಿಗೂ ಒಂದು ನೈತಿಕತೆಯಿರುವುದನ್ನು ಕಾಣುತ್ತೇವೆ. ಹೀಗಾಗಿ ಕಾದಂಬರಿಯ ಕೊನೆಯಲ್ಲಿ ಶ್ರೇಯಾಂಸ ಕೃಷ್ಣಾಪುರದಲ್ಲೇ ಉಳಿಯುವ ತೀರ್ಮಾನವನ್ನು ಕೈಗೊಂಡು, ಅವನ ಅಪ್ಪನ ಜೀವನ ವಿಧಾನವನ್ನು ಮುಂದುವರಿಸುತ್ತಾನೆ. ಇವನ ಅಪ್ಪನದು ಸಾಂಪ್ರದಾಯಿಕ ಜೀವನ ವಿಧಾನವಾದರೆ, ಇವನು ಆಧುನಿಕವಾದ ಜೀವನ ವಿಧಾನದಲ್ಲಿ ಮುಂದುವರಿಯುತ್ತಾನೆ.

ಅಂತರಾಳ

ಸಾಕ್ಷೀ ಪ್ರಜ್ಞೆಯ ಮೂಲಕ ಗತ ಅನುಭವಗಳನ್ನು ವರ್ತಮಾನದ ಅರಿವಿನೊಂದಿಗೆ ಮುಖಾಮುಖಿಯಾಗಿಸುವ ಯತ್ನ ಈ ಕಾದಂಬರಿಯಲ್ಲಿದೆ. ಅಂತರಾಳದ ಅನುಭವಗಳ ಶೋಧಕ್ಕೆ ಒರೆಗಲ್ಲಾಗಿ ಸೃಷ್ಟಿಸಿಕೊಳ್ಳುವ ಸಾಕ್ಷೀಪ್ರಜ್ಞೆಯು ಇಲ್ಲಿ ಶೋಧಕ್ಕೆ ಒಳಗಾಗಿದೆ. ಈ ಶೋಧ ರೊಮ್ಯಾಂಟಿಕ್, ವಾಸ್ತವಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಹೊಂದಿದೆ. ಹಾಗಾಗಿ ಈ ಶೋಧಕ್ಕೆ ಕಾದಂಬರಿಯ ಕೊನೆಯ ಹೊತ್ತಿಗೆ ಒಂದು ತಾತ್ವಿಕ ಸ್ವರೂಪ ಒದಗಲು ಸಾಧ್ಯವಾಗಿದೆ.

ಸ್ವಗತ ರೀತಿ ನಿರೂಪಣೆಯ ಈ ಕಾದಂಬರಿಯು ಉದ್ದಕ್ಕೂ ಅನೇಕ ದಾರ್ಶನಿಕ ಚಿಂತನೆಗಳನ್ನು ಅನ್ವೇಷಕ ನೆಲೆಯಲ್ಲಿ ಬಳಸಿಕೊಂಡಿದೆ. ಗಾಂಧೀವಾದ, ಮಾರ್ಕ್ಸ್‌ವಾದ, ಉದಾರವಾದಿ, ಮಾನವತಾವಾದ ಎಂ.ಎನ್. ರಾಯ್ ವಾದಗಳ ಮೂಲಕ ಚಿಂತನೆಯ ಎಳೆಗಳು ಕೇಂದ್ರ ಪಾತ್ರದ ಮಾತುಗಳಾಗಿ ಮಾತ್ರ

ಕಾದಂಬರಿಯಲ್ಲಿ ಬಳಕೆಯಾಗಿಲ್ಲ. ಇತರ ಪಾತ್ರಗಳೊಂದಿಗಿನ ಸಾಮಾಜಿಕ, ಭಾವನಾತ್ಮಕ ಸಜೀವ ಸಂಬಂಧಗಳ ಭಾಗವಾಗಿ, ಸಂವಾದ ಸಂಭಾಷಣೆಯ ರೂಪದಲ್ಲಿಯೂ ಕೃತಿಯ ವೈಚಾರಿಕತೆ ಸಿದ್ಧಗೊಳ್ಳುತ್ತದೆ. ಬದುಕನ್ನು ಕುರಿತ ಸಿದ್ಧ ಮಾರ್ಗವನ್ನು ಯಾವುದೇ ತತ್ವಸಿದ್ಧಾಂತಗಳು ರೂಪಿಸಲಾರವೆಂಬ ಅಸ್ತಿತ್ವವಾದಿ ತಿಳುವಳಿಕೆಗೆ ಕಾದಂಬರಿ ಬದ್ಧವಾಗಿದೆ. ಆದರೆ “ಅಂತರಾಳದ ಕೇಂದ್ರ ಪ್ರಜ್ಞೆಯಾಗಿರುವ ವಿಕ್ರಮ್‌ರಾಣೆ ಎಷ್ಟು ಜೀವಂತ ಪಾತ್ರವೆಂದರೆ, ಅಸ್ತಿತ್ವವಾದದ ಪೂರ್ವಭಾವಿ ಅರಿವಿನಿಂದಲೇ ಆತ ಎಲ್ಲವನ್ನೂ ಸಾಕ್ಷೀ ಪ್ರಜ್ಞೆಯಿಂದ ನೋಡುವ ತಟಸ್ಥ ವ್ಯಕ್ತಿಯಲ್ಲ, ಆತ ಉಪನಿಷತ್ತಿನಲ್ಲಿ ಬರುವ ಎರಡು ಪಕ್ಷಿಗಳ ರೂಪಕದಲ್ಲಿನ ‘ಹಣ್ಣು ತಿನ್ನುವ ಗಿಣಿ’ ಕೂಡ. ಸ್ವಾಭಾವಿಕವಾಗಿಯೇ ವಿಚಾರ ಮಾಡುವ ಪ್ರಾಣಿಯಾದ ಮಾನವನ ಮನಸ್ಸು ಏಕಕಾಲಕ್ಕೆ ಅನುಭವವನ್ನು ಪಡೆಯುತ್ತಲೇ ಅದನ್ನು ನೋಡುವ, ಪರೀಕ್ಷಿಸುವ ಕೌಶಲ್ಯವುಳ್ಳದ್ದು, ಅದೇ ರೀತಿಯ ಜನ್ಮಸ್ಥಾನ, ಕಾದಂಬರಿಯಲ್ಲಿ ಬರುವ ವಿಕ್ರಮರಾಣೆ ಇಂಥ ಕೌಶಲ್ಯವನ್ನು ಪಡೆಯಲು ಪ್ರಜ್ಞಾಪೂರ್ವಕವಾಗಿ ಹವಣಿಸುವ ವ್ಯಕ್ತಿ.”[೨೮]

ಐವತ್ತರ ಅನಂತರದ ಬದುಕೆಂದರೆ ರೈಲು ಚಲಿಸುವ ದಿಕ್ಕಿಗೆ ಬೆನ್ನು ಮಾಡಿ ರೈಲಿನೊಳಗೆ ಕೂತಂತೆ” ಐವತ್ತರ ಅನಂತರ ಕಾಡಲಾರಂಭಿಸುವ ಸಾವಿನ ಪ್ರಜ್ಞೆ ಮತ್ತೆ ಮತ್ತೆ ಕಳೆದು ಹೋದ ದಿನಗಳ ನೆನಪನ್ನು ಜೀವಂತ ಕ್ಷಣವಾಗಿಸಲು ಯತ್ನಿಸುತ್ತದೆ. ಹಾಗಾಗಿ ವರ್ತಮಾನದ ದೈನಂದಿನ ಚಲನೆಗೂ ವಿಚಿತ್ರ ಬಗೆಯ ತೀವ್ರತೆಯನ್ನು ಗತದ ಪ್ರಜ್ಞೆ ಒದಗಿಸುತ್ತದೆ. ಗತ ವರ್ತಮಾನ ಭವಿಷ್ಯವನ್ನು ಒಂದು ಕೇಂದ್ರಕ್ಕೆ ಒಳಪಡಿಸಬಲ್ಲ ಶಿಕ್ಷಣದ ನೆಲೆ ವಿಕ್ರಮ್‌ರಾಣೆಯಂತಹ ಐವತ್ತರ ವ್ಯಕ್ತಿಗೆ ದಕ್ಕುತ್ತದೆ. ಆಗ ಆತ ಬರೆದದ್ದೆಲ್ಲ ಆತ್ಮನಿವೇದನೆಯಾಗದೆ ಗತ್ಯಂತರವೇ ಇಲ್ಲ. ತಾರುಣ್ಯ, ಪ್ರೌಢ, ಮಧ್ಯವಯಸ್ಕ ಹಂತದಲ್ಲಿ ತಾನು ಪಡೆದ ಅನುಭವಗಳಿಗೆ ಅಚ್ಚುಕಟ್ಟಾದ ಆಕಾರ ಕಲ್ಪಿಸುವುದು ಸಾಧ್ಯವಿಲ್ಲೆಂಬುದು ವಿಕ್ರಮನಿಗೆ ಗೊತ್ತು. ಸಾಹಿತ್ಯ, ರಾಜಕೀಯ, ಸಮಾಜಶಾಸ್ತ್ರ, ಮನಃಶಾಸ್ತ್ರೀಯ ಜ್ಞಾನವು ತನ್ನ ಅನುಭವಗಳನ್ನು ಸರಳ ಗ್ರಹಿಕೆಗೆ ಒಳಪಡಿಸಿದಂತೆ ಅವನನ್ನು ತಡೆದಿವೆ. ಇದು ಆತನಿಗೊದಗಿದ ಸ್ವಾತಂತ್ರ್ಯ. ತನ್ನ ಮಗ ಹಾಗೂ ಮಗಳ ವರ್ತನೆಯನ್ನು ಆತಂಕದಿಂದ ಪರಿಭಾವಿಸುತ್ತಿರುವಾಗಲೇ ಏಕಕಾಲಕ್ಕೆ ತನ್ನ ಬಾಲ್ಯ, ಮನೆತನ ಹಾಗೂ ಶಾಲೆಯ ಪ್ರಭಾವ, ಗೆಳೆತನ, ಪ್ರಣಯ, ಲೈಂಗಿಕತೆ, ಆದರ್ಶಪರತೆಗಳೆಡೆ ವಿಕ್ರಮನ ಮನ ಹಾರಬಲ್ಲದು.

ವಿಕ್ರಮ್ ತನ್ನ ಅಸ್ತಿತ್ವವನ್ನು ಶೋಧಿಸ ಹೊರಟವ. ತನ್ನ ಅಸ್ತಿತ್ವದ ಅನಿವಾರ್ಯ ಭಾಗವಾಗಿ ಹೆಂಡತಿ, ಮಗಳು, ಮಗ, ಮಾಸ್ತರ, ಅಶ್ವಿನಿ, ಗೆಳೆಯರು, ಅಜ್ಜಿ ಮುಂತಾದವರೊಂದಿಗೆ ತಾನು ಒಳಗೊಂಡ ಸಂದರ್ಭವನ್ನು ಪುನಃ ಸೃಷ್ಟಿಸಿಕೊಳ್ಳುತ್ತಾನೆ. ಆ ಮೂಲಕ ತನ್ನನ್ನೂ ಇತರರನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಗೆ ಆತ ಒಳಗಾಗುತ್ತಾನೆ. ಇವರೆಲ್ಲರ ಮೂಲಕವೇ ತನ್ನ ಅಸ್ತಿತ್ವಕ್ಕೇನಾದರೂ ಅರ್ಥವಿದೆಯೇ? ಎಂದು ಆತ ಹುಡುಕ ಹೊರಟವ. ಈ ಹುಡುಕಾಟ ಮುಗ್ಧ, ಸರಳವಲ್ಲ, ಅದರ

ಬಗೆಗೆ ಜಾಗೃತವಾದ ಜಿಜ್ಞಾಸೆಯನ್ನು ವಿಕ್ರಮನ ಪಾತ್ರದ ಮೂಲಕ ಕಾದಂಬರಿಕಾರರು ಕಟ್ಟಿಕೊಡುತ್ತಾರೆ. ತನ್ನನ್ನು ಹಾಗೂ ಅನ್ಯರನ್ನು ಮಂಜಿನಂಥ ಪ್ರಜ್ಞೆಯ ಮೂಲಕವೇ ಅರಿತುಕೊಳ್ಳಬೇಕಾದ ಮಿತಿಯ ಕಲ್ಪನೆ ವಿಕ್ರಮನಿಗಿದೆ. ಸಾಯುತ್ತೇವೆಂದು ಗೊತ್ತಿದ್ದರೂ ಬದುಕಲು ಯತ್ನಿಸುವ ಛಲದಂತೆ ಈ ಪ್ರಯತ್ನವನ್ನಾತ ಬಿಡಲಾರ. ತನ್ನ ಪ್ರಯತ್ನಗಳ ಅಸಂಗತತೆಯ ಅರಿವೇ ತನ್ನ ಬದುಕಿಗೆ ಅರ್ಥವನ್ನೀಯಬಲ್ಲದೆಂಬ ನಂಬಿಕೆ ಆತನ ಅಂತರಾಳದಲ್ಲಿದೆ. ತನ್ನ ಬದುಕನ್ನು ಕುರಿತು ತಾನೇ ಎತ್ತುವ ಪ್ರಶ್ನೆಗಳಿಗೆ ಅರ್ಥಪೂರ್ಣ ಉತ್ತರ ದೊರಕಲೇಬೇಕೆಂಬ ಹಠ ಆತನಲ್ಲಿಲ್ಲ. ಆತನ ಪ್ರಕಾರ, ಉತ್ತರ ದೊರಕಿತೆಂದು ತೃಪ್ತಿಯಾದರೆ ಅದು ಸಾವಿಗೆ ಸಮಾನವಾದ ಅಪಕ್ವತೆ. ಪಕ್ವತೆಯ ಫಲ ದೊರಕಿಸಲೆಂದು ತನ್ನ ಬದುಕಿನ ಪಯಣದ ಸ್ವಾರಸ್ಯವನ್ನೆಲ್ಲಾ ನಿರಾಕರಿಸುವಷ್ಟು ಮೂರ್ಖ ಆತನಲ್ಲ. ತನ್ನ ಅನುಭವಕ್ಕೆ ಬಂದ ವ್ಯಕ್ತಿ, ಸಂಗತಿಗಳ 'ಆಯ್ಕೆ'ಯ ಬಗೆಗೆ ನಿರ್ದಿಷ್ಟ ತಾತ್ವಿಕತೆಯನ್ನು ವಿಕ್ರಮ್ ತನ್ನ ಆತ್ಮ ಚರಿತ್ರಾತ್ಮಕ ನಿವೇದನೆಯಲ್ಲಿಟ್ಟುಕೊಂಡಿಲ್ಲ. ತನ್ನ ಅನುಭವ ಆಯ್ಕೆಗಳು ಪರಿಸರನಿಷ್ಠವಾಗಿದ್ದರೂ, ಅವಕ್ಕೆ ಮಹತ್ವವೀಯದೆ, ತನ್ನ ಸಂವೇದನೆಯ ಮೂಲಕವೇ ಒಳಗಿನ 'ನಾನು' ಹಾಗೂ ಹೊರಗಿನ 'ನಾನು' ನಡುವಿನ ಅಂತರವನ್ನು ನೀಗಿಕೊಳ್ಳಬಹುದೆಂಬ ಪ್ರಾಮಾಣಿಕ ಹವಣಿಕೆ ಕಾದಂಬರಿಯುದ್ದಕ್ಕೂ ಇದೆ.

ತನ್ನ ಜೀವನ ಪ್ರಕ್ರಿಯೆಯ ಮೂಲಾಧಾರಗಳಾದ ಪರಸ್ಪರ ಮಾನವ ಸಂಬಂಧಗಳನ್ನೆಲ್ಲಾ ಒಂದೊಂದಾಗಿ ವಿಕ್ರಮ ಪ್ರಕಟಗೊಳಿಸುತ್ತಾ ಹೋಗುತ್ತಾನೆ. ಗಾಂಧೀವಾದದ ಆದರ್ಶ ಮೂರ್ತಿಯಾದ ಪೂಜಾರ ಮಾಸ್ತರರಿಗೆ ಮನೆಯನ್ನು ಕಟ್ಟಿಕೊಡುವ ವಿಕ್ರಮನ ಯತ್ನ ಏಕಕಾಲಕ್ಕೆ ಕೃತಜ್ಞತೆ ಮತ್ತು ಕಾಳಹಣದ ಬಳಕೆ ಎರಡೂ ಆಗಿರುತ್ತದೆ. ಹೇಗೆ ಪೂಜಾರ ಮಾಸ್ತರರನ್ನು ತನ್ನ ನೈತಿಕತೆಯ ಒರೆಗಲ್ಲಾಗಿ ಕೂಡ ವಿಕ್ರಮ ಬಳಸಿಕೊಳ್ಳಬಲ್ಲ ಶುದ್ಧ ವ್ಯಾವಹಾರಿಕತೆಯ ಕಳ್ಳ ಹುದುಗಲಲ್ಲಿ ಕಳೆದು ಹೋಗದೆ ಅಪರಾಧೀ ಪ್ರಜ್ಞೆಯ ಬೆಂಕಿಯಲ್ಲಿ ತನ್ನನ್ನು ತಾನು ಸುಟ್ಟುಕೊಳ್ಳಲು ಅಗತ್ಯವಾದ ನೈತಿಕ ಕೇಂದ್ರವಾಗಿ ಪೂಜಾರ ಮಾಸ್ತರರೇ ನಿಲ್ಲುತ್ತಾರೆ.

ಪೂಜಾರ ಮಾಸ್ತರರನ್ನು ವಿಕ್ರಮ್ ಭಾರತದ ಸಂಕ್ರಮಣಾವಸ್ಥೆಯ ಸಂಕೇತವಾಗಿ ಅರ್ಥೈಸಬಲ್ಲ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾತ್ವಿಕ ಸಿಟ್ಟಿನ ಸೃಜನಶೀಲ ವ್ಯಕ್ತಿಯಾಗಿದ್ದ ಪೂಜಾರರು ಸ್ವಾತಂತ್ರ್ಯಾನಂತರ ಅಸಹಾಯಕ ಸಿಟ್ಟಿನ, ನಿರಾಶಾದಾಯಕ ಮೃತ್ಯುವಿನ ಸಂಕೇತವಾಗುತ್ತಾರೆ. ವಿಕ್ರಮನ ನೆನಪಿನ ಸುರುಳಿ ಬಿಚ್ಚತೊಡಗಿದಂತೆ ಮೂಡುವ ಘಟನೆ-ಸಂಭಾಷಣೆಗಳೆಲ್ಲವೂ ಕ್ಷಣದ ಪರಿಪೂರ್ಣತೆಯ ತೀವ್ರ ಅರಿವಿನ ಫಲಿತಗಳು, ವಿಕ್ರಮನ ಸಾಹಿತ್ಯಾಭಿರುಚಿ, ಅದರಿಂದ ಮೊಳೆತ ರೊಮ್ಯಾಂಟಿಕ್ ಲೈಂಗಿಕ ಪ್ರೇಮ, ಅಸೂಯೆ, ಆತಂಕ, ಆನಂದದ ಆವೇಗಗಳನ್ನು, ಆತನ ನಿವೇದನೆ ಕ್ಷಣದ ಸ್ಮಾರಕವೆಂಬಷ್ಟು ತೀವ್ರತೆಯಿಂದ ಸಾಧಿಸುತ್ತದೆ. ತನ್ನ ಪ್ರಣಯ ಸಾಹಸದಲ್ಲಿ ಹೆಚ್ಚಿನ ಜವಾಬ್ದಾರಿ ಹೊತ್ತವಳು ಯಶೋಧೆ ಎಂಬುದನ್ನು ವಿಕ್ರಮ ತಿಳಿದುಕೊಳ್ಳುವುದೂ ಆಕೆಯ ಇರುವಿಕೆಯನ್ನು ತತ್ವವಾಗಿಸಿಕೊಳ್ಳುವ ಯತ್ನವೇ.

"...ಅವಳ ಈ ಪ್ರಸ್ತುತದ ಬಗೆಗಿನ ಆಸಕ್ತಿಯ ಹಿಂದೆ ಒಂದು ಜೀವನ ತತ್ವವೇ ಅಡಗಿದೆಯೆಂಬುದು ಅವಳಿಗೆ ಗೊತ್ತಿಲ್ಲ... ಬಹುಶಃ ಸ್ತ್ರೀಗೆ ವರ್ತಮಾನ ಯಾವಾಗಲೂ ಬಹಳ ಮುಖ್ಯವಿರಬೇಕು. ಅವಳ ಮೈಯ ಲಯಗಳೂ ಕಾಲದ ಲಯಗಳಿಗೆ ಹೊಂದಿಕೊಂಡಿವೆ. ತಿಂಗಳಿಗೊಮ್ಮೆ ಅವಳ ದೇಹದಲ್ಲಿ ತೆರೆಯ ಏರಿಳಿತವಾಗುತ್ತದೆ. ಮುಖ್ಯವಾಗಿ ರಕ್ತದ ತೆರೆ, ಮನುಷ್ಯ ಜೀವನದ ಒಂದು ಮುಖ್ಯ ಘಟಕವಾದ ರಕ್ತ ಅವಳ ದೈನಂದಿನ ಜೀವನದ ಒಂದು ಮುಖ್ಯ ಘಟಕವಾದ ರಕ್ತ ಅವಳ ದೈನಂದಿನ ಜೀವನದ ಅಂಗವಾಗಿದ್ದು, ಅದರ ಸಹವಾಸವೇ ಅವಳನ್ನು ಈ ಭೂಮಿಗೆ ಈ ಅಸ್ತಿತ್ವಕ್ಕೆ ಕಟ್ಟಿಹಾಕಿದೆ. ವಾಸ್ತವಿಕತೆಯ ಪ್ರಜ್ಞೆ, ವರ್ತಮಾನದ ಪ್ರಜ್ಞೆ, ಪರಿಸರದ ಪ್ರಜ್ಞೆ, ಸ್ತ್ರೀಗೆ ಇದ್ದಷ್ಟು ಪುರುಷನಿಗಿರುವುದಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ, ಅವಳ ಈ ಪ್ರಜ್ಞೆಯಲ್ಲಿಯೇ ನಿಜವಾದ ಕ್ರಾಂತಿ ಶಕ್ತಿಯಿದೆ..."

ಗೆಳೆಯ ವಸಂತನ ಗೆಳತಿಯಾದ ಅಶ್ವಿನಿಯೊಂದಿಗೆ ವಿಕ್ರಮ ಬೆಳೆಸಿದ ಸಂಬಂಧವು ಆತನಲ್ಲಿ 'ಸುಖೀ - ಪಾಪಪ್ರಜ್ಞೆಯನ್ನುಂಟು ಮಾಡುತ್ತದೆ. ಸರಂಜಾಮೀ ಮನೋಧರ್ಮದ ವಾರಸುದಾರನಾದ ತನಗೆ ಇಂಥ ಪಾಪಪ್ರಜ್ಞೆ ಬದುಕಿಗೆ ತೀಕ್ಷ್ಣತೆಯನ್ನು ಕೊಡಬಲ್ಲದೆಂಬ ಅನಿಸಿಕೆ ವಿಕ್ರಮನದು. ತನ್ನ ಹಾಗೂ ಯಶೋಧೆಯ ಪ್ರೀತಿ ತಾರುಣ್ಯ ಸಹಜವಾದ, ಹೂಬಳ್ಳಿಯಂತೆಯೂ, ಅಶ್ವಿನಿಯೊಂದಿಗಿನ ಪ್ರೀತಿ ಗಿಡವೆರಡು ಪರಸ್ಪರ ಬೇರು ಕೂಡಿ ಒಂದು ಇನ್ನೊಂದರ ಜೀವಸತ್ವ ಹೀರುವಂತಹವೆಂದೂ ವಿಕ್ರಮ ತಿಳಿಯುತ್ತಾನೆ "ಒಂದು ಸಂಬಂಧ ಬಂಧನವಾಯಿತೋ ಪ್ರೀತಿ ತನ್ನ ಎಷ್ಟೋ ಆಯಾಮಗಳನ್ನು ಕಳಕೊಂಡು ಬಿಡುತ್ತದೆ" ಎಂಬ ಅನುಭವ ಅಶ್ವಿನಿಯ ಮೂಲಕ ತನ್ನರಿವಿಗೆ ಬಂದುದಾಗಿ ವಿಕ್ರಮ್ ತಿಳಿಯುತ್ತಾನೆ. ಆದರೆ ತತ್ವಗಳನ್ನು ಮೀರಿ ಬದುಕು ತನ್ನದೇ ಆದ ರೀತಿಯಲ್ಲಿ ಮೈದಾಳುತ್ತದೆ. ಕುಟುಂಬ ಕೇಂದ್ರದ ಪರಿಧಿಯೊಳಗೇ ಆಕಾರಗೊಳ್ಳುವ ವ್ಯಕ್ತಿಸಂಬಂಧಗಳೇ ಅನಿರೀಕ್ಷಿತವಾದ ರೀತಿಯಲ್ಲಿ ವಿಕ್ರಮನಿಗೆ ಸವಾಲಾಗುತ್ತ ಮುಖಾಮುಖಿಯಾಗುತ್ತವೆ. ಇವೂ ಆತನ ಅನ್ವೇಷಣೆಯಲ್ಲಿ ಅನಿವಾರ್ಯ ಭಾಗವಾಗಿ ಬಿಡುತ್ತದೆ.

ವಿಕ್ರಮನ ದೊಡ್ಡಪ್ಪನ ಸರಂಜಾಮೀ ವ್ಯಕ್ತಿತ್ವ, ಕೆಲಸದಾಕೆ ಸೀತೆ ಹಾಗೂ ಆಕೆಯ ಮಗ ಪ್ರತಾಪ, ಪೂಜಾರ ಮಾಸ್ತರರ ಮಗ ಮೋಹನ, ಗೆಳೆಯ ಗೋವಿಂದ, ವಸಂತ, ನಂದೂ, ಜಾನ್, ಜಾರ್ಜ್ ಅಪ್ಪ, ಅಮ್ಮ, ಅಜ್ಜಿ, ಯಶೋಧೆ, ಮಗ ಮಾಧವ, ಮಗಳು ವಸುಂಧರೆ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ವಿಕ್ರಮನ ಪ್ರಜ್ಞೆಯ ಭಾಗಗಳೇ. ಅವನ ಅಸ್ತಿತ್ವದ ಅನ್ವೇಷಣೆಗೆ ಚಾಲನೆ ಒದಗಿಸುವವರೇ. ಹೀಗೆ ಬಂಧ ಹಾಗೂ ಬಂಧವನ್ನು ಮೀರಿ ಹೋಗುವ ಯತ್ನದಲ್ಲೇ ವಿಕ್ರಮನ ಸಂವೇದನೆ ರೂಪುಗೊಂಡಿದೆ. ವಿಕ್ರಮನ ಸೈಕಿಯಾಟ್ರಿಸ್ಟ್ ಹೇಳುವಂತೆ, ಅವನದು ಅಪಕ್ವ ಚೇತನವಾದರೂ ತನ್ನ ಬಗ್ಗೆ ತಾನೇ ಕಂಡುಕೊಳ್ಳುವ ಒಳನೋಟ ಆತನ ಅಂತರಾಳದ ದರ್ಶನವನ್ನು ಮಾಡಿಸಬಲ್ಲದು.

‘‘ನನ್ನ ಮೇಲೆ ಹಲವಾರು ವಿಚಾರ ಸರಣಿಗಳು ತಮ್ಮ ಪ್ರಭಾವ ಬೀರಿದ್ದರೂ ನಾನು ಮುಖ್ಯವಾಗಿ ಜೀವಿಸುವುದು ಬುದ್ಧಿಯ ಪಾತಳಿಯ ಮೇಲಲ್ಲ ಸಂವೇದನೆಯ ಪಾತಳಿಯ ಮೇಲೆ. ಈ ಸಂವೇದನೆಯಲ್ಲಿ ವೈಚಾರಿಕ ಗೊಂದಲಗಳಿವೆ. ನೈತಿಕ ಗೊಂದಲಗಳಿವೆ. ಮಾನಸಿಕ ಗೊಂದಲಗಳಿವೆ... ಈ ಸಂವೇದನೆಯ ಹೊರಗೆ ನಾನಿಲ್ಲವೆಂಬ ತೀವ್ರ ಅರಿವು ಇದ್ದುದರಿಂದಲೇ ಅದನ್ನು ಆದಷ್ಟು ಜ್ವಲಂತವಾಗಿಡಬೇಕು, ಚೈತನ್ಯಶೀಲವಾಗಿಡಬೇಕು. ಸಾಧ್ಯವಿದ್ದಷ್ಟು ಸೃಜನಶೀಲವಾಗಿಡಬೇಕು ಎಂಬುದೇ ಹವ್ಯಾಸ.’’[೩೦]

ವಿಕ್ರಮನ ಸಂವೇದನೆಯ ಸ್ವರೂಪವನ್ನು ಕುರಿತಂತೆ ಜಿ.ಎಸ್ .ಆಮೂರರು ಕೆಲವು ಒಳನೋಟಗಳನ್ನು ನೀಡುತ್ತಾರೆ. ಸಾಲ್‌ಬೆಲ್ಲೋನ ಹರ್ಜೋಗನಿಗೂ ವಿಕ್ರಮನಿಗೂ ಇರುವ ಸಾಮ್ಯವನ್ನು ಗುರುತಿಸುತ್ತಾ ಹರ್ಜೋಗನಂತೆ ವಿಕ್ರಮನ ಸಮಸ್ಯೆಗಳ ಮೂಲ ಅವನ ‘ರೊಮ್ಯಾಂಟಿಸಿಜಂ’ ವಿಕ್ರಮನ ಭಾವನಾತ್ಮಕತೆ, ಆದರ್ಶವಾದ, ಉತ್ಸಾಹ, ಆವೇಶ ಮತ್ತು ಅಪಕ್ವತೆಗಳೇ ಆತನ ಆಕರ್ಷಣೆ ಎಂಬುದನ್ನು ಅಶ್ವಿನಿ ಸರಿಯಾಗಿ ಗುರುತಿಸುತ್ತಾಳೆ. ಜಿ.ಎಸ್.ಆಮೂರರ ಪ್ರಕಾರ ‘‘ಹರ್ಜೋಗನಂತೆ ವಿಕ್ರಮ ಕೂಡ ಒಬ್ಬ ತಿದ್ದಲಾಗದ ರೊಮ್ಯಾಂಟಿಕ್. ಇದೇ ಅವನ ಅಸ್ಮಿತೆ ಹಾಗೂ ದುರಂತ. ಇದನ್ನು ಅವನು ಅರ್ಥ ಮಾಡಿಕೊಳ್ಳದಿರುವುದಕ್ಕೆ ಕಾರಣ ಅವನ ಸೈಕಿಯಾಟ್ರಿಸ್ಟ್ ಹೇಳುವಂತೆ ಅವನ ಅಪಕ್ವತೆ.’’[೩೧]

ವಿಕ್ರಮನ ಈ ಅಪಕ್ವತೆ ಕೇವಲ ವೈಯಕ್ತಿಕ ನೆಲೆಯದಲ್ಲವೆಂಬುದನ್ನು ಕೃತಿ ಸಾಧಿಸಿ ತೋರಿಸುತ್ತದೆ. ವಿಕ್ರಮನ ಅಂತರಾಳವನ್ನು ರೂಪಿಸಲು ಕಾರಣರಾದ ಪೂಜಾರ ಮಾಸ್ತರ, ಗೋವಿಂದ ಯಶೋಧೆ, ಅಶ್ವಿನಿ, ವಸುಂಧರೆ, ಸೀತೆ ಮೊದಲಾದ ಪಾತ್ರಗಳು ಗಟ್ಟಿಯಾದ ಸಾಮಾಜಿಕ ವಾಸ್ತವಿಕತೆಯನ್ನು ಸೃಷ್ಟಿಸುತ್ತವೆ. ಅಂತರಾಳವು ಏಕಕಾಲದಲ್ಲಿ ಸಾಮಾಜಿಕ ವಾಸ್ತವಿಕತೆಯೊಂದಿಗೆ ಕ್ರಿಯೆ-ಪ್ರತಿಕ್ರಿಯೆಯನ್ನು ಏರ್ಪಡಿಸಿಕೊಳ್ಳುತ್ತ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತದೆ. ಪೂಜಾರ ಮಾಸ್ತರರ ಗಾಂಧೀವಾದ, ಗೋವಿಂದನ ನಕ್ಸಲೈಟ್ ವೈಚಾರಿಕತೆ, ಯಶೋಧೆಯ ಸ್ತ್ರೀ ಸಂವೇದನೆ, ಅಶ್ವಿನಿಯ ಮುಕ್ತ ಜೀವನ ತತ್ವಗಳು ಕೂಡ ನಮ್ಮೊಳಗಿನ ಆಂತರಿಕ ದ್ವಂದ್ವಗಳಿಂದಾಗಿ ಸಾಮಾಜಿಕ ವಾಸ್ತವಿಕತೆಯ ಅಪಕ್ವತೆಗೆ ಕಾಣಿಕೆ ಸಲ್ಲಿಸಿವೆ. ಹಾಗಾಗಿ ಸಾಮಾಜಿಕ ಚಿಂತನೆಯ ನೇರ ಹಾಗೂ ಸರಳ ಅಭಿವ್ಯಕ್ತಿಯಾಗಬಹುದಾದ ಅಪಾಯದಿಂದ ಈ ಕೃತಿ ಪಾರಾಗಿದೆ. ಎ.ರಘುರಾಂ ಅವರ ಅಭಿಪ್ರಾಯದಂತೆ... ವ್ಯಕ್ತಿಗಳಲ್ಲಿ ನಡೆಯುವ ಸಂಘರ್ಷ, ಅಲ್ಲಿನ ಸೂಕ್ಷ್ಮ ದೃಷ್ಟಿಕೋನ ವಿಜ್ಞಾನಿಯ ಚಿಕಿತ್ಸಕ ದೃಷ್ಟಿಯಲ್ಲಿ ಅಧ್ಯಯನಕ್ಕೆ ಎಡೆಮಾಡಿದೆ. ಅಂತರಾಳ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಮೌಲ್ಯದ ಪ್ರಸ್ತುತತೆಯನ್ನು ಅಧ್ಯಯನಕ್ಕೊಡ್ಡಿದ ಕೃತಿಯಾಗಿದೆ.’’[೩೨]

ತನ್ನ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಲು ಯತ್ನಿಸುವ ಪ್ರಾಮಾಣಿಕ ಯತ್ನ ವಿಕ್ರಮನದು. ರೊಮ್ಯಾಂಟಿಕ್‌ರ ಕನಸುಗಾರಿಕೆಗಾಗಲೀ ಕಲ್ಪನೆಯ ವಿಶ್ವದೊಂದಿಗೆ ವ್ಯಾವಹಾರಿಕತೆಯನ್ನು ದೂರವಿಡುವ ಭಾವವಾಗಲೀ ಆತನಲ್ಲಿಲ್ಲ. ತನ್ನ ಪಾಪಪ್ರಜ್ಞೆಯಲ್ಲಿಯೇ ಆ್ಯಡಮ್‌ನಂತೆ ಸುಖವನ್ನರಸುವ ಅಸ್ತಿತ್ವವಾದಿಯ

ಆತಂಕ, ಉದ್ವಿಗ್ನತೆಗಳುಳ್ಳ ವ್ಯಕ್ತಿ ಈತ. ತನ್ನ ಜೀವನಕ್ಕೆ ತೀವ್ರತೆಯನ್ನೊದಗಿಸಿದ ಪಾಪಪ್ರಜ್ಞೆಯನ್ನು ಸರಳ ನೈತಿಕ ಆದರ್ಶಗಳಿಗೆದುರಾಗಿ ಕಳೆದುಕೊಳ್ಳಲು ಈತ ಸಿದ್ಧನಿಲ್ಲ. ಅಂತರಾಳವೆಷ್ಟೇ ನಿಗೂಢವಾದರೂ ಈ ಮೂಲಭೂತ ಪ್ರಾಮಾಣಿಕತೆ ಆತನದು.

ಓಂಣಮೋ

ಯಾವುದೇ ಒಂದು ಧರ್ಮವನ್ನು ತೆಗೆದುಕೊಂಡರೂ ಅದು ಒಂದು ವ್ಯವಸ್ಥೆಯಾಗಿ ನಿಂತಿರುತ್ತದೆ. ಆ ಧರ್ಮದ ತಿರುಳು ಅಥವಾ ಸಾರ ಏನು ಅಂತ ಆ ಧರ್ಮದಲ್ಲಿದ್ದವರಿಗೆ ಗೊತ್ತಿರುವುದಕ್ಕಿಂತ ಅದರ ಆಚರಣೆಗಳನ್ನು, ನಂಬಿಕೆಗಳನ್ನು ಪಾಲಿಸುತ್ತಾ ಬಂದಿರುತ್ತಾರೆ. ಆದರೆ ಅದರಲ್ಲಿ ಮುಕ್ತತೆ ಅನ್ನುವುದು ಇರುವುದಿಲ್ಲ. ವ್ಯಕ್ತಿಗೆ ಸ್ವಾತಂತ್ರ್ಯ ಅನ್ನುವುದು ಇರುವುದಿಲ್ಲ. ಧರ್ಮ ವ್ಯಕ್ತಿಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತದೆ. ಹಾಗಾಗಿ ಸ್ವತಃ ಶಾಂತಿನಾಥ ದೇಸಾಯಿಯವರಿಗೆ ಒದಗುವ ಸಂದಿಗ್ಧತೆಯೇನೆಂದರೆ, ಸ್ವಾನುಭವ ಹಾಗೂ ವಸ್ತುನಿಷ್ಠತೆಯ ನಡುವಣ ಸಂಬಂಧ, ಜೈನಿಸಂ ಬಗ್ಗೆ ಬರೆಯಬೇಕಾದರೆ ಅದರೊಳಗಿರಬೇಕು; ಆದರೆ, ಒಳಗಿರುವ ಮನುಷ್ಯನಿಗೆ ಸಾಕಷ್ಟು ವಸ್ತುನಿಷ್ಠತೆ ಇರುತ್ತದೆಯೇ? ಸ್ವಯಂ ಜೈನರಾದ ಶಾಂತಿನಾಥರು ಇದನ್ನು ಪರಿಹರಿಸಿಕೊಳ್ಳುವುದುಕ್ಕೆ ಅರ್ಧ ಜೈನ, ಅರ್ಧ ಕ್ರಿಶ್ಚಿಯನ್ ಮತದ ಆ್ಯಡಂ ಮತ್ತು ಜನ್ಮತಃ ಕ್ರಿಶ್ಚಿಯನ್ನಳಾಗಿದ್ದು ಭಾರತಕ್ಕೆ ಬಂದ ಮೇಲೆ ಜೈನಧರ್ಮಕ್ಕೆ ಮತಾಂತರಗೊಳ್ಳುವ ಆ್ಯನ್ ಈಗಲ್ಬನ್ ಎಂಬ ಬ್ರಿಟಿಷ್ ಯುವತಿ ಇವರ ಪ್ರಜ್ಞೆಗಳನ್ನು ಕಥಾ ನಿರೂಪಣೆಗೆ ಬಳಸಿಕೊಳ್ಳುತ್ತಾರೆ.

ತನ್ನ ಗೆಳೆಯ ಆ್ಯಡಂ ಜೊತೆಗೆ ಭಾರತಕ್ಕೆ ಬಂದ ಆ್ಯನ್‌ಳು ಜೈನಧರ್ಮದ ತಾತ್ವಿಕ ತಿಳುವಳಿಕೆಗಿಂತ ಅದರ ಸಾಮಾಜಿಕ, ಆಚರಣಾತ್ಮಕ ಪ್ರಕ್ರಿಯೆಯನ್ನು ಅಧ್ಯಯನ ಮಾಡುವ ಉದ್ದೇಶವುಳ್ಳವಳು. ಭಾರತೀಯ ಜೈನ ತಂದೆಯ ಮಗನಾದ ಆ್ಯಡಂನ ತಾತ, ಚಿಕ್ಕ ತಾತ, ಸೋದರರು, ಅಜ್ಜಿ, ಚಿಕ್ಕಮ್ಮಂದಿರು ಎಲ್ಲರನ್ನೊಳಗೊಂಡ ಕೌಟುಂಬಿಕ ಪರಿಸರದ ಹಿನ್ನೆಲೆ ಆ್ಯನ್‌ಳ ಅಧ್ಯಯನಕ್ಕೆ ಅನಾಯಾಸವಾಗಿ ಒದಗುತ್ತದೆ. ಭೂಮಾಲೀಕ-ಬಂಡವಾಳಶಾಹಿ ವರ್ಗದ ಹಿನ್ನೆಲೆಯೊಂದಿಗೆ ಶ್ರವಣಬೆಳಗೊಳದ ಮಠೀಯ ಸಾಂಸ್ಥಿಕ ಕೇಂದ್ರದ ಪ್ರಭಾವವೂ ಆ್ಯಡಂನ ಪರಿವಾರಕ್ಕಿದೆ.

ಆ್ಯಡಂ-ಆ್ಯನ್‌ಗೆ ಸಂಬಂಧಿಸಿದ ಕಥೆಯಲ್ಲಿ ಗಂಡು-ಹೆಣ್ಣು ಸಂಬಂಧಗಳ ಅನ್ವೇಷಣೆ ಮುಖ್ಯವಾದರೆ ದೇಸಾಯಿ ಮನೆತನಕ್ಕೆ ಸಂಬಂಧಿಸಿದ ಕಥೆಯಲ್ಲಿ ಆಧುನೀಕರಣದ ಕ್ರಿಯೆಯ ಶೋಧ ಮುಖ್ಯವಾಗುತ್ತದೆ. ಎರಡು ಸಂಸ್ಕೃತಿಗಳ ಮುಖಾಮುಖಿಯ ಸಂದರ್ಭದಲ್ಲಿ ಈ ಶೋಧಗಳು ನಡೆಯುವುದರಿಂದ ಅವುಗಳಿಗೆ ವ್ಯಾಪಕವಾದ ಸಾಂಸ್ಕೃತಿಕ ಆಯಾಮವೂ ಒದಗಿಬರುತ್ತದೆ. ಆ್ಯಡಂ ಹಾಗೂ ಆ್ಯನ್ ಮೂಲತಃ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಬೆಳೆದವರು. ಆ್ಯಡಂನ ತಂದೆ ಭಾರತೀಯ ಮೂಲದವನಾದರೂ ಅವನು ಹುಟ್ಟಿ ಬೆಳೆದದ್ದು ಇಂಗ್ಲೆಂಡಿನಲ್ಲಾದುದರಿಂದ ಸಾಂಸ್ಕೃತಿಕವಾಗಿ ಇಬ್ಬರಲ್ಲಿ ವಿಶೇಷ ಅಂತರವಿಲ್ಲ. ದೇಸಾಯಿ

[illegible]

ಮನೆತನ ಪ್ರತಿನಿಧಿಸುವ ಸಂಸ್ಕೃತಿಯಲ್ಲಿ ಸಮಷ್ಟಿ ಜೀವನಕ್ಕೆ ಆದ್ಯತೆಯಿದೆ. ಆ್ಯಡಂ ಆ್ಯನ್ ಈ ಮನೆತನದೊಡನೆ ಸಂಬಂಧ ಬೆಳೆಸುವ ಮೊದಲೇ ಅದು ಆಧುನಿಕತೆಯ ಪ್ರಕ್ರಿಯೆಗೆ ಒಳಗಾಗಿರುತ್ತದೆ. ಆದರೆ ಈ ಹೊಸ ಸಂಬಂಧದಿಂದಾಗಿ ಹೆಚ್ಚಾಗಿ ಈ ಮನೆತನದವನೇ ಆದ ಆಡ್ಯಂ ಮೂಲಕ ಈ ಪ್ರಕ್ರಿಯೆಗೆ ತೀವ್ರತೆ ಬರುತ್ತದೆ. ದೇಸಾಯಿ ಮನೆತನದ ಆಗು ಹೋಗುಗಳಲ್ಲಿ ತೊಡಗುವುದರ ಪರಿಣಾಮವಾಗಿ ಆ್ಯಡಂನ ಸ್ವಭಾವದಲ್ಲಿಯೂ ಮಹತ್ವದ ಬದಲಾವಣೆಗಳಾಗುತ್ತವೆ. ಆ್ಯನ್‌ಳೊಡನೆ ಅವನ ಸಂಬಂಧ ತಿಳಿಯಾಗುವುದಕ್ಕೂ ಈ ಬದಲಾವಣೆಯೂ ಒಂದು ಕಾರಣವಾಗುತ್ತದೆ. ದೇಸಾಯಿ ಮನೆತನದೊಡನೆ ಆ್ಯನ್ ಬೆಳೆಸುವ ಸಂಬಂಧದಲ್ಲಿ ಆ್ಯಡಂ ಸಂಬಂಧದ ಆಳವಾಗಲಿ, ಅನಿವಾರ್ಯತೆಯಾಗಲಿ ಇಲ್ಲ. ಆದರೆ ಅವಳು ತನ್ನ ಸಂಶೋಧನೆಯ ಮೂಲಕ ಜೈನತತ್ವಗಳಲ್ಲಿ, ಆಚಾರಗಳಲ್ಲಿ ಸಮಾಜದಲ್ಲಿ ಗಾಢವಾಗಿ ತೊಡಗಿಸಿಕೊಳ್ಳುತ್ತಾಳೆ. ಈ ತೊಡಗಿಸಿಕೊಳ್ಳುವಿಕೆ ಜೈನ ದೀಕ್ಷೆ ಪಡೆಯುವುದರ ಹಂತವನ್ನು ತಲುಪುತ್ತದೆ. "ಆ್ಯನ ಪಾತ್ರದ ಮೂಲಕ ದೇಸಾಯಿಯವರು ಜೈನಧರ್ಮ ಹಾಗೂ ಸಮಾಜಗಳತ್ತ ನೋಡುವ ಹೊಸ ಬೌದ್ಧಿಕ ನೆಲೆಯೊಂದನ್ನು ಕಾದಂಬರಿಯಲ್ಲಿ ಸೃಷ್ಟಿಸುತ್ತಾರೆ."[೩೩] ಕಾದಂಬರಿಯಲ್ಲಿ ಜೈನಧರ್ಮ ಹಾಗೂ ಸಮಾಜಗಳನ್ನು ಒಳಗಿನಿಂದ ವಿಮರ್ಶಿಸುವ ನೆಲೆಗಳೂ ಇವೆ. ಇವುಗಳಲ್ಲಿ ಪ್ರೊ. ನಿರ್ಮಲಕುಮಾರ ಹಾಗೂ ಅವರ ಮಗಳು ರೋಜಾ ಮುಖ್ಯರು. ದೇಸಾಯಿ ಮನೆತನದಲ್ಲಿಯೇ ತೀರ ಆಧುನಿಕನಾದ ಭರತಕುಮಾರನೂ ಕೆಲಮಟ್ಟಿಗೆ ಧರ್ಮದ ಒಳ-ಹೊರಗಿನವನಾಗಿ ಕಾಣಿಸಿಕೊಳ್ಳುತ್ತಾನೆ.

ಕಾದಂಬರಿ ಆಧುನಿಕ ಪ್ರಕ್ರಿಯೆಗೂ ಸಾಕಷ್ಟು ಲಕ್ಷ್ಯ ಕೊಟ್ಟಿದೆ. ಈ ಕ್ರಿಯೆಯ ಪ್ರಮುಖ ಕೇಂದ್ರ ದೇಸಾಯಿ ಮನೆತನ. ಆದಪ್ಪ ದೇಸಾಯಿಯವರ ಕಾಲದಲ್ಲಿ ಏಕತ್ರವಾಗಿದ್ದ ಅವರ ಮನೆತನ ಒಡೆದು ಮೂರು ಭಾಗಗಳಾಗಿವೆ. ಆದಪ್ಪನ ಮಕ್ಕಳಲ್ಲಿ ತೀರಾ ಚಿಕ್ಕವನಾದ ಶ್ರೇಣಿಕ ಆಸ್ತಿಯ ಪಾಲು ತೆಗೆದುಕೊಂಡು ಊರುಬಿಟ್ಟುದುದರಿಂದ ಅವನ ಪ್ರಸ್ತಾಪ ಕಾದಂಬರಿಯಲ್ಲಿ ಹೆಚ್ಚಾಗಿ ಬರುವುದಿಲ್ಲ. ಎಲ್ಲರಿಗಿಂತಲು ಹಿರಿಯನಾದ ದೇವೇಂದ್ರಪ್ಪ ಬಿ.ಎ. ಪದವೀಧರನಾದರೂ ಸಂಪ್ರದಾಯನಿಷ್ಠ ಲಕ್ಷ್ಮಂಬಾಯಿ ಅವನನ್ನು ಅನುಸರಿಸುವ ಹೆಂಡತಿ. ಜೈನ ತತ್ವಗಳಲ್ಲಿ, ಆಚಾರಗಳಲ್ಲಿ, ಧರ್ಮಗುರುಗಳಲ್ಲಿ ಇವರದು ಅಚಲವಾದ ಶ್ರದ್ಧೆ, ಹೆಂಡತಿ ತೀರಿ ಹೋದ ನಂತರ ದೇವೇಂದ್ರಪ್ಪ ದಿಗಂಬರ ಮುನಿಗಳನ್ನು ಆಶ್ರಯಿಸಿ ಶ್ರಾವಕನ ಜೀವನ ನಡೆಸುತ್ತಾನೆ. ಈ ದಂಪತಿಗಳ ಒಬ್ಬನೇ ಮಗ ನೇಮಿನಾಥನಿಂದಾಗಿ ಆಧುನಿಕತೆ ಇವರ ಕುಟುಂಬದಲ್ಲಿ ತಲೆ ದೋರುತ್ತದೆ. ಆದಪ್ಪನ ಎರಡನೆಯ ಮಗನಾದ ಅಪ್ಪಾ ಸಾಹೇಬನ ಕುಟುಂಬದಲ್ಲಿ ನಡೆಯುವ ಪರಿವರ್ತನೆ ಇಷ್ಟು ನಾಟಕೀಯವಲ್ಲವಾದರೂ ಪ್ರಾತಿನಿಧಿಕವಾದುದು. "...ಈ ತಮ್ಮ ಬಹಳ ಸ್ವಾರ್ಥಿ - ಪರಿಗ್ರಹದ ಹಸಿವೆ ಹಿಂಗದ ವ್ಯಕ್ತಿ. ಅವನು ಗಳಿಸಿದ್ದೆಲ್ಲ 'ಸ್ತೇಯ'ವಾದದ್ದು - ತುಡುಗು ಮಾಡಿ, ದರೋಡೆ ಹಾಕಿ, ಲಂಚಕೊಟ್ಟು, ಕಸಿದುಕೊಂಡದ್ದು; ಯಾವ ಮಹಾವ್ರತವಾಗಲಿ, ಅಣುವ್ರತವಾಗಲಿ ಗೊತ್ತಿಲ್ಲದ ಅಜೈನ; ಬರೇ ಬಾಹ್ಯ ಕೆಲವು ಆಚಾರಗಳಿಂದ ಒಬ್ಬ ಮನುಷ್ಯ ಜೈನ ಆಗೋದಿಲ್ಲ. 'ಜಿನ

ಶಿರೋಮಣಿ', 'ಧರ್ಮಶಿರೋಮಣಿ' ಎಂದೆನ್ನಕೊಳ್ಳಲಿಕ್ಕೆ ಆತನಿಗೆ ನಾಚಿಕೆ ಅನಿಸಬೇಕು''[೩೪] ಎಂದು ದೇವೇಂದ್ರಪ್ಪ ಅಪ್ಪಾ ಸಾಹೇಬನ ಬಗ್ಗೆ ಹೇಳುವುದರಲ್ಲಿ ಸತ್ಯವಿದೆ. ಅವನಲ್ಲಿ ಜೈನಧರ್ಮದ ಬಗ್ಗೆ ಸಾಂಪ್ರದಾಯಿಕವಾದ ಆದರ, ಶ್ರದ್ಧೆಗಳಿವೆ. ಆದರೆ ಇವುಗಳ ಸ್ವರೂಪ ಸಾಮಾಜಿಕವಾದದ್ದು. ಹಣ ಗಳಿಸಲು ಫಾರೆಸ್ಟ್ ಕಂಟ್ರಾಕ್ಟರನ ದಂಧೆ ಮಾಡುವಂತೆ ಸಮಾಜದಲ್ಲಿ ಸ್ಥಾನಗಳಿಸಲು ಅವನು ಬಸದಿಯ ನಿರ್ಮಾಣ ಮೊದಲಾದ ಧಾರ್ಮಿಕ ಕಾರ್ಯಗಳತ್ತ ಮನಸ್ಸು ಹಾಕುತ್ತಾನೆ. 'ರಾವ್‌ಸಾಹೇಬ', 'ಧರ್ಮ ಶಿರೋಮಣಿ'ಗಳಂಥ ಬಿರುದುಗಳು ಈ ಕ್ಷೇತ್ರದಲ್ಲಿ ಅವನು ದೊರಕಿಸುವ ಯಶಸ್ಸಿನ ಮಾಪಕಗಳಾಗಿವೆ. ಪರಿಸ್ಥಿತಿಗೆ ಹೊಂದಿಕೊಳ್ಳಬಲ್ಲ ಚಾಣಾಕ್ಷತೆಯೂ ಅವನಲ್ಲಿದೆ. ಗಾಂಧೀ ಚಳುವಳಿ ದೇಶದಲ್ಲಿ ಹಬ್ಬಿದಾಗ ಅದರಲ್ಲಿ ಭಾಗವಹಿಸಿ ಜೈಲಿಗೆ ಹೋಗುತ್ತಾನೆ. ಮುಂದೆ ಇದರ ರಾಜಕೀಯ ಲಾಭ ಪಡೆದು ಅಧಿಕಾರಗಳಿಸುತ್ತಾನೆ.

ಆಧುನಿಕತೆಯ ಪ್ರಕ್ರಿಯೆ ಅಪ್ಪಾ ಸಾಹೇಬನ ಮಗ ಭರತಕುಮಾರನಲ್ಲಿ ಇದಕ್ಕಿಂತಲೂ ಹೆಚ್ಚು ತೀವ್ರವಾಗಿ ಕಾಣಿಸಿಕೊಳ್ಳುತ್ತದೆ. ಅಪ್ಪಾ ಸಾಹೇಬನ ವಿರುದ್ಧ ಅವನು ಬಹಿರಂಗವಾಗಿ ಬಂಡೇಳಲಾರ. ಆದರೆ ಅವನಿಗೆ ಜೈನ ಧರ್ಮದಲ್ಲಿಯಾಗಲಿ ತಂದೆಯ ವ್ಯಾವಹಾರಿಕ ಜಾಗರೂಕತೆಯಲ್ಲಾಗಲಿ ವಿಶ್ವಾಸವಿಲ್ಲ. ಅವನ ಮಟ್ಟಿಗೆ ಜೈನ ಧರ್ಮ ಎಂದೋ ಸತ್ತು ಹೋಗಿದೆ. ''ಜೈನ ಧರ್ಮದ ಪ್ರಕಾರ ಜೀವನ ಮಾಡಬೇಕೆಂದರೆ ಮುಗೀತು. ಎಲ್ಲರೂ ಉಪವಾಸ ಸಾಯಬೇಕು. ಅದರ ತತ್ವದ ಪ್ರಕಾರ ಜೀವಂತ ಇರೋದೆ ಶಕ್ಯವಿಲ್ಲ ಅಂತ ಹೇಳೊ ನಾ ಅದರ ಬಗ್ಗೆ ಕಾಳಜಿ ಮಾಡೋದಿಲ್ಲ. ಆಧುನಿಕ ಜಗತ್ತಿನಲ್ಲಿ ಆ ತತ್ವಗಳೆಲ್ಲಾ ಹಾಸ್ಯಾಸ್ಪದವಾಗಿದೆ. ನೂರಕ್ಕೆ ತೊಂಬತ್ತೊಂಬತ್ತು ಜೈನರು ಆ ತತ್ವಗಳ ಪ್ರಕಾರ ಜೀವನ ಮಾಡೋದಿಲ್ಲ.''[೩೫] ಇದು ಅವನ ಸ್ಪಷ್ಟ ಹೇಳಿಕೆಗಳಲ್ಲೊಂದು ಆ್ಯನಳ ಧರ್ಮಾಂತರ ಅವನಿಗೆ ಹುಚ್ಚುತನದ್ದೆನಿಸುತ್ತದೆ. ''ನನ್ನ ಮಟ್ಟಿಗಂತೂ ಜೈನಧರ್ಮ ತೀರ ನೆಗೆಟಿವ್ ಧರ್ಮ. ಅದರಲ್ಲಿ ಪಾಸಿಟಿವ್ ಅನ್ನೋದು ಏನೂ ಇಲ್ಲ. ಅದು ಮೃತ್ಯುವಿನ ಕಡೆ ಒಯ್ಯೋ ಧರ್ಮ.'' ''ಎಲ್ಲರೂ ಹಿಪಾಕ್ರಟ್ಸ್'' ಎಂದು ಹೇಳುತ್ತಲೇ ಭರತ ತನ್ನ ಲೈಂಗಿಕ ಸ್ವಚ್ಛಂದತೆಯನ್ನು ಜೈನ ಧರ್ಮಕ್ಕೆ ನಿಷಿದ್ಧವಾದ ಆಚಾರಗಳನ್ನು ಮನೆಯವರಿಂದ ಮುಚ್ಚಿಡುತ್ತಾನೆ. ತೋರಿಕೆಗೆ ಜೈನನೆಂದೇ ನಡೆದುಕೊಳ್ಳುತ್ತಾನೆ. ತನ್ನನ್ನು ಆಧುನಿಕ ಬಿಜಿನೆಸ್‌ಮನ್ ಎಂದು ಕರೆದುಕೊಳ್ಳುವ ಅವನಿಗೆ ಅಪ್ಪಾ ಸಾಹೇಬನ ವ್ಯವಹಾರ ತಂತ್ರಗಳು ನಿಷ್ಫಲವಾಗಿ ಕಾಣುತ್ತವೆ.

''ಕೆಲಸಕ್ಕೆ ಬಾರದ ಭರತ ನಾನಿಷ್ಟು ಕಷ್ಟಪಟ್ಟು ಕಟ್ಟಿದ ದಂಧೆಯನ್ನು ಹಾಳು ಮಾಡುತ್ತಿದ್ದಾನಿಲ್ಲಿ'' ಎಂದು ಅಪ್ಪಾ ಸಾಹೇಬ ಚಡಪಡಿಸಿದರೆ ಆ್ಯಡಂನಿಗೆ ಅವನ ಹೊಸ ಯೋಜನೆಗಳು ಆಕರ್ಷಕವೆನಿಸುತ್ತವೆ. ಈ ವಿಷಯದಲ್ಲಿ ಆ್ಯನ್ ಮತ್ತು ಆ್ಯಡಂರಲ್ಲಿಯೂ ಮತಭೇದವಿದೆ. ''ಭರತ ಒಂದು ಇಂಡಸ್ಟ್ರಿ ತೆಗೀಬೇಕೂಂತಾನೆ - ಅದರ ಚರ್ಚೆ ಮಾಡ್ತಿದ್ದೀವಿ'' ಎಂದು ಆ್ಯಡಂ ಆ್ಯನ್‌ಳಿಗೆ ಹೇಳಿದಾಗ ''ಯಾವ

ಇಂಡಸ್ಟ್ರಿ? ಅವನಿಂದ ಯಾವ ಇಂಡಸ್ಟ್ರಿಯೂ ಶಕ್ಯವಿಲ್ಲ" ಎಂದು ಆ್ಯನ್ ಅದನ್ನು ಖಡಾಖಂಡಿತವಾಗಿ ತಳ್ಳಿಹಾಕುತ್ತಾಳೆ. ನೇಮಿನಾಥನ ಪರಿತ್ಯಕ್ತ ಹೆಂಡತಿ ಜೈನಧರ್ಮದ ಸಂಪ್ರದಾಯದಲ್ಲಿಯೇ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾಳೆ. ಆದರೆ ಅಪ್ಪಾ ಸಾಹೇಬನ ವಿಧವೆ ಮಗಳು ನಿರ್ಮಲೆಯ ವಿಷಯದಲ್ಲಿ ಹೀಗಾಗುವುದಿಲ್ಲ. ಜೈನ ಪಂಚಮರಲ್ಲಿ ಪುನರ್ವಿವಾಹ ನಿಷಿದ್ಧವಾದುದರಿಂದ ಸಂಪ್ರದಾಯದ ವಿರುದ್ಧ ಹೋಗದೆ ಈ ಹಾದಿಯನ್ನು ಆರಿಸುವಂತಿಲ್ಲ. ನಿರ್ಮಲೆಯ ಗಂಡನ ಮನೆಯವರು ಗಾಂಧೀವಾದಿಗಳಾದುದರಿಂದ ತಮ್ಮ ಸೊಸೆ ವಿಧಾಯಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆನ್ನುವುದು ಅವರ ಆಸೆ. ಆದರೆ ಅಪ್ಪಾಸಾಹೇಬನ ದುರಭಿಮಾನದಿಂದಾಗಿ ಈ ಆಸೆ ಈಡೇರುವಂತಿಲ್ಲ. ಅವಳು ತನ್ನ ವಿದ್ಯಾಭ್ಯಾಸ ಮುಂದುವರಿಸಿ ಮೆಡಿಕಲ್ ವೃತ್ತಿಯನ್ನಾಯ್ದುಕೊಳ್ಳಲು ಅನುಕೂಲತೆಗಳನ್ನು ವ್ಯವಸ್ಥೆಗೊಳಿಸುವುದರ ಮೂಲಕ ಆ್ಯಡಂ ಅವಳ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತಾನೆ. ಆದರೆ ಇದು ಸಾಧ್ಯವಾಗುವುದು ಅಪ್ಪಾ ಸಾಹೇಬನ ಮರಣದ ನಂತರವೇ. ಅಪ್ಪಾ ಸಾಹೇಬನ ಉಪಪತ್ನಿ ಸೋನೂಬಾಯಿಯ ಮಗಳು ಗೌರಿಯ ವಿಷಯದಲ್ಲಿಯೂ ಆ್ಯಡಂ ಇಂಥದ್ದೇ ಪರಿಹಾರ ಕಂಡು ಹಿಡಿಯುತ್ತಾನೆ. ದೇಸಾಯಿ ಮನೆತನದ ಆಧುನೀಕರಣದಲ್ಲಿ ಪ್ರತ್ಯಕ್ಷ ಭಾಗವಹಿಸುವುದರ ಮೂಲಕ ಆ್ಯಡಂ ಹೊಣೆಗಾರಿಕೆಯ ಹೊಸಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾನೆ. ಈ ಬೆಳವಣಿಗೆಯಿಂದಾಗಿ ಆ್ಯನ್ ಳೊಂದಿಗಿನ ತನ್ನ ಸಂಬಂಧದಲ್ಲಿ ಹೆಚ್ಚಿನ ಗಾಂಭೀರ್ಯವನ್ನು ತಂದುಕೊಳ್ಳುವುದು ಅವನಿಗೆ ಸಾಧ್ಯವಾಗುತ್ತದೆ.

ಕಾದಂಬರಿಯಲ್ಲಿ ಆಧುನೀಕರಣದ ಪ್ರಕ್ರಿಯೆ ದೇಸಾಯಿ ಮನೆತನಕ್ಕೆ ಮಾತ್ರ ಸೀಮಿತವಾಗಿಲ್ಲ. ಡಾ. ನಿರ್ಮಲಕುಮಾರ ಹಾಗೂ ಅವರ ಮಗಳು ರೋಜಾ ಜೈನ ಧರ್ಮದೊಡನೆ ಹೊಂದಿದ ಸಂಬಂಧದಲ್ಲಿ ಹಾಗೂ ಶ್ರವಣ ಬೆಳಗೊಳದಂಥ ಜೈನ ಧಾರ್ಮಿಕ ಕ್ಷೇತ್ರಗಳ ಸಾಂಸ್ಥಿಕ ಬದಲಾವಣೆಗಳಲ್ಲಿ ಈ ಕ್ರಿಯೆ ಸಾಂಕೇತಿಕವಾಗಿ ನಿರೂಪಿತವಾಗಿದೆ. ಧಾರವಾಡದ ಕಾಲೇಜೊಂದರಲ್ಲಿ ಪ್ರೊಫೆಸರ್ ಹುದ್ದೆಯಲ್ಲಿರುವ ನಿರ್ಮಲಕುಮಾರ ಕಲೋನಿಯಲ್ ವಿದ್ವಾಂಸರ ಒಂದು ಮೂಲ ಪ್ರತಿಮೆಯಂತಿದ್ದಾರೆ. ಜೈನಧರ್ಮವನ್ನು ಆಳವಾಗಿ ಅಭ್ಯಸಿಸಿದ ಪಾಶ್ಚಾತ್ಯ ವಿದ್ವಾಂಸ ಡಾ. ವಿಲಿಯಮ್ಸ್‌ರಿಗೆ ಅವರಲ್ಲಿ ಐತಿಹಾಸಿಕ ಅಥವಾ ಸಾಮಾಜಿಕ ದೃಷ್ಟಿ ಇಲ್ಲದೇ ಇರುವುದು ಹೊಳೆಯುತ್ತದೆ. "ಜೈನ ಧರ್ಮ ಈಗ ಯಾವ ರೂಪದಲ್ಲಿ ಉಳಿದುಕೊಂಡಿದೆ?" ಎಂಬ ವಿಲಿಯಮ್ಸ್‌ರ ಪ್ರಶ್ನೆಗೆ ನಿರ್ಮಲ ಕುಮಾರರಲ್ಲಿ ಉತ್ತರಗಳಿಲ್ಲ. "ನಾನು ತತ್ವಜ್ಞಾನದ ವಿದ್ಯಾರ್ಥಿ, ಇತಿಹಾಸದ ಅಭ್ಯಾಸಕನಲ್ಲ" ಎಂದು ಹೇಳಿ ಅವರು ಅದರಿಂದ ಪಾರಾಗುವ ಪ್ರಯತ್ನ ಮಾಡುತ್ತಾರೆ. ಚಿಕಾಗೋ ಸೆಮಿನಾರಿನ ಬಗ್ಗೆ ಅವರು ತೋರುವ ಮುಗ್ಧ, ಉತ್ಸಾಹ, ತಮ್ಮ ಪರದೇಶ ಪ್ರಯಾಣಕ್ಕಾಗಿ ಅವರು ತೋರುವ ದೈನ್ಯ, ಚಾಣಾಕ್ಷತನ, ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್‌ದಿಂದ ಆಮಂತ್ರಣ ಬರುವಲ್ಲಿ ವಿಳಂಬವಾದಾಗ ಅವರ ತಳಮಳ ಇವೆಲ್ಲ ಕಲೋನಿಯಲ್ ಮನೋಧರ್ಮದ ಲಕ್ಷಣಗಳೇ ಆಗಿವೆ.

ನಿರ್ಮಲಕುಮಾರರು ಐತಿಹಾಸಿಕ ದೃಷ್ಟಿಯ ಅಭಾವದಿಂದ ತಮ್ಮ ಚಲನಶೀಲತೆಯನ್ನು ಕಳೆದುಕೊಂಡರೆ ಅವರ ಮಗಳು ರೋಜಾ(ರಾಜಮತಿ) ಮಾರ್ಕ್ಸಿಸ್ಟ್ ವಿಚಾರಧಾರೆಗೆ ಬದ್ಧಳಾಗುವ ಮೂಲಕ ತನ್ನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಎರವಾಗುತ್ತಾಳೆ. ಮಾರ್ಕ್ಸಿಸ್ಟ್ ವಿಚಾರಗಳು ಅವಳಿಗೆ ಭಾರತೀಯ ಸಮಾಜದಲ್ಲಿ ಮಹತ್ವದ ಒಳನೋಟಗಳನ್ನು ಒದಗಿಸುತ್ತವೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಉದಾಹರಣೆಗೆ "ಇಲ್ಲಿ ಫ್ಯೂಡಲ್ ವ್ಯವಸ್ಥೆಯಲ್ಲಿ ಒಳಗೊಳಗೆ ಎಷ್ಟೊಂದು ಹಿಂಸೆಯಿದೆ ಅಂತೀ, ಇಲ್ಲಿಯಷ್ಟು ಅಪ್ರತ್ಯಕ್ಷ ಹಿಂಸೆ ಎಲ್ಲಿಯೂ ಇರಲಿಕ್ಕಿಲ್ಲ ಚೈನಾ ಬಿಟ್ಟು, ಆದರೆ ಈಗ ಚೈನಾ ಕೂಡಾ ಬಹಳ ಆಧುನಿಕವಾಗಿ ಬಿಟ್ಟಿದೆ."[೩೬] ಇಂಥ ಹೇಳಿಕೆಗಳ ಸಮರ್ಪಕತೆಯನ್ನು ನೋಡಬಹುದು. ಆದರೆ ಮಾರ್ಕ್ಸಿಜಂ ಹೊರಗಿನ ಒಳನೋಟಗಳು ಅವಳಿಗೆ ಲಭ್ಯವಿಲ್ಲ. ಆ್ಯಡಂ ವ್ಯಕ್ತಿತ್ವ ಅವಳನ್ನು ಪ್ರಭಾವಿಸುತ್ತದೆಯಾದರೂ ಅವಳು ಕೊನೆಗೆ ಆಯ್ದುಕೊಳ್ಳುವುದು ಮಾರ್ಕ್ಸಿಸ್ಟ್ ಡಾ. ಮಾಧವನನ್ನೇ.

'ಓಂಣಮೋ'ದ ಅತ್ಯುತ್ತಮ ಭಾಗಗಳೆಂದರೆ ಆ್ಯಡಂ ಆ್ಯನ್ ರೋಜಾರ ಸಂಬಂಧ ನಿರ್ವಹಣೆಯ ಭಾಗ"[೩೭] ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿಗೆ ಈ ತ್ರಿಕೋನ ಸಂಬಂಧ ಆಸ್ಪದವೀಯದೆ ವ್ಯಕ್ತಿತ್ವದ ಅಂತರಾಳಕ್ಕೆ ಸಂಬಂಧಪಟ್ಟ ಬದಲಾವಣೆ ಬೆಳವಣಿಗೆಗಳಿಗೆ ಆಸ್ಪದವೀಯುತ್ತದೆ. ಜೀವನ ಪ್ರವಾಹಕ್ಕೆ ತನ್ನನ್ನು ತಾನು ಅತ್ಯಂತ ಸಹಜವಾಗಿ, ಪ್ರಬುದ್ಧ ಎಚ್ಚರದೊಂದಿಗೆ ಕೊಟ್ಟುಕೊಳ್ಳುವ ಆ್ಯಡಂ ನಿರಾಗಸ ವ್ಯಕ್ತಿತ್ವವುಳ್ಳವ ಹಾಗಾಗಿ ಯಾವುದೇ ಬಗೆಯ ಸಾಂಸ್ಕೃತಿಕ ಆಘಾತಕ್ಕೆ ಒಳಗಾಗದೇ ತನ್ನದಲ್ಲದ ಪರಿಸರವನ್ನು ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ. ಹಾಗಾಗಿ ತನ್ನ ತಂದೆಯ ಕುಟುಂಬದ ವ್ಯಕ್ತಿಗಳೊಂದಿಗೆ ತುಂಬಾ ಆತ್ಮೀಯವಾಗಿ ಬೆರೆಯಲಿಕ್ಕೆ ಸಾಧ್ಯವಾಗುತ್ತದೆ. ತನ್ನ ತಾಯಿಯ ಕ್ರಿಶ್ಚಿಯನ್ ಧರ್ಮ ಶ್ರದ್ಧೆಯನ್ನು ಆತ ನಿರಾಕರಿಸಲಾರ. ಹಾಗೆಯೇ ತನ್ನ ತಂದೆಯ ಬಳಗ ಮತ್ತು ಜೈನ ಸಮಾಜದ ಬಗ್ಗೆ ವಸ್ತುನಿಷ್ಠತೆ ಸಾಧ್ಯವಿಲ್ಲ ಎಂಬುದನ್ನು ಆತ ಕಂಡುಕೊಂಡಿದ್ದಾನೆ. ಹಾಗಾಗಿ ಸಿದ್ದಿ ಜನಾಂಗದ ಬಗೆಗೆ ಅಧ್ಯಯನ ಮಾಡುವ ಆಯ್ಕೆಯನ್ನಾತ ಮಾಡಿಕೊಂಡಿದ್ದಾನೆ. ಜೈನ ಆಚಾರ-ವಿಚಾರಗಳ ಬಗೆಗೆ ಆ್ಯನಳಲ್ಲಿರುವಂತೆ ಈತನಲ್ಲಿ ಅಧ್ಯಯನ ಆಸಕ್ತಿಗಳಿಲ್ಲ. ಮುನಿಗಳಿಗೆ ಆಹಾರ ದಾನ ಮಾಡುವ ಸಂದರ್ಭದಲ್ಲಿನ ಪ್ರತಿಕ್ರಿಯೆ ಹೀಗೆ : "ಇವರು ಒಂದು ಅರಿವೆ ಹಾಕಿಕೊಂಡರೆ ಏನು ಗಂಟು ಹೋಗುತ್ತದೆ. ಈ ಸಂಘದವರು ತಮ್ಮ ಅಡಿಗೆ ಊಟ ತಾವೇ ಮಾಡಿ, ತಮ್ಮಷ್ಟಕ್ಕೆ ಇರಬೇಕು. ಕ್ರಿಶ್ಚಿಯನ್ ಮಂಕ್ಸರಂತೆ ಅಥವಾ ನನ್ಸರಂತೆ" ತನ್ನದು ವೈಯಕ್ತಿಕ ಸ್ವಾತಂತ್ರ್ಯವನ್ನು ಕೇಂದ್ರವಾಗುಳ್ಳ ಅಪ್ಪಟ ಬ್ರಿಟೀಷ್‌ಪ್ರಜ್ಞೆ ಎಂದುಕೊಳ್ಳುವ ಆ್ಯಡಂನ ಈ ಕೇಂದ್ರ ಅಲುಗಾಡುವ ಸಂದರ್ಭಗಳು ಬರುತ್ತವೆ.

ಮೊದಲನೆಯದು ಯಾವುದೇ ನಿರ್ದಿಷ್ಟ ಚೌಕಟ್ಟುಗಳಿಲ್ಲದ ಭಾರತೀಯ ಕೌಟುಂಬಿಕ ಹಾಗೂ ವ್ಯಕ್ತಿಸಂಘರ್ಷಗಳು ಆ್ಯಡಂಗೆ ಗೊಂದಲಮಯವಾಗಿ ಕಂಡಿತು. ಇಂಗ್ಲೆಂಡಿನ ವ್ಯಾವಹಾರಿಕ, ವೈಚಾರಿಕ ನೆಲೆಯ ಸರಳ ಜೀವನ ರೇಖೆಯಂತೆ ಭಾರತೀಯ ಬದುಕು ಇಲ್ಲ ಎಂಬುದು ಆ್ಯಡಂಗೆ ತಿಳಿಯಿತು.

ಯಾವುದೇ ಅಪೇಕ್ಷಿತ ಪರಿಹಾರಗಳಿಲ್ಲದ ಸಮಸ್ಯೆಯೊಳಕ್ಕೆ ಇಳಿಯುವುದೆಂದರೆ ತನಗರಿವಿಲ್ಲದೇ ಕಾಲಕೆಳಗಿನ ಕಲ್ಲು ಜರುಗಿಹೋದ ಅನುಭವದಂತೆ ಆ್ಯಡಂಗೆ ಭಾಸವಾಗುತ್ತದೆ. ಈ ಅಸಂಗತತೆಯಿಂದ ಪಾರಾಗಲು ಮಹಾವೀರನ ಮೋಕ್ಷಾಕಾಂಕ್ಷಿ ಸನ್ಯಾಸನದ ಮಾರ್ಗ ತೀರ ಸರಳ ಹಾಗೂ ಸ್ವಾರಸ್ಯ ಹೀನವೆಂಬ ತರ್ಕ ಆತನದು. ಬದುಕೆಂಬ ಪ್ರವಾಹದಲ್ಲಿ ಈಜುವ ಸ್ವಾರಸ್ಯಕರ ಜೀವನಾನುಭವಕ್ಕೆ ವಿಮುಖನಾಗಲು ಆತನ ಮನಸ್ಸು ಒಪ್ಪುತ್ತಿಲ್ಲ. ವರ್ತಮಾನದ ಕ್ಷಣಗಳಲ್ಲಿ ವ್ಯಕ್ತಿ ಸಂಬಂಧಗಳನ್ನು ನಿಭಾಯಿಸಿಕೊಂಡು ಹೋಗಬಲ್ಲ ಸಹಜ ಚತುರತೆಯೇ ಆ್ಯಡಂ ಪಾತ್ರದ ವೈಶಿಷ್ಟ್ಯ. ಅದೇ ಅವನ ಬಲ ಕೂಡ. ವೈಯಕ್ತಿಕ ಸ್ವಾತಂತ್ರ್ಯಕ್ಕೆ ನಿರ್ಬಂಧವೊಡ್ಡುವ ಕೌಟುಂಬಿಕ ಸಂಬಂಧಗಳಾಗಲೀ, ಧಾರ್ಮಿಕತೆಯಾಗಲೀ ತನ್ನನ್ನು ಕಬಳಿಸೀತೆಂಬ ಆತಂಕ ಕಾಡಿದಾಗಲೆಲ್ಲ ಇಂಗ್ಲೆಂಡಿಗೆ ಮರಳಿ ಹೋಗುವ ಇಚ್ಛೆ ಆತನಲ್ಲಿ ಪ್ರಬಲವಾಗುತ್ತದೆ. ಭಾರತದಲ್ಲಿನ ತನ್ನ ವಾಸ್ತವ್ಯದ ಗುರಿ ಕೇವಲ 'ಸೈಟ್ ಸೀಯಿಂಗ್ ಟೈಪ್' ಎಂದು ಆ್ಯಡಂ ಹೇಳಿಕೊಂಡರೂ ಮಾನವೀಯ ಸಂಬಂಧಗಳನ್ನು ಆರೋಗ್ಯ ಪೂರ್ಣವಾಗಿ ಕಾಪಾಡಿಕೊಳ್ಳಬಲ್ಲ, ಹಾಗೂ ನಿರ್ವಹಿಸಬಲ್ಲವನಾಗುತ್ತಾನೆ.

ತೋರಿಕೆಯ ಧರ್ಮ ಭಾರತೀಯರ ಜೀವನವನ್ನು ಕಬಳಿಸಿರುವುದಾಗಿ ಭಾವಿಸುವ ಆ್ಯಡಂಗೆ ಗೆಳತಿ ಆ್ಯನ್ ಜೈನಧರ್ಮದಲ್ಲಿ ಆಸಕ್ತಿವಹಿಸುವುದು ತಲ್ಲಣಗೊಳಿಸುತ್ತದೆ. ಆ್ಯನ್‌ಳಿಗೆ ಬಾಹುಬಲಿಮೂರ್ತಿ ಭಾವನೆಗಳುಕ್ಕಿಸಬಲ್ಲ ಸ್ಫೂರ್ತಿ ಕೇಂದ್ರವಾದರೆ ಆ್ಯಡಂಗೆ ಅದು ಬರೇ ಕಲಾಕೃತಿ ಮಾತ್ರ. ಮಸ್ತಕಾಭಿಷೇಕ ಅನ್ನುವುದು ಅವನ ಪ್ರಕಾರ ಜೈನರ 'ಗ್ರ್ಯಾಂಡ್‌ಶೋ' ಧರ್ಮದ ತಾತ್ವಿಕತೆಯನ್ನು ನೈಜ ಬದುಕಿನಲ್ಲಿ ಪರಿಪಾಲಿಸಲು ಯತ್ನಿಸುವ ಆ್ಯನ್‌ಳ ಪ್ರಯೋಗಶೀಲತೆಯೇ ಆ್ಯಡಂಗೆ ದೊಡ್ಡ ಸವಾಲು. ತನ್ನ ಹಾಗೂ ಅವಳ ಸ್ನೇಹವನ್ನು ಇಂಥ ಪ್ರಯೋಗದ ಕಾರಣ ಕಳೆದುಕೊಳ್ಳಲು ಆ್ಯಡಂ ಇಚ್ಛಿಸುವುದಿಲ್ಲ. ದೈಹಿಕ ಕಾಮನೆಯ ಆಯಾಮವನ್ನು ಆ್ಯನ್ ಬ್ರಹ್ಮಚರ್ಯೆ ವ್ರತ ಪರಿಪಾಲನೆಯ ನಿಮಿತ್ತ ನಿರಾಕರಿಸಿದಂತೆ ಆ್ಯಡಂಗೆ ನಿರಾಕರಿಸಲಾಗುವುದಿಲ್ಲ. ರೋಜಾಳ ಆಕರ್ಷಣೆಗೆ ಆತ ವಿಮುಖನಾಗಲಾರ. ತನ್ನ ಚಿಕ್ಕಪ್ಪನಾದ ಭರತನೊಂದಿಗೆ ಬೆಂಗಳೂರಿಗೆ ಹೋದಾಗ ಬೇರೆ ಹೆಣ್ಣಿನ ಜೊತೆ ಹೊಂದಿದ್ದ ಲೈಂಗಿಕ ಸಂಬಂಧವನ್ನು ಆತ ನೇರವಾಗಿ ಆ್ಯನ್‌ಗೆ ಹೇಳಬಲ್ಲ. ಈ ಕಾರಣದಿಂದಾಗಿಯೇ ಎಲ್ಲಿ ಆ್ಯನಳೊಂದಿಗಿನ ನನ್ನ ಸ್ನೇಹ ಕಳಚಿ ಹೋಗುತ್ತದೆಂಬ ಆತಂಕ ಕೂಡ ಅವನನ್ನು ಕಾಡುತ್ತದೆ. ಆದರೂ ಈ ಅಪರಾಧಿ ಪ್ರಜ್ಞೆಯ ಮೂಲಕವೇ ಆ್ಯಡಂ ಕೊನೆಯಲ್ಲಿ ಆ್ಯನ್‌ಳನ್ನು ತನ್ನವಳನ್ನಾಗಿಸಿಕೊಳ್ಳುತ್ತಾನೆ. ಆ್ಯನ್ ಎಲ್ಲಿ ತನ್ನ ಕೈತಪ್ಪಿ ಹೋಗುತ್ತಾಳೋ ಎನ್ನುವುದಕ್ಕಿಂತ ಎಲ್ಲಿ ಜೀವನ ವಿಮುಖಿಯಾಗುತ್ತಾಳೋ ಎನ್ನುವುದು ಆತನನ್ನು ಕಾಡುತ್ತದೆ.

ರೋಜಾಳೊಂದಿಗಿನ 'ಫ್ಲರ್ಟೇಶನ್'ಗಾಗಿ ಆ್ಯನ್‌ಳಲ್ಲಿ ಕ್ಷಮೆಯಾಚಿಸಿದ ಆ್ಯಡಂ ತನ್ನ ಸಂಚಾರೀ ಮನದ ಕೇಂದ್ರವಾಗಿ ಆಕೆಯನ್ನು ಗುರುತಿಸಿಕೊಳ್ಳುತ್ತಾನೆ. ಧಾರ್ಮಿಕ ಶ್ರದ್ಧೆಗಿಂತ ಶುದ್ಧ ಮಾನವತಾವಾದೀ

ನಿಲುವಿನಿಂದ ಸ್ವೀಕರಿಸಿದ ಬದುಕು ಪಲಾಯನವಾದಿಯಾಗಲಾರದೆಂಬುದನ್ನು ಆ್ಯಡಂ ಸಾಧಿಸಿ ತೋರಿಸುತ್ತಾನೆ. ಅಜ್ಜನ ಆಸ್ತಿಯ ವಾರಸುದಾರನಾಗಿ ಅದನ್ನು ಉದಾರವಾದಿ ನೆಲೆಯಲ್ಲಿ ಯಶಸ್ವಿಯಾಗಿ ವ್ಯವಸ್ಥೆಗೊಳಿಸುತ್ತಾನೆ. ಯಾವುದೇ ಬಗೆಯ ತಾತ್ವಿಕ ನಿರ್ಬಂಧಗಳನ್ನು, ಧರ್ಮಶ್ರದ್ಧೆಯ ಹೆಸರಿನಲ್ಲಾಗಲೀ ರೋಜಾಳ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಬದ್ಧತೆಯಾಗಲೀ ಹೇರಿಕೊಳ್ಳಲು ಆತ ಇಚ್ಛಿಸುವುದಿಲ್ಲ. ವೈಯಕ್ತಿಕ ಸ್ವಾತಂತ್ರ್ಯವನ್ನು ಉಳಿಸಿಕೊಂಡು 'ಪಾಪ ನಿವೇದನೆ'ಗೆ ಅವಕಾಶವೀಯುವ ಕ್ರಿಶ್ಚಿಯನ್ ಧಾರ್ಮಿಕತೆಯನ್ನು ತನ್ನದೇ ಆದ ಅಸ್ತಿತ್ವವಾದೀ ನೆಲೆಯಲ್ಲಿ ಆ್ಯಡಂ ಸ್ವೀಕರಿಸಿದ್ದಾನೆ. ನಿರ್ಬಂಧಗಳ ಹಂಗಿಲ್ಲದೆ ಸಹಜ ತಪ್ಪುಗಳನ್ನು ಮಾಡಲು ಅವಕಾಶವೀಯುವ ಪಾಪಪ್ರಜ್ಞೆ, ಆ್ಯಡಂಗೆ ಅನಿವಾರ್ಯ ಹಾಗೂ ಅವಶ್ಯಕ. ತಪ್ಪುಗಳ ಬಗೆಗೆ ಪರಿತಾಪ ಪಡುತ್ತಲೇ ಪರಿಣಾಮಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಅದು ಮಾಡುತ್ತದೆ. ಆ್ಯನಳು ಜೈನ ತಾತ್ವಿಕತೆಯಲ್ಲಿ ಕಂಡುಕೊಂಡ ಮಧ್ಯಸ್ಥ ವಸ್ತುನಿಷ್ಠ ದೃಷ್ಟಿಕೋನವು ಆ್ಯಡಂನ ಸ್ವಭಾವದಲ್ಲಿಯೇ ಅಂತರ್ಗತವಾಗಿದ್ದು, ಇದು ಗೌರಿ, ರೋಜಾ, ನಿರ್ಮಲೆ ಹಾಗೂ ಆ್ಯನ್‌ರೊಂದಿಗಿನ ಆತನ ಸಂಬಂಧವನ್ನು ಯಾವುದೇ ಸಂದಿಗ್ಧಗಳಿಲ್ಲದೆ ಆರೋಗ್ಯಕರವಾಗಿರಿಸುತ್ತದೆ. ಅಷ್ಟೇ ಅಲ್ಲದೆ, ಈ ವಸ್ತುನಿಷ್ಠತೆ ನಿರ್ಭಾವುಕವೂ ಕಠೋರವೂ ಆಗದೆ ಸಂವೇದನಾಶೀಲತೆಯನ್ನು ಪಡೆಯುವಲ್ಲಿ ಬೆಳವಣಿಗೆಯಿದೆ.

ವ್ಯಕ್ತಿ ಸ್ವಾತಂತ್ರ್ಯದ ತಾತ್ವಿಕತೆಯನ್ನು ಜೈನದರ್ಶನ ಹಾಗೂ ಆಚರಣೆಗಳಲ್ಲಿ ಶೋಧಿಸಲು ಯತ್ನಿಸುವ ಪ್ರಾಮಾಣಿಕ ಪಾತ್ರ ಆ್ಯನ್ ಈಗಲ್ಟನ್‌ಳದು. ಜೈನ ಆಚರಣೆಗಳ ಭಾಗವಾದ ಹೋಮ, ಯಾತ್ರೆ, ಮಸ್ತಕಾಭಿಷೇಕ, ಯಕ್ಷ-ಯಕ್ಷಿ ಪೂಜೆ, ಹೊಸ ವ್ರತ ಮುನಿದೀಕ್ಷೆ, ಆಹಾರ ದಾನ, ಸಲ್ಲೇಖನ, ವ್ರತ ಇತ್ಯಾದಿಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುತ್ತಲೇ ಗಟ್ಟಿ ಭಾವಕೇಂದ್ರವೊಂದನ್ನು ಆ್ಯನ್ ಕಟ್ಟಿಕೊಳ್ಳಬಯಸುತ್ತಾಳೆ. ಹಾಗಾಗಿ ಭಾರತವನ್ನು 'ಸೈಟ್ ಸೀಯಿಂಗ್' ದೃಷ್ಟಿಯಲ್ಲಿ ಅರ್ಥೈಸಿಕೊಳ್ಳದೆ, ಅದನ್ನು ತನ್ನದನ್ನಾಗಿಸಿಕೊಳ್ಳುತ್ತಲೇ ಅರಿಯುವ ಮಹತ್ವಾಕಾಂಕ್ಷೆ ಆಕೆಯದು. ಬಹುಶಃ ಆ್ಯಡಂಗಿದ್ದ ಸುರಕ್ಷಿತ ಕೌಟುಂಬಿಕ ನೆಲೆ ಆ್ಯನ್‌ಗೆ ಇಲ್ಲದ್ದು ಕೂಡ, ಇಂಗ್ಲೆಂಡಿನ ಬದುಕಿಗೆ ಮತ್ತೆ ಮರಳಬೇಕೆಂಬ ತುಡಿತ ಆಕೆಯಲ್ಲಿ ಇಲ್ಲವಾಗಿಸಿದೆ. "ನಿನಗೆ ಮರಳಿ ಹೋಗಲಿಕ್ಕೆ ಮನೆಯಿದೆ, ನನಗಿಲ್ಲ. ಆದ್ದರಿಂದ ನಾನಿಲ್ಲಿಯೇ ಇದ್ದುಬಿಡಬೇಕೆಂದೆನಿಸುವುದು."

ಜೈನರ ಇತಿಹಾಸ, ಪುರಾಣ, ಕಲಾಕೃತಿಗಳ ಅಭ್ಯಾಸದ ಮೂಲಕ ಸಾಧ್ಯವಾಗುವ ಕಲ್ಪಿತ ಸಂಸ್ಕೃತಿಯ ಗ್ರಹಿಕೆಯಲ್ಲಿ ಆ್ಯನಳಿಗೆ ಆಸಕ್ತಿಯಿಲ್ಲ ಭದ್ರಬಾಹು-ಚಂದ್ರಗುಪ್ತರ ಬಗೆಗಿನ ಐತಿಹಾಸಿಕತೆಯಲ್ಲಿ ಆಕೆ ಜೈನ ಧಾರ್ಮಿಕತೆಯ ಸ್ಫೂರ್ತಿ ಕ್ಷಣಗಳ ಜೀವಂತಿಕೆಯನ್ನು ಅರಸುವವಳು. ಜೈನರ ದಶಧರ್ಮಗಳಲ್ಲಿ ಕೆಲವನ್ನಾದರೂ ಆಚರಿಸಿ ನೋಡಬೇಕೆಂಬ ನಿರ್ಧಾರ ಅವಳದು. ತನ್ನ ಅನುದಿನದ ವರ್ತನೆಯನ್ನು ಈ ಧಾರ್ಮಿಕ ಗುಣಗಳ ವ್ಯಾಖ್ಯೆಯ ಬೆಳಕಿನಲ್ಲಿ ವಿಶ್ಲೇಷಿಸಿಕೊಳ್ಳುತ್ತ ಗಟ್ಟಿಗೊಳ್ಳುವ ಪಾತ್ರ ಆ್ಯನಳದು.

ಹಾಗೆಯೇ ಜೈನಮುನಿಗಳ ಆಚಾರಗಳ ಬಗೆಗೆ ತನ್ನ ಅನುಭವಕ್ಕೆ ಹೊಂದಿಕೊಂಡಂತೆ ಆಳವಾದ ಪರಿವೀಕ್ಷಣೆ ಚಿಂತನೆಯನ್ನು ಆಕೆ ನಡೆಸಬಲ್ಲವಳು. ಮುನಿಗಳ ದೀಕ್ಷಾ ಸಮಾರಂಭದಲ್ಲಿನ ಕೇಶಲೋಚನ ಕ್ರಿಯೆ ಆಕೆಗೆ ದೊಡ್ಡ 'ಕಲ್ಚರ್‌ಶಾಕ್'ನ್ನು ಕೊಟ್ಟಿತು. ''ಅಹಿಂಸೆಯನ್ನು ಇಡೀ ಜಗತ್ತಿಗೆ ಕಲಿಸುವ ಈ ಧರ್ಮದಲ್ಲಿ ಈ ಸ್ವಹಿಂಸೆ ಯಾಕೆ ಇದೆ? ದೇವರಿಗೇ ಗೊತ್ತು!''[೩೮] ಎಂಬ ಉದ್ಗಾರ ಆಕೆಯದು. ಹಳೇ ಕಾಲದ ಮುನಿಸಂಘಗಳಲ್ಲಿ ನಡೆಯಬೇಕಾದ ಈ ಸಮಾರಂಭಗಳು ಶ್ರಾವಕ ಶ್ರಮಣರ ನಡುವೆ ಬೇಲಿ ಕಟ್ಟುತ್ತವೆ ಎಂಬ ಅಭಿಪ್ರಾಯಕ್ಕೆ ಆಕೆ ಬರುತ್ತಾಳೆ. ಈ ಬಗೆಯ ಸ್ವಹಿಂಸೆಯ ಪ್ರದರ್ಶನ ಅರ್ಥಹೀನವಲ್ಲವೆ? ಎಂಬುದು ಆಕೆಯ ಪ್ರಶ್ನೆ. ಆಕೆ ಎತ್ತುವ ಪ್ರಶ್ನೆಗಳಿಗೆ ನಿರ್ಮಲಕುಮಾರರಲ್ಲಿ ಉತ್ತರವಿದೆ. ಇವುಗಳ ಸಾಮಾಜಿಕ ಆಯಾಮದ ಬಗೆಗೆ ಆ್ಯನ್ ಕುತೂಹಲಳಾಗುವುದಿಲ್ಲ. ಇದು ಆಕೆಯ ಅಧ್ಯಯನದ ಮಿತಿ. ಈ ಮಿತಿಗೆ ವ್ಯಕ್ತಿನಿಷ್ಠ ನೆಲೆಯ ಸ್ವಾತಂತ್ರ್ಯಾಪೇಕ್ಷೆಯೂ ಕಾರಣವಾಗಿದೆ. ಜೈನತತ್ವ, ಆಚರಣೆಗಳ ಸಾಮಾಜಿಕತೆಯ ಆಯಾಮಕ್ಕಿಂತ, ವೈಯಕ್ತಿಕ ಅನ್ವೇಷಣೆಯೇ ಆ್ಯನ್‌ಳಲ್ಲಿ ಮುಖ್ಯವಾಗುತ್ತ ಹೋಗುತ್ತದೆ. ಜೈನ 'ಅಪರಿಗ್ರಹ' ತತ್ವವನ್ನು ಆ್ಯನ್ ಪರಿಭಾವಿಸುವ ಕ್ರಮದಲ್ಲಿಯೇ ಆ ತತ್ವದ ಬಹುಮುಖಿ ಆಯಾಮ ಪ್ರಕಟವಾಗುತ್ತದೆ. ಶ್ರವಣಬೆಳಗೊಳದ ಗೊಮ್ಮಟ ದರ್ಶನ ಆ್ಯನ್‌ಳಲ್ಲಿ 'ಅಪರಿಗ್ರಹ' ತತ್ವಪಾಲನೆಯನ್ನು ತನ್ನ ಅಸ್ತಿತ್ವದ ಸವಾಲಾಗಿ ಸ್ವೀಕರಿಸುವ ಮಟ್ಟಿನ ಪ್ರೇರಣೆಯನ್ನು ನೀಡುತ್ತದೆ. ಮಲತಾಯಿಯಿಂದಾಗಿ ತಂದೆಯ ಪ್ರೀತಿಯಿಂದ ವಂಚಿತಳಾದುದರ ದುಃಖವನ್ನು ಮರೆಯಲು ಇಂಗ್ಲೆಂಡ್ ಬಿಟ್ಟು ಭಾರತಕ್ಕೆ ಬಂದುದು ಒಂದು ರೀತಿಯಲ್ಲಿ 'ಅಪರಿಗ್ರಹ'ವೆಂದೇ ಆ್ಯನ್ ಅರ್ಥೈಸುತ್ತಾಳೆ.

ತಂದೆಯ ಮೇಲಿನ ಮಮಕಾರವನ್ನು ತ್ಯಜಿಸುವುದರ ಬದಲಿಗೆ ಸ್ವತಃ ಗೊಮ್ಮಟನೇ ತಂದೆಯಾಗಿ ತನ್ನ ಬಾಹುಗಳನ್ನು ಆ್ಯನ್‌ಗಾಗಿ ಚಾಚಿ ನಿಂತಿರುವಂತೆ ಆಕೆಗೆ ಭಾಸವಾಗುತ್ತದೆ. ಇದರೊಂದಿಗೆ ಆ್ಯಡಂ ಜೊತೆಗಿನ ಸಂಬಂಧವನ್ನೂ ತನ್ನ ಹಾಗೂ ಅವನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರದ ರೀತಿ ತ್ಯಜಿಸುವ ನಿರ್ಧಾರಕ್ಕೆ ಬರುತ್ತಾಳೆ. ಆ್ಯಡಂ ರೋಜಾರ ಸಂಬಂಧವನ್ನು ಕೂಡ ಆ್ಯನ್ ಕಷ್ಟದಿಂದಲೇ 'ಅಪರಿಗ್ರಹ' ತತ್ವದ ಆಧಾರದಿಂದ ಉದಾರವಾಗಿ ಸ್ವೀಕರಿಸಲು ಪ್ರಯತ್ನಿಸುತ್ತಾಳೆ. ಆದರೆ ಆ್ಯಡಂನೊಂದಿಗಿನ ಸಂಬಂಧವನ್ನು ಆ್ಯನ್ ಏಕಾಏಕಿ ದೂರಮಾಡಲು ಸಾಧ್ಯವಾಗುವುದಿಲ್ಲ. ಈ ಸಂಬಂಧವನ್ನು ದೂರ ಮಾಡುವುದೆಂದರೆ ಇನ್ನೊಂದು 'ಅಪರಿಗ್ರಹ'ಕ್ಕೆ ಸಿದ್ಧವಾದಂತೆ ಎಂದೆನಿಸುತ್ತದೆ. ತನ್ನೊಳಗಿನ ದ್ವಂದ್ವವನ್ನು ತನಗೆ ತಾನೇ ಕೇಳಿಕೊಳ್ಳುವ ಪ್ರಶ್ನೆಯಲ್ಲಿ ಪ್ರಕಟಗೊಳಿಸುತ್ತಾಳೆ.

''ಶ್ರವಣಬೆಳಗೊಳದ ಗಿರಿಯ ಮೇಲೆ ಯಾರಿಂದ ಓಡಿದೆ? ಆ್ಯಡಂನಿಂದೇ? ಕಾಮದೇವನಿಂದೇ?'' ತನ್ನ ಸಂಶೋಧಕ ಪಾತಳಿಯಲ್ಲಿಯೇ ಧಾರ್ಮಿಕ ನಂಬಿಕೆಯನ್ನು ಬದುಕಿನ ಅವಶ್ಯಕತೆಯಾಗಿ ಸ್ವೀಕರಿಸಲು ಬರುವುದೋ ಇಲ್ಲವೋ ಎಂಬ ಪ್ರಾಮಾಣಿಕ ಪ್ರಯೋಗಕ್ಕೆ ಆ್ಯನ್ ತೊಡಗುತ್ತಾಳೆ. ಅದರ ಫಲವಾಗಿ ಶ್ರವಣಬೆಳಗೊಳದ ಮಠೀಯ ಕೇಂದ್ರದ ಸಕ್ರಿಯ ಸದಸ್ಯೆಯಾಗಿ, ಜೈನದೀಕ್ಷೆಗೊಂಡು ತನಗೆ ತಾನೇ

ಶ್ರದ್ಧೆಯ ಆವರಣವನ್ನು ಕಲ್ಪಿಸಿಕೊಳ್ಳುತ್ತಾಳೆ. ಇದು ಆಕೆ ಪ್ರಜ್ಞಾಪೂರ್ವಕವಾಗಿ ವ್ಯಕ್ತಿಸ್ವಾತಂತ್ರ್ಯದ ನೆಲೆಯಿಂದ ಕೈಗೊಂಡ ನಿರ್ಧಾರವೇ ಆಗಿದೆ. ಈ ಕಾರಣಕ್ಕಾಗಿ ಕೆ.ವಿ. ತಿರುಮಲೇಶರು ಹೇಳುವಂತೆ ಆಕೆ "ಜೈನಿಸಂನ್ನು ಬಿಟ್ಟು ಕೊಡದೆಯೇ ಜೈನಾಚಾರ್ಯರ ವಿರುದ್ಧ ಬಂಡೇಳುವುದು ಸಾಧ್ಯವಾಗುತ್ತದೆ."[೨೯] ಧರ್ಮವೆನ್ನುವುದು ವ್ಯಕ್ತಿ ಜೀವನದ ಆಂತರಿಕ ಶೋಧದೊಂದಿಗೆ ಪಡೆದುಕೊಳ್ಳುವ ಅರಿವಿನ ಬೆಳವಣಿಗೆ ಎಂಬುದು ಆ್ಯನ್ ಪಾತ್ರದ ಮೂಲಕ ಸಮರ್ಥವಾಗಿ ನಿರೂಪಿತವಾಗಿದೆ. ಈ ವ್ಯಕ್ತಿನಿಷ್ಠ ನೆಲೆಯಲ್ಲಿಯೇ ಧರ್ಮದ ಸಾಮಾಜಿಕ ಆಯಾಮ ಕೂಡ ಸದಾ ಚಿಕಿತ್ಸೆಗೆ ಒಳಗಾಗಬೇಕಾದುದು ಅನಿವಾರ್ಯ, ಅಗತ್ಯ ಎಂಬ ಮಹತ್ವದ ನಿರ್ಧಾರವನ್ನು ಕಾದಂಬರಿ ಪ್ರಕಟಿಸುತ್ತದೆ.

ಕೊನೆಯ ಟಿಪ್ಪಣಿಗಳು

೧. ಬಸವರಾಜ ಸಬರದ, ೧೯೯೪, 'ದೇಸಾಯಿಯವರ 'ಮುಕ್ತಿ' ಕಾದಂಬರಿಯಲ್ಲಿ ಬದುಕಿನ ಹೋರಾಟ', **ಸಾಹಿತ್ಯ ಸಂಗತಿ,** ಪಲ್ಲವಿ ಪ್ರಕಾಶನ, ಗುಲ್ಬರ್ಗಾ, ಪು.೧೪೭

೨. ಅದೇ, ಪು.೧೪೮

೩. ಶಾಂತಿನಾಥ ದೇಸಾಯಿ, ೧೯೬೧, ೧೯೮೩(ತೃ.ಮು), **ಮುಕ್ತಿ,** ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಪು.೨೭

೪. ಅದೇ, ಪು.೨೫

೫. ಆಮೂರ ಜಿ.ಎಸ್., ೧೯೭೪, 'ಮುಕ್ತಿಯಲ್ಲಿ ವೈಯಕ್ತಿಕ ದರ್ಶನ', **ಸಮಕಾಲೀನ ಕತೆ-ಕಾದಂಬರಿ : ಹೊಸ ಪ್ರಯೋಗಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೫೫

೬. ಶಾಂತಿನಾಥ ದೇಸಾಯಿ, ೧೯೮೩, **ಮುಕ್ತಿ,** ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಪು.೨೦೪

೭. ದೇಶಕುಲಕರ್ಣಿ, ೨೦೦೧, 'ಮುಕ್ತಿಕುರಿತು', **ಮುಕ್ತಚಂದ,** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೭೪

೮. ಶಾಂತಿನಾಥ ದೇಸಾಯಿ, ೧೯೮೩, **ಮುಕ್ತಿ,** ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಪು.೩೦೩

೯. ಅದೇ, ಪು.೨೪೨

೧೦. ಮಾರುತಿ ಶಾನಭಾಗ, 'ಶಾಂತಿನಾಥ ದೇಸಾಯಿಯವರ 'ವಿಕ್ಷೇಪ ಒಂದು ಸಮೀಕ್ಷೆ', **ಸಂಕ್ರಮಣ,** (ಸಂ)ಚಂದ್ರಶೇಖರ ಪಾಟೀಲ, ಸಂಚಿಕೆ ೪೭, ೧೯೭೨, ಸಂಕ್ರಮಣ ಪ್ರಕಾಶನ, ಧಾರವಾಡ, ಪು.೩೦

೧೧. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೫೫

೧೨. ಶಾಂತಿನಾಥ ದೇಸಾಯಿ, ೨೦೦೨, ವಿಕ್ಷೇಪ, ಸಪ್ನಬುಕ್ ಹೌಸ್, ಬೆಂಗಳೂರು, ಪು.೧೨೩

೧೩. ಅದೇ, ಪು.೨೪೨

೧೪. ಅದೇ, ಪು.೩೫

೧೫. ಅದೇ, ಪು.೫೩

೧೬. ಶಾಂತಿನಾಥ ದೇಸಾಯಿ, ೨೦೦೩, ಸಂಬಂಧ, ಸಪ್ನಬುಕ್ ಹೌಸ್, ಬೆಂಗಳೂರು, ಪು.೩

೧೭. ಅದೇ, ಪು.೧೦

೧೮. ಅದೇ, ಪು.೮೦

೧೯. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೬೫

೨೦. ಅದೇ, ಪು.೬೭

೨೧. ಅದೇ

೨೨. ಶಾಂತಿನಾಥ ದೇಸಾಯಿ, ೨೦೦೨, **ಬೀಜ,** ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೨೧೦

೨೩. ನಾರಾಯಣ ಕೆ.ವಿ., ೨೦೦೧, 'ಬೀಜ: ಗೌರೀಶ ಶ್ರೇಯಾಂಸನಾಗುವ ಬಗೆ', **ಮುಕ್ತಚಂದ,** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೧೪

೨೪. ಅದೇ, ಪು.೩೫

೨೫. ಅದೇ, ಪು.೫

೨೬. ರಾಘವೇಂದ್ರರಾವ್ ಎಚ್.ಎಸ್., ೨೦೦೧, 'ಶ್ರೇಯಾಂಸನ ನಿರ್ಧಾರ ಕೆಲವು ವಿಚಾರಗಳು', **ಮುಕ್ತಚಂದ,** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೧೮

೨೭. ಶಾಂತಿನಾಥ ದೇಸಾಯಿ, ೨೦೦೨, **ಬೀಜ,** ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೧೮೦

೨೮. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೭೪

೨೯. ಶಾಂತಿನಾಥ ದೇಸಾಯಿ, ೧೯೯೩, **ಅಂತರಾಳ,** ಸ್ನೇಹ ಪ್ರಕಾಶನ, ಬೆಂಗಳೂರು, ಪು.೬೦

೩೦. ಅದೇ, ಪು.೧೭೭

೩೧. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೫೯

೩೨. ರಘುರಾಂ ಎ., ೨೦೦೧, 'ಶಾಂತಿನಾಥ ದೇಸಾಯಿ ಅವರ ಅಂತರಾಳ', **ಮುಕ್ತಚಂದ,** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೨೫

೩೩. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಪು.೬೧

೩೪. ಶಾಂತಿನಾಥ ದೇಸಾಯಿ, ೧೯೯೮, **ಓಂಣಮೋ,** ಎಸ್‌ಬಿಎಸ್ ಪಬ್ಲಿಷರ್ಸ್, ಬೆಂಗಳೂರು, ಪು.೩೬

೩೫. ಅದೇ, ಪು.೭೨

೩೬. ಅದೇ, ಪು.೬೧

೩೭. ನಾಗಭೂಷಣಸ್ವಾಮಿ ಓ.ಎಲ್., ೨೦೦೧, 'ಓಂಣಮೋ', **ಮುಕ್ತಚಂದ** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೩೨

೩೮. ಶಾಂತಿನಾಥ ದೇಸಾಯಿ, ೧೯೯೮, **ಓಂಣಮೋ,** ಎಸ್‌ಬಿಎಸ್ ಪಬ್ಲಿಷರ್ಸ್, ಬೆಂಗಳೂರು, ಪು.೧೨೭

೩೯. ತಿರುಮಲೇಶ್ ಕೆ.ವಿ., ೧೯೯೮, 'ಶಾಂತಿನಾಥರ ಕೊನೆಯ ಕಾದಂಬರಿ', **ಓಂಣಮೋ,** ಎಸ್‌ಬಿಎಸ್ ಪಬ್ಲಿಷರ್ಸ್, ಬೆಂಗಳೂರು, ಪು.೧೨

ಅಧ್ಯಾಯ ೮

ಕಾದಂಬರಿ ಸಾಹಿತ್ಯ : ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪ

೮

ಕಾದಂಬರಿ ಸಾಹಿತ್ಯ : ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪ

ಆಧುನಿಕ ಕನ್ನಡ ಕಾದಂಬರಿಯಲ್ಲಿ, ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಹಲವು ನೆಲೆಗಳನ್ನು ಕಾಣುತ್ತೇವೆ. ಆಧುನಿಕತೆ ಮತ್ತು ಸಂಪ್ರದಾಯದ ಮುಖಾಮುಖಿಯಲ್ಲಿಯೂ ಮಹಿಳೆ ಬಿಕ್ಕಟ್ಟನ್ನು ಎದುರಿಸುವವಳಾಗಿರುತ್ತಾಳೆ. ಅವಿಭಕ್ತ ಕುಟುಂಬಗಳು ಒಡೆದು ಹೋಗುವ ಸಂದರ್ಭಗಳಲ್ಲಿಯೂ ಮಹಿಳೆಯ ಪಾತ್ರ ಮುಖ್ಯವಾಗಿರುತ್ತದೆ. ಜಮೀನ್ದಾರಿ ವ್ಯವಸ್ಥೆಯಲ್ಲಿಯೂ ಮಹಿಳೆ ಶೋಷಣೆಗೆ ಒಳಗಾಗಿರುತ್ತಾಳೆ. ಕಾಮಪ್ರೇಮದ ಸಂಬಂಧಗಳಲ್ಲಿ ಮಹಿಳೆ ಪುರುಷನ ಜತೆ ಸಂಘರ್ಷಕ್ಕೆ ಇಳಿಯುವುದನ್ನು ಮತ್ತು ಸಾಮಾನ್ಯವಾಗಿ ಮಹಿಳೆ ಅಸಹಾಯಕತೆಯಿಂದ ಸಂಕಷ್ಟಗಳನ್ನು ಎದುರಿಸುವುದನ್ನು ಕನ್ನಡ ಕಾದಂಬರಿಗಳು ಮಾರ್ಮಿಕವಾಗಿ ಚಿತ್ರಿಸಿವೆ.

ಯಾವುದೇ ಕಾರಣದಿಂದ ಸಮಾಜ ಬದಲಾವಣೆಗೆ ಗುರಿಯಾಯಿತು ಎಂದರೆ ಅಲ್ಲಿ ಮಹಿಳೆಗೆ ಕಷ್ಟಗಳು ಎದುರಾಗುತ್ತವೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಪ್ರದಾಯ ಕುಟುಂಬಗಳಲ್ಲಿ ಮಹಿಳೆಗೆ ಹೆಚ್ಚಿನ ಸ್ಥಾನಮಾನ ಇಲ್ಲದೆ ಕುಟುಂಬದ ಒಳಗೇ ಬದುಕುವ ಸ್ಥಿತಿಯಲ್ಲಿರುತ್ತಾಳೆ. ಧಾರ್ಮಿಕ ನಂಬಿಕೆಗಳಲ್ಲಿ ಹೆಚ್ಚಾಗಿ ಮಹಿಳೆಯೇ ಶೋಷಣೆಗೆ ಒಳಗಾಗಬೇಕಾಗುತ್ತದೆ. ಬಡತನವಿರಲಿ, ಶ್ರೀಮಂತಿಕೆ ಇರಲಿ ಹೆಣ್ಣು ಪುರುಷನ ಅಧಿಕಾರದಲ್ಲಿ ಜೀವಿಸಬೇಕಾಗುತ್ತದೆ. ಆಧುನಿಕ ಜೀವನದಲ್ಲಿ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ಇದ್ದರೂ ಕುಟುಂಬದಲ್ಲಿ ಪುರುಷನ ಒಡೆತನವೇ ಹೆಚ್ಚಾಗಿರುತ್ತದೆ. ಆರ್ಥಿಕ ಸ್ವಾತಂತ್ರ್ಯವಿದ್ದರೂ ಮನೆ ಒಳಗೂ, ಹೊರಗೂ ಮಹಿಳೆ ಶೋಷಣೆಗೆ ಒಳಗಾಗುವುದು ತಪ್ಪುವುದಿಲ್ಲ. ಶೋಷಣೆಗೆ ಹಲವು ಮುಖಗಳಿವೆ. ಅವುಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಮಹಿಳೆಯೇ ಬಲಿಯಾಗುವ ಸಾಧ್ಯತೆಗಳಿರುತ್ತವೆ. ಹೀಗೆ ಆಲೋಚಿಸುವಾಗ ಸಮಾಜದಲ್ಲಿ ಕುಟುಂಬದಲ್ಲಿ ಮಹಿಳೆಗೆ ಸ್ಥಾನಮಾನಗಳೇ ಇಲ್ಲವೇ? ಎಂಬ ಪ್ರಶ್ನೆ ಎದುರಾಗುತ್ತದೆ. ಪುರುಷ ನಿರ್ಮಿತ ಅಧಿಕಾರದ ಒಳಗೆ ತಗ್ಗಿಬಗ್ಗಿ ನಡೆದರೆ ಅದೇ ಸ್ಥಾನ-ಮಾನ ಎಂದು ಒಂದು ಮಿತಿಯಲ್ಲಿ ಜೀವನ ಸಾಗಿಸಬೇಕು. ಸ್ವಾತಂತ್ರ್ಯವಿಲ್ಲದೆ ಪುರುಷನ ಅಧಿಕಾರದ ಒಳಗೇ ಬದುಕು ಸಾಗಿಸುವ ಮೂಲಕ ಸಮಾಧಾನಿಯಾಗಿರಬೇಕು.

ಕನ್ನಡ ಕಾದಂಬರಿಗಳಲ್ಲಿ, ಮಹಿಳೆಗೆ ಸ್ವಾತಂತ್ರ್ಯವಿದೆ ಎಂಬ ಕಲ್ಪನೆಯಿಂದ ರೂಪುಗೊಂಡದ್ದು ಇಲ್ಲ. ಅಧೀನವಾಗಿರುವ ಕಲ್ಪನೆಯೇ ಹೆಚ್ಚು. ಕುವೆಂಪು, ಮಾಸ್ತಿ, ಕಾರಂತ, ಗೊರೂರು ಮುಂತಾದವರು

[illegible]

[illegible]

[illegible]

ಮಹಿಳೆಯರನ್ನು ಕುರಿತು ಬರೆದಿದ್ದಾರೆ. ಮಹಿಳೆಯ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿದ್ದಾರೆ. ಆದರೆ ಪುರುಷನ ಅಧಿಕಾರದಲ್ಲಿ ಅಧೀನವಾಗಿಯೇ ಬದುಕಿ ತನ್ನ ಹಿರಿಮೆಯನ್ನು ಮರೆದಿದ್ದಾಳೆ. ನವ್ಯ ಕಾದಂಬರಿಗಳಲ್ಲಿ ಮಹಿಳೆ ತನ್ನ ಆಧುನಿಕ ಪ್ರಜ್ಞೆಯಿಂದ ಪುರುಷನಷ್ಟೇ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸುತ್ತಾಳೆ. ಪುರುಷನ ಅಧೀನದಲ್ಲಿ ಇರುವ ಪ್ರಸಂಗಗಳು ಬಂದರೂ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ. ಹೆಣ್ಣು-ಗಂಡಿನ ನಡುವಿನ ಸಂಘರ್ಷಕ್ಕೆ ಕಾರಣ ಅವರವರ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಹುಡುಕಾಟ. ದೇಸಾಯಿ ಅವರ ಸಮಕಾಲೀನ ನವ್ಯ ಕಾದಂಬರಿಕಾರರು ಗಂಡಿನ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಶೋಧಿಸಿದಷ್ಟು, ಹೆಣ್ಣಿನ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಶೋಧಿಸಲು ಹೋಗುವುದಿಲ್ಲ. ಹೆಣ್ಣನ್ನು ಭೋಗದ ಸರಕು ಎಂಬಂತೆ ಕಂಡಿರುವುದೇ ಹೆಚ್ಚು. ಈ ದೃಷ್ಟಿಯಿಂದ ದೇಸಾಯಿ ಅವರು ಚಿತ್ರಿಸಿರುವ ಕಾಮಿನಿ, ಡಾಲಿ, ಮಾಧವಿ, ಕುಂದಾ, ರೋಜಿ, ಶಿರೀನ್, ರಾಧಿಕಾ, ಲಿಝಿ, ರೇವತಿ, ರೋಜಾ, ಆ್ಯನ್ ಮುಂತಾದ ಮಹಿಳೆಯರು ಆಧುನಿಕ ಪ್ರಜ್ಞೆಯ ಸಂಕೇತಗಳಾಗಿ ನಿಂತಿದ್ದಾರೆ. ಪುರುಷನ ಎದುರು ತಮ್ಮ ಸಂಬಂಧಗಳಲ್ಲಿ ಸೋಲು ಗೆಲುವಿನ ನಡುವೆ ತಮ್ಮ ಆಯ್ಕೆ ಮತ್ತು ಜೀವನವನ್ನು ಗಂಭೀರವಾಗಿ ಪರಿಗಣಿಸಿ ಬದುಕುವ ಛಲ ಈ ಮಹಿಳೆಯರಲ್ಲಿದೆ. ದೇಸಾಯಿ ಅವರ ಕಾದಂಬರಿಗಳಲ್ಲಿ ಬರುವ ರಾಹುಲ, ಶೀತಲಕುಮಾರ್, ಶ್ರೇಯಾಂಸ, ಆ್ಯಡಂ ಮುಂತಾದವರು ತಮ್ಮ ತಮ್ಮ ಬದುಕಿನಲ್ಲಿ ಎದುರಾಗುವ ಮಹಿಳೆಯರ ಸ್ವಾತಂತ್ರ್ಯವನ್ನು, ಅವರ ಸ್ವಂತಿಕೆಯನ್ನು ತುಳಿಯಲು ಯತ್ನಿಸುವುದಿಲ್ಲ. ಹೆಣ್ಣಿನ ಆಯ್ಕೆ ಮತ್ತು ಬದುಕಿನ ಗುರಿ ಏನೆಂಬುದನ್ನು ಅರಿತು ಸಂಬಂಧಗಳನ್ನು ಬೆಳೆಸಲು ಯತ್ನಿಸುತ್ತಾರೆ. ಈ ಹಿನ್ನಲೆಯಲ್ಲಿ ಗಂಡು-ಹೆಣ್ಣಿನ ನಡುವಿನ ಸಂಘರ್ಷ ಇಲ್ಲಿ ಕುತೂಹಲಕಾರಿಯಾಗಿದೆ.

ಮುಕ್ತಿ

'ಮುಕ್ತಿ' ಕಾದಂಬರಿಯ ನಾಯಕ ಗೌರೀಶ ದುರ್ಬಲ. ಎರಡನೆಯವರ ಪ್ರಭಾವಕ್ಕೆ ಸಿಲುಕಿ ತನ್ನತನವನ್ನು ಉಳಿಸಿಕೊಳ್ಳಲು ಹೋರಾಟ ನಡೆಯಿಸಿದವ. ತನ್ನ ಹುಟ್ಟೂರಾದ ಸಿರ್ಸಿಯಿಂದ ಧಾರವಾಡಕ್ಕೆ ಕಾಲೇಜು ಕಲಿಯಲು ಬಂದ ಗೌರೀಶನಿಗೆ ತನ್ನೂರಿನವನೇ ಆದ ಸತ್ಯೇಂದ್ರನ ಮೂಲಕ ಶ್ರೀಕಾಂತನ ಪರಿಚಯವಾಗುತ್ತದೆ. ಮೊದಲ ಭೇಟಿಯಲ್ಲಿಯೇ ಶ್ರೀಕಾಂತನ ವ್ಯಕ್ತಿತ್ವ ಗೌರೀಶನನ್ನು ಬಲವಾಗಿ ಆಕರ್ಷಿಸುತ್ತದೆ. ಆದರೆ ಗೌರೀಶ ದುರ್ಬಲನಾಗಿರುವುದರಿಂದ ಶ್ರೀಕಾಂತನ ಸ್ಥಿರತೆಯಾಗಲಿ, ಉನ್ಮುಖತೆಯಾಗಲಿ ಮೂಲತಃ ಅವನ ಸ್ವಭಾವಕ್ಕೆ ಹೊರತಾದವುಗಳು. ಇದರಿಂದಾಗಿ ಈ ಹೊಸ ವಾತಾವರಣದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ತಾನಿರುವುದಕ್ಕಿಂತಲೂ ದುರ್ಬಲವಾಗಿ ಬಿಡುತ್ತಾನೆ. ಈ ಮಧ್ಯೆ ಶ್ರೀಕಾಂತನ ತಂಗಿ ಕಾಮಿನಿಯತ್ತ ಅವನ ಮನಸ್ಸು ಹರಿಯುತ್ತದೆ. ಆದರೆ ಅವಳ ಹಾಗೂ ತನ್ನ ಸಂಬಂಧವನ್ನು ಸ್ವತಂತ್ರವಾಗಿ ಬೆಳೆಯಿಸಿಕೊಂಡು ಬರುವ ಸಾಮರ್ಥ್ಯವಾಗಲಿ, ಅದಕ್ಕೆ ಬೇಕಾದ

ಮನುಷ್ಯ ಸ್ವಭಾವದ ವಾಸ್ತವಿಕ ಜ್ಞಾನವಾಗಲಿ ಅವನಲ್ಲಿರುವುದಿಲ್ಲ. ಇದೂ ಅಲ್ಲದೆ ಕಾಮಿನಿಯದು ತನ್ನ ಅಣ್ಣನ ಸ್ವಭಾವಕ್ಕೆ ತೀರಾ ವಿರುದ್ಧವಾದ ಸ್ವೈರವೃತ್ತಿಯ ಸ್ವಭಾವ. ಇದರಿಂದಾಗಿ ಗೌರೀಶನ ಜೀವನದಲ್ಲಿ ಬಗೆಹರಿಸಲಾಗದ ದುರಂತ ಸಮಸ್ಯೆಯೊಂದು ಹುಟ್ಟಿಕೊಳ್ಳುತ್ತದೆ. ಈ ಸಮಸ್ಯೆಯಿಂದ ಅವನು ಯಾತನೆಯನ್ನು ಅನುಭವಿಸುವಾಗಲೇ ಶ್ರೀಕಾಂತನಿಗೆ ಟಿ.ಬಿ. ತಗಲಿ ಗೌರೀಶನಿಂದ ಮಾನಸಿಕವಾಗಿ ದೂರ ಸರಿಯುತ್ತಾನೆ. ಮರಣವನ್ನು ಎದುರಿಸುವ ಪ್ರಶ್ನೆಯ ಎದುರಿಗೆ ಉಳಿದ ಎಲ್ಲ ಪ್ರಶ್ನೆಗಳೂ ಅವನಿಗೆ ಗೌಣವಾಗಿ ಬಿಡುತ್ತವೆ. ಇದು ಗೌರೀಶನನ್ನು ಧೃತಿಗೆಡಿಸಿದರೂ ಅವನಿಗೆ ತಿಳಿಯದಂತೆಯೇ ಅವನ ಬಿಡುಗಡೆಗೆ ನಾಂದಿಯಾಗುತ್ತದೆ. ಗೌರೀಶ ಮುಂಬಯಿಗೆ ಬರುತ್ತಾನೆ. ಮುಂಬಯಿಯಂತಹ ಮಹಾನಗರದಲ್ಲಿ ಸಹಜವಾಗಿ ದೊರಕುವ ಅನಾಮಧೇಯಿತ್ವ ಅವನ ಅಲ್ಪತನದ ಅರಿವಿಗೆ ಹೊಂದಿಕೊಂಡು ನೆಮ್ಮದಿಯನ್ನು ತರುವುದಾದರೂ ಶ್ರೀಕಾಂತನ ಪ್ರಭಾವ ಕಡಿಮೆಯಾಗುವುದಿಲ್ಲ. ತನ್ನ ಪ್ರತಿಯೊಂದು ವಿಚಾರದಲ್ಲಿ, ಅನಿಸಿಕೆಯಲ್ಲಿ ಅದರ ಛಾಯೆಯನ್ನು ಗುರುತಿಸಿ ಗೌರೀಶ ಯಾತನೆಗೊಳಗಾಗುತ್ತಾನೆ. ಶ್ರೀಕಾಂತ ಆತ್ಮಹತ್ಯೆ ಮಾಡಿಕೊಂಡಾಗ ಆ ಆತ್ಮಹತ್ಯೆ ಒಂದು ವಿಧದಿಂದ ತನ್ನ ಆತ್ಮಹತ್ಯೆಯೂ ಹೌದು ಎನ್ನುವಂತೆ "ಅಯ್ಯೋ ಶ್ರೀಕಾಂತ ನಾನೂ ಸತ್ತೆ" ಎಂದು ಕೂಗಿಕೊಳ್ಳುತ್ತಾನೆ. ಆದರೆ ಶ್ರೀಕಾಂತನ ಈ ಸಾವು ಅವನ ಬಿಡುಗಡೆಯ ಹಾದಿಯಲ್ಲಿ ಮಹತ್ವದ ಘಟನೆಯಾಗಿ ಪರಿಣಮಿಸುತ್ತದೆ.

ಗೌರೀಶ ಶ್ರೀಕಾಂತನ ತಂಗಿಯಾದ ಕಾಮಿನಿಯನ್ನು ಉತ್ಕಟವಾಗಿ ಪ್ರೀತಿಸುತ್ತಿರುತ್ತಾನೆ. ಪಟ್ಟಣದ ಆಧುನಿಕ ರೀತಿಯನ್ನು, ವೈಯಾರವನ್ನು ಹೊತ್ತಿದ್ದ ಕಾಮಿನಿ ಗೌರೀಶನ ಬದುಕಿನ ಚೈತನ್ಯದ ಕೇಂದ್ರಬಿಂದುವಾಗಿದ್ದಾಳೆ. ಗೌರೀಶನಿಗೆ ಬೇರೆ ಹೆಣ್ಣುಗಳು ಎಷ್ಟೇ ಹತ್ತಿರವಾದರೂ ಅವರಲ್ಲಿ ಕಾಮಿನಿಯಲ್ಲಿದ್ದಷ್ಟು ಚೈತನ್ಯ, ಉತ್ಸಾಹ, ಚಟುವಟಿಕೆಗಳಿಲ್ಲದ್ದರಿಂದ ಕಾಮಿನಿ ಗೌರೀಶನನ್ನು ಇಷ್ಟಪಡದಿದ್ದರೂ ಅವಳ ಹಿಂದೆ ಹೋಗುತ್ತಾನೆ. ಅವಳ ಮೂಲಕ ತನ್ನ ಬದುಕನ್ನು ತುಂಬಿಕೊಳ್ಳಲು ಹೆಣಗುತ್ತಾನೆ. ಆದರೆ ಕಾಮಿನಿಗೆ ಬೇಕಾದುದು ತನ್ನನ್ನು ಆಳಬಲ್ಲ, ತನ್ನ ಸ್ವೈರವೃತ್ತಿಯನ್ನು ನಿಯಂತ್ರಿಸಿ ಅಂಕಿತದಲ್ಲಿಟ್ಟುಕೊಳ್ಳಬಲ್ಲ ನಿಜವಾದ ಗಂಡು. ಪರಪ್ರಭಾವಕ್ಕೆ ಸಿಕ್ಕು ಹತಪೌರುಷವಾದ ಭಾವಜೀವಿಯಲ್ಲ. ಇದರ ಮಸುಕಾದ ಕಲ್ಪನೆ ಗೌರೀಶನಿಗೂ ಇದೆ.

ಶ್ರೀಕಾಂತನ ಮನೆಯಲ್ಲಿ ಬೆಳೆದುನಿಂತ ಕಾಮಿನಿಯನ್ನು ಮೊದಲು ಕಂಡುಕೊಂಡವರು ಗುರುನಾಥ, ಗೋಪಾಲ ಇವರು. ಆ ಹುಡುಗಿಯ ಬಗ್ಗೆ ಮಾಡಿದ ಕಾಮೆಂಟ್ಸ್‌ದಿಂದಲೇ ಇವನ ಅಸೂಯೆ ಹುಟ್ಟಿ ಯಥಾ ಪ್ರಕಾರ ಅವರ ಕಣ್ಣಿನಲ್ಲಿ ಅವಳನ್ನು ಮೊದಲ ಬಾರಿಗೆ ನೋಡಿ ಉದ್ಗರಿಸುತ್ತಾನೆ. "ಮೊದಲನೆಯ ಸಲ ಕಾಮಿನಿಯನ್ನು ಹೊಸ ಬೆಳಕಿನಲ್ಲಿ ಕಂಡೆ. ಹದಿನೈದರ ಹೊಸತಿಲಲ್ಲಿ ಅರಳುತ್ತಿರುವ ಹೂವು ಕಾಮಪುಷ್ಪ!"[೨] ತನ್ನ ಸ್ವಂತ ವ್ಯಕ್ತಿತ್ವವನ್ನು ಬಳಸಿಕೊಂಡು ಪ್ರೀತಿಸುವ ಛಾತಿ ಇವನಿಗಿಲ್ಲವಾದ್ದರಿಂದ, ಗುರುನಾಥ, ಗೋಪಾಲರು ಕ್ರಮವಾಗಿ ಕಾಮಿನಿಯ ಡ್ರಾಯಿಂಗ್ ಮಾಸ್ಟರ್, ಕಾಲೇಜು ಗೆಳೆಯರು,

ಶಿವರಾಮ ಕುಲಕರ್ಣಿ, ಸಂಸ್ಕೃತ ಪ್ರೊಫೆಸರು, ಆಚಾರ್ಯ ಕಡೆಗೆ ರಾಮಗೋಳೆ ಇವರೊಡನೆ ನಡೆಸಿದ ಸ್ನೇಹವನ್ನು ವರದಿ ಮಾಡಿ ಅಸೂಯೆಯಿಂದ ನರಳುತ್ತಿರುತ್ತಾನೆ. ಒಂದು ಸಾರಿ ಗೋಪಾಲ ನಿರ್ಭಿಡೆಯಿಂದ "ಕಾಮಿನಿ, ನೀನು ಡಾನ್ಸ್ ಯಾಕೆ ಕಲಿಯುವುದಿಲ್ಲ?" "...ನಿನ್ನಲ್ಲಿ ಆ ಕಲೆ ಇದೆ ಎಂದು ನಾನು ಎದೆ ತಟ್ಟಿ ಹೇಳಬಲ್ಲೆ" ...ಗೋಪಾಲನಂತೆ ನನಗೇಕೆ ಸ್ಪಷ್ಟವಾಗಿ ಸ್ತುತಿ ಮಾಡಲು ಬರುವುದಿಲ್ಲ?"[೨] ಗೋಪಾಲನೆಡೆಗೆ ಅವಳು ಆಕರ್ಷಿತಳಾಗಿರುವಳೇ? ಎಂದು ಸಂಶಯಪಡುತ್ತಿರುತ್ತಾನೆ. ಅಲ್ಲದೆ ಪ್ರೇಮವನ್ನು ಗೂಢಚರ್ಯೆಯೆಂದು ಅಪಾರ್ಥ ಮಾಡಿಕೊಂಡು ಕಾಮಿನಿ ಏನು ಮಾಡುತ್ತಾಳೆ. ಯಾರೊಡನೆ ಮಾತನಾಡುತ್ತಾಳೆ ಎಂದು ನೋಡಲು ಪೀರೇಡುಗಳನ್ನು ತಪ್ಪಿಸಿ ಹೋಗುತ್ತಿರುತ್ತಾನೆ. ಅವಳ ಪ್ರೀತಿಯು ಗೌರೀಶನ ಕಡೆ ಹರಿಯುವ ಸಂಭವವು ಕಡಿಮೆಯಾದ ಹಾಗೆ, ಅವಳ ಸಂಪೂರ್ಣ ಅವನತಿಯನ್ನು ನೋಡುವುದರಲ್ಲಿಯೇ ತನ್ನ ವ್ಯಕ್ತಿತ್ವದ ಸಮರ್ಥನೆಯಿದೆ ಎಂದು ಅಂದುಕೊಳ್ಳುತ್ತಾನೆ. ಕಾಂ. ಆಚಾರ್ಯ ಗಾಂಗಲರವರೊಡನೆ ಕಾಮಿನಿ ಸಂಬಂಧ ಬೆಳೆಸಿದಾಗ ಅವನ ಪವಿತ್ರ ಪ್ರೇಮದ ಕಲ್ಪನೆ ನಾಶವಾಗಿ ದ್ವೇಷ, ಸೇಡಿನ ಭಾವನೆ ಉರಿದೇಳುತ್ತದೆ.

ಸ್ವತಃ ಅಣ್ಣನಾದ ಶ್ರೀಕಾಂತನಾಗಲಿ, ತಾಯಿಯಾದ ಸರಲಾಬಾಯಿಯವರಾಗಲಿ ಒಂದು ದಿನಕ್ಕೂ ಅವಳ ಸ್ವತಂತ್ರ ವರ್ತನೆಯ ಬಗೆಗೆ ಪ್ರಶ್ನಿಸುವುದಿಲ್ಲ. ಆಕೆಯೂ ಅವರಿಗೆ ಹೇಳುವುದಿಲ್ಲ. ಗೌರೀಶ ಶ್ರೀಕಾಂತನೆದುರು ತನ್ನ ಪ್ರೀತಿಯ ಬಗ್ಗೆ ಹೇಳಿಕೊಂಡಾಗ ಸ್ವತಃ ಅಣ್ಣನಾದ ಶ್ರೀಕಾಂತನಿಗೆ ತಂಗಿಯಾದ ಕಾಮಿನಿಯ ಬಗೆಗೆ ಒಳ್ಳೆಯ ಅಭಿಪ್ರಾಯವಿಲ್ಲ. "ಕಾಮಿನಿ ನನ್ನ ತಂಗಿಯಾಗಿದ್ದರೂ ಅವಳ ವಿಷಯದಲ್ಲಿ ನನಗೆ ಅಷ್ಟೇನೂ ಪ್ರೀತಿಯಿಲ್ಲ, ಆಸ್ಥೆಯೂ ಇಲ್ಲ... ಹಾಗೆ ನೋಡಿದರೆ ನಮ್ಮ ಮನೆಯಲ್ಲಿ ಈ ಸ್ವಭಾವದ ಹುಡುಗಿ ಹೇಗೆ ಹುಟ್ಟಿ, ಬೆಳೆದಳೆಂಬುದೇ ಆಶ್ಚರ್ಯ..."[೩] ಎನ್ನುತ್ತಾನೆ. ಇಲ್ಲಿ ತಂದೆಯ ಪ್ರತೀಕವಾಗಿ ಸ್ನೇಹಿತ ಶ್ರೀಕಾಂತನಿದ್ದಾನೆ. ಅದಕ್ಕೋಸ್ಕರ ತನ್ನ ತಂಗಿಯ ಸ್ವೈರ ವೃತ್ತಿಯಿಂದ ತನ್ನ ಸ್ನೇಹಿತನ ಬಾಳು ಹಾಳಾಗದಿರಲೆಂದು ಎಚ್ಚರಿಕೆಯನ್ನು ಕೊಡುತ್ತಾನೆ. ಆದರೆ ಕಾಮಿನಿಯ ಆಕರ್ಷಣೆಗೆ ಒಳಗಾದ ಗೌರೀಶ ಅವಳ ವೈಚಾರಿಕ ಬೆಳವಣಿಗೆಗೆ ಮಾರ್ಗದರ್ಶನ ಮಾಡಬೇಕೆಂಬ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುತ್ತಾನೆ. ಇವನ ಪಿತೃರೂಪಿ ಅಧಿಕಾರವನ್ನಾಗಲಿ, ಆಕ್ರಮಣಶೀಲತೆಯನ್ನಾಗಲಿ ಒಪ್ಪದೇ ನಿರಾಕರಿಸುವ ಕಾಮಿನಿಗೆ ತನ್ನದೇ ಆದ ಆಂತರಿಕ ಜಗತ್ತಿದೆ ಎನ್ನುವುದನ್ನು ಕಾದಂಬರಿ ಸೂಚಿಸುತ್ತದೆ.

ಕೊನೆಯಲ್ಲಿ ಕಮ್ಯುನಿಸ್ಟ್ ಪಾರ್ಟಿ ಸೇರಿ ಆ ಚಿಂತನೆಗೆ ಒಳಗಾಗಿ ತನ್ನ ಬದುಕನ್ನೇ ಛಿದ್ರಗೊಳಿಸಿ ಕೊಳ್ಳುತ್ತಾಳೆ. ತನ್ನ ತಪ್ಪಿನ ಅರಿವಾಗಿ ಗೌರೀಶನನ್ನು ಹುಡುಕಿಕೊಂಡು ಬಂದು ಲಗ್ನವಾಗಲು ಕೇಳುತ್ತಾಳೆ. "ಗೌರೀಶ, ಈಗ ನಿನ್ನಲ್ಲಿ ಸಾಮರ್ಥ್ಯ ಬಂದಿದೆ. ನೀನು ಹೋದಲ್ಲಿ ಬರುವೆ, ನೀನು ಹೇಳಿದ್ದು ಮಾಡುವೆ... ನಿನ್ನ ದಾಸಿಯಾಗಿ, ನನ್ನನ್ನು ಉಳಿಸು. ಶ್ರೀಕಾಂತನ ಸಲುವಾಗಿಯಾದರೂ..."[೪] ಎಂದು ಕೇಳಿಕೊಂಡಾಗ ಗೌರೀಶ ತಿರಸ್ಕರಿಸುತ್ತಾನೆ. ಶ್ರೀಕಾಂತನ ಮರಣದ ನಂತರ ಕಾಮಿನಿಯ ಸಂಪೂರ್ಣ ಅಧಃ

ಪತನವಾದಾಗ ಅದಕ್ಕೆ ಅವಳ ಸ್ವಭಾವದಂತೆ ತನ್ನ ವರ್ತನೆಯೂ ಕೆಲಮಟ್ಟಿಗೆ ಕಾರಣ ಎನ್ನುವುದನ್ನು ಅವನು ಒಪ್ಪುವುದಿಲ್ಲ. ತಾನು ದುರ್ಬಲ ಕಾಮಿನಿಯನ್ನು ಉಳಿಸುವ ಶಕ್ತಿ ತನ್ನಲ್ಲಿಲ್ಲ ಎನ್ನುವ ಅರ್ಧ ಸತ್ಯದಲ್ಲಿ ಸಮಾಧಾನ ಹೊಂದುತ್ತಾನೆ.

ಕಾಮಿನಿಯ ಪ್ರೀತಿಯಿಂದ ವಂಚಿತನಾದ ಸಂದರ್ಭದಲ್ಲಿ 'ಸ್ತ್ರೀಯ ಸಹಾನುಭೂತಿ ಬೇಕು ಎಂಬ ಹಂಬಲ, ಕಾತರ... ಈ ಎರಡೂ ಭಾವನೆಗಳಿಗೆ ಉತ್ತರ ರೂಪವಾಗಿ ಬಂದವಳು ಡಾಲಿ!' ಅವಳ ಸಾನಿಧ್ಯದಲ್ಲಿ ಒಂದು ರೀತಿಯ ಸ್ಥಿರತೆಯನ್ನು ಪಡೆಯುತ್ತಾನೆ. ಅವರೀರ್ವರಲ್ಲಿ ಭಾವೋದ್ವೇಗವಿಲ್ಲದ ಸಂಬಂಧವೊಂದು ಬೆಳೆಯುತ್ತದೆ. ನಮ್ಮೀರ್ವರ ಸಂಬಂಧದಲ್ಲಿ ಯಾವ ತರದ ಉದ್ದೇಶವಿಲ್ಲ, ಉದ್ವೇಗವಿಲ್ಲ, ಬಂಧನವಿಲ್ಲ, ತೊಡಕಿಲ್ಲ ಎಂದು ಸ್ವತಃ ಗೌರೀಶನೇ ಹೇಳಿಕೊಳ್ಳುತ್ತಾನೆ. ಗೌರೀಶ ತನ್ನ ಹಾಗೂ ಡಾಲಿಯ ಸಂಬಂಧದ ಬಗ್ಗೆ ಮತ್ತೊಂದು ಮಾತನ್ನು ಹೇಳುತ್ತಾನೆ. ''ಇಂಥ ವ್ಯಕ್ತಿಯನ್ನು ಮುಂಬಯಿಯಲ್ಲಲ್ಲದೆ ಮತ್ತೆಲ್ಲಿ ಸಂಧಿಸುವುದು ಶಕ್ಯ?... ಇಂಥ ಸಂಬಂಧ ಮುಂಬಯಿಯಲ್ಲಲ್ಲದೆ ಮತ್ತೆಲ್ಲಿಯೂ ಇಷ್ಟು ಸರಾಗವಾಗಿಯೂ, ನಿರಾಗಸವಾಗಿಯೂ, ತಿಳಿಯಾಗಿ ಸಾಗುವುದು ಶಕ್ಯವಿಲ್ಲ... ಸಣ್ಣ ಊರುಗಳಲ್ಲಿ ನಮ್ಮ ಸಂಬಂಧದ ವಿಷಯ ಜನರ ಹರಕು ಬಾಯಲ್ಲಿ ಸಿಕ್ಕು ಹೊಲಸಾಗಬಹುದಿತ್ತು...''[೫] ಎನ್ನುತ್ತಾನೆ. ಆರಂಭದಲ್ಲಿ ಕೇವಲ ದೈಹಿಕ ಮಟ್ಟದ್ದು ಮಾತ್ರ ಆಗಿದ್ದ ಇವರ ಸಂಬಂಧ ಕ್ರಮೇಣ ಮಾನಸಿಕವಾಗಿ ಪರಿವರ್ತನೆ ಹೊಂದುತ್ತದೆ. ಇಲ್ಲಿ ಕಾಮಿನಿ ಎಷ್ಟು ಅಗಮ್ಯಳೋ, ಡಾಲಿ ಅಷ್ಟೇ ಸುಲಭಗಮ್ಯಳು. ಹೀಗಾಗಿ ಡಾಲಿಯ ಸಂಬಂಧ ಹಾಗೂ ಸಾಹಚರ್ಯದ ಮೂಲಕ ಗೌರೀಶ ಸದೃಢನಾದ ವ್ಯಕ್ತಿಯಾಗಿ ಬೆಳೆಯುತ್ತಾನೆ. ಅವನ ನಿಜವಾದ ಪ್ರೀತಿ ಡಾಲಿಯ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ.

''ಡಾಲಿ ನಿನ್ನ ಮೂಲಕ ನನ್ನ ಹೃದಯಕ್ಕೆ ಅರ್ಥ ಹತ್ತುತ್ತಿದೆ. ನೀನು ಕೊಟ್ಟ ಕಣ್ಣಿನ ಮೂಲಕ ನನ್ನ ಹೃದಯದ ಪರಿಚಯ ನನಗಾಗಿದೆ. ಆದುದರಿಂದಲೇ ಕಾಮಿನಿ ನನಗೋಸ್ಕರ ಅಲ್ಲ, ನಾನು ಅವಳಿಗೋಸ್ಕರ ಅಲ್ಲ. ಅವಳ ದಾರಿ ಬೇರೆ, ನನ್ನ ದಾರಿ ಬೇರೆ ಎಂಬ ತಿಳುವಳಿಕೆ ಬಂದದ್ದು ನಿನ್ನ ಮೂಲಕವೇ. ನೀನು ಕೊಟ್ಟ ಹೃದಯ ಸ್ಥಿರತೆಯ ಮೂಲಕವೇ ಅವಳ ಬಗ್ಗೆ ಪಾಪವೆನಿಸುತ್ತದೆ. ಕರುಣೆ ಮಿಡಿಯುತ್ತದೆ. ಆದರೆ ಅವಳನ್ನು ಉದ್ಧಾರಮಾಡುವ ಕಾರ್ಯ ನನ್ನದಲ್ಲ. ಅವಳ ಉದ್ಧಾರಕರ್ತ ಬಂದಾನು ಕೆಲವು ದಿನಗಳಲ್ಲಿ ಯಾರಿಗೆ ಗೊತ್ತು? ಅಥವಾ ಅವಳಲ್ಲಿಯ ವಿಶಿಷ್ಟ ಚೈತನ್ಯ ಅವನನ್ನು ಶೋಧಿಸಿ ತಂದೀತು.''[೬] ಎಂದು ಹೇಳುವುದರ ಮುಖಾಂತರ ಪೂರ್ಣ ರೂಪದ ಅಸ್ತಿತ್ವವಾದಿ ಪಾತ್ರವಾಗಿ ಬೆಳೆದು ನಿಲ್ಲುತ್ತಾನೆ. ಗಂಡಿನಂತೆ ಸ್ವೇಚ್ಛೆಯಿಂದ ಬದುಕುವ ಕಾಮಿನಿಗೆ ಪ್ರೇಮ, ಕಾಮ ಇವುಗಳ ಒಳ ಅರ್ಥಗಳ ತುಡಿತ ಅನಿವಾರ್ಯವಾಗುವುದಿಲ್ಲ. ಪ್ರೇಮ, ಕಾಮಗಳನ್ನು ಆಟದ ಗೊಂಬೆಗಳಂತೆ ಬಳಸುವ ಈಕೆಗೆ ಬದುಕು ಗಂಭೀರ ಎಂದು ಅನ್ನಿಸುವುದೇ ಇಲ್ಲ. ಹೀಗಾಗಿ ಪ್ರಾರಂಭದಿಂದ ಕೊನೆಯವರೆಗೆ

ಗೌರೀಶ ಕಾಮಿನಿಯನ್ನು ಪಡೆಯಬೇಕೆಂಬ ಹಂಬಲ ತೀವ್ರವಾಗಿದ್ದರೂ ಆಕೆ ಅದನ್ನು ವಿರೋಧಿಸುತ್ತಲೇ ಬರುತ್ತಾಳೆ. ಹೀಗಾಗಿ ಗೌರೀಶ ತನ್ನ ಬದುಕಿಗೆ ಅರ್ಥವನ್ನು ತಂದುಕೊಟ್ಟಂತೆ ಡಾಲಿಯನ್ನೇ ತನ್ನ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ.

ಈ ಕಾದಂಬರಿಯಲ್ಲಿ ಬರುವಂಥ ಪ್ರತಿಯೊಂದು ಪಾತ್ರಗಳು ತಮ್ಮದೇ ಆದ ರೀತಿಯಲ್ಲಿ ಬದುಕಿನ ನೆಲೆಯನ್ನು ಕಂಡುಕೊಳ್ಳುವುದಕ್ಕೋಸ್ಕರ ಒಂದಿಲ್ಲದ ಒಂದು ರೀತಿಯಲ್ಲಿ ಸಂಘರ್ಷಕ್ಕೆ ಒಳಗಾಗಿವೆ. ಗೌರೀಶನ ತಂದೆ-ತಾಯಿಗಳಿಗೆ ತಮ್ಮ ಮಗ ಚೆನ್ನಾಗಿ ಓದಿ, ನೌಕರಿ ಮಾಡಬೇಕೆಂಬ ಆಸೆ. ಆದರೆ ಇವನ ಆಸಕ್ತಿಯೆಲ್ಲಾ ಪ್ರೀತಿ, ಪ್ರೇಮದ ಕಡೆಗೆ ವಾಲುತ್ತದೆ. ಈ ವಿಷಯ ಗೌರೀಶನ ತಂದೆ-ತಾಯಿಗಳಿಗೆ ತಿಳಿದು ಅವರ ಉಪದೇಶ ಶುರುವಾಗಿರುತ್ತದೆ. "ಈಗ ಸಿನಿಮಾ, ನಾಟಕಾ ನೋಡಿ, ಕತೆ-ಕಾದಂಬರಿ ಓದಿ ಹುಡುಗರ ತಲೆ ಕೆಟ್ಟಿವೆ! ಜಾತಿ-ಧರ್ಮ, ಮನೆತನ ಇವುಗಳ ಬಗ್ಗೆ ಆದರ-ಅಭಿಮಾನ ಎಲ್ಲ ಹೋಗಿವೆ" ಎಂದು ಹೇಳುವುದರ ಮುಖಾಂತರ ಅವನ ಪ್ರೀತಿಯ ವಿಷಯಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ. "ನಾನು ಹೇಳಿದಂತೆ ನೀನು ಕೇಳಿದರೇನೇ ನೆಟ್ಟಗೆ... ಇಲ್ಲದಿದ್ದರೆ ನಿನಗೆ ತಕ್ಕ ಶಾಸನ ಮಾಡದೆ ಬಿಡಲಾರೆ..." ಎಂದು ಅವನ ತಂದೆ ಬೆದರಿಕೆಯನ್ನು ಹಾಕುತ್ತಾರೆ. ಸಾಂಪ್ರದಾಯಿಕವಾದ ಆಲೋಚನೆಗಳುಳ್ಳ ಗೌರೀಶನ ತಂದೆ-ತಾಯಿಯವರಿಗೆ ಗೌರೀಶನ ಮನಸ್ಸಿನ ವಿಚಾರಗಳು ಅವರಿಗೆ ತಿಳಿಯುವುದಿಲ್ಲ. ಬದಲಾಗಿ ಮದುವೆಯಾಗುವಂತೆ ಒತ್ತಡವನ್ನು ಹೇರುತ್ತಾರೆ. ಇದು ಗೌರೀಶನಿಗೆ ಧಾರವಾಡ ಬಿಟ್ಟು ಮುಂಬೈಗೆ ಹೋಗುವುದಕ್ಕೆ ಪ್ರೇರೇಪಿಸುತ್ತದೆ.

ಇತರ ಸ್ತ್ರೀಪಾತ್ರಗಳಲ್ಲಿ ರೋಹಿಣಿ, ಶಶಿಕಲಾ, ಮೇರಿ ಈ ಮೂವರು ಪೂರಕವಾಗಿ ಬರುತ್ತಾರೆ. ರೋಹಿಣಿ ಶ್ರೀಕಾಂತನನ್ನು ಪ್ರೀತಿಸಿ ಆತನನ್ನೇ ಪಡೆಯಬೇಕೆಂಬ ಹಂಬಲ ಇರುವಂಥವಳು. ಆದರೆ ಶ್ರೀಕಾಂತ ಇವಳನ್ನು ಆ ಅರ್ಥದಲ್ಲಿ ಪ್ರೀತಿಸುತ್ತಿರುವುದಿಲ್ಲ. ಅದೇ ರೀತಿ ಶಶಿಕಲಾ ಗೌರೀಶನನ್ನು ಪಡೆಯಬೇಕೆಂಬ ಹಂಬಲ ಇರುವಂಥವಳು. ಆದರೆ ಗೌರೀಶ ಅವಳನ್ನು ಒಪ್ಪಿಕೊಳ್ಳದೆ ತಿರಸ್ಕರಿಸುತ್ತಾನೆ. ಆದರೆ ಮೇರಿ ಮಾತ್ರ ಈ ಕಾದಂಬರಿಯಲ್ಲಿ ಸ್ವಲ್ಪ ಸಮಯದ ಪ್ರವೇಶ ಪಡೆದರೂ ಗಂಭೀರ ಆಲೋಚನೆಯತ್ತ ಗಮನ ಸೆಳೆಯುತ್ತಾಳೆ. ಶ್ರೀಕಾಂತನಿಗೆ ಮೇರಿ ಅನಿವಾರ್ಯವಾಗುವುದು ಬದುಕಿನ ಸತ್ಯವೊಂದರ ಪರಿಚಯವಾದಂತಾಗುತ್ತದೆ. ಶ್ರೀಕಾಂತನ ಮೇಲೆ ಮೇರಿ ಎಷ್ಟು ಪ್ರಭಾವ ಬೀರಿದ್ದಳೆಂದರೆ ಅವನ ಸೈದ್ಧಾಂತಿಕ ವ್ಯಕ್ತಿತ್ವವೆಲ್ಲಾ ಪುಡಿಪುಡಿಯಾಗುವಷ್ಟು. ಬದುಕು ಸಿದ್ಧಾಂತಗಳನ್ನು, ಆದರ್ಶಗಳನ್ನು ತಳ್ಳಿ ಸ್ಫುರಿಸುತ್ತದೆ ಎಂಬುದಕ್ಕೆ ಮೇರಿ ಒಳ್ಳೆಯ ಉದಾಹರಣೆಯಾಗುತ್ತಾಳೆ.

ಹೀಗೆ ಗೌರೀಶನ ಬದುಕಿನ ಹುಡುಕಾಟದಲ್ಲಿ ಪಾಲ್ಗೊಂಡ ಅನೇಕ ಪಾತ್ರಗಳು ತಮ್ಮತನವನ್ನುಳಿಸಿ ಕೊಂಡೇ ಗೌರೀಶನೊಂದಿಗೆ ಸ್ಪಂದಿಸುತ್ತವೆ. ಗೌರೀಶ ಈ ಕಾದಂಬರಿಯ ಪಾತ್ರಗಳ ಮುಖಾಂತರ ಒಂದರ್ಥದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ.

ವಿಕ್ಷೇಪ

ಶಾಂತಿನಾಥ ದೇಸಾಯಿಯವರ ಕಥಾಸಾಹಿತ್ಯದ ತಾತ್ವಿಕತೆಗೆ ಬೆನ್ನೆಲುಬಾಗಿ ಕೇಂದ್ರ ಪಾತ್ರಗಳ 'ಉದ್ವಿಗ್ನತೆ', ವಿಕ್ಷಿಪ್ತತೆಗಳು ನಿಲ್ಲುತ್ತವೆ. ಬುದ್ಧಿವಂತನೂ, ರೂಪವಂತನೂ, ಹಣಕಾಸಿನ ಅನುಕೂಲವುಳ್ಳವನೂ ಆದ ರಾಹುಲನಿಗೆ ತನ್ನ ಕೈಯಳತೆಯಲ್ಲಿ ಸಿಗುವ ಬದುಕಿನ ಬಗೆಗೆ, ಅದು ದೊರಕಿಸಿಕೊಡುವ ಸುಖಸವಲತ್ತುಗಳ ಬಗೆಗೆ ಆಸಕ್ತಿಯಿಲ್ಲ. ಈ ಅನಾಸಕ್ತಿ ಇದ್ದೂ ಮಾನವೀಯ ಸಂವೇದನೆಗಳ ಜೀವಂತ ಕ್ಷಣಗಳಿಗೆ ತನ್ನನ್ನು ತಾನು ಕೊಟ್ಟುಕೊಳ್ಳುವಲ್ಲಿಯೇ ರಾಹುಲನ ವಿಕ್ಷಿಪ್ತ ವರ್ತನೆಗಳಿಗೆ ಅರ್ಥ ಒದಗುತ್ತದೆ. ಹಾಗಾಗಿ ರಾಹುಲನಂಥ ವ್ಯಕ್ತಿಗಳಿಗೆ ಅಸ್ಪಷ್ಟ ಆಕಾರಹೀನ ಭವಿಷ್ಯವು ಇನ್ನಿಲ್ಲದ ತಲ್ಲಣಗಳನ್ನು ವರ್ತಮಾನದ ಕ್ಷಣಗಳಲ್ಲಿ ಹುಟ್ಟು ಹಾಕುತ್ತದೆ.

ವಿಕ್ಷೇಪದ ನಾಯಕ ರಾಹುಲ ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡು ಮಾಂಸಿಯ ಆರೈಕೆಯಲ್ಲಿ ಬೆಳೆದವನು. ಕಾದಂಬರಿಯ ಪ್ರಾರಂಭದ ವೇಳೆಗೆ ಅವನು ಮುಂಬಯಿಯಲ್ಲಿ ವಿದ್ಯಾಭ್ಯಾಸ ನಡೆಸಿರುವ ಬುದ್ಧಿವಂತ, ಅತ್ಯಾಧುನಿಕ ಯುವಕ. ಜಗತ್ತೆಲ್ಲ ಬಿಕೋ ಎನ್ನಿಸಿ ತನಗೆ ಎಲ್ಲೂ ನೆಲೆಯಿಲ್ಲ ಎಂದು ಕುದಿಯುವ ಇವನ ಹೋರಾಟವೆಲ್ಲ ಅರ್ಥಪೂರ್ಣ ಬದುಕಿನ ಅನ್ವೇಷಣೆಯಾಗಿದೆ. ಹೃದಯದಲ್ಲಿ ಒಬ್ಬಂಟಿಯಾದ ಇವನು ಮಾಧವಿ, ಶಿರೀನ್, ವೈದೇಹಿ, ಕುಂದಾ, ರಣಜಿತ, ಅರವಿಂದ, ಪ್ರೊಫೆಸರ್ ಇವರುಗಳ ವರ್ತುಲದಲ್ಲಿ ತನ್ನ ವಿಚಾರಗಳನ್ನು, ಕನಸುಗಳನ್ನು ಚಿಮ್ಮಿಸುತ್ತಾ ಬದುಕುತ್ತಾನೆ.

ಮೊದಲಿಗೆ ಮಾಧವಿಯನ್ನು ತನ್ನ ಯೋಗ್ಯತೆಗೆ ತಕ್ಕವಳಾದವಳೆಂದು ಸಂತೃಪ್ತಿಯನ್ನು ಹೊಂದಿದ್ದ ರಾಹುಲ, ಅದೇ ಮಾಧವಿ ತನ್ನನ್ನು ಭವಿಷ್ಯದಲ್ಲಿ ಇಲ್ಲವಾಗಿಸಬಹುದೆಂಬ ಆತಂಕಕ್ಕೆ ಈಡಾಗುತ್ತಾನೆ. ಮಾಧವಿ ಕಕ್ಕನ ಎಲ್ಲವನ್ನೂ ನುಂಗಬಲ್ಲ ಆತ್ಮವಿಶ್ವಾಸ, ಆಕೆಯ ತಾಯಿಯ ಎಲ್ಲವನ್ನು ಕಬಳಿಸಬಲ್ಲ ದೇಹಸಂತುಷ್ಟಿ, ಈ ಪರಿಸರದಲ್ಲಿ ಬೆಳೆದ ಮಾಧವಿ ತನ್ನ ಅಂತಸ್ಸತ್ವವನ್ನು ಅರಗಿಸಿ ಕುಡಿದಾಳೆಂಬ ಕಾರಣದಿಂದ ರಾಹುಲ ಮಾಧವಿಯನ್ನು ನಿರಾಕರಿಸುತ್ತಾನೆ. ಹೀಗೆ ಮಾಧವಿಯನ್ನು ನಿರಾಕರಿಸಲು ತಾರ್ಕಿಕ ಕಾರಣವೊಂದನ್ನು ಪ್ರೊ. ವಿಲಿಯಮ್ಸ್‌ರೊಂದಿಗಿನ ಚರ್ಚೆಯ ಮೂಲಕ ಆತ ಕಂಡುಕೊಳ್ಳುತ್ತಾನೆ. ಹಣಕೇಂದ್ರಿತವಾದ ಪರಿಸರದ ಪ್ರಭಾವಕ್ಕೊಳಗಾದ ಮಾಧವಿ ತನಗೆಂದೂ ಸಂಗಾತಿಯಾಗಲಾರಳೆಂಬುದನ್ನು ರಾಹುಲ ಕಂಡುಕೊಳ್ಳುತ್ತಾನೆ. ಆದರೆ ವ್ಯಕ್ತಿ ಸಂಬಂಧ ಮೊಳೆಯಲು ಬೇಕಾದ ಆತ್ಮಪ್ರೀತಿಗೆ ಅತ್ಯಗತ್ಯವಾದ ಕೇಂದ್ರ ಯಾವುದು ಎಂಬುದರ ಬಗ್ಗೆ ರಾಹುಲ ಗೊಂದಲಕ್ಕೊಳಗಾಗುತ್ತಾನೆ. "ಯೋಗಿಗಳಿಗೆ ಸಾಧ್ಯವಾಗುವ ವಕ್ತ್ಯಾತೀತ ಕೇಂದ್ರದೊಂದಿಗಿನ ಸಂಪರ್ಕ ರಾಹುಲನಂತವರಿಗೆ ಸಾಧ್ಯವಿಲ್ಲ."[೭] ಗಂಡು ಹೆಣ್ಣಿನ ಸಂಬಂಧದಲ್ಲಿ ಆ ಕೇಂದ್ರ ದೊರಕುವುದೇ ಎಂಬ ಪ್ರಶ್ನೆ ರಾಹುಲನದು. ಮಾಧವಿಯನ್ನು ಮದುವೆಯಾದರೆ ತನ್ನ ಉದ್ಧಾರವಾಗುವುದೇ? ಎಂಬ ಪ್ರಶ್ನೆಯನ್ನೆತ್ತುವ ರಾಹುಲನಿಗೆ ಉದ್ಧಾರವೆಂದರೇನು? ಎಂಬುದು

ನಿಜಕ್ಕೂ ತನಗೆ ಗೊತ್ತಿಲ್ಲವೆಂದು ಒಪ್ಪಿಕೊಳ್ಳುವ ಪ್ರಾಮಾಣಿಕತೆಯಿದೆ. ರಾಹುಲನ ಈ ಅಹಂನಿಷ್ಠ ಆಲೋಚನೆಗಳೇ ಉತ್ತರ ಕಾಣದ ಪ್ರಶ್ನೆಗಳಾಗಿ, ಆತನ ಬದುಕು ಚುಕ್ಕಾಣಿ ಇಲ್ಲದ ನಾವೆಯಂತೆ ಆಗಿಬಿಡುತ್ತದೆ. ಈ ಅಹಂಭಾವವನ್ನು ಮಾಧವಿ, ಕುಂದಾರೊಂದಿಗಿನ ಸಂಬಂಧದಲ್ಲಿ ತೃಪ್ತಿಪಡಿಸಿಕೊಳ್ಳುತ್ತಲೇ ಹೋದರೂ ಆಂತರಿಕ ಶೂನ್ಯತೆಯಿಂದ ಅವನು ನರಳುತ್ತಾನೆ. ಏಕೆಂದರೆ ಸ್ವೀಕೃತಿಗೆ ಪೂರಕವಾಗಿ ಪ್ರೀತಿದಾನವನ್ನು ಮತ್ತೊಂದು ವ್ಯಕ್ತಿಗೆ ನೀಡಲು ಬೇಕಾದ ಸಾಮರ್ಥ್ಯ ಆತನಲ್ಲಿಲ್ಲವೆಂದು ಪ್ರೊ. ವಿಲಿಯಮ್ಸ್ ಸ್ಪಷ್ಟಪಡಿಸುತ್ತಾರೆ.

ಯಾವುದೇ ಆದರ್ಶಕ್ಕೆ ಕಟ್ಟುಬೀಳದ ಅಸಹಜ ನಿರಾಶಾದಾಯಕ ವ್ಯಕ್ತಿತ್ವ ತನ್ನದು ಎಂದು ವೈದೇಹಿಯ ಎದುರಿಗೆ ತನ್ನನ್ನು ಬಣ್ಣಿಸಿಕೊಳ್ಳುವ ರಾಹುಲನಿಗೆ "ನನ್ನದು ನಿರಾಶೆಯಿಂದ ತುಂಬಿದ ಅಸಹಜ ಹೃದಯ. ಬೌದ್ಧಿಕ ವ್ಯಾಸಂಗದಲ್ಲಿ ಮನಸ್ಸನ್ನು ಎಷ್ಟು ಹುಗಿದಿಡಲು ಯತ್ನಿಸಿದರೂ, ಬೇರು ಬಿಟ್ಟ ಆ ನಿರಾಶೆ ನನ್ನ ಹೃದಯವನ್ನೇ ಸೀಳಿದೆ. ಅಂಥ ಹೃದಯಕ್ಕೆ ಮಾಧವಿಯಂಥ ಸುಖವಸ್ತು ಜೀವ ಉಪಯೋಗವಿಲ್ಲ. ನನ್ನ ಬೆನ್ನು ಹತ್ತಿದರೆ ಅವಳ ಮೆತ್ತನ್ನ ಜೀವನವೇ ಹಿಂಡಿ ಹಿಪ್ಪೆಯಾಗುವುದು. ನನ್ನ ಮೇಲೆ ಅವಳ ಪ್ರೀತಿ ನಿಸ್ಸೀಮ. ಆದರೆ ನನಗೆ ಅಂಥ ಪ್ರೀತಿಯ ಅವಶ್ಯಕತೆಯಿಲ್ಲ. ಸಮುದ್ರದ ನೀರು ಕುಡಿಯಲಿಕ್ಕೆ ಬರುವುದೇ? ನನಗೆ ಕುಡಿಯುವ ನೀರು ಬೇಕು.. ನನ್ನನ್ನು ತಾಯಿಯಂತೆ ಸಲಹುವ, ಪರಿಣತಮತಿಯಾದ, ಅನುಭವದಿಂದ ಮಾಗಿದ, ಜೀವನದ ಆಘಾತಗಳಿಂದ ಹದಗೊಂಡ ಹೆಣ್ಣು ಜೀವ ಬೇಕು. ನನ್ನ ಇಡಿಯ ಅಂತಃಸತ್ವವನ್ನೇ ಎದೆಗವಚಿ ನಿಲ್ಲುವಂಥ ಹೆಣ್ಣು ದೇಹ ಬೇಕು"[೮] ಎನ್ನುತ್ತಾನೆ. ಬಂಡವಾಳಶಾಹಿ ಲೋಲುಪತೆಯುಳ್ಳ ಮಾಧವಿಯ ಪ್ರೇಮ ಅವನಿಗೆ ಸಮುದ್ರದ ನೀರಿನಂತೆ ತೋರುತ್ತದೆ. ಅದಕ್ಕೆ ಬದಲಾಗಿ ವೈದೇಹಿಯ ಅನುಭವಪೂರ್ಣ ತೃಪ್ತಚೇತನದ ಗಾಂಭೀರ್ಯ ಅವನನ್ನು ಆಕರ್ಷಿಸುತ್ತದೆ. ವೈದೇಹಿಯ ಪರಿಣಿತವಾದ ಜೀವನದ ಆಘಾತಗಳಿಂದ ಹದಗೊಂಡ ವ್ಯಕ್ತಿತ್ವದಲ್ಲಿ ಸಮಸ್ಥಿತಿಗೆ ಬರುವ ಸಾಧ್ಯತೆಯಿತ್ತು. ವೈದೇಹಿ ಸಮುದ್ರದ ನೀರಾಗದೆ ಕುಡಿಯುವ ನೀರಾಗಬಹುದಿತ್ತು. ಆದರೆ ವೈದೇಹಿಯ ವ್ಯಕ್ತಿತ್ವದ ಪ್ರಖರತೆಯಲ್ಲಿ ತನ್ನ ವ್ಯಕ್ತಿತ್ವ ಲೀನವಾಗುತ್ತದೆ. ಅನುಭವದಿಂದ ಮಾಗಿದ ಅವಳ ದಗ್ಧ ದೇಹದಲ್ಲಿ ತನ್ನ ಪುರುಷ ವ್ಯಕ್ತಿತ್ವವನ್ನೇ ಮೂದಲಿಸಿ ಮೂಗು ಮುರಿಯುವ ಶಕ್ತಿಯಿದೆ ಎಂದು ತಿಳಿದಾಗ ರಾಹುಲ ವೈದೇಹಿ-ಅರವಿಂದರನ್ನು ಒಂದುಗೂಡಿಸಿ ಅಲ್ಲಿಂದ ಹೊರಬರುತ್ತಾನೆ.

ಆದರೆ ಇಷ್ಟಕ್ಕೆ ರಾಹುಲನ ಸಮಸ್ಯೆ ಮುಗಿಯುವುದಿಲ್ಲ. ಕ್ಷಣ ಕ್ಷಣಗಳ ಅನುಭವವೆಂಬುದು ಯಾವುದೇ ತಾತ್ಕಾಲಿಕ ತಿಳುವಳಿಕೆಯನ್ನೂ ಮೀರಿ ಮಾಯಾ ಮರೀಚಿಕೆಯಂತೆ ನುಣುಚಿ ಹೋಗುವಂತಹದು. ಕುಂದಾಳ ಸುಂದರ ದೇಹದಲ್ಲಿ ಜಗತ್ತಿನ ಸಮಸ್ಯೆಗಳೆಲ್ಲವನ್ನೂ ಹುಗಿದಿಟ್ಟು ನಗುನಗುತ್ತಾ ಜೀವಿಸಲು ಸಾಧ್ಯವಿಲ್ಲವೇ ಎಂದು ರಾಹುಲ ತನ್ನಷ್ಟಕ್ಕೆ ತಾನೇ ಕೇಳಿಕೊಳ್ಳತೊಡಗುತ್ತಾನೆ. ಆದರೆ ತನ್ನೊಂದಿಗಿನ ಆಕೆಯನ್ನು ಲಗ್ನ ಮಾಡಿಸಲು ಮಾಂಶಿ ಹೂಡಿದ ಜಾಲದಲ್ಲಿ ತಾನಿದ್ದೇನೆಂಬ ಸಂಶಯ ಬಂದೊಡನೆಯೇ

ಕೂಡಾ 'ನಿರುಪದ್ರವಿ ಮೂರ್ಖ ಮಾನಸದ ಮುದ್ದೆ'ಯಾಗಿ ತೋರುತ್ತಾಳೆ. ಯಾವುದೇ ತೊಡಕು, ಸಂಬಂಧ, ಜವಾಬ್ದಾರಿಗಳಿಂದ ಸ್ವತಂತ್ರವಾದ ರಾಹುಲನ ಯೋಜನೆ ಆತ್ಮಕೇಂದ್ರಿತವಾದುದು. ಆದರೆ ಅವನು ಅಂದುಕೊಂಡಂತೆ ಜೀವನ ಅಷ್ಟು ಸರಳವಲ್ಲ. ಕಾದಂಬರಿಕಾರರು ಇದನ್ನು ಸ್ಪಷ್ಟಪಡಿಸುತ್ತಾರೆ: "ಜಗತ್ತಿನಲ್ಲಿ ಆತನಂತೆ ಬೇರೆ ಜನರೂ ಇದ್ದಾರೆ. ಅವರೂ ಯೋಜನೆಗಳನ್ನು ಹೂಡುತ್ತಿರುತ್ತಾರೆ! ಅವರ ಯೋಜನೆಗಳಲ್ಲಿ ಒಮ್ಮೊಮ್ಮೆ ಆತ ಒಂದು ಗಿಣಿಟಿಗ್ಗಾಗಿರಬಹುದು."[೧೯] ಇದು ಗೊತ್ತಾಗುತ್ತಿದ್ದಂತೆ ಅವನ ವಿಚಾರಸರಣಿಯೇ ಬದಲಾಗುತ್ತದೆ. ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಬಹುದಾದ ಲಗ್ನದ ಬಂಧನದಲ್ಲಿ ಬೀಳದಿರಲು ನಿಶ್ಚಯಿಸಿ ವೃತ್ತಿಬದುಕಿನ ಯಶಸ್ಸಿನ ಪೂರ್ವೇಕೆಯೆಡೆ ಅವನ ಮನಸ್ಸು ಹೊರಳುತ್ತದೆ. ತಂದೆಯ ಮೃತ್ಯು, ಆತನಿಗೆ ಘರ್ಷಣೆ, ದ್ವಂದ್ವಗಳಿಲ್ಲದೆ, ಉದ್ವೇಗ ತುಮುಲಗಳಿಲ್ಲದೆ, ಪಾಲಿಗೆ ಬಂದದ್ದನ್ನು ಉಂಡರಾಯಿತು ಎಂಬ ಮನಸ್ಥಿತಿ ಹೊಂದುತ್ತಾನೆ. ಮಾಂಶಿಯ ಮಾತೃ ವಾತ್ಸಲ್ಯದ ಮುಂದೆ ಕರಗಿ ಲಗ್ನಕ್ಕೆ ಒಪ್ಪಿಗೆ ಕೊಡುತ್ತಾನೆ. ಆದರೆ ಇದೇ ಮಂಗಮನಸ್ಸು ರೈಲಿನಲ್ಲಿ ಪಯಣಿಸುವಾಗ ಭೇಟಿಯಾದ ರೋಜಿದೊಂದಿಗೆ ಆಟವಾಡಬಯಸುತ್ತದೆ. ಮುಂದೆ ಕುಂದಾಳನ್ನು ಮದುವೆಯಾದ ಮೇಲೂ ಅತೃಪ್ತಿಯೇ ಅವನಲ್ಲಿ ಸ್ಥಾಯಿಯಾಗಿ ಉಳಿಯುತ್ತದೆ. ಉದ್ದಾರದ, ಆದರ್ಶದ, ಸುಖದ, ಕಲ್ಪನೆಯಲ್ಲಿ ಕನಸು ಕಾಣುವಷ್ಟು ರಾಹುಲ ಮುಗ್ಧ ಸರಳನಲ್ಲ. "ಬದುಕಿಗೆ ಯಾವುದೇ ಸಿದ್ಧ, ನೀಲಿ ನಕಾಶೆಯಿಲ್ಲ. ಹೀಗಾಗಿ ಅದಕ್ಕೆ ಯಾವುದೇ ಅರ್ಥವಿಲ್ಲ. ಗಮ್ಯಸ್ಥಾನವಿಲ್ಲ. ಸ್ವರ್ಗವೆಂದದ್ದು ಸ್ವರ್ಗವಾಗದೆ ನರಕವೂ ಆಗಬಹುದೆಂಬುದೇ ಇಲ್ಲಿ ಸತ್ಯ."[೨೦] ಆದ್ದರಿಂದ ರಾಹುಲನಿಗೆ ಕುಂದಾಳೊಂದಿಗೆ ಭಾವುಕ ಪ್ರಣಯಿಯಾಗಿ, ಆರಾಧಕ ಜೀವನ ಸಂಗಾತಿಯಾಗಿರಲು ಸಾಧ್ಯವೇ ಆಗುವುದಿಲ್ಲ. ಅವನ ಪ್ರಕಾರ "ಸ್ವರ್ಗಕ್ಕಿಂತ ತ್ರಿಶಂಕು ಸ್ಥಿತಿಯೇ ಹೆಚ್ಚು ಇಂಟರೆಸ್ಟಿಂಗ್ " ಇದು ರಾಹುಲನ ಮಿತಿಯಾದರೂ ಅದರಲ್ಲೇ ಅವನ ಸಾಮರ್ಥ್ಯವೂ ಇದೆ ಎಂಬುದನ್ನು ಕಾದಂಬರಿ ಪ್ರಕಟಿಸುತ್ತದೆ.

"ನೀನು ಬೇಕಾದ್ದು ಮಾಡು ಒಡೆಯಾ, ನಿನ್ನ ಸ್ವತ್ತಲ್ಲವೇ ನಾನು" ಎಂಬ ಭಾವದಿಂದ ರಾಹುಲನ ಮಾತಿನಂತೆ ಚಾಚೂ ತಪ್ಪದೆ ಜಿಗಿ ಎಂದರೆ ಜಿಗಿದು, ನಗು ಎಂದರೆ ನಕ್ಕು, ಅಳು ಅಂದರೆ ಅತ್ತು ತನ್ನ ವ್ಯಕ್ತಿತ್ವವನ್ನು ಮಣ್ಣಿನ ಮುದ್ದೆ ಮಾಡಿಟ್ಟು ಕೂತ ಕುಂದಾಳಿಗೆ ರಾಹುಲನ ವ್ಯಕ್ತಿತ್ವದ ಕೇಂದ್ರಬಿಂದುವನ್ನು ಮುಟ್ಟಿ ತಟ್ಟುವುದು ಸಾಧ್ಯವಾಗಲಿಲ್ಲ. ಗೋವಾದಲ್ಲಿ ರಾಹುಲನ ಮಿತಿಮೀರಿದ ಮದ್ಯಪಾನ, ಮೇಬಲ್ಲಳ ಜೋಡಿ ಡಾನ್ಸ್, ಕುಂದಾಳ ವೈವಾಹಿಕ ಜೀವನದ ಗತಿಯನ್ನು ನಿರ್ದೇಶಿಸುತ್ತದೆ. ಮುಂದೆ ರಾಹುಲ ಪಾರ್ಟಿಯೇರ್ಪಡಿಸಿದಾಗ ನಡೆಯುವ ಘಟನೆ ಕುಂದಾಳಿಗೆ ರಾಹುಲನ ಹಿಂದಿನ ಬದುಕಿನ ಪರಿಚಯ ಮಾಡಿಕೊಡುತ್ತದೆ. ಹೀಗಾಗಿ ರಾಹುಲನ ವಿಕ್ಷಿಪ್ತ ಸ್ಥಿತಿಯನ್ನು ಭಾರವನ್ನು ಹೊರುವುದು ಕುಂದಾಳ ಮಧುರ ಹೃದಯಕ್ಕೆ ಸಾಧ್ಯವಾಗದೆ ಅವರ ವೈವಾಹಿಕ ಜೀವನ ಕವಲೊಡೆಯುತ್ತದೆ."[೨೧]

ಕುಂದಾಳನ್ನು ತನ್ನ ಜೀವನದ ಕೇಂದ್ರವನ್ನಾಗಿ ಮಾಡಿ ಬದುಕಲು ಯತ್ನಿಸಿದ ರಾಹುಲ ಅದರಲ್ಲಿಯೂ ವಿಫಲನಾಗುತ್ತಾನೆ. ಆದ್ದರಿಂದ ಅವಳನ್ನು ಬಿಟ್ಟು ಇಲ್ಲಿಯ ಎಲ್ಲ ಸಂಬಂಧವನ್ನು ಕಡಿದು ವಿದೇಶಕ್ಕೆ ಹೋಗುವ ಹಂಬಲ. ಇದರಿಂದ ದಿಕ್ಕುತಪ್ಪುವೆ, ಕುಂದಾಳ ಬಗ್ಗೆ ಆತನಿಗೆ ಸಹಾನುಭೂತಿಯಿದೆ. ಆದರೆ ಈ ಸಹಾನುಭೂತಿಗೆ ಆಳಾಗಿ ಅವನ ಆತ್ಮ ಇರಲಾರದು. ಅವನ ರೀತಿಯಲ್ಲಿಯೇ, ಅವನ ವ್ಯಕ್ತಿತ್ವದ ಪರಿಧಿಯಲ್ಲಿಯೇ ಅವನು 'ತನ್ನತನ' ಶೋಧಿಸಬೇಕಾಗಿದೆ. ಬೇಕಾದಾಗ ನಿರ್ಲಿಪ್ತತೆಯಿಂದ, ಬೇಕಾದಾಗ ಆಸಕ್ತಿಯಿಂದ, ಬೇಕಾದಾಗ ಒಳಗೆ, ಬೇಕಾದಾಗ ಹೊರಗೆ ಒಟ್ಟಿನಲ್ಲಿ ಸ್ವಚ್ಛಂದವಾಗಿ ಇರಲು ಸಾಧ್ಯವಾಗುವ ಪರಿಸರ ಆತನಿಗೆ ಬೇಕಾಗಿದೆ. ಹಾಗೆ ಜೀವಿಸಲು ಹೆಣಗಿದ ರಾಹುಲ "ಊರಿಂದ ಊರಿಗೆ ದೇಶದಿಂದ ದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ, ಹೆಣ್ಣಿನಿಂದ ಹೆಣ್ಣಿಗೆ, ತಿರುಗುವ ಜಿಪ್ಸಿ. ನನಗೆ ಬೇರೆಂಬುದಿಲ್ಲ ನೋಡು ಅದಕ್ಕೇ ಹೃದಯವೂ ಇಲ್ಲ-ನನಗೆ ತಳವಿಲ್ಲ-ಬುಡವಿಲ್ಲ..."[೧೨] ಎಂದು ಹೇಳುವ ರಾಹುಲ ದೇಶಬಿಟ್ಟು ಇಂಗ್ಲೆಂಡಿಗೆ ಹೋಗುವ ಸಿದ್ಧತೆಯಲ್ಲಿದ್ದಾನೆ. ಆದರೆ ಅವನ ಸ್ವಭಾವ, ಸಿದ್ಧಾಂತಗಳನ್ನು ಗಮನಿಸಿದಾಗ, ವಿಕ್ಷೇಪ ಅವನ ಮಟ್ಟಿಗೆ ಅಂತ್ಯವಿಲ್ಲದ ಅವಸ್ಥೆಯೆಂದೇ ತೋರುತ್ತದೆ.

ರಾಹುಲನಲ್ಲಿ ಎದ್ದುಕಾಣುವ ವಿಕ್ಷಿಪ್ತತೆಯೆಂದರೆ ಶುದ್ಧ ಸಂಬಂಧಗಳು ತನಗೆ ಸಾಧ್ಯವಿಲ್ಲ ಎಂಬುದರ ಅರಿವಿದ್ದರೂ ಸಂಬಂಧಗಳನ್ನು ಹುಡುಕುತ್ತಲೇ ಇರುವುದು. ಅರವಿಂದ ಅವನಿಗೆ ಹೇಳುವ ನಿಷ್ಠುರದ ಮಾತುಗಳಲ್ಲಿ ಇದೂ ಒಂದು. "ರಾಹುಲ್, ನಿನಗೆ ಪ್ರೀತಿಯೆಂದರೇನು ಗೊತ್ತಿಲ್ಲ ಹಾಗೂ ಪ್ರೀತಿ ಮಾಡಲು ಬೇಕಾದ ಮನೋಧರ್ಮ ನಿನ್ನಲ್ಲಿಲ್ಲ. ನೀನು ಪ್ರೇಮಿಸುವುದೇ ಅಶಕ್ಯ." ಈ ಮಾತಿನ ಸತ್ಯವನ್ನು ರಾಹುಲನ ಎಲ್ಲ ಮನುಷ್ಯ ಸಂಬಂಧಗಳಲ್ಲಿಯೂ ಕಂಡುಕೊಳ್ಳಬಹುದು. ಮನುಷ್ಯರ ಜಗತ್ತೆಂದರೆ ಅವನಿಗೆ ಒಂದು ಪ್ರಯೋಗಶಾಲೆ. ಅವನೇ ಈ ಮಾತನ್ನು ಹೇಳುತ್ತಾನೆ. "...ಮನುಷ್ಯ ಸಂಬಂಧವೆಂದರೆ ಹಾಗೆ. ಒಬ್ಬರನ್ನೊಬ್ಬರು ಒಂದಿಲ್ಲೊಂದು ರೀತಿಯಿಂದ ಗಿನಿಪಿಗ್ಗಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ವಿಧಾನವೇ ಮನುಷ್ಯ ಸಂಬಂಧ." ಇದರಿಂದಾಗಿ ಎಲ್ಲ ಸಂಬಂಧಗಳನ್ನೂ ಆತ ಸಂಶಯದಿಂದಲೇ ನೋಡುತ್ತಾನೆ. ತಿರಸ್ಕರಿಸುತ್ತಾನೆ. ಇದು ಅರವಿಂದನ ಸಹಾನುಭೂತಿಯಿರಬಹುದು, ಮಾಧವಿಯ ರೊಮ್ಯಾಂಟಿಕ್ ಭಾವಾವೇಶವಿರಬಹುದು, ಕುಂದಾಳ ಸಮರ್ಪಣೆಯಾಗಿರಬಹುದು, ಮಾಂಶಿಯ ಪ್ರೀತಿ ಇರಬಹುದು. ನಿಜವಾದ ಸಂಗತಿಯೆಂದರೆ, ರಾಹುಲನಿಗೆ ಗಾಢ ಸಂಬಂಧಗಳ ಅವಶ್ಯಕತೆಯೇ ಇಲ್ಲ. ಮೇಲೆ ಮೇಲೆ ಈಜುವುದೇ ಅವನ ಪ್ರವೃತ್ತಿ. ಇದರಿಂದಾಗಿಯೇ ಶಿರೀನಳ ಸಂಬಂಧ ಅವನಿಗೆ ಹೆಚ್ಚು ಸ್ವೀಕಾರಾರ್ಹವಾಗುತ್ತದೆ. ಅವಳ ಪ್ರವೃತ್ತಿಗಳು ಅವನಿಗೆ ಆದರ್ಶವೆನಿಸುತ್ತವೆ. "ಶಿರೀನಳ ಸ್ವಚ್ಛಂದ ಪ್ರವೃತ್ತಿಯೆಂದರೆ ರಾಹುಲನಿಗೆ ಅಸೂಯೆ, ತನ್ನ ಗೆಳೆಯರ ಜೊತೆಗೆ ನಡೆದುಕೊಳ್ಳುವುದರಲ್ಲಿಯೇ ಅವಳ ಮೇಲ್ಮೆ, ಅವಳ ಆತ್ಮವಿಶ್ವಾಸ, ಎಲ್ಲ ತೊಡಕಿನ ಪೇಚಾಟಗಳನ್ನು ಯಶಸ್ವಿಯಾಗಿ ದೂರವಿಡುವ ಅವಳ ಕಲಾವಂತಿಕೆ, ಅವಳ ನಿರ್ಲಿಪ್ತತೆ ಇವೆಲ್ಲ ರಾಹುಲನ ಆಂತರಿಕ ಆದರ್ಶಗಳೆಂದರೂ ಸರಿಯೇ."

ಆದರೆ ರಾಹುಲನ ವಿಕ್ಷಿಪ್ತತೆಯಿಂದಾಗಿ ಈ ಆದರ್ಶಗಳು ಆದರ್ಶಗಳಾಗಿಯೇ ಉಳಿಯುತ್ತವೆ. ''ವಾಸ್ತವದಲ್ಲಿ ಅವನ ಪಾತ್ರ ವಿಟನದು.''[೧೩] ಎಂದು ಜಿ.ಎಸ್.ಆಮೂರರು ಅಭಿಪ್ರಾಯಪಡುತ್ತಾರೆ. ರಾಹುಲನನ್ನು ಅಸ್ತಿತ್ವವಾದೀ ಪಾತ್ರವಾಗಿಸುವಲ್ಲಿ ಒಂದು ಬಗೆಯ ಮೃದು, ಸಹಾನುಭೂತಿಪರ ವಸ್ತುನಿಷ್ಠತೆ ಇದೆ. ತನ್ನ ವಿಕ್ಷಿಪ್ತತೆಯಲ್ಲಿಯೂ ರಾಹುಲ ತನ್ನ ಹಾಗೂ ತನ್ನೊಂದಿಗಿರುವವರ ಸಂಬಂಧದ ಅಸಂಗತತೆಯನ್ನು ಅನುಭವಿಸಬಲ್ಲನೆಂಬುದೇ ಇಲ್ಲಿ ಮುಖ್ಯ. ಅಷ್ಟೇ ಅಲ್ಲ, ಈ ಅಸಂಗತತೆಯನ್ನು ಪ್ರಜ್ಞೆಯ ನೆಲೆಯಲ್ಲಿ ಅರ್ಥೈಸಬಲ್ಲ ಕೂಡ. ಅವನ ಪ್ರಜ್ಞೆಯ ಪಾತಳಿಯಲ್ಲಿ ಕುಂದಾ ಜೊತೆಗೂಡದೆ ಕೇವಲ ಭಯಭೀತಳಾಗುವ ಹೆಣ್ಣಾಗುತ್ತಾಳೆ. ಈ ಭಯ ಆಕೆಯಲ್ಲಿ ಒಂದು ಬಗೆಯ ಜಡತ್ವವನ್ನು ತಂದೊಡ್ಡುತ್ತದೆ. ಜಡತ್ವವನ್ನು ಹೊಡೆದೆಬ್ಬಿಸಬಲ್ಲ ರೀತಿಯಲ್ಲಿ ಕುಂದಾ ಕೂಡ ಸಂವೇದನಾ ತೀವ್ರತೆಯ ನೆಲೆಯಲ್ಲಿ ಆತ್ಮಹತ್ಯೆಯಂಥ ಕ್ರಿಯಾತ್ಮಕ ಆಯ್ಕೆ ಮಾಡಲು ಸಾಧ್ಯವಾಗುತ್ತದೆ. ಹೀಗೆ ಮಾಧವಿ, ಕುಂದಾ, ರೋಜಿ, ಶಿರೀನ್ ಈ ನಾಲ್ಕು ಜನ ಹೆಣ್ಣುಗಳೊಂದಿಗಿನ ಸಂಬಂಧದಲ್ಲಿ ಕೆಲವೊಮ್ಮೆ ಪಲಾಯನವಾದ, ಬೇಜವಾಬ್ದಾರಿತನ ಎಂದೆನಿಸಿದರೂ ಅದು ಕುಂದಾಳಲ್ಲಿ ಉಂಟು ಮಾಡುವ ಅನಿರೀಕ್ಷಿತ ಪರಿಣಾಮ ಓದುಗರನ್ನು ತಟ್ಟುತ್ತದೆ. ರಾಹುಲನಲ್ಲಿ ಈ ಎಚ್ಚರ ಉಂಟು ಮಾಡುವ ಪರಿಣಾಮಗಳ ಪರಂಪರೆಯನ್ನು ಕಾದಂಬರಿಕಾರರು ಯಾವುದೇ ನಿಲುಗಡೆಯಿಲ್ಲದೆ ಪ್ರವಾಹದೋಪಾದಿಯಲ್ಲಿ ಮುಕ್ತವಾಗಿಡುತ್ತಾರೆ.

ಸಂಬಂಧ

ಈ ಕಾದಂಬರಿಯ ಮುಖ್ಯ ನಿಲುವು ಗಂಡು-ಹೆಣ್ಣಿನ ಸಂಬಂಧದ ಬಗೆಗಿದ್ದು, ಅರ್ಥಪೂರ್ಣ ದಾರಿ ತೆರೆಯುವುದು ಕೂಡ ಇಲ್ಲಿಯೇ. ರಾಧಿಕೆ-ಶೀತಲಕುಮಾರ, ರಾಧಿಕೆ-ಶ್ರೀಧರ, ರಾಧಿಕೆ-ಶೇಖರ ಸಂಬಂಧದ ಒಗಟು ಬಿಚ್ಚುವುದು ಈ ಕಾದಂಬರಿಯ ಮುಖ್ಯ ಧಾಟಿ.

ರಾಧಿಕೆ ಶ್ರೀಮಂತ ಕಾಂಟ್ರಾಕ್ಟರ್ ಭೂಪಾಲರಾಯರ ಮಗಳು, ಭೂಪಾಲರಾಯ ಆಧುನಿಕತೆಯನ್ನು ಒಪ್ಪಿಕೊಳ್ಳದ ಸಂಪ್ರದಾಯವಾದಿ ವ್ಯಕ್ತಿ. ಆಸ್ತಿ, ಅಂತಸ್ತಿಗಾಗಿ ಹಂಬಲಿಸುವ ಭೂಪಾಲರಾಯನಿಗೆ ಸಮಾಜದಲ್ಲಿ ಅದೇ ಮುಖ್ಯವೆನಿಸುತ್ತದೆ. ಸಮಾಜದಲ್ಲಿ ತನಗೆ ಸ್ವಲ್ಪವೂ ಕುಂದುಬಾರದೆಂದು ಎಚ್ಚರಿಕೆ ವಹಿಸುತ್ತಾನೆ. ಆದರೆ ಅವನ ಕಿರಿಯ ಮಗಳು ತ್ರಿಶಾಲಾ ಅಂತರ್ಜಾತಿ ವಿವಾಹವಾಗಿ ಮನೆಬಿಟ್ಟು ಹೋಗಿರುತ್ತಾಳೆ. ಈ ಘಟನೆ ಭೂಪಾಲರಾಯರ ಕುಟುಂಬಕ್ಕೆ ನುಂಗಲಾರದ ತುತ್ತಾಗಿರುತ್ತದೆ. ಈ ಘಟನೆ ರಾಧಿಕೆಯ ಮೇಲೆ ನಿಗಾ ಇಡುವಂತೆ ಮಾಡುತ್ತದೆ.

ಸ್ವತಂತ್ರ ಮನೋಭಾವದ ರಾಧಿಕೆ ತನ್ನ ತಂದೆಯ ಈ ರೀತಿಯ ಪ್ರವೃತ್ತಿಯನ್ನು ವಿರೋಧಿಸುತ್ತಾಳೆ. ಇಂಥ ಬಂಧನದ ಪರಿಸ್ಥಿತಿಯಿಂದ ಪಾರಾಗಲು ಉಪಾಯ ಹುಡುಕುತ್ತಾಳೆ. ಅಂಥ ಸಂದರ್ಭದಲ್ಲಿ ಅವರ

ಮನೆಯಲ್ಲಿ ದಿವಾನ್‌ಜಿ ಕೆಲಸಕ್ಕೆ ನೇಮಕನಾದ ಶ್ರೀಧರನ ಬಗ್ಗೆ ಅವಳ ಕುತೂಹಲ ಬಲಗೊಳ್ಳುತ್ತದೆ. ರಾಧಿಕೆ ಎಸ್.ಎಸ್.ಸಿ.ಯಲ್ಲಿ ಓದುತ್ತಿರುವಾಗ ಭೂಪಾಲರಾಯರ ಹೇಳಿಕೆಯ ಮೇರೆಗೆ ಶ್ರೀಧರ ರಾಧಿಕೆಗೆ ಪಾಠ ಹೇಳಿಕೊಡಲು ಪ್ರಾರಂಭಿಸುತ್ತಾನೆ. ರಾಧಿಕೆ ಎಸ್.ಎಸ್.ಸಿಯಲ್ಲಿ ಪಾಸಾದ ಮೇಲೆ ಭೂಪಾಲರಾಯರು ಅವಳನ್ನು ಕಾಲೇಜಿಗೆ ಕಳಿಸುವುದಿಲ್ಲ. ಆಗ ಆಕೆ ನಾಲ್ಕು ಗೋಡೆಯ ಮಧ್ಯೆ ಇರಬೇಕಾದಂತ ಪರಿಸ್ಥಿತಿ ಬರುತ್ತದೆ. ಅಂಥ ಸಂದರ್ಭದಲ್ಲಿ ಮನೆಯ ದಿವಾನ್‌ಜಿಯಾದ ಶ್ರೀಧರನನ್ನೇ ಪ್ರೀತಿಸಲಾರಂಭಿಸುತ್ತಾಳೆ. ಇದು ಭೂಪಾಲರಾಯರಿಗೆ ಗೊತ್ತಾಗಿ, ರಾಧಿಕೆ ಕೂಡ ಕಿರಿಯ ಮಗಳ ಹಾದಿ ಹಿಡಿದಿದ್ದಾಳೆಂದು ತಿಳಿದು ಹೃದಯಾಘಾತಕ್ಕೊಳಗಾಗುತ್ತಾರೆ. ಆದರೂ ಬಹಳ ಬೇಗನೆ ಚೇತರಿಸಿಕೊಂಡು ಬಿಗಡಾಯಿಸುತ್ತಿರುವ ಪರಿಸ್ಥಿತಿಯನ್ನು ಹತೋಟಿಗೆ ತರಲು ಬೇರೆ ವರನನ್ನು ಹುಡುಕುತ್ತಾರೆ. ಕಾಂಟ್ರ್ಯಾಕ್ಟ್ ದಂಧೆಯಲ್ಲಿ ಪಾರಂಗತನಾಗಿದ್ದ, ಅಕೌಂಟ್ಸ್‌ದೊಳಗೆ ಪರಿಣಿತನಾಗಿದ್ದ ಶ್ರೀಧರನನ್ನು ಹೊರಗೆ ಹಾಕಲು ಸಾಧ್ಯವಾಗುವುದಿಲ್ಲ. ಆದರೆ ರಾಧಿಕೆಯ ಸಂಪರ್ಕದಿಂದ ತಪ್ಪಿಸಲು ಅವನನ್ನು ದೂರದ ಊರಿಗೆ ಕಳುಹಿಸುತ್ತಾರೆ. ಆದರೆ ಲೆಕ್ಕ ಮುಟ್ಟಿಸಲಿಕ್ಕೆಂದು ಶ್ರೀಧರ ಮನೆಗೆ ಬರುತ್ತಿದ್ದ ವೇಳೆಯಲ್ಲೂ ಇಬ್ಬರೂ ಭೇಟಿಯಾಗುತ್ತಿದ್ದುದರಿಂದ ಇವರಿಬ್ಬರ ನಡುವಿನ ಪ್ರೀತಿ ಇನ್ನೂ ಹೆಚ್ಚಾಗುತ್ತದೆ. ಈ ಅನಾಹುತವನ್ನು ತಪ್ಪಿಸುವುದಕ್ಕೋಸ್ಕರ ಭೂಪಾಲರಾಯರು ರಮೇಶ ಎಂಬ ಸ್ವಜಾತಿಯ ಶ್ರೀಮಂತ ವರನೊಂದಿಗೆ ರಾಧಿಕೆಯ ಲಗ್ನವನ್ನು ನಿಶ್ಚಯಿಸುತ್ತಾನೆ. ರಾಧಿಕೆ ತನಗೆ ಇಷ್ಟವಿಲ್ಲದಿದ್ದರೂ ಮನೆಯವರ ಒತ್ತಡಕ್ಕೆ ಮಣಿದು ರಮೇಶನನ್ನು ಮದುವೆಯಾಗುತ್ತಾಳೆ. ಈ ಮದುವೆಯೊಂದಿಗೆ ರಾಧಿಕೆಯ ದುರಂತದ ಬದುಕೂ ಪ್ರಾರಂಭವಾಗುತ್ತದೆ. ಜೀವನೋತ್ಸಾಹವನ್ನು ಕುಂಟಿತಗೊಳಿಸಿಕೊಂಡಿದ್ದ, ಬದುಕಿನ ಬಗ್ಗೆ ಶ್ರದ್ಧೆ ಇರದ ರಮೇಶ್ ರಾಧಿಕೆಯ ಮನಸ್ಸನ್ನು ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ ಇವರಿಬ್ಬರ ನಡುವಿನ ಬದುಕು ಯಾಂತ್ರಿಕವಾಗಿರುತ್ತದೆ. ರಮೇಶನಿಗೆ ರಾಧಿಕೆಯ ಮೇಲಿನ ಮೋಹ ದಿನೇ ದಿನೇ ಕಡಿಮೆಯಾಗುತ್ತಾ ಹೋಗಿ ಅವಳ ಬಗ್ಗೆ ನಿರ್ಲಕ್ಷ್ಯವಹಿಸುತ್ತಾನೆ.

ಇದು ರಾಧಿಕೆಗೆ ಗೊತ್ತಾಗಿ, ತನ್ನ ಮತ್ತು ಶ್ರೀಧರನ ಪ್ರೀತಿಯ ವಿಷಯ ಇವನಿಗೆ ತಿಳಿದು ಹೀಗೆ ವರ್ತಿಸುತ್ತಿರಬೇಕೆಂದು ಬಗೆದು ತನ್ನ ಹಿಂದಿನ ಜೀವನದ ಬಗ್ಗೆ ಹೇಳಿಬಿಡುತ್ತಾಳೆ. ವಿವಾಹ ವಿಚ್ಛೇದನಕ್ಕೂ ರಾಧಿಕೆ ಸಲಹೆ ಮಾಡುತ್ತಾಳೆ. ಆಗ ರಮೇಶನ ಮನಃಪರಿವರ್ತನೆಯಾಗಿ ಅವರ ಬದುಕಿನಲ್ಲಿ ಸಾಮರಸ್ಯವೇರ್ಪಡುತ್ತದೆ. ಆದರೆ ಈ ಸಾಮರಸ್ಯ ಹೆಚ್ಚು ಕಾಲ ಉಳಿಯದೆ, ರಮೇಶ ಕಾರಿನ ಅಪಘಾತದಲ್ಲಿ ತೀರಿಕೊಳ್ಳುತ್ತಾನೆ. ಆಗ ಗರ್ಭಿಣಿಯಾಗಿದ್ದ ರಾಧಿಕೆ ರಮೇಶನ ಮೃತ್ಯುವಿನಿಂದ ಆಘಾತಕ್ಕೊಳಗಾಗುತ್ತಾಳೆ. ಆದರೆ ತನ್ನ ಗಂಡನ ಸಂಬಂಧದ ಸಂಕೇತವಾಗಿ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಕರುಳಿನ ಕುಡಿಯಿಂದಾಗಿ ಆ ಆಘಾತದಿಂದ ಹೊರಬರಲು ಸಾಧ್ಯವಾಗುತ್ತದೆ. ಅವಳೇ ಹೇಳುವಂತೆ "ನಮ್ಮ ಸಮಾಜದಲ್ಲಿ ಗಂಡನ ಮೃತ್ಯು ಮಗುವಿನ ಜನ್ಮಕ್ಕಿಂತ ಹೆಚ್ಚು ಮಹತ್ವವಾದದ್ದಲ್ಲ?"[೧೫]

ಎನ್ನುತ್ತಾಳೆ. ಆದರೆ ತನ್ನ ಕರುಳಿನ ಕುಡಿ ಹೊಟ್ಟೆಯಲ್ಲೇ ತೀರಿಕೊಂಡು ಬಿಟ್ಟಿತ್ತು. ಆ ಮಾತು ಕೇಳಿ ದೀರ್ಘ ನಿಶ್ವಾಸ ಬಿಟ್ಟ ರಾಧಿಕೆಗೆ "ಪುನಃ ಈ ಜಗತ್ತಿಗೆ ತಂದಾಂವಾ ಅಂದರ ಶ್ರೀಧರ. ಹಗಲೂ ರಾತ್ರಿ ನನ್ನ ಬದಿಗೆ ಕೂತು ನನ್ನೊಳಗೆ ಪ್ರಾಣಾ ತುಂಬಿದ ಪ್ರಾಣಾ. ಅದು ಒಂದು ವಿಚಿತ್ರ ಅನುಭವವೇ?..." ಎಂದು ಕಾದಂಬರಿಕಾರರಾದ ಶೀತಲಕುಮಾರರ ಮುಂದೆ ತನ್ನ ಅಳಲನ್ನು ತೋಡಿಕೊಂಡಿರುತ್ತಾಳೆ. ಹೀಗೆ ರಾಧಿಕೆಯೊಂದಿಗಿನ ಸಂಬಂಧ ದೃಢವಾಗುತ್ತ ಬಂದಂತೆಲ್ಲ ಅವಳ ಜೀವನದ ತೊಡಕು ತೊಡಕಾದ ಜಾಲದಲ್ಲಿ ತಾನು ಸಿಕ್ಕಿಬಿದ್ದಂತೆ ಶೀತಲಕುಮಾರನಿಗೆ ಅನಿಸತೊಡಗುತ್ತದೆ. ರಾಧಿಕೆ ತಾನು ತನ್ನ ಕುಟುಂಬದವರೊಡನೆ, ಪ್ರಿಯಕರ ಶ್ರೀಧರನೊಡನೆ, ಗತಿಸಿದ ಗಂಡ ರಮೇಶನೊಡನೆ ತಾನು ಹೊಂದಿದ್ದ ಸಂಬಂಧಗಳನ್ನು ಶೀತಲಕುಮಾರನೆದುರು ಬಿಚ್ಚಿಕೊಳ್ಳುವ ಮೂಲಕ ಈ ಸಂಬಂಧಗಳ ಮೇಲೆ ಮಾನಸಿಕ ಪ್ರಭುತ್ವ ದೊರಕಿಸಿ ಗಟ್ಟಿಯಾಗುತ್ತಾಳೆ.

ರಾಧಿಕೆ ಗಂಡ ತೀರಿಕೊಂಡ ಮೇಲೆ ಕಾಲೇಜಿಗೆ ಸೇರಿ ತತ್ತ್ವಶಾಸ್ತ್ರದಲ್ಲಿ ಪದವಿಯನ್ನು ಪಡೆಯುತ್ತಾಳೆ. ವಿಚಾರವಂತಳಾಗಿ ಬೆಳೆಯುತ್ತಾಳೆ. ಹೀಗಾಗಿ ಮನೆಯಲ್ಲಿಯೇ ಇರಲಿಕ್ಕೆ ಇಷ್ಟಪಡದ ರಾಧಿಕೆ ಕೆಲಸಕ್ಕೆ ಹೋಗಿ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಾಳೆ. ಆದರೆ ಸಂಪ್ರದಾಯವಾದಿಯಾದ ಭೂಪಾಲರಾಯರು ಮಗಳು ಹೊರಗಡೆ ಹೋಗಿ ದುಡಿಯುವುದನ್ನು ಇಷ್ಟಪಡುವುದಿಲ್ಲ. ಮಗಳು ಸುಖವಾಗಿ ಮನೆಯಲ್ಲೇ ಕಾಲಕಳೆಯಬೇಕೆಂದು ಅಪೇಕ್ಷಿಸುತ್ತಾರೆ. ಆಗ ರಾಧಿಕೆ ಸಿಟ್ಟಿನಿಂದ "ನಿಮ್ಮ ಸುಖದ ಕಲ್ಪನೆ ಬ್ಯಾರೆ, ನನ್ನ ಸುಖದ ಕಲ್ಪನೆ ಬ್ಯಾರೆ, ಅಪ್ಪಾ ನಾ ಏನು ಮನ್ಯಾಗ ಕೂತು ಕೊಳಿಯೋ ಕ್ಯಾಬೀಜಲ್ಲ... ಸುಖ ಅಂತ ಸುಖ! ಮುಗೀತಲ್ಲ ನೀವು ನನಗೆ ಕೊಟ್ಟ ಸುಖದ ಸಂಸಾರ. ಗಂಡ ಸತ್ತ, ಮಗ ಸತ್ತಿತು. ಅದರ ಕೂಡ ನಿಮ್ಮ ಸುಖದ ಕಲ್ಪನಾನೂ ಸತ್ತಿತು. ಇನ್ನ ಖರೇ ಅಂದ್ರ ನೀವು ನನ್ನ ಜೀವನದ ಬಗ್ಗೆ ಮಾತಾಡೇಬಾರ್ದು... ನಿಮ್ಮ ವಿಚಾರಗಳಂತೆ ನಾ ನಡೀಬೇಕಾದ್ರ ನಾ ಸತ್ತೇ ಹೋಗಬೇಕು. ನಾ ಸತ್ತರೇನೇ ನಿಮಗೆಲ್ಲ ಸಮಾಧಾನ"[೧೫] ಎಂದು ಪ್ರತಿರೋಧವನ್ನು ವ್ಯಕ್ತಪಡಿಸಿರುತ್ತಾಳೆ. "ಅಪ್ಪ, ನನ್ನ ದಾರಿ ನಾ ನೋಡಕೋತೀನಿ" ಎಂದು ಹೇಳುತ್ತಾಳೆ. ಇಂತ ಪ್ರಗತಿಪರ ಧೋರಣೆಯುಳ್ಳ ರಾಧಿಕೆ ಭಾರತೀಯ ಸಾಂಪ್ರದಾಯಿಕ ಬದುಕಿನಿಂದ ಪಾರಾಗಲು ಸಾಧ್ಯವಾಗದೆ ಒದ್ದಾಡುತ್ತಾಳೆ.

ತನ್ನ ತಂದೆ ತೀರಿಕೊಂಡ ಮೇಲೆ ರಾಧಿಕಾಳಿಗೆ ಜವಾಬ್ದಾರಿ ಹೆಚ್ಚಾಗುತ್ತದೆ. ತಂದೆಯಿರುವವರೆಗೂ ಒಂದು ರೀತಿಯಿಂದ ನಿಶ್ಚಿಂತಳಾಗಿದ್ದ ರಾಧಿಕೆಗೆ ಈಗ ತಾಯಿ, ತಂಗಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಬೀಳುತ್ತದೆ. ಮದುವೆಯಾಗಿ ಬಂದ ಅಣ್ಣ ರತ್ನಾಜಿ ಕುಟುಂಬದ ಬಗ್ಗೆ ಉದಾಸೀನತೆಯನ್ನು ತೋರಿಸುತ್ತಿರುತ್ತಾನೆ. ಇವನಿಗೆ ಹೆಂಡತಿಯ ಆಸೆ-ಆಕಾಂಕ್ಷೆಗಳು ಮುಖ್ಯವಾಗಿರುತ್ತವೆ ಹೊರತು, ತಾಯಿ, ತಂಗಿಯರದ್ದಲ್ಲ. ಹೀಗಾಗಿ ಅವನು "ನಿಮ್ಮದು ನೀವು ನೋಡಿಕೊಳ್ಳಿ, ನನ್ನದು ನಾ ನೋಡಿಕೋತೀನಿ"

ಎಂದು ಸ್ಪಷ್ಟವಾಗಿಯೇ ಹೇಳಿರುತ್ತಾನೆ. ಇದಲ್ಲದೆ ತಂಗಿ ತ್ರಿಶಾಲಾ ಅವಳ ಗಂಡ ಧೋಂಡಿರಾಮನ ಜೊತೆ ಜಗಳ ಮಾಡಿಕೊಂಡು ಬಂದು ಮನೆಯಲ್ಲಿಯೇ ಉಳಿದಿರುತ್ತಾಳೆ. ಆದರೆ ತ್ರಿಶಾಲಾ ಈ ರೀತಿ ಮನೆಗೆ ಬಂದು ಕುಳಿತುಕೊಂಡಿರುವುದು ರಾಧಿಕೆಗೆ ಇಷ್ಟವಾಗುವುದಿಲ್ಲ. ಅದಕ್ಕಾಗಿ ಆಕೆ ತನ್ನ ತಾಯಿಯೊಂದಿಗೆ ಜಗಳವಾಡಿ ಗಂಡನ ಮನೆಗೆ ಕಳಿಸಿಕೊಡುವ ವ್ಯವಸ್ಥೆಯನ್ನು ಮಾಡಿರುತ್ತಾಳೆ. "ಒಂದು, ನೀ ಬಿತ್ತಿದ್ದನ್ನು ನೀ ಬೆಳಕೋಬೇಕು. ಮತ್ತ, ಇಷ್ಟು ಹಟಮಾಡಿ, ಜಾತಿ ಬಿಟ್ಟು, ಎಲ್ಲಾರ ಮನಸ್ಸಿನ ವಿರುದ್ಧ ಓಡಿ ಹೋಗಿ ಲಗ್ನಾ ಮಾಡಿಕೊಂಡಿ. ಇನ್ನ ಪಾಲಿಗೆ ಬಂದದ್ದನ್ನೇ ಅನುಭವಿಸಬೇಕು. ಬಂದದ್ದು ಪಂಚಾಮೃತವೇ ಇರಲಿ, ವಿಷಾನೇ ಇರಲಿ"[೧೬] ಎಂದು ಹೇಳಿ ತಂಗಿಯ ಮನಸ್ಸನ್ನು ಪರಿವರ್ತಿಸಿರುತ್ತಾಳೆ.

ಕಾದಂಬರಿ ಹಲವಾರು ಸಂಬಂಧಗಳ ಮೂಲಕ ಶೀತಲಕುಮಾರನ ಪಾತ್ರವನ್ನು ನಿರ್ಮಿಸುತ್ತದೆ. ಇವುಗಳಲ್ಲಿ ಅತ್ಯಂತ ಮಹತ್ವದ್ದು ಕೊಲ್ಹಾಪುರದ ತನ್ನ ವಿಮರ್ಶಕ ಮಿತ್ರ ಪ್ರೊ. ಪೊಮ್ಮಣ್ಣನವರ ಮುಖಾಂತರ ಅವನಿಗೆ ಪರಿಚಿತಳಾಗುವ ವಿಧವೆ ರಾಧಿಕಾ. ಇವಳಿಗೆ ತನ್ನ ಬದುಕಿನಲ್ಲಿ ಹಿಂದೆ ನಡೆದುದರ ಬಗ್ಗೆ ವ್ಯಥೆಯಿಲ್ಲ. ಬದಲಾಗಿ ತನ್ನ ಭವಿಷ್ಯತ್ತನ್ನು ರೂಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾಳೆ. ಶೇಖರ ತಯಾರಿಸುತ್ತಿದ್ದ ಸಿನೇಮಾದಲ್ಲಿ ನಟಿಸುವ ಅವಕಾಶವನ್ನು ಪಡೆಯುತ್ತಾಳೆ. ಅದಕ್ಕೋಸ್ಕರ ಅವಳು ಬೆಂಗಳೂರಿಗೆ ಬರುತ್ತಾಳೆ. ಬೆಂಗಳೂರಿನಲ್ಲಿ ಶೀತಲಕುಮಾರನ ಮನೆಯಲ್ಲಿಯೇ ಇರಹತ್ತಿದಾಗ ಅವರ ಸಂಬಂಧದಲ್ಲಿ ತೊಡಕುಂಟಾಗುತ್ತದೆ. ಶೇಖರ ರಾಧಿಕಾರ ಸಂಬಂಧ ಬೆಳೆದಂತೆ ಈ ಸಂಬಂಧದ ಬಗ್ಗೆ ಶೀತಲಕುಮಾರನಲ್ಲಿ ಅಸೂಯೆಯೂ ಹುಟ್ಟಿಕೊಳ್ಳುತ್ತದೆ. "ನೀನು ನನ್ನವಳು ರಾಧಾ, ನನ್ನವಳು" ಎಂದು ಅವನ ಘೋಷಣೆಯಲ್ಲಿ ಈ ಮಾತಿನ ಸಮರ್ಥನೆಯನ್ನು ಗುರುತಿಸಬಹುದು. ರಾಧಿಕಾಳಿಗೆ ಶೇಖರನ ಚಿತ್ರದಲ್ಲಿ ನಟಿಸುವ ಅವಕಾಶವನ್ನು ಒದಗಿಸಿಕೊಟ್ಟು ತಾನು ತನ್ನ ಕಾದಂಬರಿಗಳ ಪಾತ್ರಗಳೊಡನೆ ಪ್ರಯೋಗ ನಡೆಸುವಂತೆ ಅವಳ ಬದುಕಿನೊಡನೆಯೂ ಪ್ರಯೋಗ ನಡೆಸುತ್ತಿದ್ದೇನೆಯೇ ಎಂಬ ಸಂಶಯ ಕೂಡ ಶೀತಲ ಕುಮಾರನಲ್ಲಿ ಸುಳಿದು ಹೋಗುತ್ತದೆ. ರಾಧಿಕಾ ತನ್ನನ್ನು ಗುರು, ತಂದೆ ಸಮಾನ ಎಂದು ಕರೆದಾಗ ಈ ಪದಪ್ರಯೋಗಗಳು ಇಷ್ಟವಾಗದೇ ಹೋಗುತ್ತವೆ. ಆದರೆ, ಅವಳು ಶೇಖರನೊಡನಿದ್ದ ತನ್ನ ಸಂಬಂಧವನ್ನು ಕೊನೆಗೊಳಿಸಿ ಕೊಲ್ಹಾಪುರಕ್ಕೆ ಹೊರಟು ನಿಂತಾಗ ಶೀತಲಕುಮಾರನಿಗೆ ತನ್ನ ಅವಳ ಸಂಬಂಧದ ನಿಜಸ್ವರೂಪದ ಅರಿವಾಗುತ್ತದೆ. "ರಾಧಿಕೆಯಿಲ್ಲದ ಮನೆ ಭಣಭಣವೆನಿಸತೊಡಗಿತು. ನನಗೊಬ್ಬ ಮಗಳಿದ್ದರೆ" ಎಂದು ಹಳಹಳಿಸುತ್ತಾನೆ. ರಾಧಿಕೆ ಶೀತಲಕುಮಾರನಿಗೆ ಗೆಳತಿ, ಪ್ರೇಯಸಿ, ಮಗಳು, ತಂಗಿ ಏನಾದರೂ ಆಗಬಲ್ಲ ಸಾಧ್ಯತೆಯನ್ನು ಕಾದಂಬರಿ ಒಳಗೊಳ್ಳುತ್ತದೆ.

ರಾಧಿಕೆಯ ಸಹವಾಸದಲ್ಲಿ ತಾನು ಕಳೆದ ದಿನಗಳು ತನ್ನ ಇಡೀ ಜೀವನಕ್ಕೆ ನೆನಪಿನ ಬುತ್ತಿಯಾಗಬಹುದು ಎನ್ನುವ ಕಲ್ಪನೆ ಕೂಡ ಅವನಲ್ಲಿ ಮೂಡಿಬರುತ್ತದೆ. ಶೇಖರನ ಆಕರ್ಷಣೆಯನ್ನು ಮೀರಿ ಅವಳು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದರಲ್ಲಿ, ತನ್ನ ಸ್ವಂತದ ಮಗುವನ್ನು ಕಳೆದುಕೊಂಡರೂ

ಮತ್ತೊಬ್ಬರ ಮಗುವನ್ನು ದತ್ತು ತೆಗೆದುಕೊಂಡು, ಅದಕ್ಕೆ ಶೀತಲಕುಮಾರನ ಹೆಸರನ್ನೇ ಇಡುತ್ತಾಳೆ. ಇವೆಲ್ಲಕ್ಕೂ ಹೆಚ್ಚಾಗಿ, ಈ ಅನುಭವದ ಮೂಲಕ ಅವನು ಹಾಗೂ ಕಮಲಾಳ ಸಂಬಂಧದಲ್ಲಿ ಗುಣಾತ್ಮಕ ಪರಿವರ್ತನೆ ನಡೆಯುತ್ತದೆ. ಮೊದಮೊದಲು ಅಡಿಗೆಯವಳು, ನರ್ಸ್, ಹೆಚ್ಚೆಂದರೆ ಗೆಳತಿಯಾಗಿ ಕಂಡವಳು ಈಗ, ಅವನ ಬರವಣಿಗೆಗೆ ಸಕ್ರಿಯವಾಗಿ ಸ್ಪಂದಿಸುವ ಮೂಲಕ 'ಸಹ ಧರ್ಮಿಣಿ'ಯಾಗಿ ಪರಿವರ್ತನೆಗೊಳ್ಳುತ್ತಾಳೆ.

"ಎಲ್ಲ ಸಂಬಂಧಗಳಲ್ಲಿಯೂ ಉಪಯುಕ್ತತೆ, ಹಾನಿಕಾರತೆ ಇವು ಇದ್ದೇ ಇರ್ತಾವೆ. ಒಂದು ಸಂಬಂಧ ಅಂದರೆ ಅದು ಸಂಕೀರ್ಣ ಪ್ರಕ್ರಿಯೆ." ಇದು ಒಬ್ಬ ಕಾದಂಬರಿಕಾರನಾಗಿ ಶೀತಲಕುಮಾರ ರಾಧಿಕಾಳಿಗೆ ಕೊಡುವ ತಿಳುವಳಿಕೆ. ಕಾದಂಬರಿಯಲ್ಲಿ ಶೀತಲಕುಮಾರ ರಾಧಿಕಾ ಸಂಬಂಧ ಇಬ್ಬರಿಗೂ ಫಲದಾಯಕ ಎನಿಸುತ್ತದೆ. ಆದರೆ ರಾಧಿಕಾ-ಶ್ರೀಧರರ ಸಂಬಂಧದ ಬಗ್ಗೆ ಈ ಮಾತನ್ನು ಯಾವ ಅಡ್ಡಿ ಆತಂಕಗಳಿಲ್ಲದೆ ಹೇಳುವಂತಿಲ್ಲ. ಇವರಿಬ್ಬರಲ್ಲಿ ಯಾರು ಯಾರನ್ನು ಹೆಚ್ಚು ಉಪಯೋಗಿಸಿಕೊಂಡರು ಎನ್ನುವುದನ್ನು ನಿರ್ಧರಿಸುವುದು ಕಠಿಣ. ತ್ರಿಶಾಲಾ-ಧೋಂಡಿರಾಮರ ಸಂಬಂಧವಂತೂ ತ್ರಿಶಾಲಾಳ ವ್ಯಕ್ತಿತ್ವವನ್ನೇ ದುರ್ಬಲಗೊಳಿಸುತ್ತದೆ. ಕಾದಂಬರಿಯಲ್ಲಿ ಬರುವ ಉಳಿದ ಸಂಬಂಧಗಳಲ್ಲಿ ಸಹಜತೆಯಿದ್ದರೂ ಇಂಥ ರಹಸ್ಯಮಯತೆ ಇಲ್ಲವೆಂದೇ ಹೇಳಬೇಕು.

ಬೀಜ

'ಬೀಜ' ಕೃಷ್ಣಾಪುರದಲ್ಲಿಯ ವಿಶೇಷ ಆಗುಹೋಗುಗಳಿಗೆ ಕಾರಣವಾಗುವ ಒಂದು ಗ್ರಾಮ. ಶ್ರೇಯಾಂಸ ಈ ಕಾದಂಬರಿಯ ಕೇಂದ್ರ ಪಾತ್ರ. ಶ್ರೇಯಾಂಸನ ತಂದೆಯಾದ ಅಪ್ಪಾ ಸಾಹೇಬರು ಈ ಗ್ರಾಮದ ಎಲ್ಲಾ ವ್ಯವಹಾರಗಳನ್ನು ವ್ಯಾಪಿಸಿದವರು. ಏಕಚಕ್ರಾಧಿಪತ್ಯದ ಅಡಿಯಲ್ಲಿ ಇಲ್ಲಿನ ವ್ಯವಸ್ಥೆಯನ್ನು ನೀಗಿಸಿದ ಅಪ್ಪಾಸಾಹೇಬರು ಈಗ ಮೃತರಾದ ಮೂಲಕ ಪರಿಸ್ಥಿತಿಗೆ ಒಂದು ಹೊಸ ತಿರುವು ದೊರಕುತ್ತದೆ. ಅಪ್ಪಾ ಸಾಹೇಬರ ಸರಂಜಾಮಿ ಪದ್ಧತಿಯಲ್ಲಿಯ ವ್ಯವಸ್ಥೆಗೆ ಹೊಸದಿಕ್ಕು ಕೊಡುವ ಪ್ರಯತ್ನದಲ್ಲಿ ಅವರ ಮಗ ಶ್ರೇಯಾಂಸ ತನ್ನ ಭೂತ ಮತ್ತು ವರ್ತಮಾನಗಳನ್ನು ಎದುರಿಸಬೇಕಾಗುತ್ತದೆ. ರಾಷ್ಟ್ರೀಯ ಆಂದೋಲನದ ಆದರ್ಶವಾದಗಳಂಥ ಬಿಸಿಲುಗುದುರೆಗಳ ಬೆನ್ನೇರಿದ ಶ್ರೇಯಾಂಸನಿಗೆ ತನ್ನ ಪ್ರೇಮ ಪ್ರಕರಣದ ಪರಿಣಾಮವಾಗಿ ತಂದೆಯ ವಿರುದ್ಧ ಬಂಡೇಳಲಾರದೆ ಊರು ಮತ್ತು ಪ್ರೇಯಸಿ ರೇವತಿಯನ್ನು ಬಿಡಬೇಕಾದದ್ದು ಭೂತ. ಅಷ್ಟೇ ನಿಚ್ಚಳವಾದದ್ದು ಮುಂಬಯಿಯಂಥ ಆಧುನಿಕ ನಗರಗಳಲ್ಲಿ ದೊರೆತ ವಿಶಾಲ ಹೃದಯದ ಉದಾರಮತವಾದದ ರಸೆಲ ತತ್ವಜ್ಞಾನ ಪ್ರೇರಿತ ಬುದ್ಧಿವಾದಿಗಳ ಜೊತೆಯ ಅಂತಃ ಸಂಬಂಧ. ಕರ್ತೃತ್ವಕ್ಕೆ ಸರಿಸಾಟಿಯಾದ ಉಚ್ಚ ಪದದ ನೌಕರಿ, ಮುಕ್ತ ಪ್ರಜ್ಞೆಯ ನಿದರ್ಶನವಾದ ಕ್ರಿಶ್ಚಿಯನ್ ಹೆಣ್ಣಾದ ಲಿಝಿಯೊಂದಿಗಿನ ದಾಂಪತ್ಯ ಇದು ವರ್ತಮಾನ.

ವೈಯಕ್ತಿಕ ನೆಲೆಯಲ್ಲಿ ಶ್ರೇಯಾಂಸ ಸಂಧಿಸಬೇಕಾದದ್ದು ತನ್ನ ಅಪ್ಪನಿಂದ ದೊರೆತ ಬಿಡುಗಡೆಯನ್ನು ಮತ್ತು ಅಷ್ಟೇ ಮಹತ್ವದ್ದಾಗಿ ಅಪ್ಪನ ಮೃತ್ಯುವಿನಿಂದ ನಿರ್ಮಿತವಾಗಿರುವ ಕೃಷ್ಣಾಪುರದಲ್ಲಿಯ ಟೊಳ್ಳನ್ನು, ಅಪ್ಪನ ಅಂತ್ಯವಿಧಿ ಅವನನ್ನು ಕೃಷ್ಣಾಪುರಕ್ಕೆ ಬರಮಾಡಿಸಿದಂತೆ, ಕೃಷ್ಣಾಪುರದ ನೆಲದಲ್ಲಿಯ ಅವನ ವ್ಯಕ್ತಿತ್ವದ ಬೇರುಗಳು ಅವನನ್ನು ಸೆಳೆದುಕೊಳ್ಳುತ್ತಿವೆ. ವ್ಯಕ್ತಿತ್ವ ಇರುವುದು ಯಾವ ಬೀಜಗಳಿಂದ? ಜೀನ್ಸ್‌ಗಳಿಂದಲೇ ಇಲ್ಲವೆ ನೆನಪುಗಳಾಗಿ ಹಬ್ಬಿಕೊಂಡ ವೈಯಕ್ತಿಕ ಚರಿತ್ರೆಯಿಂದಲೇ? ಶ್ರೇಯಾಂಸ ಇಂಥ ದ್ವಂದ್ವಗಳ ಮಧ್ಯೆ ಹೊಯ್ದಾಡುತ್ತಾ, ಅನಿರೀಕ್ಷಿತವಾದ ಅನನ್ಯವಾದ ನಿರ್ಧಾರಕ್ಕೆ ಬರುತ್ತಾನೆ. ಒಂದು ದಡದಲ್ಲಿ ಯುವಜನರ ಹೊಸ ತಲೆಮಾರನ್ನು ಕಾಣುತ್ತ ಇನ್ನೊಂದು ದಡದಲ್ಲಿ ಹಳೆತಲೆಮಾರಿನ ಬುಡಕಟ್ಟಿಲ್ಲದ ಪೊಳ್ಳು ಮಸಲತ್ತಿನ ಜೊತೆ ಸಂಧಾನ ಸಾಧಿಸುತ್ತ ದಾರಿ ಕಾಣುತ್ತಾ ನಡೆಯುತ್ತಾನೆ. ಸತ್ತಾ ಸ್ಥಾನಕ್ಕಾಗಿ ನಡೆಯುವ ಸೂಕ್ಷ್ಮ ಸಂಘರ್ಷದಲ್ಲಿ ನಿರ್ನಾಮವಾದರೂ ದಿಟ್ಟವಾದ ಹೆಜ್ಜೆಯನ್ನಿಡುತ್ತಾನೆ. ಅಪ್ಪನ ಸೂಳೆಗೆ ಆಧಾರವಾಗಬೇಕೆಂದು ಹೊಲದ ವ್ಯವಸ್ಥೆ ಮಾಡುವಾಗ ಅವನಿಗೆ ಎದುರಾಗುವುದು ಈ ತಿರಸ್ಕೃತ ಕ್ಷೇತ್ರದ ಬಗೆಗಿರುವ ತನ್ನದೇ ಧೋರಣೆಯ ಭೂತಕಾಲದ ವ್ಯವಸ್ಥೆಯ ನಿರ್ಮೂಲನದ ಆರ್ಥಿಕ ಪರಿಹಾರದ ಪ್ರಕಲ್ಪಗಳನ್ನು, ಕಲ್ಯಾಣಶೆಟ್ಟಿಯವರ ಹೆಂಡತಿಯ ಅನಾರೋಗ್ಯವನ್ನು ದುರ್ಲಕ್ಷಿಸಲಾಗದ ಅವನ ಮಮತ್ವ, ಅದರ ಯೋಗ್ಯ ನಿವಾರಣೆ ಕಡೆ ಲಕ್ಷ್ಯ ಕೊಡುವಷ್ಟೇ ರಾಮೂ, ಸೋನಾ, ನಿರ್ಮಲೆ ಇವರ ದೈಹಿಕ, ಮಾನಸಿಕ ಆಪತ್ತುಗಳನ್ನು ನಿವಾರಿಸುವಲ್ಲಿಯೂ ತೊಡಗಿಕೊಳ್ಳುತ್ತದೆ. ಹೋಳಿ ಹುಣ್ಣಿಮೆಯ ಆಚರಣೆ ಪ್ರತಿವರ್ಷದಂತೆ ನಡೆಯುತ್ತಲೇ ಇರುವಂತೆ ಪ್ರೋತ್ಸಾಹಿಸುವ ಮನೋವೃತ್ತಿಯಂತೆ, ಅಂಬುಜಕ್ಕ ವಹಿಸುವ ದೃಷ್ಟಿ ಜಾಗೃತವಾಗಿರುತ್ತದೆ.

ನಿಜವಾದ ಸಂಘರ್ಷ ಏರ್ಪಡುವುದು ಕೃಷ್ಣಾಪುರದ ವಿಶ್ವವು ಶ್ರೇಯಾಂಸನನ್ನು ಪರಕೀಯ ಎಂದು ಪರಿಗಣಿಸಿ ಅವನನ್ನು ಹೊರದೂಡಲೆತ್ನಿಸಿದಾಗ, ಚಹರೆಯಿಲ್ಲದ ಮುಂಬೈನ ಬದುಕಿನಲ್ಲಿ ಕಳೆದುಕೊಂಡ ತನ್ನ ಅಸ್ತಿತ್ವದ ಬೇರುಗಳನ್ನು ಗಟ್ಟಿಗೊಳಿಸುವ ಪ್ರಯೋಗ ಭೂಮಿಯಾಗಿ ಶ್ರೇಯಾಂಸ ಕೃಷ್ಣಾಪುರವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಇಲ್ಲಿನ ಜನರ ಆರೋಗ್ಯಕ್ಕೆ ಒಂದು ಉಚಿತ ಆಸ್ಪತ್ರೆ ಯೋಜನೆ, ಇಲ್ಲಿನ ಹೊಲಗಳನ್ನು ಟ್ರ್ಯಾಕ್ಟರ್‌ನಿಂದ ಬೇಸಾಯ ಮಾಡಿಸುವ ಹುಮ್ಮಸ್ಸು, ಇಲ್ಲಿನ ಉದ್ಯಮಶೀಲರನ್ನು ಹಲವಾರು ಔದ್ಯೋಗಿಕ ಯೋಜನೆಗಳಲ್ಲಿ ತೊಡಗಿಸುವ ಸಹಭಾಗ. ಹೀಗೆ ಕಲ್ಯಾಣಶೆಟ್ಟಿ, ದೇವಿಮಠ, ಡಾ. ಶರ್ಮ ಮುಂತಾದವರ ಜೊತೆ ಲೋಕೋಪಯೋಗಿ ಪ್ರಕಲ್ಪಗಳ ಬಗ್ಗೆ ಚರ್ಚೆ ಮಾಡುತ್ತಾನೆ. ಅಷ್ಟೇ ಉತ್ಸಾಹದಿಂದ ಬುದ್ಧಿಗೂ ಚಾಲನೆ ದೊರೆಯುವಂತೆ, ರಸೆಲ್ ಕ್ಲಬ್ ಮಾರ್ಕ್ಸ್‌ವಾದದ ಮೇಲಿನ ಚರ್ಚೆ, ಸ್ತ್ರೀ ಮುಕ್ತಿಯ ಪುರಸ್ಕಾರದ ಮೇಲಿನ ವಿಚಾರ ವಿನಿಮಯ ಮುಂತಾದವುಗಳನ್ನೂ ಪ್ರೋತ್ಸಾಹಿಸುತ್ತಾನೆ. ಕೃಷ್ಣಾಪುರದಂತ ಚಿಕ್ಕ ಗ್ರಾಮದಲ್ಲಿ ಈ ಯೋಜನೆಗಳ ವಿಚಾರಗಳ ಆಂದೋಲನ ಹುಟ್ಟಿಕೊಳ್ಳುವಂತೆ ಮುಂದಾಳತ್ವ ವಹಿಸುವುದು ಶ್ರೇಯಾಂಸನ ಕಾರ್ಯಕ್ರಮವಾಗಿ ಬಿಡುತ್ತದೆ. ಸಾಂಸ್ಕೃತಿಕ ಬದಲಾವಣೆಯ

ಅವನ ಯತ್ನ ಈಗಾಗಲೇ ಆರ್ಥಿಕವಾಗಿ ಸಬಲರಾಗಿರುವವರನ್ನು ರೊಚ್ಚಿಗೆಬ್ಬಿಸುವಂತೆ ಮಾಡುತ್ತದೆ. ಇದು ಅವನ ಮೇಲೆ ಹಲ್ಲೆಯುಂಟಾಗಲಿಕ್ಕೆ ಕಾರಣವಾಗುತ್ತದೆ. ಈ ಮಾರಣಾಂತಿಕ ಹಲ್ಲೆ ಶ್ರೇಯಾಂಸನ ಆಲೋಚನಾ ದಿಕ್ಕನ್ನೇ ಬದಲಿಸಿಬಿಡುತ್ತದೆ. "ಖರೇ-ಬರೇ ಸಾಂಸ್ಕೃತಿಕ, ಸಾಮಾಜಿಕ ಕೃತಿ ಈ ದೇಶದಲ್ಲಿ ಶಕ್ಯವೇ ಇಲ್ಲ. ರಾಜಕೀಯ ಕೃತಿಯೇ ನಿಜವಾಗಿ ಜೀವನವನ್ನು ಪರಿವರ್ತಿಸುವ ಕೃತಿ. ಆದರೆ ರಾಜಕೀಯ ಕೃತಿಯೇ ಅದರ ಗುರಿಯಲ್ಲ. ಅದು ಸಾಧನೆ, ಗುರಿ, ಸ್ವಾತಂತ್ರ್ಯ. ಸ್ವಾತಂತ್ರ್ಯದ ಅರ್ಥವೆಂದರೆ ಸಂಸ್ಕೃತಿಯ ಸಹಾನುಭೂತಿಯ, ಪ್ರೀತಿಯ ಸಂತತಿ ವಿಕಸನ ಪ್ರಕ್ರಿಯೆ."[೧೭] ಶ್ರೇಯಾಂಸನ ಮೇಲಾದ ಹಲ್ಲೆಯ ಉದ್ದೇಶವೇನೇ ಇರಲಿ, ಅವನ ಮನಸ್ಸಿನಲ್ಲಿ ಅದು ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿದೆ. ತಾನು ಸತ್ತಿಲ್ಲ, ಜೀವಂತವಾಗಿದ್ದೇನೆ ಎಂಬ ಅರಿವಿನೊಂದಿಗೆ ತೂರಿಬಂದ ಆನಂದ ಆತನನ್ನು ಮತ್ತೂ ಸಶಕ್ತನನ್ನಾಗಿಸಿದೆ. ಈ ಆಘಾತ ಅವನಿಗೆ ಮತ್ತೆ ಕೃಷ್ಣಾಪುರದಲ್ಲಿ ಕೇಂದ್ರಸ್ಥಾನವನ್ನು ಒದಗಿಸಿಕೊಟ್ಟಿದೆ. ರಾಜಕಾರಣವನ್ನು ಮಾನವೀಕರಣಗೊಳಿಸುವ ನಿಟ್ಟಿನಲ್ಲಿ ಇಡೀ ಘಟನೆ ಸಹಕಾರಿಯಾಯಿತು. ಪ್ರತಿರೋಧವನ್ನು ಎದುರಿಸಿ ನಿಲ್ಲುವ ತಾಕತ್ತು ತನಗಿದೆ ಎಂಬ ಆತ್ಮವಿಶ್ವಾಸ ಶ್ರೇಯಾಂಸನಲ್ಲಿದೆ. ಈ ಆತ್ಮವಿಶ್ವಾಸವೇ ತಾನು ನಿರಾಕರಿಸಿದ ಕುಟುಂಬ ಕೇಂದ್ರದ ಯಾಜಮಾನ್ಯವನ್ನು ಪ್ರಶ್ನಿಸದಿರುವಂತೆ ಮಾಡಿದೆ. ತನ್ನ ಅಪ್ಪ ಸತ್ತಾಗ ತಾನು ತನ್ನ ಬೇರುಗಳನ್ನು ಹುಡುಕಿಕೊಂಡು ಬಂದಂತೆ ತನ್ನ ಮಗಳೂ ಬರಬೇಕೆಂಬ ಇಂಗಿತ ಶ್ರೇಯಾಂಸನದು.

ಹೀಗೆ ಹುಟ್ಟಿಕೊಂಡ ಆಸಕ್ತಿಗೂ ಮುಂಬಯಿಯ ಬಗ್ಗೆ ತಳೆಯುವ ನಿರಾಸಕ್ತಿಗೂ ಹೆಂಡತಿ ಲಿಝಿ, ಪ್ರೇಯಸಿ ರೇವತಿ ಇವರ ಜೊತೆಗಿರುವ ಎಳೆತ ಸೆಳೆತಗಳು ವೈಯಕ್ತಿಕ ಕಾರಣವಾಗುತ್ತವೆ. ಕಲ್ಪನಾ, ರೇವತಿ, ಲಿಝಿ, ನಿರ್ಮಲಾ, ಸರಸಮ್ಮ, ಅಂಬುಜಕ್ಕ, ಸೋನಾ ಇವರ ಸ್ತ್ರೀಪಾತ್ರಗಳಲ್ಲಿ ತೋರಿಬರುವ ವೈವಿಧ್ಯ, ಅವರ ಹವ್ಯಾಸಿಗಳು, ಹಂಬಲಗಳು, ಅಂಜಿಕೆಗಳು, ಕಪಟ, ನಿರಾಗಸತೆ ಒಂದೊಂದು ಚಿಕ್ಕ ಚಿಕ್ಕ ರೇಷೆಗಳಲ್ಲಿ ಮೂಡಿಕೊಳ್ಳುವ ರೀತಿ ಮೆಚ್ಚುವಂತಹದಾಗಿದೆ. ಶ್ರೇಯಾಂಸ ಈ ಸ್ತ್ರೀ ಸಂಕುಲದ ಜೊತೆ ಹೆಣೆದುಕೊಳ್ಳುವ ಸಂಬಂಧದಲ್ಲಿಯ ಸಹಜತೆ, ನಿರ್ಮಲತೆ, ಉದಾತ್ತತೆ ಒಂದು ರೀತಿಯಲ್ಲಿ ಕಾದಂಬರಿಯ ಲಕ್ಷಣೀಯವಾದ ಅಂಶ. ಕಾದಂಬರಿಯ ಇಡಿಯ ಹಂದರವೇ ಈ ಸಂಬಂಧಗಳ ಸೂಕ್ಷ್ಮವಾದ ಆಧಾರದ ಮೇಲೆ ನಿಂತಿರುವಂತಿದೆ. ಕಲ್ಪನಾ, ಸರಸಮ್ಮ, ಅಂಬುಜಕ್ಕ, ಕಲ್ಯಾಣ ಶೆಟ್ಟಿಯವರ ಹೆಂಡತಿ, ಸೋನಾ ಇವರ ಜೊತೆಗಿರುವ ಸಂಬಂಧ ಮಾನವೀಯ ಭಾವನೆಗಳ ಸಾಲಿಗೆ ಸೇರಿದ್ದು, ಆದರೆ ಲಿಝಿ, ನಿರ್ಮಲೆ ಮತ್ತು ರೇವತಿಯರ ಜೊತೆಗಿನ ಸಂಬಂಧ ಪ್ರೇಮ, ಕಾಮ, ಪ್ರಣಯದ ಮಾದರಿಯವು. ಆದರೆ ಇದನ್ನು ಇಷ್ಟು ಸುಲಭೀಕರಿಸಿ ಹೇಳುವುದು ಕಷ್ಟ. ಇಲ್ಲಿಯ ಯಾವ ಭಾವನೆಗಳೂ ಉದ್ರೇಕಕ್ಕೆ ಎಡೆ ಕೊಡುವುದಿಲ್ಲ. ಎಲ್ಲೆ ಮೀರುವುದಿಲ್ಲ. ಹೀಗೆ ಹತೋಟಿಯಲ್ಲಿದ್ದರೂ ಭಾವನೆಗಳ ಉತ್ಕಟತೆ ಮಾತ್ರ ಸ್ಪಷ್ಟವಾಗಿರುವುದು ಕಂಡುಬರುತ್ತದೆ. ಇಡಿಯ ಕಾದಂಬರಿಯನ್ನು ವ್ಯಾಪಿಸಿ ನಿಂತ ಒಂದು ಭಾವನೆ ರೇವತಿ-

ಶ್ರೇಯಾಂಸರ ಪ್ರಣಯ. "ಇಲ್ಲಿರುವ ರೊಮ್ಯಾಂಟಿಕ್, ಪ್ಲೇಟೋನಿಕ್, ಎಸ್ಥೆಟಿಕ್ ಅಂಶಗಳನ್ನು ಬಿಟ್ಟರೆ ಇದು ಎರಡು ದಡಗಳ ಆಕರ್ಷಣೆ, ಕೂಡಲಾಗದೆ ತಳಮಳಿಸುವ ಎರಡು ಹೃದಯಗಳ ಒತ್ತಡ, ಬರಿಯ ಹೆಣ್ಣು ಗಂಡುಗಳ ಪ್ರೀತಿಯಷ್ಟೇ ಅಲ್ಲ. ಲಿಝಿ ಮತ್ತು ಶ್ರೇಯಾಂಸನಲ್ಲಿಯ ಪ್ರೀತಿ ಸರಾಗವಾಗಿ ಹರಿಯುವ ಪ್ರವಾಹದಂತಿದ್ದರೆ, ರೇವತಿಯ ಬಗೆಗಿರುವ ಪ್ರೀತಿ ಅಣೆಕಟ್ಟಿನ ಬಂಧನದಲ್ಲಿ ಹರಿಯಬೇಕಾದ ನದಿಯ ಪ್ರವಾಹದಂತೆ ಒಂದು ರೀತಿಯ ಶಕ್ತಿಯನ್ನು, ಟೆನ್ಶನ್‌ನ್ನು ಉಂಟುಮಾಡಿ ಅಸ್ವಸ್ಥನನ್ನಾಗಿಸುವ ಪ್ರೀತಿ."[೧೮] ಈ ಇಬ್ಬರ ಪ್ರೀತಿಯ ಸೆಳೆತಗಳಲ್ಲಿ ಶ್ರೇಯಾಂಸನಿಗೆ ತನ್ನ ದಿಕ್ಕನ್ನು ನಿರ್ಧರಿಸಬೇಕಾಗಿದೆ. ಗ್ರಾಮ ವಿಕಾಸವೋ, ರೇವತಿಯ ಸಹವಾಸವೋ ಎನ್ನುವುದೇ ಸಂದಿಗ್ಧವಾಗುತ್ತದೆ. ಇಲ್ಲವೆ ನಗರ ಲೋಲುಪತೆಯೋ ಎನ್ನುವ ನಿರ್ಧಾರ ಮಾಡುತ್ತೇನೆನ್ನುವ ಅಸ್ಪಷ್ಟತೆಯನ್ನು ಆಸರೆಯಾಗಿಸಿಕೊಳ್ಳುತ್ತಾನೆ.

ಲಿಝಿಯ ವಿಷಯದಲ್ಲಿ ಶ್ರೇಯಾಂಸನದು ವೈಚಾರಿಕ, ವ್ಯಾವಹಾರಿಕ ದೃಷ್ಟಿ. ಪಿತೃಕೇಂದ್ರಿತ ನೆಲೆಯ ಸಾಂಪ್ರದಾಯಿಕತೆಯನ್ನು ಸಾಮಾಜಿಕ ಮೌಢ್ಯವೆಂಬ ಹೆಸರಿನಲ್ಲಿ ತಿರಸ್ಕರಿಸಿ, ಪ್ರತಿಭಟಿಸುವ ಅವಕಾಶವನ್ನು ಲಿಝಿಯ ತಂದೆ ಸ್ಥಾಪಿಸಿದ ರಸೆಲ್ ಕ್ಲಬ್ ಒದಗಿಸಿತು. ಈ ವೈಚಾರಿಕ, ವ್ಯಾವಹಾರಿಕತೆಯಲ್ಲಿ ಹೊಸ ಸಂಬಂಧದ ಬೇರುಗಳು ವಿಸ್ತಾರವಾಗಿ ಚಾಚುತ್ತವೆಯೇ ಹೊರತು ಆಳವಾಗಿ ಅಲ್ಲ. ಲಿಝಿಯೊಂದಿಗಿನ ದಾಂಪತ್ಯ ಆತನಿಗೆ ಪಿತೃದ್ವೇಷ ಸಾಧನೆಯ ಅವಶ್ಯಕತೆಯಾಗಿಯೂ ಸಾಮಾಜಿಕ ಸುರಕ್ಷತೆಯಾಗಿಯೂ ಪರಿಣಮಿಸಿದೆ. ಈ ವ್ಯಾವಹಾರಿಕತೆಯಿಂದಾಗಿಯೇ ಪ್ರಣಯ ನಿವೇದನೆಯ ಉದ್ದುದ್ದನೆಯ ಕಾಗದಗಳನ್ನು ಬರೆಯುತ್ತಿದ್ದ ಶ್ರೇಯಾಂಸನಿಗೆ ರೇವತಿಯೊಂದಿಗಿನ ಸಂಬಂಧದ ಸಂಪರ್ಕವೇ ಇಲ್ಲವೆನಿಸುತ್ತದೆ. ಲಿಝಿ ಮತ್ತು ರೇವತಿ ಒಂದೇ ಮರದ ಬೇರಾದರೂ ಒಂದು ಇನ್ನೊಂದಕ್ಕೆ ಸಂಬಂಧವಿಲ್ಲದಂತೆ ಅಸ್ತಿತ್ವದಲ್ಲಿವೆ.

ಲಿಝಿ ಪಾಲ್‌ನೊಂದಿಗಿನ ಸಂಬಂಧದ ಬೇರು ತನ್ನದೇ ಆದ ವಿಶಿಷ್ಟ ಬಗೆಯ ಫಲಿತವನ್ನು ಶ್ರೇಯಾಂಸನಿಗೆ ನೀಡಿದೆ. ಈ ಬೇರಿನ ಪೋಷಣೆಯಿಂದ ಹೊರಬಂದ ಫಲವಾಗಿ ಶ್ರೇಯಾಂಸನ ಮಗಳು ಕಲ್ಪನ ಇದ್ದಾಳೆ. ಇವಳು ಒಂದು ರೀತಿಯಲ್ಲಿ ಶ್ರೇಯಾಂಸನ ಬದುಕಿನ ವಿಸ್ತರಣೆ. ರೇವತಿಯಂತೆ ಈಕೆಯೂ ತನ್ನಲ್ಲಿನ ಸಹಾನುಭೂತಿ ಸಹಸ್ಪಂದನಗಳಿಂದ ಶ್ರೇಯಾಂಸನ ಭರವಸೆಯ ಕೇಂದ್ರವಾಗಿ ಇದ್ದಾಳೆ. ಲಿಝಿ ಶ್ರೇಯಾಂಸನ ವ್ಯಕ್ತಿತ್ವದ ಅತಿ ನಾಗರಿಕ, ಶಿಷ್ಟ ಪ್ರಜ್ಞೆಯ ಸಂಕೇತವೂ ಆಗಿದ್ದಾಳೆ. ಅವಳದೇ ಆದ ವಿಶ್ವದಲ್ಲಿ ಕೃಷ್ಣಾಪುರದೊಂದಿಗಿನ ತನ್ನ ಸಂಬಂಧಗಳಿಗೆ ಯಾವುದೇ ಬಗೆಯ ಪ್ರವೇಶವಿಲ್ಲವೆಂಬುದನ್ನು ಶ್ರೇಯಾಂಸ ಈಗಾಗಲೇ ಅರಿತಿದ್ದಾನೆ. ಕೃಷ್ಣಾಪುರದೊಳಗಿನ ತನ್ನ ಸಂಬಂಧದ ಬೇರುಗಳೊಡನೆ ಲಿಝಿಯ ಲೋಕ ಸಂಪರ್ಕ ಹೊಂದುವುದು ಅಸಾಧ್ಯ ಹಾಗೂ ಅಸಂಭವವೆಂಬುದು ಶ್ರೇಯಾಂಸನಿಗೆ ತಲ್ಲಣದ ವಿಷಯವಾಗುವುದಕ್ಕಿಂತ ಸಾಮಾಜಿಕ ಸುಭದ್ರತೆ ಎಲ್ಲಿ ಭಗ್ನಗೊಳ್ಳುವುದೋ ಎಂಬ ಆತಂಕದ ಸಂಗತಿಯಾಗುತ್ತದೆ. ಹಾಗೂ ತನ್ನ ಹಾಗೂ ತನ್ನ ಅಪ್ಪನ ನಡುವಿನ ಕರ್ಷಣಕ್ಕೆ ಅಪ್ಪನ ಮರಣ ಮುಕ್ತಾಯ ಹಾಡಿದರೂ, ಇನ್ನು ಮುಂದೆ ತನ್ನ ಹಾಗೂ ಲಿಝಿಯ ನಡುವಿನ ಕರ್ಷಣ

ಮೊದಲಾಗುವುದೆಂಬುದು ಶ್ರೇಯಾಂಸನ ಅನಿಸಿಕೆ. ವ್ಯಕ್ತಿಯಾಗಿ ಲಿಝಿ ಶ್ರೇಯಾಂಸನಿಗೆ ಸವಾಲಾಗದಿದ್ದರೂ ಅವನೊಳಗಿನ ನಗರ ಪ್ರಜ್ಞೆಯ ಸಂಕೇತವೇ ಅವಳಾಗುವುದರಿಂದ ಇನ್ನು ಮುಂದಿನ ಕರ್ಷಣವೇನಿದ್ದರೂ ಶ್ರೇಯಾಂಸನೊಳಗಿನ ಎರಡು ವಿರುದ್ಧ ಸ್ಥಿತಿಗಳ ನಡುವೆಯೇ.

ತಂದೆಯೊಂದಿಗಿನ ಸಂಬಂಧದ ಬೇರು ಶ್ರೇಯಾಂಸನ ಮನಸ್ಸಿನ ಆಳಕ್ಕೆ ಇಳಿದಿರುವಷ್ಟು ಆಳವಾಗಿ ಲಿಝಿ ಕೇಂದ್ರಿತ ಬೇರು ಇಳಿದಿಲ್ಲ. ಹೀಗಾಗಿ ಸಮಶಕ್ತಿ ಕೇಂದ್ರಗಳ ನಡುವಿನ ಕರ್ಷಣೆ ರೂಪುಗೊಳ್ಳುವುದಿಲ್ಲ. ಪಿತೃಕೇಂದ್ರಿತತೆ ಹೊಂದುವ ಸರಂಜಾಮೀ ದರ್ಪ ಲೋಲುಪತೆಯನ್ನು ಕೈಬಿಟ್ಟು ಸಾಮಾಜಿಕ ಹೊಣೆಗಾರಿಕೆಯಾಧಾರಿತ ನೆಲೆಯನ್ನು ಪಡೆಯುವಲ್ಲಿ ಶ್ರೇಯಾಂಸನ ಬೇರು ಆಳಕ್ಕೆ ಇಳಿಯುತ್ತದೆ. ಈ ದೃಷ್ಟಿಯಿಂದ ಆತ ಪಿತೃಸಂಬಂಧೀ ಗುಣಗಳನ್ನು ಅಂತರ್ಗತಗೊಳಿಸಿಕೊಳ್ಳಲು ಕಷ್ಟವೇನೂ ಆಗುವುದಿಲ್ಲ. ಶ್ರೇಯಾಂಸನ ಅಹಂನ ಭಾಗವಾಗಿರುವ ಅವನ ನಗರಪ್ರಜ್ಞೆ ಬೆರಗುಗೊಳಿಸುವ ವಿಷಯವೇ. ಆದರೂ ಅಂಥ ಪ್ರಬಲ ಸಂಘರ್ಷವೇನೂ ಏರ್ಪಡುವುದಿಲ್ಲ. ನಗರಪ್ರಜ್ಞೆ ಅಗಲಕ್ಕೆ ವಿಸ್ತಾರಗೊಳ್ಳುವ ಬೇರಾಗಿದ್ದ ಕೃಷ್ಣಾಪುರದ ಬೇರು ಆಳಕ್ಕಿಳಿಯುವುದಾಗಿದ್ದು, ಒಂದು ಇನ್ನೊಂದನ್ನು ಪರಸ್ಪರ ಭೇದಿಸಲಾರದ್ದರಿಂದ ಈ ಸಂಘರ್ಷವಿಲ್ಲ. ಆದರೆ ರೇವತಿ-ಶ್ರೇಯಾಂಸರ ಸಹವಾಸ ಒಂದು ಪ್ರಶ್ನಾ ಸೂಚಕವಾಗಿಯೇ ಉಳಿಯುತ್ತದೆ ಎನ್ನುವುದಕ್ಕೆ ಶ್ರೇಯಾಂಸನ ಮೇಲೆ ನಡೆದ ಹಲ್ಲೆಯ ಮೂಲಕ ಅವನು ಕೃಷ್ಣಾಪುರದಲ್ಲಿ ನೆಲೆಸುವುದೇ ಅನಿಶ್ಚಿತವಾಗುವುದರಿಂದ ರೇವತಿ ಅರ್ಧಕ್ಕೆ ಬಿಟ್ಟ ಚಿತ್ರವನ್ನು ಮುಗಿಸಿದ್ದು ಅವರ ಸಮಾಗಮದ ಸೂಚನೆಯನ್ನು ಕೊಡುವಂತೆ ಶ್ರೇಯಾಂಸನ ನಿರ್ಧಾರವೂ ಅದನ್ನು ಪುಷ್ಟೀಕರಿಸುತ್ತದೆ.

ಶ್ರೇಯಾಂಸನ ಬಾಲ್ಯ ಸ್ನೇಹಿತನಾದ ವಸಂತ ಗೋವಿಲಕರನದು ಮತ್ತೊಂದು ಬಗೆಯ ದುರಂತದ ಜೀವನವಾಗಿದೆ. ತನ್ನ ವೃತ್ತಿಯಲ್ಲೇ ತನ್ನನ್ನು ತೊಡಗಿಸಿಕೊಂಡಿದ್ದ ವಸಂತ ಯಾರಿಗೂ ಕೇಡನ್ನು ಬಯಸದ ವ್ಯಕ್ತಿಯಾಗಿದ್ದಾನೆ. ತನ್ನ ಕಷ್ಟ ಸುಖಗಳನ್ನು ಶ್ರೇಯಾಂಸನ ಹತ್ತಿರ ಹೇಳಿಕೊಳ್ಳುತ್ತಿರುತ್ತಾನೆ. ತಾಯಿ-ತಂಗಿಯರನ್ನು ಸಾಕುವುದರಲ್ಲಿಯೇ ಧನ್ಯತೆಯನ್ನು ಹೊಂದಿದ್ದ ವಸಂತನಿಗೆ ಗೋವಾದ ಹುಡುಗಿ ನಿರ್ಮಲೆಯನ್ನು ತಂದು ಮದುವೆ, ಮಾಡಿದ ಮೇಲೆ ಅವನ ಬದುಕು ದುರಂತಮಯವಾಗುತ್ತದೆ. ತಿಳುವಳಿಕೆಯಿಲ್ಲದ, ಮನುಷ್ಯತ್ವವನ್ನು ಕಳೆದುಕೊಂಡಿದ್ದ ನಿರ್ಮಲೆ ಆಡಂಬರದ ಬದುಕಿಗೆ ಜೋತುಬಿದ್ದಿರುತ್ತಾಳೆ. ರೇವತಿ ವಿಧವೆಯಾಗಿ ತಮ್ಮ ಮನೆಗೆ ಬಂದ ಮೇಲೆ ತನ್ನ ಸ್ವಾತಂತ್ರ್ಯಕ್ಕೆ ಇವಳು ಅಡ್ಡಿ ಬರುತ್ತಿದ್ದಾಳೆಂದು ಭಾವಿಸಿ ಅವಳನ್ನು ದೂರಮಾಡಲು ಯತ್ನಿಸುತ್ತಾಳೆ. ಮದುವೆಯಾಗಿ ಬಹಳ ವರ್ಷಗಳಾಗಿದ್ದರೂ ಇವಳಿಗೆ ಮಕ್ಕಳಾಗದಿದ್ದುದರಿಂದ ಮಾನಸಿಕವಾಗಿ ಆಘಾತಕ್ಕೊಳಗಾಗಿರುತ್ತಾಳೆ. ಇದಕ್ಕೆಲ್ಲ ವಸಂತನೇ ಕಾರಣ ಎಂದು ದೂರುತ್ತಾಳೆ. ಇವರ ಸಮಸ್ಯೆಯನ್ನರಿತ ಶ್ರೇಯಾಂಸ ಮುಂಬಯಿಯ ತಜ್ಞರಿಂದ ನಿರ್ಮಲೆಯ ಶಾರೀರಿಕ ಕೊರತೆಗಳ ಬಗ್ಗೆಯಾದರೂ ನಿವಾರಣೆ ದೊರೆಯಬಹುದೇ ಎಂದು ತಪಾಸಣೆ ಮಾಡಿಸುತ್ತಾನೆ.

ಸರಸಮ್ಮ ಶ್ರೇಯಾಂಸನ ತಾಯಿ. ಆದರೆ ಶ್ರೇಯಾಂಸನ ಜೊತೆ ಸರಸಮ್ಮನ ಮುಖಾಮುಖಿ ಕಾದಂಬರಿಯ ಮಧ್ಯಭಾಗದ ತನಕ ವಿಳಂಬಿಸಲ್ಪಟ್ಟಿದೆ. ಸರಸಮ್ಮ ಬದಲಾವಣೆಯನ್ನು ಒಪ್ಪಿಕೊಳ್ಳಲಿಕ್ಕೆ ತಯಾರಾಗುವುದು ಒಂದು ಯುಗ ಪ್ರವರ್ತನೆಯ ಸೂಚನೆ. ಇಷ್ಟರ ತನಕ ಸರಂಜಾಮಿ ಆಡಳಿತದ ದಬ್ಬಾಳಿಕೆಯನ್ನು ಕಂಡವಳಿಗೆ ಮಗನ, ಮೊಮ್ಮಗಳ ಹೊಸ ಹುಮ್ಮಸ್ಸು ಒಪ್ಪಿಗೆಯಾಗಿದೆ. ಸ್ವಚ್ಛಂದ ವೃತ್ತಿಯವಳಾದರೂ ಕಲ್ಪನೆ ತನ್ನ ಕುಟುಂಬದವಳೆನ್ನುವ ಕಾರಣ ಆಕರ್ಷಕಳಾಗುತ್ತಾಳೆ. ಕ್ರಿಶ್ಚಿಯನ್ ಸೊಸೆ ಲಿಝಿ ಮಾನ್ಯಳಾಗುತ್ತಾಳೆ.

ಮನುಷ್ಯ ಸಂಬಂಧಗಳು ಸ್ವತಂತ್ರವಾದಾಗಲೇ ಅವುಗಳ ವಿಕಾಸ ಸಾಧ್ಯ. ಸ್ವತಂತ್ರವಾಗುವುದೆಂದರೆ ಘಟಸ್ಫೋಟವಲ್ಲ. ನೈತಿಕತೆಯ ಕುರಿತಾದ ಅತ್ಯಂತ ಜಟಿಲವಾದ ಸಮಸ್ಯೆಯ ಸಾಮಾಜಿಕ ನೆಲೆಯನ್ನು ಶಾಂತಿನಾಥರು ಈ ಕಾದಂಬರಿಯಲ್ಲಿ ಸ್ಪಷ್ಟಪಡಿಸಲು ಯತ್ನಿಸುತ್ತಿದ್ದಾರೆ. ಶ್ರೇಯಾಂಸನಿಗೆ ಕಲ್ಯಾಣ ಶೆಟ್ಟರು ಹೇಳುವ ಮಾತುಗಳಲ್ಲಿ ಇದು ವ್ಯಕ್ತವಾಗುತ್ತದೆ. ಬದುಕನ್ನು ಶ್ರೇಯಾಂಸನಂಥವರು ಯುದ್ಧಭೂಮಿ ಎಂದು ಭಾವಿಸಿದರೆ ಏನೂ ಪ್ರಯೋಜನವಿಲ್ಲವೆಂದು ಅವರ ಅನಿಸಿಕೆ. ತನ್ನ ವಿರುದ್ಧದ ಶಕ್ತಿಗಳನ್ನು ಎದುರಿಸುವ ಛಲಕ್ಕಿಂತಲೂ ಬದುಕನ್ನು ನಿಜವಾದ ಅರ್ಥದಲ್ಲಿ ಕರ್ಮಭೂಮಿಯನ್ನಾಗಿ ಮಾಡಿಕೊಳ್ಳುವುದು ಸಾರ್ಥಕ ಕೃತ್ಯ ಎಂಬ ತತ್ವ ಕಲ್ಯಾಣ ಶೆಟ್ಟರನ್ನು ಆಕ್ರಮಣಕಾರಿಯ ಕಾತರತೆಗೆ ಬದಲಾಗಿ ಸಹಜೀವನದ ತಾಳ್ಮೆ, ಸಮತೂಕಗಳು ಈ ಕರ್ಮಭೂಮಿಯ ಕೃಷಿಗೆ ಅತ್ಯಗತ್ಯವೆಂಬ ಬುದ್ಧಿವಾದ ಅವರದು. ನಿರ್ಧಾರವೆನ್ನುವುದು ಕೇವಲ ಆಕಸ್ಮಿಕ ಕ್ರಿಯೆಯಲ್ಲ. ಪ್ರತಿಯೊಂದು ನಿರ್ಧಾರಕ್ಕೆ ಪೂರ್ವಭಾವಿಯಾಗಿ ಕೃಷಿ ನಡೆದಿರಬೇಕು. ಈ ಕೃಷಿಯ ಸ್ವರೂಪ ಹೀಗಿದೆ : "ಮೊದಲು ನಿನ್ನ ಹೊಲದ ಕಡೆ ಲಕ್ಷ್ಯಕೊಡು ಮತ್ತೆ ಸಾವಕಾಶವಾಗಿ ಊರಾಗಿನ ಮಂದಿ ಎಂಥವರು, ಅವರ ಒಲವುಗಳೇನು, ಅವರ ಸಮಸ್ಯೆಗಳೇನು ಇತ್ಯಾದಿ ತಿಳಿಕೊಳ್ಳಲಿಕ್ಕೆ ಪ್ರಯತ್ನಮಾಡು ಎನ್ನುತ್ತಾರೆ."[೯] ಶೆಟ್ಟರ ಪ್ರಕಾರ ಈ ಪ್ರಯತ್ನ ಲಗ್ನಾ ಮಾಡಿಕೊಂಡ ಹಾಗೆ. ಕೃಷ್ಣಾಪುರದ ಮಗನಾಗಿ ಸಂಬಂಧವಿಟ್ಟುಕೊಳ್ಳುವುದೆಂದರೆ ಹಕ್ಕುದಾರಿಕೆಯ ಪ್ರಶ್ನೆ ಬರುತ್ತದೆ. ಪ್ರತಿಭಟನೆ ಪ್ರತಿಕ್ರಿಯೆ ಅನಿವಾರ್ಯವಾಗುತ್ತದೆ. ಆದರೆ ಕಲ್ಯಾಣಶೆಟ್ಟರು ಹೇಳುವ 'ಧರ್ಮೇಚ ಕಾಮೇಚ' ಅಂತ ಒಪ್ಪಿಕೊಳ್ಳುವ ಸಂಬಂಧ 'ತಾಯಿಗ್ಗಂಡ'ತನವಾದರೂ ಬೇರುಗಳನ್ನು ದೃಢಗೊಳಿಸುವಂಥವು. ಅಂಬುಜಕ್ಕ, ನಿರ್ಮಲೆಯೊಂದಿಗಿನ ಸಂಬಂಧದಲ್ಲಿ ನೈತಿಕತೆಯ ಪ್ರಜ್ಞೆ ಎಚ್ಚರವಾಗಿದ್ದರೂ ಒಳಗೆಲ್ಲೋ ಆಕರ್ಷಣೆಯ ಬೇರುಗಳಿವೆ. ಈ ಬದುಕಿನೊಂದಿಗೆ ಆತನನ್ನು ಕಟ್ಟಿಹಾಕಲು, ಬದ್ಧವಾಗಲು ಈ ಬೇರುಗಳೂ ಅನಿವಾರ್ಯ ಅಗತ್ಯ. ಬರೇ ರಸೆಲ್ ಕ್ಲಬ್ಬಿನ ಚಟುವಟಿಕೆಗಳು ಭಾವನೆ, ಚಿಂತನೆಯ ಬೀಜಗಳನ್ನು ಸಿದ್ಧಗೊಳಿಸಬಹುದು. ಆದರೆ ಆ ಬೀಜಗಳನ್ನು ಬಿತ್ತಲು ಸಮೃದ್ಧ ಮಾನವ ಸಂಬಂಧ ಆಧರಿತ ಕೃಷಿಯೋಗ್ಯ ಭೂಮಿ ಬೇಕು. ತಾ ಹುಟ್ಟಿದ ನೆಲದಲ್ಲೇ ನೇಗಿಲು ಹೂಡಿ ಕೃಷಿ ಮಾಡುವ 'ತಾಯಿಗ್ಗಂಡ' ತನದ ತಾತ್ವಿಕತೆ ಶ್ರೇಯಾಂಸನಿಗೆ ಕ್ರಮೇಣ ಅರ್ಥವಾಗುತ್ತದೆ.

"ನಾ ಅಂದರ ಆಧುನಿಕ 'ಗಂಡ' ನನ್ನ ಮನಸ್ಸಿಗೆ ಬಂದಾಂಗ ನಾ ಮಾಡಾಂವಾ - ಕೂಡಿ ನಡೀಲಿಲ್ಲಾ ಅಂದರೆ ಘಟಸ್ಫೋಟಕ್ಕೆ ತಯಾರ"[೨೦] ಎಂಬ ಶ್ರೇಯಾಂಸನ ಧೋರಣೆಯ ಮಿತಿಯನ್ನು ಕಲ್ಯಾಣಶೆಟ್ಟರೇ ಎತ್ತಿ ತೋರಿಸುತ್ತಾರೆ. "... ನೀ ಗಟ್ಟಿಯಾಗಿ ನಿಲ್ಲಬೇಕು... ಶಾಂತ ರೀತಿಯಿಂದ, ಮನಸ್ಸಿನ ಸಮತೋಲನ ಕಳಕೊಳ್ಳದೆ ಕುಸ್ತೀ ಆಡಲಿಕ್ಕೆ ಕಲೀಬೇಕು. ನಿಮ್ಮಪ್ಪ ಆ ಕಲಾನೇ ಸಾಧಿಸಲಿಲ್ಲ... ಬರೇ ಅಹಂ! ನೀ ಅವನ ಮೂಲ ಅಹಂಭಾವನೆಗೇ ಹೊಡೆತ ಕೊಟ್ಟೆ-ಅಂತೆ ನಿನಗೆ ಹೊರಗೆ ಹಾಕಿಬಿಟ್ಟ... ಮತ್ತ ನೀನೂ ಹಾಂಗೆ ನಿನ್ನ ಅಹಂಭಾವದಿಂದ ಹಟಮಾರಿತನದಿಂದ ಏನಾದರೂ ಮಾಡಲಿಕ್ಕೆ ಹೋದರೆ ಜೋಕೆ ಅನಾಹುತವಾದೀತು..."[೨೧]

ಈ ಆಹ್ವಾನವನ್ನು ಶ್ರೇಯಾಂಸ ಕುಸ್ತಿಕಲೆಯ ಹುಮ್ಮಸ್ಸಿನಲ್ಲಿ ಸ್ವೀಕರಿಸಿ ಕೃಷ್ಣಾಪುರದಲ್ಲಿರಲು ನಿರ್ಧರಿಸುತ್ತಾನೆ. ಇಲ್ಲಿ ನಿರ್ಧಾರಕ್ಕಿಂತ ಮುಖ್ಯವಾದದ್ದು ಪೂರ್ವಸಿದ್ಧತೆ, ಕೃಷಿ ನಿರ್ಧಾರದ ಪರಿಣಾಮಗಳನ್ನು ಎದುರಿಸಬೇಕಾದ ಮಾನಸಿಕ ಬದ್ಧತೆಯನ್ನು ಅಸ್ತಿತ್ವವಾದದ ತಾತ್ವಿಕತೆ ಎತ್ತಿ ಹಿಡಿದರೆ, ನಿರ್ಧಾರ ಕೈಗೊಳ್ಳುವಲ್ಲಿನ ಜವಾಬ್ದಾರಿಯುತ ಪೂರ್ವಸಿದ್ಧತೆ, ಮನಸ್ಸಿನ ಕೃಷಿಯನ್ನು ಭಾರತೀಯ ತಾತ್ವಿಕತೆ ಅಗತ್ಯವೆಂದು ಪರಿಗಣಿಸುತ್ತದೆ. ಶ್ರೇಯಾಂಸನ ನಿರ್ಧಾರಕ್ಕೆ ಅರ್ಥವಂತಿಕೆ ದಕ್ಕುವುದು ಇಲ್ಲಿಯೇ. ಆಗ ಮಾತ್ರ ಇತಿಹಾಸವನ್ನು, ಭೂತವನ್ನು ಯಾವುದೇ ಘರ್ಷಣೆಗಳಿಲ್ಲದೆ ನಿರಾತಂಕವಾಗಿ ಒಳಗೊಳ್ಳಲು ಸಾಧ್ಯವಾಗುತ್ತದೆ.

ಅಂತರಾಳ

ಸಾಕ್ಷೀ ಪ್ರಜ್ಞೆಯ ಮೂಲಕ ಗತ ಅನುಭವಗಳನ್ನು ವರ್ತಮಾನದ ಅರಿವಿನೊಂದಿಗೆ ಮುಖಾಮುಖಿ ಯಾಗಿಸುವ ಯತ್ನ ಈ ಕಾದಂಬರಿಯಲ್ಲಿದೆ. ಅಂತರಾಳದ ಅನುಭವಗಳ ಶೋಧಕ್ಕೆ ಒರೆಗಲ್ಲಾಗಿ ಸೃಷ್ಟಿಸಿಕೊಳ್ಳುವ ಸಾಕ್ಷೀ ಪ್ರಜ್ಞೆಯು ಇಲ್ಲಿ ಶೋಧಕ್ಕೆ ಒಳಗಾಗಿದೆ. ಈ ಶೋಧ ರೊಮ್ಯಾಂಟಿಕ್, ವಾಸ್ತವಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಹೊಂದಿದೆ. ಹಾಗಾಗಿ ಈ ಶೋಧಕ್ಕೆ ಕಾದಂಬರಿಯ ಕೊನೆಯ ಹೊತ್ತಿಗೆ ಒಂದು ತಾತ್ವಿಕ ಸ್ವರೂಪ ಒದಗಲು ಸಾಧ್ಯವಾಗಿದೆ.

ಸ್ವಗತ ರೀತಿಯ ನಿರೂಪಣೆಯ ಈ ಕಾದಂಬರಿಯು ಉದ್ದಕ್ಕೂ ಅನೇಕ ದಾರ್ಶನಿಕ ಚಿಂತನೆಗಳನ್ನು ಅನ್ವೇಷಕ ನೆಲೆಯಲ್ಲಿ ಬಳಸಿಕೊಂಡಿದೆ. ಗಾಂಧೀವಾದ, ಮಾರ್ಕ್ಸ್‌ವಾದ, ಉದಾರವಾದಿ, ಮಾನವತಾವಾದ ಎಂ.ಎನ್.ರಾಯ್ ವಾದಗಳ ಮೂಲಕ ಚಿಂತನೆಯ ಎಳೆಗಳು ಕೇಂದ್ರ ಪಾತ್ರದ ಮಾತುಗಳಾಗಿ ಮಾತ್ರ ಕಾದಂಬರಿಯಲ್ಲಿ ಬಳಕೆಯಾಗಿಲ್ಲ. ಇತರ ಪಾತ್ರಗಳೊಂದಿಗಿನ ಸಾಮಾಜಿಕ, ಭಾವನಾತ್ಮಕ ಸಜೀವ ಸಂಬಂಧಗಳ ಭಾಗವಾಗಿ, ಸಂವಾದ ಸಂಭಾಷಣೆಯ ರೂಪದಲ್ಲಿಯೂ ಕೃತಿಯ ವೈಚಾರಿಕತೆ ಸಿದ್ಧಗೊಳ್ಳುತ್ತದೆ. ಬದುಕನ್ನು ಕುರಿತ ಸಿದ್ಧ ಮಾರ್ಗವನ್ನು ಯಾವುದೇ ತತ್ವಸಿದ್ಧಾಂತಗಳು ರೂಪಿಸಲಾರವೆಂಬ ಅಸ್ತಿತ್ವವಾದಿ

ತಿಳುವಳಿಕೆಗೆ ಕಾದಂಬರಿ ಬದ್ಧವಾಗಿದೆ. ಆದರೆ "ಅಂತರಾಳದ ಕೇಂದ್ರ ಪ್ರಜ್ಞೆಯಾಗಿರುವ ವಿಕ್ರಮ್‌ರಾಣೆ ಎಷ್ಟು ಜೀವಂತ ಪಾತ್ರವೆಂದರೆ, ಅಸ್ತಿತ್ವವಾದದ ಪೂರ್ವಭಾವಿ ಅರಿವಿನಿಂದಲೇ ಆತ ಎಲ್ಲವನ್ನು ಸಾಕ್ಷೀ ಪ್ರಜ್ಞೆಯಿಂದ ನೋಡುವ ತಟಸ್ಥ ವ್ಯಕ್ತಿಯಲ್ಲ; ಆತ ಉಪನಿಷತ್ತಿನಲ್ಲಿ ಬರುವ ಎರಡು ಪಕ್ಷಿಗಳ ರೂಪಕದಲ್ಲಿನ 'ಹಣ್ಣು ತಿನ್ನುವ ಗಿಣಿ' ಕೂಡ. ಸ್ವಾಭಾವಿಕವಾಗಿಯೇ ವಿಚಾರ ಮಾಡುವ ಪ್ರಾಣಿಯಾದ ಮಾನವನ ಮನಸ್ಸು ಏಕಕಾಲಕ್ಕೆ ಅನುಭವವನ್ನು ಪಡೆಯುತ್ತಲೇ ಅದನ್ನು ನೋಡುವ, ಪರೀಕ್ಷಿಸುವ ಕೌಶಲ್ಯವುಳ್ಳದ್ದು ಅದೇ ನೀತಿಯ ಜನ್ಮಸ್ಥಾನ. ಕಾದಂಬರಿಯಲ್ಲಿ ಬರುವ ವಿಕ್ರಮರಾಣೆ ಇಂಥ ಕೌಶಲ್ಯವನ್ನು ಪಡೆಯಲು ಪ್ರಜ್ಞಾಪೂರ್ವಕವಾಗಿ ಹವಣಿಸುವ ವ್ಯಕ್ತಿ."[೨೨]

ಐವತ್ತರ ಅನಂತರದ ಬದುಕೆಂದರೆ ರೈಲು ಚಲಿಸುವ ದಿಕ್ಕಿಗೆ ಬೆನ್ನು ಮಾಡಿ ರೈಲಿನೊಳಗೆ ಕೂತಂತೆ" ಐವತ್ತರ ಅನಂತರ ಕಾಡಲಾರಂಭಿಸುವ ಸಾವಿನ ಪ್ರಜ್ಞೆ ಮತ್ತೆ ಮತ್ತೆ ಕಳೆದು ಹೋದ ದಿನಗಳ ನೆನಪನ್ನು ಜೀವಂತ ಕ್ಷಣವಾಗಿಸಲು ಯತ್ನಿಸುತ್ತದೆ. ಹಾಗಾಗಿ ವರ್ತಮಾನದ ದೈನಂದಿನ ಚಲನೆಗೂ ವಿಚಿತ್ರ ಬಗೆಯ ತೀವ್ರತೆಯನ್ನು ಗತದ ಪ್ರಜ್ಞೆ ಒದಗಿಸುತ್ತದೆ. ಗತ ವರ್ತಮಾನ ಭವಿಷ್ಯವನ್ನು ಒಂದು ಕೇಂದ್ರಕ್ಕೆ ಒಳಪಡಿಸಬಲ್ಲ ಕರ್ಷಣದ ನೆಲೆ ವಿಕ್ರಮ್‌ರಾಣೆಯಂತಹ ಐವತ್ತರ ವ್ಯಕ್ತಿಗೆ ದಕ್ಕುತ್ತದೆ. ಆಗ, ಆತ ಬರೆದದ್ದೆಲ್ಲ ಆತ್ಮನಿವೇದನೆಯಾಗದೆ ಗತ್ಯಂತರವೇ ಇಲ್ಲ. ತಾರುಣ್ಯ, ಪ್ರೌಢ, ಮಧ್ಯವಯಸ್ಕ ಹಂತದಲ್ಲಿ ತಾನು ಪಡೆದ ಅನುಭವಗಳಿಗೆ ಅಚ್ಚುಕಟ್ಟಾದ ಆಕಾರ ಕಲ್ಪಿಸುವುದು ಸಾಧ್ಯವಿಲ್ಲೆಂಬುದು ವಿಕ್ರಮನಿಗೆ ಗೊತ್ತು. ಸಾಹಿತ್ಯ, ರಾಜಕೀಯ, ಸಮಾಜಶಾಸ್ತ್ರ, ಮನಃಶಾಸ್ತ್ರೀಯ ಜ್ಞಾನವೂ ತನ್ನ ಅನುಭವಗಳನ್ನು ಸರಳ ಗ್ರಹಿಕೆಗೆ ಒಳಪಡಿಸದಂತೆ ಅವನನ್ನು ತಡೆದಿವೆ. ಇದು ಆತನಿಗೊದಗಿದ ಸ್ವಾತಂತ್ರ್ಯ. ತನ್ನ ಮಗ ಹಾಗೂ ಮಗಳ ವರ್ತನೆಯನ್ನು ಆತಂಕದಿಂದ ಪರಿಭಾವಿಸುತ್ತಿರುವಾಗಲೇ ಏಕಕಾಲಕ್ಕೆ ತನ್ನ ಬಾಲ್ಯ, ಮನೆತನ ಹಾಗೂ ಶಾಲೆಯ ಪ್ರಭಾವ, ಗೆಳೆತನ, ಪ್ರಣಯ, ಲೈಂಗಿಕತೆ, ಆದರ್ಶಪರತೆಗಳೆಡೆ ವಿಕ್ರಮನ ಮನ ಹಾರಬಲ್ಲದು.

ವಿಕ್ರಮ್ ತನ್ನ ಅಸ್ತಿತ್ವವನ್ನು ಶೋಧಿಸ ಹೊರಟವ. ತನ್ನ ಅಸ್ತಿತ್ವದ ಅನಿವಾರ್ಯ ಭಾಗವಾಗಿ ಹೆಂಡತಿ, ಮಗಳು, ಮಗ, ಮಾಸ್ತರ್, ಅಶ್ವಿನಿ, ಗೆಳೆಯರು, ಅಜ್ಜಿ, ಮುಂತಾದವರೊಂದಿಗೆ ತಾನು ಒಳಗೊಂಡ ಸಂದರ್ಭವನ್ನು ಪುನಃ ಸೃಷ್ಟಿಸಿಕೊಳ್ಳುತ್ತಾನೆ. ಆ ಮೂಲಕ ತನ್ನನ್ನೂ ಇತರರನ್ನೂ ಅರ್ಥೈಸಿಕೊಳ್ಳುವ ಪ್ರಕ್ರಿಯೆಗೆ ಆತ ಒಳಗಾಗುತ್ತಾನೆ. ಇವರೆಲ್ಲರ ಮೂಲಕವೇ ತನ್ನ ಅಸ್ತಿತ್ವಕ್ಕೇನಾದರೂ ಅರ್ಥವಿದೆಯೇ? ಎಂದು ಆತ ಹುಡುಕ ಹೊರಟವ. ಈ ಹುಡುಕಾಟ ಮುಗ್ಧ, ಸರಳವಲ್ಲ ಅದರ ಬಗೆಗೆ ಜಾಗೃತವಾದ ಜಿಜ್ಞಾಸೆಯನ್ನು ವಿಕ್ರಮನ ಪಾತ್ರದ ಮೂಲಕ ಕಾದಂಬರಿಕಾರರು ಕಟ್ಟಿಕೊಡುತ್ತಾರೆ. ತನ್ನನ್ನು ಹಾಗೂ ಅನ್ಯರನ್ನು ಮಂಜಿನಂಥ ಪ್ರಜ್ಞೆಯ ಮೂಲಕವೇ ಅರಿತುಕೊಳ್ಳಬೇಕಾದ ಮಿತಿಯ ಕಲ್ಪನೆ ವಿಕ್ರಮನಿಗಿದೆ. ಸಾಯುತ್ತೇವೆಂದು ಗೊತ್ತಿದ್ದರೂ ಬದುಕಲು ಯತ್ನಿಸುವ ಛಲದಂತೆ ಈ ಪ್ರಯತ್ನವನ್ನಾತ

ಬಿಡಲಾರ. ತನ್ನ ಪ್ರಯತ್ನಗಳ ಅಸಂಗತತೆಯ ಅರಿವೇ ತನ್ನ ಬದುಕಿಗೆ ಅರ್ಥವನ್ನೀಯಬಲ್ಲದೆಂಬ ನಂಬಿಕೆ ಆತನ ಅಂತರಾಳದಲ್ಲಿದೆ. ತನ್ನ ಬದುಕನ್ನು ಕುರಿತು ತಾನೇ ಎತ್ತುವ ಪ್ರಶ್ನೆಗಳಿಗೆ ಅರ್ಥಪೂರ್ಣ ಉತ್ತರ ದೊರಕಲೇಬೇಕೆಂಬ ಹಠ ಆತನಲ್ಲಿಲ್ಲ. ಆತನ ಪ್ರಕಾರ, ಉತ್ತರ ದೊರಕಿತೆಂದು ತೃಪ್ತಿಯಾದರೆ ಅದು ಸಾವಿಗೆ ಸಮಾನವಾದ ಅಪಕ್ವತೆ. ಪಕ್ವತೆಯ ಫಲ ದೊರಕಿಸಲೆಂದು ತನ್ನ ಬದುಕಿನ ಪಯಣದ ಸ್ವಾರಸ್ಯವನ್ನೆಲ್ಲಾ ನಿರಾಕರಿಸುವಷ್ಟು ಮೂರ್ಖ ಆತನಲ್ಲ.

ತನ್ನ ಅನುಭವಕ್ಕೆ ಬಂದ ವ್ಯಕ್ತಿ, ಸಂಗತಿಗಳ 'ಆಯ್ಕೆ'ಯ ಬಗೆಗೆ ನಿರ್ದಿಷ್ಟ ತಾತ್ವಿಕತೆಯನ್ನು ವಿಕ್ರಮ್ ತನ್ನ ಆತ್ಮಚರಿತ್ರಾತ್ಮಕ ನಿವೇದನೆಯಲ್ಲಿಟ್ಟುಕೊಂಡಿಲ್ಲ. ತನ್ನ ಅನುಭವ ಆಯ್ಕೆಗಳು ಪರಿಸರನಿಷ್ಠವಾಗಿದ್ದರೂ, ಅವಕ್ಕೆ ಮಹತ್ವವೀಯದೆ ತನ್ನ ಸಂವೇದನೆಯ ಮೂಲಕವೇ ಒಳಗಿನ 'ನಾನು' ಹಾಗೂ ಹೊರಗಿನ 'ನಾನು' ನಡುವಿನ ಅಂತರವನ್ನು ನೀಗಿಕೊಳ್ಳಬಹುದೆಂಬ ಪ್ರಾಮಾಣಿಕ ಹವಣಿಕೆ ಕಾದಂಬರಿಯುದ್ದಕ್ಕೂ ಇದೆ.

ತನ್ನ ಜೀವನ ಪ್ರಕ್ರಿಯೆಯ ಮೂಲಾಧಾರಗಳಾದ ಪರಸ್ಪರ ಮಾನವ ಸಂಬಂಧಗಳನ್ನೆಲ್ಲಾ ಒಂದೊಂದಾಗಿ ವಿಕ್ರಮ ಪ್ರಕಟಗೊಳಿಸುತ್ತಾ ಹೋಗುತ್ತಾನೆ. ಗಾಂಧೀವಾದದ ಆದರ್ಶ ಮೂರ್ತಿಯಾದ ಪೂಜಾರ ಮಾಸ್ತರರಿಗೆ ಮನೆಯನ್ನು ಕಟ್ಟಿಕೊಡುವ ವಿಕ್ರಮನ ಯತ್ನ ಏಕಕಾಲಕ್ಕೆ ಕೃತಜ್ಞತೆ ಮತ್ತು ಕಾಳಹಣದ ಬಳಕೆ ಎರಡೂ ಆಗಿರುತ್ತದೆ. ಹೀಗೆ ಪೂಜಾರ ಮಾಸ್ತರರನ್ನು ತನ್ನ ನೈತಿಕತೆಯ ಒರೆಗಲ್ಲಾಗಿ ಕೂಡ ವಿಕ್ರಮ ಬಳಸಿಕೊಳ್ಳಬಲ್ಲ. ಶುದ್ಧ ವ್ಯಾವಹಾರಿಕತೆಯ ಕಳ್ಳ ಹುದುಗಲಲ್ಲಿ ಕಳೆದುಹೋಗದೆ ಅಪರಾಧಿ ಪ್ರಜ್ಞೆಯ ಬೆಂಕಿಯಲ್ಲಿ ತನ್ನನ್ನು ತಾನು ಸುಟ್ಟುಕೊಳ್ಳಲು ಅಗತ್ಯವಾದ ನೈತಿಕ ಕೇಂದ್ರವಾಗಿ ಪೂಜಾರ ಮಾಸ್ತರರೇ ನಿಲ್ಲುತ್ತಾರೆ.

ಪೂಜಾರ ಮಾಸ್ತರರನ್ನು ವಿಕ್ರಮ್ ಭಾರತದ ಸಂಕ್ರಮಣಾವಸ್ಥೆಯ ಸಂಕೇತವಾಗಿ ಅರ್ಥೈಸಬಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾತ್ವಿಕ ಸಿಟ್ಟಿನ ಸೃಜನಶೀಲ ವ್ಯಕ್ತಿಯಾಗಿದ್ದ ಪೂಜಾರರು ಸ್ವಾತಂತ್ರ್ಯಾನಂತರ ಅಸಹಾಯ ಸಿಟ್ಟಿನ, ನಿರಾಶಾದಾಯಕ ಮೃತ್ಯುವಿನ ಸಂಕೇತವಾಗುತ್ತಾರೆ. ವಿಕ್ರಮನ ನೆನಪಿನ ಸುರುಳಿ ಬಿಚ್ಚತೊಡಗಿದಂತೆ ಮೂಡುವ ಘಟನೆ ಸಂಭಾಷಣೆಗಳೆಲ್ಲವೂ ಕ್ಷಣದ ಪರಿಪೂರ್ಣತೆಯ ತೀವ್ರ ಅರಿವಿನ ಫಲಿತಗಳು. ವಿಕ್ರಮನ ಸಾಹಿತ್ಯಾಭಿರುಚಿ, ಅದರಿಂದ ಮೊಳೆತ ರೊಮ್ಯಾಂಟಿಕ್ ಲೈಂಗಿಕ ಪ್ರೇಮ, ಅಸೂಯೆ, ಆತಂಕ, ಆನಂದದ ಆವೇಗಗಳನ್ನು ಆತನ 'ನಿವೇದನೆ' ಕ್ಷಣದ ಸ್ಮಾರಕವೆಂಬಷ್ಟು ತೀವ್ರತೆಯಿಂದ ಸಾಧಿಸುತ್ತದೆ. ತನ್ನ ಪ್ರಣಯ ಸಾಹಸದಲ್ಲಿ ಹೆಚ್ಚಿನ ಜವಾಬ್ದಾರಿ ಹೊತ್ತವಳು ಯಶೋಧೆ. ಬ್ರಾಹ್ಮಣ ಹುಡುಗಿಯಾದ ಯಶೋಧೆ, ಮರಾಠಾ ಜಾತಿಗೆ ಸೇರಿದ ವಿಕ್ರಮನನ್ನು ಮದುವೆಯಾಗುವುದು ಕಷ್ಟ ಸಾಧ್ಯವಾದ ಮಾತಾಗಿತ್ತು. ಆದರೆ ಮನೆಯವರೆಲ್ಲರ ವಿರೋಧದ ನಡುವೆಯೂ ಯಶೋಧೆ, ವಿಕ್ರಮನನ್ನು ಮದುವೆಯಾಗುತ್ತಾಳೆ. ಆದರೆ ಈ ಮದುವೆಗೆ ಯಶೋಧೆಯ ತಂದೆ-ತಾಯಿಗಳೇ

ಬರುವುದಿಲ್ಲ. ಪೂಜಾರ ಮಾಸ್ತರರು ಅವರಿಗೆ ಮದುವೆಗೆ ಬರುವಂತೆ ಹೇಳಿದಾಗ ನೊಂದ ಯಶೋಧೆಯ ತಂದೆ-ತಾಯಿಗಳು ಹೇಳುವ ಮಾತುಗಳು ಹೀಗಿವೆ: "ನಮ್ಮ ಮಕ್ಕಳೇ ಮೊದಲಿನಿಂದಲೂ ನಮ್ಮ ಕೈಯಾಗ ಉಳಿದಿಲ್ಲ; ಗೋವಿಂದ ಹೋದ ಮುಂಬೈಗೆ-ಕಮ್ಯುನಿಷ್ಟನಾಗಿ ಪಾರ್ಟಿ ಕೆಲ್ಸ ಮಾಡಾಕ. ಅವನೂ ಜಾತಿ, ಧರ್ಮ ಬಿಟ್ಟು ಬಿಟ್ಟ. ಇತ್ತ ಯಶೋಧೆ ಕೂಡ ಜಾತಿಬಿಟ್ಟಳು. ನಾವು ಕೊಟ್ಟ ಸ್ವಾತಂತ್ರ್ಯದ ಶಿಕ್ಷಣದ ದುರುಪಯೋಗ ಮಾಡಿದಳು"[೨೩] ಎಂದು ಹೇಳುತ್ತಾರೆ. ಆದರೆ ವಿಕ್ರಮನ ಅಂತರ್ಜಾತಿಯ ವಿವಾಹವನ್ನು ಅವನ ದೊಡ್ಡಪ್ಪ, ವಿರೋಧಿಸುತ್ತಾರೆ. ಆದರೆ ವಿಕ್ರಮನ ಅಜ್ಜಿ, ತಂದೆ ರಾಜಾರಾಮ ಹಾಗೂ ಪೂಜಾರ ಮಾಸ್ತರರಿಂದ ಪ್ರೋತ್ಸಾಹ ದೊರೆಯುತ್ತದೆ. ಎಂಜಿನಿಯರಿಂಗ್ ಡಿಗ್ರಿ ದೊರಕಿಸಿದ ನಂತರ ವಿಕ್ರಮ ಕೋಯಿನಾ ಪ್ರಾಜೆಕ್ಟ್‌ನಲ್ಲಿ ಎಂಜಿನಿಯರ್ ಎಂದು ಸೇರಿಕೊಳ್ಳುತ್ತಾನೆ. ವೃತ್ತಿಯಲ್ಲಿ ಪ್ರಗತಿ ಸಾಧಿಸಿದರೂ ಅವನಿಗೆ ಬೇಸರ ತರುತ್ತದೆ. ನೌಕರಿಗೆ ರಾಜೀನಾಮೆ ನೀಡಿ ಕನ್ಸಲ್ಟಿಂಗ್ ಎಂಜಿನಿಯರ್ ಎಂದು ಕೆಲಸ ಪ್ರಾರಂಭಿಸುತ್ತಾನೆ. ಈ ವೇಳೆಗೆ ಅವನಿಗೆ ಇಬ್ಬರು ಮಕ್ಕಳಾಗಿರುತ್ತಾರೆ. ಯಶೋಧೆಯ ಜೊತೆಗಿನ ವೈವಾಹಿಕ ಜೀವನದಲ್ಲಿ ಆಗಾಗ ಬಿಕ್ಕಟ್ಟುಗಳು ತಲೆದೋರಿದ್ದರೂ, ಅಶ್ವಿನಿ ಅವನ ಜೀವನ ಪ್ರವೇಶಿಸುವವರೆಗೆ ಅದು ಭದ್ರವಾಗಿಯೇ ಇರುತ್ತದೆ. ಆದರೆ ನಂತರದಲ್ಲಿ ಅವರ ವೈವಾಹಿಕ ಬದುಕಿನಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ.

ಗೆಳೆಯ ವಸಂತನ ಗೆಳತಿಯಾದ ಅಶ್ವಿನಿಯೊಂದಿಗೆ ವಿಕ್ರಮ ಬೆಳೆಸಿದ ಸಂಬಂಧವು ಆತನಲ್ಲಿ 'ಸುಖೀ - ಪಾಪಪ್ರಜ್ಞೆಯನ್ನುಂಟು ಮಾಡುತ್ತದೆ. ಸರಂಜಾಮೀ ಮನೋಧರ್ಮದ ವಾರಸುದಾರನಾದ ತನಗೆ ಇಂಥ ಪಾಪಪ್ರಜ್ಞೆ ಬದುಕಿಗೆ ತೀಕ್ಷ್ಣತೆಯನ್ನು ಕೊಡಬಲ್ಲದೆಂಬ ಅನಿಸಿಕೆ ವಿಕ್ರಮನದು. ಆದರೆ ತನ್ನ ಅಸ್ತಿತ್ವಕ್ಕೊಂದು ಕೇಂದ್ರವಿದೆ. ಅನನ್ಯತೆಯಿದೆ ಎಂದು ವಿಕ್ರಮ ನಂಬಿದ್ದಾನೆ. ಈ ಅನನ್ಯತೆಯ ಶೋಧವೇ ಅವನ ಬದುಕಿಗೂ ಅದರಲ್ಲಿ ಅರ್ಥ ಹುಡುಕುವ ಆತ್ಮನಿವೇದನೆಗೂ ಉದ್ದೇಶವನ್ನೊದಗಿಸುತ್ತದೆ. ಈ ಶೋಧಕ್ಕೆ ಒಂದು ವ್ಯಾಪಕ ಚೌಕಟ್ಟನ್ನು ಆತ ನಿರ್ಮಿಸಿಕೊಳ್ಳುತ್ತಾನೆ. "ದೇವರಿಲ್ಲ ನಿಜ. ಅಂದರೆ ನಮಗೆಂದೂ ತಿಳಿಯುವಂಥ ದೇವರಿಲ್ಲ... ಆದರೆ ನಮಗೆ ತಿಳಿಯದ ಶಕ್ತಿಗಳು ನಮ್ಮ ಹೊರಗೆ, ನಮ್ಮ ಒಳಗೆ, ನಮ್ಮ ರಕ್ತದಲ್ಲಿ, ನಮ್ಮ ಮನಸ್ಸಿನಲ್ಲಿ, ನಮ್ಮ ಅಂತರಾಳದಲ್ಲಿ ಕೆಲಸ ಮಾಡುತ್ತಿರುತ್ತವೆ. ಆ ಶಕ್ತಿಗಳ ಯಜಮಾನರೂ ನಾವಲ್ಲ. ನಾವು ದೇವರೂ ಅಲ್ಲ. ಪ್ರಾಣಿಗಳೂ ಅಲ್ಲ. ನಾವು ಅಂತರಾಳ ಪಿಶಾಚಿಗಳು."

ಮೈಮನಗಳ ದ್ವಂದ್ವದ ಸಮಸ್ಯೆ ವಿಕ್ರಮನನ್ನು ಕಾಡುವುದಿಲ್ಲ. ಮದುವೆಯ ಮೊದಲು ಕೆಲಸದಾಕೆ ಸೀತೆಯನ್ನು ಅವನು ಕೂಡುವುದು ಮೈಯಿಂದಾದರೆ, ಯಶೋಧೆಯನ್ನು ಬಯಸುವುದು ಮನಸ್ಸಿನಿಂದ. ಹೀಗೆ ತನ್ನಲ್ಲಿರುವ ಪ್ರಾಣಿಯನ್ನು ಗುರುತಿಸಿದರೂ ಅದನ್ನು ಬೇರೆಯೇ ಇಡಲು ಅವನು ಪ್ರಯತ್ನಿಸುತ್ತಾನೆ. ಅಶ್ವಿನಿಯೊಡನೆ ಬೆಳೆಸುವ ಸಂಬಂಧದಲ್ಲಿ ಮಾತ್ರ ಅವನಿಗೆ ಮೈಮನಗಳ ಅನ್ಯೋನ್ಯತೆ ಇದೆ

ಎಂದೆನಿಸುತ್ತದೆ. ಆಗಾಗ ಅವನನ್ನು ಪಾಪಪ್ರಜ್ಞೆ ಕಾಡುತ್ತದೆಯಾದರೂ ಅವನಿಗೆ ನೈತಿಕ ಪ್ರಶ್ನೆಗಳು ಮುಖ್ಯವೆಂದು ಕಾಣವುದಿಲ್ಲ. ವಿಕ್ರಮ ತನ್ನ ಬಗ್ಗೆ ಕೊಡುವ ಹೇಳಿಕೆಗಳಲ್ಲಿ ಹಲವಾರು ಒಳನೋಟಗಳಿವೆ: "ನನ್ನ ಮೇಲೆ ಹಲವಾರು ವಿಚಾರ ಸರಣಿಗಳು ತಮ್ಮ ಪ್ರಭಾವ ಬೀರಿದ್ದರೂ ನಾನು ಮುಖ್ಯವಾಗಿ ಜೀವಿಸುವುದು ಬುದ್ಧಿಯ ಪಾತಳಿಯ ಮೇಲಲ್ಲ, ಸಂವೇದನೆಯ ಪಾತಳಿಯ ಮೇಲೆ ಈ ಸಂವೇದನೆಯಲ್ಲಿ ವೈಚಾರಿಕ ಗೊಂದಲಗಳಿವೆ. ಮಾನಸಿಕ ಗೊಂದಲಗಳಿವೆ... ಈ ಸಂವೇದನೆಯ ಹೊರಗೆ ನಾನಿಲ್ಲವೆಂಬ ತೀವ್ರ ಅರಿವು ಇದ್ದುದರಿಂದ ಅದನ್ನು ಆದಷ್ಟು ಜ್ವಲಂತವಾಗಿಡಬೇಕು, ಚೈತನ್ಯಶೀಲವಾಗಿಡಬೇಕು. ಸಾಧ್ಯವಿದ್ದಷ್ಟು ಸೃಜನಶೀಲವಾಗಿಡಬೇಕು ಎಂಬುದೇ ಹವ್ಯಾಸ."[೨೪]

ವಿಕ್ರಮನ ಸಂವೇದನೆಯ ಸ್ವರೂಪವನ್ನು ಕುರಿತಂತೆ ಜಿ.ಎಸ್ .ಆಮೂರರು ಕೆಲವು ಒಳನೋಟಗಳನ್ನು ನೀಡುತ್ತಾರೆ. ಸಾಲ್ ಬೆಲ್ಲೋನ ಹರ್ಜೋಗನಿಗೂ ವಿಕ್ರಮನಿಗೂ ಇವರು ಸಾಮ್ಯವನ್ನು ಗುರುತಿಸುತ್ತಾ ಹರ್ಜೋಗನಂತೆ ವಿಕ್ರಮನ ಸಮಸ್ಯೆಗಳ ಮೂಲ ಅವನ ರೊಮ್ಯಾಂಟಿಸಿಜಂ. ವಿಕ್ರಮನ ಭಾವನಾತ್ಮಕತೆ, ಆದರ್ಶವಾದ, ಉತ್ಸಾಹ, ಆವೇಶ ಮತ್ತು ಅಪಕ್ವತೆಗಳೇ ಆತನ ಆಕರ್ಷಣೆ ಎಂಬುದನ್ನು ಅಶ್ವಿನಿ ಸರಿಯಾಗಿಯೇ ಗುರುತಿಸುತ್ತಾಳೆ. ಜಿ.ಎಸ್.ಆಮೂರರ ಪ್ರಕಾರ "ಹರ್ಜೋಗನಂತೆ ವಿಕ್ರಮ ಕೂಡ ಒಬ್ಬ ತಿದ್ದಲಾಗದ ರೊಮ್ಯಾಂಟಿಕ್. ಇದೇ ಅವನ ಅಸ್ಮಿತೆ ಹಾಗು ದುರಂತ. ಇದನ್ನು ಅವನು ಅರ್ಥಮಾಡಿಕೊಳ್ಳದಿರುವುದಕ್ಕೆ ಕಾರಣ ಅವನ ಸೈಕಿಯಾಟ್ರಿಸ್ಟ್ ಹೇಳುವಂತೆ ಅವನ ಅಪಕ್ವತೆ."[೨೫]

ವಿಕ್ರಮನ ಈ ಅಪಕ್ವತೆ ಕೇವಲ ವೈಯಕ್ತಿಕ ನೆಲೆಯದಲ್ಲವೆಂಬುದನ್ನು ಕೃತಿ ಸಾಧಿಸಿ ತೋರಿಸುತ್ತದೆ. ವಿಕ್ರಮನ ಅಂತರಾಳವನ್ನು ರೂಪಿಸಲು ಕಾರಣರಾದ ಪೂಜಾರ ಮಾಸ್ತರ, ಗೋವಿಂದ, ಯಶೋಧೆ, ಅಶ್ವಿನಿ, ವಸುಂಧರೆ, ಸೀತೆ ಮೊದಲಾದ ಪಾತ್ರಗಳು ಗಟ್ಟಿಯಾದ ಸಾಮಾಜಿಕ ವಾಸ್ತವಿಕತೆಯನ್ನು ಸೃಷ್ಟಿಸುತ್ತವೆ. ಅಂತರಾಳವು ಏಕಕಾಲದಲ್ಲಿ ಸಾಮಾಜಿಕ ವಾಸ್ತವಿಕತೆಯೊಂದಿಗೆ ಕ್ರಿಯೆ-ಪ್ರತಿಕ್ರಿಯೆಯನ್ನು ಏರ್ಪಡಿಸಿಕೊಳ್ಳುತ್ತ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತದೆ. ಪೂಜಾರ ಮಾಸ್ತರರ ಗಾಂಧೀವಾದ, ಗೋವಿಂದನ ನಕ್ಸಲೈಟ್ ವೈಚಾರಿಕತೆ, ಯಶೋಧೆಯ ಸ್ತ್ರೀ ಸಂವೇದನೆ, ಅಶ್ವಿನಿಯ ಮುಕ್ತ ಜೀವನ ತತ್ವಗಳು ಕೂಡ ನಮ್ಮೊಳಗಿನ ಆಂತರಿಕ ದ್ವಂದ್ವಗಳಿಂದಾಗಿ ಸಾಮಾಜಿಕ ವಾಸ್ತವಿಕತೆಯ ಅಪಕ್ವತೆಗೆ ಕಾಣಿಕೆ ಸಲ್ಲಿಸಿವೆ. ಹಾಗಾಗಿ ಸಾಮಾಜಿಕ ಚಿಂತನೆಯ ನೇರ ಹಾಗೂ ಸರಳ ಅಭಿವ್ಯಕ್ತಿಯಾಗಬಹುದಾದ ಅಪಾಯದಿಂದ ಈ ಕೃತಿ ಪಾರಾಗಿದೆ. ಎ. ರಘುರಾಂ ಅವರ ಅಭಿಪ್ರಾಯದಂತೆ "...ವ್ಯಕ್ತಿಗಳಲ್ಲಿ ನಡೆಯುವ ಸಂಘರ್ಷ, ಅಲ್ಲಿನ ಸೂಕ್ಷ್ಮ ದೃಷ್ಟಿಕೋನ ವಿಜ್ಞಾನಿಯ ಚಿಕಿತ್ಸಕ ದೃಷ್ಟಿಯಲ್ಲಿ ಅಧ್ಯಯನಕ್ಕೆ ಎಡೆಮಾಡಿದೆ. ಅಂತರಾಳ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಮೌಲ್ಯದ ಪ್ರಸ್ತುತತೆಯನ್ನು ಅಧ್ಯಯನಕ್ಕೊಡ್ಡಿದ ಕೃತಿಯಾಗಿದೆ."[೨೬]

ತನ್ನ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಲು ಯತ್ನಿಸುವ ಪ್ರಾಮಾಣಿಕ ಯತ್ನ ವಿಕ್ರಮನದು. ರೊಮ್ಯಾಂಟಿಕ್‌ರ ಕನಸುಗಾರಿಕೆಗಾಗಲೀ ಕಲ್ಪನೆಯ ವಿಶ್ವದೊಂದಿಗೆ ವ್ಯಾವಹಾರಿಕತೆಯನ್ನು ದೂರವಿಡುವ ಭಾವವಾಗಲೀ ಆತನಲ್ಲಿಲ್ಲ. ತನ್ನ ಪಾಪಪ್ರಜ್ಞೆಯಲ್ಲಿಯೇ ಆ್ಯಡಮ್‌ನಂತೆ ಸುಖವನ್ನರಸುವ ಅಸ್ತಿತ್ವವಾದಿಯ ಆತಂಕ, ಉದ್ವಿಗ್ನತೆಗಳುಳ್ಳ ವ್ಯಕ್ತಿ ಈತ. ತನ್ನ ಜೀವನಕ್ಕೆ ತೀವ್ರತೆಯನ್ನೊದಗಿಸಿದ ಪಾಪಪ್ರಜ್ಞೆಯನ್ನು ಸರಳ ನೈತಿಕ ಆದರ್ಶಗಳಿಗೆದುರಾಗಿ ಕಳೆದುಕೊಳ್ಳಲು ಈತ ಸಿದ್ಧನಿಲ್ಲ. ಅಂತರಾಳವೆಷ್ಟೇ ನಿಗೂಢವಾದರೂ ಈ ಮೂಲಭೂತ ಪ್ರಾಮಾಣಿಕತೆ ಆತನದು.

ಓಂಣಮೋ

ಬದುಕಿನ ಅರ್ಥವೇನೆಂದು ಶೋಧಿಸುವ ಪ್ರಕ್ರಿಯೆಯಾಗಿಯೇ ಹುಟ್ಟಿಕೊಂಡ 'ಧರ್ಮ'ವನ್ನು ಪ್ರಮುಖ ಸಾಮಾಜಿಕ ಮನೋಭೂಮಿಕೆಯಾಗಿ ಕಾದಂಬರಿ ಬಳಸಿಕೊಂಡಿದೆ. 'ಧಾರ್ಮಿಕನಿಂದಲೇ ಧರ್ಮ' ಎಂಬ ಧೋರಣೆಯುಳ್ಳ ಜೈನ ತಾತ್ವಿಕತೆ ವ್ಯಕ್ತಿನಿಷ್ಠ ನೆಲೆಯಲ್ಲಿ ಸಿದ್ಧಗೊಂಡಿದೆ. ತಾತ್ವಿಕ ತಿರುಳಿಗೆ ಆಚಾರ ವಿಚಾರಗಳ ಆವರಣ ಕಲ್ಪಿತವಾಗುವುದರೊಂದಿಗೆ 'ಧರ್ಮ'ದ ಸಾಂಸ್ಕೃತಿಕ ಸಾಂಸ್ಥಿಕ ರೂಪ ಅಸ್ಪಷ್ಟವಾಗಿ ಗೋಚರಿಸಲಾರಂಭಿಸುತ್ತದೆ. ವಿದೇಶಿ ಆ್ಯನ್ ಮತ್ತು ಆ್ಯಡಂ ಪಾತ್ರದ ಮೂಲಕ, 'ದೂರದ ನಿರೀಕ್ಷಕ ಭಾಗಿ' ಆಗಿ ಕಾದಂಬರಿಕಾರರ ನಿರೂಪಕ ಪ್ರಜ್ಞೆ ಇಲ್ಲಿ ಕೆಲಸ ಮಾಡಿದೆ. ತನ್ನ ಗೆಳೆಯ ಆ್ಯಡಂ ಜೊತೆಗೆ ಭಾರತಕ್ಕೆ ಬಂದ ಆ್ಯನಳು ಜೈನಧರ್ಮದ ತಾತ್ವಿಕ ತಿಳುವಳಿಕೆಗಿಂತ ಅದರ ಸಾಮಾಜಿಕ, ಆಚರಣಾತ್ಮಕ ಪ್ರಕ್ರಿಯೆಯನ್ನು ಅಧ್ಯಯನ ಮಾಡುವ ಉದ್ದೇಶವುಳ್ಳವಳು. ಭಾರತೀಯ ಜೈನ ತಂದೆಯ ಮಗನಾದ ಆ್ಯಡಂನ ತಾತ, ಚಿಕ್ಕತಾತ, ಸೋದರರು, ಅಜ್ಜಿ, ಚಿಕ್ಕಮ್ಮಂದಿರು ಎಲ್ಲರನ್ನೊಳಗೊಂಡ ಕೌಟುಂಬಿಕ ಪರಿಸರದ ಹಿನ್ನಲೆ ಆ್ಯನ್‌ಳ ಅಧ್ಯಯನಕ್ಕೆ ಅನಾಯಾಸವಾಗಿ ಒದಗುತ್ತದೆ. ಭೂಮಾಲೀಕ ಬಂಡವಾಳಶಾಹಿ ವರ್ಗದ ಹಿನ್ನೆಲೆಯೊಂದಿಗೆ ಶ್ರವಣಬೆಳಗೊಳದ ಮಠೀಯ, ಸಾಂಸ್ಥಿಕ ಕೇಂದ್ರದ ಪ್ರಭಾವವು ಆ್ಯಡಂನ ಪರಿವಾರಕ್ಕಿದೆ. ಹೀಗೆ ಅಚ್ಚುಕಟ್ಟಾದ ಕಥನ ಸಂಯೋಜನೆಯುಳ್ಳ ಈ ಕಾದಂಬರಿಯಲ್ಲಿ ಅಳವಡಿಸಲಾಗಿರುವ ಪರಕೀಯತಾ ತಂತ್ರದ ಅಳವಡಿಕೆ ಅಷ್ಟಾಗಿ ಸರಿ ಹೊಂದುತ್ತಿಲ್ಲ. ಮುಖ್ಯವಾಗಿ ನವ್ಯ ಮನೋಧರ್ಮದ ತಾತ್ವಿಕತೆಯಾಗಿಯೇ ಪರಕೀಯತಾ ತತ್ವ ಸಿದ್ಧವಾಗಿದ್ದು, ಅದು ಆ್ಯಡಂ ಹಾಗೂ ಆ್ಯನ್ ಪಾತ್ರಗಳ ಮೂಲಕ ಕ್ರಿಯಾತ್ಮಕವಾಗಿ ಈ ಕಾದಂಬರಿಯಲ್ಲಿ ಬಳಕೆಯಾಗಿದೆ. ಕಾದಂಬರಿಕಾರ-ನಿರೂಪಕ ಅಲ್ಲಲ್ಲಿ ಓದುಗರೊಂದಿಗೆ ನೇರ ಸಂವಾದಕ್ಕೆಳಸಿದರೂ ಅದರಿಂದ ತಾಂತ್ರಿಕವಾಗಿ ಹೆಚ್ಚಿನದೇನೂ ಸಾಧಿತವಾಗಿಲ್ಲ. ಕಾದಂಬರಿಯ ಪಾತ್ರಗಳೇ ನೇರವಾಗಿ ಭಿನ್ನ ನೆಲೆಯ ಚಿಂತನೆಗಳನ್ನು ಪ್ರಕಟಿಸುವ ಅವಕಾಶವನ್ನು ಧಾರಾಳವಾಗಿ ಹೊಂದಿವೆ. ಹಾಗಾಗಿ ಬಹುದೃಷ್ಟಿಯ ಆಯಾಮ ಕಥನಕ್ಕೆ ದಕ್ಕಿದೆ.

ಈ ಕಾದಂಬರಿಯಲ್ಲಿ ಎರಡು ಮುಖ್ಯ ಕಥೆಗಳಿವೆ. ಮೊದಲನೆಯದು, ಸಂಶೋಧನೆಯ ನಿಮಿತ್ತವಾಗಿ ಬ್ರಿಟನ್ನಿನಿಂದ ಭಾರತಕ್ಕೆ ಬರುವ ಆ್ಯಡಂ ದೇಸಾಯಿ ಹಾಗೂ ಆ್ಯನ್ ಈಗಲ್ಟನ್ ಎಂಬ

ತರುಣ-ತರುಣಿಯರ ಕಥೆ. ಇದನ್ನು ಸ್ಥೂಲವಾಗಿ 'ಪ್ರೇಮ ಕಥೆ' ಎಂದು ಕರೆಯಬಹುದು. ಸ್ನೇಹದಲ್ಲಿ ಪ್ರಾರಂಭವಾದ ಈ ಸಂಬಂಧ ಕಾದಂಬರಿಯ ಕೊನೆಗೆ ಪ್ರೇಮವಾಗಿ ಪರಿವರ್ತಿತವಾಗುತ್ತದೆ. ಆ್ಯನ್‌ಳ ಗಂಭೀರ ಜೈನ ಆಸಕ್ತಿಗಳು ಹಾಗೂ ಆ್ಯಡಂನ ಸ್ವಭಾವ ಕೆಲವೊಂದು ಸಮಸ್ಯೆಗಳನ್ನು ಹುಟ್ಟಿಸುತ್ತವೆಯಾದರೂ ಕಾದಂಬರಿ ಮುಗಿಯುವ ವೇಳೆಗೆ ಈ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಎರಡನೆಯ ಕಥೆ ಬೀಜದ ನೆನಪು ತರುವ ಕಥೆ. ಕೃಷ್ಣಾಪುರದ ಹಳೆಯ ಮನೆತನಗಳಲ್ಲೊಂದಾದ ದೇಸಾಯಿ ಮನೆತನದ ಕಥೆ. ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಹುಟ್ಟಿಕೊಳ್ಳುವ ಈ ಕಥೆ ಎಪ್ಪತ್ತು ಹಾಗೂ ಎಂಬತ್ತರ ದಶಕಗಳವರೆಗೂ ಹರಿದುಬರುತ್ತದೆ. ಭಾರತದ ಸಾಮಾಜಿಕ ಸಂದರ್ಭದಲ್ಲಿ ಇದನ್ನು ಆಧುನೀಕರಣದ ಕಥೆಯೆಂದು ಕರೆಯಬಹುದು. ಈ ಮನೆತನ ತನ್ನ ಫ್ಯೂಡಲ್ ಹಾಗೂ ಸಂಪ್ರದಾಯನಿಷ್ಠ ಸ್ವರೂಪವನ್ನು ಕ್ರಮೇಣ ಕಳೆದುಕೊಂಡು ಇಂಗ್ಲೀಷ್ ವಿದ್ಯಾಭ್ಯಾಸ, ಉದ್ಯೋಗ, ದಂಧೆ, ರಾಜಕಾರಣ ಮೊದಲಾದ ಹೊಸ ಕ್ಷೇತ್ರಗಳನ್ನೂ ಪ್ರವೇಶಿಸುವುದರ ಮೂಲಕ ಆಧುನಿಕತೆಯತ್ತ ಪ್ರಯಾಣ ಮಾಡುತ್ತದೆ. ಈ ಪ್ರಕ್ರಿಯೆಯ ಪರಿಣಾಮವಾಗಿ ಹೊಸ ಸಮಸ್ಯೆಗಳು ಏಳುತ್ತವೆ ಹಾಗೂ ಅವುಗಳಿಗೆ ಹೊಸ ಪರಿಹಾರಗಳ ಅವಶ್ಯಕತೆ ಉಂಟಾಗುತ್ತದೆ.

ಕಾದಂಬರಿಕಾರನಾಗಿ ದೇಸಾಯಿಯವರ ಉದ್ದೇಶ ಈ ಕಥೆಗಳನ್ನು ಹೇಳುವುದಕ್ಕೆ ಸೀಮಿತವಾಗಿಲ್ಲ. ಕಾದಂಬರಿ ತನ್ನ ವೈಶಿಷ್ಟ್ಯವನ್ನು ಪಡೆಯುವುದು ಈ ಕಥೆಗಳ ಮೂಲಕ ನಡೆಯುವ ತಾತ್ವಿಕ ಶೋಧದಿಂದ ಆ್ಯಡಂ-ಆ್ಯನ್‌ರಿಗೆ ಸಂಬಂಧಿಸಿದ ಕಥೆಯಲ್ಲಿ ಗಂಡು-ಹೆಣ್ಣು ಸಂಬಂಧಗಳ ಅನ್ವೇಷಣೆ ಮುಖ್ಯವಾದರೆ ದೇಸಾಯಿ ಮನೆತನಕ್ಕೆ ಸಂಬಂಧಿಸಿದ ಕಥೆಯಲ್ಲಿ ಆಧುನೀಕರಣದ ಕ್ರಿಯೆಯ ಶೋಧ ಮುಖ್ಯವಾಗುತ್ತದೆ. ಎರಡು ಸಂಸ್ಕೃತಿಗಳ ಮುಖಾಮುಖಿಯ ಸಂದರ್ಭದಲ್ಲಿ ಈ ಶೋಧಗಳು ನಡೆಯುವುದರಿಂದ ಅವುಗಳಿಗೆ ವ್ಯಾಪಕವಾದ ಸಾಂಸ್ಕೃತಿಕ ಆಯಾಮವೂ ಒದಗಿ ಬರುತ್ತದೆ. ಆ್ಯಡಂ ಹಾಗೂ ಆ್ಯನ್ ಮೂಲತಃ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಬೆಳೆದವರು. ಆ್ಯಡಂನ ತಂದೆ ಭಾರತೀಯ ಮೂಲದವನಾದರೂ ಅವನು ಹುಟ್ಟಿ ಬೆಳೆದದ್ದು ಇಂಗ್ಲೆಂಡಿನಲ್ಲಾದುದರಿಂದ ಸಾಂಸ್ಕೃತಿಕವಾಗಿ ಇವರಿಬ್ಬರಲ್ಲಿ ವಿಶೇಷ ಅಂತರವಿಲ್ಲ. ಈ ಸಂಸ್ಕೃತಿಯ ಪ್ರಮುಖ ಮೌಲ್ಯವಾದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಇಬ್ಬರೂ ಅಷ್ಟೇ ನಿಷ್ಠೆಯಿಂದ ಬದ್ಧರು. ದೇಸಾಯಿ ಮನೆತನ ಪ್ರತಿನಿಧಿಸುವ ಸಂಸ್ಕೃತಿಯಲ್ಲಿ ಸಮಷ್ಟಿ ಜೀವನಕ್ಕೆ ಆದ್ಯತೆಯಿದೆ. ಆ್ಯಡಂ, ಆ್ಯನ್ ಈ ಮನೆತನದೊಡನೆ ಸಂಬಂಧ ಬೆಳೆಸುವ ಮೊದಲೇ ಅದು ಆಧುನಿಕತೆಯ ಪ್ರಕ್ರಿಯೆಗೆ ಒಳಗಾಗಿರುತ್ತದೆ. ಆದರೆ ಈ ಹೊಸ ಸಂಬಂಧದಿಂದಾಗಿ, ಹೆಚ್ಚಾಗಿ ಈ ಮನೆತನದವನೇ ಆದ ಆ್ಯಡಂ ಮೂಲಕ ಈ ಪ್ರಕ್ರಿಯೆಗೆ ತೀವ್ರತೆ ಬರುತ್ತದೆ. ದೇಸಾಯಿ ಮನೆತನದ ಆಗು ಹೋಗುಗಳಲ್ಲಿ ತೊಡಗುವುದರ ಪರಿಣಾಮವಾಗಿ ಆ್ಯಡಂನ ಸ್ವಭಾವದಲ್ಲಿಯೂ ಮಹತ್ವದ ಬದಲಾವಣೆಗಳಾಗುತ್ತವೆ. ಆ್ಯನ್‌ಳೊಡನೆ ಅವನ ಸಂಬಂಧ ತಿಳಿಯಾಗುವುದಕ್ಕೆ ಈ ಬದಲಾವಣೆಯೂ ಒಂದು ಕಾರಣವಾಗುತ್ತದೆ. ದೇಸಾಯಿ

ಮನೆತನದೊಡನೆ ಆ್ಯನ್ ಬೆಳೆಸುವ ಸಂಬಂಧದಲ್ಲಿ ಆ್ಯಡಂ ಸಂಬಂಧದ ಆಳವಾಗಲಿ, ಅನಿವಾರ್ಯತೆಯಾಗಲಿ ಇಲ್ಲ. ಆದರೆ ಅವಳು ತನ್ನ ಸಂಶೋಧನೆಯ ಮೂಲಕ ಜೈನ ತತ್ವಗಳಲ್ಲಿ, ಆಚರಣೆಗಳಲ್ಲಿ, ಸಮಾಜದಲ್ಲಿ ಗಾಢವಾಗಿ ತೊಡಗಿಸಿಕೊಳ್ಳುತ್ತಾಳೆ. ಈ ತೊಡಗಿಸಿಕೊಳ್ಳುವಿಕೆ ಜೈನ ದೀಕ್ಷೆ ಪಡೆಯುವುದರ ಹಂತವನ್ನು ತಲುಪುತ್ತದೆ.

"ಆ್ಯನ್‌ಳ ಪಾತ್ರದ ಮೂಲಕ ದೇಸಾಯಿಯವರು ಜೈನಧರ್ಮ ಹಾಗೂ ಸಮಾಜಗಳತ್ತ ನೋಡುವ ಹೊಸ ಬೌದ್ಧಿಕ ನೆಲೆಯೊಂದನ್ನು ಕಾದಂಬರಿಯಲ್ಲಿ ಸೃಷ್ಟಿಸುತ್ತಾರೆ."[೨೭] ಕಾದಂಬರಿಯಲ್ಲಿ ಜೈನಧರ್ಮ ಹಾಗೂ ಸಮಾಜಗಳನ್ನು ಒಳಗಿನಿಂದ ವಿಮರ್ಶಿಸುವ ನೆಲೆಗಳೂ ಇವೆ. ಇವುಗಳಲ್ಲಿ ಪ್ರಾಧ್ಯಾಪಕ ಡಾ. ನಿರ್ಮಲಕುಮಾರ ಹಾಗೂ ಅವರ ಮಗಳು ರೋಜಾ ಮುಖ್ಯರು. ದೇಸಾಯಿ ಮನೆತನದಲ್ಲಿಯೇ ತೀರಾ ಆಧುನಿಕನಾದ ಭರತ ಕುಮಾರನೂ ಕೆಲಮಟ್ಟಿಗೆ ಒಳ ಹೊರಗಿನವನಾಗಿ ಪಾತ್ರವಹಿಸುತ್ತಾನೆ. ಜೈನ ಯಾತ್ರಾಸ್ಥಳಗಳು, ವಿದ್ಯಾಚಾರಗಳು, ಮುನಿಬಸದಿಗಳು, ಮಠಾಧಿಕಾರಿಗಳು ಇತ್ಯಾದಿ ಹಲವಾರು ವಿವರಗಳು ಕಾದಂಬರಿಯನ್ನು ತುಂಬಿಕೊಂಡು ಸಮೃದ್ಧವಾದ ಜೈನ ಪರಿಸರವನ್ನು ನಿರ್ಮಿಸುತ್ತವೆ. ಜೈನಧರ್ಮ ಮೂಲ ರಚನೆಯಂತೆ ಅವರ ಐತಿಹಾಸಿಕತೆಯೂ ಅಲ್ಲಲ್ಲಿ ಚರ್ಚೆಯ ವಿಷಯವಾಗಿ ಸೇರಿಕೊಂಡು ಈ ಪರಿಸರಕ್ಕೆ ಬೌದ್ಧಿಕ ಹಿನ್ನಲೆಯನ್ನು ಒದಗಿಸುತ್ತದೆ.

ಮೊದಲನೆಯದಾಗಿ ಆ್ಯನ್-ಆ್ಯಡಂರ ಸಂಬಂಧವನ್ನೇ ತೆಗೆದುಕೊಳ್ಳಬಹುದು. ಇವರಿಬ್ಬರೂ ಲಂಡನ್ ವಿಶ್ವವಿದ್ಯಾಲಯದಲ್ಲಿ ಸೋಷಿಯಲ್ ಆಂಥ್ರೋಪಾಲಜಿಯ ಪ್ರಾಧ್ಯಾಪಕ ಡಾ. ವಿಲಿಯಮ್ಸ್‌ರ ಸಂಶೋಧನ ವಿದ್ಯಾರ್ಥಿಗಳಾಗಿರುವುದರಿಂದ ಅವರಲ್ಲಿ ಸಹಜವಾದ ಸ್ನೇಹ ಸಂಬಂಧ ಹುಟ್ಟಿಕೊಳ್ಳುತ್ತದೆ. ಆದರೆ, ಇವರ ಕೌಟುಂಬಿಕ ಹಿನ್ನೆಲೆಯಲ್ಲಿ ಅಂತರವಿದೆ. ಆಡ್ಯಂನ ತಂದೆ ಡಾ. ನೇಮಿನಾಥ ಡರ್‍ಹಮ್ ವಿಶ್ವವಿದ್ಯಾನಿಲಯದಲ್ಲಿ ಕಾಮನ್‌ವೆಲ್ತ್ ಲಿಟರೇಚರ್‌ದ ಪ್ರಾಧ್ಯಾಪಕ. ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋದ ನೇಮಿನಾಥ ತನ್ನ ಮೊದಲ ಹೆಂಡತಿಯ ಸಂಬಂಧ ತ್ಯಜಿಸಿ ಕ್ರಿಶ್ಚಿಯನ್ ಮಹಿಳೆ ಎಮಿಲಿಯಳನ್ನು ಮದುವೆಯಾಗಿರುತ್ತಾನೆ. ಮೊದಲ ಹೆಂಡತಿ ಆರ್ಯಿಕಾವೃತ್ತಿಯನ್ನು ಸ್ವೀಕರಿಸುವುದರಿಂದ ಅವನಲ್ಲಿ ಅಪರಾಧ ಭಾವವಿದೆಯಾದರೂ ಅವನ ಹೊಸ ಸಂಸಾರ ಸಾಕಷ್ಟು ಸುಖಮಯವಾಗಿರುತ್ತದೆ. ಆ್ಯಡಂ ಅರ್ಧ ಜೈನನಾದರೂ ತನ್ನನ್ನು ಕ್ರಿಶ್ಚಿಯನ್ ಎಂದೇ ಗುರುತಿಸಿಕೊಳ್ಳುತ್ತಾನೆ. "ಜೈನ ಧರ್ಮದಲ್ಲಿ ಎಳ್ಳಷ್ಟೂ ಇಂಟರೆಸ್ಟ್ ಇಲ್ಲ" ಎಂದು ನೇರವಾಗಿಯೇ ಒಪ್ಪಿಕೊಳ್ಳುತ್ತಾನೆ. ಮಾನವತಾವಾದ ಹಾಗೂ ಬ್ರಿಟಿಷ್ ಪ್ರಜ್ಞೆಯ ಕೇಂದ್ರವಾದ ವೈಯಕ್ತಿಕ ಸ್ವಾತಂತ್ರ್ಯ ಅವನ ತಾತ್ವಿಕ ನೆಲೆಗಳು. ಬದುಕನ್ನು ಬಿಟ್ಟು ಬೇರೆ ಯಾವುದಕ್ಕೂ ಅವನು ತನ್ನನ್ನು ಕಮಿಟ್ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಸಹಜತೆ ಅವನ ಜೀವನದ ಶೈಲಿ. ಇದರಿಂದಾಗಿ ತನ್ನ ಪೂರ್ವಜರ ಮನೆತನವಾದ ದೇಸಾಯಿ ಮನೆತನದೊಡನೆ ಹೊಂದಿಕೊಳ್ಳುವುದು ಅವನಿಗೆ ಕಷ್ಟವಾಗುವುದಿಲ್ಲ. ಆ್ಯನ್‌ಳ ಕೌಟುಂಬಿಕ ಹಿನ್ನೆಲೆಯಲ್ಲಿ ಸಮಸ್ಯಾತ್ಮಕತೆ

ಇದೆ. ತನ್ನ ತಂದೆಯನ್ನು ಅವಳು ಪ್ರೀತಿಸುತ್ತಾಳೆ. ಆದರೆ ಮಲತಾಯಿಯ ಬಗ್ಗೆ ಅವಳಲ್ಲಿ ದ್ವೇಷವಿದೆ. ಈ ಪ್ರೀತಿ, ದ್ವೇಷಗಳಿಂದ ತನ್ನನ್ನು ಕಳಚಿಕೊಂಡು ಸ್ವತಂತ್ರಳಾಗುವ ಬಯಕೆಯೂ ಅವಳ ಇಂಡಿಯಾ ಪ್ರವಾಸದ ಪ್ರೇರಣೆಗಳಲ್ಲಿ ಸೇರಿದೆ: "ದ್ವೇಷವನ್ನು ಕಿತ್ತೊಗೆಯಬೇಕೆಂದರೆ, ಪ್ರೀತಿಯನ್ನು ಕಿತ್ತೊಗೆಯಬೇಕು. ಸತ್ಯವನ್ನು ಸ್ವೀಕರಿಸಬೇಕು." ಹೀಗೆ ಆ್ಯನ್ ಇಂಡಿಯಾದೊಡನೆ ತನ್ನನ್ನು ತೊಡಗಿಸಿಕೊಳ್ಳುವುದಕ್ಕೆ ಅವಳ ಸಂಶೋಧನೆಯ ವಿಷಯದಂತೆ, ನೆಲೆಯಿಲ್ಲದ ಮನಃಸ್ಥಿತಿಯೂ ಕಾರಣವಾಗಿದೆ : "ನಿನಗೆ ಮರಳಿ ಹೋಗಲಿಕ್ಕೆ ಮನೆಯಿದೆ, ನನಗಿಲ್ಲ. ಆದ್ದರಿಂದ ನಾನಿಲ್ಲಿಯೇ ಇದ್ದು ಬಿಡಬೇಕೆಂದೆನಿಸುವುದು."

ಆ್ಯಡಂ ಮತ್ತು ಆ್ಯನ್ ಸಂಬಂಧವನ್ನು ಸ್ನೇಹದ ನೆಲೆಯಲ್ಲಿಯೇ ಉಳಿಸಿಕೊಳ್ಳಲು ಬಯಸುತ್ತಾರೆ. "ಅವಳು ನನ್ನ ಫ್ರೆಂಡ್. ಅವಳ ಜೀವನಕ್ಕೆ ಅವಳೇ ಜವಾಬ್ದಾರಳು. ಅವಳು ತನಗೆ ಬೇಕಾದ್ದನ್ನು ಮಾಡಲು ಸ್ವತಂತ್ರಳಿದ್ದಾಳೆ. ನಾ ನನಗ ಬೇಕಾದ್ದ ಮಾಡಲಿಕ್ಕೆ ಸ್ವತಂತ್ರನಿದ್ದೀನಿ." ಇದು ಆ್ಯಡಂನ ನಿಲುವು. ಆ್ಯನ್ ಈ ಸಂಬಂಧವನ್ನು ತುಸು ಭಿನ್ನವಾಗಿ ವ್ಯಾಖ್ಯಾನಿಸುತ್ತಾಳೆ. "ಆ್ಯಡಂ ನಮ್ಮಲ್ಲಿ ಮೊದಲು ಹುಟ್ಟಿದ್ದು ಪರಸ್ಪರ ಸಹಾನುಭೂತಿ, ವಿಶ್ವಾಸ, ಸ್ನೇಹ. ನಂತರ ಯಾವುದೋ ಮೂಡಿನಲ್ಲಿ ಸೆಕ್ಸ್ ... ನಿನ್ನನ್ನು ಪ್ರೀತಿಸಲು ಸಾಧ್ಯ ಅಂತ ನನಗೆ ಯಾವಾಗಲೂ ಅನಿಸಿದೆ. ಆದರೆ ನನಗೆ ಪ್ರೀತಿಯ ಬಗ್ಗೆ ತುಂಬಾ ಹೆದರಿಕೆ... ಅಂಥದ್ದೇನಾದರೂ ಸಂಭವಿಸಿದರೆ ಎಲ್ಲ ಭಟ್ಟಿ ಕೆಟ್ಟು ಹೋಗ್ತದೆ. ನಮ್ಮ ನಮ್ಮ ಸ್ವಾತಂತ್ರ್ಯ ಕಳಕೊಳ್ತೀವಿ ಎಂಬ ಹೆದರಿಕೆ. ಆ್ಯಡಂ, ನಾವು ಹೀಗೆ ಸ್ನೇಹಿತರಾಗಿ ಇರೋಣ, ಮಲಗೋಣ... ಆದರೆ ಪ್ರೀತಿ, ಲಗ್ನ, ಮಕ್ಕಳು ಆ ಚಕ್ರ ಬ್ಯಾಡ."[೨೮]

ಇಂಡಿಯಾ ಈ ಸಂಬಂಧವನ್ನು ಎರಡೂ ರೀತಿಯಿಂದ ಪ್ರಭಾವಿಸುತ್ತದೆ. ಆ್ಯಡಂನನ್ನು ಒಪ್ಪಿಕೊಳ್ಳುವ ಮೂಲಕ ದೇಸಾಯಿ ಮನೆತನ ಅವನಲ್ಲಿ ಸುಪ್ತವಾದ ಭಾರತೀಯತೆಯನ್ನು ಜಾಗೃತಗೊಳಿಸುತ್ತದೆ. ಅಜ್ಜ ದೇವೇಂದ್ರಪ್ಪ, ಅಜ್ಜಿ ಲಕ್ಷ್ಮಂಬಾಯಿಯವರ ಪ್ರೀತಿಯ ಮೊಮ್ಮಗನಾಗಿ ಅವನು ತಾನು ಈ ಮೊದಲು ಕಾಣದ ವಾತ್ಸಲ್ಯವನ್ನು ಅನುಭವಿಸುತ್ತಾನೆ. ದೇವೇಂದ್ರಪ್ಪನ ತಮ್ಮ ಅಪ್ಪಾಸಾಹೇಬ, ಅವರ ಮಗ ಭರತ ಬೇರೆ ಕಾರಣಗಳಿಗಾಗಿ ಅವನನ್ನು ಆಕರ್ಷಿಸುತ್ತಾರೆ. ಅಪ್ಪಾಸಾಹೇಬ ಸೋನೂಬಾಯಿಯವರ ಅಕ್ರಮ ಸಂಬಂಧ ಅವನಿಗೆ ಅನೈತಿಕವಾಗಿ ಕಾಣುವುದಿಲ್ಲ. "ಯು ಆರ್ ಗ್ರೇಟ್ ಗ್ರಾಂಡ್ ಪಾ, ಐ ಲೈಕ್ ಯು" ಎಂದು ಅವರ ಜೀವನೋತ್ಸಾಹದ ಬಗ್ಗೆ ಆ್ಯಡಂ ತನ್ನ ಮತ್ತು ಅವರ ನಡುವಿನ ಹೋಲಿಕೆಯನ್ನು ಗುರುತಿಸುತ್ತಾನೆ. ಭರತನ ಆಧುನಿಕತೆಯೂ ಅವನನ್ನು ಆಕರ್ಷಿಸುತ್ತದೆ. ಉತ್ಸಾಹದಿಂದ ಅವನು ತನ್ನನ್ನು ದೇಸಾಯಿ ಮನೆತನದ ಆಗುಹೋಗುಗಳಲ್ಲಿ ತೊಡಗಿಸಿಕೊಳ್ಳುತ್ತಾನೆ.

ಆ್ಯನ್‌ಳಿಗಿಂತ ಭಿನ್ನಳಾದ ರೋಜಾ ಕೂಡ ಅವನಿಗೆ ಆಕರ್ಷಕವಾಗಿ ಕಾಣುತ್ತಾಳೆ. ಆ್ಯಡಂ ರೋಜಾಳ ಸಮೀಪ ಸರಿದಂತೆ ಆ್ಯನ್ ಅವನಿಂದ ದೂರವಾಗುತ್ತಾ ಹೋಗುತ್ತಾಳೆ. ಜೈನಧರ್ಮ ಅವಳಿಗೆ ಕೇವಲ ಆಸಕ್ತಿಯ ವಿಷಯವಾಗಿ ಉಳಿಯದೆ ತನ್ನ ಸಮಸ್ಯೆಗಳಿಂದ ಪಾರಾಗುವ ಮಾರ್ಗವಾಗಿ

ಪರಿಣಮಿಸುತ್ತದೆ. ಜೈನಧರ್ಮದಲ್ಲಿ ಯಾವ ಆಸಕ್ತಿಯೂ ಇಲ್ಲದ ಆ್ಯಡಂಗೆ ಆ್ಯನ್‌ಳ ವರ್ತನೆ ವಿಚಿತ್ರವೆನಿಸುತ್ತದೆ. "ನಿನ್ನ ತಲೆ ಜಿನಮಯ ಆಗ್ತಾ ಇದೆ" ಎಂದು ಅವಳನ್ನು ದೂರುತ್ತಾನೆ. ರೋಜಾಳೊಡನೆ ಆ್ಯಡಂನ ಲಗ್ನದ ಸಂಭಾವ್ಯತೆ ಹಾಗೂ ಅವನು ತಾನಾಗಿಯೇ ಅವಳಲ್ಲಿ ಹೇಳಿಕೊಳ್ಳುವ ಬೆಂಗಳೂರಿನಲ್ಲಿ ನಡೆದ ಲೈಂಗಿಕ ಘಟನೆ ಇವರಿಬ್ಬರಲ್ಲಿಯ ಅಂತರ ಹೆಚ್ಚುವುದಕ್ಕೆ ಕಾರಣವಾಗುತ್ತದೆ. ಲೈಂಗಿಕ ಅಸೂಯೆಗಳನ್ನು ಪಾಶ್ಚಾತ್ಯ ಸಂಸ್ಕೃತಿ ಅನಾಗರಿಕ ಎಂದು ಭಾವಿಸುತ್ತದೆ. ಆದರೆ ಹಿನ್ನೋಟದಲ್ಲಿ ಆ್ಯನ್ ತನ್ನಲ್ಲಿ ಇಂತ ಭಾವನೆ ಹುಟ್ಟಿಕೊಂಡುದುದನ್ನು ಒಪ್ಪಿಕೊಳ್ಳುತ್ತಾಳೆ. ಆದರೆ, ಕೊನೆಗೆ ಈ ಎಲ್ಲ ಸಮಸ್ಯೆಗಳನ್ನು ಮೀರಿ ಇವರ ಸಂಬಂಧ ಫಲಿಸುತ್ತದೆ.

ಮೊದಲನೆಯದಾಗಿ, ಆ್ಯಡಂನಿಗೆ ತನ್ನ ಹಾಗೂ ರೋಜಾಳ ಸಂಬಂಧ ಸ್ನೇಹದ ರೋಜಾಳ ದೃಷ್ಟಿಯಲ್ಲಿ ಅಣ್ಣ-ತಂಗಿಯರ ಸಂಬಂಧದ ಆಚೆಗೆ ಹೋಗುವುದು ಸಾಧ್ಯವಿಲ್ಲ ಎನ್ನುವುದರ ಅರಿವಾಗುತ್ತದೆ. ಕಮ್ಯುನಿಷ್ಟಳಾದ ರೋಜಾಳಿಗೂ ಯಾವ ಸಂಕಲ್ಪಗಳನ್ನೂ ಸ್ವೀಕರಿಸದೆ ತನಗೂ ಶಾಶ್ವತವಾದ ತೊಡಗುವಿಕೆ ಅಶಕ್ಯ ಎಂಬುದನ್ನು ಅವನು ಮನಗಾಣುತ್ತಾನೆ : "ನಾ ದೊಡ್ಡ ಹೀರೋ ಅಲ್ಲವೇ ಅಲ್ಲ. ನಾ ತೀರಾ ಸಾಮಾನ್ಯ ಮನುಷ್ಯ... ಜೀವನದ ರಸ ಉಣ್ಣಬೇಕೆನ್ನುವ ಮನುಷ್ಯ. ಜೀವನದ ಅರ್ಥ ಶೋಧಿಸಬೇಕೆನ್ನುವ ಧೀರ ಗಂಭೀರ ಮನುಷ್ಯನಲ್ಲ." ಆ್ಯಡಂನ ಬಗ್ಗೆ ಹೆಚ್ಚು-ಕಡಿಮೆ ಇದೇ ಮಾತನ್ನು ಸ್ವಲ್ಪ ವ್ಯಂಗ್ಯ ಸೇರಿಸಿ ಮಾರ್ಕ್ಸಿಸ್ಟ್ ಡಾ. ಮಾಧವನ್ ಕೂಡ ಹೇಳುತ್ತಾನೆ. ಇನ್ನೊಂದು ಬೆಳವಣಿಗೆ ಆ್ಯನ್‌ಳ ಮನಸ್ಸಿನಲ್ಲಿ ನಡೆಯುವ ಕ್ರಿಯೆ. ಜೈನ ಧರ್ಮದ ವ್ಯಕ್ತಿನಿಷ್ಠೆ, ಅಹಿಂಸೆ, ಅಪರಿಗ್ರಹಗಳಂಥ ಮೌಲ್ಯಗಳು ಆ್ಯನ್‌ಳನ್ನು ಗಾಢವಾಗಿ ಪ್ರಭಾವಿಸುತ್ತವೆ. ಈ ಪ್ರಭಾವದ ಒಘದಲ್ಲಿ ಅವಳು ದೀಕ್ಷೆ ಪಡೆದು ಜೈನಳಾಗುತ್ತಾಳೆ. ಆದರೆ ಜೈನ ತಾತ್ವಿಕತೆಯನ್ನು ಸ್ವೀಕರಿಸಿದಂತೆ ಜೈನ ಸಮಾಜವನ್ನು ಒಪ್ಪಿಕೊಳ್ಳುವುದು ತನ್ನಿಂದ ಸಾಧ್ಯವಿಲ್ಲ ಎನ್ನುವ ಸತ್ಯವನ್ನು ಅವಳು ಕೊನೆಗೆ ಒಪ್ಪಿಕೊಳ್ಳಬೇಕಾಗುತ್ತದೆ.

"ನನಗೆ ಎತ್ತರವಾಗಿ ನಿಲ್ಲಬೇಕೆಂದಿಲ್ಲ. ಬರೇ ನಿಂತರೆ ಸಾಕು. ಯಾವಾಗಲೂ ನಗುತ್ತಾ ನಿಲ್ಲಲ್ಲು ಕಲಿಯಬೇಕು." "ಆ್ಯಡಂ ಯಾವಾಗಲೂ ನಗುತ್ತಾನೆ. ಆತ ಹುಟ್ಟಾ ಕಾಮದೇವತೆ." ಭಾರತದ ಅನುಭವ ಒಂದು ರೀತಿಯಿಂದ ಆ್ಯಡಂ-ಆ್ಯನ್ ನಡುವೆ ಅಂತರವನ್ನು ಸೃಷ್ಟಿಸಿದರೆ, ಇನ್ನೊಂದು ದೃಷ್ಟಿಯಿಂದ ಅವರ ಸಂಬಂಧದ ನಿಜವಾದ ಸ್ವರೂಪದ ಬಗ್ಗೆ ಅವರಲ್ಲಿ ತಿಳಿವನ್ನು ಹುಟ್ಟಿಸುವುದಕ್ಕೆ ಕಾರಣವಾಗುತ್ತದೆ. ಆ್ಯನ್‌ಳಲ್ಲಿ ಆ್ಯಡಂ ತನ್ನ 'ಸ್ಥಾಯೀ ಸ್ಥಾನ'ವನ್ನು ಕಂಡುಕೊಂಡರೆ ಆ್ಯಡಂನ ಸಮಾಗಮದಲ್ಲಿ ಆ್ಯನ್ 'ಭೋಗ-ಯೋಗಗಳ ಸಮನ್ವಯ'ವನ್ನು ಕಲ್ಪಿಸುತ್ತಾಳೆ. ಇವರಿಬ್ಬರೂ ಉಪಯೋಗಿಸುವ ಭಾಷೆಯಲ್ಲಿ ಅತಿರಂಜಕತೆಯ ಅಂಶವಿದೆಯಾದರೂ, ತಮ್ಮ ಸಂಬಂಧ ಒಂದು ಗಟ್ಟಿ ನೆಲೆ ತಲುಪಿದೆ ಎಂಬ ಅರಿವಾಗಿದೆಯೆನ್ನುವುದರ ಸ್ಪಷ್ಟ ಸೂಚನೆ ಹೊಂದಿದೆ ಎನ್ನುವುದರಲ್ಲಿ ಸಂಶಯವಿರಲಾರದು.

ಕಾದಂಬರಿ ತನ್ನ ಇನ್ನೊಂದು ಮುಖ್ಯ ಆಶಯವಾದ ಆಧುನಿಕತೆಯ ಪ್ರಕ್ರಿಯೆಗೂ ಸಾಕಷ್ಟು ಲಕ್ಷ್ಯ ಕೊಟ್ಟಿದೆ. ಈ ಕ್ರಿಯೆಯ ಪ್ರಮುಖ ಕೇಂದ್ರ ದೇಸಾಯಿ ಮನೆತನ. ಆದಪ್ಪ ದೇಸಾಯಿಯವರ ಕಾಲದಲ್ಲಿ ಏಕತ್ರವಾಗಿದ್ದ ಅವನ ಮನೆತನ ಒಡೆದು ಮೂರು ಭಾಗಗಳಾಗಿದೆ. ಆದಪ್ಪನ ಮಕ್ಕಳಲ್ಲಿ ತೀರಾ ಚಿಕ್ಕವನಾದ ಶ್ರೇಣಿಕ ಆಸ್ತಿಯ ತನ್ನ ಪಾಲು ತೆಗೆದುಕೊಂಡು ಊರು ಬಿಟ್ಟುದುದರಿಂದ ಅವನ ಪ್ರಸ್ತಾಪ ಕಾದಂಬರಿಯಲ್ಲಿ ಹೆಚ್ಚಾಗಿ ಬರುವುದಿಲ್ಲ. ಎಲ್ಲರಿಗಿಂತಲೂ, ಹಿರಿಯನಾದ ದೇವೇಂದ್ರಪ್ಪ ಬಿ.ಎ. ಪದವೀಧರನಾದರೂ ಸಂಪ್ರದಾಯನಿಷ್ಠ. ಲಕ್ಷ್ಮಂಬಾಯಿ ಅವನನ್ನು ಅನುಸರಿಸುವ ಹೆಂಡತಿ. ಜೈನ ತತ್ವಗಳಲ್ಲಿ, ಆಚಾರಗಳಲ್ಲಿ, ಧರ್ಮಗುರುಗಳಲ್ಲಿ ಇವರದು ಅಚಲವಾದ ಶ್ರದ್ಧೆ, ಹೆಂಡತಿ ತೀರಿ ಹೋದ ನಂತರ ದೇವೇಂದ್ರಪ್ಪ ದಿಗಂಬರ ಮುನಿಗಳನ್ನು ಆಶ್ರಯಿಸಿ ಶ್ರಾವಕನ ಜೀವನ ನಡೆಸುತ್ತಾನೆ. ಈ ದಂಪತಿಗಳ ಒಬ್ಬನೇ ಮಗ ನೇಮಿನಾಥನಿಂದಾಗಿ ಆಧುನಿಕತೆ ಇವರ ಕುಟುಂಬದಲ್ಲಿ ತಲೆದೋರುತ್ತದೆ. ಆದಪ್ಪನ ಎರಡನೆಯ ಮಗನಾದ ಅಪ್ಪಾಸಾಹೇಬನ ಕುಟುಂಬದಲ್ಲಿ ನಡೆಯುವ ಪರಿವರ್ತನೆ ಇಷ್ಟು ನಾಟಕೀಯವಲ್ಲವಾದರೂ ಪ್ರಾತಿನಿಧಿಕವಾದುದು. "ಈ ತಮ್ಮ ಬಹಳ ಸ್ವಾರ್ಥಿ" ಎಂದು ದೇವೇಂದ್ರಪ್ಪ ಅಪ್ಪಾಸಾಹೇಬನ ಬಗ್ಗೆ ಹೇಳುವುದರಲ್ಲಿ ಸತ್ಯವಿದೆ. ಅವನಲ್ಲಿ ಜೈನಧರ್ಮದ ಬಗ್ಗೆ ಸಾಂಪ್ರದಾಯಿಕವಾದ ಆದರ, ಶ್ರದ್ಧೆಗಳಿವೆ. ಆದರೆ ಇವುಗಳ ಸ್ವರೂಪ ಸಾಮಾಜಿಕವಾದದ್ದು. ಹಣ ಗಳಿಸಲು ಫಾರೆಸ್ಟ್ ಕಂಟ್ರಾಕ್ಟರನ ದಂಧೆ ಮಾಡುವಂತೆ ಸಮಾಜದಲ್ಲಿ ಸ್ಥಾನ ಗಳಿಸಲು ಅವನು ಬಸದಿ ನಿರ್ಮಾಣ ಮೊದಲಾದ ಧಾರ್ಮಿಕ ಕಾರ್ಯಗಳತ್ತ ಮನಸ್ಸು ಹಾಕುತ್ತಾನೆ. 'ರಾವ್ ಸಾಹೇಬ್', 'ಧರ್ಮ ಶಿರೋಮಣಿ'ಗಳಂಥ ಬಿರುದುಗಳು ಈ ಕ್ಷೇತ್ರದಲ್ಲಿ ಅವನು ದೊರಕಿಸುವ ಯಶಸ್ಸಿನ ಮಾಪಕಗಳಾಗಿವೆ. ಪರಿಸ್ಥಿತಿಗೆ ಹೊಂದಿಕೊಳ್ಳಬಲ್ಲ ಚಾಣಾಕ್ಷತೆಯೂ ಅವನಲ್ಲಿದೆ. ಗಾಂಧೀ ಚಳುವಳಿ ದೇಶದಲ್ಲಿ ಹಬ್ಬಿದಾಗ ಅದರಲ್ಲಿ ಭಾಗವಹಿಸಿ ಜೈಲಿಗೆ ಹೋಗುತ್ತಾನೆ. ಮುಂದೆ ಇದರ ರಾಜಕೀಯ ಲಾಭ ಪಡೆದು ಅಧಿಕಾರ ಗಳಿಸುತ್ತಾನೆ.

ಆಧುನಿಕತೆಯ ಪ್ರಕ್ರಿಯೆ ಅಪ್ಪಾಸಾಹೇಬನ ಮಗ ಭರತ ಕುಮಾರನಲ್ಲಿ ಇದಕ್ಕಿಂತಲೂ ಹೆಚ್ಚು ತೀವ್ರವಾಗಿ ಕಾಣಿಸಿಕೊಳ್ಳುತ್ತದೆ. ಅಪ್ಪಾಸಾಹೇಬನ ವಿರುದ್ಧ ಅವನು ಬಹಿರಂಗವಾಗಿ ಬಂಡೇಳಲಾರ. ಆದರೆ ಅವನಿಗೆ ಜೈನಧರ್ಮದಲ್ಲಿಯಾಗಲಿ, ತಂದೆಯ ವ್ಯಾವಹಾರಿಕ ಜಾಗರೂಕತೆಯಲ್ಲಾಗಲೀ ವಿಶ್ವಾಸವಿಲ್ಲ. ಅವನ ಮಟ್ಟಿಗೆ ಜೈನಧರ್ಮ ಎಂದೋ ಸತ್ತು ಹೋಗಿದೆ. "ಜೈನ ಧರ್ಮದ ಪ್ರಕಾರ ಜೀವನ ಮಾಡಬೇಕೂಂದ್ರೆ ಮುಗೀತು. ಎಲ್ಲರೂ ಉಪವಾಸ ಸಾಯಬೇಕು. ಅದರ ತತ್ವದ ಪ್ರಕಾರ ಜೀವಂತ ಇರೋದೇ ಶಕ್ಯವಿಲ್ಲ ಅಂತ ಹೇಳೋ ನಾ ಅದರ ಬಗ್ಗೆ ಕಾಳಜಿ ಮಾಡೋದಿಲ್ಲ. ಆಧುನಿಕ ಜಗತ್ತಿನಲ್ಲಿ ಆ ತತ್ವಗಳೆಲ್ಲಾ, ಹಾಸ್ಯಾಸ್ಪದವಾಗಿವೆ. ನೂರಕ್ಕೆ ತೊಂಬತ್ತೊಂಭತ್ತು ಜೈನರು ಆ ತತ್ವಗಳ ಪ್ರಕಾರ ಜೀವನ ಮಾಡೋದಿಲ್ಲ."[೨೯] ಇದು ಅವನ ಸ್ಪಷ್ಟ ಹೇಳಿಕೆಗಳಲ್ಲೊಂದು. ಆ್ಯನ್‌ಳ ಧರ್ಮಾಂತರ ಅವನಿಗೆ

ಹುಚ್ಚುತನದ್ದೆನಿಸುತ್ತದೆ. "ನನ್ನ ಮಟ್ಟಿಗಂತೂ ಜೈನಧರ್ಮ ತೀರ ನೆಗೆಟಿವ್ ಧರ್ಮ. ಅದರಲ್ಲಿ ಪಾಜಿಟಿವ್ ಅನ್ನೋದು ಏನೂ ಇಲ್ಲ. ಅದು ಮೃತ್ಯುವಿನ ಕಡೆ ಒಯ್ಯೋ ಧರ್ಮ." "ಎಲ್ಲರೂ ಹಿಪಾಕ್ರಟ್ಸ್" ಎಂದು ಹೇಳುತ್ತಲೇ ಭರತ ತನ್ನ ಲೈಂಗಿಕ ಸ್ವಚ್ಛಂದತೆಯನ್ನು ಜೈನ ಧರ್ಮಕ್ಕೆ ನಿಷಿದ್ಧವಾದ ಆಚಾರಗಳನ್ನು ಮನೆಯವರಿಂದ ಮುಚ್ಚಿಡುತ್ತಾನೆ. ತೋರಿಕೆಗೆ ಜೈನನೆಂದೇ ನಡೆದುಕೊಳ್ಳುತ್ತಾನೆ. ತನ್ನನ್ನು ಆಧುನಿಕ ಬಿಜಿನೆಸ್‌ಮನ್ ಎಂದು ಕರೆದುಕೊಳ್ಳುವ ಅವನಿಗೆ ಅಪ್ಪಾಸಾಹೇಬನ ವ್ಯವಹಾರ ತಂತ್ರಗಳು ನಿಷ್ಫಲವಾಗಿ ಕಾಣುತ್ತವೆ. ಭರತನ ಬಗ್ಗೆ ಬಂದ ಪ್ರತಿಕ್ರಿಯೆಗಳಲ್ಲಿ ಸಹಜವಾಗಿಯೇ ಅಂತರಗಳಿವೆ. "ಕೆಲಸಕ್ಕೆ ಬಾರದ ಭರತ ನಾನಿಷ್ಟು ಕಷ್ಟಪಟ್ಟು ಕಟ್ಟಿದ ದಂಧೆಯನ್ನು ಹಾಳು ಮಾಡುತ್ತಿದ್ದಾನಿಲ್ಲಿ" ಎಂದು ಅಪ್ಪಾಸಾಹೇಬ ಚಡಪಡಿಸಿದರೆ, ಆ್ಯಡಂನಿಗೆ ಅವನ ಹೊಸ ಯೋಜನೆಗಳು ಆಕರ್ಷಕವೆನಿಸುತ್ತವೆ. ಈ ವಿಷಯದಲ್ಲಿ ಆ್ಯನ್ ಮತ್ತು ಆ್ಯಡಂರಲ್ಲಿಯೂ ಮತಭೇದವಿದೆ. "ಭರತ ಒಂದು ಇಂಡಸ್ಟ್ರಿ ತೆಗೀಬೇಕೂಂತಾನೆ - ಅದರ ಚರ್ಚೆ ಮಾಡ್ತಿದ್ದೀವಿ" ಎಂದು ಆ್ಯಡಂ ಆ್ಯನ್‌ಳಿಗೆ ಹೇಳಿದಾಗ "ಯಾವ ಇಂಡಸ್ಟ್ರಿ? ಅವನಿಂದ ಯಾವ ಇಂಡಸ್ಟ್ರಿಯೂ ಶಕ್ಯವಿಲ್ಲ" ಎಂದು ಆ್ಯನ್ ಅದನ್ನು ಖಡಾಖಂಡಿತವಾಗಿ ತಳ್ಳಿಹಾಕುತ್ತಾಳೆ.

ನೇಮಿನಾಥನ ಪರಿತ್ಯಕ್ತ ಹೆಂಡತಿ ಜೈನಧರ್ಮದ ಸಂಪ್ರದಾಯದಲ್ಲಿಯೇ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾಳೆ. ಆದರೆ ಅಪ್ಪಾಸಾಹೇಬನ ವಿಧವೆ ಮಗಳು ನಿರ್ಮಲೆಯ ವಿಷಯದಲ್ಲಿ ಹೀಗಾಗುವುದಿಲ್ಲ. ಜೈನ ಪಂಚಮರಲ್ಲಿ ಪುನರ್ವಿವಾಹ ನಿಷಿದ್ಧವಾದುದರಿಂದ ಸಂಪ್ರದಾಯದ ವಿರುದ್ಧ ಹೋಗದೆ ಈ ಹಾದಿಯನ್ನು ಆರಿಸುವಂತಿಲ್ಲ. ನಿರ್ಮಲೆಯ ಗಂಡನ ಮನೆಯವರು ಗಾಂಧೀವಾದಿಗಳಾದುದರಿಂದ ತಮ್ಮ ಸೊಸೆ ವಿಧಾಯಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವುದು ಅವರ ಆಸೆ. ಆದರೆ ಅಪ್ಪಾಸಾಹೇಬನ ದುರಭಿಮಾನದಿಂದಾಗಿ ಈ ಆಸೆ ಈಡೇರುವಂತಿಲ್ಲ. ಅವಳು ತನ್ನ ವಿದ್ಯಾಭ್ಯಾಸ ಮುಂದುವರಿಸಿ ಮೆಡಿಕಲ್ ವೃತ್ತಿಯನ್ನಾಯ್ದುಕೊಳ್ಳಲು ಅನುಕೂಲತೆಗಳನ್ನು ವ್ಯವಸ್ಥೆಗೊಳಿಸುವುದರ ಮೂಲಕ ಆ್ಯಡಂ ಅವಳ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತಾನೆ. ಆದರೆ ಇದು ಸಾಧ್ಯವಾಗುವುದು ಅಪ್ಪಾಸಾಹೇಬನ ಮರಣದ ನಂತರವೇ. ಅಪ್ಪಾಸಾಹೇಬನ ಉಪಪತ್ನಿ ಸೋನೂಬಾಯಿಯ ಮಗಳು ಗೌರಿಯ ವಿಷಯದಲ್ಲಿಯೂ ಆ್ಯಡಂ ಇಂಥದೇ ಪರಿಹಾರ ಕಂಡುಹಿಡಿಯುತ್ತಾನೆ. ದೇಸಾಯಿ ಮನೆತನದ ಆಧುನೀಕರಣದಲ್ಲಿ ಪ್ರತ್ಯಕ್ಷ ಭಾಗವಹಿಸುವುದರ ಮೂಲಕ ಆ್ಯಡಂ ಹೊಣೆಗಾರಿಕೆಯ ಹೊಸ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾನೆ. ಈ ಬೆಳವಣಿಗೆಯಿಂದಾಗಿ ಆ್ಯನ್‌ಳೊಂದಿಗಿನ ತನ್ನ ಸಂಬಂಧದಲ್ಲಿ ಹೆಚ್ಚಿನ ಗಾಂಭೀರ್ಯವನ್ನು ತಂದುಕೊಳ್ಳುವುದು ಅವನಿಗೆ ಸಾಧ್ಯವಾಗುತ್ತದೆ.

ವ್ಯಕ್ತಿ ಸ್ವಾತಂತ್ರ್ಯದ ತಾತ್ವಿಕತೆಯನ್ನು ಜೈನ ದರ್ಶನ ಹಾಗೂ ಆಚರಣೆಗಳಲ್ಲಿ ಶೋಧಿಸಲು ಯತ್ನಿಸುವ ಪ್ರಾಮಾಣಿಕ ಪಾತ್ರ ಆ್ಯನ್ ಈಗಲ್ಬನ್‌ಳದು. ಜೈನ ಆಚರಣೆಗಳ ಭಾಗವಾದ ಹೋಮ,

ಯಾತ್ರೆ, ಮಸ್ತಕಾಭಿಷೇಕ, ಯಕ್ಷ-ಯಕ್ಷಿ ಪೂಜೆ, ಹೊಸ ವ್ರತ, ಮುನಿದೀಕ್ಷೆ, ಆಹಾರದಾನ, ಸಲ್ಲೇಖನ ವ್ರತ ಇತ್ಯಾದಿಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುತ್ತಲೇ ಗಟ್ಟಿ ಭಾವಕೇಂದ್ರವೊಂದನ್ನು ಆ್ಯನ್ ಕಟ್ಟಿಕೊಳ್ಳಬಯಸುತ್ತಾಳೆ. ಹಾಗಾಗಿ ಭಾರತವನ್ನು 'ಸೈಟ್ ಸೀಯಿಂಗ್' ದೃಷ್ಟಿಯಲ್ಲಿ ಅರ್ಥೈಸಿಕೊಳ್ಳದೆ, ಅದನ್ನು ತನ್ನದನ್ನಾಗಿಸಿಕೊಳ್ಳುತ್ತಲೇ ಅರಿಯುವ ಮಹತ್ವಾಕಾಂಕ್ಷೆ ಆಕೆಯದು. ಬಹುಶಃ ಆ್ಯಡಂಗಿದ್ದ ಸುರಕ್ಷಿತ ಕೌಟುಂಬಿಕ ನೆಲೆ ಆ್ಯನ್‌ಗೆ ಇಲ್ಲದ್ದು ಕೂಡ, ಇಂಗ್ಲೆಂಡಿನ ಬದುಕಿಗೆ ಮತ್ತೆ ಮರಳಬೇಕೆಂಬ ತುಡಿತ ಆಕೆಯಲ್ಲಿ ಇಲ್ಲವಾಗಿಸಿದೆ.

ಜೈನರ ಇತಿಹಾಸ, ಪುರಾಣ, ಕಲಾಕೃತಿಗಳ ಅಭ್ಯಾಸದ ಮೂಲಕ ಸಾಧ್ಯವಾಗುವ ಕಲ್ಪಿತ ಸಂಸ್ಕೃತಿಯ ಗ್ರಹಿಕೆಯಲ್ಲಿ ಆ್ಯನ್‌ಳಿಗೆ ಆಸಕ್ತಿಯಿಲ್ಲ. ಭದ್ರಬಾಹು ಚಂದ್ರಗುಪ್ತರ ಬಗೆಗಿನ ಐತಿಹಾಸಿಕತೆಯಲ್ಲಿ ಆಕೆ ಜೈನ ಧಾರ್ಮಿಕತೆಯ ಸ್ಫೂರ್ತ ಕ್ಷಣಗಳ ಜೀವಂತಿಕೆಯನ್ನು ಅರಸುವವಳು ಜೈನರ ದಶಧರ್ಮಗಳಲ್ಲಿ ಕೆಲವನ್ನಾದರೂ ಆಚರಿಸಿ ನೋಡಬೇಕೆಂಬ ನಿರ್ಧಾರ ಅವಳದು. ತನ್ನ ಅನುದಿನದ ವರ್ತನೆಯನ್ನು ಈ ಧಾರ್ಮಿಕ ಗುಣಗಳ ವ್ಯಾಖ್ಯೆಯ ಬೆಳಕಿನಲ್ಲಿ ವಿಶ್ಲೇಷಿಸಿಕೊಳ್ಳುತ್ತ ಗಟ್ಟಿಗೊಳ್ಳುವ ಪಾತ್ರ ಆ್ಯನ್‌ಳದು. ಹಾಗೆಯೇ ಜೈನಮುನಿಗಳ ಆಚಾರಗಳ ಬಗೆಗೆ ತನ್ನ ಅನುಭವಕ್ಕೆ ಹೊಂದಿಕೊಂಡಂತೆ ಆಳವಾದ ಪರಿವೀಕ್ಷಣೆ ಚಿಂತನೆಯನ್ನು ಆಕೆ ನಡೆಸಬಲ್ಲವಳು. ಮುನಿಗಳ, ದೀಕ್ಷಾ ಸಮಾರಂಭದಲ್ಲಿನ ಕೇಶಲೋಚನ ಕ್ರಿಯೆ ಆಕೆಗೆ ದೊಡ್ಡ 'ಕಲ್ಚರ್ ಶಾಕ್'ನ್ನು ಕೊಟ್ಟಿತು. "ಅಹಿಂಸೆಯನ್ನು ಇಡೀ ಜಗತ್ತಿಗೆ ಕಲಿಸುವ ಈ ಧರ್ಮದಲ್ಲಿ ಈ ಸ್ವಹಿಂಸೆ ಯಾಕೆ ಇದೆ? ದೇವರಿಗೆ ಗೊತ್ತು!"[೩೦] ಎಂಬ ಉದ್ಗಾರ ಆಕೆಯದು. ಹಳೆಯ ಕಾಲದ ಮುನಿಸಂಘಗಳಲ್ಲಿ ನಡೆಯಬೇಕಾದ ಈ ಸಮಾರಂಭಗಳು ಶ್ರಾವಕ ಶ್ರಮಣರ ನಡುವೆ ಬೇಲಿ ಕಟ್ಟುತ್ತವೆ ಎಂಬ ಅಭಿಪ್ರಾಯಕ್ಕೆ ಆಕೆ ಬರುತ್ತಾಳೆ. ಈ ಬಗೆಯ ಸ್ವಹಿಂಸೆಯ ಪ್ರದರ್ಶನ ಅರ್ಥಹೀನವಲ್ಲವೆ? ಎಂಬುದು ಆಕೆಯ ಪ್ರಶ್ನೆ.

ಆಕೆ ಎತ್ತುವ ಪ್ರಶ್ನೆಗಳಿಗೆ ನಿರ್ಮಲಕುಮಾರರಲ್ಲಿ ಉತ್ತರವಿದೆ. ಇವುಗಳ ಸಾಮಾಜಿಕ ಆಯಾಮದ ಬಗೆಗೆ ಆ್ಯನ್ ಕುತೂಹಲಳಾಗುವುದಿಲ್ಲ. ಇದು ಆಕೆಯ ಅಧ್ಯಯನದ ಮಿತಿ. ಈ ಮಿತಿಗೆ ವ್ಯಕ್ತಿನಿಷ್ಠ ನೆಲೆಯ ಸ್ವಾತಂತ್ರ್ಯಾಪೇಕ್ಷೆಯೂ ಕಾರಣವಾಗಿದೆ. ಜೈನತತ್ವ, ಆಚರಣೆಗಳ ಸಾಮಾಜಿಕತೆಯ ಆಯಾಮಕ್ಕಿಂತ, ವೈಯಕ್ತಿಕ ಅನ್ವೇಷಣೆಯೇ ಆ್ಯನ್‌ಳಲ್ಲಿ ಮುಖ್ಯವಾಗುತ್ತ ಹೋಗುತ್ತದೆ. ಜೈನ 'ಅಪರಿಗ್ರಹ' ತತ್ವವನ್ನು ಆ್ಯನ್ ಪರಿಭಾವಿಸುವ ಕ್ರಮದಲ್ಲಿಯೇ ಆ ತತ್ವದ ಬಹುಮುಖಿ ಆಯಾಮ ಪ್ರಕಟವಾಗುತ್ತದೆ. ಶ್ರವಣಬೆಳಗೊಳದ ಗೊಮ್ಮಟದರ್ಶನ ಆ್ಯನ್‌ಳಲ್ಲಿ 'ಅಪರಿಗ್ರಹ' ತತ್ವಪಾಲನೆಯನ್ನು ತನ್ನ ಅಸ್ತಿತ್ವದ ಸವಾಲಾಗಿ ಸ್ವೀಕರಿಸುವ ಮಟ್ಟಿನ ಪ್ರೇರಣೆಯನ್ನು ನೀಡುತ್ತದೆ.

ಮಲತಾಯಿಯಿಂದಾಗಿ ತಂದೆಯ ಪ್ರೀತಿಯಿಂದ ವಂಚಿತಳಾದುದರ ದುಃಖವನ್ನು ಮರೆಯಲು ಇಂಗ್ಲೆಂಡು, ಬಿಟ್ಟು, ಭಾರತಕ್ಕೆ ಬಂದುದೂ ಒಂದು ರೀತಿಯಲ್ಲಿ 'ಅಪರಿಗ್ರಹ'ವೆಂದೇ ಆ್ಯನ್

ಅರ್ಥೈಸುತ್ತಾಳೆ. ತಂದೆಯ ಮೇಲಿನ ಮಮಕಾರವನ್ನು ತ್ಯಜಿಸುವುದರ ಬದಲಿಗೆ ಸ್ವತಃ ಗೊಮ್ಮಟನೇ ತಂದೆಯಾಗಿ ತನ್ನ ಬಾಹುಗಳನ್ನು ಆ್ಯನ್‌ಗಾಗಿ ಚಾಚಿ ನಿಂತಿರುವಂತೆ ಆಕೆಗೆ ಭಾಸವಾಗುತ್ತದೆ. ಇದರೊಂದಿಗೆ ಆ್ಯಡಂ ಜೊತೆಗಿನ ಸಂಬಂಧವನ್ನೂ ತನ್ನ ಹಾಗೂ ಅವನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರದ ರೀತಿ ತ್ಯಜಿಸುವ ನಿರ್ಧಾರಕ್ಕೆ ಬರುತ್ತಾಳೆ. ಆ್ಯಡಂ ರೋಜಾರ ಸಂಬಂಧವನ್ನು ಕೂಡ ಆ್ಯನ್ ಕಷ್ಟದಿಂದಲೇ 'ಅಪರಿಗ್ರಹ' ತತ್ವದ ಆಧಾರದಿಂದ ಉದಾರವಾಗಿ ಸ್ವೀಕರಿಸಲು ಪ್ರಯತ್ನಿಸುತ್ತಾಳೆ. ಆದರೆ ಆ್ಯಡಂನೊಂದಿಗಿನ ಸಂಬಂಧವನ್ನು ಆ್ಯನ್ ಏಕಾಏಕಿ ದೂರಮಾಡಲು ಸಾಧ್ಯವಾಗುವುದಿಲ್ಲ. ಈ ಸಂಬಂಧವನ್ನು ದೂರ ಮಾಡುವುದೆಂದರೆ ಇನ್ನೊಂದು 'ಅಪರಿಗ್ರಹ'ಕ್ಕೆ ಸಿದ್ಧವಾದಂತೆ ಎಂದೆನಿಸುತ್ತದೆ. ತನ್ನೊಳಗಿನ ದ್ವಂದ್ವವನ್ನು ತನಗೆ ತಾನೇ ಆಕೆ ಕೇಳಿಕೊಳ್ಳುವ ಪ್ರಶ್ನೆಯಲ್ಲಿ ಪ್ರಕಟಗೊಳಿಸುತ್ತಾಳೆ. "ಶ್ರವಣಬೆಳಗೊಳದ ಗಿರಿಯ ಮೇಲೆ ಯಾರಿಂದ ಓಡಿದೆ? ಆ್ಯಡಂನಿಂದೇ? ಕಾಮದೇವನಿಂದೇ?" ತನ್ನ ಸಂಶೋಧಕ ಪಾತಳಿಯಲ್ಲಿಯೇ ಧಾರ್ಮಿಕ ನಂಬಿಕೆಯನ್ನು ಬದುಕಿನ ಅವಶ್ಯಕತೆಯಾಗಿ ಸ್ವೀಕರಿಸಲು ಬರುವುದೋ ಇಲ್ಲವೋ ಎಂಬ ಪ್ರಾಮಾಣಿಕ ಪ್ರಯೋಗಕ್ಕೆ ಆ್ಯನ್ ತೊಡಗುತ್ತಾಳೆ. ಅದರ ಫಲವಾಗಿ ಶ್ರವಣಬೆಳಗೊಳದ ಮಠೀಯ ಕೇಂದ್ರದ ಸಕ್ರಿಯ ಸಮಸ್ಯೆಯಾಗಿ, ಜೈನದೀಕ್ಷೆಗೊಂಡು ತನಗೆ ತಾನೇ ಶ್ರದ್ಧೆಯ ಆವರಣವನ್ನು ಕಲ್ಪಿಸಿಕೊಳ್ಳುತ್ತಾಳೆ. ಇದು ಆಕೆ ಪ್ರಜ್ಞಾಪೂರ್ವಕವಾಗಿ ವ್ಯಕ್ತಿಸ್ವಾತಂತ್ರ್ಯದ ನೆಲೆಯಿಂದ ಕೈಗೊಂಡ ನಿರ್ಧಾರವೇ ಆಗಿದೆ. ಈ ಕಾರಣಕ್ಕಾಗಿ ಕೆ.ವಿ.ತಿರುಮಲೇಶರು ಹೇಳುವಂತೆ ಆಕೆ "ಜೈನಿಸಂನ್ನು ಬಿಟುಕೊಡದೆಯೇ ಜೈನಾಚಾರ್ಯರ ವಿರುದ್ಧ ಬಂಡೇಳುವುದು ಸಾಧ್ಯವಾಗುತ್ತದೆ."[೩೧] ಧರ್ಮವೆನ್ನುವುದು ವ್ಯಕ್ತಿ ಜೀವನದ ಆಂತರಿಕ ಶೋಧದೊಂದಿಗೆ ಪಡೆದುಕೊಳ್ಳುವ ಅರಿವಿನ ಬೆಳವಣಿಗೆ ಎಂಬುದು ಆ್ಯನ್ ಪಾತ್ರದ ಮೂಲಕ ಸಮರ್ಥವಾಗಿ ನಿರೂಪಿತವಾಗಿದೆ. ಈ ವ್ಯಕ್ತಿನಿಷ್ಠ ನೆಲೆಯಲ್ಲಿಯೇ ಧರ್ಮದ ಸಾಮಾಜಿಕ ಆಯಾಮ ಕೂಡ ಸದಾ ಚಿಕಿತ್ಸೆಗೆ ಒಳಗಾಗಬೇಕಾದುದು ಅನಿವಾರ್ಯ ಅಗತ್ಯ ಎಂಬ ಮಹತ್ವದ ನಿರ್ಧಾರವನ್ನು ಕಾದಂಬರಿ ಪ್ರಕಟಿಸುತ್ತದೆ.

ಕೊನೆ ಟಿಪ್ಪಣಿಗಳು

೧. ಶಾಂತಿನಾಥ ದೇಸಾಯಿ, ೧೯೬೧, ೧೯೮೩ (ತೃ.ಮು), ಮುಕ್ತಿ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಪು.೨೫

೨. ಅದೇ, ಪು.೭೧-೭೨

೩. ಅದೇ, ಪು. ೧೪೫

೪. ಅದೇ, ಪು.೨೯೩

೫. ಅದೇ, ಪು.೩೪

೬. ಅದೇ, ಪು.೩೦೩

೭. ಪ್ರೀತಿ ಶುಭಚಂದ್ರ, ೨೦೦೬, ಶಾಂತಿನಾಥ ದೇಸಾಯಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು ಪು.೫೫

೮. ಶಾಂತಿನಾಥ ದೇಸಾಯಿ, ೨೦೦೨, **ವಿಕ್ಷೇಪ**, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೫೭

೯. ಅದೇ, ಪು.೧೨೩

೧೦. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ, ಪ್ರಕಾಶನ, ಬೆಂಗಳೂರು, ಪು.೫೭

೧೧. ಮಾರುತಿ ಶಾನಭಾಗ, 'ಶಾಂತಿನಾಥ ದೇಸಾಯಿಯವರ 'ವಿಕ್ಷೇಪ ಒಂದು ಸಮೀಕ್ಷೆ', **ಸಂಕ್ರಮಣ**, (ಸಂ) ಚಂದ್ರಶೇಖರ ಪಾಟೀಲ, ಸಂಚಿಕೆ ೪೭, ೧೯೯೨, ಸಂಕ್ರಮಣ ಪ್ರಕಾಶನ, ಧಾರವಾಡ, ಪು.೩೪

೧೨. ಶಾಂತಿನಾಥ ದೇಸಾಯಿ, ೨೦೦೨, **ವಿಕ್ಷೇಪ**, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೨೪೨

೧೩. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೪೩

೧೪. ಶಾಂತಿನಾಥ ದೇಸಾಯಿ, ೨೦೦೩, **ಸಂಬಂಧ**, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೬೧

೧೫. ಅದೇ, ಪು.೨೬

೧೬. ಅದೇ, ಪು.೮೫

೧೭. ಶಾಂತಿನಾಥ ದೇಸಾಯಿ, ೨೦೦೨, **ಬೀಜ**, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.೨೧೦

೧೮. ಮಾರುತಿ ಶಾನಭಾಗ, ೨೦೦೧, 'ಬೀಜದ ಮಹತ್ವ', **ಮುಕ್ತಚಂದ**, (ಸಂ), ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೦೮

೧೯. ಶಾಂತಿನಾಥ ದೇಸಾಯಿ, ೨೦೦೨, **ಬೀಜ**, ಸಪ್ನ ಬುಕ್‌ಹೌಸ್, ಬೆಂಗಳೂರು ಪು.೧೮೮

೨೦. ಅದೇ, ಪು.೧೮೯

೨೧. ಅದೇ

೨೨. ಪ್ರೀತಿಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.೭೪

೨೩. ಶಾಂತಿನಾಥ ದೇಸಾಯಿ, ೧೯೯೩, **ಅಂತರಾಳ**, ಸ್ನೇಹಪ್ರಕಾಶನ, ಬೆಂಗಳೂರು, ಪು.೧೨೮

೨೪. ಅದೇ, ಪು.೧೭೭

೨೫. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೫೯

೨೬. ರಘುರಾಂ ಎ., ೨೦೦೧, 'ಶಾಂತಿನಾಥ ದೇಸಾಯಿ ಅವರ ಅಂತರಾಳ', **ಮುಕ್ತಚಂದ** (ಸಂ) ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ಪು.೧೨೫

೨೭. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೬೧

೨೮. ಶಾಂತಿನಾಥ ದೇಸಾಯಿ, ೧೯೯೮, **ಓಂಣಮೋ**, ಎಸ್‌ಬಿಎಸ್ ಪಬ್ಲಿಷರ್ಸ್, ಬೆಂಗಳೂರು, ಪು.೪೪

೨೯. ಅದೇ, ೭೨

೩೦. ಅದೇ, ೧೨೭

೩೧. ತಿರುಮಲೇಶ್ ಕೆ.ವಿ., ೧೯೯೮, 'ಶಾಂತಿನಾಥರ ಕೊನೆಯ ಕಾದಂಬರಿ', **ಓಂಣಮೋ**, ಎಸ್‌ಬಿಎಸ್ ಪಬ್ಲಿಷರ್ಸ್, ಬೆಂಗಳೂರು, ಪು.೧೨

ಅಧ್ಯಾಯ ೯

ಸಮಾರೋಪ

೯

ಸಮಾರೋಪ

ಕನ್ನಡದ ಆಧುನಿಕ ಸಾಹಿತ್ಯಕ್ಕೆ ಈಗ ಒಂದು ಶತಮಾನ ತುಂಬಿತು. ಈ ಸಾಹಿತ್ಯವನ್ನು ಕುರಿತು ಅಧ್ಯಯನಗಳು ಬೇಕಾದಷ್ಟು ನಡೆದಿವೆ. ಪಂಥಾಧಾರಿತ, ಕರ್ತೃ ಆಧಾರಿತ, ಪ್ರಕಾರಾಧಾರಿತ, ಕೃತಿ ಕೇಂದ್ರಾಧಾರಿತ, ಸೈದ್ಧಾಂತಿಕ ನೆಲೆಯಾಧಾರಿತವಾಗಿಯೂ ಅಧ್ಯಯನಗಳು ನಡೆದಿವೆ. ಸುಮಾರು ಒಂದು ಶತಮಾನದ ಉದ್ದಕ್ಕೂ ನಡೆಯುತ್ತಲೇ ಬಂದ ಅಧ್ಯಯನಗಳಲ್ಲಿ ಬಹುಮುಖತೆಯಿದೆ. ಆದರೂ ಅಧ್ಯಯನಗಳಿಗೆ ಭಿನ್ನ ಭಿನ್ನ ಆಯಾಮಗಳು ಸೇರಿಕೊಳ್ಳುತ್ತಲೇ ಇವೆ. ದೇಸಾಯಿ ಅವರನ್ನು ಅವರ ಸಮಕಾಲೀನ 'ನವ್ಯ' ಪಂಥದವರ ಜತೆಯಿಟ್ಟು ಅಧ್ಯಯನ ಮಾಡಿದಂತೆ, ಸಮಕಾಲೀನ ನವ್ಯ ಬರಹಗಾರರಿಗಿಂತ ಭಿನ್ನವಾಗಿ ಗ್ರಹಿಸಿದ ಅಧ್ಯಯನಗಳೂ ಇವೆ. ಈಗ ಶಾಂತಿನಾಥ ದೇಸಾಯಿ ಅವರನ್ನು ನವ್ಯದ ಬರಹಗಾರನೆಂದು, ಅವರ ಸಾಹಿತ್ಯವನ್ನು ನವ್ಯ ಸಾಹಿತ್ಯವೆಂದು ಪರಿಗಣಿಸಿ ಓದುವ ಅಗತ್ಯವಿಲ್ಲವೆಂದು ಕಾಣುತ್ತದೆ. ಪೂರ್ವಗ್ರಹಿತ ಮಾನದಂಡವನ್ನು ಹೊತ್ತು ಅಧ್ಯಯನಕ್ಕೆ ತೊಡಗಿದಾಗಲೇ ಒಂದು ಮಿತಿ ಬಂದಿರುತ್ತದೆ. ಅದಕ್ಕಾಗಿ ನವ್ಯ ಎಂದು ಪರಿಗಣಿಸಿದರೆ ಸಾಹಿತ್ಯವೆಂದೇ ಪರಿಗಣಿಸಿ ಅಧ್ಯಯನ ಮಾಡಬಹುದು. ಆದರೂ ಕನ್ನಡದಲ್ಲಿ ನಡೆಯುವ ಅಧ್ಯಯನಗಳ ಹಿಂದೆ ಒಂದು ಸೈದ್ಧಾಂತಿಕ ನೆಲೆ ಇದ್ದೇ ಇರುತ್ತದೆ. ಸಿದ್ಧಾಂತದ ನೆರವಿನಿಂದ ಸಾಹಿತ್ಯಾಧ್ಯಯನ ನಡೆಯುತ್ತ ಬಂದಿರುವುದು ಸಹಜ ಪ್ರಕ್ರಿಯೆಯಾಗಿದೆ.

'ಸ್ತ್ರೀವಾದ'ದ ನೆಲೆಯಿಂದ ಶಾಂತಿನಾಥ ದೇಸಾಯಿ ಅವರನ್ನು ಅಧ್ಯಯನ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ ಎಂದು ಮೇಲು ನೋಟಕ್ಕೆ ಬೆಳೆಯುತ್ತದೆ. ಸಮಕಾಲೀನ ನವ್ಯ ಬರಹಗಾರರ ಸಾಹಿತ್ಯವನ್ನು 'ಸ್ತ್ರೀವಾದ'ದ ನೆಲೆಯಿಂದ ಅಧ್ಯಯನ ಮಾಡಲು ತೊಡಗಿದರೆ ಸ್ತ್ರೀಯರನ್ನು ಸರಿಯಾದ ಸ್ಥಾನದಲ್ಲಿ ಚಿತ್ರಿಸಲಾಗಿಲ್ಲವೆಂದು, ಸ್ತ್ರೀಯರ ಬಗ್ಗೆ ಕಾಳಜಿ ಇಲ್ಲವೆಂದು, ಅದೊಂದು ಜೀವವಿರುವ ವ್ಯಕ್ತಿಯೆಂದು ತಿಳಿಯದೆ ಸರಕು ಎಂದು ಭಾವಿಸಲಾಗಿದೆ ಎಂಬ ತೀರ್ಮಾನದ ಅಧ್ಯಯನಗಳು ನಡೆಯುತ್ತಿವೆ. ಇಂಥ ಮನೋಧರ್ಮದ ಹಿನ್ನೆಲೆಯಲ್ಲಿ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಅಧ್ಯಯನ ಮಾಡಿದಾಗಲೂ ಅಂದರೆ 'ಸ್ತ್ರೀವಾದ'ದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗಲೂ, ದೇಸಾಯಿ ಕಥನ ಸಾಹಿತ್ಯದಲ್ಲಿ ಚಿತ್ರಿತವಾದ ಮಹಿಳೆಯರು ನಿಜವಾಗಿಯೂ ಸ್ತ್ರೀವಾದಿಗಳು ಅನ್ನಿಸುತ್ತದೆ.

[illegible]

[illegible]

[illegible]

ದೇಸಾಯಿ ಅವರ ಕಥೆ-ಕಾದಂಬರಿಗಳ ಸ್ತ್ರೀಯರು ಸ್ತ್ರೀವಾದಿಗಳು. ಆದರೆ ಈ ಹೊತ್ತಿನಲ್ಲಿ 'ಸ್ತ್ರೀವಾದ'ದ ಸೈದ್ಧಾಂತಿಕ ನೆಲೆಯಿಂದ ಮೂಡಿಬಂದ ಸ್ತ್ರೀಪಾತ್ರಗಳ ಸ್ತ್ರೀವಾದಿತನಕ್ಕಿಂತ ಭಿನ್ನವಾಗಿ ಕಾಣುತ್ತಾರೆ. ಒಂದು ಸೈದ್ಧಾಂತಿಕ ನೆಲೆಯಿಂದ ಚಿತ್ರಿತವಾದರೆ ಅಚ್ಚಿನ ಮೂರ್ತಿಗಳಾಗುವ ಅಪಾಯವಿರುತ್ತದೆ. ಬದುಕಿನ ಹಿನ್ನೆಲೆಯಲ್ಲಿ ಯಾವುದೇ ನಿರ್ದಿಷ್ಟ ನೆಲೆಯಿಂದ ಸ್ತ್ರೀ-ಪುರುಷ ರೂಪುಗೊಂಡಿದ್ದರೂ, ರೂಪುಗೊಳ್ಳುವ ಕ್ರಮದಲ್ಲಿ ಸಂಕೀರ್ಣತೆ ಇರುತ್ತದೆ. ಇದರಿಂದಾಗಿ ಅಧ್ಯಯನಗಳು ಒಂದು ನೆಲೆಯಿಂದ ನಡೆದರೆ ಸಾಲದು. ಬಹುಮುಖಿಯಾಗಿ ನಡೆದರೆ ನಿಜವಾದ ಲೇಖಕನ ಆಶಯಗಳಾಗಲಿ, ಧೋರಣೆಗಳಾಗಲಿ, ಸಾಹಿತ್ಯತನವಾಗಲಿ ತಿಳಿಯಲು ಸಾಧ್ಯವಾಗುತ್ತದೆ.

ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಿದಾಗ ದೊರಕುವ ಫಲಿತಗಳನ್ನು ಹೀಗೆ ಸಂಗ್ರಹಿಸಲು ಪ್ರಯತ್ನಿಸಲಾಗಿದೆ.

ಅಧ್ಯಯನದ ಫಲಿತಗಳು

೧. ಶಾಂತಿನಾಥ ದೇಸಾಯಿಯವರು ತಮ್ಮ ಸಾಹಿತ್ಯದಲ್ಲಿ ತಾವೇ ಸೃಷ್ಟಿಸಿಕೊಂಡಂತ ಒಂದು ನೈತಿಕತೆಯಿದೆ. ಅದು ಸಾಂಪ್ರದಾಯಿಕ ನೈತಿಕ ಪ್ರಜ್ಞೆಗಿಂತ ಭಿನ್ನ ಇದೆ ಎಂದು ಹೇಳಬಹುದು. ಅದು ಸ್ತ್ರೀ ಪುರುಷರಿಬ್ಬರಲ್ಲೂ ಸಮಾನವಾದ ಪ್ರಭಾವ ಬೀರುತ್ತಿರುತ್ತದೆ. ಅಂದರೆ ಹೆಣ್ಣು ಮತ್ತು ಗಂಡಿನ ನಡುವಿನ ಸಂಬಂಧದಲ್ಲಿ, ಹೆಣ್ಣು ಮತ್ತೊಂದು ಗಂಡಿನ ಜೊತೆ ಸಂಬಂಧ ಬೆಳೆಸುವುದನ್ನು ಅನೈತಿಕತೆ ಎಂದು ಭಾವಿಸುವುದಿಲ್ಲ. ಗಂಡು ತನ್ನನ್ನು ತಾನು ವ್ಯಾಖ್ಯಾನಿಸಿಕೊಳ್ಳುವಾಗ ಹೇಗೆ ಇದನ್ನು ಅಪರಾಧ ಅಲ್ಲ ಅಂತ ಭಾವಿಸುತ್ತಾನೋ, ಹೆಣ್ಣು ಹಾಗೆ ಭಾವಿಸುತ್ತಾಳೆ.

೨. ದೇಸಾಯಿಯವರಲ್ಲಿ ಮುಕ್ತ ಲೈಂಗಿಕತೆ ಜೀವನದ ಅರ್ಥವಂತಿಕೆಯನ್ನು ಕಂಡುಕೊಳ್ಳುವ ಮಾಧ್ಯಮವಾಗಿ ಬರುತ್ತದೆಯೇ ಹೊರತು ಲೋಲುಪತೆಯ ಪ್ರಕ್ರಿಯೆಯಾಗಿ ಅಲ್ಲ.

೩. ನವ್ಯ ಸಾಹಿತ್ಯದಲ್ಲಿ ಹೆಣ್ಣು ಅಡಿಟಿಪ್ಪಣಿಯಂತೆ ಬರುತ್ತಾಳೆ ಹೊರತು ಸಮಾನ ಸಂಗಾತಿಯಾಗಿ ಅಲ್ಲ. ಆದರೆ ದೇಸಾಯಿಯವರ ಸಾಹಿತ್ಯದಲ್ಲಿ ಬರುವ ಸ್ತ್ರೀಯರು ಸ್ವತಂತ್ರ ವ್ಯಕ್ತಿತ್ವವುಳ್ಳವರು ಹಾಗೂ ಚೈತನ್ಯಶೀಲರೂ ಧೀಮಂತಿಕೆಯುಳ್ಳವರೂ ಆಗಿದ್ದಾರೆ. ಅವರು ತಮ್ಮ ವ್ಯಕ್ತಿತ್ವವನ್ನು ಮಂಡಿಸಲು ದೇಸಾಯಿಯವರು ತಮ್ಮ ಸಾಹಿತ್ಯದಲ್ಲಿ ಒದಗಿಸಿರುವ ಅವಕಾಶ ಬಹಳ ದೊಡ್ಡದು. ಅವರ ಅನೇಕ ಕಥೆಗಳಲ್ಲಿ ಅನುಭವಲೋಕ ಮಂಡಿತವಾಗುವುದೇ ಸ್ತ್ರೀ ನಿರೂಪಕಿಯಿಂದ. ಅವರ ಕಥನ ಲೋಕದಲ್ಲಿ ಸ್ತ್ರೀಯರು ಬಲಿಷ್ಟರಷ್ಟೇ ಅಲ್ಲ, ಅಹಂಕಾರ ಮತ್ತು ವಿಕ್ಷಿಪ್ತತೆಯುಳ್ಳ ಪುರುಷರಿಗೆ ಹೋಲಿಸಿದರೆ, ವಿವೇಕಿಗಳೂ ಹೃದಯವಂತರೂ ಪರಿಪೂರ್ಣರೂ ಹೌದು. ತಮ್ಮ ಅಸ್ತಿತ್ವದ ಪ್ರಶ್ನೆ ಬಂದಾಗ ಹೆಣ್ಣು ತೋರುವ ದಿಟ್ಟತನ, ಜೀವನ ಪ್ರೀತಿ, ಅವರನ್ನು ಘನವೆತ್ತ ಮನುಷ್ಯರನ್ನಾಗಿ ಮಾಡುತ್ತದೆ. ಪ್ರತಿಕೂಲ

ಪರಿಸ್ಥಿತಿಗಳಲ್ಲಿಯೂ ಈಜಿ ಗೆಲ್ಲುವ ಇಷ್ಟೊಂದು ಮಧ್ಯಮ ವರ್ಗದ ಧೀಮಂತ ಸ್ತ್ರೀಯರನ್ನು, ದೇಸಾಯಿ ಬಿಟ್ಟರೆ ಬೇರಾವ ಲೇಖಕರೂ ಸೃಷ್ಟಿಸಿಲ್ಲ.

೪. ನವ್ಯಸಾಹಿತ್ಯ ವಿವಾಹೇತರ ಲೈಂಗಿಕ ಸಂಬಂಧಗಳನ್ನು ಸರಳ ನೈತಿಕ ದೃಷ್ಟಿಕೋನ ಬಿಟ್ಟುಕೊಟ್ಟು ನೋಡುವುದುಂಟು. ಆದರೂ ಸ್ತ್ರೀಯನ್ನು ತಪ್ಪಿತಸ್ಥಳೆಂಬಂತೆ ಕಾಣಿಸುವ ಸಾಂಪ್ರದಾಯಿಕ ದೃಷ್ಟಿಕೋನವನ್ನು ಮೀರಲು ಅದರ ಬಹುತೇಕ ಲೇಖಕರಿಗೆ ಸಾಧ್ಯವಾಗಲಿಲ್ಲ. ದೇಸಾಯಿಯವರು ಈ ಸಂಬಂಧಗಳನ್ನು ಅ-ಮಾರಲ್ ಆಗಿ ನೋಡಬಲ್ಲವರೂ ಇಂಥ ಸಂಬಂಧಗಳಲ್ಲಿ ಸ್ತ್ರೀಯರನ್ನು ಘನತೆಯಿಂದ ಕಾಣಿಸಬಲ್ಲವರೂ ಆಗಿದ್ದಾರೆ.

೫. ಗಂಡು ಹೆಣ್ಣಿನ ಸಂಬಂಧದ ನೆಲೆಯಲ್ಲಿ ದೇಸಾಯಿಯವರು ಹೆಣ್ಣಿನೊಡನೆ ಪ್ರಯೋಗಗಳನ್ನು ನಡೆಸುವಂಥ ಅನೇಕ ಪುರುಷ ಪಾತ್ರಗಳನ್ನು ಚಿತ್ರಿಸಿದ್ದಾರೆ. ಹೀಗೆಂದ ಮಾತ್ರಕ್ಕೆ ದೇಸಾಯಿಯವರು ಸ್ತ್ರೀಯರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ, ಸ್ತ್ರೀ ಸಹಾನುಭೂತಿ ಹೊಂದಿಲ್ಲ ಎಂದು ಅರ್ಥವಲ್ಲ. ಇಂಥ ಪುರುಷರ ಪ್ರಯೋಗಕ್ಕೆ ಒಳಗಾಗುವ ಸ್ತ್ರೀಪಾತ್ರಗಳ ನೋವು, ಅಸಹಾಯಕತೆ, ದಿಗ್ಭ್ರಮೆಗಳನ್ನು ಅವರು ಒಟ್ಟೊಟ್ಟಿಗೆ ಚಿತ್ರಿಸುತ್ತಾರೆ. ಅವರ ಅಶ್ವಿನಿ (ಅಂತರಾಳ), ಶಿರೀನ್ (ವಿಕ್ಷೇಪ)ರಂಥ ಪಾತ್ರಗಳು ಸ್ವತಃ ತಾವೂ ಗಂಡುಗಳೊಂದಿಗೆ ಪ್ರಯೋಗಗಳಲ್ಲಿ ತೊಡಗುತ್ತಾರೆ. ಇಂಥ ಪ್ರಯೋಗಗಳು ಜೀವನದ ಸಂಕಟಕರ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನಗಳೇ ಹೊರತು ಕೇವಲ ಕಾಮುಕತೆ ಅಲ್ಲ.

೬. ಸಮಾಜ ಒಪ್ಪಿತ ನೈತಿಕ ಮೌಲ್ಯಗಳಿಂದ ದೇಸಾಯರ ಪಾತ್ರಗಳನ್ನು ಅಳೆದರೆ ಎಲ್ಲರೂ ಹಾದಿ ತಪ್ಪಿದವರು ಅಥವಾ ತಪ್ಪುವವರು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ನಿರ್ಬಂಧಕ್ಕೆ ಒಳಗಾದ ನೈತಿಕತೆ ದೇಸಾಯರಲ್ಲಿ ಚೆನ್ನಾಗಿ ಪಳಗಿದ ರೂಢಿಯಾಗಿ ನಿಷ್ಪಕ್ಷಪಾತವಾದ ಧೋರಣೆಯಾಗಿ ಬರುತ್ತದೆ. ವೈಯಕ್ತಿಕ ಮೌಲ್ಯವಾದ ನೈತಿಕತೆಯ ವಿಕಸನ ಹಾಗೂ ಉದಾರತೆಯಲ್ಲಿ ಬದುಕಿನ ಅರ್ಥವನ್ನು ಕಾಣಲೆತ್ನಿಸುವ ದೇಸಾಯರ ಪಾತ್ರಗಳು ತೀಕ್ಷ್ಣ ಸಂವೇದನಾಶೀಲರಾಗಿರುವುದರಿಂದ ಇವರಿಗೆ ತಾವು ಮಾಡುವ ಕ್ರಿಯೆಯ ಅರಿವು ಇದೆ. ಜೊತೆಗೆ ಇವರು ತೊಡಗುವ ಕ್ರಿಯೆ, ನೈತಿಕ ಹೊಣೆಗಾರಿಕೆ ಅರಿತ ಕ್ರಿಯೆ ಕೂಡ ಆಗಿದೆ. ಈ ಬಗೆಯ ಸೂಕ್ಷ್ಮವೇದಿ ಸ್ವಮನಸ್ಕರನ್ನು ದೇಸಾಯಿಯವರು ಕನ್ನಡ ಕ್ಷೇತ್ರಕ್ಕೆ ಪರಿಚಯ ಮಾಡಿಸಿದ್ದಾರೆ.

೭. ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಆಧುನಿಕತೆಯ ಶೋಧವನ್ನು ಅತ್ಯಂತ ಜವಾಬ್ದಾರಿಯುತವಾಗಿ ಕೈಗೊಂಡ ಲೇಖಕ ಶಾಂತಿನಾಥ ದೇಸಾಯಿ. ಕಾಮಕೇಂದ್ರದ ನೆಲೆಯಲ್ಲಿ ವೈಯಕ್ತಿಕ ಅನುಭವದ ಶೋಧಕ್ಕೆ ಮುನ್ನುಗ್ಗುವ ಭರದಲ್ಲಿ ಅನೇಕ ನವ್ಯ ಲೇಖಕರು ಹೆಣ್ಣನ್ನು ಭೋಗವಸ್ತುವಾಗಿ ಕಂಡದ್ದುಂಟು. ಶಾಂತಿನಾಥರ ಕಥನಗಳು ಈ ಮಿತಿಯಿಂದ ದೂರವಾಗಿರುವುದೇ ನವ್ಯರಲ್ಲಿ ಅವರನ್ನು ವಿಶಿಷ್ಟರನ್ನಾಗಿಸಿದೆ.

೮. ಪರಂಪರೆಯಿಂದ ದೂರವಾಗಿಯೇ ಬದುಕಿದ್ದರಿಂದ ಅದರ ನೆರವೂ ಇಲ್ಲದೇ ಅಚ್ಚ ನಗರದ ವಾತಾವರಣದಲ್ಲಿ ದೇಸಾಯರು ಸಂಪೂರ್ಣವಾಗಿ ತಮ್ಮ ಸ್ವಂತ ಪ್ರತಿಭೆಯನ್ನು ದುಡಿಸಿಕೊಳ್ಳುತ್ತಾರೆ. ಅನಂತಮೂರ್ತಿ, ಚಿತ್ತಾಲರ ಸೃಜನಶೀಲತೆ, ಪರಂಪರೆಯ ಗಳಿಕೆಯಿಂದ ಸಾಕಷ್ಟು ಶ್ರೀಮಂತ ಸ್ಮೃತಿಗಳನ್ನು ಹೊತ್ತುಕೊಂಡದ್ದಾದರೆ, ದೇಸಾಯರದ್ದು ಸ್ವತಃ ಸಂಪಾದನೆ ಮಾಡಿದ ಆಧುನಿಕ ಪ್ರಜ್ಞೆಯ ನಾಗರಿಕತೆಯ ಹಲವು ಹೊಸ ಅಂಶಗಳನ್ನು ಹೊತ್ತುಕೊಂಡದ್ದಾಗಿದೆ.

ಶಾಂತಿನಾಥ ದೇಸಾಯಿ ಅವರ ಸಾಹಿತ್ಯದಲ್ಲಿ ನೆನಪುಗಳಿಗೆ ಆದ್ಯತೆಯಿಲ್ಲ. ವರ್ತಮಾನವೇ ಮುಖ್ಯ. ಬಾಲ್ಯಕಾಲದ ಅನುಭವಗಳಿಗೆ ಹೋಗುವುದಿಲ್ಲ. ಪಾತ್ರಗಳಿಗೆ ಚಾರಿತ್ರಿಕತೆ ಎಂದರೆ ವರ್ತಮಾನದಲ್ಲಿ ಇರುವ ಸ್ಥಿತಿಯೇ ಆಗಿದೆ. ಪರಂಪರೆ, ಚರಿತ್ರೆಯ ಭಾರವನ್ನು ಹೊತ್ತು ಅವರ ಪಾತ್ರಗಳು ನಿರ್ಮಿತವಾಗುವುದಿಲ್ಲ. 'ಸಾಮಾಜಿಕ ಬದ್ಧತೆ'ಯಿಟ್ಟುಕೊಂಡು ಶಾಂತಿನಾಥ ದೇಸಾಯಿ ಅವರು ಸಾಹಿತ್ಯವನ್ನು ರಚಿಸಲಿಲ್ಲ. ಅಥವಾ ಈ ರೀತಿಯಲ್ಲಿ ಅವರನ್ನು ನೋಡಲಾಗುವುದಿಲ್ಲ. ವರ್ತಮಾನದ ವಾಸ್ತವವಾದಿ ನೆಲೆಯಲ್ಲಿ ಅವರ ಸಾಹಿತ್ಯ ರಚನೆಯಾಗಿದೆ. ಮನೋವೈಜ್ಞಾನಿಕ ತಿಳುವಳಿಕೆಯೂ ಸೇರಿಕೊಂಡಿದೆ. ಈ ದೃಷ್ಟಿಯಿಂದ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು 'ಆಧುನಿಕೋತ್ತರ' ನೆಲೆಯಿಂದ ಅಧ್ಯಯನ ಮಾಡಿದರೆ ಭಿನ್ನವಾಗಿ ಗ್ರಹಿಸಿದಂತಾಗುತ್ತದೆ. ಅಲ್ಲದೆ ಭಾಷಿಕ ರಚನೆಯನ್ನು ಪರಿಗಣಿಸುವ 'ಆಧುನಿಕೋತ್ತರ ವಾದ'ದಿಂದ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಅಧ್ಯಯನ ಮಾಡಿದಾಗಲೂ ಸಹ ಫಲಿತಗಳು ಭಿನ್ನವಾಗಿ ಸಿಗುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಬಹುದು.

ಅನುಬಂಧಗಳು

೧. ಶಾಂತಿನಾಥ ದೇಸಾಯಿಯವರ ಜೀವನ ವಿವರ
೨. ಶಾಂತಿನಾಥ ದೇಸಾಯಿಯವರ ಕೃತಿಗಳು
೩. ಶಾಂತಿನಾಥ ದೇಸಾಯಿಯವರ ಸಾಹಿತ್ಯ ಕುರಿತ ಅಧ್ಯಯನ ಗ್ರಂಥಗಳು
೪. ಶಾಂತಿನಾಥ ದೇಸಾಯಿಯವರ ಸಾಹಿತ್ಯ ಕುರಿತ ಲೇಖನಗಳು
೫. ಶಾಂತಿನಾಥ ದೇಸಾಯಿಯವರ ಸಾಹಿತ್ಯ ಕುರಿತ ಪತ್ರಿಕೆಗಳ ಲೇಖನಗಳು
೬. ಪರಾಮರ್ಶನ ಗ್ರಂಥಗಳು

೧

ಶಾಂತಿನಾಥ ದೇಸಾಯಿಯವರ ಜೀವನ ವಿವರ

ಪೂರ್ಣ ಹೆಸರು	:	ಡಾ. ಶಾಂತಿನಾಥ ಕುಬೇರಪ್ಪ ದೇಸಾಯಿ
ಜನನ	:	೨೨ನೇ ಜುಲೈ ೧೯೨೭
ನಿಧನ	:	೨೬ನೇ ಮಾರ್ಚ್ ೧೯೯೮
ತಂದೆ	:	ಅಪ್ಪಾಜಿರಾವ್ ದೇಸಾಯಿ
ತಾಯಿ	:	ಚಂಪಾಬಾಯಿ
ಹೆಂಡತಿ	:	ಸುಮಿತ್ರಾ ದೇಸಾಯಿ
ಮಕ್ಕಳು	:	ಸುಚೇತ, ರಶ್ಮಿ, ಮಾಧವಿ, ದೀಪ್ತಿ
ಹುಟ್ಟಿದ ಸ್ಥಳ	:	ಹಾವಗಿ, ಹಳಿಯಾಳ, ಉತ್ತರ ಕನ್ನಡ
ಎಂ.ಎ.	:	೧೯೫೩, ಮುಂಬೈ ವಿಶ್ವವಿದ್ಯಾಲಯ
ಪಿಎಚ್.ಡಿ.	:	ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾಲಯ
ವೃತ್ತಿ ನಡೆಸಿದ್ದು	:	ಪ್ರೊಫೆಸರ್ ಮತ್ತು ಇಂಗ್ಲೀಷ್ ಭಾಷಾ ವಿಭಾಗದ ಮುಖ್ಯಸ್ಥರು ಶಿವಾಜಿ ವಿಶ್ವವಿದ್ಯಾಲಯ, ಕೊಲ್ಹಾಪುರ, ಮಹಾರಾಷ್ಟ್ರ, ಉಪಕುಲಪತಿ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
೧೯೮೧-೮೭	:	ಕರ್ನಾಟಕ ಸಾಹಿತ್ಯ, ಅಕಾಡೆಮಿ ಸದಸ್ಯತ್ವ
೧೯೮೮-೯೩	:	ಕಾರ್ಯಕಾರಿ ಸಮಿತಿ ಸದಸ್ಯ ಕೇಂದ್ರ ಸಾಹಿತ್ಯ ಅಕಾಡೆಮಿ
೧೯೯೧ ರಿಂದ	:	ಭಾರತೀಯ ಜ್ಞಾನಪೀಠ ಸಮಿತಿ ಸದಸ್ಯ

ಪುರಸ್ಕಾರಗಳು

೧೯೮೭ ಕರ್ನಾಟಕ ಸಾಹಿತ್ಯ ಅಕಾಡೆಮಿ ವಿಶೇಷ ಪುರಸ್ಕಾರ

೧೯೯೩ ರಾಜ್ಯೋತ್ಸವ ಪ್ರಶಸ್ತಿ

೧೯೯೬ ಶಿವರಾಮ ಕಾರಂತ ಪ್ರಶಸ್ತಿ

೨೦೦೦ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨

ಶಾಂತಿನಾಥ ದೇಸಾಯಿಯವರ ಕೃತಿಗಳು

ಕನ್ನಡ

ಕಾದಂಬರಿ

೧. ಮುಕ್ತಿ	೧೯೬೧	ಹಿಂದಿ, ಮರಾಠಿ, ತೆಲುಗು, ಉರ್ದು, ಬಂಗಾಳಿ, ಅಸ್ಸಾಮಿ ಭಾಷೆಗಳಲ್ಲಿ ಪ್ರಕಟವಾಗಿದೆ. ಉಳಿದ ಭಾಷೆಗಳಲ್ಲೂ ಬರಲಿದೆ.
೨. ವಿಕ್ಷೇಪ	೧೯೭೧	ಇಂಗ್ಲೀಷ್ ಭಾಷಾಂತರ ಪ್ರಕಟವಾಗಿದೆ
೩. ಸೃಷ್ಟಿ	೧೯೭೯	
೪. ಸಂಬಂಧ	೧೯೮೧	
೫. ಬೀಜ	೧೯೮೧	ಹಿಂದಿ, ಮರಾಠಿ ಭಾಷೆಗಳಲ್ಲಿ ಪ್ರಕಟವಾಗಿದೆ
೬. ಅಂತರಾಳ	೧೯೯೩	
೭. ಓಂಣಮೋ	೧೯೯೮	

ಕಥಾಸಂಗ್ರಹ

೧. ಮಂಜುಗಡ್ಡೆ	೧೯೫೮	
೨. ಕ್ಷಿತಿಜ	೧೯೭೧	ಹಿಂದಿಯಲ್ಲಿ ಪ್ರಕಟವಾಗಿದೆ.
೩. ದಂಡೆ	೧೯೭೧	
೪. ರಾಕ್ಷಸ	೧೯೭೭	
೫. ಪರಿವರ್ತನೆ	೧೯೮೨	
೬. ಕೂರ್ಮಾವತಾರ	೧೯೮೮	
೭. ಈಚಿನ ಕಥೆಗಳು		

ವಿಮರ್ಶಾತ್ಮಕ, ವೈಚಾರಿಕ

೧. ಸಾಹಿತ್ಯ ಮತ್ತು ಭಾಷೆ ೧೯೮೦

೨. ಕನ್ನಡ ಕಾದಂಬರಿ ನಡೆದು ಬಂದ ದಾರಿ ೧೯೮೯

೩. ನವ್ಯ ಸಾಹಿತ್ಯ ದರ್ಶನ ೧೯೮೯

೪. ಎಂ.ಎನ್.ರಾಯ ೧೯೯೪

ಸಂಪಾದನೆ

೧. ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ ೧೯೮೭

English

1. Experimentation with language in Indian writing in English (Fiction) 1974
2. Santha Ramrao 1975
3. Indian Poetry today (Kannada) 1976
4. Bhahani Bhattacharya 1974

Edited

1. Critical Essays on Indian writing in English (with Naik and Amur) 1969
2. The Image of India in Western Creative writing (with Naik and Amur) 1970
3. Indian Essays on American Fiction (with Naik and Punekar) 1972
4. Colonial Consciousness in common wealth Literature (with Amur) 1984
5. Critical thought (with Devy) 1988
6. Creative Aspects of English 1994
7. Contemporary Indian short stories, series iv Sahitya Akademi, New Delhi, 1996

ಭಾಷಾಂತರಗಳು

೧. ಮೀ : ಹರಿನಾರಾಯಣ ಆಪ್ಟೆ ಮರಾಠಿಯಿಂದ

೨. ಪ್ರೇಮಚಂದ ಹಿಂದಿಯಿಂದ

೩. ರಥಚಕ್ರ ಶ್ರೀ ನಾ ಪೇಂಡ್ಸೆ ಮರಾಠಿಯಿಂದ

೪. ಅವಸ್ಥೆ: ಯು.ಆರ್.ಅನಂತಮೂರ್ತಿ, ಇಂಗ್ಲೀಷಿಗೆ

೫. ಕ್ರಾಂತಿ ಬಂತೊ ಕ್ರಾಂತಿ : ಪಿ.ಲಂಕೇಶ, ಇಂಗ್ಲೀಷಿಗೆ(Here Comes Revolution)

೩

ಶಾಂತಿನಾಥ ದೇಸಾಯಿಯವರ ಸಾಹಿತ್ಯ ಕುರಿತ ಅಧ್ಯಯನ ಗ್ರಂಥಗಳು

೧. ಆಮೂರ ಜಿ.ಎಸ್., ೨೦೦೦, **ಶಾಂತಿನಾಥ ದೇಸಾಯಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨. ಗಂಗಾನಾಯಕ ಕೆ.ಎನ್., ೨೦೦೧, **ಶಾಂತಿನಾಥ ದೇಸಾಯಿಯವರ ಸಾಹಿತ್ಯ ಒಂದು ಅಧ್ಯಯನ,** ಬೂದಗುಪ್ಪೆ ಪ್ರಕಾಶನ, ಚಿಕ್ಕಮಗಳೂರು

೩. ಪ್ರಹ್ಲಾದ್ ಡಿ.ವಿ.(ಸಂ), ೨೦೦೧, **ಮುಕ್ತಚಂದ,** ಸಂಚಯ ಪ್ರಕಾಶನ, ಬೆಂಗಳೂರು

೪. ಪ್ರೀತಿ ಶುಭಚಂದ್ರ, ೨೦೦೬, **ಶಾಂತಿನಾಥ ದೇಸಾಯಿ,** ಪ್ರಧಾನ ಗುರುದತ್ತ(ಸಂ), ನವಕರ್ನಾಟಕ ಪ್ರಕಾಶನ, ಬೆಂಗಳೂರು

೪

ಶಾಂತಿನಾಥ ದೇಸಾಯಿಯವರ ಸಾಹಿತ್ಯ ಅಧ್ಯಯನ ಕುರಿತ ಲೇಖನಗಳು

೧. ಅಶೋಕ ಟಿ.ಪಿ., ೧೯೮೬, **ಶಾಂತಿನಾಥ ದೇಸಾಯಿಯವರ ಬೀಜ,** ಸಾಹಿತ್ಯ ಸಂಪರ್ಕ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೨. ಅಶೋಕ ಟಿ.ಪಿ., ೧೯೯೧, **ಶಾಂತಿನಾಥ ದೇಸಾಯಿ ಅವರ ಕಥೆಗಳು : ಕೆಲವು ವಿಮರ್ಶಾತ್ಮಕ ಟಿಪ್ಪಣಿಗಳು,** ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೩. ಅರವಿಂದ ನಾಡಕರ್ಣಿ, ೧೯೮೪, **'ಸೃಷ್ಟಿ' : ನಾನು ಕಂಡಂತೆ,** ಆಹತ, ಅನನ್ಯ ಪ್ರಕಾಶನ, ಧಾರವಾಡ

೪. ಅವಧಾನಿ ಜಿ.ಎಸ್., ೧೯೯೦, **ದೇಸಾಯಿ-ಚಿತ್ತಾಲ : ಒಂದು ಅನುಸಂಧಾನ,** ಪರಸ್ಪರ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ

೫. ಆಮೂರ ಜಿ.ಎಸ್., ೧೯೭೪, **ಮುಕ್ತಿಯಲ್ಲಿ ವೈಯಕ್ತಿಕ ದರ್ಶನ,** ಸಮಕಾಲೀನ ಕತೆ-ಕಾದಂಬರಿ: ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೬. ಆಮೂರ ಜಿ.ಎಸ್., ೧೯೭೧, **ಶಾಂತಿನಾಥ ದೇಸಾಯಿ ಅವರ ಕತೆಗಳು,** ಸಮಕಾಲೀನ ಕತೆ-ಕಾದಂಬರಿ: ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭. ಆಮೂರ ಜಿ.ಎಸ್., ೧೯೯೪, **ಶಾಂತಿನಾಥ ದೇಸಾಯಿಯವರ ಕಾದಂಬರಿಗಳಲ್ಲಿ ಅಸ್ತಿತ್ವವಾದದ ಇತಿಮಿತಿಗಳು,** ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ

೮. ಆಮೂರ ಜಿ.ಎಸ್., ೨೦೦೩, **ಶಾಂತಿನಾಥ ದೇಸಾಯಿ,** ಕನ್ನಡ ಕಥನ ಸಾಹಿತ್ಯ : ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೯. ಪ್ರಹ್ಲಾದ್ ಅಗಸನಕಟ್ಟೆ, ೨೦೦೪, **ಶಾಂತಿನಾಥ ದೇಸಾಯಿಯವರ ಕತೆ 'ಕ್ಷಿತಿಜ',** ಅಭಿಮತ, ಸಿವಿಜಿ ಪ್ರಕಾಶನ, ಬೆಂಗಳೂರು

೧೦. ಬಸವರಾಜ ಸಬರದ, ೧೯೯೪, **ದೇಸಾಯಿಯವರ ನವ್ಯ ಸಾಹಿತ್ಯದರ್ಶನ,** ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೧೧. ಬಸವರಾಜ ಸಬರದ, ೧೯೯೪, **ದೇಸಾಯಿಯವರ 'ಮುಕ್ತಿ' ಕಾದಂಬರಿಯಲ್ಲಿ ಬದುಕಿನ ಹೋರಾಟ,** ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೧೨. ಬಸವರಾಜ ಸಬರದ, ೧೯೯೪, **ದೇಸಾಯಿಯವರ ಕೂರ್ಮಾವತಾರ,** ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೧೩. ರವಿ ಉಪಾಧ್ಯ, ೨೦೦೦, **ಶಾಂತಿನಾಥ ದೇಸಾಯಿಯವರ ಓಂಣಮೋ,** ಅಪೂರ್ವ ವಿನ್ಯಾಸ, ಸ್ನೇಹ ಪ್ರಕಾಶನ, ಬೆಳಗಾವಿ

೧೪. ರಾಮಚಂದ್ರನ್ ಸಿ.ಎನ್., ೧೯೮೬, **ಸ್ವಾಭಿಮುಖ ಸಾಹಿತ್ಯ : ಮುದ್ದಣನ ರಾಮಾಶ್ವಮೇಧ ಮತ್ತು ಶಾಂತಿನಾಥ ದೇಸಾಯರ 'ಸೃಷ್ಟಿ': ಒಂದು ವ್ಯಾಖ್ಯಾನ,** ಶಿಲ್ಪ ವಿನ್ಯಾಸ, ಕನ್ನಡ ಸಂಘ, ಪುತ್ತೂರು, ದಕ್ಷಿಣ ಕನ್ನಡ

೧೫. ರಾಜೇಂದ್ರ ಚೆನ್ನಿ, ೨೦೦೪, **ದೇಸಾಯಿಯವರ ಕಾದಂಬರಿಗಳ ಮುಖ್ಯ ಕಾಳಜಿಗಳು,** ನಡುಹಗಲಿನಲ್ಲಿ ಕಂದೀಲುಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ

೫

ಶಾಂತಿನಾಥ ದೇಸಾಯಿಯವರ ಸಾಹಿತ್ಯ ಕುರಿತ ಪತ್ರಿಕೆಗಳ ಲೇಖನಗಳು

೧. ಆರ್ಕೆ ಮಣಿಪಾಲ, ಶಾಂತಿನಾಥ ದೇಸಾಯಿ ಅವರ ವಿಮರ್ಶೆ, ಸಂಕ್ರಮಣ, ಸಂ ನೀಲಾ ಪಾಟೀಲ, ಸಂಪುಟ ೨೭, ಸಂಚಿಕೆ ೮, ೧೯೯೨, ಸಂಕ್ರಮಣ ಪ್ರಕಾಶನ, ಧಾರವಾಡ

೨. ನಾಗರಾಜ ಕ.ನಂ., 'ಮುಕ್ತಿ', ಆಲೋಕ, ಮೇ ೧೯೭೪

೩. ಬಿ.ಕೆ.ಎಸ್., ಶಾಂತಿನಾಥ ದೇಸಾಯಿ ಅವರ 'ಸಂಬಂಧ' ಮತ್ತು 'ಬೀಜ', ಸಂಕ್ರಮಣ (ಸಂ) ಚಂಪಾ, ಸಂಪುಟ ೨೫, ಸಂಚಿಕೆ ೬, ೧೯೯೦, ಸಂಕ್ರಮಣ ಪ್ರಕಾಶನ, ಧಾರವಾಡ

೪. ಮಾರುತಿ ಶಾನಭಾಗ, ಮುಕ್ತಿ-ಟಿಪ್ಪಣಿ-ಯಶವಂತ ಚಿತ್ತಾಲ, ಸಂಕ್ರಮಣ(ಸಂ) ಚಂಪಾ, ಸಂಪುಟ ೨, ಸಂಚಿಕೆ ೮, ೧೯೬೫, ಸಂಕ್ರಮಣ ಪ್ರಕಾಶನ, ಧಾರವಾಡ

೫. ಮಾರುತಿ ಶಾನಭಾಗ, ಶಾಂತಿನಾಥ ದೇಸಾಯಿಯವರ 'ವಿಕ್ಷೇಪ' ಒಂದು ಸಮೀಕ್ಷೆ, ಸಂಕ್ರಮಣ (ಸಂ) ಚಂಪಾ, ಸಂಚಿಕೆ ೪೭, ೧೯೭೨, ಸಂಕ್ರಮಣ ಪ್ರಕಾಶನ, ಧಾರವಾಡ

೬. ವ್ಯಾಸ ದೇಶಪಾಂಡೆ, 'ಮುಕ್ತಿ', ಭಾವನಾ, ಸೆಪ್ಟೆಂಬರ್ ೨೦೦೦, ಗರಿ ಅಂಕಣ

೭. ಸುರೇಶ ನಾಗಲಮಡಿಕೆ ಎನ್., ಶಾಂತಿನಾಥರ ಪಾತ್ರಗಳ ಪಯಣ ಪ್ರಕ್ಷುಬ್ಧತೆಯಿಂದ ಮಾಗುವಿಕೆಯೆಡೆಗೆ, ಹೊಸತು, ಸಂಪಾದಕ ಜಿ.ರಾಮಕೃಷ್ಣ, ನವೆಂಬರ್ ೨೦೦೬, ನವಕರ್ನಾಟಕ ಪ್ರಕಾಶನ, ಬೆಂಗಳೂರು

೬

ಪರಾಮರ್ಶನ ಗ್ರಂಥಗಳು

೧. ಅ.ನ.ಕೃ. ೧೯೬೧, **ಸಾಹಿತ್ಯ ಮತ್ತು ಕಾಮ ಪ್ರಚೋದನೆ,** ಸಾಗರ ಪ್ರಕಾಶನ, ಬೆಂಗಳೂರು

೨. ಅವಧಾನಿ ಜಿ.ಎಸ್., ೧೯೯೧, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩. ಅವಧಾನಿ ಜಿ.ಎಸ್., ೧೯೯೦, **ಪರಸ್ಪರ,** ಶ್ರೀ ರಾಘುವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ

೪. ಅನಂತನಾರಾಯಣ ಎಸ್., ೨೦೦೦, **ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ,** ಡಿ.ವಿ.ಕೆ.ಮೂರ್ತಿ, ಮೈಸೂರು

೫. ಅನಂತಮೂರ್ತಿ ಯು.ಆರ್., ೧೯೯೭, **ನವ್ಯಾಲೋಕ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೬. ಅನಂತಮೂರ್ತಿ ಯು.ಆರ್., ೧೯೭೧, **ಪ್ರಜ್ಞೆ ಮತ್ತು ಪರಿಸರ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೭. ಅನಂತಮೂರ್ತಿ ಯು.ಆರ್., ೧೯೮೦, **ಸಮಕ್ಷಮ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೮. ಅಶೋಕ ಟಿ.ಪಿ., ೧೯೯೦, **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ,** ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ

೯. ಅಶೋಕ ಟಿ.ಪಿ., ೧೯೮೩, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೦. ಅಶೋಕ ಟಿ.ಪಿ., ೧೯೯೧, **ಸಾಹಿತ್ಯ ಸಂದರ್ಭ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೧೧. ಆಮೂರ ಜಿ.ಎಸ್., ೨೦೦೩, **ಕನ್ನಡ ಕಥನ ಸಾಹಿತ್ಯ : ಸಣ್ಣಕತೆ,** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೧೨. ಆಮೂರ ಜಿ.ಎಸ್., ೧೯೯೪, **ಕನ್ನಡ ಕಥನ ಸಾಹಿತ್ಯ : ಕಾದಂಬರಿ,** ಶ್ರೀಹರಿ ಪ್ರಕಾಶನ, ಧಾರವಾಡ

೧೩. ಆಮೂರ ಜಿ.ಎಸ್., ೧೯೮೩, **ಕನ್ನಡ ಕಾದಂಬರಿಯ ಬೆಳವಣಿಗೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,

೧೪. ಆಮೂರ ಜಿ.ಎಸ್., ೧೯೯೫, **ಸಾತ್ವಿಕ ಪಥ,** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೧೫. ಆಮೂರ ಜಿ.ಎಸ್., ೧೯೮೮, **ಅರ್ಥಲೋಕ**, ಸ್ನೇಹ ಪ್ರಕಾಶನ, ಬೆಂಗಳೂರು

೧೬. ಇಂದಿರಾ ಆರ್., ೨೦೦೨, **ಮಹಿಳೆ ಸಮಾಜ ಮತ್ತು ಸಂಸ್ಕೃತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ಕರೀಗೌಡ ಬೀಚನಹಳ್ಳಿ, ೨೦೦೭, **ವ್ಯಷ್ಟಿ ಸಮಷ್ಟಿ**, ಅಜಂತ ಪ್ರಕಾಶನ, ಬೆಂಗಳೂರು

೧೮. ಕರೀಗೌಡ ಬೀಚನಹಳ್ಳಿ, ೨೦೦೩, **ಶತಮಾನದ ಸಣ್ಣ ಕಥೆಗಳ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೯. ಕುರ್ತಕೋಟಿ ಕೀರ್ತಿನಾಥ, ೧೯೮೩, **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨೦. ಕೃಷ್ಣಕುಮಾರ್ ಸಿ.ಪಿ., ೧೯೮೦, **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೧. ಕೃಷ್ಣಮೂರ್ತಿ ಎಂ.ಜಿ., ೧೯೯೪, **ಕೃತಿ ಸಂಸ್ಕೃತಿ**, ಋಜುವಾತು ಪ್ರಕಾಶನ, ಮೈಸೂರು

೨೨. ಕೇಶವಶರ್ಮ ಕೆ., ೨೦೦೫, **ಬಹುಮುಖಿ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

೨೩. ಕೇಶವಶರ್ಮ ಕೆ., ೧೯೯೩, **ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೪. ಕೋದಂಡರಾಮ ಎನ್.ಕೆ., ೧೯೯೬, **ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು

೨೫. ಗಿರಡ್ಡಿ ಗೋವಿಂದರಾಜ, ೧೯೭೬, **ಕನ್ನಡ ಕಾದಂಬರಿಯಲ್ಲಿ ನವ್ಯತೆ**, ಸ್ನೇಹ ಪ್ರಕಾಶನ, ಬೆಂಗಳೂರು

೨೬. ಗಿರಡ್ಡಿ ಗೋವಿಂದರಾಜ, ೧೯೭೮, **ಸಣ್ಣಕತೆಯ ಹೊಸ ಒಲವುಗಳು**, ಸಾಹಿತ್ಯ ಭಂಡಾರ, ಹುಬ್ಬಳ್ಳಿ

೨೭. ಗಿರಡ್ಡಿ ಗೋವಿಂದರಾಜ, ೧೯೯೨, **ಸಾತತ್ಯ**, ಸ್ನೇಹ ಪ್ರಕಾಶನ, ಬೆಂಗಳೂರು

೨೮. ಗಿರಡ್ಡಿ ಗೋವಿಂದರಾಜ, ೨೦೦೭, **ಪ್ರಮಾಣು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. ಗಿರಡ್ಡಿ ಗೋವಿಂದರಾಜ, ೧೯೭೫, **ನವ್ಯವಿಮರ್ಶೆ**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೩೦. ಗಿರಡ್ಡಿ ಗೋವಿಂದರಾಜ, ೧೯೮೭, **ಕಾದಂಬರಿ : ವಸ್ತು ಮತ್ತು ತಂತ್ರ**, ಸ್ನೇಹ ಪ್ರಕಾಶನ, ಬೆಂಗಳೂರು

೩೧. ಗಿರಡ್ಡಿ ಗೋವಿಂದರಾಜ, ೨೦೦೧, **ಸಮಗ್ರ ವಿಮರ್ಶೆ**, ಸಪ್ನ ಬುಕ್‌ಹೌಸ್, ಬೆಂಗಳೂರು

೩೨. ಗಿರಿಜಾಶಾಸ್ತ್ರಿ, ೨೦೦೦, **ಆಧುನಿಕ ಕನ್ನಡ ಸಣ್ಣಕಥೆಗಳು ಒಂದು ಸ್ತ್ರೀವಾದಿ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೩. ಗೋಕಾಕ್ ವಿ.ಕೃ., ೧೯೭೫, **ನವ್ಯತೆ,** ಸುರುಚಿ ಪ್ರಕಾಶನ, ಬೆಂಗಳೂರು

೩೪. ಚಕ್ಕೆರೆ ಶಿವಶಂಕರ್, ೨೦೦೪, **ಸಹ್ಯಾದ್ರಿಯ ಸೂರ್ಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೫. ಜನಾರ್ಧನ ಭಟ್, ೨೦೦೧, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩೬. ಜೆರಾಲ್ಡಿನ್ ಫೋರ್ಬ್ಸ್, ೨೦೦೧, **ಆಧುನಿಕ ಭಾರತದಲ್ಲಿ ಮಹಿಳೆ, ಶ್ರೀಮತಿ ಎಚ್.ಎಸ್.(ಅನು),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭. ತಂಬಂಡ ವಿಜಯ್ ಪೂಣಚ್ಚ(ಸಂ), ೨೦೦೧, **ಚರಿತ್ರೆ** ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. ತಾರಕೇಶ್ವರ ವಿ.ಬಿ., ೨೦೦೬, **ವಸಾಹತುಶಾಹಿ ಮತ್ತು ಭಾಷಾಂತರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೯. ತಿರುಮಲೇಶ ಕೆ.ವಿ., ೧೯೮೯, **ಅಸ್ತಿತ್ವವಾದ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೦. ಧರಣಿದೇವಿ ಮಾಲಗತ್ತಿ, ೨೦೦೪, **ಸಾಹಿತ್ಯ-ವಾಣಿಜ್ಯ ಮತ್ತು ಮಹಿಳಾಪ್ರಜ್ಞೆ,** ರಾಜ್ ಪ್ರಕಾಶನ, ಮೈಸೂರು

೪೧. ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೦, **ನವ್ಯತೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೨. ನಟರಾಜ್ ಹುಳಿಯಾರ್, ೨೦೦೪, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ನಾಗಭೂಷಣಸ್ವಾಮಿ ಓ.ಎಲ್., ೧೯೮೯, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೪. ನಾಗಭೂಷಣಸ್ವಾಮಿ ಓ.ಎಲ್., ೧೯೯೮, **ಪ್ರಜ್ಞಾ ಪ್ರವಾಹ ತಂತ್ರ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೫. ನಾಯಕ ಜಿ.ಎಚ್., ೧೯೮೦, **ಅನಿವಾರ್ಯ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೪೬. ನಾಯಕ ಜಿ.ಎಚ್., ೧೯೮೮, **ನಿಜದನಿ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೪೭. ನಾಯಕ ಜಿ.ಎಚ್., ೧೯೮೪, **ನಿರಪೇಕ್ಷ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೪೮. ನಾಯಕ ಜಿ.ಎಚ್., ೨೦೦೦, **ಶತಮಾನದ ಕನ್ನಡ ಸಾಹಿತ್ಯ,** ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ

೪೯. ನಾಗರಾಜ ಡಿ.ಆರ್., ೧೯೯೦, **ಅಮೃತ ಮತ್ತು ಗರುಡ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೫೦. ನಾಗರಾಜ ಡಿ.ಆರ್., ೧೯೮೭, **ಶಕ್ತಿ ಶಾರದೆಯ ಮೇಳ**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೫೧. ನಾಗರಾಜ ಡಿ.ಆರ್., ೧೯೯೬, **ಸಾಹಿತ್ಯ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೫೨. ನಾಗರಾಜ ಡಿ.ಆರ್., ೨೦೦೨, **ಸಂಸ್ಕೃತಿ ಕಥನ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫೩. ಪ್ರಭುಶಂಕರ, ೧೯೭೯, **ಸಾಹಿತ್ಯ ಮತ್ತು ಆಧುನಿಕತೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫೪. ಪ್ರಭಾವತಿ ಎಸ್.ವಿ., ೨೦೦೨, **ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು**, ಪ್ರಭಾವತಿ ಪ್ರಕಾಶನ, ಕುವೆಂಪುನಗರ, ಬೆಂಗಳೂರು

೫೫. ಪ್ರೀತಿ ಶುಭಚಂದ್ರ, ೨೦೦೨, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೬. ಬರಗೂರು ರಾಮಚಂದ್ರಪ್ಪ, ೨೦೦೧, **ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ**, ಅಂಕಿತ ಪುಸ್ತಕ, ಬೆಂಗಳೂರು

೫೭. ಬರಗೂರು ರಾಮಚಂದ್ರಪ್ಪ, ೧೯೯೮, **ಸಾಹಿತ್ಯ ಮತ್ತು ರಾಜಕಾರಣ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫೮. ಬಸವರಾಜ ಸಬರದ, ೧೯೯೪, **ಸಾಹಿತ್ಯ ಸಂಗತಿ**, ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೫೯. ಬಸವರಾಜ ಸಬರದ, ೨೦೦೫, **ಸಾಹಿತ್ಯ ವಿಮರ್ಶೆ**, ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೬೦. ಬುದ್ಧಣ್ಣ ಹಿಂಗಮಿರೆ, ೧೯೮೭, **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೧. ಮೀರಾ ಎಲ್.ಜಿ., ೨೦೦೪, **ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು

೬೨. ಮುರಾರಿ ಬಲ್ಲಾಳ ಸಿ., ೨೦೦೧, **ಸಾಹಿತ್ಯ ಸಮ್ಮುಖ**, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ

೬೩. ಮುರಳೀಧರ ಉಪಾಧ್ಯ, ಹಿರಿಯಡಕ, ೧೯೯೦, **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೪. ಮೋಹನಕೃಷ್ಣ ರೈ., ೨೦೦೭, **ವಸಾಹತುಶಾಹಿ ಮತ್ತು ನಗರೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೫. ರಂಗನಾಥರಾವ್ ಜಿ.ಎನ್., ೧೯೭೪, **ಹೊಸ ತಿರುವು,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೬೬. ರಘುನಾಥರಾವ್ ಡಿ., ೧೯೯೭, **ಸಮ್ಮುಖ,** ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ

೬೭. ರಹಮತ್ ತರೀಕೆರೆ, ೨೦೦೬, **ಕತ್ತಿಯಂಚಿನ ದಾರಿ,** ಅಭಿನವ ಪ್ರಕಾಶನ, ಬೆಂಗಳೂರು

೬೮. ರಹಮತ್ ತರೀಕೆರೆ, ೨೦೦೭, **ಇಂಗ್ಲಿಷ್ ಗೀತಗಳು : ಸಾಂಸ್ಕೃತಿಕ ಮುಖಾಮುಖಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೯. ರಹಮತ್ ತರೀಕೆರೆ, ೧೯೯೨, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೦. ರಹಮತ್ ತರೀಕೆರೆ, ೨೦೦೧, **ಕನ್ನಡ ಸಾಹಿತ್ಯ ಮೀಮಾಂಸೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೧. ರಾಘವೇಂದ್ರರಾವ್ ಎಚ್.ಎಸ್.(ಸಂ), ೨೦೦೧, **ಶತಮಾನದ ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೨. ರಾಘವೇಂದ್ರರಾವ್ ಎಚ್.ಎಸ್., ೧೯೮೯, **ನಿಲುವು,** ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು

೭೩. ರಾಘವೇಂದ್ರರಾವ್ ಎಚ್.ಎಸ್., ೧೯೮೮, **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

೭೪. ರಾಘವೇಂದ್ರರಾವ್ ಎಚ್.ಎಸ್., ೧೯೯೫, **ಹಾಡೆ ಹಾದಿಯ ತೋರಿತು,** ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು

೭೫. ರಾಮಚಂದ್ರನ್ ಸಿ.ಎನ್., ೨೦೦೨, **ವಸಾಹತ್ತೋತ್ತರ ಚಿಂತನೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೬. ರಾಮಚಂದ್ರನ್ ಸಿ.ಎನ್., ೨೦೦೨, **ಪರಂಪರೆ ಪ್ರತಿರೋಧ,** ಸಂವಾದ, ಮಲ್ಲಾಡಿಹಳ್ಳಿ

೭೭. ರಾಮಚಂದ್ರನ್ ಸಿ.ಎನ್., ೨೦೦೪, **ಸಂಕಥನಗಳು,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

೭೮. ರಾಮಚಂದ್ರನ್ ಸಿ.ಎನ್., ೨೦೦೬, **ಬಯಲು-ರೂಪ, ಸಂಪುಟ ೨**, ಸಪ್ನ ಬುಕ್‌ಹೌಸ್, ಬೆಂಗಳೂರು

೭೯. ರಾಮಚಂದ್ರ ಶರ್ಮ, ೨೦೦೫, **ಅಪೂರ್ವ**, ವಿ.ಸೀ. ಸಂಪದ, ಬೆಂಗಳೂರು

೮೦. ರಾಮಚಂದ್ರ ಆರ್., ೨೦೦೪, **ಪೂರ್ವ ಪಶ್ಚಿಮ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು,

೮೧. ರೋಹಿದಾಸ್ ನಾಯಕ್, ೧೯೯೨, **ನಿರಂತರ**, ಅಲ್ಲಮ ಪ್ರಕಾಶನ, ಬೆಂಗಳೂರು

೮೨. ವಿಜಯಶ್ರೀ ಕೆ., ೨೦೦೨, **ಕನ್ನಡ ನವ್ಯ ಕಾದಂಬರಿಗಳು**, ರಾಮಕೃಷ್ಣ ಪ್ರಕಾಶನ, ಬೆಂಗಳೂರು

೮೩. ವಿವಿಧ ಲೇಖಕರು, ೧೯೯೨, **ಕನ್ನಡ ಸಾಹಿತ್ಯ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೪. ವಿವಿಧ ಲೇಖಕರು, ೨೦೦೬, **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೫. ವಿಷ್ಣುನಾಯ್ಕ, ೧೯೭೯, **ಸಾಹಿತ್ಯದಲ್ಲಿ ನವ್ಯತೆ**, ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ

೮೬. ವಿವೇಕ ರೈ ಬಿ.ಎ., ೧೯೮೭, **ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು**, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

೮೭. ಶ್ಯಾಮಸುಂದರ ಬಿದರಕುಂದಿ, ೧೯೯೩, **ಕನ್ನಡದಲ್ಲಿ ನವ್ಯ ಮಾರ್ಗದ ಕಾದಂಬರಿಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮೮. ಶಿವರಾಮ ಪಡಿಕ್ಕಲ್, ೨೦೦೧, **ನಾಡು-ನುಡಿಯ ರೂಪಕ**, ಪ್ರಸಾರಾಂಗ, ಮಂಗಳೂರು, ವಿಶ್ವವಿದ್ಯಾಲಯ, ಮಂಗಳೂರು

೮೯. ಶಿವರುದ್ರಪ್ಪ ಜಿ.ಎಸ್., ೧೯೮೨, **ದಶವಾರ್ಷಿಕ ಸಾಹಿತ್ಯ ಸಮೀಕ್ಷೆ**, ಪ್ರಸಾರಾಂಗ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು

೯೦. ಶಿವರುದ್ರಪ್ಪ ಜಿ.ಎಸ್.(ಸಂ), ೧೯೮೩, **ಕಾದಂಬರಿಕಾರರಾಗಿ ಕಾರಂತ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೯೧. ಶಿವರುದ್ರಪ್ಪ ಜಿ.ಎಸ್., ೨೦೦೩, **ವಿಮರ್ಶೆಯ ಪೂರ್ವಪಶ್ಚಿಮ**, ಸಾಹಿತ್ಯ ಭಂಡಾರ, ಬೆಂಗಳೂರು

೯೨. ಶಿವರುದ್ರಪ್ಪ ಜಿ.ಎಸ್.(ಸಂ), ೧೯೯೦, **ಕನ್ನಡ ಸಾಹಿತ್ಯ ಸಂದರ್ಭ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೯೩. ಶ್ರೀಮತಿ ಎಚ್.ಎಸ್., ೨೦೦೩, **ಸೇರಿಕೊಂಡ ಎಳೆಗಳು**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

೯೪. ಶ್ರೀಮತಿ ಎಚ್.ಎಸ್., ೨೦೦೬, **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೫. ಶ್ರೀಮತಿ ಎಚ್.ಎಸ್., ೨೦೦೪, **ಸ್ತ್ರೀವಾದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೬. ಶ್ರೀನಿವಾಸ ಹಾವನೂರ, ೨೦೦೦, **ಹೊಸಗನ್ನಡ ಅರುಣೋದಯ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೯೭. ಶೇಷಗಿರಿರಾವ್ ಎಲ್.ಎಸ್., ೧೯೯೦, **ಕನ್ನಡ ಸಾಹಿತ್ಯ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೯೮. ಶೇಷಗಿರಿರಾವ್ ಎಲ್.ಎಸ್.(ಸಂ), ೧೯೮೭, **ಹೊಂಬೆಳಕು**, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

೯೯. ಶೇಷಗಿರಿರಾವ್ ಎಲ್.ಎಸ್., ೨೦೦೬, **ಹೊಸಗನ್ನಡ ಸಾಹಿತ್ಯ ಚರಿತ್ರೆ**, ಅಂಕಿತ ಪುಸ್ತಕ, ಬೆಂಗಳೂರು

೧೦೦. ಶೇಷಗಿರಿರಾವ್ ಎಲ್.ಎಸ್.(ಸಂ), ೧೯೯೩, **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ**, ಉದಯಭಾನು ಕಲಾಸಂಘ, ಬೆಂಗಳೂರು

೧೦೧. ಷೇಕ್ ಅಲಿ ಬಿ., ೧೯೯೭, **ಕರ್ನಾಟಕ ಚರಿತ್ರೆ, ಸಂ.೬**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೨. ಸಿಮೋನ್ ದ ಬೋವಾ, ೨೦೦೭, **ದ ಸೆಕೆಂಡ್ ಸೆಕ್ಸ್**, ಶ್ರೀಮತಿ ಎಚ್.ಎಸ್.(ಅನು), ಅಧ್ಯಯನ ಮಂಡಲ, ಬೆಂಗಳೂರು

೧೦೩. ಸುಮಿತ್ರಾಬಾಯಿ ಬಿ.ಎನ್., ೨೦೦೦, **ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೪. ಹರಿಕೃಷ್ಣಭರಣ್ಯ, ೧೯೯೦, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಪ್ರಕಾಶನ, ಮಧುರೈ, ತಮಿಳುನಾಡು